ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ)

ಸಂಶೋಧಕರು
ಪ್ರದೀಪ್ ಎಲ್. ಎಮ್.
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು
ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೮

ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧ)

ಸಂಶೋಧಕರು

ಪ್ರದೀಪ್ ಎಲ್. ಎಮ್.

ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು

ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೮

ಸಂಶೋಧಕರ ಪ್ರಮಾಣ ಪತ್ರ

*****

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **"ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು"** ಎಂಬ ಮಹಾಪ್ರಬಂಧವು ಡಾ. ಡಿ. ಪಾಂಡುರಂಗಬಾಬು, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದ್ದಾಗಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೆ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಪ್ರದೀಪ್ ಎಲ್. ಎಮ್.

ಕನ್ನಡ ಭಾಷಾಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ: 10/08/2018

ಸ್ಥಳ: ವಿದ್ಯಾರಣ್ಯ

ಮಾರ್ಗದರ್ಶಕರ ದೃಢೀಕರಣ ಪತ್ರ

*****

"ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು" ಎಂಬ ವಿಷಯದ ಕುರಿತು ಪ್ರದೀಪ್ ಎಲ್. ಎಮ್. ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಹಾಗೂ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

ಡಾ. ಡಿ. ಪಾಂಡುರಂಗಬಾಬು
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ

ದಿನಾಂಕ:

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ವಸಾಹತೋತ್ತರ ಹಾಗೂ ಆಧುನಿಕೋತ್ತರ ಕಾಲಘಟ್ಟದ ಚಿಂತನೆಗಳು ವಸಾಹತುಶಾಹಿಗಳ ಪ್ರಭಾವದಿಂದ ಬಿಡುಗಡೆ ಹೊಂದುವತ್ತ ಗಮನ ಹರಿಸುತ್ತಿವೆ. ವಸಾಹತುಶಾಹಿ ಕಾಲದ ಆಡಳಿತದ ಪರಿಣಾಮದಿಂದಾಗಿ ದೇಶೀ ಸಮುದಾಯಗಳಲ್ಲಿದ್ದ ದೇಶೀ ಧರ್ಮ, ನಂಬಿಕೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು, ಶಿಕ್ಷಣ ಪದ್ಧತಿ, ನ್ಯಾಯ ಪದ್ಧತಿ ಮತ್ತು ಭಾಷೆ ಮೊದಲಾದವುಗಳೆಲ್ಲ ಪಲ್ಲಟಕ್ಕೆ ಒಳಗಾಗಿವೆ. ಇವುಗಳಲ್ಲಿನ ಅರ್ಥಪೂರ್ಣವಾದ ವ್ಯವಸ್ಥೆಗಳನ್ನು ಪುನರ್ರೂಪಿಸಿಕೊಳ್ಳುವ ಹಂಬಲ ಈ ಬಿಡುಗಡೆ ಪ್ರಕ್ರಿಯೆಯ ಕೇಂದ್ರವಾಗಿದೆ.

ಈ ಬಿಡುಗಡೆಯ ಪ್ರಯತ್ನವು ಅನೇಕ ವಲಯಗಳಲ್ಲಿ ನಡೆಯಬೇಕಾಗುತ್ತದೆ. ಪ್ರಭಾವೀ ಬಿಡುಗಡೆಯ ಸಾಧ್ಯತೆಗಳಿಗೆ ಭಾಷಿಕ ಬಿಡುಗಡೆ ಅಗತ್ಯವಾಗಿದೆ. ಜಗತ್ತನ್ನು ಅರ್ಥೈಸಿಕೊಳ್ಳುವ, ಪರಿಭಾವಿಸುವ ಮಾಧ್ಯಮವೇ ಭಾಷೆ. ಆದ್ದರಿಂದ ಭಾಷಿಕವಾಗಿ ಬಿಡುಗಡೆ ಆರಂಭವಾದಲ್ಲಿ ಎಲ್ಲ ಹಂತಗಳಲ್ಲೂ ಬಿಡುಗಡೆ ಹೊಂದುವ ಸಾಧ್ಯತೆಗಳ ವಿಸ್ತರಣೆಯಾಗಬಹುದು.

ಆಧುನಿಕ ಪರಿಭಾಷೆಯಾದ ನಿರ್ವಸಾಹತೀಕರಣವು ಈ ಹಿಂದೆ ಕೂಡ ವಿವಿಧ ಹಂತಗಳಲ್ಲಿ, ಭಿನ್ನ ಪರಿಭಾಷೆಯಲ್ಲಿ ವ್ಯಕ್ತವಾಗಿದೆ. ಧಾರ್ಮಿಕ ಸುಧಾರಣಾ ಪ್ರಕ್ರಿಯೆಗಳು, ಚಳವಳಿಗಳು, ಪ್ರತಿರೋಧಗಳನ್ನು ನಾವು ಈ ಹಿನ್ನೆಲೆಯಲ್ಲಿ ಪರಿಭಾವಿಸಬೇಕಿದೆ. ವೈದಿಕ-ಅವೈದಿಕ, ಸಂಸ್ಕೃತ-ಕನ್ನಡ, ಮಾರ್ಗ-ದೇಸಿ ಮುಂತಾದ ರಚನೆಗಳನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿದರೆ, ಅವುಗಳ ಒಟ್ಟು ಫಲಿತಗಳನ್ನು ಗಮನಿಸಿದರೆ ಅವುಗಳ ಆಳದಲ್ಲಿರುವುದು ಬಿಡುಗಡೆಯ ಆಶಯಗಳೇ ಎಂಬ ಅಂಶ ಮನದಟ್ಟಾಗುತ್ತದೆ.

ಈ ಆಧುನಿಕ ಪೂರ್ವ(೧೯೦೦ಕ್ಕೂ ಹಿಂದಿನ ಅವಧಿ), ವಸಾಹತುಶಾಹಿಯ ಅವಧಿ (ಬ್ರಿಟಿಷರ ಆಡಳಿತದ ಅವಧಿ ೧೮೫೭ - ೧೯೪೭ರವರೆಗೆ) ವಸಾಹತೋತ್ತರ (೧೯೪೭ - ೧೯೯೧) ಹಾಗೂ ಆಧುನಿಕೋತ್ತರ (೧೯೯೧ರ ನಂತರ) ಚಿಂತನೆಗಳು ದೇಶೀ

ವಸಾಹತುಶಾಹಿಗಳಿಂದಲೂ ಬಿಡುಗಡೆ ಹೊಂದುವ ಪ್ರಯತ್ನವನ್ನು ನಡೆಸಿವೆ. ಭಾಷಿಕ ಬಿಡುಗಡೆಯ ಕುರಿತು ನಡೆದಿರುವ ಚರ್ಚೆ ಹಾಗೂ ಚಿಂತನೆಗಳನ್ನು ಆಧುನಿಕ, ಆಧುನಿಕೋತ್ತರ ಸಂದರ್ಭದ ಅನೇಕ ಚಿಂತನೆ, ಪರಿಭಾಷೆಗಳೊಡನೆ ಅಧ್ಯಯನ ನಡೆಸುವುದು ಪ್ರಸ್ತುತ ಪ್ರಬಂಧದ ಉದ್ದೇಶವಾಗಿದೆ.

ವೈದಿಕ–ಅವೈದಿಕ, ಮಾರ್ಗ–ದೇಸಿ, ಸಂಸ್ಕೃತ–ಕನ್ನಡ, ಇಂಗ್ಲಿಷ್–ಕನ್ನಡ ಮೊದಲಾದ ವೈರುಧ್ಯಗಳ ವ್ಯವಸ್ಥಿತ ಅಧ್ಯಯನಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಅಧ್ಯಯನದ ವಿವಿಧ ಹಂತಗಳಲ್ಲಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಂಶೋಧನೆ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ವ್ಯಕ್ತವಾಗಿರುವ ಚಿಂತನೆಗಳನ್ನು ಪ್ರಬಂಧದ ವ್ಯಾಪ್ತಿಯು ಒಳಗೊಂಡಿದೆ. ಮುಖ್ಯವಾಗಿ ಭಾಷಿಕವಾಗಿ ವ್ಯಕ್ತವಾಗಿರುವ ಚಿಂತನೆಗಳನ್ನು ಚರ್ಚಿಸಲಾಗುತ್ತದೆ.

ಶ್ರೀವಿಜಯ, ಪಂಪ, ಆಂಡಯ್ಯ ಮೊದಲಾದವರು ಆರಂಭದಿಂದ ನಡೆಸಿರುವ ಚರ್ಚೆಗಳನ್ನು ಪ್ರಾಸಂಗಿಕವಾಗಿ ಅಧ್ಯಯನಕ್ಕೆ ಒಳಪಡಿಸಿ, ಅವರ ಚಿಂತನೆಗಳ ವಿಸ್ತೃತರೂಪವನ್ನು ಆಧುನಿಕ ಹಾಗೂ ಆಧುನಿಕೋತ್ತರ ಕಾಲಘಟ್ಟದ ಚಿಂತಕರಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗಿರುವ ಸಾಮ್ಯತೆ–ಭಿನ್ನತೆಗಳೊಡನೆ ಈ ಚಿಂತನೆಗಳಿಗೆ ಇರುವ ಸಾಧ್ಯತೆ ಮತ್ತು ಸಮಸ್ಯೆಗಳನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

ಆಧುನಿಕ ಭಾಷಿಕ ಬಿಡುಗಡೆಯ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಡಿ. ಎನ್. ಶಂಕರ ಬಟ್ ಹಾಗೂ ಕೆ. ವಿ. ನಾರಾಯಣ ಅವರ ಚಿಂತನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸಾಂದರ್ಭಿಕವಾಗಿ ಇವರ ಚಿಂತನೆಗಳಿಗೆ ಪೂರಕವಾಗಿ ವ್ಯಕ್ತವಾಗಿರುವ ಚಿಂತನೆಗಳನ್ನು ಕೂಡ ಪರಿಗಣಿಸಲಾಗಿದೆ.

ಭಾಷೆಯು ಮಾನವನ ಸಂವಹನ ಮಾಧ್ಯಮ. ತಾನು ಚಿಂತಿಸುವ, ಯೋಚಿಸುವ ಕ್ರಿಯಾಶೀಲವಾಗುವ, ತನ್ನ ಸಾಧನೆಗಳನ್ನು ಮುಂದಿನ ತಲೆಮಾರಿಗೆ ದಾಟಿಸುವ ಅನೇಕ ಹಂತಗಳಲ್ಲಿ ಭಾಷೆ ಅತ್ಯಗತ್ಯವಾದ ಉಪಕರಣ ಎನ್ನಬಹುದು. ಆದ್ದರಿಂದ ಭಾಷಿಕವಾಗಿ ಸ್ವತಂತ್ರ ಆಲೋಚನೆಗಳನ್ನು ನಡೆಸುವುದು ಅನಿವಾರ್ಯವಾಗಿರುತ್ತದೆ. ಭಾಷೆಯ ಬಿಡುಗಡೆಯು ದೂರಗಾಮಿಯಾಗಿ ಪ್ರಭಾವಶಾಲಿಯಾಗಿರುತ್ತದೆ. ತಾನು ಚಿಂತಿಸುವ, ಪ್ರತಿಕ್ರಿಯಿಸುವ ರೀತಿಗಳು ಸ್ವಾಯತ್ತಗೊಳ್ಳುವ ಕ್ರಮ ಭಾಷಿಕವಾಗಿ ಬಿಡುಗಡೆಯಾಗುವುದರ ಮೂಲಕ ಆರಂಭವಾಗಬೇಕಿದೆ. ಆದ್ದರಿಂದ, ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕೇಂದ್ರವಾಗಿಟ್ಟುಕೊಂಡು – ಕನ್ನಡ ಭಾಷೆಯಲ್ಲಿ ಇದುವರೆಗೆ ವ್ಯಕ್ತವಾಗಿರುವ ಬಿಡುಗಡೆಯ ಚಿಂತನೆಗಳನ್ನು ಅಧ್ಯಯನ ನಡೆಸಲಾಗಿದೆ.

ಭಾಷೆ ಮಾನವರ ಲೋಕಗ್ರಹಿಕೆಯನ್ನು ಮಾತು ಹಾಗೂ ಬರಹ ರೂಪಗಳೆರಡರಲ್ಲೂ ಅಭಿವ್ಯಕ್ತಿಸಬಹುದಾದ ಮಾಧ್ಯಮ. ಲಿಪಿರಹಿತ ಭಾಷೆಗಳಿಗೆ ಬರಹ ರೂಪ ಇರದಿದ್ದರೂ ಲಿಪಿಸಹಿತ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವ ಸಾಧ್ಯತೆಯೊಂದು ಇದೆ. ಭಾಷೆಯ ಪ್ರಾಥಮಿಕ ಅಗತ್ಯವಿರುವುದು ಸಂವಹನಕ್ಕಾಗಿ ಆದರೆ, ಅದು ಅಷ್ಟಕ್ಕೇ ಸೀಮಿತವಾಗಿಲ್ಲ.

ಭಾಷೆ ಲೋಕಗ್ರಹಿಕೆಯ ಅಭಿವ್ಯಕ್ತಿಯಾಗಿರುವಂತೆಯೆ, ಲೋಕಗ್ರಹಿಕೆಯ ನಿಯಂತ್ರಣವಾಗುವುದೂ ಸಾಧ್ಯ. ಇದು ಜ್ಞಾನದ ರಾಜಕಾರಣದ ಸ್ಥಿತಿ. ಇಂತಹ ಸಂದರ್ಭದಲ್ಲಿ ಭಾಷೆಯ ಬಗೆಗಿನ ವಾಗ್ವಾದಗಳ ಕುರಿತು ಚರ್ಚೆ ನಡೆಸುವುದು ಸದ್ಯದ ತುರ್ತು ಎನ್ನಬಹುದು. ಭಾಷಿಕ ಬಿಡುಗಡೆಯ ಚರ್ಚೆಗಳಲ್ಲಿ ಆಫ್ರಿಕಾದ ಗೂಗಿ ವಾ ಥಿಯಾಂಗೊ ಮಂಡಿಸಿದ 'ಪ್ರಜ್ಞೆಯ ಬಿಡುಗಡೆ'ಯ ಚಿಂತನೆಗಳು ಮುಂದುವರೆಯುತ್ತಿವೆ. ಈ ಚಿಂತನೆಗಳ ಕುರಿತು ಕೂಡ ಪ್ರಸ್ತುತ ಪ್ರಬಂಧದಲ್ಲಿ ಅಧ್ಯಯನ ನಡೆಸಲಾಗಿದೆ.

ಕನ್ನಡ ಭಾಷಿಕ ಬಿಡುಗಡೆಯ ಚರ್ಚೆಗಳಲ್ಲಿ ಪ್ರಮುಖವಾಗಿರುವ ಡಿ. ಎನ್. ಶಂಕರ ಬಟ್‌ರವರ ಕೆಲವು ಪ್ರಮೇಯಗಳೆಂದರೆ:

೧. ಕನ್ನಡ ಭಾಷೆಗೆ ಸಂಸ್ಕೃತ ಮೂಲವಲ್ಲ.

೨. ಕನ್ನಡದಲ್ಲಿ ಸಂಸ್ಕೃತದ ಮಹಾಪ್ರಾಣಾಕ್ಷರಗಳ ಬಳಕೆ ಬೇಕಿಲ್ಲ.

೩. ಸಂಸ್ಕೃತದ ಅನವಶ್ಯಕ ಹೇರಿಕೆ ಕನ್ನಡದ ಮೇಲಿದೆ.

೪. ಕನ್ನಡದ ಬೆಳವಣಿಗೆ ಹಾಗೂ ಕಲಿಕೆಯ ಸಾಧ್ಯತೆಗಳಿಗೆ ಸಂಸ್ಕೃತವೆ ಅಡ್ಡಿ.

೫. ಈ ಕಾರಣಗಳಿಂದ ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು, ಮುಂತಾದವು.

ಈ ಪ್ರಮೇಯಗಳನ್ನು ಮಂಡಿಸುವ ಸಂದರ್ಭದಲ್ಲಿ ಡಿ. ಎನ್. ಶಂಕರ ಬಟ್‌ರವರು ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಪ್ರಖರವಾಗಿ ಮಂಡಿಸುತ್ತಿದ್ದಾರೆ. ಅನೇಕ ಹೊಸ ಸಾಧ್ಯತೆಗಳನ್ನು ಶೋಧಿಸುತ್ತಿದ್ದಾರೆ. ಅಂತೆಯೇ, ಭಾಷಿಕ ಕಾರಣದಿಂದಾಗಿ ಸಾಮಾಜಿಕ ಸ್ತರದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಯ ಬಳಕೆಯಲ್ಲಿರುವ ವ್ಯತ್ಯಸ್ಥರೂಪಗಳಲ್ಲಿ (ಆಡುನುಡಿ) ಕನ್ನಡವೇ ಪ್ರಧಾನವಾಗಿರುವುದನ್ನು ಕೂಡ ಅವರು ಗುರುತಿಸುತ್ತಾರೆ. ಈ ಪ್ರಬಂಧದಲ್ಲಿ ಅಧ್ಯಯನ ನಡೆಸಲಾಗಿದೆ.

ಭಾಷೆಯು ಪ್ರಜ್ಞೆ ಹಾಗೂ ಲೋಕಗ್ರಹಿಕೆಗಳನ್ನು ನಿಯಂತ್ರಿಸುವಷ್ಟು ಪ್ರಭಾವಶಾಲಿ. ಆದ್ದರಿಂದಾಗಿ ಎಲ್ಲಕ್ಕಿಂಥ ಮೊದಲು ಭಾಷಿಕ ಬಿಡುಗಡೆ ಅಗತ್ಯವಾಗಿದೆ. ಮಾತು, ಬರಹ, ಜ್ಞಾನ ಪ್ರಸಾರ, ಸಂವಹನ, ಸಂಸ್ಕೃತಿ ವ್ಯಕ್ತವಾಗುವ ಒಂದು ರೂಪ ಭಾಷೆಯಾಗಿರುವಂತೆಯೆ, ಬೌದ್ಧಿಕ ಚಟುವಟಿಕೆಗಳಲ್ಲೊಂದು. ಆಧುನಿಕ ತಂತ್ರಜ್ಞಾನ, ವಿಜ್ಞಾನ, ಶಿಕ್ಷಣಗಳಲ್ಲಿ ಭಾಷೆಯ ಅಗತ್ಯ ಆತ್ಯಂತಿಕ ಪ್ರಮಾಣವನ್ನು ತಲುಪಿದೆ. ಭಾಷೆ ಅರಿಯದವನು ನಿರಕ್ಷರನಷ್ಟೇ ಆಗಿ ಉಳಿದಿಲ್ಲ. ಬದಲಾಗಿ ಬದಕಲು ಕೂಡ ಅಯೋಗ್ಯ ಎಂಬ ಕಟ್ಟುಪಿಕೆ ರಚನೆಯಾಗಿದೆ. ಇದರ ಮುಂದುವರೆದ ಭಾಗವಾಗಿ ಇಂಗ್ಲಿಷ್ ಗೊತ್ತಿಲ್ಲದವರಿಗೂ ಇದನ್ನೇ ಅನ್ವಯಿಸಲಾಗುತ್ತಿದೆ. ಆದ್ದರಿಂದ ಜ್ಞಾನವನ್ನು ಎಲ್ಲರಿಗೂ ತಲುಪಿಸುವಲ್ಲಿ ಭಾಷೆವಹಿಸುವ ಪಾತ್ರ ಗಮನಾರ್ಹವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕನ್ನಡದಲ್ಲಿ ನಡೆದಿರುವ ಭಾಷಿಕ ಬಿಡುಗಡೆಯ ಚರ್ಚೆಗಳನ್ನು ಅಧ್ಯಯನ ನಡೆಸುವ ಉದ್ದೇಶವನ್ನು ಹೊಂದಲಾಗಿದೆ.

ಆಧುನಿಕೋತ್ತರ ಸಂದರ್ಭದಲ್ಲೂ ಭಾಷೆಯ ಅವಶ್ಯಕತೆಯು ತೀರಾ ಅನಿವಾರ್ಯವಾಗಿದೆ. ಈ ಬಗೆಯ ಒತ್ತಡಗಳಲ್ಲಿ, ಭಾಷೆಯ ಬಳಕೆಯನ್ನು ನಿಯಂತ್ರಿಸುತ್ತಿರುವ ಕ್ರಮಗಳು ಸಾಮಾಜಿಕ ಕಾರಣಗಳಿಂದ ಉಂಟಾಗುತ್ತಿವೆ. ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಲಾಗದ ಶೂದ್ರಾತಿಶೂದ್ರರ ಅಭಿವ್ಯಕ್ತಿ ಕುಂಠಿತವಾಗುತ್ತಿದೆ. ಈ ಬಗೆಯ ಸಮಸ್ಯೆಗಳು ಮತ್ತು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿಯುವಿಕೆಯ ಕಾರಣಗಳನ್ನು ಡಿ. ಎನ್. ಶಂಕರ ಬಟ್ ಶೋಧಿಸುತ್ತಿದ್ದಾರೆ. ಇಂತಹ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಅನೇಕ (ಈ ಹಿಂದೆ ಹೇಳಲಾದ) ಪ್ರಮೇಯಗಳನ್ನು ಮಂಡಿಸಿ, ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ.

ಇದಕ್ಕೆ ಪೂರಕವಾಗಿ ಕೆ. ವಿ. ನಾರಾಯಣ ಅವರು ಚಿಂತನೆ ನಡೆಸುತ್ತಿದ್ದಾರೆ. ಪ್ರಸ್ತುತ ಪ್ರಬಂಧದಲ್ಲಿ ಅವರ ಆಯ್ದ ಕೃತಿಗಳನ್ನು ಅಧ್ಯಯನ ನಡೆಸಲಾಗಿದೆ. ಆ ಮೂಲಕ ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಅಧ್ಯಯನ ನಡೆಸುವ ಅವಕಾಶಗಳನ್ನು ಮುಕ್ತವಾಗಿ ಇಟ್ಟುಕೊಂಡು ವ್ಯವಸ್ಥಿತ ಅಧ್ಯಯನ ನಡೆಸಲಾಗಿದೆ. 'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯನ್ನು ಮೂಲವಾಗಿಟ್ಟುಕೊಂಡು ಉಳಿದ ಕೃತಿಗಳನ್ನು ಪ್ರಾಸಂಗಿಕವಾಗಿ ಮಾತ್ರ ಅಧ್ಯಯನ ನಡೆಸಲಾಗಿದೆ. ಈ ಮೂಲಕ ಕನ್ನಡ ಬಿಡುಗಡೆಯ ಚಿಂತನೆಗಳ ಕುರಿತು ಅವರು ಮಂಡಿಸುತ್ತಿರುವ ಸಂಶೋಧನೆಗಳನ್ನು ಅಧ್ಯಯನ ನಡೆಸಲಾಗಿದೆ. ವ್ಯಾಕರಣಾಂಶಗಳಿಗಿಂಥ ಚಿಂತನೆಗಳಿಗೆ ಈ ಅಧ್ಯಯನದಲ್ಲಿ ಒತ್ತು ನೀಡಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಡಿ. ಎನ್. ಶಂಕರ ಬಟ್ಟರ ಉಲ್ಲೇಖಗಳನ್ನು ದಪ್ಪ ಅಕ್ಷರಗಳಲ್ಲಿ ಬಳಸಲಾಗಿದೆ. ಅವರು, ಕನ್ನಡದಲ್ಲಿ ಸಂಸ್ಕೃತ ಪದ, ಅಕ್ಷರ, ಮಹಾಪ್ರಾಣಾಕ್ಷರಗಳಿಲ್ಲದ ಕನ್ನಡ ಬರಹವನ್ನು ಪ್ರಯೋಗಿಸುತ್ತಿದ್ದಾರೆ. ಆದರೆ, ಸದ್ಯಕ್ಕೆ ಪ್ರಚಲಿತದಲ್ಲಿರುವ ಬರಹಕ್ಕೂ ಅವರ ಬರಹಕ್ಕೂ ವ್ಯತ್ಯಾಸವಿದೆ. ಅಧ್ಯಯನದಲ್ಲಿ ಅವರ ಕನ್ನಡದಲ್ಲಿರುವ ವ್ಯತ್ಯಾಸವನ್ನು ಖಚಿತವಾಗಿ ತೋರಿಸಲು ಅವರ ಉಲ್ಲೇಖಗಳನ್ನು ದಪ್ಪ ಅಕ್ಷರಗಳಲ್ಲಿ ಬಳಸಲಾಗಿದೆ. ಇದರಿಂದ ಅಧ್ಯಯನದ ನಡುವೆ ಖಚಿತತೆ ಸಿಗಲಿ ಎನ್ನುವುದು ಇದರ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನವನ್ನು ವಿಶ್ಲೇಷಣಾತ್ಮಕ ವಿಧಾನವನ್ನು ಅಧ್ಯಯನದ ಅಗತ್ಯಕ್ಕೆ ತಕ್ಕಂತೆ ಪ್ರಾಸಂಗಿಕವಾಗಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನಗಳು

ಪ್ರಸ್ತುತ ಪ್ರಬಂಧದ ಅಧ್ಯಯನವು ಅಳವಡಿಸಿಕೊಂಡಿರುವ ವಿಧಾನಗಳೆಂದರೆ:

೧) ಆಯ್ದ ಭಾಷಾ ವಿಜ್ಞಾನ ಕೃತಿಗಳ ಚರ್ಚೆ

೨) ಆಯ್ದ ಲಕ್ಷಣ ಗ್ರಂಥಗಳ ಕುರಿತ ಚರ್ಚೆ

೩) ಆಯ್ದ ಕನ್ನಡ ಭಾಷಾ ವಿಜ್ಞಾನದ ಕೃತಿಗಳ ವಿಶ್ಲೇಷಣೆ

೪) ಆಯ್ದ ಚಿಂತಕರ ವಿಚಾರಗಳು ಹಾಗೂ ಕೃತಿಗಳ ವಿಶ್ಲೇಷಣೆ

೫) ಮಾಹಿತಿ ಸಂಗ್ರಹ ಮತ್ತು ವಿಶ್ಲೇಷಣೆ

ಅಧ್ಯಯನದ ಹಂತಗಳು

ಭಾಷಿಕ ಬಿಡುಗಡೆಯ ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಅವುಗಳೆಂದರೆ:

೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

೨. ಪೂರ್ವಾಧ್ಯಯನಗಳ ಸಮೀಕ್ಷೆ

೩. ಪೂರ್ವ ಪೀಠಿಕೆ: ಜಗತ್ತಿನ ಲಿಪಿ ಸುಧಾರಣೆಯ ಇತಿಹಾಸ

೪. ಭಾಷಿಕ ಬಿಡುಗಡೆ: ಪರಿಭಾಷೆಯ ನಿರ್ವಚನ

೫. ಆಧುನಿಕೋತ್ತರ ಭಾಷಿಕ ಬಿಡುಗಡೆಯ ಚಿಂತನೆಗಳು

೬. ಭಾಷಿಕ ಬಿಡುಗಡೆಯ ಸವಾಲುಗಳು – ಸಾಧ್ಯತೆಗಳು

೭. ಸಮಾರೋಪ

ಅಧ್ಯಾಯ ಎರಡು

ಪೂರ್ವ ಅಧ್ಯಯನಗಳ ಸಮೀಕ್ಷೆ

ಕನ್ನಡ ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಆಯ್ದ ಕೃತಿಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ನಡೆಸಲಾಗಿದೆ. ಹಳಗನ್ನಡ ವ್ಯಾಕರಣ ಗ್ರಂಥಗಳು, ಕನ್ನಡದಲ್ಲಿ ಭಾಷಾ ವಿಜ್ಞಾನದ ಮೂಲ ತತ್ವಗಳನ್ನು ಕುರಿತು ರಚನೆಯಾದ ಕೃತಿಗಳನ್ನು ಅಧ್ಯಯನ ನಡೆಸಲಾಗಿದೆ. ಕನ್ನಡ ವ್ಯಾಕರಣ ಮತ್ತು ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಪ್ರಭಾವ ಬೀರಿದ ಗ್ರಂಥಗಳಲ್ಲಿ ಬಳಕೆಯಾಗಿರುವ ಪರಿಭಾಷೆ, ಪದಗಳ ವ್ಯಾಪ್ತಿಯನ್ನು ಇಲ್ಲಿ ಚರ್ಚಿಸಲಾಗಿದೆ.

ಕನ್ನಡದಲ್ಲಿ ಮೊದಲು ರಚನೆಯಾದ ವ್ಯಾಕರಣ ಮತ್ತು ಭಾಷಾ ವಿಜ್ಞಾನದ ಗ್ರಂಥಗಳಲ್ಲಿ ಸಂಸ್ಕೃತ ಭಾಷೆಯ ಪ್ರಭಾವ ದಟ್ಟವಾಗಿದೆ. ಆದ್ದರಿಂದ ಇಂದಿನವರೆಗೆ ರಚನೆಯಾಗುತ್ತಿರುವ ಬಹುತೇಕ ಕೃತಿಗಳಲ್ಲಿ ಇದೇ ಸಂಪ್ರದಾಯವನ್ನು ಅನುಸರಿಸಿಕೊಂಡು ಬರಲಾಗುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಹಳಗನ್ನಡ ವ್ಯಾಕರಣ ಸೂತ್ರಗಳು ಎಂಬ ಕೃತಿಯಲ್ಲಿ; ಸಂಜ್ಞಾ ಪ್ರಕರಣ ಎಂಬ ಮೊದಲ ಭಾಗದಲ್ಲಿ "೧. ಶುದ್ಧಾಕ್ಷರಕ್ಕೆ ಅಕ್ಕರ (ಅಕ್ಷರ)ವೆಂದೂ, ವರ್ಣವೆಂದೂ, ಪರ್ಯಾಯ ನಾಮವು, ಅಕಾರ ಮೊದಲು ಳಕಾರ ಪರ್ಯಂತ ೫೨ ಅಕ್ಷರಗಳು ಪರಿಪೂರ್ಣವಾಗಿರವವು. ೨. ಕ್ರಮದಿಂದ ೧೪ ಅಕ್ಷರಗಳು ಸ್ವರಗಳು ೨೫ ವರ್ಗಾಕ್ಷರಗಳು, ೯ ಅವರ್ಗಾಕ್ಷರಗಳು, ೪ ಯೋಗವಾಹಗಳು, ಅಂತು ೫೨ ಅಕ್ಷರಗಳು ಸಂಸ್ಕೃತದಲ್ಲಿ ಶುದ್ಧಗೆ (ಶುದ್ಧಾಕ್ಷರ) ಎಂದು ವ್ಯವಹರಿಸುತ್ತವೆ"[೧] ಎನ್ನುತ್ತಾರೆ. ಮೇಲಿನ ಉಲ್ಲೇಖಗಳ ಪ್ರಕಾರ ಸಂಸ್ಕೃತದ ವರ್ಣಮಾಲೆಯನ್ನು ಕನ್ನಡಕ್ಕೆ ಯಥಾವತ್ತಾಗಿ ಅನ್ವಯಿಸಲಾಗಿದೆ. ಈ ಮೂಲಕ ಕನ್ನಡದ ಮೊದಲ ವ್ಯಾಕರಣ ಗ್ರಂಥಗಳಲ್ಲೇ ಸಂಸ್ಕೃತವನ್ನು ಅನುಕರಿಸಲಾಗಿದೆ. ಮುಂದಿನ ವ್ಯಾಕರಣ ಗ್ರಂಥಗಳ ರಚನೆಯಲ್ಲಿ ಕೂಡ ಇದೇ ಮಾದರಿಯನ್ನು ಅನುಸರಿಸಲಾಗಿದೆ.

ಮೇಲಿನ ಕೃತಿಯ ಮೊದಲ ಮುದ್ರಣದ ಕುರಿತ ಪ್ರಸ್ತಾವನೆಯಲ್ಲಿ ಮಹತ್ವದ ಸಂಗತಿಗಳನ್ನು ಹೇಳಿದ್ದಾರೆ. ಅವರ ಪ್ರಕಾರ: "ಈ ಗ್ರಂಥವು ಮೊದಲು ೧೮೬೬ರಲ್ಲಿ 'ಸಂಕ್ಷೇಪ ವ್ಯಾಕರಣ ಸೂತ್ರಗಳು' ಎಂಬುದಾಗಿ ಪ್ರಕಟವಾಗಿದ್ದಿತು. ಈ ಮೇಲೆ ೧೮೮೯ರಲ್ಲಿ 'ಸಂಕ್ಷೇಪ' ಎಂಬುದನ್ನು

ಕಳಚಿಕೊಂಡು ತಿದ್ದಿದ ಆವೃತ್ತಿಯಾಗಿ ಹೊರಬಂದಿತು. ಆದರೆ, ಎರಡೂ ಆವೃತ್ತಿಯಲ್ಲಿ ಇದರ ಲೇಖಕರು ಯಾರು ಎಂಬುದನ್ನು ಕಾಣಿಸಿಲ್ಲ. ಬಾಸೆಲ್ ಮಿಶನ್ನಿನವರ ಅನೇಕಾನೇಕ ಪ್ರಕಟಣೆಗಳಲ್ಲಿ ಬರೆದವರ ಹೆಸರನ್ನು ಕಾಣಿಸದಿರುವುದೆ ಮಿಶನ್ನಿನ ವೈಶಿಷ್ಟ್ಯವೆಂಬಂತಿದೆ!”[೨] ಎಂದು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಕೃತಿ ರಚನೆಯ ಪ್ರಭಾವ ಭವಿಷ್ಯದ ಕನ್ನಡ ವ್ಯಾಕರಣ ರಚಿಸುವವರ ಮೇಲೆ ಆದಂತೆ ತೋರುತ್ತದೆ. ಕೃತಿಕಾರರ ಕುರಿತು ಖಚಿತ ಮಾಹಿತಿ ಇಲ್ಲವಾದರೂ, ಈ ಕೃತಿಯಲ್ಲಿ ಸಂಸ್ಕೃತದ ಅಕ್ಷರ (ಸಂಜ್ಞೆ) ಸಂಧಿ, ಸಮಾಸ ಇತ್ಯಾದಿ ನಿಯಮಗಳನ್ನು ಅನುಸರಿಸಲಾಗಿದೆ. ಕೇಶಿರಾಜನ ವ್ಯಾಕರಣ ಪರಂಪರೆಯನ್ನು ಮುಂದುವರೆಸಿರುವ ಈ ಕೃತಿ ಕನ್ನಡದಲ್ಲಿ ಸಂಸ್ಕೃತದ ವ್ಯಾಕರಣದ ಪ್ರಾಭಾವಕ್ಕೆ ಸಾಕ್ಷಿಯಾಗಿದೆ. ಹಳಗನ್ನಡದ ವ್ಯಾಕರಣ ನಿಯಮಗಳನ್ನೇ ಬಹುತೇಕ ಹೊಸಗನ್ನಡದ ಮೇಲೆ ಕೂಡ ಹೇರುವ ಪ್ರಯತ್ನವನ್ನು ನಡೆಸಲಾಗಿದೆ. ಈ ಕೃತಿಯ ನಂತರ ಕನ್ನಡದಲ್ಲಿ ವ್ಯಾಕರಣ ಮತ್ತು ಭಾಷಾ ವೈಜ್ಞಾನಿಕ ಕೃತಿಗಳನ್ನು ರಚಿಸಿದ ಬಹುತೇಕರು ಸಂಸ್ಕೃತದ ಮಾದರಿ, ಪದಗುಚ್ಛ, ಪಾರಿಭಾಷಿಕ ಪದಗಳು, ನಿಯಮಗಳನ್ನು ಕನ್ನಡಕ್ಕೂ ಅನ್ವಯಿಸಿದ್ದಾರೆ.

ಎಂ. ಚಿದಾನಂದಮೂರ್ತಿಯವರ ಭಾಷಾ ವಿಜ್ಞಾನದ ಮೂಲ ತತ್ವಗಳು ಎಂಬ ಕೃತಿಯಲ್ಲಿ ಕೂಡ ಸಂಸ್ಕೃತ ಪ್ರಧಾನ್ಯತೆ ಮುಂದುವರೆದಿದೆ. ಈ ಕೃತಿಯಲ್ಲಿ “‘ಹ’ಕಾರವನ್ನು ಉಚ್ಚರಿಸಿದರೆ ತಾವು ನಾಗರಿಕರ ಸಾಲಿಗೆ ಸೇರಬಹುದೆಂದು ಭಾವಿಸಿದ ಹಲವರು ‘ಹಂಬಲಿ’ (=ಅಂಬಲಿ.) ‘ಹಂಬೆಗಾಲು’ (=ಅಂಬೆಗಾಲು.) ‘ಹಯ್ಯೊ’ (=ಅಯ್ಯೊ) ಎಂಬ ಕಡೆಗಳಲ್ಲಿಯೂ ಅದನ್ನು ಉಚ್ಚರಿಸುವುದುಂಟು. ಅವರ ಬಾಯಲ್ಲಿ ಎಷ್ಟೋ ಕಡೆ ಮಹಾಪ್ರಾಣವಿರಬೇಕಾದ ಕಡೆ ಮಹಾಪ್ರಾಣವಿರುವುದಿಲ್ಲ; ಅಲ್ಪ ಪ್ರಾಣವಿರಬೇಕಾದ ಕಡೆ ಮಹಾಪ್ರಾಣವಿರುತ್ತದೆ. ಇದೂ ಅಷ್ಟೇ, ಅದೇ ಪ್ರವೃತ್ತಿಯ ಫಲ.”[೩] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ‘ಹ’ಕಾರ, ಮತ್ತು ‘ಅ’ಕಾರ ಬಳಕೆಯಲ್ಲಿನ ವ್ಯತ್ಯಾಸಗಳು ತಪ್ಪು ಎಂಬ ನಿರ್ಣಯಕ್ಕೆ ಚಿದಾನಂದಮೂರ್ತಿಯವರು ಬರುತ್ತಾರೆ. ಈ ಮೂಲಕ ಪ್ರಾದೇಶಿಕ ಭಾಷಿಕ ವ್ಯತ್ಯಾಸಗಳನ್ನು ಕಡೆಗಣಿಸುತ್ತಾರೆ. ಇದರೊಂದಿಗೆ ‘ಭಾಷಾ ವಿಜ್ಞಾನದ ಮೂಲ ತತ್ವಗಳು’ ಕೃತಿಯಲ್ಲಿ ಸಂಸ್ಕೃತ ಪಾರಿಭಾಷಿಕಗಳ ಮೊರೆ ಹೋಗಲಾಗಿದೆ. ಈ ಮೂಲಕ ಕನ್ನಡದಲ್ಲಿ ಹೊಸ ಪದ, ಪಾರಿಭಾಷಿಕಗಳ ಸೃಷ್ಟಿಗೆ ಹೆಚ್ಚಿನ ಗಮನ ನೀಡದಿರುವುದಕ್ಕೆ ಈ ಕೃತಿಯಲ್ಲಿ ಅನೇಕ ಸಾಕ್ಷಿಗಳು ಸಿಗುತ್ತವೆ.

ಚಿದಾನಂದಮೂರ್ತಿಯವರು ಧ್ವನಿವಿಜ್ಞಾನವನ್ನು ವಿವರಿಸಿರುವ ‘ಭಾಷಾ ವಿಜ್ಞಾನದ ಮೂಲ ತತ್ವಗಳು’ ಕೃತಿಯ ೧೧೨ರಿಂದ ೧೨೪ನೇ ಪುಟದವರೆಗಿನ ಪ್ರತಿ ಹಂತದಲ್ಲೂ ಕನ್ನಡ ಭಾಷಿಕ ಪದಗಳ ಬದಲಿಗೆ ಸಂಸ್ಕೃತ ಪರಿಭಾಷೆಗಳ ಮೊರೆ ಹೋಗಲಾಗಿದೆ. ಓಷ್ಠ್ಯ, ವರ್ತ್ಸ, ಕಠಿನತಾಲು, ಜಿಹ್ವೆ, ಪಶ್ಚಜಿಹ್ವೆ, ಮೃದುತಾಲು, ಗಲಕುಹರ, ಆಸ್ಯಪಥ ಮೊದಲಾದ ಪರಿಭಾಷೆಗಳನ್ನು ಬಳಸಿದ್ದಾರೆ. ಈ ಮೂಲಕ ಕನ್ನಡ ಪದಗಳ ಬದಲು ಸಂಸ್ಕೃತ ಪದಗಳನ್ನೇ ಬಳಸಲಾಗಿದೆ.

ಇನ್ನು ಚಿದಾನಂದಮೂರ್ತಿಯವರ ನಂತರದ ಕನ್ನಡ ಭಾಷಾ ವಿಜ್ಞಾನ ಕೃತಿಗಳಲ್ಲಿ ಕೂಡ ಸಂಸ್ಕೃತ ಪದ, ಪರಿಭಾಷೆ, ಭಾಷಿಕ ಪ್ರಭಾವವನ್ನು ಕಾಣಬಹುದು. ಹಂ. ಪ. ನಾಗರಾಜಯ್ಯ ಅವರ ‘ದ್ರಾವಿಡ ಭಾಷಾವಿಜ್ಞಾನ’ ಕೃತಿಯ ಆರನೇ ಅಧ್ಯಾಯವಾದ ‘ಕನ್ನಡ ವರ್ಣಮಾಲೆ’ಯಲ್ಲಿ “ಕನ್ನಡ ವರ್ಣಮಾಲೆ ಅಕ್ಷರಾತ್ಮಕವಾದುದು. ಅಂತೆಯೇ ವರ್ಣನಾತ್ಮಕವಾದುದು ಕೂಡ. (ಅರ್ಥವ್ಯತ್ಯಾಸ

ಮಾಡುವ ಶಕ್ತಿಯುಳ್ಳ ಧ್ವನಿಗೆ ವರ್ಣಾತ್ಮಕವೆಂದು ಹೆಸರು.) ಕನ್ನಡ ಭಾಷೆಯ ವರ್ಣಮಾಲೆ ಇಂದಿನ ಶಾಲಾಕಾಲೇಜುಗಳ ಪುಸ್ತಕಗಳಲ್ಲಿ ಅಚ್ಚಾಗಿರುವಂತೆ ೧೪ ಸ್ವರಗಳು, ೨೫ ವರ್ಗೀಯ ವ್ಯಂಜನಗಳು ಮತ್ತು ೯ ಅವರ್ಗೀಯ ವ್ಯಂಜನಗಳನ್ನು ಒಳಗೊಂಡಿದೆ"[೪] ಎನ್ನುತ್ತಾರೆ. ಈ ಮೂಲಕ ಹಳಗನ್ನಡ ವ್ಯಾಕರಣ ಸೂತ್ರಗಳು ಕೃತಿಯ ವಿವರಣೆಗಳನ್ನೇ ಮುಂದುವರೆಸಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಕೂಡ ಸಂಸ್ಕೃತದ ಪರಿಭಾಷೆಗಳನ್ನೇ ದ್ರಾವಿಡ ಭಾಷೆಗಳ ಭಾಷಾ ವಿಜ್ಞಾನವನ್ನು ವಿವರಿಸಲು ಬಳಸಿಕೊಳ್ಳಲಾಗಿದೆ. ಈ ಮೂಲಕ ದ್ರಾವಿಡ ಭಾಷೆಗಳಲ್ಲೇ ದ್ರಾವಿಡ ಭಾಷೆಗಳ ಭಾಷಾ ವೈಜ್ಞಾನಿಕ ಪರಿಭಾಷೆಗಳ ಸೃಷ್ಟಿಗೆ ಇದ್ದ ಅವಕಾಶವನ್ನು ಕೈಬಿಡಲಾಗಿದೆ.

'ತೌಲನಿಕ ದ್ರಾವಿಡ ಭಾಷಾವಿಜ್ಞಾನ' ಎಂಬ ಕೃತಿಯಲ್ಲಿ ಡಾ. ಸಂಗಮೇಶ ಸವದತ್ತಿಮಠ ಅವರು ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ ನಡೆಸಿದ್ದಾರೆ. ಈ ಕೃತಿಯಲ್ಲಿ ಕೂಡ ಚಿದಾನಂದಮೂರ್ತಿ, ಹಂಪ ನಾಗರಾಜಯ್ಯ ಅವರ ಆಲೋಚನಾ ಕ್ರಮವೇ ಮುಂದುವರೆದಿದ್ದು, ಸಂಸ್ಕೃತ ಪದ, ಪರಿಭಾಷೆಗಳನ್ನೆ ದ್ರಾವಿಡ ಭಾಷಾವಿಜ್ಞಾನಗಳಿಗೂ ಅನ್ವಯಿಸಲಾಗಿದೆ. ಸಂಸ್ಕೃತದ ವ್ಯಾಕರಣವನ್ನೇ ದ್ರಾವಿಡ ಭಾಷಾವಿಜ್ಞಾನಗಳಿಗೂ ಅನ್ವಯಿಸಲಾಗಿದೆ. 'ದ್ರಾವಿಡ ಭಾಷಾ ಧ್ವನಿಮಾತ್ಮಕ ಬೆಳವಣಿಗೆಗಳು' ಎಂಬ ಅಧ್ಯಾಯದಲ್ಲಿ ತಾಲವ್ಯೀಕರಣ, ಸಂಧ್ಯಕ್ಷರ, ಕಂಠ್ಯ ಅಘೋಷಸ್ಪರ್ಶ, ಮೂರ್ಧನ್ಯ, ಘೋಷ ಧ್ವನಿಮಾಗಳು, ಅಘೋಷ ಧ್ವನಿಮಾ ಸಂಕೇತಗಳು ಮೊದಲಾದ ಸಂಸ್ಕೃತ ಪದ, ಪರಿಭಾಷೆಗಳನ್ನು ಬಳಸಲಾಗಿದೆ. ಇದೇ ಬಗೆಯ ಪರಿಭಾಷೆಗಳ ಬಳಕೆ ಉಳಿದ ಅಧ್ಯಾಯಗಳಲ್ಲಿ ಕೂಡ ಮುಂದುರೆದಿದೆ. ಇದೇ ಪ್ರವೃತ್ತಿ ವ್ಹಿ. ಶಿವಾನಂದ ಅವರ 'ತೌಲನಿಕ ದ್ರಾವಿಡ ಭಾಷಾವಿಜ್ಞಾನ' ಕೃತಿಯಲ್ಲೂ ಮುಂದುವರೆದಿದೆ.[೫]

'ಕನ್ನಡ ಭಾಷಾ ಸ್ವರೂಪ' ಎಂಬ ಕೃತಿಯಲ್ಲಿ ಕೆ. ಕೆಂಪೇಗೌಡ ಅವರು ಕೂಡ ಸಂಸ್ಕೃತ ಮಾದರಿಯನ್ನೇ ಅನುರಿಸಿ ವ್ಯಂಜನ ಧ್ವನಿಮಾಗಳ ಉಚ್ಚಾರಣಾ ಸ್ಥಾನವನ್ನು ಉಲ್ಲೇಖಿಸಿದ್ದಾರೆ. "ವರ್ಗೀಯ ವ್ಯಂಜನ ಧ್ವನಿಮಾಗಳನ್ನು ಅವು ಹುಟ್ಟುವ ಸ್ಥಾನವನ್ನು ಆಧರಿಸಿ ಐದು ವರ್ಗಗಳಲ್ಲಿ ವರ್ಗೀಕರಿಸಿಕೊಂಡರೆ ಇವುಗಳನ್ನು ಅವುಗಳ ಉಚ್ಚಾರಣಾ ರೀತಿಯನ್ನು ಆಧರಿಸಿ ಆರು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದು. ವ್ಯಂಜನ ಧ್ವನಿಮಾಗಳನ್ನು ಅವು ಹುಟ್ಟುವ ಸ್ಥಾನವನ್ನು ಆಧರಿಸಿ ಕಂಠ್ಯವ್ಯಂಜನ ಧ್ವನಿಮಾಗಳು (ಕ ಖ ಗ ಘ ಙ) ತಾಲವ್ಯ ವ್ಯಂಜನ ಧ್ವನಿಮಾಗಳು (ಚ ಛ ಜ ಝ ಞ) ಮೂರ್ಧನ್ಯ ವ್ಯಂಜನ ಧ್ವನಿಮಾಗಳು (ಟ ಠ ಡ ಢ ಣ) ದಂತ್ಯ ವ್ಯಂಜನ ಧ್ವನಿಮಾಗಳು (ಪ ಫ ಬ ಭ ಮ) ಎಂದು ವಿವರಿಸಿಕೊಂಡರೆ, ವ್ಯಂಜನ ಧ್ವನಿಮಾಗಳನ್ನು ಅವುಗಳ ಉಚ್ಚಾರಣಾ ರೀತಿಯನ್ನು ಆಧರಿಸಿ ಸ್ಪರ್ಶ ವ್ಯಂಜನ ಧ್ವನಿಮಾಗಳು (Stop consonants) (ಪ ಫ, ಬ ಭ, ತ ಥ, ದ ಧ, ಚ ಛ, ಜ, ಝ, ಕ ಖ, ಗ ಘ) ಸಂಘರ್ಷಿ ವ್ಯಂಜನ (Fricative consonanṭ) ಧ್ವನಿಮಾಗಳು (ಸ ಹ) ಅನುನಾಸಿಕ ವ್ಯಂಜನ (nasal consonanṭ) ಧ್ವನಿಮಾಗಳು (ಮ ನ ಣ ಞ ಙ) ಪಾರ್ಶ್ವಿತ ವ್ಯಂಜನ ಧ್ವನಿಮಾಗಳು (Lateral consonanṭ) (ಲ ಳ) ಕಂಪಿತ ವ್ಯಂಜನಗಳು ಧ್ವನಿಮಾಗಳು (Trill consonants) (ರ) ಅರ್ಧಸ್ವರ ಧ್ವನಿಮಾಗಳು (Friction less consonants or semi vowels) (ಯ ವ) ಎಂದು ವಿವರಿಸಿಕೊಳ್ಳಲಾಗುತ್ತದೆ" ಎಂದು ಪಟ್ಟಿಗಳನ್ನು ನೀಡಿದ್ದಾರೆ.

ಇದರಲ್ಲಿ ಧ್ವನ್ಯಂಗಗಳ ವಿವರಣೆಯಲ್ಲಿ ಸಂಸ್ಕೃತ ವ್ಯಾಕರಣದ ಮಾದರಿಯನ್ನೇ ಯಥಾವತ್ತಾಗಿ ಅನುಸರಿಸಲಾಗಿದೆ. ಇದರೊಂದಿಗೆ ಮುಂದಿನ ಭಾಗದಲ್ಲಿ ವಿಭಕ್ತಿ, ಧ್ವನಿಮಾ, ಆಕೃತಿಮಾ, ಸಂಧಿ, ಸಮಾಸ ಇತ್ಯಾದಿ ವಿಭಾಗದಲ್ಲಿ ಅಧ್ಯಯನ ನಡೆಸಲಾಗಿದ್ದು, ಈ ಭಾಗದಲ್ಲೆಲ್ಲ ಸಂಸ್ಕೃತದ ವ್ಯಾಕರಣದ ಮಾದರಿಯನ್ನೇ ಅನುಸರಿಸಲಾಗಿದೆ.[೭]

ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ ಕೃತಿಯಲ್ಲಿ ಡಾ. ರಾಜೇಶ್ವರಿ ಮಹೇಶ್ವರಯ್ಯ ಅವರು, ಹ್ರಸ್ವ ಸ್ವರ, ದೀರ್ಘಸ್ವರ, ಅನುನಾಸಿಕ, ಸಂಕೃಷ್ಟ ಸ್ವರ, ಧ್ವನಿ, ಧ್ವನಿಮಾ, ವಿರಾಮ, ಆಕೃತಿಮಾ, ಶೂನ್ಯ, ಧ್ವನಿಬದ್ಧ, ಆಕೃತಿಮಾಬದ್ಧ ಇತ್ಯಾದಿ ಪದಗಳನ್ನು ಬಳಸುತ್ತಾರೆ.[೮] ಈ ಮೂಲಕ ಕನ್ನಡ ಭಾಷಾ ವಿಜ್ಞಾನದ ಕೃತಿಗಳಲ್ಲಿ ಕೂಡ ಸಂಸ್ಕತಪ್ರಾಧಾನ್ಯತೆ ಮುಂದುವರೆದಿದೆ. ಆದರೆ, ಈ ಆಲೋಚನಾ ಕ್ರಮಗಳಿಗೆ ತಡೆ ನೀಡಲು ಕನ್ನಡದಲ್ಲಿ ಇತ್ತೀಚೆಗೆ ಕ್ರಿಯಾಶೀಲತೆ ಕಂಡಬರುತ್ತಿದೆ. ಕೆ. ವಿ. ನಾರಾಯಣ ಮತ್ತು ಡಿ. ಎನ್. ಶಂಕರ ಬಟ್ಟರು ಈ ದಿಕ್ಕಿನಲ್ಲಿ ತೊಡಗಿಕೊಂಡಿದ್ದಾರೆ.

ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು? ಎಂಬ ಕೃತಿಯಲ್ಲಿ ಡಿ. ಎನ್. ಶಂಕರ ಭಟ್ ಅವರು, **"ನಾವು ನಮ್ಮ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಇವತ್ತು ಬಳಸುತ್ತಿರುವ ಕನ್ನಡ ವ್ಯಾಕರಣಗಳು ನಿಜಕ್ಕೂ ಕನ್ನಡದ ವ್ಯಾಕರಣವೆಂತಹದು ಎಂಬುದನ್ನು ತಿಳಿಸುವುದಿಲ್ಲ; ಕನ್ನಡದ ಪದ, ಪದರೂಪ ಮತ್ತು ವಾಕ್ಯಗಳ ಹಿಂದಿರುವ ನಿಯಮಗಳೆಂತವು ಎಂಬುದನ್ನು ವಿವರಿಸುವ ಬದಲು ಇವು ಸಂಸ್ಕೃತದ ವ್ಯಾಕರಣ ನಿಯಮಗಳನ್ನು ಕನ್ನಡಕ್ಕೆ ಅಳವಡಿಸಲು ಪ್ರಯತ್ನಿಸುತ್ತವೆ; ಕನ್ನಡಕ್ಕೆ ಇವು ತಿಳಿಸುವ ವ್ಯಾಕರಣ ನಿಯಮಗಳಿಗಿಂತ ತೀರ ಭಿನ್ನವಾದ ಮತ್ತು 'ಕನ್ನಡದ್ದೇ ಅದ' ವ್ಯಾಕರಣ ನಿಯಮಗಳಿವೆ; ಅವನ್ನೇ ಇಂತಹ ಕನ್ನಡ ವ್ಯಾಕರಣಗಳು ತಿಳಿಸಬೇಕು ಎಂಬುದನ್ನು ನಾನು ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ಪುಸ್ತಕದಲ್ಲಿ ವಿವರಿಸಿದ್ದೆ"**[೯] ಎನ್ನುತ್ತಾರೆ.

ಕನ್ನಡದಲ್ಲಿ ಈ ಬಗೆಯ ಪ್ರಭಾವಕ್ಕೆ ಕಾರಣಗಳೇನು ಎಂಬುದಕ್ಕೆ ಅವರು ಕೊಡುವ ಕಾರಣ ಹೀಗಿದೆ: **"ಕನ್ನಡದ ವ್ಯಾಕರಣ ಪುಸ್ತಕಗಳಲ್ಲಿ ಈ ತಪ್ಪನ್ನು ಯಾಕೆ ಮಾಡಲಾಗುತ್ತದೆ ಎಂಬುದಕ್ಕೆ ವಿವರಣೆ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪ್ರಾಚೀನ ವೈಯಾಕರಣಿಗಳು ಹಳೆಗನ್ನಡದ ಮೇಲೆ ಬರೆದಿರುವ ವ್ಯಾಕರಣ ಗ್ರಂಥಗಳಲ್ಲಿದೆ. ಈ ವೈಯಾಕರಣಿಗಳು ಮೊದಲಿಗೆ ಸಂಸ್ಕೃತ ವ್ಯಾಕರಣಗಳನ್ನು ಆಳವಾಗಿ ಅಭ್ಯಸಿಸಿದ್ದರು; ಅನಂತರ ಕನ್ನಡಕ್ಕೂ ಅಂತಹವೇ ಆದ ವ್ಯಾಕರಣಗಳ ಅವಶ್ಯಕತೆಯಿದೆ ಎಂಬುದನ್ನು ಮನಗಂಡು ಈ ಗ್ರಂಥಗಳನ್ನು ಬರೆದಿದ್ದರು"**[೧೦]ಎನ್ನುತ್ತಾರೆ.

ಮೇಲಿನ ರೀತಿಯಲ್ಲಿ ಕನ್ನಡದಲ್ಲಿ ವ್ಯಾಕರಣಗಳನ್ನು ಬರೆಯುವುದಕ್ಕೆ ತಕರಾರು ತೆಗೆಯುವ ಡಿ. ಎನ್. ಶಂಕರ ಭಟ್ ಅವರು, **"ನಿಜಕ್ಕೂ ಹಳೆಗನ್ನಡ ವ್ಯಾಕರಣವೊಂದನ್ನು ರಚಿಸುವಲ್ಲಿ ಸಂಸ್ಕೃತ ವ್ಯಾಕರಣ ಅಷ್ಟೊಂದು ಉತ್ತಮವಾದ ಮಾದರಿಯಲ್ಲ. ಇದಕ್ಕೆ ಕಾರಣವೇನು ಎಂದರೆ, ಸಂಸ್ಕೃತ ಇಂಡೋ – ಆರ್ಯನ್ ಭಾಷಾಕುಟುಂಬಕ್ಕೆ ಸೇರಿದೆ ಮತ್ತು ಕನ್ನಡ ಅದಕ್ಕಿಂತ ತೀರ ಭಿನ್ನವಾದ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದೆ; ಈ ಎರಡು ಭಾಷಾ ಕುಟುಂಬಗಳ ನಡುವೆ ವ್ಯಾಕರಣದ ಮೂಲತತ್ವಗಳಲ್ಲೇನೇ ಹಲವು ಮುಖ್ಯವಾದ ವ್ಯತ್ಯಾಸಗಳಿವೆ"**[೧೧]ಎಂದು ಅಭಿಪ್ರಾಯಪಡುತ್ತಾರೆ.

ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪ್ರಾಚೀನ ವೈಯಾಕರಣಿಗಳ ದಾರಿಯಲ್ಲಿ ಸಾಗುತ್ತಿರುವುದರಿಂದಾಗಿ ಕನ್ನಡದಲ್ಲೇ ಕನ್ನಡದ ವ್ಯಾಕರಣ ನಿಯಮಗಳನ್ನು ರಚಿಸಲು ಸಾಧ್ಯವಾಗಿಲ್ಲ ಎನ್ನುವ ಅವರು, ಕನ್ನಡದಲ್ಲೇ ಕನ್ನಡದ ವ್ಯಾಕರಣ ಬರೆಯಲು ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟ ಅವರು 'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹುದು?' ಎಂಬ ಕೃತಿಯಲ್ಲಿ ವ್ಯಾಕರಣಗಳನ್ನು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಮೊದಲನೆಯದನ್ನು ಅರಿವಿಗೆ ಎಟಕದ ನಿಯಮಾವಳಿ ಮತ್ತು ಅರಿವಿಗೆ ಎಟಕುವ ನಿಯಮಮಾವಳಿ ಎಂದು ಕರೆಯುತ್ತಾರೆ. ಅವರ ಪ್ರಕಾರ: **"ವ್ಯಾಕರಣ ಎಂಬ ಪದವನ್ನು 'ಅರಿವಿಗೆ ಎಟಕದ ನಿಯಮಾವಳಿ ಮತ್ತು 'ಅರಿವಿಗೆ ಎಟಕುವ ನಿಯಮಾವಳಿ' ಎಂಬುದಾಗಿ ಎರಡು ಅರ್ಥಗಳಲ್ಲಿ ಬಳಸಲು ಸಾಧ್ಯವಿದೆ. ಇವುಗಳಲ್ಲಿ ಮೊದಲನೆಯ ಅರ್ಥವಿರುವ 'ವ್ಯಾಕರಣ'ವನ್ನು ಭಾಷೆಯನ್ನು ಬಳಸುವವರೆಲ್ಲರೂ ತಿಳಿದಿರುತ್ತಾರೆ ಮತ್ತು ಇಂತಹ ವ್ಯಾಕರಣಗಳು ಎಲ್ಲಾ ಭಾಷೆಗಳಿಗೂ ಇದ್ದೇ ಇರುತ್ತವೆ"**[೧೨] ಎನ್ನುತ್ತಾರೆ. ಮುಂದುವರೆದು, **"ಅರಿವಿಗೆ ಎಟಕದ ನಿಯಮಾವಳಿಯನ್ನು ಅರಿವಿಗೆ ಎಟಕುವಂತೆ ಮಾಡುವುದಕ್ಕಾಗಿ ವಿದ್ವಾಂಸರು ವ್ಯಾಕರಣ ಗ್ರಂಥಗಳನ್ನು ರಚಿಸುತ್ತಾರೆ. ಈ ಗ್ರಂಥಗಳಲ್ಲಿ ಒಂದು ಭಾಷೆಯ ಪದ, ಪದರೂಪ, ವಾಕ್ಯ ಮೊದಲಾದವುಗಳ ತಯಾರಿಕೆಯಲ್ಲಿ ಎಂತಹ ನಿಯಮಗಳನ್ನೆಲ್ಲ ಬಳಸಬೇಕಾಗುತ್ತದೆ ಎಂಬುದನ್ನು ವಿವರಿಸಿ ಹೇಳಲಾಗುತ್ತದೆ. ಇವು ಮೇಲೆ ಸೂಚಿಸಿರುವ ಎರಡನೆಯ ಅರ್ಥದ ವ್ಯಾಕರಣಗಳು. ಇಂತಹ ವ್ಯಾಕರಣ ಗ್ರಂಥಗಳನ್ನು ಸದ್ಯಕ್ಕೆ ಕೆಲವೇ ಕೆಲವು ಭಾಷೆಗಳಿಗೆ ಮಾತ್ರ ಬರೆಯಲು ಸಾಧ್ಯವಾಗಿದೆ"**[೧೩] ಎನ್ನುತ್ತಾರೆ.

ಈ ಮೂಲಕ ಕನ್ನಡದ ಜಾಯಮಾನಕ್ಕೂ ಸಂಸ್ಕೃತದ ಜಾಯಮಾನಕ್ಕೂ ಒಂದೇ ಬಗೆಯ ವ್ಯಾಕರಣವನ್ನು ಅನ್ವಯಿಸುವುದು ಸಾಧ್ಯವಿಲ್ಲ ಮತ್ತು ಸಾಧುವಲ್ಲ ಎಂಬ ಅಭಿಪ್ರಾಯವನ್ನು ಡಿ. ಎನ್. ಶಂಕರ ಬಟ್ಟರು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ: **"ಸಂಸ್ಕೃತ ಭಾಷೆಯಲ್ಲಿ ಬಳಕೆಯಾಗುವ ವ್ಯಾಕರಣದ ಮೂಲತತ್ವಗಳಲ್ಲಿ ಹೆಚ್ಚಿನವನ್ನೂ ಅದು ಇಂಡೋ – ಯೂರೋಪಿಯನ್ ಮೂಲಭಾಷೆಯಿಂದ ಆನುವಂಶಿಕವಾಗಿ ಪಡೆದಿದೆ ಮತ್ತು ಕನ್ನಡ ಭಾಷೆಯಲ್ಲಿ ಬಳಕೆಯಾಗುವ ವ್ಯಾಕರಣದ ಮೂಲತತ್ವಗಳಲ್ಲಿ ಹೆಚ್ಚಿನವನ್ನೂ ಅದು ದ್ರಾವಿಡ ಮೂಲಭಾಷೆಯಿಂದ ಆನುವಂಶಿಕವಾಗಿ ಪಡೆದಿದೆ. ಈ ಎರಡು ಮೂಲಭಾಷೆಗಳು ಒಂದಕ್ಕಿಂತ ಒಂದು ತೀರ ಭಿನ್ನವಾಗಿದ್ದುವಾದ ಕಾರಣ ಅವುಗಳಿಂದ ಈ ಭಾಷೆಗಳು ಪಡೆದಿರುವ ವ್ಯಾಕರಣದ ಮೂಲತತ್ವಗಳ ಒಂದಕ್ಕಿಂತ ಒಂದು ತೀರ ಭಿನ್ನವಾಗಿವೆ"**[೧೪] ಎಂದು ಅಭಿಪ್ರಾಯಪಡುತ್ತಾರೆ.

'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹುದು?' ಎಂಬ ಕೃತಿಯಲ್ಲಿ ಪೀಠಿಕೆ, ಮುಕ್ತಾಯ ಸೇರಿ ಒಟ್ಟು ೧೨ ಅಧ್ಯಾಯಗಳಿದ್ದು, ಪಾರಿಭಾಷಿಕ ಪದಗಳ ಬಳಕೆ, ವರ್ಣಗಳ ಬಳಕೆ, ಪದವರ್ಗಗಳು, ಪದಗಳ ಒಳರಚನೆ, ನಾಮಪದಗಳ ಸ್ವರೂಪ, ಲಿಂಗ ಮತ್ತು ವಚನಗಳು, ವಿಭಕ್ತಿಗಳು ಮತ್ತು ಕಾರಕಗಳು, ಕ್ರಿಯಾರೂಪಗಳು, ವಾಕ್ಯಗಳ ಜೋಡಣೆ ಮತ್ತು ವಿಷಯವಾಕ್ಯಗಳು ಎಂಬ ಅಧ್ಯಾಯಗಳಲ್ಲಿ ಕನ್ನಡ ಮತ್ತು ಸಂಸ್ಕೃತ ವ್ಯಾಕರಣಗಳ ನಡುವೆ ಇರುವ ಅಂತರವನ್ನು ವಿವರಣೆಗಳ ಸಹಿತ ಸಾಬೀತುಪಡಿಸಿದ್ದಾರೆ.

"ಕೇಶಿರಾಜನು ವ್ಯಾಕರಣವನ್ನು ರಚಿಸುವ ಕಾಲದಲ್ಲಿ ಗ್ರಂಥರಚನೆಯಲ್ಲಿ ಬಳಕೆಯಾಗುತ್ತಿದ್ದ ಹಳೆಗನ್ನಡ ಭಾಷಾ ಪ್ರಭೇದ ಮಾತಿನಲ್ಲಿ ಬಳಕೆಯಲ್ಲಿದ್ದ ಪ್ರಭೇದಕ್ಕಿಂತ ಭಿನ್ನವಾಗಿದ್ದಿರಬೇಕು. ಈ

ಕಾರಣಕ್ಕಾಗಿ ಆತನು ತನ್ನ ವ್ಯಾಕರಣ ನಿಯಮಗಳಿಗೆ ಮಾತಿನಲ್ಲಿ ಬಳಕೆಯಾಗುವ ವಾಕ್ಯಗಳನ್ನು ಆಧಾರವಾಗಿ ಕೊಡುವ ಬದಲು ಗ್ರಂಥಗಳಲ್ಲಿ ಕಂಡುಬರುವ ಪ್ರಯೋಗಗಳನ್ನು ಆಧಾರವಾಗಿ ಕೊಡುವ ಅವಶ್ಯಕತೆಯುಂಟಾಗಿತ್ತು"[೧೫] ಎನ್ನುವ ಅವರು, ಬಿಳಿಗಿರಿ (೧೯೬೩:೧೨) ಸೂಚಿಸಿದ ಹಾಗೆ, ಸುಮಾರು ೩೫೦ ವರ್ಷಗಳಷ್ಟು ದೀರ್ಘವಾದ ಅವಧಿಯಲ್ಲಿ ರಚಿತವಾದ ಹಳೆಗನ್ನಡ ಗ್ರಂಥಗಳನ್ನು ಆತನು ತನ್ನ ವ್ಯಾಕರಣಕ್ಕೆ ಆಕರಗಳನ್ನಾಗಿ ಬಳಸಿದ್ದಾನೆ. ಈ ದೀರ್ಘವಾದ ಅವಧಿಯಲ್ಲಿ ಹಳೆಗನ್ನಡ ಹಲವು ರೀತಿಯ ಬದಲಾವಣೆಗಳನ್ನು ಕಂಡಿದ್ದು ಅವುಗಳಲ್ಲಿ ಕೆಲವು ಗ್ರಂಥಗಳನ್ನೂ ಬಾಧಿಸಿವೆ. ಆದರೆ, ಕೇಶಿರಾಜನಿಗೆ ಇವನ್ನು 'ಭಾಷೆಯಲ್ಲಿ ನಡೆದ ಬದಲಾವಣೆ'ಗಳೆಂಬುದಾಗಿ ಪರಿಗಣಿಸಲು ಸಾಧ್ಯವಾಗಿರಲಿಲ್ಲ"[೧೬] ಎಂದು ಎಚ್ ಎಸ್ ಬಿಳಿಗಿರಿಯವರ ಮಾತುಗಳನ್ನು ಉಲ್ಲೇಖಿಸುತ್ತಾರೆ.

ಒಟ್ಟಿನಲ್ಲಿ ಕನ್ನಡ ವ್ಯಾಕರಣಗಳು ಮತ್ತು ವೈಯಾಕರಣಿಗಳು ಸಂಸ್ಕೃತ ವ್ಯಾಕರಣ ಪರಂಪರೆಯನ್ನು ಅನುಸರಿಸಿರುವುದಕ್ಕೆ ಅವರು ಸಾಕಷ್ಟು ವಿವರಣೆಗಳನ್ನು ಮತ್ತು ಉದಾಹರಣೆಗಳನ್ನು ಈ ಕೃತಿಯುದ್ದಕ್ಕೂ ನೀಡಿದ್ದಾರೆ. "ಅಂತಹ ಐತಿಹಾಸಿಕ ದೃಷ್ಟಿಯಿಲ್ಲದಿದ್ದುದು ಆತನ ವ್ಯಾಕರಣಕ್ಕೆ ಹಲವು ರೀತಿಯ ಸಮಸ್ಯೆಗಳನ್ನು ತಂದೊಡ್ಡಿದೆ. ಆತನು ವ್ಯಾಕರಣಕ್ಕೆ ಆಧಾರವಾಗಿ ಬಳಸಿದಂತಹ ಗ್ರಂಥಗಳಲ್ಲಿ ಕಾಣಿಸುವ 'ಬದಲಾವಣೆ'ಗಳಲ್ಲಿ ಕೆಲವನ್ನು ವಿಕಲ್ಪಗಳೆಂದು ಪರಿಗಣಿಸಿರುವನಾದರೆ ಇನ್ನು ಕೆಲವನ್ನು ತಪ್ಪು ಎಂದು ಸಾರಿದ್ದಾನೆ. ವಿಕಲ್ಪಗಳೆಂದು ಪರಿಗಣಿಸಿರುವಲ್ಲೆಲ್ಲ ಅನವಶ್ಯಕವಾಗಿ ವ್ಯಾಕರಣ ನಿಯಮಗಳನ್ನು ಕಲ್ಪಿಸಬೇಕಾಗಿದೆಯಾದ ಕಾರಣ, ಅದರಿಂದಾಗಿ ಆತನ ವ್ಯಾಕರಣ ಕ್ಲಿಷ್ಟವಾಗಿದೆ"[೧೭] ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಮೂಲಕ ಕೇಶಿರಾಜನನ್ನು ಅನುಸರಿಸಿ ರಚನೆಯಾಗಿರುವ ಎಲ್ಲ ವ್ಯಾಕರಣಗಳು ಅನವಶ್ಯಕವಾಗಿ ಕ್ಲಿಷ್ಟಕರವಾಗಿವೆ ಎಂದು ಅವರು ವಾದಿಸಿದ್ದಾರೆ.

ಸಂಸ್ಕೃತ ವ್ಯಾಕರಣವನ್ನು ಆಧರಿಸಿ ಕನ್ನಡದಲ್ಲಿ ವ್ಯಾಕರಣ ರಚಿಸಿದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಯೊಂದರ ಕುರಿತು ಅವರು ಹೀಗೆ ಅಭಿಪ್ರಾಯಪಡುತ್ತಾರೆ: "ವ್ಯಾಕರಣವೊಂದನ್ನು ಸಂಸ್ಕೃತದಲ್ಲಿ ಬರೆದಿದೆಯಾದರೆ, ಅದರಲ್ಲಿ ಈ ರೀತಿ ಸಂಸ್ಕೃತದವೇ ಆದ ಪಾರಿಭಾಷಿಕ ಪದಗಳನ್ನು ಬಳಸುವುದರಲ್ಲಿ ಔಚಿತ್ಯವಿದೆ. ಆದರೆ, ಕನ್ನಡದಲ್ಲಿ ವ್ಯಾಕರಣವನ್ನು ಬರೆಯುವವರು ಅವಶ್ಯವಿರುವಲ್ಲಿ ಪಾರಿಭಾಷಿಕ ಪದಗಳನ್ನೆಲ್ಲ ಆದಷ್ಟು ಮಟ್ಟಿಗೆ ಕನ್ನಡದಲ್ಲೇನೇ ತಯಾರಿಸಿಕೊಳ್ಳುವ ಅವಶ್ಯಕತೆಯಿದೆಯಲ್ಲವೇ? ಹಾಗೆ ತಯಾರಿಸಲು ಸಾಧ್ಯವಿಲ್ಲವಾದಲ್ಲಿ ಮಾತ್ರ ಅವನ್ನು ಸಂಸ್ಕೃತದಿಂದ ಇಲ್ಲವೇ ಬೇರೊಂದು ಭಾಷೆಯಿಂದ ಎರವಲಾಗಿ ಪಡೆದುಕೊಳ್ಳಬೇಕು. ಕನ್ನಡದಲ್ಲಿ ಹಳೆಗನ್ನಡಕ್ಕೆ ಇಲ್ಲವೇ ಹೊಸಗನ್ನಡಕ್ಕೆ ವ್ಯಾಕರಣವನ್ನು ಬರೆಯಲು ಪ್ರಯತ್ನಿಸುವವರೆಲ್ಲರೂ ಈ ವಿಷಯವನ್ನು ಗಮನದಲ್ಲಿರಿಸುವುದು ಅವಶ್ಯ ಎಂದು ನನಗೆ ತೋರುತ್ತದೆ. ಹೀಗೆ ಮಾಡುವುದರಿಂದ ಹಲವು ರೀತಿಯ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿದೆ"[೧೮] ಎನ್ನುತ್ತಾರೆ.

೪. ಎನ್. ಶಂಕರ ಬಟ್ ಅವರ ಪ್ರಕಾರ:

೧. ಕನ್ನಡದವೇ ಆದ ಪಾರಿಭಾಷಿಕ ಪದಗಳನ್ನು ಬಳಸುವುದರಿಂದ ಸಂಸ್ಕೃತ ಗೊತ್ತಿಲ್ಲದವರಿಗೆ ಕನ್ನಡ ವ್ಯಾಕರಣವನ್ನು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ.

೨. ಕೆಲವು ಪಾರಿಭಾಷಿಕ ಪದಗಳು ಸಂಸ್ಕೃತದಲ್ಲಿ ಬಳಕೆಯಾಗುವ ವ್ಯಾಕರಣದ ಮೂಲ

ತತ್ವಗಳ ಮೇಲೆ ಅವಲಂಬಿತವಾಗಿದ್ದು, ಕನ್ನಡ ವ್ಯಾಕರಣಕ್ಕೆ ಅನುಕೂಲವಾದುವಲ್ಲ. ಅವನ್ನು ಬಳಸುವುದರಿಂದ ಸಂಸ್ಕೃತ ಮತ್ತು ಕನ್ನಡ ಭಾಶೆಗಳ ನಡುವೆ ಈ ಮೂಲತತ್ವಗಳ ಮಟ್ಟಿಗೆ ವ್ಯತ್ಯಾಸವಿದೆಯೆಂಬ ವಿಷಯ ಸ್ಪಷ್ಟವಾಗುವುದಿಲ್ಲ.

೩. ಪದ ಮತ್ತು ಶಬ್ದ ಎಂಬೆರೆಡು ಪಾರಿಭಾಷಿಕ ಪದಗಳ ನಡುವಿರುವ ವ್ಯತ್ಯಾಸ ಇನ್ನೊಂದು ರೀತಿಯದು. ಸಂಸ್ಕೃತ ವ್ಯಾಕರಣದಲ್ಲಿ ಸುಪ್ ಮತ್ತು ತಿಙ್ ಎಂಬ ಎರಡು ರೀತಿಯ ಪ್ರತ್ಯಯಗಳೊಂದಿಗೆ ಬರುವವುಗಳನ್ನು ಮಾತ್ರ ಪದಗಳೆಂದು ಕರೆಯಬೇಕೆಂಬ ನಿಯಮವನ್ನು ಮಾಡಲಾಗಿದೆ. ಈ ಪ್ರತ್ಯಯಗಳು ಸೇರಿಲ್ಲವಾದರೆ ಅದನ್ನು ಶಬ್ದ ಎಂದು ಕರೆಯಬಹುದು. ಆದರೆ, ಸಂಸ್ಕೃದಲ್ಲೇನೇ ಈ ನಿಯಮಗಳನ್ನು ಅಷ್ಟೊಂದು ಕಟ್ಟುನಿಟ್ಟಾಗಿ ಅನುಸರಿಸಿಲ್ಲ. ಕೆಲವೆಡೆಗಳಲ್ಲಿ ಶಬ್ದ ಎಂಬರ್ಥದಲ್ಲೂ ಪದ ಎಂಬುದನ್ನು ಬಳಸಲಾಗುತ್ತದೆ.

೪. ಕನ್ನಡದಲ್ಲಿ ಬಳಕೆಯಾಗುವ ಪದಗಳಲ್ಲಿ ಯಾವುದು ತಪ್ಪು ಮತ್ತು ಯಾವುದು ಸರಿ ಎಂಬ ವಿಷಯದಲ್ಲೂ ಕನ್ನಡದ್ದೇ ಆದ ನಿಯಮಗಳಿವೆ. ಇವು ಸಂಸ್ಕೃತದ ನಿಯಮಗಳಿಗಿಂತ ಭಿನ್ನವಾಗಿರಲು ಸಾಧ್ಯವಿದೆಯಾದ ಕಾರಣ, ಕನ್ನಡ ಬರಹಗಳ ಮೇಲೆ ಸಂಸ್ಕೃತದ ನಿಯಮಗಳನ್ನು ಹೇರುವುದು ಸರಿಯಲ್ಲ. ಹಲವರು ಸಂಸ್ಕೃತ ವಿದ್ವಾಂಸರು ಈ ವಿಷಯವನ್ನು ಗಮನಿಸುವುದಿಲ್ಲ[೧೯] ಎಂದು ಅವರು ಹೇಳುತ್ತಾರೆ. ಈ ೪ ವಿಭಾಗಗಳಿಗೂ ಅವರು ಪ್ರತ್ಯೇಕ ಉದಾಹರಣೆಗಳನ್ನು ನೀಡುತ್ತಾರೆ.

ಡಿ. ಎನ್. ಶಂಕರ ಬಟ್ಟರ ಚಿಂತನೆಗಳಿಗೆ ಪೂರಕವಾಗಿ ಕೆ. ವಿ. ನಾರಾಯಣ ಅವರು ಮಹತ್ವದ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಅವರ ಇತ್ತೀಚಿನ ಕೃತಿಯಾದ 'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು' ಕೃತಿಯಲ್ಲಿ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಬಳಸಲು ಸಾಧ್ಯವಿದೆ ಎಂದು ಸಾಬೀತುಪಡಿಸಿದ್ದಾರೆ. ಅವರ ಪ್ರಕಾರ: "ಕನ್ನಡ ಬರವಣಿಗೆಯಲ್ಲಿ ಬಳಕೆಯಾಗುವ ಪದಕೋಶ ಎಂತಹದಿರಬೇಕೆಂಬ ಬಗೆಗೆ ಚರ್ಚೆ ಸುಮಾರು ಹನ್ನೆರಡು ಶತಮಾನಗಳಿಂದ ನಡೆಯುತ್ತಿದೆ. ಕವಿರಾಜಮಾರ್ಗಕಾರನೇ ಸಂಸ್ಕೃತ ಪದಗಳನ್ನು ಬಳಸುವುದು ಬೇಡವೆಂದು ಹೇಳಲಿಲ್ಲವಾದರೂ ಹಾಗೆ ಬಳಕೆಯಾಗುವ ಪದಗಳು ಕನ್ನಡದ ನಡೆಗೆ ಸರಿಹೊಂದುವಂತೆ ಇರಬೇಕೆಂದು ಹೇಳಿದ್ದಾನೆ. ಹಾಗೆ ಸರಿಹೊಂದುವ ಪದಗಳ ಚಹರೆಯನ್ನು ಕೂಡ ಅಷ್ಟಿಷ್ಟು ಪಟ್ಟಿ ಮಾಡಿಕೊಟ್ಟಿದ್ದಾನೆ. ಮುಂದೆ ಈ ಚರ್ಚೆ ಹಲವು ನೆಲೆಗಳಲ್ಲಿ ಮುಂದುವರೆಯುತ್ತ ಬಂದಿದೆ"[೨೦] ಎನ್ನುತ್ತಾರೆ. ಈ ಮೂಲಕ ಡಿ ಎನ್ ಶಂಕರ ಬಟ್ಟರ ಚಿಂತನೆಗಳನ್ನು ಸಮರ್ಥಿಸಿದ್ದಾರೆ.

'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು' ಕೃತಿಯಲ್ಲಿ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಅಕರಾದಿಯಿಂದ ಹಕಾರದವರೆಗೆ ಪಟ್ಟಿಯನ್ನು ನೀಡಲಾಗಿದೆ. ಉದಾ: ಅಂಕಣ ಪದಕ್ಕೆ ಬದಲಾಗಿ, ಚೌಕಟ್ಟು, ಒಳಮನೆ ಪದಗಳನ್ನು ಬಳಸಬಹುದು ಎನ್ನುತ್ತಾರೆ. ಇಂತಹ ಕನ್ನಡ ಪದಕೋಶಗಳಿಂದ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡದ್ದೇ ಪದಗಳನ್ನು ಬಳಸುವುದು ಸಾಧ್ಯ ಎಂಬುದನ್ನು ಕೆ ವಿ ನಾರಾಯಣ ಅವರು ತೋರಿಸಿಕೊಟ್ಟಿದ್ದಾರೆ. ಈ ಹಿಂದೆ 'ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು' ಎಂಬ ಕೃತಿಯಲ್ಲಿ ಶಂಕರಬಟ್ಟರು ರಚಿಸಿದ್ದ ಕೃತಿಯಂತೆ ಈ ಹೊತ್ತಿಗೆ ಸಂಸ್ಕೃತ ಪದಗಳ ಬದಲಿಗೆ ಕನ್ನಡ ಪದಗಳ ಕೋಶವಾಗಿದೆ. ಸರಳ ಕನ್ನಡ

ಭಾಷೆಯ ಪದಗಳ ಮೂಲಕ ಭಾಷೆಯ ಬಳಕೆ, ಪ್ರಯೋಗಗಳಿಂದ ಸಂಸ್ಕೃತವನ್ನು ದೂರ ಇರಿಸಲು ಸಾಧ್ಯ ಎಂದು ಈ ಕೃತಿ ಹೇಳುತ್ತಿದೆ.

"ಹೆಚ್ಚು ಶುದ್ಧವಾದ ಕನ್ನಡ ಎಂದರೆ ಸಂಸ್ಕೃತ ಪದಗಳು ಬೆರೆತ ಮತ್ತು ಸಂಸ್ಕೃತ ಪದಗಳನ್ನು ಅವುಗಳ ಮೂಲ ರೂಪದಲ್ಲೇ ಉಳಿಸಿಕೊಂಡ ಕನ್ನಡ ಎಂಬುದು ಈಗ ಜಾರಿಯಲ್ಲಿರುವ ನಂಬಿಕೆಯಾಗಿದೆ. ನಮ್ಮ ಕಲಿಕೆಯ ನೆಲೆಯಲ್ಲಿಯೇ ಈ ನಂಬಿಕೆಯ ಬುಡಗಳನ್ನು ಗಟ್ಟಿ ಮಾಡುವ ಕೆಲಸವನ್ನು ಗೊತ್ತಿಲ್ಲದಂತೆ ಮಾಡುತ್ತಿರುತ್ತೇವೆ. ಅಂದರೆ, ನಾವು ಸಂಸ್ಕೃತ ಪದಗಳನ್ನು ಕನ್ನಡ ಬರಹದಲ್ಲಿ ಸೇರಿಸಿಕೊಳ್ಳುವುದರ ಜೊತೆಗೆ ಅವು ಮೂಲ ಸಂಸ್ಕೃತ ನುಡಿಯಲ್ಲಿ ಯಾವ ದನಿ ಚಹರೆಯನ್ನು ಹೊಂದಿವೆಯೋ ಅದೇ ಬಗೆಯನ್ನು ಉಳಿಸಿಕೊಳ್ಳಬೇಕೆಂಬ ಹಟವನ್ನೂ ಮಾಡುತ್ತಿದ್ದೇವೆ. ಇದು ನಾವೇ ನಮ್ಮ ಮೇಲೆ ಹೇರಿಕೊಂಡಿರುವ ಒತ್ತಾಯ"[೨೧] ಎನ್ನುತ್ತಾರೆ. ಜೊತೆಗೆ ಹಿರಿಯ ಕವಿಗಳು ಮತ್ತು ವಿದ್ವಾಂಸರು ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ ಪದಗಳನ್ನು ಬಳಸಿರುವುದರ ಉದಾಹರಣೆಗಳನ್ನು ನೀಡುತ್ತಾರೆ.

"ನಮ್ಮ ಹಿರಿಯ ಮತ್ತು ಹಿಂದಿನ ಕವಿಗಳು ಯಾವ ಹಿಂಜರಿಕೆಯೂ ಇಲ್ಲದೆ ಬಳಸಿದ ಅಂಕುಸ, ಜನುಮ, ಮೊಗ, ದಿಟ್ಟಿ, ಆಗಸ ಮೊದಲಾದ ಪದಗಳನ್ನು ನಾವೀಗ ನಮ್ಮ ಬರವಣಿಗೆಯಿಂದ ಹೊರಗಿಟ್ಟು ಅವುಗಳ ಜಾಗದಲ್ಲಿ ಅಂಕುಶ, ಜನ್ಮ, ದೃಷ್ಟಿ, ಆಕಾಶ ಪದಗಳನ್ನೇ ಬಳಸುತ್ತೇವೆ. ಇತರರೂ ಹಾಗೇ ಬಳಸಬೇಕೆಂದು ಒತ್ತಾಯಿಸುತ್ತೇವೆ. ಒಂದು ವೇಳೆ ಹಿಂದಿನ ಕವಿಗಳು ಬಳಸಿದ ಪದಗಳನ್ನು ಈಗೊಮ್ಮೆ ಬಳಸಬೇಕಾದರೂ ಆ ಬಳಕೆಗಳು ಕವಿತೆ, ಕತೆಗಳಿಗೆ ಮೀಸಲಾಗಿರುತ್ತವೆ"[೨೨] ಎನ್ನುತ್ತಾರೆ.

ಕನ್ನಡದಲ್ಲಿ ರಚನೆಯಾಗಿರುವ ವ್ಯಾಕರಣ, ಭಾಷಾ ವಿಜ್ಞಾನ ಕುರಿತ ಗ್ರಂಥಗಳಲ್ಲಿ ಕನ್ನಡ ಪರಿಭಾಷೆಗಳನ್ನು ರಚಿಸುವುದು, ಬಳಸುವುದಕ್ಕೆ ಸಂಬಂಧಿಸಿದಂತೆ ಪ್ರಮುಖ ಹೆಜ್ಜೆಗಳನ್ನು ಡಿ. ಎನ್. ಶಂಕರ ಬಟ್ಟರವರೆಗೆ ಇಟ್ಟಿಲ್ಲ ಎಂಬ ಸಂಗತಿಯನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಎಂ. ಚಿದಾನಂದಮೂರ್ತಿ, ಕೆ. ಕೆಂಪೇಗೌಡ, ರಾಜೇಶ್ವರಿ ಮೊದಲಾದವರ ಕೃತಿಗಳಲ್ಲಿ ಸಂಸ್ಕೃತದ ಮಾದರಿಗಳ ಅನುಕರಣೆ ಮತ್ತು ಕನ್ನಡದ ಮೊದಲ ಕೃತಿಗಳಲ್ಲಿ ಸಂಸ್ಕೃತ ವರ್ಣಮಾಲೆ, ವ್ಯಾಕರಣದ ಪರಿಭಾಷೆಗಳು, ಪದಗಳನ್ನು ಬಳಸಿರುವುದನ್ನು ಗುರುತಿಸಲಾಗಿದೆ. ಇದರಿಂದಾಗಿ ಮುಂದಿನ ಕನ್ನಡ ವ್ಯಾಕರಣದಲ್ಲಿ ಸಂಸ್ಕೃತದ ಮಾದರಿಯನ್ನೇ ಅನುಸರಿಸಿರುವುದನ್ನು ಕಂಡುಕೊಳ್ಳಲಾಗಿದೆ. ಮುಂದಿನ ಅಧ್ಯಾಯದಲ್ಲಿ ಡಿ. ಎನ್. ಶಂಕರ ಬಟ್, ಕೆ. ವಿ. ನಾರಾಯಣ ಮೊದಲಾದ ಭಾಷಾ ವಿಜ್ಞಾನಿಗಳು ಕನ್ನಡದಲ್ಲಿ ಮಂಡಿಸಿರುವ ಕನ್ನಡದ ಅಕ್ಷರ, ಪದ, ವ್ಯಾಕರಣ ಮೊದಲಾದ ವಿಷಯಗಳನ್ನು ಅಧ್ಯಯನ ನಡೆಸಲಾಗಿದೆ.

ಉಲ್ಲೇಖಗಳು:

೧. (ಕೃತಿಯಲ್ಲಿ ಕೃತಿಕಾರರ ಹೆಸರು ಉಲ್ಲೇಖವಿಲ್ಲ), ೨೦೧೧, ಹಳಗನ್ನಡ ವ್ಯಾಕರಣ ಸೂತ್ರಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧

೨. (ಕೃತಿಯಲ್ಲಿ ಕೃತಿಕಾರರ ಹೆಸರು ಉಲ್ಲೇಖವಿಲ್ಲ), ೨೦೧೧, ಹಳಗನ್ನಡ ವ್ಯಾಕರಣ ಸೂತ್ರಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ತು

೩. ಚಿದಾನಂದಮೂರ್ತಿ ಎಂ., ೧೯೬೫, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು, ಪು. ೭೭

೪. ಹಂಪ ನಾಗರಾಜಯ್ಯ, ೨೦೧೦, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು, ಪು. ೩೯

೫. ಶಿವಾನಂದ ವ್ಹಿ., ತೌಲನಿಕ ದ್ರಾವಿಡ ಭಾಷಾವಿಜ್ಞಾನ, ವಿದ್ಯಾನಿಧಿ ಪ್ರಕಾಶನ, ಗದಗ

೬. ಕೆಂಪೇಗೌಡ ಕೆ., ೧೯೯೭, ಕನ್ನಡ ಭಾಷಾ ಸ್ವರೂಪ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪು. ಸಂ. ೧೧೧, ೧೧೨

೭. ಅದೇ,

೮. ರಾಜೇಶ್ವರಿ ಮಹೇಶ್ವರಯ್ಯ, ೨೦೧೧, ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ, ಸಮಾಜ ಪುಸ್ತಕಾಲಯ, ಧಾರವಾಡ, ೨೦೧೧, ಪು. ಥು

೯. ಡಿ. ಎನ್. ಶಂಕರ ಭಟ್, ೨೦೦೫, ನಿಜಕ್ಕೂ ಹಳಗನ್ನಡ ವ್ಯಾಕರಣ ಎಂತಹುದು?, ಭಾಷಾ ಪ್ರಕಾಶನ, ಮೈಸೂರು, ಪು. ೫

೧೦. ಅದೇ,

೧೧. ಡಿ. ಎನ್. ಶಂಕರ ಭಟ್, ೨೦೧೫, ನಿಜಕ್ಕೂ ಹಳಗನ್ನಡ ವ್ಯಾಕರಣ ಎಂತಹುದು?, ಭಾಷಾ ಪ್ರಕಾಶನ, ಮೈಸೂರು, , ಪು. ೧೩

೧೨. ಅದೇ, ಪು. ೧೬

೧೩. ಅದೇ, ಪು. ೨೧

೧೪. ಅದೇ, ಪು. ೪೫

೧೫. ಅದೇ, ಪು. ೪೫

೧೬. ಅದೇ,

೧೭. ಅದೇ, ಪು. ೪೬

೧೮. ಅದೇ. ಪು. ೪೬–೪೮

೧೯. ಅದೇ,

೨೦. ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು, ಡಾ. ಕೆ. ವಿ. ನಾರಾಯಣ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೫, ಪು. iii

೨೧. ಅದೇ. ಅದೇ, ಪು. Vi

೨೨. ಅದೇ.

ಅಧ್ಯಾಯ ಮೂರು

ಭಾಷಿಕ ಬಿಡುಗಡೆ: ಪರಿಭಾಷೆಯ ನಿರ್ವಚನ

ಭಾಷಿಕ ಬಿಡುಗಡೆ: ಪರಿಭಾಷೆಯ ನಿರ್ವಚನ ಎಂಬ ಈ ಅಧ್ಯಾಯದಲ್ಲಿ ಕನ್ನಡದಲ್ಲಿ ಬಿಡುಗಡೆ ಕುರಿತ ಚರ್ಚೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕನ್ನಡದಲ್ಲಿ ಇದುವರೆಗೆ ನಿರ್ವಸಾಹತೀಕರಣ ಮತ್ತು ಬಿಡುಗಡೆ ಎಂಬ ಹೆಸರಿನಲ್ಲಿ ನಡೆದಿರುವ ಚರ್ಚೆಗಳನ್ನು ಸಂಗ್ರಹಿಸಲಾಗಿದ್ದು, ಇದರೊಂದಿಗೆ ಬಿಡುಗಡೆಯ ನಿಟ್ಟಿನಲ್ಲಿ ಸಾಹಿತ್ಯ, ರಾಜಕೀಯ ಹಾಗೂ ಸಂಸ್ಕೃತಿ ಕುರಿತು ನಡೆದಿರುವ ಚರ್ಚೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವಸಾಹತುಕಾರರ ಆಳ್ವಿಕೆಯ ಪರಿಣಾಮಗಳಿಂದ ಬಿಡುಗಡೆ ಹೊಂದಲು ವಸಾಹತುಗಳು ನಡೆಸುವ ಪ್ರಯತ್ನ ವಸಾಹತು ಆಡಳಿತ ಮತ್ತು ಅದರ ನಂತರ ನಡೆಯುತ್ತದೆ. ಇದರ ಭಾಗವಾಗಿ ತಮ್ಮ ಅಸ್ಮಿತೆ ಕಂಡುಕೊಳ್ಳಲು ನಡೆಸುವ ಪ್ರಕ್ರಿಯೆಗಳನ್ನು ಮಂಡಿಸಲು ನಿರ್ವಸಾಹತೀಕರಣ ಎಂಬ ಪರಿಭಾಷೆಯನ್ನು ಕನ್ನಡದಲ್ಲಿ ಈಗಾಗಲೇ ಬಳಸಲಾಗಿದೆ. ಆದರೆ ವಸಾಹತುಗಳಿಂದ ಬಿಡುಗಡೆ ಪಡೆಯುವ ಕೆಲಸ ಭಾಷಿಕವಾಗಿ ಶುರುವಾದರೆ ಮಾತ್ರ ನಿರ್ವಸಾಹತೀಕರಣದ ಸಾಧ್ಯತೆಗಳು ಹೆಚ್ಚುತ್ತವೆ. ಆದ್ದರಿಂದ ಈ ಪರಿಭಾಷೆಗೆ ಪ್ರಸ್ತುತ ಅಧ್ಯಯನದಲ್ಲಿ ಬಿಡುಗಡೆ ಎಂಬ ಸಂವಾದಿ ಪದವನ್ನು ಬಳಸಲಾಗಿದೆ. ಈ ಪ್ರಕ್ರಿಯೆ ಸಂಕೀರ್ಣವಾಗಿರುತ್ತದೆ.

ಬಹುತೇಕ ಸಂದರ್ಭಗಳಲ್ಲಿ ದಾಳಿ ಶುರುವಾಗುವುದೇ ಭಾಷೆಯ ಮೂಲಕ. ಆದ್ದರಿಂದ ಬಿಡುಗಡೆಯ ದಾರಿ ಭಾಷೆಯಿಂದ ಶುರುವಾಗಬೇಕಿದೆ. ಭಾಷೆಯನ್ನು ಹೊರತುಪಡಿಸಿದ ಬಿಡುಗಡೆಯ ಸಾಧ್ಯತೆಗಳೂ ಇರಲು ಸಾಧ್ಯವಿಲ್ಲ. ಭಾಷಿಕ ಬಿಡುಗಡೆಯಿಂದ ಮಾತ್ರ ಎಲ್ಲಬಗೆಯ ಬಿಡುಗಡೆ ಸಾಧ್ಯ. ಸ್ವತಂತ್ರವಾದ ಆಲೋಚನಾಕ್ರಮಗಳು ಸ್ವತಂತ್ರ ಭಾಷೆಯಿಂದ ಸಿದ್ಧಿಸುತ್ತವೆ. ಆದ್ದರಿಂದ ಎಲ್ಲ ಬಗೆಯ ಬಿಡುಗಡೆಯ ಮಾದರಿಗಳಲ್ಲಿ ಭಾಷಿಕ ಬಿಡುಗಡೆಗೆ ಮೊದಲ ಆದ್ಯತೆ ನೀಡಬೇಕಿದೆ.

"ಭಾಷೆಯೆಂಬ ಬೆಳಕು ಈ ಲೋಕವನ್ನು ಬೆಳಗದಿದ್ದರೆ ಜಗತ್ತು ಕತ್ತಲಿನಲ್ಲಿ ಮುಳುಗಿರುತ್ತಿತ್ತು" ಎಂಬ ದಂಡಿಯ ಮಾತು ಭಾಷೆಯ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತದೆ. "ಶಬ್ದಗಳಿಲ್ಲದಿದ್ದರೆ

ಗ್ರಹಿಕೆಯೇ ಇಲ್ಲವಲ್ಲ? ಪ್ರತಿಕ್ರಿಯೆಯೆಂಬುದೇ ಇಲ್ಲವಲ್ಲ? ಆಗ ನಾನು ಕಿವುಡ, ಕುರುಡ, ಮೂಕ, ಒಂದು ಕಲ್ಲು ಅಷ್ಟೇ. ಆಗ ಜಗತ್ತು ಎನ್ನುವುದೇ ಇಲ್ಲ."[1] ಎಂಬ ಕೆ.ವಿ. ಸುಬ್ಬಣ್ಣನವರು ಮಾತುಗಳು ಈ ವಿಷಯವನ್ನು ಮನದಟ್ಟು ಮಾಡಿಕೊಡುತ್ತವೆ.

ಮಾನವನ ಯೋಚನೆಗಳು ಮೊದಲು ಅಮೂರ್ತವಾಗಿದ್ದು ಮನಸಿನಲ್ಲಿ ಮೂಡಿ, ಮಾತು, ಬರಹ, ಚಿತ್ರ, ಶಿಲ್ಪ ಇತ್ಯಾದಿ ರೂಪಗಳಲ್ಲಿ ವ್ಯಕ್ತವಾಗುತ್ತವೆ. ಒಂದು ವೇಳೆ ಭಾಷೆಯೊಂದು ಇಲ್ಲವಾದಲ್ಲಿ ಆಲೋಚನೆಗಳು ರೂಪುಗೊಳ್ಳುವ ಸಾಧ್ಯತೆಗಳು ಕ್ಷೀಣಿಸುತ್ತವೆ. ಕನ್ನಡದ ಬಗೆಗೆ ಕನ್ನಡ ಮಾತು, ಬರಹ ಬಲ್ಲವರು ಕನ್ನಡದಲ್ಲಿ ಚಿಂತಿಸುವುದಕ್ಕೂ ಈ ಭಾಷೆ ತಿಳಿಯದವರು ಅನ್ಯಭಾಷೆಯೊಂದರಲ್ಲಿ ಕನ್ನಡದ ಬಗೆಗೆ ಚಿಂತಿಸಿ ಕ್ರಿಯಾಶೀಲವಾಗುವುದಕ್ಕೂ ವ್ಯತ್ಯಾಸಗಳಿರುತ್ತವೆ. ಇದಕ್ಕೆ ಭಾಷಿಕ ತಿಳಿವಳಿಕೆಯೇ ಕಾರಣ. ಉದಾಹರಣೆಗೆ: ಕನ್ನಡ ಭಾಷಿಕನೊಬ್ಬ ತನ್ನೊಡನೆ ಮಾತನಾಡುವುದು, ಮಾನಸಿಕವಾಗಿ ಆಲೋಚಿಸುವುದು, ಬೇರೆಯವರೊಡನೆ ವ್ಯವಹರಿಸುವುದು ಕನ್ನಡದಲ್ಲೇ. ಆದರೆ ಅವನಿಗೆ ಶಬ್ದ ಸಂಪತ್ತಿನ ಕೊರತೆಯುಂಟಾದರೆ ಅವನ ಚಿಂತನೆ, ಅಭಿವ್ಯಕ್ತಿ, ಪ್ರತಿಕ್ರಿಯೆಗಳೆಲ್ಲವೂ ಕುಂಟಿತವಾಗಿ ಮಿತಿಗೊಳಗಾಗುತ್ತವೆ. ಪದಸಂಪತ್ತು ವ್ಯಾಪಕವಾಗಿದ್ದಷ್ಟು ಮಾನವರ ಚಿಂತನೆಯ ವಿಸ್ತಾರ ಹೆಚ್ಚುತ್ತದೆ. ಈ ಕಾರಣಗಳಿಂದಾಗಿ ಮೊದಲು ಭಾಷಿಕವಾಗಿ ಬಿಡುಗಡೆಯಾಗಬೇಕಿದೆ.

ಡಿ.ಎನ್. ಶಂಕರ ಬಟ್ಟರು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿರುವ ಪ್ರಕಾರ: ಕನ್ನಡದ ಅಕ್ಷರ, ಪದ, ವ್ಯಾಕರಣಗಳಲ್ಲಿ ಸಂಸ್ಕೃತವನ್ನು ಅನುಕರಿಸಲಾಗಿದೆ. ಆದ್ದರಿಂದ ಕನ್ನಡ ಮೊದಲು ಸಂಸ್ಕೃತ ಭಾಷೆಯ ಹಿಡಿತದಿಂದ ಬಿಡುಗಡೆ ಹೊಂದಬೇಕು. ಈ ನಿಟ್ಟಿನಲ್ಲಿ ಅವರು ತುಸು ದೊಡ್ಡಮಟ್ಟದಲ್ಲೇ ತಮ್ಮ ಚಿಂತನೆಗಳನ್ನು ಮಂಡಿಸುತ್ತಿದ್ದಾರೆ. ಆರಂಭದಲ್ಲಿ ಸಂಸ್ಕೃತದ ಪ್ರಭಾವ ಕನ್ನಡದ ಮೇಲಾದರೆ ವಸಾಹತು ಕಾಲ ಮತ್ತು ವಸಾಹತೋತ್ತರ ಸಂದರ್ಭದಿಂದೀಚೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ಕನ್ನಡಕ್ಕೆ ಸವಾಲಾಗಿವೆ. ಜೊತೆಗೆ ಕೇಂದ್ರ ಸರ್ಕಾರಗಳ ಹಿಂದಿ ಪ್ರೇಮದ ದುಷ್ಪರಿಣಾಮ ಕನ್ನಡದಂತಹ ಭಾಷೆಗಳ ಮೇಲೆ ಮಾರಣಾಂತಿಕ ಪೆಟ್ಟು ನೀಡುತ್ತಿವೆ. ಇದರ ಪ್ರಭಾವದಿಂದ ಕನ್ನಡ ದಿನದಿಂದ ದಿನಕ್ಕೆ ಹೊಸ ಬಿಕ್ಕಟ್ಟುಗಳಿಗೆ ಈಡಾಗುತ್ತಿದೆ.

ಆದರೆ, ಈ ಬಿಕ್ಕಟ್ಟುಗಳಿಗೆ ಕನ್ನಡ ಪ್ರತಿರೋಧದ ಮಟ್ಟದಲ್ಲಿ ಮುಖಾಮುಖಿಯಾಗಿಲ್ಲ. ಬದಲಾಗಿ ಹೊಂದಾಣಿಕೆಗೆ ಸೀಮಿತವಾಗಿದೆ ಏನೋ ಎಂಬ ಅನುಮಾನ ಇತ್ತು. ಆದರೆ, ಡಿ.ಎನ್. ಶಂಕರ ಬಟ್ಟರು ಈ ಕೊರತೆಯನ್ನು ಇಲ್ಲವಾಗಿಸಲು ಮುಂದಾಗಿದ್ದಾರೆ. ಇದುವರೆಗೆ 'ಕನ್ನಡದಲ್ಲಿ ಭಾಷಿಕವಾಗಿ ನಡೆದಿರುವ ಬಿಡುಗಡೆಯ ಚರ್ಚೆಗಳು ಸಮಗ್ರವಾಗಿ ನಡೆದಿಲ್ಲ'. ಈ ಕೊರತೆಯ ಪರಿಣಾಮದಿಂದ ಕನ್ನಡ ಭಾಷೆಯ ಬೆಳವಣಿಗೆಗೆ ನಿರಂತರ ಒಡ್ಡುಗಳು ಎದುರಾಗಿವೆ. ಅವುಗಳ ನಿವಾರಣೆಗೆ ಪೂರಕವಾಗಿ ಸಂಶೋಧನೆ ನಡೆದಿರುವುದು ವಿರಳ. ಇದಕ್ಕೆ ಸಾಂಪ್ರದಾಯಿಕ ಮನಃಸ್ಥಿತಿಯೇ ಕಾರಣವಾಗಿದೆ.

ಆರಂಭದಲ್ಲಿ ಸಂಸ್ಕೃತ ವ್ಯಾಕರಣವನ್ನು ಅನುಸರಿಸಿಯೇ ಕನ್ನಡ ವ್ಯಾಕರಣ ಗ್ರಂಥಗಳನ್ನು ರಚಿಸಲಾಗಿದೆ. ಇವರ ಪರಿಣಾಮದಿಂದಾಗಿ ಸಂಸ್ಕೃತದ ಪರಿಭಾಷೆಗಳನ್ನೇ ಕನ್ನಡ ವ್ಯಾಕರಣ

ನಿಯಮಗಳ ರಚನೆ, ವ್ಯಾಕರಣಗಳ ಪರಿಭಾಷೆಗಳ ಬಳಕೆ, ರಚನೆ ಮತ್ತು ಅನ್ವಯಕ್ರಮಗಳಲ್ಲಿ ಕೂಡ ಸಂಸ್ಕೃತವನ್ನೇ ಮೂಲಮಾದರಿಯನ್ನಾಗಿಸಿಕೊಳ್ಳಲಾಗಿದೆ. ಇದರಿಂದಾಗಿ ಇಂದಿಗೂ ಸಂಸ್ಕೃತ ವ್ಯಾಕರಣ ಮತ್ತು ಪದ, ಪರಿಭಾಷೆ ಹಾಗೂ ಅಕ್ಷರಗಳ ಬಳಕೆ ಮುಂದುವರೆದಿದೆ.

ಈ ಸಮಸ್ಯೆಯ ಕಾರಣದಿಂದಾಗಿಯೇ ಇಂದಿಗೂ ಕನ್ನಡ ಅನೇಕ ಹಂತಗಳಲ್ಲಿ ಕಡ್ಡಾಯವಾಗಲು, ಎಲ್ಲೆಡೆ ಪ್ರಮುಖ ಭಾಷೆಯಾಗಿ ಬಳಕೆಯಾಗಲು ಅಡೆತಡೆಗಳು ಉಂಟಾಗಿವೆ.

ಉದಾ: ೧. ಕನ್ನಡವನ್ನು ಪರಿಣಾಮಕಾರಿಯಾಗಿ ಆಡಳಿತ ಭಾಷೆಯಾಗಿ ಜಾರಿಗೆ ತರುವುದು ಇಂದಿಗೂ ಸಾಧ್ಯವಾಗಿಲ್ಲ.

೨. ಕನ್ನಡ ಭಾಷಾ ಮಾಧ್ಯಮದಲ್ಲಿ ಶೈಕ್ಷಣಿಕ ಬೋಧನೆಯನ್ನು ಕಡ್ಡಾಯವಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ.

೩. ಶಾಸ್ತ್ರೀಯ ಭಾಷೆಯ ಸ್ಥಾನದ ನಂತರ ಕನ್ನಡದ ಬಿಕ್ಕಟ್ಟುಗಳನ್ನು ಹೊಸಬಗೆಯಲ್ಲಿ ಮುಖಾಮುಖಿಯಾಗಬೇಕಾದ ಅನ್ವೇಷಣೆಗಳು ಇನ್ನೂ ಆರಂಭದ ಹಂತದಲ್ಲೇ ಇವೆ. ಭಾಷಿಕವಾಗಿ ಬಿಡುಗಡೆಯಾಗದೇ ಇರುವುದೇ ಇಂತಹ ಸಮಸ್ಯೆಗಳ ಮೂಲ ಎನಿಸುತ್ತದೆ.

ಪ್ರಸ್ತುತ ಅಧ್ಯಯನ ಈ ಕೊರತೆಯನ್ನು ಮನಗಂಡು ಭಾಷಿಕ ಬಿಡುಗಡೆಯ ಕುರಿತು ಇದುವರೆಗೆ ಕನ್ನಡ ಮತ್ತು ಕರ್ನಾಟಕದಲ್ಲಿ ನಡೆದಿರುವ ಭಾಷಿಕ ಬಿಡುಗಡೆಯನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡ ನಾಡು, ನುಡಿಯ ವಿಸ್ತಾರದಲ್ಲಿ ನಡೆದಿರುವ ಚರ್ಚೆಗಳನ್ನು ಸಾಂಸ್ಕೃತಿಕ ಭಿತ್ತಿಯಲ್ಲಿ ಅಧ್ಯಯನ ನಡೆಸುವ ಉದ್ದೇಶವನ್ನು ಪ್ರಸ್ತುತ ಪ್ರಬಂಧ ಹೊಂದಿದೆ.

ವಸಾಹತುಗಳು ವಸಾಹತುಶಾಹಿಗಳ ಆಡಳಿತದಿಂದ ಅನೇಕ ಸ್ಥಿತ್ಯಂತರಗಳಿಗೆ ಒಳಗಾಗುತ್ತವೆ. ಉದಾಹರಣೆಗೆ ರಾಜಕೀಯ, ಧಾರ್ಮಿಕ, ಆರ್ಥಿಕ, ಭಾಷಿಕ, ನ್ಯಾಯಿಕ, ಶೈಕ್ಷಣಿಕ, ಆಧುನಿಕ ಹಾಗೂ ಸಾಂಸ್ಕೃತಿಕ ಮೊದಲಾದವು. ಪರಸ್ಪರ ಕೊಡುಕೊಳೆಗಳ ಕಾರಣದಿಂದ ವಸಾಹತುಶಾಹಿಗಳ ಆಡಳಿತದ ಅವಧಿ ವಸಾಹತುಗಳಲ್ಲಿ ಅನೇಕ ಬದಲಾವಣೆಗಳನ್ನು ತಂದಿರುತ್ತದೆ. ಇದರ ಪರಿಣಾಮದಿಂದಾಗಿ ಬಿಡುಗಡೆಯ ಸಂದರ್ಭದಲ್ಲಿ ಅನೇಕ ಅಡೆತಡೆಗಳನ್ನು ವಸಾಹತುಗಳು ಎದುರಿಸಬೇಕಾಗುತ್ತದೆ. ಆದರೂ ಬಿಡುಗಡೆಯ ಪ್ರಯತ್ನ ನಡೆಯುತ್ತಿರುತ್ತದೆ. ಅದರಲ್ಲೂ ವಸಾಹತುಶಾಹಿಯ ದೈಹಿಕ ನಿರ್ಗಮನದ ನಂತರ ನಡೆಯುವ ಬಿಡುಗಡೆಯ ಪ್ರಕ್ರಿಯೆ ಮುಖ್ಯ ಪಾತ್ರವಹಿಸುತ್ತದೆ.

ವಸಾಹತುಕಾರರ ದೈಹಿಕ ಅಸ್ತಿತ್ವದ ಸಮಯದಲ್ಲಿ ಬಿಡುಗಡೆಯ ಸನ್ನಿವೇಶ ಕೇವಲ ಅವರ ಭೌತಿಕ ನಿರ್ಗಮನದ ಕಡೆಗೆ ಕೇಂದ್ರೀಕೃತವಾಗಿರುತ್ತದೆ. ನಿರ್ಗಮನದ ನಂತರ ವಸಾಹತುಗಳು ಮನ್ವಂತರ ಹಾಗೂ ಸ್ಥಿತ್ಯಂತರಕ್ಕೆ ಹೇಗೆ ಮುಖಾಮುಖಿಯಾಗುತ್ತವೆ ಎಂಬುದರ ಮೇಲೆ ಭವಿಷ್ಯದ ಬಿಡುಗಡೆಯ ಸಾಧ್ಯತೆಗಳು ನಿರ್ಧಾರವಾಗುತ್ತವೆ.

ಈ ಸಂಕೀರ್ಣ ಸ್ವರೂಪದ ಪ್ರಕ್ರಿಯೆಯನ್ನು ಈ ಅಧ್ಯಾಯದಲ್ಲಿ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ ಮೊದಲಾದ ಚಿಂತಕರ ವಿಚಾರಗಳು ಹಾಗೂ ದೇಸೀ ಚಿಂತಕರ ವಿಚಾರಗಳ ಮೂಲಕ ನಿರ್ವಚಿಸಿಕೊಳ್ಳಲಾಗಿದೆ. ಈ ಅಧ್ಯಾಯದಲ್ಲಿ ದೇಶೀ ಹಾಗೂ ಪಶ್ಚಿಮದ ಭಿನ್ನ ಬಗೆಯ ಬಿಡುಗಡೆಯ (ನಿರ್ವಸಾಹತೀಕರಣ) ವ್ಯಾಖ್ಯೆ, ವ್ಯಾಖ್ಯಾನಗಳನ್ನು ಅಧ್ಯಯನಕ್ಕೆ ಪ್ರವೇಶಿಕೆಯಾಗಿ ನಿರ್ವಚಿಸಿಕೊಳ್ಳಲಾಗಿದೆ.

ಶಂಕರ ಮೊಕಾಶಿ ಪುಣೇಕರ, ಜಿ.ಎನ್. ದೇವಿ, ಡಿ.ಆರ್. ನಾಗರಾಜ್, ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ, ನಟರಾಜ್ ಹುಳಿಯಾರ್ ಮೊದಲಾದವರ ಚರ್ಚೆಗಳನ್ನು ತೌಲನಿಕವಾಗಿ ಚರ್ಚಿಸುವ ಮೂಲಕ ಈಚಿನ ಬಿಡುಗಡೆಯ ಚಿಂತನೆಗಳನ್ನು ಕಂಡುಕೊಳ್ಳಲು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವಸಾಹತೋತ್ತರ ಚಿಂತನೆಗಳಲ್ಲಿ ರಾಜಕೀಯ, ಆರ್ಥಿಕ, ಸಾಹಿತ್ಯಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳನ್ನು ಗ್ರಹಿಸಲು ಪ್ರಮುಖ ಪರಿಕಲ್ಪನೆ ಹಾಗೂ ಆಶಯವಾಗಿ ಬಿಡುಗಡೆ ಪರಿಭಾಷೆ ಬಳಕೆಯಾಗುತ್ತಿದೆ. ಬಿಡುಗಡೆ ಪ್ರಕ್ರಿಯೆಯು ಆಧುನಿಕೋತ್ತರ ಸಂದರ್ಭದಲ್ಲಿ ಅನೇಕ ಬಗೆಯ ಪರ, ವಿರೋಧದ ಚರ್ಚೆಗಳಿಗೆ ಕಾರಣವಾಗಿದೆ. ಬಿಡುಗಡೆಯನ್ನು ಪರಿಭಾವಿಸುವ ಭಿನ್ನ ಕ್ರಮಗಳಿಂದಾಗಿ ಹಾಗೂ ಈ ಪ್ರಕ್ರಿಯೆಯ ಸಂಕೀರ್ಣ ಸ್ವರೂಪದಿಂದಾಗಿ ಈ ಸಂಕೀರ್ಣತೆ ಸಹಜ ಎನಿಸುತ್ತದೆ.

ಕನ್ನಡದ ಇದುವರೆಗಿನ ಬಿಡುಗಡೆಯ ಚರ್ಚೆಗಳಲ್ಲಿ ಮುಖ್ಯವಾಗಿ ರಹಮತ್ ತರೀಕೆರೆಯವರ 'ಮರದೊಳಗಣ ಕಿಚ್ಚು', 'ಸಾಂಸ್ಕೃತಿಕ ಅಧ್ಯಯನ' ಕೃತಿಗಳಲ್ಲಿ ಪ್ರಾಸಂಗಿಕವಾಗಿ ಚರ್ಚೆಗಳನ್ನು ನಡೆಸಲಾಗಿದೆ. ವಿ.ಬಿ. ತಾರಕೇಶ್ವರ್ ಅವರ 'ವಸಾಹತುಶಾಹಿ ಮತ್ತು ಭಾಷಾಂತರ' ಕೃತಿಯಲ್ಲಿ ಇದೇ ಬಗೆಯ ಗ್ರಹಿಕೆ ಮುಂದುವರೆದಿದೆ. ರಾಜೇಂದ್ರ ಚೆನ್ನಿಯವರ 'ದೇಶೀವಾದ' ಕೃತಿಯಲ್ಲಿ ಕೂಡ ಬಿಡುಗಡೆ ಕುರಿತ ಚರ್ಚೆಯನ್ನು ಕಾಣಬಹುದು. ನಟರಾಜ್ ಹುಳಿಯಾರ್ ಅವರ 'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' ಕೃತಿಯಲ್ಲಿ – ಅಧ್ಯಯನದ ನಿರ್ದಿಷ್ಟತೆಗಾಗಿ ಬಿಡುಗಡೆಯನ್ನು ಸಾಹಿತ್ಯ ಕೃತಿ ಹಾಗೂ ವಿಮರ್ಶಾಕೃತಿಗಳ ಹಿನ್ನೆಲೆಯಲ್ಲಿ ತಾತ್ವಿಕ ಭಿತ್ತಿಯಾಗಿ – ಈ ಪ್ರಕ್ರಿಯೆಯ ಸಾಧ್ಯತೆಗಳೆಡೆಗೆ ಇರುವ ಸಾಧಕ ಬಾಧಕಗಳ ವಿವರವಾದ ಚರ್ಚೆಯನ್ನು ಒಳಗೊಂಡಿದೆ.

೩.೧. ಬಿಡುಗಡೆ ಪರಿಭಾಷೆ : ಅರ್ಥ, ವ್ಯಾಖ್ಯೆ, ವ್ಯಾಖ್ಯಾನಗಳು

Decolonisation – ಬಿಡುಗಡೆ – ನಿರ್ವಸಾಹತೀಕರಣ ಎಂದರೇನು?– ವ್ಯಾಖ್ಯಾನಗಳು: "ನಿರ್ವಸಾಹತೀಕರಣವೆಂದರೆ ಹೊಸ ಮನುಷ್ಯನ ಸೃಷ್ಟಿ; ವಸಾಹತೀಕರಣಕ್ಕೊಳಗಾಗಿದ್ದ 'ವಸ್ತು' ತನ್ನನ್ನು ತಾನು ಸ್ವತಂತ್ರಗೊಳಿಸಿಕೊಳ್ಳುವ ರೀತಿಯಿಂದಲೆ ಮನುಷ್ಯನಾಗುತ್ತದೆ."[೨]

೧. "ಚಾರಿತ್ರಿಕ ಅರ್ಥವ್ಯಾಪ್ತಿಯಲ್ಲಿ ವಸಾಹತು ಆಕ್ರಮಣವನ್ನು ಒಳಗೊಂಡು ಅದರಿಂದ ಬಿಡುಗಡೆಯನ್ನು ಹೊಂದುವ ಪ್ರಕ್ರಿಯೆಗೆ ನಿರ್ವಸಾಹತೀಕರಣ ಎಂದು ಗ್ರಹಿಸಲಾಗುವುದು ಒಂದು

ರೀತಿಯಾದರೆ, ಇನ್ನೊಂದು, ಅದನ್ನು ಆಧುನಿಕ ಪರಿಭಾಷೆಯಾಗಿ ಬಳಸಿದಾಗ ವಿಶಾಲಾರ್ಥದಲ್ಲಿ ಭಾಷೆ, ಸಂಸ್ಕೃತಿ, ಶಿಕ್ಷಣ, ಸಾಹಿತ್ಯ, ರಾಜಕೀಯ, ಆರ್ಥಿಕ ವಲಯಗಳಿಗೆ ಅನ್ವಯಿಸುವಂತೆ ಯಾಜಮಾನ್ಯ ಧೋರಣೆಗಳನ್ನು ಎದುರಿಸುವುದು ಮತ್ತು ಪರ್ಯಾಯ ನೆಲೆಗಳನ್ನು ಕಂಡುಕೊಳ್ಳುವುದು ಎನ್ನುವ ಮೀಮಾಂಸಾತ್ಮಕ ದೃಷ್ಟಿಯಲ್ಲಿಯೂ ಬಳಸಲಾಗುತ್ತದೆ."[೩]

೨. "Decolonisation or Decolonize withdraw from (a colony), living it independent."[೪]

೩."The action of changing from colonial to independent status."[೫]

೪. "Decolonisation (or decolonization) refers to the undoing of colonialism, the establishment of governance or authority through the creation of settlements by another country or jurisdiction."[೬]

೫. "Decolonize - grant independence to (a former colony)"[೭]

೬. "Decolonize - to release from the status of colony; to allow a colony to become independent."[೮]

೭. "A process where a colonized people, by developing a consciousness based on the remnants of the traditional culture, redefine themselves as peoples and reassert the distinct qualities that historically guided their existence."[೯]

೮. "Decolonization is the movement of American/European/Asian colonies gaining independence (mostly beginning after the post-WWII era). Some were peaceful struggles while others became violent."[೧೦]

೯. "The progressive dismantling of colonial rule around the world."[೧೧]

೧೦. "ಡಿ.ಆರ್. ನಾಗರಾಜ್‌ರ "ವಿಸ್ಮೃತಿ" ಪರಿಕಲ್ಪನೆಯನ್ನು ನೋಡಿದರೆ ವಸಾಹತುಶಾಹಿ ಸಂಪೂರ್ಣವಾಗಿ ವಸಾಹತುಪೂರ್ವ ಸ್ಥಿತಿಯನ್ನು ಬದಲಾಯಿಸಿತು ಎನ್ನುವುದನ್ನು ಸೂಚಿಸುತ್ತದೆ. ನಿರ್ವಸಾಹತೀಕರಣವೆಂದರೆ ಈ ವಿಸ್ಮೃತಿಯಿಂದ ಬಿಡುಗಡೆಗೊಳ್ಳುವುದಾಗಿರುವುದರಿಂದ ವಸಾಹತು

ಸಂದರ್ಭದಲ್ಲಿ 'ವಿಸ್ಮೃತೀಕರಣ' ಪ್ರಕ್ರಿಯೆ ಸಂಪೂರ್ಣವಾಗಿತ್ತು ಎಂದೇ ಹೇಳಿದಂತಾಗುತ್ತದೆ."[೧೨]

೧೧. ನಿರ್ವಸಾಹತೀಕರಣದ ಕುರಿತು ಪರಾಂಜಪೆಯವರ ಅಭಿಪ್ರಾಯಗಳನ್ನು ಆರ್. ತಾರಿಣಿ ಶುಭದಾಯಿನಿಯವರು ಹೀಗೆ ಸಂಗ್ರಹಿಸಿದ್ದಾರೆ:

"ಅ) ಸಾಂಪ್ರದಾಯಿಕ ಜ್ಞಾನಶಿಸ್ತುಗಳಾದ ಸಾಹಿತ್ಯ, ಕಲೆ, ಸೌಂದರ್ಯಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಪುನಶ್ಚೇತನ ಮತ್ತು ಪುನರುಜ್ಜೀವನ

ಆ) ಮನಃಸ್ಥಿತಿಯನ್ನು ಬದಲಾಯಿಸುವುದು (ಅಂದರೆ ಇಲ್ಲಿ ಯಾರ ಮನಃಸ್ಥಿತಿ ಎಂಬ ಪ್ರಶ್ನೆ ಬರುತ್ತದೆ. ಆಳುವವರದೋ ಅಥವಾ ಆಳಿಸಿಕೊಳ್ಳುವವರದೋ ಎಂಬ ಪ್ರಶ್ನೆಗೆ ಯಾರು ಸಂಸ್ಕೃತಿ ನಿರ್ಮಾತೃಗಳಾಗಿರುತ್ತಾರೋ ಅವರದು ಎನ್ನುತ್ತಾರೆ ಪರಾಂಜಪೆ).

ಇ) ನಿರ್ವಸಾಹತೀಕರಣಗಳ ಕ್ರಮಗಳ ಅನ್ವೇಷಣೆ ಮತ್ತು ಅವುಗಳ ಚಾರಿತ್ರಿಕ ಅಧ್ಯಯನ

ಈ) ಪರಸ್ಪರರನ್ನು ಅರಿತುಕೊಳ್ಳುವುದು, ಅಂದರೆ, ಸಮಾನ ದುಃಖಿಗಳು ಪರಸ್ಪರ ಕಲೆತು ತಮ್ಮ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ಒಂದು ಸೇತುವನ್ನು ನಿರ್ಮಿಸುವುದು.

ಉ) ಆಧುನಿಕೋತ್ತರವಾದ ನಿರಾಕರಿಸುವ ಕಥನಗಳನ್ನು ಮತ್ತೆ ಚಾಲನೆಗೆ ತರಬೇಕು. ಕಥನಗಳಲ್ಲಿ ಸಾಮಾನ್ಯರ ಬದುಕಿನ ರೂಪಕಗಳು ಬಳಕೆಯಾಗುತ್ತಿರುತ್ತವೆ. ಅವು ಕಥನದ ಮೂಲಕ ವಾಪಾಸು ಬರಬೇಕು ಎನ್ನುತ್ತಾರೆ ಪರಾಂಜಪೆ. ಈ ಸಾಮಾನ್ಯತಾ ತತ್ವವೇ ನಿರ್ವಸಾಹತೀಕರಣದ ಸತ್ವ."[೧೩]

ಪರಾಂಜಪೆಯವರು ಇಲ್ಲಿ ಮುಖ್ಯವಾಗಿ ಐದು ವಿಷಯಗಳನ್ನು ಪ್ರಸ್ತಾಪಿಸುತ್ತಾರೆ. ಇವುಗಳ ಪೈಕಿ ಮುಖ್ಯವಾಗಿ ಬಿಡುಗಡೆಯ ಪ್ರಕ್ರಿಯೆಯಲ್ಲಿ ಸಂಪ್ರದಾಯಿಕ ಜ್ಞಾನಶಿಸ್ತುಗಳಾದ ಸಾಹಿತ್ಯ, ಕಲೆ, ಸೌಂದರ್ಯಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಪುನರುಜ್ಜೀವನ, ಮನಃಸ್ಥಿತಿಯ ಬದಲಾವಣೆಯ ಪ್ರಶ್ನೆ, ಬಿಡುಗಡೆಯ ಕ್ರಮಗಳ ಅನ್ವೇಷಣೆಗಳು ಮತ್ತು ಆಧುನಿಕೋತ್ತರ ಸಂದರ್ಭದಲ್ಲಿ ಹಳೆಯ ಕಥನಗಳು ಮತ್ತೆ ಚಾಲನೆಗೆ ತರುವ ಕುರಿತು ಹೆಚ್ಚಿನ ಒತ್ತನ್ನು ನೀಡಲಾಗಿದೆ.

೧೨. "ಈ ಹೊತ್ತು ಕನ್ನಡದಲ್ಲಿ ಅನೇಕ ಬಗೆಯ ಸಾಂಸ್ಕೃತಿಕ ಅಧ್ಯಯನಗಳು ನಡೆಯುತ್ತಿವೆ. ನಿರ್ವಸಾಹತೀಕರಣಗೊಳ್ಳುವ ತುಡಿತವೊಂದು ವ್ಯಾಪಕವಾಗಿ ಹಬ್ಬುತ್ತಿದ್ದು, ಪಶ್ಚಿಮದ ಸಾಂಸ್ಕೃತಿಕ ಆಕ್ರಮಣಕಾರಿ ಹೇರಿಕೆಯಿಂದ ತಪ್ಪಿಸಿಕೊಳ್ಳಲು, ಈ ಚಿಂತಕರು 'ದೇಶೀ' ಸಂಸ್ಕೃತಿಗಳ ಒಳಗೆ ಮುಖುಮುಗಿಸಲು ಮುಗಿಬಿದ್ದಂತೆ ಭಾಸವಾಗುತ್ತಿದೆ. ಕನ್ನಡದ 'ಸಾಹಿತ್ಯ ವಿಮರ್ಶೆ'ಯನ್ನೂ ಈ ಗಾಳಿ ಬಿಟ್ಟಿಲ್ಲ... ಕನ್ನಡ ವಿಮರ್ಶೆಯು ತನ್ನ ಸುತ್ತಣ ಸಾಂಸ್ಕೃತಿಕ ವಿದ್ಯಮಾನಗಳ ಜತೆ, ಕೆಲಮಟ್ಟಿಗೆ

ಪರಂಪರೆಯ ಜತೆ ಕೂಡ. ಎಳೆ ಹರಿದುಕೊಂಡದ್ದು ನವ್ಯದ ದಶಕಗಳಲ್ಲಿ. ಹಾಗೆ ಎಳೆಹರಿದುಕೊಂಡ ಕೆಲವರು ಪಶ್ಚಿಮದ ತಾತ್ವಿಕ ಆಕೃತಿಗಳ ಜತೆ ಗೆಳೆತನ ಬೆಳಸಿ, ಅಲ್ಲಿ ನಿಜದ ನೆಲೆ ಕಾಣಲಾಗದೆ 'ಮರಳಿಮಣ್ಣಿಗೆ' ಬಂದರು. ನಿರ್ವಸಾಹತೀಕರಣಗೊಳ್ಳುವ ತುಡಿತ ತೀವ್ರವಾಗಿರುವುದು ಇಂಥವರಲ್ಲಿ."[೧೫] ರಹಮತ್ ತರೀಕೆರೆಯವರು ಕನ್ನಡದಲ್ಲಿ ನಡೆಯುತ್ತಿರುವ ನಿರ್ವಸಾಹತೀಕರಣದ ತುಡಿತದ ಕುರಿತು ಈ ಮೇಲಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಮೇಲಿನ ರಹಮತ್ ತರೀಕೆರೆಯವರ ಚರ್ಚೆಗಳ ಪ್ರಕಾರ, ಕರ್ನಾಟಕದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಅಧ್ಯಯನಗಳಲ್ಲಿ ಬಿಡುಗಡೆಯ ತುಡಿತ ಹೆಚ್ಚಿದೆ. ಈ ಚಿಂತನೆಗಳಿಗೆ ಪಶ್ಚಿಮದ ಆಕ್ರಮಣದಿಂದ ತಪ್ಪಿಸಿಕೊಳ್ಳುವ ಯತ್ನವಿರುವಂತೆ ಅವರಿಗೆ ತೋರುತ್ತದೆ. ಜೊತೆಗೆ, ಸಾಹಿತ್ಯ ವಿಮರ್ಶೆಯ ಕ್ಷೇತ್ರವನ್ನು ಕೂಡ ಪಶ್ಚಿಮದ ಹೇರಿಕೆಯಿಂದ ಬಿಡುಗಡೆಯ ಯತ್ನ ನಡೆಯುತ್ತಿದೆ. ಆದರೆ, ಈ ಬಿಡುಗಡೆಯ ಹಂಬಲ ವ್ಯಕ್ತವಾಗುತ್ತಿರುವುದು ಎಲ್ಲ ವಲಯಗಳಲ್ಲಲ್ಲ; ಬದಲಾಗಿ, ನವ್ಯದ ದಶಕಗಳಲ್ಲಿ ನೆಲದೊಂದಿಗೆ ನಂಟು ಕಡಿದುಕೊಂಡವರಲ್ಲಿ ಇಂಥ ಯತ್ನ ನಡೆಯುತ್ತಿದೆ ಎಂದು ಅವರು ವಾದಿಸಿದ್ದಾರೆ. ಆದರೆ, ನವ್ಯದ ನಂತರದಲ್ಲಿ ದಲಿತ – ಬಂಡಾಯ, ಸ್ತ್ರೀವಾದ, ಮುಸ್ಲಿಂ ಸಂವೇದನೆ ಮತ್ತು ಆಧುನಿಕೋತ್ತರ ಕಾಲದಲ್ಲಿ ಕೂಡ ವಿವಿಧ ಹಂತಗಳಲ್ಲಿ ಮತ್ತು ರೀತಿಯಲ್ಲಿ ಬಿಡುಗಡೆಯ ಪ್ರಕ್ರಿಯೆ ಮುಂದುವರೆದಿದೆ. ಅದರಲ್ಲೂ ಮುಖ್ಯವಾಗಿ, ಗ್ಯಾಟ್ ಮತ್ತು ವಿದೇಶಿ ನೇರ ಬಂಡವಾಳ ಹೂಡಿಕೆಯ ನಂತರ ರಾಜಕೀಯ ಅಧಿಕಾರ ಗಳಿಕೆಯಿಂದ ಹಿಡಿದು, ಸ್ಥಳೀಯ ಆಚರಣೆ, ಸಂಸ್ಕೃತಿ, ನಂಬಿಕೆಗಳತ್ತ ಕೂಡ ದೊಡ್ಡ ಮಟ್ಟದ ಚರ್ಚೆಗಳು ನಡೆಯುತ್ತಿವೆ.

ಎಡ್ವರ್ಡ್ ಸೈದ್‌ನ ವಸಾಹತುಶಾಹಿಗಳ ಹಿಡಿತವನ್ನು ಕುರಿತ ಅಭಿಪ್ರಾಯಗಳನ್ನು ವಿ.ಬಿ. ತಾರಕೇಶ್ವರ್ ಅವರು ಹೀಗೆ ಸಂಗ್ರಹಿಸುತ್ತಾರೆ: "ರಾಜಕೀಯವಾಗಿ ವಸಾಹತುಗಳು ಬಿಡುಗಡೆಗೊಂಡರೂ ಅವರ ಚಿಂತನಾಕ್ರಮ ಇನ್ನೂ ವಸಾಹತುಶಾಹಿಯಿಂದ ಬಿಡುಗಡೆ ಪಡೆದಿಲ್ಲವೆಂಬುದು ಅವರ ವಾದವಾಗಿದೆ."[೧೬] ವಸಾಹತುಶಾಹಿಗಳ ಆಳ್ವಿಕೆಯಿಂದ ಸ್ವೀಕರಿಸಿರುವ ಆಡಳಿತ ಸಂಸ್ಥೆಗಳು, ನ್ಯಾಯ, ಶಿಕ್ಷಣ, ಆಡಳಿತ ಮತ್ತು ಅವರ ಪರಿಭಾಷೆಗಳಿಂದ ವಸಾಹತುಗಳು ಪ್ರಭಾವ ಹೊಂದಿರುತ್ತವೆ. ಅವುಗಳಿಂದ ಬಿಡುಗಡೆ ಹೊಂದುವ ಕಾರ್ಯ ಇನ್ನೂ ಆರಂಭವಾಗಿಲ್ಲ ಎನ್ನುವುದು ಎಡ್ವರ್ಡ್ ಸೈದ್‌ನ ವಾದ. ಇದಕ್ಕೆ ಪೂರಕವಾಗಿ ಇಂದಿಗೂ ಆಡಳಿತ, ಕೋರ್ಟ್ ಕಲಾಪಗಳು, ಕೇಂದ್ರ ಸರ್ಕಾರದ ಸುತ್ತೋಲೆಗಳು ಸಾಕ್ಷಿಗಳಾಗಿ ಸಿಗುತ್ತಿವೆ. ಇಂಗ್ಲಿಷ್ ಮತ್ತು ಹಿಂದಿಯ ಮೊರೆ ಹೋಗುವ ಕೇಂದ್ರ ಸರ್ಕಾರ ಮತ್ತು ಇಂಗ್ಲಿಷ್ ಮೊರೆಹೋಗುವ ಅಧಿಕಾರಶಾಹಿಗಳು ಪರೋಕ್ಷವಾಗಿ ಕನ್ನಡದಂಥ ಭಾಷೆಗಳನ್ನು ಪ್ರಚಲಿತಕ್ಕೆ ತರುವಲ್ಲಿ ಸೋತಿರುವುದಕ್ಕೆ ನಿದರ್ಶನಗಳಾಗಿವೆ.

ಮೇಲಿನ ವ್ಯಾಖ್ಯೆಗಳು ಹಾಗೂ ಅರ್ಥಗಳಿಂದ ವ್ಯಕ್ತವಾಗುವ ಗಮನಾರ್ಹ ಅಂಶವೆಂದರೆ: ವಸಾಹತುಶಾಹಿಯ ಧರ್ಮ, ಕಲೆ, ಶಿಕ್ಷಣ, ಆಡಳಿತ ಕ್ರಮ, ಲೋಕಗ್ರಹಿಕೆ, ಭಾಷೆ, ಸಂಸ್ಕೃತಿಯ ನೆಲೆ ಇತ್ಯಾದಿಗಳನ್ನು ಪ್ರಜ್ಞಾಪೂರ್ವಕವಾಗಿ ಮೀರುವ ಪ್ರಕ್ರಿಯೆಯನ್ನು ಬಿಡುಗಡೆಯ ಚಿಂತನೆ ಎನ್ನಬಹುದು. ಈ ಬಗೆಯ ಮೀರುವಿಕೆ ಸಾಧ್ಯವೇ? ಎಂಬ ಪ್ರಶ್ನೆಯನ್ನು ಕೂಡ ಬಿಡುಗಡೆಯ ಚಿಂತನೆಗಳನ್ನು ಮಂಡಿಸುವ ಕೆಲವರೇ ಕೇಳಿದ್ದಾರೆ. ಅದಕ್ಕೆ ಆಧುನಿಕ ಸಾಮ್ರಾಜ್ಯವಾದದ ಎಲ್ಲವನ್ನೂ

ಕಬಳಿಸುವ ಮನಃಸ್ಥಿತಿಯ ಕುರಿತ ಅರಿವೇ ಕಾರಣವಾಗಿದೆ.

ಆಧುನಿಕೋತ್ತರ ಸಂದರ್ಭದಲ್ಲಿ ನವವಸಾಹತುಶಾಹಿಗಳ ನಿರಂತರವಾದ ದಾಳಿ ದೇಶೀ ಭಾಷೆಗಳು, ಸಮುದಾಯಗಳು, ಸಂಸ್ಕೃತಿಗಳ ಮೇಲೆ ನಡೆಯುತ್ತಿದೆ. ಈಗಾಗಲೇ ವಸಾಹತುಗಳ ಜೀವನಕ್ರಮ, ದೃಷ್ಟಿ-ಧೋರಣೆ, ಚಿಂತನೆಗಳಲ್ಲಿ ಅಳವಟ್ಟಿರುವ ವಸಾಹತುಶಾಹಿ ಧೋರಣೆಗಳನ್ನು ಇದ್ದಕ್ಕಿದ್ದಂತೆ ಸಂಪೂರ್ಣವಾಗಿ ತೊರೆಯಲು ಅನೇಕ ತೊಡಕುಗಳು ಎದುರಾಗುತ್ತವೆ. ಜೊತೆಗೆ, ಈ ಪ್ರಭಾವ ಮತ್ತು ಪ್ರೇರಣೆಗಳನ್ನು ಆಮೂಲಾಗ್ರವಾಗಿ ತೊಡೆದುಹಾಕಬೇಕಾದಲ್ಲಿ ಅವುಗಳ ಎಲ್ಲ ಮಾದರಿಗಳೆಡೆಗೆ ಪ್ರಜ್ಞಾಪೂರ್ವಕವಾದ ನಡೆ ಇಡುವುದು ಅವಶ್ಯಕವಾಗಿರುತ್ತದೆ. ಆದರೆ, ಬಿಡುಗಡೆಯ ಪ್ರಕ್ರಿಯೆಗೆ ಜಾಗತಿಕ ಸಂದರ್ಭದಲ್ಲಿ ಅನೇಕ ಸವಾಲುಗಳು ಎದುರಾಗುತ್ತಿವೆ.

ಬಿಡುಗಡೆ "ಚಾರಿತ್ರಿಕ ಪ್ರಕ್ರಿಯೆಯಾಗಿರುವಂತೆಯೇ ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಪ್ರಕ್ರಿಯೆಗಳೂ ಆಗಿದೆ ಎನ್ನುವುದನ್ನು ಮರೆಯಲಾಗದು. ಒಂದೊಂದು ಪಾತಳಿಯಲ್ಲಿಟ್ಟು ನೋಡುವಾಗ ನಿರ್ವಸಾಹತೀಕರಣದ ಅರ್ಥಗಳು ವಿಭಿನ್ನವಾದ ವ್ಯಾಖ್ಯಾನಗಳನ್ನು ಪಡೆದುಕೊಳ್ಳುತ್ತವೆ."[೧೬] ಎಂಬ ತಾರಿಣಿ ಶುಭದಾಯಿನಿಯವರ ಅಭಿಪ್ರಾಯಗಳು ಈ ವಿಷಯಕ್ಕೆ ಪೂರಕವಾಗಿವೆ.

ವಸಾಹತುವಾದವು ಆರಂಭದಲ್ಲಿ ವ್ಯಾಪಾರದ ಉದ್ದೇಶದಿಂದ ವಸಾಹತುಗಳನ್ನು ಪ್ರವೇಶಿಸುತ್ತದೆ. ಆದರೆ, ಕಾಲಾನಂತರದಲ್ಲಿ ವಸಾಹತು ದೇಶಗಳ ಆಂತರಿಕ ಸಮಸ್ಯೆಗಳಾದ ರಾಜಕೀಯ ಅನೈಕ್ಯತೆ, ಪರಸ್ಪರ ಅನ್ಯ ಜಾತಿಗಳ ಮೇಲೆ ಅಸ್ತಿತ್ವದಲ್ಲಿರುವ ಅಪನಂಬಿಕೆ, ಮೂಢನಂಬಿಕೆಗಳು, ಪರಸ್ಪರ ಒಂದಾಗಲು ಬಿಡದ ಜಾತಿ, ವರ್ಣಾಶ್ರಮ ವ್ಯವಸ್ಥೆಗಳು ಮತ್ತು ಸ್ಥಳೀಯ ಆಡಳಿತಗಳಲ್ಲಿರುವ ಸ್ಪರ್ಧೆಗಳನ್ನು ತನ್ನ ಸ್ವಾರ್ಥಕ್ಕಾಗಿ ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತದೆ. ಮುಂದುವರೆದು ವಸಾಹತುಗಳ ಭೌತಿಕ ಸಂಪತ್ತನ್ನು ಸಂಪೂರ್ಣವಾಗಿ ದೋಚುವ ಸಲುವಾಗಿ ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಂಡಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಆದರೆ, ಈ ಅವಧಿಯಲ್ಲಿ ವಸಾಹತುಗಳ ಭಾಷೆ, ಸಂಸ್ಕೃತಿ, ಆಚರಣೆ, ಸ್ಥಳೀಯ ಉದ್ಯೋಗ, ಆರ್ಥಿಕ ಸ್ವಾವಲಂಬನೆಗಳನ್ನು ನಿರ್ಮೂಲನೆ ಮಾಡಿಬಿಡುತ್ತದೆ. ಆ ಮೂಲಕ ದೇಶೀ ಸಮುದಾಯಗಳ ಮೇಲೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಆಡಳಿತಾತ್ಮಕ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಹಂತಹಂತವಾಗಿ ಹಿಡಿತ ಸಾಧಿಸಿ, ಅವುಗಳನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತದೆ. ಅಂತಿಮವಾಗಿ ಆಳುವ ಸಿದ್ಧಾಂತವಾಗಿ ವಸಾಹತುವಾದ ರೂಪುಗೊಳ್ಳುತ್ತದೆ. ಈ ಬಗೆಯ ಹಿಡಿತಕ್ಕೆ ವಸಾಹತುಶಾಹಿಗಳು ಧರ್ಮ, ಮಾನವಶಾಸ್ತ್ರ, ಸಾಹಿತ್ಯ ಇತ್ಯಾದಿಗಳನ್ನು ಬಳಸಿಕೊಂಡು ಪೌರ್ವಾತ್ಯ ದೇಶಗಳನ್ನು ತಮ್ಮ ವಸಾಹತುಗಳನ್ನಾಗಿಸಿಕೊಂಡ ಕ್ರಮವನ್ನು ಎಡ್ವರ್ಡ್ ಸೈದ್ 'ಓರಿಯಂಟಲಿಸಂ' ಕೃತಿಯಲ್ಲಿ ಅಧ್ಯಯನ ನಡೆಸಿದ್ದಾರೆ. ವಸಾಹತುವಾದದ ವ್ಯವಸ್ಥಿತ ರೂಪಣೆಯನ್ನು ಈ ಕೃತಿಯಲ್ಲಿ ವಿವರಿಸಲಾಗಿದೆ.

ನಟರಾಜ್ ಹುಳಿಯಾರ್ ಅವರು ಹೇಳುವಂತೆ: "ಸೈದನ ಪ್ರಕಾರ ಓರಿಯಂಟ್ (ಅಥವಾ

'ಪ್ರಾಚೀನ' ಅಥವಾ 'ಹಳೆಯ' ಜಗತ್ತು) ಎಂಬ ಸೃಷ್ಟಿಯೇ ಯೂರೋಪಿನ ಆಲೋಚನಾ ಕ್ರಮದ ಫಲ. ಯೂರೋಪು ತಾನು 'ಓರಿಯೆಂಟ್' ಎಂದು ಕರೆದ ಜಗತ್ತಿನ ಬಗ್ಗೆ ವ್ಯಾಖ್ಯಾನ ಮಾಡುವುದು, ಆ ವ್ಯಾಖ್ಯಾನಗಳನ್ನು ಸಮರ್ಥಿಸುವುದು, ಆ ಜಗತ್ತನ್ನು ವರ್ಣಿಸುವುದು, ಅದನ್ನು ಕುರಿತು ಬೋಧಿಸುವುದು ಹಾಗೂ ಅಲ್ಲಿ ನೆಲೆಸುವುದು ಮತ್ತು ಆಳುವುದು... ಈ ಎಲ್ಲ ಅಂಶಗಳು ಸೇರಿ ರೂಪುಗೊಂಡ ಒಂದು ನೋಟಕ್ರಮ ಅಥವಾ ಸಂಸ್ಥೆಯೇ ಓರಿಯೆಂಟಲ್‌ವಾದ. ಅಂದರೆ, ತನಗಿಂತ ಭಿನ್ನವಾದ ಇನ್ನೊಂದು ಜಗತ್ತನ್ನು ನೋಡುವ ಕ್ರಮದಲ್ಲಿಯೇ ಆ ಜಗತ್ತನ್ನು ತನಗೆ ಸರಿ ಕಂಡಂತೆ ನಿರ್ಮಿಸಿಕೊಳ್ಳುವ ಹಾಗೂ ಅದನ್ನು ಆಳುವ ಕ್ರಮವೂ ಇರುತ್ತದೆ. ಯೂರೋಪಿನ ಹಲವು ತಲೆಮಾರುಗಳ ಬುದ್ಧಿಜೀವಿಗಳು, ಕಲಾವಿದರು, ವ್ಯಾಖ್ಯಾನಕಾರರು, ಲೇಖಕರು ಹಾಗೂ ರಾಜಕಾರಣಿಗಳು ಕೆಲವು ನಿರ್ದಿಷ್ಟ ಬಗೆಯ ಅನಿಸಿಕೆಗಳನ್ನು ಹಾಗೂ ಸಿದ್ಧ ಮಾದರಿಗಳನ್ನು 'ಸತ್ಯ'ವೆಂದು ಪ್ರತಿಪಾದಿಸಿದ ರೀತಿಯಿಂದಾಗಿ ಯೂರೋಪಿಗೆ 'ಪ್ರಾಚೀನ' ಜಗತ್ತಿನ ಮೇಲೆ ಯಜಮಾನಿಕೆ ಸುಲಭವಾಯಿತು ಎಂಬುದು ಸೈದನ ವಾದ."[೧೭]

ಹೀಗೆ ವಸಾಹತುವಾದ ಎನ್ನುವುದು ವ್ಯವಸ್ಥಿತವಾದ ಬೆಳವಣಿಗೆಯಾಗಿದೆ. ವ್ಯಾಪಾರಿ ಉದ್ದೇಶದಿಂದ ಆರಂಭಗೊಂಡು, ಅಂತಿಮವಾಗಿ ಅಧಿಕಾರವನ್ನು ಹಿಡಿಯುವ ಆಕ್ರಮಣಕಾರಿ ಸಿದ್ಧಾಂತವಾಗಿ ಬೆಳೆದಿರುವುದನ್ನು ಚಾರಿತ್ರಿಕ ಅಧ್ಯಯನದಿಂದ ಕಂಡುಕೊಳ್ಳಬಹುದು.

ಭಾಷಿಕ ಹಿಡಿತದ ಸಾಧ್ಯಾಸಾಧ್ಯತೆಗಳ ಕುರಿತು ಕನ್ನಡದಲ್ಲಿ ಕನ್ನಡದ ಚಿಂತಕರು, ಲೇಖಕರು, ಭಾಷಾವಿಜ್ಞಾನಿಗಳು ನಡೆಸಿದ್ದಾರೆ. ಅದರ ವ್ಯವಸ್ಥಿತ ಅಧ್ಯಯನಕ್ಕಾಗಿ ಸಾಹಿತ್ಯಕ ಕೃತಿಗಳು, ಭಾಷಿಕ ಚಳವಳಿಗಳ ಹಿನ್ನೆಲೆಯನ್ನು ಅಧ್ಯಯನ ನಡೆಸಬೇಕಾಗಿದೆ.

ವಸಾಹತುಶಾಹಿಗಳ ಅನೇಕ ಬಗೆಯ ಪ್ರಭಾವಗಳಿಂದ ಬಿಡುಗಡೆ ಹೊಂದಲು ನಡೆಸಿದ ಸೈದ್ಧಾಂತಿಕ ಪ್ರಕ್ರಿಯೆಯೇ ಬಿಡುಗಡೆ. ಇದೊಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಸಂಪೂರ್ಣ ಬಿಡುಗಡೆಯ ಸಾಧ್ಯತೆಗಳ ಬಗೆಗೆ ಅನೇಕ ಅನುಮಾನಗಳಿವೆ. ಏಕೆಂದರೆ, ವಸಾಹತುಶಾಹಿಗಳ ಆಡಳಿತಕ್ಕೆ ಸಿಲುಕಿ, ಅದರ ಆಡಳಿತ ಕ್ರಮ, ಶಿಕ್ಷಣಕ್ರಮ, ಚಿಂತನಕ್ರಮ ಮುಂತಾದವುಗಳನ್ನು ಸ್ವೀಕರಿಸಿ, ಅಳವಡಿಸಿಕೊಂಡು ಸಾಕಷ್ಟು ಕಾಲ ನಡೆದಿರುವುದರಿಂದ, ವಸಾಹತುಶಾಹಿಯ ನಿರ್ಗಮನದ ನಂತರ ನಡೆಸುವ ಈ ಪ್ರಯತ್ನವು ಅನೇಕ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಹೇಗೆಂದರೆ, ಚಿಂತನಕ್ರಮದ ಮೇಲೆ ವಸಾಹತುಶಾಹಿ ಬೀರಿದ ಪ್ರಭಾವವನ್ನು ಈಗಾಗಲೇ ಅನೇಕ ಹಂತಗಳಲ್ಲಿ ಒಪ್ಪಿ, ಅರಗಿಸಿಕೊಂಡಿರುವ ದೇಶೀ ಸಮುದಾಯಗಳು ಮತ್ತೆ ಹಿಂದಕ್ಕೆ ತೆರಳಲು ಬಯಸಲಾರವು ಅಥವಾ ಬಯಸಿದರೂ ಬಿಡುಗಡೆ ಸಾಧ್ಯವಾಗದಿರಬಹುದು. ಅಲ್ಲದೇ ವಸಾಹತುಶಾಹಿಗಳ ಚಿಂತನಕ್ರಮಗಳು ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವುದರ ಪರಿಣಾಮದಿಂದಾಗಿ, ತಾನು ಏನನ್ನು ಮೀರಲು ಬಯಸುತ್ತದೆಯೋ ಅದರೆಡೆಗೆ, ಉದ್ದೇಶಪೂರ್ವಕವಾಗಿ ಆರಂಭವಾಗುವ ಈ ಪ್ರಯತ್ನಗಳಿಗೆ ಅನೇಕ ಅಡೆತಡೆಗಳನ್ನು, ತಾನು ಚಿಂತಿಸುತ್ತಿರುವ ಚಿಂತನಕ್ರಮಗಳೇ ಒಡ್ಡತೊಡಗುತ್ತವೆ. ಆಗ ಒಳ ಮತ್ತು ಹೊರ ವಸಾಹತುಶಾಹಿಗಳ ಬಗೆಗಿನ ದ್ವಂದ್ವಗಳು ಎದುರಾಗುತ್ತವೆ.

ಅಂಬೇಡ್ಕರ್‌ರವರ ಚಿಂತನೆಗಳನ್ನು ಈ ನೆಲೆಯಲ್ಲೇ ಗ್ರಹಿಸಬೇಕಾದ ಅಗತ್ಯವಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿರುವಾಗ, ಅಂಬೇಡ್ಕರ್‌ರವರು ದಲಿತರ ಸಮಸ್ಯೆಗಳನ್ನು ಕೇಂದ್ರಕ್ಕೆ ತರುವ ಪ್ರಯತ್ನ ನಡೆಸಿದರು. ಅಂತೆಯೆ ಕುವೆಂಪುರವರು ತಮ್ಮ ಕವನ, ವಿಚಾರ, ವಿಮರ್ಶಾ ಲೇಖನಗಳಲ್ಲಿ ಪುರೋಹಿತಶಾಹಿಗಳಿಂದ ನಿರ್ಮಿತವಾದ ಆಂತರಿಕ ವಸಾಹತುಶಾಹಿಯ ವಿರುದ್ಧ ನಡೆಸಿದ ಹೋರಾಟವನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಈ ಬಗೆಯ ಬಿಕ್ಕಟ್ಟುಗಳಷ್ಟೇ ಅಲ್ಲದೇ, ಈಗಾಗಲೇ ದೇಶೀ ಸಮುದಾಯಗಳ ಮೇಲೆ ವಸಾಹತುಶಾಹಿಗಳ ಆಡಳಿತದಿಂದಾಗಿ ಚಾಲ್ತಿಯಲ್ಲಿರುವ ನ್ಯಾಯ ಪದ್ಧತಿ, ಆಡಳಿತ ಪದ್ಧತಿ, ಆರ್ಥಿಕ ನೀತಿ, ಶಿಕ್ಷಣಕ್ರಮ, ತಂತ್ರಜ್ಞಾನ, ಧರ್ಮ, ಸಂಸ್ಕೃತಿ, ಭಾಷೆಗಳನ್ನು ಮೀರುವ ಅಥವಾ ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸುವ, ತಡೆಯುವ, ಅದಕ್ಕೆ ಪ್ರತಿಯಾಗಿ ಬಳಸುವ ಶೋಧಗಳ ಅವಶ್ಯಕತೆಯನ್ನು ಅನ್ವೇಷಿಸುವ ಸಾಧ್ಯತೆಗಳ ಕೊರತೆಗಳೂ ಬಿಡುಗಡೆಯ ಪ್ರಕ್ರಿಯೆಗೆ ತಡೆಗೋಡೆಯಾಗಿ ಕೆಲಸ ನಿರ್ವಹಿಸುತ್ತವೆ.

ಇದೇ ಸಂದರ್ಭದಲ್ಲೇ ದೇಶೀವಾದದ ಹೆಸರಿನಲ್ಲಿ ದೇಶೀ ಧರ್ಮ, ಭಾಷೆಗಳ ಅಸ್ಮಿತೆಯ ಹೆಸರಿನಲ್ಲಿ ಮೂಲಭೂತವಾದವೂ ಜನಿಸುತ್ತದೆ. ವಿದೇಶಿ ಸಂಸ್ಕೃತಿ, ಭಾಷೆ, ಧರ್ಮಗಳನ್ನು ಧಿಕ್ಕರಿಸುವ ನೆಪದಲ್ಲಿ ಸನಾತನ ಸಂಸ್ಕೃತಿ, ಸಂಸ್ಕೃತ ಭಾಷೆ ಹಾಗೂ ಹಿಂದೂ ಧರ್ಮಗಳನ್ನು ಬೆಂಬಲಿಸುವ ಪ್ರಕ್ರಿಯೆಗೆ ಭಾರತದಲ್ಲಿ ಚಾಲನೆ ಸಿಕ್ಕಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ಈ ಬಗೆಯ ಅಸ್ಮಿತೆಯ ಹುಡುಕಾಟದಲ್ಲಿ ಏಕರೂಪಿ ಧರ್ಮ, ಭಾಷೆ, ಸಂಸ್ಕೃತಿಗಳ ಪ್ರತಿಪಾದನೆಯತ್ತ ಚಲಿಸುವ ಪ್ರಕ್ರಿಯೆಗಳು ಚಾಲ್ತಿಗೆ ಬರತೊಡಗುತ್ತವೆ. ಇದರ ಪರಿಣಾಮದಿಂದಾಗಿ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಮೂಲಭೂತವಾದಗಳು ರೂಪುಗೊಳ್ಳತೊಡಗಿವೆ. ದೇಶೀ ಸಮುದಾಯಗಳಲ್ಲಿ ಇದುವರೆಗೆ ಇದ್ದ ಹೊಂದಾಣಿಕೆಯ ಬದಲಿಗೆ, ಬಿರುಕನ್ನುಂಟು ಮಾಡುವುದರ ಮೂಲಕ, ಶಾಂತಿ, ಸುವ್ಯವಸ್ಥೆಯನ್ನು ಕದಡುವ ಕಡೆಗೆ ಇದರ ಒಂದು ಮುಖದ ಚಲನೆಯನ್ನು ಕಾಣಬಹುದು.

ಇದರ ಜತೆಗೆ, ಬಿಡುಗಡೆಯ ಸಾಧ್ಯತೆಗಳ ಬಗೆಗೆ ಕೆಲವು ಅನುಮಾನಗಳು ಹುಟ್ಟುತ್ತವೆ. ದೇಶೀ ಸಮುದಾಯಗಳ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತುಶಾಹಿಗಳ ಭಾಷೆ, ಧರ್ಮ, ಶಿಕ್ಷಣ, ತಂತ್ರಜ್ಞಾನ, ಆಲೋಚನಾಕ್ರಮ ಮೊದಲಾದವುಗಳು ಒಂದೆಡೆ ಅಡ್ಡಿಯುಂಟು ಮಾಡುತ್ತಿದ್ದರೆ, ಇನ್ನೊಂದೆಡೆ ದೇಶೀ ಧರ್ಮ, ಸಂಸ್ಕೃತಿ, ಭಾಷೆಗಳ ಹೆಸರಿನಲ್ಲಿ ನಡೆಯುವ ಹುನ್ನಾರಗಳು ಬಿಡುಗಡೆಯ ಪ್ರಕ್ರಿಯೆಗಳಿಗೆ ಹೊಸದೊಂದು ಸವಾಲನ್ನೇ ಒಡ್ಡುತ್ತವೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಿಡುಗಡೆ ಹೊಂದುವ ಸಾಧ್ಯತೆಯೆಡೆಗೆ ಚಿಂತಿಸಿದಾಗ, ಈ ಆಶಯಗಳು ಸಾಧ್ಯವೇ? ಎಂಬ ದೊಡ್ಡ ಪ್ರಶ್ನೆ ಎದುರಾಗುತ್ತದೆ.

೩.೨. ಆಧುನಿಕ ಪೂರ್ವ ಬಿಡುಗಡೆಯ ಚಿಂತನೆಗಳು

ಕನ್ನಡ ಸಾಹಿತ್ಯ ನಿರಂತರವಾದ ವಿಭಿನ್ನ ಅನುಸಂಧಾನಗಳ ಫಲಿತಗಳಿಂದಾಗಿ ಅನೇಕ ಹೊರಚಾಚುಗಳಿಗೆ ತೆರೆದುಕೊಳ್ಳುವ ಅನೇಕ ಸಾಧ್ಯತೆಗಳ ಹುಡುಕಾಟದಲ್ಲಿರುವ ಸಂಗತಿ ಹಲವು ಘಟ್ಟಗಳಲ್ಲಿ ವ್ಯಕ್ತವಾಗಿದೆ. ಆರಂಭದಲ್ಲಿ ಸಂಸ್ಕೃತ, ಪ್ರಾಕೃತ, ನಂತರದಲ್ಲಿ ನೆರೆಯ ಭಾಷೆಗಳಾದ

ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಹಿಂದಿ, ಬಂಗಾಳಿ ಮತ್ತು ಆಧುನಿಕ ಕಾಲದಲ್ಲಿ ಇಂಗ್ಲಿಷ್, ಫ್ರೆಂಚ್, ರಷ್ಯನ್ ಭಾಷೆಗಳೊಡನೆ ಕನ್ನಡ ಸಾಹಿತ್ಯ ಅನುಸಂಧಾನ ನಡೆಸಿದೆ. ಇದರ ಪರಿಣಾಮದಿಂದ ಅನೇಕ ಪ್ರಕಾರಗಳಲ್ಲಿ ಅನೇಕ ರೂಪಗಳಲ್ಲಿ, ವಸ್ತು ವೈವಿಧ್ಯದ ಸಾಹಿತ್ಯ ಸೃಷ್ಟಿಯಾಗಿದೆ. ಅದೇ ಕಾಲಕ್ಕೆ ಮಾರ್ಗ – ದೇಸೀ, ವಸ್ತುಕ – ವರ್ಣಕದಂತಹ ಅರ್ಥಪೂರ್ಣ ಮತ್ತು ಸೂಕ್ಷ್ಮ ಚರ್ಚೆಗಳಿಗೂ ಕನ್ನಡದಲ್ಲಿ ವೇದಿಕೆ ಸಿಕ್ಕಿದೆ.

೩.೩. ಕನ್ನಡ ಮತ್ತು ಸಂಸ್ಕೃತದ ನಡುವಿನ ವಾಗ್ವಾದ

ಸಂಸ್ಕೃತ ಭಾಷೆಯನ್ನು ಕನ್ನಡದಲ್ಲಿ ಬಳಸುವ ಬಗೆಗೆ ಇರಬೇಕಾದ ಎಚ್ಚರ ಹಾಗೂ ವಿವೇಕವನ್ನು ಶ್ರೀವಿಜಯನು 'ಕವಿರಾಜಮಾರ್ಗದ'ಲ್ಲಿ ಹೇಳಿದ್ದಾನೆ.[೧೮]

ಸಮಸಂಸ್ಕೃತಂಗಳೊಳ್ ಸ
ಯ್ತುಮರ್ದಿರೆ ಕನ್ನಡಮನಱಿದು ಪೇೞ್ಗೆಂಬುದಿದಾ
ಗಮಕೋವಿದ ನಿಗದಿತ ಮಾ
ರ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ॥೫೧॥

ಸಮಸಂಸ್ಕೃತಂಗಳೊಳ್–ಸ।ಯ್ತಂ–ಅರ್ದಿರೆ–ಕನ್ನಡಮನ್–ಅಱಿದು–ಪೇೞ್ಗೆ–ಎಂಬುದಿದ್–ಆ।
ಗಮ–ಕೋವಿದ–ನಿಗದಿತಮಾ।ರ್ಗಂ–ಇದಂ–ಬೆರಸಲ್ಕಮ್–ಆಗದು–ಈ–ಸಕ್ಕದದೊಳ್॥

[ಕನ್ನಡ ಪದಗಳನ್ನು ಸಮಸಂಸ್ಕೃತ ಪದಗಳೊಂದಿಗೆ ಹೊಂದಿಕೆಯಾಗುವಂತೆ ಅರಿತು ಬೆರಸಿ ಹೇಳಬಹುದು. ಇದು ಕಾವ್ಯಾಗಮ ಪಂಡಿತರು ಹೇಳುವ ಮಾರ್ಗಕ್ಕೆ ಅನುಗುಣವಾಗಿರುವುದು. 'ಸಮಸಂಸ್ಕೃತ'ವಾಗಿ ಪರಿವರ್ತನೆಗೊಂಡಿರದ 'ಈ' ಸಂಸ್ಕೃತ ಪದಗಳೊಂದಿಗೆ ಕನ್ನಡವನ್ನು ಬೆರೆಸಲಾಗದು.]

ಮೇಲಿನ ಕಂದ ಪದ್ಯದಲ್ಲಿ ಶ್ರೀವಿಜಯನು ಸ್ಪಷ್ಟವಾಗಿ ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬಳಸುವಾಗ ಅವುಗಳನ್ನು ಯಥಾವತ್ತಾಗಿ ಬಳಸುವ ಬದಲಾಗಿ, ಸಮಸಂಸ್ಕೃತ ಪದಗಳನ್ನಾಗಿಸಬೇಕು ಎಂಬುದನ್ನು ಒತ್ತಿ ಹೇಳಿದ್ದಾನೆ.

ಕನ್ನಡದಲ್ಲಿ ಬೆರೆಸಬಾರದ ಸಂಸ್ಕೃತ ಅವ್ಯಯಗಳಿಗೆ ಉದಾಹರಣೆ:

ಅಹರಹರುಚ್ಚೈರ್ನೀಚೈ
ರ್ಮುಹುರ್ಮುಹುರಿತಸ್ತತಃ ಪುನಃಪುನರಂತ
ರ್ಬಹಿರಾದಿಪ ಪ್ರಾದುರಹೋ
ಸಹಸಾದಿಗಳವ್ಯಯಂಗಳಸಹಾಯಂಗಳ್ ॥೫೨॥

ಅಹರಹಃ–ಉಚ್ಚೈಃ–ನೀಚೈಃ। ಮುಹುರ್ಮುಹುಃ(ಮುಹುಃಮುಹುಃ) ಇತಸ್ತತಃ–ಪುನಃ–ಪುನರ್‌ಅಂತರ್।

ಬಹಿರ್–ಅದ್–ಇಹ–ಪ್ರಾದುರ್–ಅಹೋ। ಸಹಸಾದಿಗಳ್–ಅವ್ಯಯಂಗಳ್–ಅಸಹಾಯಂಗಳ್॥

[ಅಹರಹಃ, ಉಚ್ಚೈ, ನೀಚೈ, ಮುಹುರ್ಮುಹು, ಇತಸ್ತತಃ, ಪುನಃ ಪುನಃ, ಅಂತರ್ ಬಹಿರ್, ಆತ್ (ಆ), ಇಹ, ಪ್ರಾದುರ್, ಅಹೋ ಸಹಸಾ– ಇವೇ ಮೊದಲಾದ ಅವ್ಯಯಗಳಿಗೆ ಕನ್ನಡ ವಿಭಕ್ತಿ ಪ್ರತ್ಯಯಗಳು ಬಾರವು. ಎಂದರೆ ಮೇಲಿನ ಸಂಸ್ಕೃತ ಅವ್ಯಯಗಳಿಗೆ ಕನ್ನಡ ವಿಭಕ್ತಿಗಳನ್ನು ಹತ್ತಿಸಕೂಡದು.]

ಪ್ರಸ್ತುತ ಕಂದ ಪದ್ಯದಲ್ಲಿ ಕವಿರಾಜಮಾರ್ಗಕಾರ ಅವ್ಯಯಗಳ ಬಳಕೆಯ ಸಂದರ್ಭದಲ್ಲಿ ಸಂಸ್ಕೃತವನ್ನು ಎಷ್ಟು ಪ್ರಮಾಣದಲ್ಲಿ ಬಳಸಬಹುದು ಎಂದು ಸ್ಪಷ್ಟವಾಗಿ ಸೂಚನೆ ನೀಡಿದ್ದಾನೆ. "ಅಹರಹಃ, ಉಚ್ಚೈಃ, ನೀಚೈಃ, ಮುಹುರ್ಮುಹುಃ (ಮುಹುಃಮುಹುಃ) ಇತಸ್ತತಃ (ಇತಃತತಃ) ಪುನಃ ಪುನಃ, ಅಂತಃ, ಬಹಿಃ, ಅದ್, ಇಹ, ಪ್ರಾದುಃ, ಅಹೋ, ಸಹಸಾ ಇವೆ ಮೊದಲಾದ ಅವ್ಯಯಗಳು, ಅಸಹಾಯಗಳು. 'ಅಸಹಾಯಂಗಳ್' ಲಗನೇ ಸೂತ್ರದ ಕೆಳಗೆ ಅವ್ಯಯಗಳು ಲಿಂಗಗಳಾಗುವುದಿಲ್ಲ ಎಂಬುದಕ್ಕೆ ಪ್ರಯೋಗದಲ್ಲಿ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಕೇಶಿರಾಜನ ಪ್ರಕಾರ, 'ಅಂತರ್, ಬಹಿರ್, ಉಚ್ಚೈಸ್, ನೀಚೈಸ್, ಮುಹುರ್, ಪುನರ್, ಅಹಸ್, ಈಷತ್, ಯುಗಪತ್, ಪೃಥಕ್' – ಮೊದಲಾದ ಸಹಜ ಅವ್ಯಯಗಳನ್ನು ವಿಭಕ್ತಿ ಪ್ರತ್ಯಯಗಳೊಂದಿಗೆ ಜೋಡಿಸುವಂತಿಲ್ಲ. ಆದ್ದರಿಂದ, ಸಂಸ್ಕೃತದ ಅವ್ಯಯಗಳಿಗೆ ಕನ್ನಡ ವಿಭಕ್ತಿಗಳನ್ನು ಜೋಡಿಸಬಾರದು ಎಂದು ಶ್ರೀವಿಜಯ ಸಹಾಯಂಗಳ್ ಮತ್ತು ಅಸಹಾಯಂಗಳ್‌ಗಳ ಉದಾಹರಣೆಗಳೊಡನೆ ಹೇಳಿದ್ದಾನೆ.

ಬೆರಸಿರೆ ಕನ್ನಡದೊಳ್ ಬಂ
ಧುರಮಾಗದು ಕಾವ್ಯರಚನೆ ಪೇಟ್ಟೊಡೆ ಪೀನಂ
ಪರುಷತರಮಕ್ಕುಮೊತ್ತುಂ
ಗರಡೆಯ ಮದ್ದಳೆಯ ಜರ್ಝರ ಧ್ವನಿಗಳವೋಲ್ ॥೫೩॥

(ಬೆರಸಿರೆ–ಕನ್ನಡದೊಳ್–ಬಂ।ಧುರಂ–ಆಗದು–ಕಾವ್ಯ–ರಚನೆ–ಪೇಟ್ಟೊಡೆ–ಪೀನಂ

ಪರುಷತರಂ–ಆಕ್ಕುಂ–ಒತ್ತುಂ।ಗರಡೆಯ–ಮದ್ದಳೆಯ–ಜರ್ಝರ–ಧ್ವನಿಗಳ–ವೋಲ್)

ಸಂಸ್ಕೃತದ ಅವ್ಯಯಗಳು ಇದ್ದ ರೀತಿಯಲ್ಲೇ ಕನ್ನಡ ಪದಗಳ ಜೊತೆಗೆ ಬೆರೆಸಿ ರಚಿಸಿದ ಕಾವ್ಯ ಚೆಲುವು ಕಳೆದುಕೊಳ್ಳುತ್ತದೆ. ಈ ನಿಮಮವನ್ನು ಮೀರಿ ಒಂದು ವೇಳೆ ಬೆರೆಸಿದರೆ ಕರಡೆಯ ಮದ್ದಲೆಯ 'ಘಟ ಘಟ' ಧ್ವನಿಯ ಹಾಗೆ ಕಿವಿಗೆ ತುಂಬ ಕರ್ಕಶವೆನಿಸುತ್ತದೆ ಎಂದು ಶ್ರೀವಿಜಯ ಕನ್ನಡ ಮತ್ತು ಸಂಸ್ಕೃತ ಬೆರೆಸಲು ಅನುಸರಿಸಬೇಕಾದ ಮಾರ್ಗಕ್ಕೆ ರಹದಾರಿಯೊಂದನ್ನು ತೋರಿಸಿದ್ದಾನೆ.

ಕನ್ನಡದಲ್ಲಿ ಬೆರೆಸಬಾರದ ಸಂಸ್ಕೃತ ಅವ್ಯಯಗಳಿಗೆ ಉದಾಹರಣೆ:

ಬಹಿರಂತರುಪವನಂಗಳೊ
ಳಹರಹಮಾ ಪರಭೃತಂಗಳುಲಿವ ರವಂಗಳ್
ಸಹಸಾ ತಳಮಳಗೊಳಿಸಿದ
ವಹೋ ಮನಂಗಳನಿತಸ್ತತಂ ವಿರಹಿಗಳಾ ॥೫೪॥

ಬಹಿರ್-ಅಂತರ್-ಉಪವನಂಗಳೊಳ್। ಅಹರಹಮ್-ಆ-ಪರಭೃತಂಗಳ್-ಉಲಿವ-ರವಂಗಳ್।ಸಹಸಾ-ತಳಮಳಗೊಳಿಸಿದವ್। ಅಹೋ-ಮನಂಗಳನ್-ಇತಸ್ತತಂ-ವಿರಹಿಗಳಾ॥

ಬಹಿರಂತರು, ಪವನಗಳಲ್ಲಿ ಅಹರಹವೂ, ಕೋಗಿಲೆಗಳು ಉಲಿಯುವ ಧ್ವನಿಗಳು, ಇತಸ್ತ ಇದ್ದ ವಿರಹಿಗಳ ಚಿತ್ತಗಳನ್ನು ಸಹಸಾ ತಳಮಳಗೊಳಿಸಿದ ಅಹೋ! ಎಂಬಂಥ ಮೇಲಿನ ಪದಪುಂಜಗಳು ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವುದಿಲ್ಲ. ಈ ವಿಷಯವನ್ನು ಶ್ರೀವಿಜಯನು ಸ್ವತಃ ಕಂದಪದ್ಯಗಳನ್ನು ರಚಿಸುವ ಮೂಲಕ ಸ್ಪಷ್ಟಪಡಿಸಿದ್ದಾನೆ.

ಸೂತ್ರ

ವಿದಿತಸಮಸಂಸ್ಕೃತೋದಿತ
ಪದಂಗಳೊಳ್ ಪುದಿದು ಬೆರೆಸಿ ಬರೆ ಕನ್ನಡದೊಳ್
ಮುದಮನವು ತರ್ಕುಮತಿಶಯ
ಮೃದಂಗ ಸಂಗೀತಕಾದಿ ಮಧುರರವಂಬೋಲ್ ॥೫೫॥

ವಿದಿತ-ಸಮಸಂಸ್ಕೃತೋದಿತ। ಪದಂಗಳೊಳ್-ಪುದಿದು-ಬೆರೆಸಿ-ಬರೆ-ಕನ್ನಡದೊಳ್।

ಮುದಮನವು-ತರ್ಕುಮ್-ಅತಿಶಯ। ಮೃದಂಗ-ಸಂಗೀತಕಾದಿ-ಮಧುರ-ರವಂಬೋಲ್ ॥

ಸಮಸಂಸ್ಕೃತ ಉಕ್ತಿಗಳೊಂದಿಗೆ ಹೊಂದಿಕೊಳ್ಳುವಂತೆ ಕನ್ನಡ ನುಡಿಗಳು ಬೆರೆಸಿ ರಚನೆಯಾದರೆ, ಸೊಗಸಾದ ಸಂಗೀತದಲ್ಲಿ ಸಮರಸಗೊಳ್ಳುವ ಮೃದಂಗದ ಮಧುರ ಧ್ವನಿಯಂತೆ, ಈ ರಚನೆಗಳು ಮಧುರು ಶಬ್ದವನ್ನು ಉಂಟು ಮಾಡುತ್ತವೆ ಎಂದು ಶ್ರೀವಿಜಯ ಹೇಳಿದ್ದಾನೆ. ಈ ಮೂಲಕ ಸಂಸ್ಕೃತ ಪದಗಳನ್ನು ಯಥಾವತ್ತಾಗಿ ಬಳಸಬಾರದು ಎಂದು ಹೇಳಿದ್ದಾನೆ.

ಉದಾಹರಣೆ:

ಬಹಿರುದ್ಯಾನಾಂತರದೊಳ್
ಸಹಸೋದಿತಮತ್ತಕೋಕಿಲೋಚ್ಚೈರ್ಧ್ವಾನಂ

ಮುಹುರಾಕರ್ಣಿಸೆ ಪಡೆದ
ತ್ತಹರ್ನಿಶಂ ಪೆರ್ಚನಂತರಂಗಕ್ಕೆನ್ನಾ ॥೫೬॥

ಬಹಿರ್-ಉದ್ಯಾನ-ಅಂತರದೊಳ್। ಸಹಸೋದಿತ-ಮತ್ತ-ಕೋಕಿಲೊ-ಉಚ್ಚೈ-ಅರ್ಧ್ವಾನಂ।
ಮುಹುರಾಕರ್ಣಿಸೆ-ಪಡೆದ್। ಅತ್ತ-ಅಹರ್ನಿಶಂ-ಪೆರ್ಚನ್-ಅಂತರಂಗಕ್ಕೆ-ಎನ್ನಾ॥

ಬಹಿರುದ್ಯಾನದಲ್ಲಿ ಸಹಸೋದಿತವಾದ ಮತ್ತು ಕೋಕಿಲಗಳ ಉಚ್ಚೈರ್ಧ್ವಾನವು ಮಹುರಾಕರ್ಣಿತವಾಗಿ ಅಹರ್ನಿಶವೂ ನನ್ನ ಅಂತರಂಗಕ್ಕೆ ಹರ್ಷಾತಿಶಯವನ್ನುಂಟು ಮಾಡಿತು ಎಂಬುದು ಮೇಲಿನ ಕಂದದ ಭಾವಾರ್ಥ. ಈ ಕಂದ ಪದ್ಯವು ಹಿಂದಿನ ಪದ್ಯದ ಸೂತ್ರಕ್ಕೆ ಲಕ್ಷ್ಯವಾಗಿದೆ. ಈ ಕಂದ ಲಕ್ಷ್ಯಪದ್ಯವಾಗಿದ್ದು, ಸಂಸ್ಕೃತಾವ್ಯಯಗಳನ್ನು ಕುರಿತು ಉಲ್ಲೇಖಿಸಿರುವ ೫೫ನೇ ಕಂದಪದ್ಯವಾದ 'ವಿದಿತ ಸಮಸಂಸ್ಕೃತೋದಿತ ಪದಂಗಳೊಳ್ ಪುದಿದು ಬರೆ ಕನ್ನಡದೊಳ್ ಮುದಮನವುತರ್ಕುಂ' ಎಂಬ ನಿರ್ದೇಶನಕ್ಕೆ ಅನುಗುಣವಾಗಿ ರಚನೆಯಾಗಿದೆ.

ನೆಗಟ್ದಿರ್ದ ಕನ್ನಡಂಗಳೊ
ಳಗಣಿತ ಗುಣ ವಿದಿತ ಸಂಸ್ಕೃತೋಕ್ತಕ್ರಮಮಂ
ಬಗೆದೊಂದು ಮಾಡಿ ಪೇಟ್ದೊಡೆ
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ॥೫೭॥

ನೆಗಟ್ದಿರ್ದ-ಕನ್ನಡಂಗಳೊಳ್। ಅಗಣಿತ-ಗುಣ-ವಿದಿತ-ಸಂಸ್ಕೃತೋಕ್ತ-ಕ್ರಮಮಂ।
ಬಗೆದು-ಒಂದು-ಮಾಡಿ-ಪೇಟ್ದೊಡೆ। ಸೊಗಯಿಸುಗುಂ-ಕಾವ್ಯಬಂಧಂ-ಎಂದುಂ-ಅನಿಂದ್ಯಂ॥

ಸಂಸ್ಕೃತದ ಗುಣಾತಿಶಯದಿಂದ ಪರಿಪೂರ್ಣವಾದ, ಪ್ರಸಿದ್ಧ ಉಕ್ತಿ ಮಾರ್ಗವನ್ನು ಪರಾಮರ್ಶಿಸಿ, ಕನ್ನಡದಲ್ಲಿ ಹೊಂದಿಸಿಕೊಂಡು ಕನ್ನಡದಲ್ಲಿ ರಚಿಸಿದ ಕಾವ್ಯ ನಿರ್ದುಷ್ಟವಾಗುತ್ತದೆ ಮತ್ತು ಶೋಭಾಯಮಾನವಾಗುತ್ತದೆ ಎಂದು ಶ್ರೀವಿಜಯ ಹೇಳಿದ್ದಾನೆ. ಅವನ ಪ್ರಕಾರ, ಸಂಸ್ಕೃತದಿಂದ ಸ್ವೀಕರಿಸಲ್ಪಡುವ ರೂಪಗಳು ಕನ್ನಡ ರಚನೆಗೆ ಹೊಂದಿಕೊಳ್ಳಬೇಕು. ಆಗ ಕನ್ನಡ ಕಾವ್ಯ ರಚನೆ, ಯಾವುದೇ ತೊಂದರೆ ಇಲ್ಲದೆ ಸರಾಗವಾಗಿರುತ್ತದೆ.

ಸೂತ್ರ

ತಱಿಸಂದಾ ಸಕ್ಕದಮುಮ
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್
ಕುಱಿತು ಬೆರಸಿದೊಡೆ ವಿರಸಂ
ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ । ॥೫೮॥

ತಱಿಸಂದ–ಆ–ಸಕ್ಕದಮುಮನ್।ಅಱಿಯದೆ–ಕನ್ನಡಮುಮಂ–ಸಮಾಸೋಕ್ತಿಗಳೊಳ್।

ಕುಱಿತು–ಬೆರಸಿದೊಡೆ–ವಿರಸಂ। ಮಱುಗುವ–ಪಾಲ್‌ಗೆ–ಅಳೆಯ–ಪನಿಗಳಂ–ಬೆರೆಸಿದವೋಲ್॥

ಸಂಸ್ಕೃತ ಮತ್ತು ಕನ್ನಡವನ್ನು ಸರಿಯಾಗಿ ಅರಿಯದೆ ಒಂದೇ ಸಮಾಸದಲ್ಲಿ ಕೂಡಿಸಿ ಬೆರೆಸಿದರೆ, ಕುದಿಯುತ್ತಿರುವ ಹಾಲಿನಲ್ಲಿ ಮಜ್ಜಿಗೆಯ ಹನಿಗಳನ್ನು ಬೆರೆಸಿದಂತೆ ವಿರಸವಾಗುತ್ತದೆ ಎಂದು ಶ್ರೀವಿಜಯ ಮೇಲಿನ ಕಂದಪದ್ಯದಲ್ಲಿ ಹೇಳಿದ್ದಾನೆ. 'ಮಱುಗುವ ಪಾಲ್ಗಳೆಯ ಪನಿಗಳುಂ ಬೆರೆಸಿದವೋಲ್'–ಕುದಿಯುವ ಹಾಲಿಗೆ ಮಜ್ಜಿಗೆಯ ಹನಿಗಳನ್ನು ಬೆರೆಸಿದ ಹಾಗಾಗುತ್ತದೆ ಎನ್ನುತ್ತಾನೆ. ಕುದಿಯುವ ಹಾಲಿಗೆ ಮಜ್ಜಿಗೆಯ ಹನಿಗಳನ್ನು ಬೆರೆಸಿದರೆ ಹಾಲು ಒಡೆದುಹೋಗುತ್ತದೆ. ಈ ಉದಾಹರಣೆಯ ಮೂಲಕ ಅವನು ಸಂಸ್ಕೃತ ಮತ್ತು ಕನ್ನಡ ಪದಗಳನ್ನು ಒಂದೇ ಸಮಾಸದಲ್ಲಿ ರಚಿಸಬಾರದು ಎಂದು ಹೇಳಿದ್ದಾನೆ.

ಅರಿಸಮಾಸ ದೋಷಕ್ಕೆ ಉದಾಹರಣೆ ಮತ್ತು ಲಕ್ಷಣ ಪದ್ಯ:

ಅರಸುಕುಮಾರನನಾಯತ
ತರ ಕಡೆಗಣ್ಣಿಂದೆ ನೋಡಿ ಕೆಳದಿಸಮೇತಂ
ಪರಿಗತನಗೆಯಿಂದಿರ್ದೆಂ
ಗುರುನಾಣ್ಭರದಿಂದಮೆಱಗಿ ಮುಖತಾವರೆಯಂ ॥೫೯॥

ಅರಸುಕುಮಾರನನ್–ಆಯತ।–ತರ ಕಡೆಗಣ್ಣಿಂದೆ–ನೋಡಿ–ಕೆಳದಿ–ಸಮೇತಂ।

ಪರಿಗತ–ನಗೆಯಿಂದ್–ಇರ್ದೆಮ್।–ಗುರು–ನಾಣ್ಭರದಿಂದಂ–ಎಱಗಿ–ಮುಖ–ತಾವರೆಯಂ॥

'ಕೆಳದಿ ಸಮೇತ"ಳಾಗಿದ್ದ ನಾನು ಆಯತ ತರ ಕಡೆಗಣ್ಣಿಂದ 'ಅರಸು ಕುಮಾರ'ನನ್ನು ನೋಡಿ 'ಗುರುನಾಣ್ ಭರದಿಂದ' ನನ್ನ 'ಮುಖತಾವರೆ'ಯನ್ನು ಪರಿಗತನಗೆಯಿಂದಿದ್ದೆನು ಎಂಬ ಅರ್ಥ ಬರುವಂತೆ ಮೇಲಿನ ಪದ್ಯ ರಚನೆಯಾಗಿದೆ. ಇದರ ದೋಷವನ್ನು ತಿದ್ದಿದ ಮತ್ತೊಂದು ಕಂದವನ್ನು ಶ್ರೀವಿಜಯ ರಚಿಸಿದ್ದಾನೆ.

ದೋಷವನ್ನು ತಿದ್ದಿದ ಉದಾಹರಣೆ ಮತ್ತು ಲಕ್ಷಣ:

ನರಪತಿತನಯನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ
ಪರಿಗತ ಹಾಸ್ಯದೊಳಿರ್ದೆಂ
ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ ॥೬೦॥

ನರಪತಿತನಯನ್-ಆಯತತರಳ್।ಆಪಾಂಗದೊಳೆ-ನೋಡಿ-ಕೆಳದಿಯರ್-ಒಡನೆ-ಆಂ।

ಪರಿಗತ-ಹಾಸ್ಯದೊಳ್-ಇರ್ದೆಂ। ಗುರು-ಲಜ್ಜಾ-ಭರದಿನ್-ಎಱಗಿ-ಮುಖ-ಸರಸಿಜಮಂ॥

ಕೆಳದಿಯರ ಜೊತೆಗಿದ್ದ ನಾನು ತರಳಾಪಾಂಗದಿಂದ ನರಪತಿ ತನಯನನ್ನು ನೋಡಿ, ಗುರುಲಜ್ಜಾಭರದಿಂದ ಮುಖ ಸರಸಿಜವನ್ನು ಬಾಗಿಸಿ ಪರಿಗತ ಹಾಸ್ಯದಿಂದ ಇದ್ದೆನು ಎಂಬ ರಚನೆಯನ್ನು ಶ್ರೀವಿಜಯ ಕೊಟ್ಟಿದ್ದಾನೆ. ಈ ಮೂಲಕ ಕನ್ನಡ ಮತ್ತು ಸಂಸ್ಕೃತ ರಚನೆಗಳ ಸಾಧು ಕ್ರಮಗಳ ಕುರಿತು ಕಂದಗಳನ್ನು ರಚಿಸಿದ್ದಾನೆ.

ಸುಂದರ ಸಮಾಸ ರಚನೆಗೆ ಉದಾಹರಣೆ:

ಎಂದಿಂತು ಸಮಾಸೋಕ್ತಿಯೊ
ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ
ಸುಂದರಮಕ್ಕುಂ ಕವಿಪದ
ವೊಂದಿದವೋಲ್ ಕನಕರಚನೆಯೊಳ್ ಮಣಿನಿಕರಂ ॥೬೧॥[೧೯]

ಎಂದ್-ಇಂತು-ಸಮಾಸೋಕ್ತಿಯೊ।ಳ್-ಒಂದಾಗಿರೆ-ಸಕ್ಕದಂಗಳುಂ-ಕನ್ನಡಮುಂ॥

ಸುಂದರಮ್-ಅಕ್ಕುಂ-ಕವಿ-ಪದಂ-ಹೊಂದಿದ-ವೋಲ್-ಕನಕ-ರಚನೆಯೊಳ್-ಮಣಿ-ನಿಕರಂ॥

ಹಿಂದಿನ ೨ ಕಂದಪದ್ಯಗಳಿಗೆ ಶ್ರೀವಿಜಯ ಮೇಲಿನ ಕಂದದಲ್ಲಿ ಭಾಷ್ಯವನ್ನು ರಚಿಸಿದ್ದಾನೆ. ಎರಡು ಕಂದಪದ್ಯಗಳಲ್ಲಿ ಇಲ್ಲದ ಸಮಸಂಸ್ಕೃತೋಕ್ತಿಗಳ ರಚನೆಯ ಮೂಲಕ ಮಾಧುರ್ಯಕ್ಕೆ ಹೆಚ್ಚಿನ ಒತ್ತನ್ನು ಇಲ್ಲಿ ನೀಡಲಾಗಿದೆ. ಶ್ರೀವಿಜಯನ ಪ್ರಕಾರ, ಮೇಲಿನ ಕಂದಪದ್ಯದಂತೆ ಸಂಸ್ಕೃತ ಮತ್ತು ಕನ್ನಡ ಪದಗಳು ಸಮಾಸಗಳಲ್ಲಿ ಹಿತವಾಗಿ ರಚನೆಯಾದಾಗ ಮಾತ್ರ ಕವಿಯ ಪದ ಪ್ರಯೋಗಗಳು ಚಿನ್ನದ ಕಟ್ಟಿನಲ್ಲಿ ಶೋಭಿಸುವ ರತ್ನ ಸಮೂಹದಂತೆ ಸುಂದರವೆನಿಸುತ್ತವೆ.

ಕವಿರಾಜಮಾರ್ಗಕಾರನ ಮೇಲಿನ ಕಂದಗಳನ್ನು ಕುರಿತು ರಾಜಪ್ಪ ದಳವಾಯಿಯವರು ಈ ಕೆಳಗಿನಂತೆ ಅಭಿಪ್ರಾಯ ಪಡುತ್ತಾರೆ: “೫೧-೬೧ ಈ ಹನ್ನೊಂದು ಪದ್ಯಗಳಲ್ಲಿ ಮಾರ್ಗಕಾರನು ಕನ್ನಡ ಕಾವ್ಯರಚನೆಯಲ್ಲಿ ಕನ್ನಡ ಪದಗಳೊಂದಿಗೆ ಸಂಸ್ಕೃತ ಪದಗಳನ್ನು ಹೇಗೆ ಪ್ರಯೋಗ ಮಾಡಬಹುದು, ಹೇಗೆ ಮಾಡಕೂಡದು ಎಂದು ಮಾರ್ಗದರ್ಶನ ಮಾಡಿದ್ದಾನೆ. (ಸಂಸ್ಕೃತದ ಬಗೆಗೆ ಅವನು ಇತ್ತಿರುವ ಸಲಹೆಯನ್ನು ನಾವು ಇಂದು ಇಂಗ್ಲಿಷಿನ ಬಗೆಗೆ ಅನ್ವಯಿಸಿಕೊಳ್ಳಬಹುದು) ಕನ್ನಡ ಪದಗಳನ್ನು ಸಮಸಂಸ್ಕೃತ ಪದಗಳೊಂದಿಗೆ ಹೊಂದಿಕೆಯಾಗುವಂತೆ ಅರಿತು ಬೆರಸಿ ಹೇಳಬಹುದು. ಇದು ಕಾವ್ಯಾಗಮ ಪಂಡಿತರು ಹೇಳುವ ಮಾರ್ಗಕ್ಕೆ ಅನುಗುಣವಾಗಿರುವುದು; ‘ಸಮಸಂಸ್ಕೃತ’ವಾಗಿ ಪರಿವರ್ತನೆಗೊಂಡಿರದ ‘ಈ’ ಸಂಸ್ಕೃತ ಪದಗಳೊಂದಿಗೆ (ಎಂದರೆ ಮುಂದಿನ ಪದ್ಯಗಳಲ್ಲಿ ನಿರ್ದೇಶಿಸಿರುವ ಅಚ್ಚ ಸಂಸ್ಕೃತಾವ್ಯಯಗಳೊಂದಿಗೆ) ಇದಂ=(ಎಂದರೆ ಕನ್ನಡವನ್ನೂ) ಬೆರೆಸಲ್ಕಮಾಗದು.”[೨೦] ಎನ್ನುತ್ತಾರೆ. ಒಟ್ಟಿನಲ್ಲಿ ಕವಿರಾಜಮಾರ್ಗ ಕೃತಿಯು ಕನ್ನಡ ಮತ್ತು ಸಂಸ್ಕೃತದ

ಹೊಂದಾಣಿಕೆಯ ಪ್ರಮಾಣವನ್ನು ಪ್ರಕಟಿಸುತ್ತದೆ. ಕನ್ನಡದ ಮೊದಲ ಉಪಲಬ್ಧ ಕೃತಿಯಲ್ಲೇ ಸಂಸ್ಕೃತದೊಂದಿಗೆ ಇರಬೇಕಾದ ಎಚ್ಚರ ಮತ್ತು ಅಂತರಗಳನ್ನು ಹೇಳಲಾಗಿದೆ. ಆದರೆ, ಭವಿಷ್ಯದಲ್ಲಿ ಮಾರ್ಗಕಾರನ ಆಶಯಗಳನ್ನು ಎಲ್ಲ ಕೃತಿ ರಚನೆಕಾರೂ ಅನುಸರಿಸಲಿಲ್ಲ. ಪ್ರಾಸಂಗಿಕವಾಗಿ ಪಂಪ, ರನ್ನ, ಕುಮಾರವ್ಯಾಸ ಮತ್ತು ಲಕ್ಷ್ಮೀಶರು ಇವನ ಆಶಯಗಳಿಗೆ ದನಿಯಾಗಿದ್ದಾರೆ. ವಚನಕಾರರು, ಕೆಲವು ಕೀರ್ತನಕಾರರು, ಆಂಡಯ್ಯ ಮತ್ತು ಮಹಲಿಂಗರಂಗ ಶ್ರೀವಿಜಯನ ಆಶಯಗಳನ್ನು ಮುಂದುವರೆಸಿದ್ದಾರೆ.

ಕವಿರಾಜಮಾರ್ಗದ ಕುರಿತು ರಾಜಪ್ಪ ದಳವಾಯಿಯವರು ಹೀಗೆ ಅಭಿಪ್ರಾಯಪಡುತ್ತಾರೆ: "ಅನೇಕ ಶಿಸ್ತುಗಳ ಈ ಕೃತಿ ಅಂದಿಗೇ ಎತ್ತಿರುವ ಬಹುಮುಖ್ಯ ಪ್ರಶ್ನೆಗಳು ಇಂದಿಗೂ ಕನ್ನಡದ ವಿಚಾರದಲ್ಲಿ, ಕನ್ನಡ ಜಗತ್ತಿನ ವಿಚಾರದಲ್ಲಿ ಸಾರ್ವಕಾಲಿಕ ಸತ್ಯಗಳೇ ಆಗಿವೆ. ಎರಡು ವಿಷಯಗಳು ಬಹು ಮುಖ್ಯವಾದವು. ಒಂದು ಭಾಷೆಗೆ ಸಂಬಂಧಿಸಿದವು. ಎರಡು ನೈತಿಕತೆಗೆ ಸಂಬಂಧಿಸಿದವು. ಎರಡೂ ಕೂಡ ವ್ಯವಸ್ಥೆಗಳ ವ್ಯವಸ್ಥೆಗಳು, ರಾಚನಿಕ ಸ್ವರೂಪದವು. ಭಾಷೆ ಮತ್ತು ನೈತಿಕತೆ ತಮ್ಮನ್ನು ತಾವು ಸರಿಹೊಂದಿಸಿಕೊಂಡು ಜೀವಂತವಾಗಿರುತ್ತವೆ. ಅಲ್ಲಿ ಏಕಕಾಲಕ್ಕೆ ಡೈಕ್ರೋನಿಕ್, ಸಿನ್‌ಕ್ರೋನಿಕ್ ಎರಡೂ ಮಾದರಿಗಳನ್ನು ಕಾಣುತ್ತೇವೆ. ಮಾರ್ಗ ತನಗಿಂತ ಪೂರ್ವ ಕಾಲದ ಕನ್ನಡ ಸ್ಥಿತಿಯನ್ನು ನಿರೂಪಿಸುವುದು, ಉದಾಹರಣೆಗೆ 'ಪಳಗನ್ನಡ' ಡೈಕ್ರೋನಿಕ್ ಆದರೆ ಮಾರ್ಗದಲ್ಲಿ 'ಸಮಸಂಸ್ಕೃತ' ಅಥವಾ 'ಕಾರಕ' ಸಿನ್‌ಕ್ರೋನಿಕ್ ಆಗುತ್ತದೆ. ಇಂದು ನಾವು ಮಾರ್ಗವನ್ನು ನೋಡುವಂತೆಯೇ ಮಾರ್ಗಕಾರ ತನಗಿಂತ ಪೂರ್ವದ ಹಾಗೂ ತನ್ನ ಎದುರಿಗಿನ ಭಾಷೆ ಎದುರಿಸುತ್ತಿದ್ದ ಬಿಕ್ಕಟ್ಟುಗಳನ್ನು ಕುರಿತು ಮಾತಾಡುತ್ತಾನೆ. ಇದು ಕವಿರಾಜಮಾರ್ಗದ ರೆಲೆವೆನ್ಸ್."[೨೧]

ರಾಜಪ್ಪ ದಳವಾಯಿಯವರು ಕವಿರಾಜಮಾರ್ಗ: ಅಂತರ್ ಶಿಸ್ತೀಯ ಅಧ್ಯಯನ ಡಿ.ಲಿಟ್ ಪ್ರಬಂಧದಲ್ಲಿ ಕನ್ನಡ ಮತ್ತು ಸಂಸ್ಕೃತದ ನಡುವೆ ಇರಬೇಕಾದ ಎಚ್ಚರದ ಕುರಿತು ಶ್ರೀವಿಜಯನ ಚಿಂತನೆಗಳನ್ನು ಕುರಿತು ಚರ್ಚಿಸಿದ್ದಾರೆ.[೨೨]

ಕವಿರಾಜಮಾರ್ಗದ ಕುರಿತು ಷೆಲ್ಡನ್ ಪೊಲಾಕ್‌ರ ಅಭಿಪ್ರಾಯ ಹೀಗಿದೆ: "ಸಿದ್ಧಾಂತ ಮತ್ತು ಪ್ರಯೋಗಗಳೆರಡೂ ಆಗಿ ನಡೆದ ಇಂಥ ಸಂಶ್ಲೇಷಣೆಯ ಕೆಲಸಕ್ಕೆ, ಮತ್ತು ಇದಕ್ಕೆ ಸಂವಾದಿಯಾಗಿಯೇ ಸಂಭವಿಸಿದಂತಹ ಅಧಿಕಾರ ಮತ್ತು ಸಂಸ್ಕೃತಿಗಳ ಸಮಾವೇಶದ ಕಾರ್ಯಯೋಜನೆಗೆ, ಸತತವಾಗಿ ನಡೆದ ಮತ್ತು ಅತ್ಯಂತ ಉತ್ಕೃಷ್ಟವಾದ ದೃಷ್ಟಾಂತವೊಂದು ನಮಗೆ ಕಾಣಸಿಗುವುದು ಕನ್ನಡದಲ್ಲೇ ಸರಿ. ನಾನು ತೀರ್ಮಾನಿಸಿರುವ ಪ್ರಕಾರ, ಹೀಗೆ ವಿಶ್ವಾತ್ಮಕ ಸಂದರ್ಭವೊಂದರಲ್ಲಿ ದೇಶಭಾಷಾ ನಿರ್ಮಾಣದ ಸಮಸ್ಯಾತ್ಮಕತೆಯನ್ನು ಕುರಿತು ಇಷ್ಟು ಸ್ಪಷ್ಟವಾಗಿ ವಿಶದೀಕರಿಸುವ ಕನ್ನಡದ ಉದಾಹರಣೆಯು, ಜಾಗತಿಕ ಇತಿಹಾಸದಲ್ಲಿಯೇ ಪ್ರಥಮವಾದದ್ದು."[೨೩] ಈ ಅಭಿಪ್ರಾಯ ಕವಿರಾಜಮಾರ್ಗ ಕೃತಿಯ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತದೆ. ಕನ್ನಡದಂತ ಪ್ರಾಂತೀಯ ಭಾಷೆಗಳು ಅಧಿಕಾರಸ್ಥರ ಎದುರು ಪ್ರಾದೇಶಿಕ ಸಂಸ್ಕೃತಿ ಮತ್ತು ಭಾಷೆಗಳೆರಡನ್ನೂ ಸಮರ್ಥವಾಗಿ ಮಂಡಿಸಿ, ಅದನ್ನು ಒಪ್ಪಿಸುವ ಕೆಲಸ ಮಾಡಿರುವುದರೆಡೆಗೆ ಇಂದಿನ ಕನ್ನಡ ಅಧ್ಯಯನಗಳು ಒತ್ತು

ನೀಡಬೇಕೆನಿಸುತ್ತದೆ. ಆಗ ದೇಶಿ ಭಾಷೆಗಳಿಗೆ ಎದುರಾಗಿರುವ ಆತಂಕಗಳಿಗೆ ಸಮರ್ಥವಾಗಿ ಮುಖಾಮುಖಿಯಾಗಲು ಸಾಧ್ಯವಾಗುತ್ತದೆ.

"'ಕವಿರಾಜಮಾರ್ಗ' ಕೃತಿಯು, ಯೂರೋಪಿನ ಆಧುನಿಕಪೂರ್ವ ಯುಗದಲ್ಲಿ ಭಾಷೆ ಮತ್ತು ಅಧಿಕಾರಗಳ ಸಂಬಂಧವನ್ನು ಕುರಿತಂತೆ ವಿಶ್ಲೇಷಿಸಿದಂತಹ ಡಾಂಟೆಯ 'ಡಿ ವಲ್ಗಾರಿ ಇಲೋಕ್ವೆನ್ಷಿಯಾ' (ಕ್ರಿ.ಶ.೧೩೦೦) ಕೃತಿಗೆ ಹೆಗಲೆಣೆಯಾಗಿ ನಿಲ್ಲುವಂಥದ್ದು. ಈ ಕವಿರಾಜಮಾರ್ಗ ಕೃತಿಯು ಬಿಂಬಿಸಿ ಕಾಣಿಸುವಂಥ ಸಮಕಾಲೀನ ಸಾಹಿತ್ಯ ವಲಯದ ವಿವರಗಳನ್ನು ನಾವು ಓದುತ್ತ ಹೋದರೆ, ಅಲ್ಲಿ ನಮಗೆ ಆ ಕಾಲದ ರಾಜಕೀಯ ಮತ್ತು ಸಂಸ್ಕೃತಿಗಳು ಮಾತ್ರವೇ ಅಲ್ಲ, ಆ ಕಾಲದಲ್ಲಿದ್ದ ರಾಜ್ಯಗಳ ಸಾಂಸ್ಕೃತಿಕ ಸ್ವರೂಪವೂ ಅರ್ಥವಾಗಲು ತೊಡಗುತ್ತದೆ."[೨೪] ಎಂಬ ಷೆಲ್ಡನ್ ಪೊಲಾಕ್ ಅವರ ಅಭಿಪ್ರಾಯ ಗಮನಾರ್ಹವಾಗಿದೆ.

ಕವಿರಾಜಮಾರ್ಗದಲ್ಲಿ ಅಧಿಕಾರದ ಭಾಷೆಯೆದುರು ಕನ್ನಡದ ಅಸ್ತಿತ್ವ ಸಾಬೀತುಮಾಡಲು ಅನೇಕ ಹಂತದಲ್ಲಿ ಪ್ರಯತ್ನಿಸುತ್ತದೆ. ಅದಕ್ಕೆ ಸ್ಥಾಪಿತ ಸಂಸ್ಕೃತ ಮಾದರಿಯನ್ನು ಯಥಾವತ್ತಾಗಿ ಅಳವಡಿಸಿಕೊಂಡಲ್ಲಿ ತನಗೆ ನೆಲೆಯಿಲ್ಲದಂತಾಗುತ್ತದೆ ಎಂಬ ಕಾರಣಕ್ಕೆ ಸಂಸ್ಕೃತದ ಜತೆಗೆ ಅನುಸಂಧಾನ ನಡೆಸುವ ಸಾಧ್ಯತೆಗಳನ್ನು ಮುಕ್ತವಾಗಿಟ್ಟುಕೊಂಡು, 'ತನಗೆ ಬೇಕಾದಷ್ಟನ್ನು ಮಾತ್ರ ಸೋಸಿ ಸ್ವೀಕರಿಸುವ' ಸಿದ್ಧಾಂತವನ್ನು ಅನುಸರಿಸುತ್ತದೆ.

"ಸಂಸ್ಕೃತದ ಸಾಹಿತ್ಯ ಸಂಸ್ಕೃತಿ ಎಂಬುದು ಇಲ್ಲಿ ಸ್ಥಳೀಯ ನೆಲೆಯಲ್ಲಿ ಪುನರ್ ನಿರ್ಮಾಣಗೊಂಡಿತು; ಆದರೆ ಆ ಪುನರ್ ನಿರ್ಮಿತಿಯು ಮಾತ್ರ-ಮೂಲವನ್ನು ಬದಲಿಸಿದ ಮರು ಹೊಂದಿಸಿದ, ಪ್ರಕ್ಷೇಪಿತಗೊಳಿಸಿದ ಹೊಸ 'ವಿಶ್ವಾತ್ಮಕ ದೇಶಭಾಷೆ'ಯಾಗಿತ್ತು."[೨೫] ಎನ್ನುವುದು ಅವರ ಅಭಿಪ್ರಾಯವಾಗಿದೆ.

ಈ ಬಗೆಯ ಪುನರ್‌ನಿರ್ಮಾಣದ ಅವಶ್ಯಕತೆಯನ್ನು ಕವಿರಾಜಮಾರ್ಗ ಮಂಡಿಸುವುದರೆಡೆಗೆ ಕನ್ನಡ ಅಧ್ಯಯನ ಪ್ರಾಸಂಗಿಕವಾಗಿ ಚರ್ಚಿಸಿದೆ. ಅದರ ಮುಂದುವರಿಕೆಯನ್ನು ಡಿ.ಎನ್. ಶಂಕರ ಬಟ್ ಮತ್ತು ಕೆ.ವಿ. ನಾರಾಯಣರ ಬರಹಗಳಲ್ಲಿ ಕಾಣಬಹುದು. ಅದಕ್ಕೂ ಹಿಂದಿನ ಅಧ್ಯಯನಗಳು ಈ ನೆಲೆಯಲ್ಲಿ ಆರಂಭಿಕ ಹೆಜ್ಜೆಗಳಾಗಿದ್ದವು. ಆದರೆ ಪರ್ಯಾಯಗಳನ್ನು ಕಟ್ಟುವ ನಿಟ್ಟಿನಲ್ಲಿ ಹಿಂದೆ ಬಿದ್ದಿದ್ದವು.

"ಸಂಸ್ಕೃತ ವಿಶ್ವವು ರೂಪುಗೊಳ್ಳುತ್ತಿದ್ದ ಈ ಅವಧಿಯುದ್ದಕ್ಕೂ ದೇಶ ಭಾಷಾ ಸಾಹಿತ್ಯದ ಮೌನಸ್ಥಿತಿ. ಒಮ್ಮೆ ಸಂಸ್ಕೃತವು ದಕ್ಷಿಣ ಏಶಿಯಾದಾದ್ಯಂತ ರಾಜಕೀಯ ಪ್ರಜ್ಞೆಯ ಸಾರ್ವಜನಿಕ ಅಭಿವ್ಯಕ್ತಿಯ ಸಾಧನವಾಗಿ ಆರೂಢವಾಗಿದ್ದೇ ತಡ ಅದು ಆ ಉದ್ದೇಶಕ್ಕೆ ಬಳಸಲ್ಪಡುವ ಏಕೈಕ ಭಾಷೆಯೂ ಆಗಿಬಿಟ್ಟಿತು."[೨೬] ಎಂದು ಷೆಲ್ಡನ್ ಪೊಲಾಕ್ ಅವರು ಸಂಸ್ಕೃತದ ಪ್ರಾಬಲ್ಯದ ಕುರಿತು ಹೇಳುತ್ತಾರೆ.

ಸಂಸ್ಕೃತ ಭಾಷೆಯ ಪ್ರಾಬಲ್ಯದ ಹಂತದಲ್ಲಿ ಶಾಸನಗಳಿಂದ ಆರಂಭವಾದ ರಚನೆಗಳು ನಂತರದ ಹಂತದಲ್ಲಿ ಸಾಹಿತ್ಯ ಕೃತಿರೂಪ ಪಡೆದು ವಿಸ್ತೃತವಾಗುತ್ತಿದ್ದ ಹಂತದಲ್ಲಿ ಕನ್ನಡದಂತಹ ಭಾಷೆಗಳಲ್ಲಿ ಸಾಹಿತ್ಯ ರಚನೆಯಾದ ದಾಖಲೆಗಳು ಲಭಿಸಿಲ್ಲ. ಸಂಸ್ಕೃತದಂತೆಯೇ ಕನ್ನಡವೂ ಮೊಟ್ಟ

ಮೊದಲ ದಾಖಲೆಯಾಗಿ ಶಾಸನವನ್ನೇ ಅವಲಂಬಿಸಿದೆ. ಇದು ಭಾಷೆಗೆ ಅಧಿಕಾರ ಕೊಟ್ಟಿರುವ ಕೊಡುಗೆಯೂ ಹೌದು. ಅದರ ಜತೆಗೆ ಅದರ ಪ್ರಾಮುಖ್ಯತೆಯ ಆಧಾರದ ಮೇಲೆಯೇ ಭಾಷೆಯ ಬೆಳವಣಿಗೆ ಅವಲಂಬಿತ ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕಾಗಿ ಕನ್ನಡ ಪರ ಚಿಂತನೆಗಳು ಶಾಸ್ತ್ರ ಮತ್ತು ಶಾಸನಗಳೆರಡರ ಮಾನ್ಯತೆ ಬೇಕಿದೆ. ಪ್ರಸ್ತುತ ಕನ್ನಡದ ಮುಂದಿರುವ ತೊಡಕುಗಳೂ ಇದೇ ಹಂತದಲ್ಲಿವೆ.

ಕನ್ನಡ ಸಂದರ್ಭದಲ್ಲಿ ನಾಡಿನ ಬಹುತೇಕ ರಾಜ ಮಹಾರಾಜರು ಸಾಹಿತಿಗಳಿಗೆ ಆಶ್ರಯ ನೀಡಿರುವುದೇ ಭಾಷೆಗೆ ನೀಡಿರುವ ಕೊಡುಗೆ ಎಂದು ನಂಬಿಸಲಾಗಿದೆ. ಬದಲಿಗೆ ದೇವಾಲಯಗಳ ನಿರ್ಮಾಣಗಳಿಗೆ ನೀಡಿದ ಒತ್ತು ಸಂಸ್ಕೃತ ಪರಂಪರೆಯ ಅನುಕರಣೆಯಾಗಿರುವಂತಿದೆ.

ಎಂ.ವಿ.ಸೀತಾರಾಮಯ್ಯನವರ ಪ್ರಕಾರ: "ಕವಿರಾಜಮಾರ್ಗದಲ್ಲಿ ದೋಷ-ಅದೋಷಗಳ ವರ್ಣನ, ನಿರ್ಣಯ, ಶಬ್ದಾಲಂಕಾರ ವರ್ಣನ ನಿರ್ಣಯ, ಅರ್ಥಾಲಂಕಾರ ಪ್ರಕರಣ – ಎಂಬ ಮೂರು ಪರಿಚ್ಛೇದಗಳಿವೆ. ಕಾವ್ಯದೋಷಗಳನ್ನು ವಿವರಿಸುವಲ್ಲಿ ವಿಶೇಷವಾಗಿ ಭಾಮಹನನ್ನೂ, ಶಬ್ದಾಲಂಕಾರ-ಅರ್ಥಾಲಂಕಾರಗಳನ್ನು ನಿರೂಪಿಸುವ ಪ್ರಕರಣಗಳಲ್ಲಿ ಸಾಮಾನ್ಯವಾಗಿ ದಂಡಿಯನ್ನೂ ಶ್ರೀವಿಜಯನು ಅನುಸರಿಸಿದ್ದಾನೆ. ಗುಣದೋಷಗಳನ್ನು ವಿವರಿಸುವಲ್ಲಿ ಕನ್ನಡ ನುಡಿಯ ಜಾಯಮಾನವನ್ನೂ ಕನ್ನಡ ಕಾವ್ಯ ರಚನೆಯನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸಂಸ್ಕೃತ ಅಲಂಕಾರಿಕರು ಹೇಳಿರುವ ಲಕ್ಷಣಗಳನ್ನು ಕನ್ನಡಕ್ಕೆ ಹೊಂದಿಸಿ ಹೇಳಿದ್ದಾನೆ. ಕೆಲವು ಸಂದರ್ಭಗಳಲ್ಲಿ ಸ್ವತಂತ್ರವಾಗಿ ಆಲೋಚನೆ ಮಾಡಿ ಲಕ್ಷಣಗಳನ್ನು ಹೇಳಿದ್ದಾನೆ. ತಾನು ತಿಳಿಸುವ ವಿಚಾರಗಳು ಓದುಗರ ಮನಸ್ಸಿಗೆ ಚೆನ್ನಾಗಿ ನಾಟಬೇಕೆಂಬ ಉದ್ದೇಶದಿಂದ ಅವುಗಳನ್ನು ದೃಷ್ಟಾಂತ ಮತ್ತು ಹೋಲಿಕೆಗಳ ಮೂಲಕ ವಿಶದಪಡಿಸುತ್ತಾನೆ; ಸೊಗಸುಗೊಳಿಸುತ್ತಾನೆ.

ಅಲಂಕಾರಗಳ ಉದಾಹರಣೆಗಳು ಅವು ಸಂಸ್ಕೃತ ಮೂಲಗಳ ಭಾಷಾಂತರವಾಗಿರಲಿ, ಸ್ವಂತದವಾಗಿರಲಿ – ಸಾಧಾರಣವಾಗಿ ಕಾವ್ಯಗಳಲ್ಲಿ ಬರುವಂಥ ವರ್ಣನಾ ಪದ್ಯಗಳಂತೆ ಸುಂದರವಾಗಿಯೇ ಇದೆ ಎಂಬುದಕ್ಕೆ ಇಲ್ಲಿ ನಾವು ಆಯ್ದುನೋಡುತ್ತಿರುವ ಪದ್ಯಗಳೇ ಸಾಕ್ಷಿ. ಕೆಲವು ಸಂದರ್ಭಗಳಲ್ಲಿ ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿರಬಹುದು. ಈ ಮಾತು ಪೂರ್ವದ ಎಲ್ಲ ಕನ್ನಡ ಕವಿಗಳಿಗೂ ಅನ್ವಯಿಸುತ್ತದೆ. ಒಟ್ಟಿನ ಮೇಲೆ, ಕವಿರಾಜಮಾರ್ಗ ಲಕ್ಷಣ ಗ್ರಂಥವಾದರೂ ಅಲ್ಲಲ್ಲಿ ಕಾವ್ಯ ಗುಣದಿಂದಲೂ ಕೂಡಿದೆ."[೨೭]

ಕವಿರಾಜಮಾರ್ಗದ ಆರಂಭದ ಅಧ್ಯಯನಕಾರರು ಮೇಲಿನಂತೆ ಮತ್ತೆ ಮತ್ತೆ ಪುನರಾವರ್ತಿಸುತ್ತಿರುವುದು ಸಂಸ್ಕೃತಕ್ಕೆ ಹೊಂದಿಕೊಂಡಂತೆ ಕನ್ನಡವನ್ನು ಕಟ್ಟುವ ಕೆಲಸ ಮಾಡಲಾಗಿದೆ ಎಂಬ ನಿರ್ಣಯಕ್ಕೆ ಬರುತ್ತಾರೆ. ಆದರೆ ಅದಕ್ಕೆ ಪರ್ಯಾಯವಾಗಿ ಕಟ್ಟುವ ಕೆಲಸಗಳೆಡೆಗೆ ದಾರಿತೆರೆಯುವ ಅವಕಾಶಗಳೇ ಕನ್ನಡದಲ್ಲಿ ಸೃಷ್ಟಿಯಾಗಲಿಲ್ಲ. ಅದಕ್ಕೆ ಕನ್ನಡದ ಮೊಟ್ಟಮೊದಲ ಗ್ರಂಥ ಪ್ರಕಟಣೆಯಾಗಿ ಶತಮಾನ ಕಳೆದರೂ ಕನ್ನಡ ಪರವಾಗಿ ನಡೆದಿರುವ ಅಧ್ಯಯನಗಳು ಬೆರಳೆಣಿಕೆಯಷ್ಟು.

ಕವಿರಾಜಮಾರ್ಗ ಕೃತಿಯು ಕನ್ನಡದ ಆರಂಭಿಕ ಕೃತಿಯಾದರೂ ಇದರಲ್ಲಿ ಮುಖ್ಯವಾಗಿ ಭಾಷಿಕ ಪಲ್ಲಟಗಳನ್ನು ನಿರ್ವಹಿಸುವ ಪ್ರಯತ್ನವಿದೆ. ಕನ್ನಡದ ಪದ ಪ್ರಯೋಗ, ಬಳಕೆ, ಶಬ್ದೋತ್ಪತ್ತಿ ಮೊದಲಾದ ಲಕ್ಷಣಗಳನ್ನು ಆಧರಿಸಿ, ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಅಳವಡಿಸುವ ಸಮಯದಲ್ಲಿ ಇರಬೇಕಾದ ಎಚ್ಚರದ ಕುರಿತು ಶ್ರೀವಿಜಯ ಗಮನ ಸೆಳೆಯುತ್ತಾನೆ. ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಭಾಷೆಯ ಪದಗಳನ್ನು ಕನ್ನಡಿಸಿ ಬಳಸಬೇಕಾದುದನ್ನು ಕಂದ ಪದ್ಯಗಳಲ್ಲಿ ಮಂಡಿಸುತ್ತಾನೆ. ಅದಕ್ಕೆ ಅವನು ಅನುಸರಿಸುವ ತಂತ್ರ ಮಾಡಬಹುದಾದ ಮತ್ತು ಮಾಡಬಾರದ ಉದಾಹರಣೆಗಳನ್ನು (Do's and Don't) ನೀಡುತ್ತಾನೆ. ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆಯಲ್ಲಿ ಎದುರಾಗುವ ಅಪಾರ್ಥಗಳನ್ನು, ಅನರ್ಥಗಳನ್ನು ಉದಾಹರಿಸುವ ಮೂಲಕ ಅವನು ಸಂಸ್ಕೃತದಿಂದ ಕಾಯ್ದುಕೊಳ್ಳಬೇಕಾದ ಅಂತರವನ್ನು ಪ್ರತಿಪಾದಿಸುತ್ತಾನೆ.

ರಹಮತ್ ತರೀಕೆರೆಯವರು ಸಂಪಾದಿಸಿರುವ ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ ಕೃತಿಯ ಮುನ್ನುಡಿಯಲ್ಲಿ ಕನ್ನಡ ಮತ್ತು ಇಂಗ್ಲಿಷ್ ಸಂಬಂಧದ ಕುರಿತು ಎಂ. ಎಂ. ಕಲಬುರ್ಗಿಯವರು ಹೀಗೆ ಹೇಳುತ್ತಾರೆ. "ಸಂಸ್ಕೃತಿ ಎಂಬುದು ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ. ಕನ್ನಡಿಗರ ಇಂತಹ ಜೀವನ ಪದ್ಧತಿಗೆ ಸಾವಿರ ಸಾವಿರ ವರ್ಷಗಳ ಇತಿಹಾಸವಿದೆ. ತನ್ನ ಆಯುರ್ಮಾನದಲ್ಲಿ ಆರ್ಯ – ಆಂಗ್ಲ ಸಂಸ್ಕೃತಿಗಳನ್ನು ಜೀರ್ಣಿಸಿಕೊಳ್ಳುತ್ತ ಬಂದ ಕನ್ನಡ ಸಮಾಜ, ಉದ್ದಕ್ಕೂ ದ್ವಿಭಾಷಾ ಸಂದರ್ಭದಲ್ಲಿ ಬದುಕು ಮಾಡಿದೆ. ಹಿಂದಿನದು ಕನ್ನಡ – ಸಂಸ್ಕೃತ ದ್ವಿಭಾಷಾ ಸಂದರ್ಭ. ಇಂದಿನದು ಕನ್ನಡ – ಇಂಗ್ಲೀಷ್ ದ್ವಿಭಾಷಾ ಸಂದರ್ಭ, ಗ್ರಂಥಸ್ಥ ಭಾಷೆಯಾದ ಸಂಸ್ಕೃತಕ್ಕಿಂತ ಜೀವಂತ ಭಾಷೆಯಾದ ಇಂಗ್ಲೀಷ್ ಬೆಳಕಾಗುತ್ತಲೇ ಬೆಂಕಿಯಾಗಬಹುದೇ? ಎಂಬ ಭಯ ನಮ್ಮಲ್ಲಿ ಹುಟ್ಟಿದೆ. ಹೆಚ್ಚಿನದಾಗಿ ಆಂಗ್ಲ ಜೀವನಶೈಲಿ ನಮ್ಮ ಜೀವನಾಡಿಗಳನ್ನು ದಿನೇ ದಿನೇ ನಿಯಂತ್ರಿಸತೊಡಗಿ, ಒಂದು ಬಗೆಯ ಅತಿರೇಕ ಸೃಷ್ಟಿಯಾಗಲಿದೆ."[೨೮]

ಎಂ. ಎಂ. ಕಲಬುರ್ಗಿಯವರ ಪ್ರಕಾರ, ಕನ್ನಡ ಆರಂಭದಿಂದಲೂ ಸಂಸ್ಕೃತದೊಂದಿಗೆ ಮತ್ತು ಆಧುನಿಕ ಸಂದರ್ಭದಲ್ಲಿ ಇಂಗ್ಲಿಷ್‌ನೊಂದಿಗೆ ದ್ವಿಭಾಷಾ ಸಂದರ್ಭದಲ್ಲೇ ಕಾಲ ಸವೆಸಿದೆ. ಆದರೆ, ಅವರಿಗೆ ಇಂಗ್ಲಿಷ್ ಬಗೆಗೆ ಆತಂಕವಿರುವುದು ಅವರ ಮಾತುಗಳಿಂದ ಸ್ಪಷ್ಟವಾಗುತ್ತದೆ. ಬ್ರಿಟಿಷರ ಜೀವನಶೈಲಿಯ ಅನುಕರಣೆಯ ಕಾರಣದಿಂದಾಗಿ ಕನ್ನಡವನ್ನು ಇಂಗ್ಲಿಷ್ ಭಾಷೆ ನಿಯಂತ್ರಿಸುವ ಅತಿರೇಕ ಸೃಷ್ಟಿಯಾಗಲಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಇದು ಬದಲಾದ ಕಾಲಘಟ್ಟದಲ್ಲಿ ಭಾಷೆಗೆ ಎದುರಾಗಿರುವ ಸಮಸ್ಯೆಯಾಗಿದೆ. ಇದಕ್ಕೆ ಮೋಹನದಾಸ್ ಕರಮ್‌ಚಂದ್ ಗಾಂಧಿಯವರ ಪರಿಹಾರೋಪಾಯವನ್ನೂ ಅವರೇ ಸೂಚಿಸುತ್ತಾರೆ.

ಎಂ. ಎಂ. ಕಲಬುರ್ಗಿಯವರು "ಗಾಂಧೀಜಿಯವರು ಈ ಅತಿರೇಕವನ್ನು ಬಹಳ ಹಿಂದೆಯೇ ಊಹಿಸಿ, 'ಸ್ವದೇಶೀ ಚಳುವಳಿ'ಯನ್ನು ಕೈಗೆತ್ತಿಕೊಂಡಿದ್ದರು. ಈ ಮತ್ತು ಇಂಥ ದೇಶಿ ಚಿಂತನೆಗಳ ಆದರ್ಶದಲ್ಲಿ ಕನ್ನಡ ವಿಶ್ವವಿದ್ಯಾಲಯ ಮೊದಲು ಮಾಡಬೇಕಾದ ಕೆಲಸವೆಂದರೆ ವಿಸ್ಮೃತಿಯ ಸಾಗರದಲ್ಲಿ ಮುಳುಗಿ ಹೋಗಿರುವ ನಮ್ಮ ಪಾರಂಪರಿಕ ಕ್ರಿಯೆ – ಪ್ರತಿಕ್ರಿಯೆ ರೂಪದ 'ಸ್ವದೇಶಿ ಸತ್ಯ'ಗಳನ್ನು ಶೋಧಿಸುವುದು. ಬಳಿಕ ಆ ಶೋಧದಲ್ಲಿ ಸೇರಿಕೊಂಡಿರುವ ದೋಷಗಳನ್ನು ದೂರ

ಸರಿಸಿ ಗುಣಾಂಶಗಳನ್ನು ಗುರುತಿಸುವ, ಜೊತೆಗೆ ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯಸಂಸ್ಕೃತಿಯಿಂದ ಎಚ್ಚರ ವಹಿಸಿ ತುಂಬಿಕೊಳ್ಳುವ ಕೆಲಸ ನಮ್ಮಲ್ಲಿ ನಡೆಯಬೇಕಾಗುತ್ತದೆ. ಒಟ್ಟಾರೆ ಅನ್ಯಸಂಸ್ಕೃತಿಗಳ ಸಹಯೋಗದಲ್ಲಿಯೂ 'ಕನ್ನಡವು ಕನ್ನಡವ ಕನ್ನಡಿಸುತಿರಬೇಕು' ಎಂಬಂತೆ ನಾವು ಕನ್ನಡವನ್ನು ಸ್ಥಾನಿಕದಲ್ಲಿ ಬದುಕಿಸಬೇಕಿದೆ. ಜಾಗತಿಕದಲ್ಲಿ ಬೆಳೆಸಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ಕನ್ನಡತ್ವವನ್ನು ನಾಶಮಾಡಿಕೊಂಡು ಜಾಗತಿಕವಾಗುವುದು ತಪ್ಪಿ, ಕನ್ನಡವೂ ಜಾಗತಿಕವಾಗುತ್ತದೆ. ಜಾಗತಿಕವಾಗುವುದೆಂದರೆ ಸ್ಥಾನಿಕದ ನಿರಾಕರಣೆಯಲ್ಲವೆಂಬ ಸತ್ಯ ಸ್ಥಾಪನೆಗೊಳ್ಳುತ್ತದೆ."[೨೯] ಎನ್ನುತ್ತಾರೆ. ಅವರ ಪ್ರಕಾರ, ಸ್ಥಳೀಯತೆಯ ನಿರಾಕರಣೆಯ ಮೂಲಕ ಜಾಗತಿಕವಾಗುವುದರ ಬದಲಿಗೆ, ಸ್ಥಳೀಯವಾಗಿ ಕನ್ನಡವನ್ನು ಬೆಳೆಸುವ ಕೆಲಸ ಆಗಬೇಕಿದೆ. ಈ ಮಹತ್ವದ ಕೆಲಸವನ್ನು ಡಿ. ಎನ್. ಶಂಕರ ಬಟ್ಟ, ಕೆ. ವಿ. ನಾರಾಯಣ ಮೊದಲಾದವರು ನಡೆಸುತ್ತಿದ್ದಾರೆ. ಈ ಕುರಿತ ವಿಚಾರಗಳನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲಾಗುವುದು.

ಕವಿರಾಜಮಾರ್ಗ ಕಾಲದ ಕನ್ನಡ–ಸಂಸ್ಕೃತ ಸಂಬಂಧದ ಕುರಿತು ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯ ಹೀಗಿದೆ.

"ಒಂಬತ್ತನೇ ಶತಮಾನದ 'ಕವಿರಾಜಮಾರ್ಗ'ದಲ್ಲೇ ಸಂಸ್ಕೃತವು ಕನ್ನಡದಲ್ಲಿ ಹದವಾಗಿ ಬೆರೆತಾಗ ಆದರ್ಶ ಶೈಲಿಯೊಂದು ಮೂಡುವ ಆಶಯವಿದೆ. ಪಂಪ ಕವಿ ಮಾರ್ಗ ಮತ್ತು ದೇಸಿಗಳ ಬಳಕೆಯ ಮೂಲಕ ತನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸಿದ್ದನ್ನೂ ಇಲ್ಲಿ ನೆನೆಯಬಹುದಾಗಿದೆ. ಪಂಪಕವಿಯು ಮಾರ್ಗ ದೇಸಿಗಳ ಸಮನ್ವಯಕಾರನೆಂದು ನಾನು ಭಾವಿಸುವುದಿಲ್ಲ. ಪ್ರಬಲವಾಗಿದ್ದ ಮಾರ್ಗ (ಸಂಸ್ಕೃತಕ್ಕೆ) ದೇಸಿಯನ್ನು ಮುಖಾಮುಖಿಯಾಗಿಸುತ್ತಲೇ ಅನುಸಂಧಾನಿಸಿದ ಪ್ರಬುದ್ಧ ಪ್ರಯೋಗಶೀಲ ಕವಿಯೆಂದು ತಿಳಿಯುತ್ತೇನೆ"[೩೦] ಎನ್ನುತ್ತಾರೆ. ಈ ಮೂಲಕ ಕವಿರಾಜಮಾರ್ಗಕಾರನಾದ ಶ್ರೀವಿಜಯನಿಗೂ ಮತ್ತು ನಂತರದ ಆದಿಕವಿ ಎಂದು ಹೆಸರಾದ ಪಂಪನಿಗೂ ಇರುವ ವ್ಯತ್ಯಾಸವನ್ನು ಬರಗೂರು ರಾಮಚಂದ್ರಪ್ಪನವರು ಗುರುತಿಸುತ್ತಾರೆ. ಶ್ರೀವಿಜಯನದು ಕನ್ನಡ ಸಂಸ್ಕೃತ ಬಳಕೆಯ ನಡುವೆ ಇರಬೇಕಾದ ಎಚ್ಚರದ ಕುರಿತ ನಡೆಯಾದರೆ, ಪಂಪನದು ಎರಡೂ ಭಾಷೆಗಳ ನಡುವೆ ನಡೆಯಬೇಕಾದ ಅನುಸಂಧಾನದ ಹಾದಿಯಾಗಿದೆ ಎನ್ನುವುದು ಮೇಲಿನ ಅಭಿಪ್ರಾಯವಾಗಿದೆ.

ಪಂಪನ ವಿಕ್ರಮಾರ್ಜುನವಿಜಯ ಹಾಗೂ ಆದಿಪುರಾಣಂ ಮೊದಲಾದ ಆರಂಭದ ಕನ್ನಡ ಮಹಾಕಾವ್ಯಗಳಲ್ಲಿ ಕೂಡ ಕನ್ನಡ ಮತ್ತು ಸಂಸ್ಕೃತಗಳ ನಡುವೆ ಇರಬೇಕಾದ ಅಂತರಗಳ ಕುರಿತು ಮಹತ್ವದ ವಿಚಾರಗಳನ್ನು ಚರ್ಚಿಸಲಾಗಿದೆ. ಮಾರ್ಗದೊಳ್ ಪೊಕ್ಕು ದೇಸಿಯೊಳ್ ತಗುಳ್ವುದು ಎಂದು ಪಂಪ ಹೇಳುತ್ತಾನೆ. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಗಳ ನಡುವೆ ಇರಬೇಕಾದ ಅಂತರವನ್ನು ಸೂಕ್ಷ್ಮವಾಗಿ ಪಂಪ ಮಂಡಿಸಿದ್ದಾನೆ. ಆದರೆ, ಶ್ರೀವಿಜಯನು ಹೇಳಿದಂತೆ ಸಂಸ್ಕೃತವನ್ನು ಸಂಪೂರ್ಣವಾಗಿ ಕೈಬಿಡುವ ವಿಚಾರದಲ್ಲಿ ನಂತರದ ಕವಿಗಳು ಗಂಭೀರವಾಗಿ ಪರಿಗಣಿಸಿಲ್ಲ.

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊ(ಕ್ಕು) ಮಾರ್ಗದೊಳೆ ತಳ್ಪುದು ತಳ್ತೊಡೆ ಕಾವ್ಯಬಂಧಮೊ

ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಜೆಯಿಂ ಬಟಿಲ್ದು ತುಂ

ಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (೧-೮)

ಕಾವ್ಯವು ಹೊಸಬಗೆಯಾಗಿರಬೇಕು. ಮೃದುವಾದ ಶಬ್ದಗಳ ಜೋಡಣೆಯಿಂದ ಕೂಡಿದ್ದು, ಅಚ್ಚಗನ್ನಡ ಶೈಲಿಯನ್ನು ಒಳಗೊಂಡಿರಬೇಕು. ಸಂಸ್ಕೃತ ಶೈಲಿಯೊಡನೆ ಹೊಂದಿಕೊಂಡಿರುವಂತಿರಬೇಕು. ಹೀಗೆ ಹೊಂದಿಕೊಂಡಿದ್ದಲ್ಲಿ ವಸಂತ ಕಾಲದಲ್ಲಿ ಮಾವಿನ ಮರ ಕೆಂಪಾದ ಎಳೆಯ ಚಿಗುರು ಮತ್ತು ಹೂವುಗಳಿಂದ ಜೋತುಬಿದ್ದಿದ್ದು, ದುಂಬಿಗಳಿಂದ ಸುತ್ತುವರೆದಿರುವ ಕೋಗಿಲೆಯ ಇಂಚರದಿಂದ ಹೊಳೆಯುವಂತೆ ಶೋಭಿಸುವುದು ಎಂದು ಪಂಪ ಹೇಳುತ್ತಾನೆ.

"ರಸ ಭಾವಂ ಗಮಕಂ ಕಾ

ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ

ಕುಸುಜೆಯ ಬಗೆಯಿಂದಿನಿರತಜ್ಪೊಡೆ

ಳೆಸೆಯದ ಕೃತಿ ಬಗೆದು ನೋಜ್ಪೊಡೆ ಜಗದದೊಳ್" (೧-೪೦)

ಎಂಬ ಭಾಗದಲ್ಲಿ ೧೨ನೇ ಶತಮಾನದ ಕವಿ ನಯಸೇನನು ಕನ್ನಡ ಮತ್ತು ಸಂಸ್ಕೃತದ ಕುರಿತು ಮಹತ್ವದ ಸಂಗತಿಗಳನ್ನು ಹೇಳುತ್ತಾನೆ. ಗಾದೆ ಮಾತು, ದೇಸಿ ಮತ್ತು ಮಾರ್ಗಗಳನ್ನು ಹೊಂದಿಸಿ ಹೊಸ ನುಡಿಗಟ್ಟಿನ ಕಲಾತ್ಮಕ ಶೈಲಿಯನ್ನು ನಿರ್ಮಿಸಿಕೊಂಡು, ರಸಭಾವಗಳೊಡನೆ ಗಮಕವನ್ನನುಸರಿಸಿ ಕೃತಿ ರಚಿಸಬೇಕು ಎನ್ನುವ ಅವನು, ವಿಚಾರಿಸಿ ನೋಡಿ, ಮೇಲಿನ ಲಕ್ಷಣಗಳಿಲ್ಲದ ಕೃತಿಗೆ ಮನ್ನಣೆ ನೀಡಬಾರದು ಎಂದು ಅಭಿಪ್ರಾಯಪಡುತ್ತಾನೆ.

"ಪೊಸಗನ್ನಡದಿಂ ವ್ಯಾವ

ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ

ತಿಸಿ ಕೂಡಲಾಜಿದಕ್ಕಟ

ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ" (೧-೪೧)

ಹೊಸಗನ್ನಡದಿಂದ ತನ್ನ ಸತ್ಕೃತಿಯನ್ನು ಕನ್ನಡ ಶೈಲಿಯಲ್ಲಿ ಕಟ್ಟುತ್ತೇನೆ ಎನ್ನುವವರು ಸೂಕ್ತ ಶೈಲಿಯನ್ನು ರೂಪಿಸಿಕೊಳ್ಳಲಾಗದೆ ಸಂಸ್ಕೃತದ ಸಮಾಸಗಳನ್ನು ಅನುಸರಿಸುವುದರ ಕುರಿತು ನಯಸೇನ ತಕರಾರು ತೆಗೆದಿದ್ದಾನೆ.

"ಸಕ್ಕದಮಂ ಪೇಟ್ಟೊಡೆ ನೆಱೆ

ಸಕ್ಕದಮಂ ಪೇಟ್ಗೆ ಸುದ್ಧಗನ್ನಡದೊಳ್ತಂ

ಇಕ್ಕುವುದೇ ಸಕ್ಕದಮಂ

ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ"[೩೧] (೧-೪೨)

ಮೇಲಿನ ಪದ್ಯದಲ್ಲಿ ನಯಸೇನನು ಸಂಸ್ಕೃತ ಮತ್ತು ಕನ್ನಡವನ್ನು ಬೆರೆಸಬಾರದು ಎಂದು ಅಭಿಪ್ರಾಯಪಡುತ್ತಾನೆ. ಅವನ ಪ್ರಕಾರ ಶುದ್ಧಗನ್ನಡದಲ್ಲಿ ಸಂಸ್ಕೃತವನ್ನು ಬೆರೆಸಿದರೆ, ತುಪ್ಪದಲ್ಲಿ ಎಣ್ಣೆಯನ್ನು ಮಿಶ್ರಣ ಮಾಡಿದಂತೆ. ಈ ರೀತಿ ಕನ್ನಡದಲ್ಲಿ ದೇಸಿ ಸೊಗಡಿನ ಕುರಿತು ಅವನು ಕಠಿಣ ನಿಲುವನ್ನು ತಾಳುತ್ತಾನೆ.

"ನಯಸೇನ ಸಂಸ್ಕೃತ-ಕನ್ನಡ ಮಿಶ್ರಿತ ಮಾಡಿ ಕಾವ್ಯ ರಚಿಸುವುದು ಬೇಡ ಎಂಬ ನಿರ್ಣಯಕ್ಕೆ ಬರುತ್ತಾನೆ. ಹಾಗೆಯೇ ಕನ್ನಡ ಕಾವ್ಯ ರಚಿಸುವುದಾದರೆ ಸಂಸ್ಕೃತ ಪದಗಳನ್ನು ಬಳಸದೆ ಶುದ್ಧ ಕನ್ನಡ ಪದಗಳನ್ನು ಬಳಸಿ ಕಾವ್ಯ ರಚಿಸಲೆಂದು ಗುಡುಗುತ್ತಾನೆ. ನಯಸೇನನ ಈ ಮಾತು ಗಟ್ಟಿಗೊಳ್ಳುವುದು ಐವತ್ತು ವರ್ಷಗಳ ನಂತರ ಅದೂ ವಚನ ಸಾಹಿತ್ಯದ ಮೂಲಕ, ಹೀಗೆ ವಚನ ಸಾಹಿತ್ಯದ ಮೂಲಕ ಸಾಧಿಸಿಕೊಂಡ ಕನ್ನಡ ಭಾಷೆಯ ಸತ್ವ-ರೂಪ-ಸ್ವರೂಪದಲ್ಲೂ ಕನ್ನಡ ಭಾಷೆಯು ತನ್ನ ಪ್ರಧಾನತೆಯನ್ನು ಸ್ಥಾಪಿಸಿಕೊಂಡಿತು. ಇದಕ್ಕೆ ಪರ್ಯಾಯವಾಗಿ ಪಂಪನ ಕಾವ್ಯಭಾಷೆಯ ಧೋರಣೆಯೇ ಕಾರಣವೆಂದರೆ ತಪ್ಪಾಗಲಾರದು"[೩೨] ಎಂದು ಕೆ. ಇ. ರಾಧಾಕೃಷ್ಣ ಅವರು ಅಭಿಪ್ರಾಯಪಡುತ್ತಾರೆ. ಒಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಗಳನ್ನು ಬೆರೆಸಿ ಬರೆಯುವುದರ ಕುರಿತು ಸಾಕಷ್ಟು ಚರ್ಚೆಗಳು ಕನ್ನಡದಲ್ಲಿ ನಡೆದಿರುವುದಕ್ಕೆ ಅನೇಕ ಸಾಕ್ಷಿಗಳು ಸಿಗುತ್ತವೆ. ಅವುಗಳ ಪೈಕಿ ನಯಸೇನನದು ಕೂಡ ಕಡುದಾರಿ ಎಂಬುಂದಂತೂ ಸ್ಪಷ್ಟವಾಗುತ್ತದೆ. ಇನ್ನೊಂದು ಮಹತ್ವದ ಸಂಗತಿಯೆಂದರೆ ನಯಸೇನನ ಕನ್ನಡ - ಸಂಸ್ಕೃತ ವಾಗ್ವಾದ ಮುಂದಿನ ದಿನಗಳಲ್ಲಿ ವಚನ ಚಳವಳಿಯ ರೂಪದಲ್ಲಿ ಮಾರ್ದನಿಸಿದೆ.

"ಸಂಸ್ಕೃತ ಸವಾರಿಗೆ ತೀವ್ರ ಪ್ರತಿಕ್ರಿಯೆ ವ್ಯಕ್ತವಾದದ್ದು ಹನ್ನೆರಡನೇ ಶತಮಾನದ ಮೊದಲ ಭಾಗದಲ್ಲಿದ್ದ ನಯಸೇನನಿಂದ, ಸಂಸ್ಕೃತ ಸವಾರಿಗೆ ತೀವ್ರ ಪ್ರತಿರೋಧ ತೋರಿಸುತ್ತ 'ಸಂಸ್ಕೃತದಲ್ಲಿ ಬರೆಯುವವರು ಅದರಲ್ಲೂ ಬರೆಯಲಿ. ಕನ್ನಡದಲ್ಲಿ ಬರೆಯುವವರು ಪೂರ್ತಿ ಕನ್ನಡದಲ್ಲಿ ಬರೆಯಲಿ. 'ಬೆರೆಸಲ್ಕೆ ತಕ್ಕುದೆ ಘೃತಮುಮಂ ತೈಲಮುಮಂ' ಎಂದು ಪ್ರಶ್ನಿಸುವ ಮೂಲಕ ಪ್ರತಿಭಟನೆಯನ್ನು ದಾಖಲಿಸಿದ"[೩೩] ಎನ್ನುವುದು ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯವಾಗಿದೆ. ನಯಸೇನ ಕನ್ನಡ ಮತ್ತು ಸಂಸ್ಕೃತ ಕಾವ್ಯ ರಚನೆ ಕುರಿತು ಮಹತ್ವದ ಅಂಶಗಳನ್ನು ಮಂಡಿಸಿದ್ದಾನೆ. ಎರಡೂ ಭಾಷೆಗಳಲ್ಲಿ ಬರೆಯುವುದಕ್ಕೆ ನಯಸೇನನಿಗೆ ಯಾವುದೇ ತಕರಾರಿಲ್ಲ. ಆದರೆ, ಕನ್ನಡದಲ್ಲಿ ಸಂಸ್ಕೃತವನ್ನು ಬೆರೆಸಿ ಬರೆಯುವುದಕ್ಕೆ ಅವನ ತಕರಾರಿದೆ. ತನ್ನ ಧರ್ಮಾಮೃತದಲ್ಲಿ ತುಪ್ಪ (ಕನ್ನಡ) ಮತ್ತು ಎಣ್ಣೆಯನ್ನು (ಸಂಸ್ಕೃತ)ವನ್ನು ಬೆರೆಸಬಾರದು ಎನ್ನುವುದು ಅವನ ಸ್ಪಷ್ಟ ಅಭಿಪ್ರಾಯವಾಗಿದೆ.

"ಪ್ರಬಲವಾದ ಸಂಸ್ಕೃತ ಮತ್ತು ಸಂಸ್ಕೃತಿ, ದ್ರಾವಿಡ ಭಾಷೆಯಾದ ಕನ್ನಡದ ಮೇಲೆ ಪ್ರಭಾವ ಬೀರಿದ್ದಕ್ಕೆ ಚರಿತ್ರೆಯ ಒತ್ತಡಗಳು ಕಾರಣವಾಗಿವೆ. ಈ ಒತ್ತಡದ ಸುಳಿಯಲ್ಲಿ ಸಿಕ್ಕಿದ ಕನ್ನಡ ಭಾಷೆ ನಮ್ಮ ಜನತೆಯ ಭಾಷೆ ಮೂಲೆಗುಂಪಾದೀತೆಂಬ ಆತಂಕ ಮೂಡಿದಾಗ, ನಮ್ಮ ಕೆಲ ಕವಿಗಳು ತೋರಿಸಿದ ಪ್ರತಿಕ್ರಿಯೆಗಳು ಕನ್ನಡಪರ ದನಿಗಳಾಗಿ ಮಹತ್ವ ಪಡೆದಿವೆ"[೩೪] ಎಂದು ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಡುತ್ತಾರೆ. ಇದರಲ್ಲಿ ಮುಖ್ಯವಾಗಿ ಶ್ರೀವಿಜಯ, ಪಂಪ, ಆಂಡಯ್ಯ, ನಯಸೇನರಂತ ಕನ್ನಡ ಕವಿಗಳು ಸಂಸ್ಕೃತಕ್ಕೆ ಯಾವ ರೀತಿ ಒಡ್ಡು ನಿರ್ಮಿಸಬೇಕು

ಎಂಬುದರ ಕುರಿತು ತಮ್ಮ ಕೃತಿಗಳಲ್ಲಿ ಮಹತ್ವದ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಪಂಪ ಮಾರ್ಗ(ಸಂಸ್ಕೃತ) – ದೇಸಿ(ಕನ್ನಡ)ಯ ನಡುವೆ ಕೊಂಡಿಯಂತೆ ಕಾರ್ಯ ನಿರ್ವಹಿಸಿದ್ದಾನೆ.

"ಮೃಗಯಾವ್ಯಾಜದಿನೊರ್ಮೆ ಶಂತನು ತೊಟಿಲ್ತರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೋಲ್ ಸೋಲ್ತು ಕಂಡೋಲ್ದು ನ
ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀನ್ ಬಾ ಪೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯನಂ ಬೇಡಿರೇ॥" (೧-೭೦)

ಪಂಪನ "ಮೃಗಯವ್ಯಾಜದಿಂ..." ಎಂಬ ಪದ್ಯವು ಸಂಸ್ಕೃತಭೂಯಿಷ್ಠವಾಗಿದ್ದು, ಇಡೀ ಮಹಾಭಾರತವನ್ನು ಒಂದೇ ಪದ್ಯದಲ್ಲಿ ಕಟ್ಟಿಕೊಡಲು ಯತ್ನಿಸಿದೆ. ಮತ್ತು ಇದರಲ್ಲಿ ಯಶಸ್ವಿಯೂ ಆಗಿದೆ. ಆದರೆ, ಈ ಭಾಗದಲ್ಲಿ ಸಂಸ್ಕೃತದ ಬಳಕೆಯೊಂದಿಗೆ ಕನ್ನಡವನ್ನು ಬಳಸಿರುವ ಅಪರೂಪದ ಭಾಗವಾಗಿದೆ.

ಆದರೆ, ಬಹುತೇಕ ವಚನಕಾರರು ಸಂಸ್ಕೃತವನ್ನು ತ್ಯಜಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಟ್ಟಿದ್ದಾರೆ. ಅವರ ರಚನೆಗಳಲ್ಲಿ ಸರಳ ಕನ್ನಡವನ್ನು ಬಳಸುವ ಯತ್ನವನ್ನು ಗಂಭೀರವಾಗಿ ಮಾಡಲಾಗಿದೆ. ಸಂಸ್ಕೃತದ ಪೆಡಸು ರಚನೆಯ ಕೆಲವು ವಚನಗಳನ್ನು ಹೊರತುಪಡಿಸಿದರೆ, ಬಹುತೇಕ ವಚನಗಳಲ್ಲಿ ತಿಳಿಗನ್ನಡವನ್ನು ಮತ್ತು ಸಂಸ್ಕೃತರಹಿತ ರಚನೆಗಳ ಪ್ರಮಾಣ ಹೆಚ್ಚಿದೆ. ಆದರೆ, ನಂತರ ಮತ್ತೆ ಸಂಸ್ಕೃತದಿಂದ ಸಂಪೂರ್ಣವಾಗಿ ಕನ್ನಡವನ್ನು ಮುಕ್ತಗೊಳಿಸುವ ಕೆಲಸ ವಿರಳವಾಯಿತು. ಮತ್ತೆ ಸಂಸ್ಕೃತ ಪದ, ಪದರಚನೆ, ವಾಕ್ಯ, ವಾಕ್ಯರಚನೆ ಮತ್ತು ವರ್ಣಮಾಲೆಗಳ ಬಳಕೆ ಮುಂದುವರೆಯಿತು.

ಕಳಬೇಡ ಕೊಲಬೇಡ
ಹುಸಿಯ ನುಡಿಯಲು ಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ಕೂಡಲ ಸಂಗಮ ದೇವನೊಲಿಸುವ ಪರಿ

– ಬಸವಣ್ಣ

ಮೇಲಿನಂಥ ವಚನಗಳ ರಚನೆಯಲ್ಲಿ ಸರಳವಾದ ತಿಳಿಗನ್ನಡದಲ್ಲಿ ಮಹತ್ವದ ವಿಚಾರವನ್ನು ಹೇಳಲಾಗಿದೆ. ಶುದ್ಧಿ ಎಂಬ ಪದದಲ್ಲಿರುವ ್ಧ ಒತ್ತನ್ನು ಹೊರತುಪಡಿಸಿ ಸಂಸ್ಕೃತದ ಪದ, ವಾಕ್ಯ, ಆಲೋಚನೆಗಳನ್ನೂ ಒಳಗೊಂಡಂತೆ ಎಲ್ಲವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಇಂಥ ಅನೇಕ ರಚನೆಗಳಿಗೆ ವಚನ ರಚನೆಯ ಕಾಲ ಸಾಕ್ಷಿಯಾಗಿದೆ.

ಪಂಪನ ವಿಕ್ರಮಾರ್ಜುನವಿಜಯ ಹಾಗೂ ಆದಿಪುರಾಣಂ ಮೊದಲಾದ ಆರಂಭದ ಕನ್ನಡ ಮಹಾಕಾವ್ಯಗಳನ್ನು ಕಾವ್ಯಗಳನ್ನು ಸಂಸ್ಕೃತ ಕಾವ್ಯಗಳ ಅನುವಾದವೆಂದು ಬಹುತೇಕರು ಹೇಳಿದ್ದಾರೆ. ಆದರೆ ಇವುಗಳು ಸಂಸ್ಕೃತ ಕಾವ್ಯಗಳ ಯಥಾವತ್ತಾದ ಅನುಕರಣೆಗಳಲ್ಲ. ಬದಲಾಗಿ ಸಂಸ್ಕೃತ ಕಾವ್ಯಗಳ ಜತೆಗೆ ನಡೆಸಿರುವ ಅನುಸಂಧಾನದ ಫಲಿತಗಳು. ಮಾರ್ಗ-ದೇಸಿಯಲ್ಲಾಗಲಿ, ವಸ್ತುಕ-ವರ್ಣಕಗಳ ಕುರಿತ ಚರ್ಚೆಯಲ್ಲಿ ಕೂಡ ಕನ್ನಡದ ಆರಂಭದ ಕೆಲವು ಕವಿಗಳ ಹಾಗೂ ಕನ್ನಡದ ಇತರ ಕಾವ್ಯಗಳನ್ನೂ ಅನುವಾದವೆಂದು ವ್ಯಾಖ್ಯಾನಿಸಲಾಗಿದೆ.

ಮುಂದೆ ವಚನ ಚಳವಳಿ ಅದುವರೆಗಿನ ಕಾವ್ಯದ ವಸ್ತು, ಆಶಯ, ಪ್ರಕಾರ, ಛಂದಸ್ಸು, ಅಭಿವ್ಯಕ್ತಿ ಕ್ರಮಗಳನ್ನೇ ಬಿಟ್ಟುಕೊಟ್ಟು, ಹೊಸದಾಗಿ ಕಟ್ಟುವ ಪ್ರಯತ್ನ ನಡೆಸಿತು. ಇದೇ ಕಾಲಘಟ್ಟದಲ್ಲಿ ಆಂಡಯ್ಯನು ತನ್ನ 'ಕಬ್ಬಿಗರ ಕಾವ'ದಲ್ಲಿ ಸಂಸ್ಕೃತದಿಂದ ಬಿಡುಗಡೆ ಹೊಂದುವ ಪ್ರಯತ್ನವನ್ನು ನಡೆಸಿದ. ಇವುಗಳು ಕನ್ನಡದಲ್ಲಿ ಸಂಸ್ಕೃತದಿಂದ ಬಿಡುಗಡೆಗೆ ನಡೆದಿರುವ ಮಹತ್ವದ ಪ್ರಯತ್ನಗಳಾಗಿವೆ.

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ //೧೮//[೩೫]

ಮೇಲಿನ ಪದ್ಯದಲ್ಲಿ ಸರಳವಾಗಿ ಹಲವು ನಾಲೆಗೆಯುಳ್ಳ ಆ ಆದಿಶೇಷನೇ ಅದರ ಚೆಲುವನ್ನು ಬಣ್ಣಿಸಲಾರ. ಹಾಗಿರುವಾಗ ನರಮಾತ್ರರು ಅದನ್ನು ಏನೆಂದು ಬಣ್ಣಿಸಬಲ್ಲರು ಎಂದು ಪ್ರಶ್ನಿಸಿದ್ದಾನೆ ಜೊತೆಗೆ, ಕನ್ನಡವೆಂಬ ನಾಡು ಮಂದ ಮಾರುತಗಳಿಂದಲೂ, ಹೂಗಳಿಂದ ಕೂಡಿದ ಕೊಳಗಳಿಂದಲೂ, ಹಳ್ಳಿ - ಹೊಲಗದ್ದೆಗಳಿಂದಲೂ ಕೂಡಿ ಚೆಲುವಾಗಿತ್ತು ಎನ್ನುತ್ತಾನೆ. ಆದರೆ, ಇಷ್ಟು ಸರಳವಾಗಿ ಕನ್ನಡದಲ್ಲಿರುವ ರಚನೆಯನ್ನು ವಿವರಿಸಲು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕಬ್ಬಿಗರ ಕಾವಂ ಕಾವ್ಯಂ ಗದ್ಯಾನುವಾದದಲ್ಲಿ ಸಂಸ್ಕೃತದ ಮೊರೆ ಹೋಗಲಾಗಿದೆ.

"ಆ ಭೂಮಿಯನ್ನು ಹೊತ್ತಿರುವ ಆದಿಶೇಷನೂ ಬಣ್ಣಿಸಲಾರನು ಎಂದಮೇಲೆ ಮನುಷ್ಯ ಮಾತ್ರರಾದವರು ಏನೆಂದು ಬಣ್ಣಿಸಬಲ್ಲರು ಎಂಬೊಂದು ಪ್ರಖ್ಯಾತಿಯನ್ನು ಅನ್ವರ್ಥವಾಗಿ ತಾಳಿದ ಕನ್ನಡವೆಂಬ ಆ ನಾಡು ಮಂದ ಮಾರುತದಿಂದಲೂ, ಅರಳಿದ ಹೂಗಳಿರುವ ಸರೋವರಗಳಿಂದಲೂ, ಕೆರೆಗಳಿಂದಲೂ, ಚಿಕ್ಕಚಿಕ್ಕ ಹಳ್ಳಿಗಳಿಂದಲೂ ಹೊಲಗಳಿಂದಲೂ ಚೆಲುವಾಗಿತ್ತು."[೩೬] ಎಂದು ಅನುವಾದಿಸಿದ್ದಾರೆ. ಇಲ್ಲಿ ಆಂಡಯ್ಯ ಬಳಸದ ಸಂಸ್ಕೃತ ಶಬ್ದಗಳನ್ನು ಬಳಸಲಾಗಿದೆ. ಈ ಮೂಲಕ ಕನ್ನಡದ ಮಹತ್ವದ ಕೃತಿಯೊಂದರ ಕನ್ನಡ ಅನುವಾದದ ಸಂದರ್ಭದಲ್ಲೂ ಸಂಸ್ಕೃತದ ಮೊರೆಹೋದ ಉದಾಹರಣೆಗಳಿವೆ. ಮೇಲಿನ ಅನುವಾದದಲ್ಲಿ ಆದಿಶೇಷ, ಪ್ರಖ್ಯಾತಿ, ಅನ್ವರ್ಥ ಪದಗಳಲ್ಲಿ ಸಂಸ್ಕೃತ ರಚನೆಗಳು ಇಣುಕಿವೆ.

ಕನ್ನಡದೊಳ್ಪಿನ ನುಡಿಯಂ
ಮುನ್ನಿನದರೊಳೆ ನೋಡಿ ತಿಳಿದುಕೊಳ್ವುದು ಚದುರಂ
ರನ್ನದ ಕನ್ನಡಿಯಂ ನಲ
ವಿನ್ನೋಡಿದವಂತೆ ಕುಂದೇನಾದಾಪುದೇ[೩೭]

ಎಂದು ದಿಟ್ಟತನದಿಂದ ಸಂಸ್ಕೃತ ಪದಗಳನ್ನು ಬಳಸದೆ ಅಚ್ಚ ಕನ್ನಡದಲ್ಲೇ ಕಾವ್ಯವನ್ನು ಬರೆಯುತ್ತೇನೆ ಎಂದು ಅವನು ಪಣ ತೊಡುತ್ತಾನೆ.

ಸೊಗಯಿಪ ಸಕ್ಕದಂಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಳಲಾರರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಬಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ[೩೮]

ಸಕ್ಕದ(ಸಂಸ್ಕೃತ) ಪದಳಿಲ್ಲದೆ ಅಚ್ಚಕನ್ನಡದಲ್ಲಿ ಕಾವ್ಯವನ್ನು ರಚಿಸಲಾರರು ಎಂದು ಕಬ್ಬಿಗರ (ಕವಿ) ಮೇಲೆ ಅಪವಾದ ಬಂದಾಗ, ಹಿಂದಿನವರಾದ (ಪ್ರಸಿದ್ಧರಾದ) ಪಂಪ, ರನ್ನ ಮೊದಲಾದವರು ಸಕ್ಕದದ ನೆರವಿಲ್ಲದೆ ಕನ್ನಡದಲ್ಲಿ ಕಬ್ಬವನ್ನು ರಚಿಸಬಲ್ಲವರಾದರೂ ತನ್ನಂತೆ ಮನಮುಟ್ಟುವಂತೆ, ಮನಸೂರೆಗೊಳ್ಳುವಂತೆ ಸೊಗಸಾಗಿ ಕಬ್ಬವನ್ನು ಬರೆಯುವರು ಯಾರು ಇಲ್ಲ ಎಂದು ಆಂಡಯ್ಯ ಗರ್ವದಿಂದ ಹೇಳಿಕೊಂಡಿದ್ದಾನೆ.

ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೆಂದಚ್ಚಗನ್ನಡಂ ಬಿಗಿ
ವೊಂದಿರೆ ಕಬ್ಬಿಗರ ಕಾವನೊವಿಂದೊರೆದಂ[೩೯]

ಅದಕ್ಕಾಗಿಯೇ ಅವರ ಬಯಕೆಯನ್ನು ಸಲಿಸಲು (ಪೂರೈಸಲು), ಕಬ್ಬಿಗರ ಮೇಲೆ ಎದುರಾಗಿರುವ ಅಪವಾದವನ್ನು ಹೋಗಲಾಡಿಸಲು ತಾನು ಪಣತೊಟ್ಟು 'ಕಬ್ಬಿಗರ ಕಾವಂ' ಎಂಬ ಮಹಾಕಾವ್ಯವನ್ನು ಬರೆಯಲು ಮುಂದಾದೆನು ಎಂದು ಅವನು ಹೇಳಿಕೊಂಡಿದ್ದಾನೆ. ಜೊತೆಗೆ, ಕನ್ನಡದ ಒಲವಿನ ಈ ನೆಗಳ್ತು (ರಚನೆ) ಕನ್ನಡದೊಳ್ಪಿನ ನುಡಿಯಂ ಮುನ್ನಿನವರೊಳೆ ನೋಡಿ ತಿಳಿದುಕೊಳ್ವುದು ಚದುರಂ ಎನ್ನುವ ಮೂಲಕ, ತನ್ನ ನಡೆ ಕನ್ನಡದ ಉಳಿವಿನ ದಾರಿ ಎಂದು ಹೇಳಿಕೊಂಡಿದ್ದಾನೆ.

ದೋಸದ ಮಾತು ಪರ್ದದೆನೆ ಬಲ್ಲವರಗ್ಗದ ಕನ್ನಡಗಳಿಂ
ಬಾಸಣಮಾಗೆ ಪೇಳ್ವನೊಲವಿಂ ನೆರೆ ಕಬ್ಬಿಗರೊಪ್ಪೆ ನಾಡೆಯುಂ

ಗೋಸಣೆ ಮೀರುವನ್ನಮಿದು ರಾಯನ ನಾಳ್ಕಳೊಳಿರ್ಕೆ ನಿಚ್ಚಮುಂ

ದೇಸೆಯ ಗೊತ್ತು ಜಾಣ್ಣುಡಿಯ ತಾಯ್ವನೆ ನುಣ್ಬುರುಳೇಳ್ಗೆಯೆಂಬಿನಂ//೩೪೮//[೮೦]

ದೋಸದ(ದೋಷ) ಮಾತು ಹೊದ್ದು, ಬಲ್ಲವರು ಅಗ್ಗ ಎಂದು ತಿಳಿದ ಕನ್ನಡ ಬಾಸಣದಲ್ಲಿ (ಭಾಷಣ, ಮಾತು) ಒಲವಿನಿಂದ ಹೇಳಲಾದ ಈ ಕಾವ್ಯದಲ್ಲಿ, ನಾಡಿನಲ್ಲಿ ನೆರೆದ(ಒಟ್ಟಾದ) ಕಬ್ಬಿಗರು ಒಪ್ಪುವಂತೆ, ರಾಯನ(ರಾಜನ) ನಾಡುಗಳೆಲ್ಲೆಲ್ಲ ಮೀರಿ ಈ ಕಾವ್ಯ ನಿಲ್ಲುವುದು ನಿಚ್ಚಳ ಎನ್ನುತ್ತಾನೆ. ವಿಲಾಸೆಯ ಗೊತ್ತು, ಜಾಣ್ಣುಡಿಯ ತಾಯಮನೆಯಾಗಿ, ನುಣುಪಾದ ಹೊಳೆವ ಮುತ್ತಿನಂತಾಗಿ ಮೆರೆವುದು ಎಂದು ತನ್ನ ಕಾವ್ಯದ ಮಹತ್ವವನ್ನು ಆಂಡಯ್ಯ ಸಾರುತ್ತಾನೆ.

ಮತ್ತಂ ಸಕ್ಕದಮರಿವರ್

ಬಿತ್ತರದಿಂ ಮದನವಿಜಯಮೆಂದೊಲೊವೆರ್ದೆಯಂ

ಪತ್ತಿರೆ ಪೆಸರಿಟ್ಟರಿದ

ಕ್ಕತ್ತಳವೆನಿಪುದೆನೆ ಮಿಸುಪ ಪೆಸರೆಸೆವಿನೆಗಂ[೮೧]

ಸಕ್ಕದ (ಸಂಸ್ಕೃತ) ತಿಳಿದವರು ಈ ಕಾವ್ಯವನ್ನು ಓದಿ, ಸಕ್ಕದದಿಂದ ಮಾತ್ರ ಈ ಬಗೆಯ ಕಾವ್ಯವನ್ನು ಬರೆಯುವುದಕ್ಕೆ ಸಾಧ್ಯ ಎಂದು ತಿಳಿದವರು ಈ ಕಾವ್ಯವನ್ನು ಓದಿ ಒಲವಿಂದ ಎದೆ ತುಂಬಿ ಹರಸಿ 'ಮದನ ವಿಜಯ' ಎಂದು ಕರೆದರೆ ಅತ್ತಳವೇ(ಅತಿಶಯವೇ)? ಎಂದು ಆಂಡಯ್ಯನು ಪ್ರಶ್ನಿಸಿದ್ದಾನೆ.

ಆಂಡಯ್ಯ ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ ಬಳಸಿರುವ ಕನ್ನಡ ಪದಗಳು

ಸಂಸ್ಕೃತ	–	**ಕನ್ನಡ**
ಕಾವ್ಯ	–	ಕಬ್ಬ
ದಶದಿಕ್ಕು	–	ಎಣ್ದೆಸೆ
ಸಂಸ್ಕೃತ	–	ಸಕ್ಕದ
ಸ್ವತಂತ್ರ	–	ಸೊತಂತಿರ
ಕಲ್ಪನೆ	–	ಕಲುಪನೆ
ಜ್ಞಾನಿ	–	ದಿಮ್ಮಿದರ
ರಚಿಸು	–	ನೆಗಳ್ಚು
ಗಣಿತಜ್ಞ	–	ಲೆಕ್ಕಿಗ
ಗೌರವಿತ	–	ಗರುವಿಕೆ

ಘೋಷಣೆ – ಗೋಸಣೆ

ದೇಶದಲ್ಲಿ – ನಾಳ್ಕೊಳು

ದೋಷ – ದೋಸ

ಜಾಣ – ಬಲ್ಲವರು

ಮೀರು – ಎದ್ದುನಿಲ್ಲು

ಭಾಷಣ – ಬಾಸಣ

ಪ್ರೌಢೋಕ್ತಿ – ಬರ್ದುನುಡಿ

ಏಕಾವಳಿ – ಎಕ್ಕಸರ

ಬೆಲೆಬಾಳುವ – ಪುರುಳುಂ

ಲಕ್ಷಣ, ಸೊಗಸು – ಲಕ್ಕಣಮುಂ

ಮನಮೋಹಕ – ತಳ್ತೆಸೆವ

ಅತಿಶಯ – ಅತ್ತಳವೆನಿಪು[೪೨]

ಇಂಥ ಅನೇಕ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳನ್ನು ಆಂಡಯ್ಯ ತನ್ನ ಕಬ್ಬಿಗರ ಕಾವಂ ಕಾವ್ಯದಲ್ಲಿ ಬಳಸಿದ್ದಾನೆ. ಆಂಡಯ್ಯನ ಕುರಿತು ಬರಗೂರು ರಾಮಚಂದ್ರಪ್ಪನವರ ಅಭಿಪ್ರಾಯ ಹೀಗಿದೆ: "ಸುಮಾರು ಕ್ರಿ.ಶ. ೧೨೨೫ರಲ್ಲಿದ್ದ ಆಂಡಯ್ಯ ಕವಿ ಸಂಸ್ಕೃತದ ಯಜಮಾನಿಕೆಯ ವಿರುದ್ಧ ವಿಶಿಷ್ಟ ಪ್ರತಿಕ್ರಿಯೆ ತೋರಿಸಿದ. ಸಂಸ್ಕೃತ ಪದಗಳನ್ನು ಬಳಸದೆ ಕಾವ್ಯ ಬರೆಯುವುದಾಗಿ ಪಣತೊಟ್ಟು, ಸಂಸ್ಕೃತ ಪದಗಳಿಗೆ ಬದಲಾಗಿ ತದ್ಭವರೂಪಗಳನ್ನು ಬಳಸಿ 'ಕಬ್ಬಿಗರ ಕಾವ್ಯ' ರಚಿಸಿದ. ಬರೀ ತದ್ಭವಗಳ ಬಳಕೆಯು ಒಂದು ಅತಿರೇಕ ಎನ್ನಬಹುದಾದರೂ ಕನ್ನಡ ಭಾಷೆಯ ಪರವಾಗಿ ಸಿಡಿದೆದ್ದು ಬಂದ ಉಗ್ರ ಪ್ರತಿಕ್ರಿಯೆಯಾಗಿ, ವಿಶಿಷ್ಟ ಪ್ರತಿಭಟನೆಯಾಗಿ ಇದು ಮಹತ್ವದ್ದಾಗಿದೆ"[೪೩] ಎನ್ನುತ್ತಾರೆ. ಸಂಸ್ಕೃತ ಪದಗಳ ಬಳಕೆಗೆ ಆಂಡಯ್ಯನು ಒಡ್ಡು ನಿರ್ಮಿಸಬಯಸಿದ್ದಾನೆ. ಸಂಸ್ಕೃತವನ್ನು ಕೂಡ ಅವನು ಸಕ್ಕದ ಎಂದು ಕನ್ನಡೀಕರಿಸುತ್ತಾನೆ. ಅಲ್ಲದೇ, ಸಂಸ್ಕೃತ ಪದಗಳಿಗೆ ಕನ್ನಡದ್ದೇ ಪದಗಳನ್ನು ಬಳಸುವ ಪಣ ತೊಡುತ್ತಾನೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆಗೆ ಪರ್ಯಾಯ ಮಾರ್ಗಗಳನ್ನು ಹುಡುಕುವ ಯತ್ನವನ್ನು ನಡೆಸಿದ್ದಾನೆ.

ಆಧುನಿಕ ಕಾಲಕ್ಕೂ ಆಧುನಿಕ ಪೂರ್ವಕ್ಕೂ ಒಂದೇ ಬಗೆಯ ಸಾಂಸ್ಕೃತಿಕ ಒತ್ತಡಗಳಿದ್ದವೇ? ಎಂಬ ಪ್ರಶ್ನೆ ಸದ್ಯಕ್ಕೆ ಎದುರಾಗಿದೆ. ಅಂದು ಕೇವಲ ಸಂಸ್ಕೃತ ಭಾಷೆಯೊಂದೇ ಕನ್ನಡದ ಮೇಲೆ ಪ್ರಭಾವ ಬೀರುತ್ತಿತ್ತು. ಆದರೆ, ಆಧುನಿಕ ಸಂದರ್ಭದಲ್ಲಿ ಕನ್ನಡದ ಮೇಲೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳು ಕೂಡ ಪ್ರಭಾವ ಬೀರುತ್ತಿವೆ. ಕೇವಲ ಒಂದು ಭಾಷೆಯ ದಾಳಿಯಿಂದ ಬಿಡುಗಡೆ

ಪಡೆಯಲು ನಡೆಸಬೇಕಾದ ಸಮಯದಲ್ಲಿ ಬೇಕಾಗಿದ್ದ ಶಕ್ತಿಗೂ ಈಗ ಅದೇ ಕನ್ನಡ ಭಾಷೆ, ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಪ್ರಭಾವ ಮತ್ತು ಒತ್ತಡಗಳಿಂದ ಬಿಡುಗಡೆ ಪಡೆಯಲು ಸೆಣಸಬೇಕಿರುವ ಶಕ್ತಿಯ ಪ್ರಮಾಣಕ್ಕೂ ಅಜಗಜಾಂತರ ವ್ಯತ್ಯಾಸವಾಗಿದೆ. ಈ ಹಿಂದೆ ನಡೆಸುತ್ತಿದ್ದ ಪ್ರಯತ್ನಗಳನ್ನು ಮೀರಿದ ಪ್ರಯೋಗಗಳು ಇಂದು ನಡೆಯಬೇಕಾದ ಅನಿವಾರ್ಯ ಸಂದರ್ಭ ಸೃಷ್ಟಿಯಾಗಿದೆ.

ಆಧುನಿಕ ಸಂದರ್ಭದಲ್ಲಿ ವಸಾಹತುಶಾಹಿಗಳ ಅಧಿಕಾರಾವಧಿಯ ನಂತರ ನಿರ್ಮಾಣವಾಗಿರುವ ಅಸಂಖ್ಯ ತುರ್ತುಗಳ ಕಾರಣದಿಂದಾಗಿ ಬಹುಭಾಷಿಕ ಪರಿಸರ ನಿರ್ಮಾಣದೊಂದಿಗೆ, ಬಹುಭಾಷೆಗಳೊಂದಿಗೆ ಸೆಣೆಸಾಡಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ. ವಸಾಹತುಶಾಹಿಗಳ ಆಳ್ವಿಕೆಗೊಳಪಟ್ಟ ಭಾರತದಂತಹ ದೇಶಗಳು ಒಂದು ಕಡೆ ನೈತಿಕ ಸ್ಥೈರ್ಯ, ಆತ್ಮಾಭಿಮಾನಗಳನ್ನು ಕಳೆದುಕೊಳ್ಳತೊಡಗಿದರೆ, ಮತ್ತೊಂದು ನೆಲೆಯಲ್ಲಿ ಆರ್ಥಿಕವಾಗಿ ದಿವಾಳಿ ಸ್ಥಿತಿ ತಲುಪತೊಡಗುತ್ತವೆ. ಇಂಗ್ಲೆಂಡ್‌ನ ಶೋಷಕ ಧೋರಣೆಯಿಂದಾಗಿ, ಭಾರತದಂತಹ ವಸಾಹತುಗಳನ್ನು ತನ್ನ ದೇಶದ ಕಾರ್ಖಾನೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುವ ದೇಶಗಳನ್ನಾಗಿ ಬದಲಾಯಿಸಿಕೊಂಡು, ತಾನು ತಯಾರಿಸಿದ ಉಪಕರಣ, ವಸ್ತ್ರ, ಯಂತ್ರೋಪಕರಣಗಳನ್ನು ಬಳಸುವಂತೆ ವಸಾಹತುಗಳ ಮೇಲೆ ಹೇರುವಿಕೆ ನಡೆದಿರುವುದು ಈಗ ಇತಿಹಾಸ. ಆದರೆ, ಅದಕ್ಕಿಂತ ವ್ಯಾಪಕ ಮಟ್ಟದಲ್ಲಿ ನವವಸಾಹತುಶಾಹಿಗಳ ದಾಳಿಗಳು ನಡೆಯುತ್ತಿವೆ.

ಇನ್ನೊಂದು ಮಹತ್ವದ ಸಂಗತಿ ಎಂದರೆ, ಬ್ರಿಟಿಷರನ್ನು ದೇಶದಿಂದ ಓಡಿಸಲು ರಾಷ್ಟ್ರೀಯ ಚಳವಳಿಗಳು ನಡೆದಿವೆ. ವಸಾಹತುಶಾಹಿಗಳ ವಿರುದ್ಧ ನಡೆದ ಸ್ವದೇಶಿ ಚಳವಳಿ, ಸತ್ಯಾಗ್ರಹಗಳು ಭಾರತದ ಆಧುನಿಕ ಸಂದರ್ಭದ ಬಿಡುಗಡೆಯ (ನಿರ್ವಸಾಹತೀಕರಣದ) ಆರಂಭಿಕ ಪ್ರಯತ್ನಗಳು ಎನ್ನಬಹುದು. ಆದರೆ, ಈಗ ಇಂಥ ಹೋರಾಟಗಳನ್ನು ನಡೆಸುವವರಿಗೆ ಪ್ರಗತಿ ವಿರೋಧಿಗಳು ಎಂಬ ಪಟ್ಟ ಕಟ್ಟಲಾಗುತ್ತಿದೆ. ಇಂಥದ್ದೇ ಆರೋಪವನ್ನು ಕನ್ನಡ ನುಡಿಯ ಬಿಡುಗಡೆಯ ಚಿಂತನೆಗಳನ್ನು ನಡೆಸುತ್ತಿರುವ ಡಿ. ಎನ್. ಶಂಕರಬಟ್ಟ ಅವರ ಮೇಲೆ ಕೂಡ ಹೊರಿಸಲಾಗುತ್ತಿದೆ.

೩.೪. ಆಧುನಿಕ ಬಿಡುಗಡೆಯ ಚಿಂತನೆಗಳು

೩.೪.೧. ಗಾಂಧಿಯವರ ಬಿಡುಗಡೆಯ ಚಿಂತನೆಗಳು

ವಸಾಹತುಶಾಹಿಗಳಿಂದ ಭಾರತದ ಸಮಗ್ರ ಬಿಡುಗಡೆಯ ಕುರಿತು, ಅವರ ಆಳ್ವಿಕೆಯ ಕಾಲದಲ್ಲೇ ಅನ್ವೇಷಣೆ ನಡೆದಿದೆ. ಈ ಅನ್ವೇಷಣೆ ನಡೆಸಿದವರು ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ. ಅವರ 'ಹಿಂದ್ ಸ್ವರಾಜ್' ಕೃತಿ ಬ್ರಿಟಿಷ್ ವಸಾಹತುಶಾಹಿ ರೂಪುಗೊಳಿಸುತ್ತಿದ್ದ ನೋಟಕ್ರಮದಿಂದ ಬಿಡುಗಡೆಯ ಪ್ರಯತ್ನವನ್ನು ನಡೆಸಿದೆ. ಗಾಂಧಿಯವರಿಗೆ ಸ್ವಾತಂತ್ರ್ಯ ಸಾಧನೆ ಕೇವಲ ರಾಜಕೀಯ ಬಿಡುಗಡೆಯ ವಿಷಯ ಮಾತ್ರವಾಗಿರಲಿಲ್ಲ. ವಸಾಹತುಶಾಹಿಗಳ ಆಳ್ವಿಕೆಯಿಂದ ಬಿಡುಗಡೆಯಾದರೂ ಅವರು ಬಿಟ್ಟು ಹೋಗುವ ರಾಜಕೀಯ, ಆರ್ಥಿಕತೆ, ಆಡಳಿತ, ಭಾಷೆ, ಸಂಸ್ಕೃತಿ ಮೊದಲಾದ ವಿಚಾರಧಾರೆಗಳು ಸ್ವಾತಂತ್ರ್ಯ ಹೋರಾಟದ ನಿಜವಾದ ಆಶಯವಾದ

ದಾಸ್ಯದಿಂದ ಬಿಡುಗಡೆಗೆ ಮತ್ತೊಂದು ಬಗೆಯಲ್ಲಿ ಸಂಕೋಲೆಗಳಾಗಿ ಮುಂದುವರೆಯುತ್ತವೆ ಎಂಬ ಸಂಗತಿ ಅವರಿಗೆ ತಿಳಿದಿತ್ತು.

ವಸಾಹತುಶಾಹಿಯ ನೋಟಕ್ರಮ, ಚಿಂತನೆ ಮೊದಲಾದವುಗಳಿಂದ ಅವಶ್ಯವಾಗಿ ಬಿಡುಗಡೆಯಾಗಬೇಕು ಎಂಬ ಮುಖ್ಯ ಕಾಳಜಿ 'ಹಿಂದ್ ಸ್ವರಾಜ್' ಕೃತಿಯ ರಚನೆಯ ಹಿಂದಿದೆ. ಈ ಹಿನ್ನೆಲೆಯಲ್ಲಿಯೇ ಗಾಂಧಿಯವರು ವಸಾಹತುಶಾಹಿಯ ಕೇಂದ್ರೀಕೃತ ರಾಜಕಾರಣದ ಬದಲು ಗ್ರಾಮಸ್ವರಾಜ್ಯದ ನೆಲೆಯ ವಿಕೇಂದ್ರೀಕೃತ ರಾಜಕಾರಣವನ್ನು, ಕ್ರೈಸ್ತರ ಮತ ಪ್ರಚಾರದ ಎದುರು ಹಿಂದೂ ಧರ್ಮವನ್ನು, ಇಂಗ್ಲಿಷ್ ಭಾಷೆಯ ಎದುರು ದೇಶೀ ಭಾಷೆಗಳನ್ನು, ವಸಾಹತುಶಾಹಿ ಹುಟ್ಟು ಹಾಕಿದ ಮತೀಯತೆಯ ವಿರುದ್ಧ ಸೌಹಾರ್ದತೆಯನ್ನು, ಬೃಹತ್‌ಯಂತ್ರ ನಾಗರೀಕತೆಯ ವಿರುದ್ಧ ಗುಡಿ ಕೈಗಾರಿಕೆಗಳನ್ನು ಮಂಡಿಸುತ್ತಾರೆ. ವಿದೇಶಿ ನ್ಯಾಯ ಪದ್ಧತಿ, ವೈದ್ಯ ಪದ್ಧತಿ, ರೈಲ್ವೇ ಮೊದಲಾದವುಗಳನ್ನು ತಿರಸ್ಕರಿಸುತ್ತಾರೆ.

ವಸಾಹತುಶಾಹಿಗಳ ಆಳ್ವಿಕೆಯ ಅವಧಿಯಲ್ಲೇ ಅವರಿಂದ ಎಲ್ಲ ಬಗೆಯ ಬಿಡುಗಡೆಯ ಚರ್ಚೆಗೆ ತೊಡಗಿರುವುದು ಈ ಕೃತಿಯ ವಿಶೇಷ. ಈ ದಿಸೆಯಲ್ಲಿ ಮುಖ್ಯವಾದ ಪ್ರಯತ್ನ. ವಸಾಹತುಶಾಹಿಗಳ ಕಾಲದಲ್ಲೇ ವಿದೇಶೀ ವಸ್ತುಗಳ ಬಹಿಷ್ಕಾರ, ಸತ್ಯಾಗ್ರಹ, ಕರನಿರಾಕರಣೆ, ಉಪವಾಸ ಸತ್ಯಾಗ್ರಹಗಳಂತಹ ದೇಶೀ ಹಾಗೂ ಅಹಿಂಸಾ ಪ್ರತಿಭಟನೆಯ ಮಾದರಿಗಳ ಶೋಧಕ್ಕೆ ಭಾರತ ಸಾಕ್ಷಿಯಾಗಿದೆ. ಈ ಹೋರಾಟಗಳ ಮುಂಚೂಣಿಯಲ್ಲಿದ್ದದ್ದು ಗಾಂಧಿ. ವಸಾಹತುಶಾಹಿಗಳ ಆಡಳಿತದ ಅವಧಿಯಲ್ಲೇ, ಅವರಿಂದ ಯಾವ ಬಗೆಯಲ್ಲಿ ಭಾರತವನ್ನು ಬಿಡುಗಡೆ ಮಾಡಬೇಕೆಂಬುದರ ಬಗೆಗೆ ಸ್ಪಷ್ಟ ರೂಪುರೇಷೆಗಳು ಈ ಕೃತಿಯಲ್ಲಿ ಅಡಕವಾಗಿವೆ.[೪೪]

೩.೪.೨. ಗೂಗಿ ವಾ ಥಿಯಾಂಗೊರವರ ಚಿಂತನೆಗಳು

ರಾಜಕೀಯ ಬಿಡುಗಡೆಯ ಚಿಂತನೆಗಳು ಜಗತ್ತಿನಾದ್ಯಂತ ಭಿನ್ನ ಅನುಸಂಧಾನದ ಫಲಿತದಿಂದಾಗಿ ಭಿನ್ನವಾಗಿವೆ. ಇಂಗ್ಲಿಷ್, ಆಫ್ರಿಕನ್, ಆಸ್ಟ್ರೇಲಿಯನ್, ಕನ್ನಡ, ಭಾರತೀಯ ಚಿಂತನೆಗಳಲ್ಲಿ ಈ ಭಿನ್ನ ಪರಿಭಾವನೆಗಳನ್ನು ಕಾಣಬಹುದು. ಧರ್ಮ, ಜಾತಿ, ಬುಡಕಟ್ಟು, ಜನಾಂಗಿಕ, ಲಿಂಗ, ಸಾಮಾಜಿಕ, ಸಾಹಿತ್ಯಕ ಮುಂತಾದವಲ್ಲದೆ, ಕೈಗಾರೀಕರಣ, ಕೃಷಿ, ಗ್ರಾಮೀಣ ಸಮಸ್ಯೆಗಳು, ದಲಿತ ಪ್ರಶ್ನೆಗಳು, ಶೈಕ್ಷಣಿಕ ಶಿಸ್ತುಗಳಲ್ಲಿ ಅನೇಕ ಪರ್ಯಾಯ ಚಿಂತನೆಗಳು ಪ್ರಚಲಿತದಲ್ಲಿವೆ.

ಗೂಗಿ ವಾ ಥಿಯಾಂಗೊ ಆಫ್ರಿಕನ್ ಬಿಗಡುಗಡೆಯ ಕುರಿತು ಕೃತಿ ಡಿಕಾಲೋನೈಸಿಂಗ್ ದ ಮೈಂಡ್('Decolonizing The Mind') ಎಂಬ ಕೃತಿ ರಚಿಸಿದ್ದಾರೆ. ಇದರಲ್ಲಿ ಪ್ರಜ್ಞೆಯ ಬಿಡುಗಡೆಯ ಕುರಿತು ಮಹತ್ವದ ವಿಚಾರಗಳನ್ನು ಮಂಡಿಸಿದ್ದಾರೆ. ವಸಾಹತುವಾದಿಗಳಿಗೆ ಅವರು ಮುಖಾಮುಖಿಯಾಗುತ್ತಾ ಈ ಕೆಳಗಿನ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ:

"ನನ್ನ ಅಭಿಪ್ರಾಯದಲ್ಲಿ, ನಾವು ಆಫ್ರಿಕಾದ ಆಲೋಚನಾ ಕ್ರಮ, ತತ್ವಶಾಸ್ತ್ರ, ಜಾನಪದ, ಪ್ರತಿಮೆ, ಇವೆಲ್ಲವನ್ನು ನಮ್ಮ ಬರಹದಲ್ಲಿ ಬರಪೂರವಾಗಿ ಬಳಸಬೇಕು. ಇವನ್ನು ಆಫ್ರಿಕನ್

ಭಾಷೆಗಳಿಂದ ಅಕ್ಷರಶಃ ಅನುವಾದಿಸಬೇಕು. ನಮ್ಮ ದೇಶೀ ಭಾಷೆಗೆ ಸಾಧ್ಯವಾದಷ್ಟು ಸಮೀಪ ಬರುವಂತೆ ಅನುವಾದಿಸಬೇಕು. ಒಂದೊಂದು ಪದ ನುಡಿಗಟ್ಟು ವಾಕ್ಯಗಳಲ್ಲೂ, ಒಂದೊಂದು ಹೆಸರಲ್ಲೂ, ಪ್ರತಿಯೊಂದರಲ್ಲೂ ಆಫ್ರಿಕನ್ ಜನತೆಯ ಸಾಮಾಜಿಕ ಆಚರಣೆ, ಸ್ವಭಾವ, ನಂಬಿಕೆ ಮೌಲ್ಯಗಳು ತುಂಬಿಕೊಂಡಿವೆ. ಆಫ್ರಿಕನ್ ನುಡಿಯಲ್ಲಿರುವ ಈ ಜೀವಂತಿಕೆಯನ್ನು ಉಳಿಸಿಕೊಳ್ಳುವಂತೆ ಇಂಗ್ಲಿಶಿನಲ್ಲಿ ಭಾವನೆಗಳನ್ನು ಅಭಿವ್ಯಕ್ತಿಸುವ ಅಭ್ಯಾಸವನ್ನು ನಾನಂತೂ ಮಾಡಿಕೊಂಡಿದ್ದೇನೆ. ಮೊದಮೊದಲು ಇದು ಕಷ್ಟಕರವಾಗಿತ್ತು. ಆಮೇಲೆ ನಾನದನ್ನು ಪಳಗಿಸಿಕೊಂಡೆ. ನಾನು ಬಳಸುವ ಪ್ರತಿಯೊಂದು ಇಜವಾ ಭಾಷೆಯ ಅಭಿವ್ಯಕ್ತಿಯನ್ನು, ಅದರ ಹುಟ್ಟಿನ ಸಂದರ್ಭದ ಸಮೇತ ಇಂಗ್ಲಿಶಿನ ಅರ್ಥಕ್ಕೆ ಆದಷ್ಟು ಹತ್ತಿರ ತರುವುದು ಹೇಗೆಂದು ಆಲೋಚನೆ ಮಾಡಿದೆ. ಇದೊಂದು ಆಕರ್ಷಕ ಪ್ರಯೋಗ ಅನಿಸಿತು”[೪೫] ಎನ್ನುತ್ತಾರೆ.

ವಸಾಹತುಗಳ ನೋಟಕ್ರಮಗಳಿಂದ ಬಿಡುಗಡೆಯನ್ನು ಬಯಸುವ ಗೂಗಿಯವರಿಗೆ ಆಫ್ರಿಕಾದ ಅಧಿಕೃತ ಚಿಂತನ ಕ್ರಮಗಳು ತಾವು ಬರೆಯುವ ಬರಹಗಳಲ್ಲಿ, ಚಿಂತನೆಯಲ್ಲಿ ಬದುಕಿನಲ್ಲಿ ಪ್ರಚಲಿತಕ್ಕೆ ಬರಬೇಕೆಂಬ ಆಶಯವಿದೆ. ಆರಂಭದಲ್ಲೆ ಬಿಡುಗಡೆಗೆ ಅವಶ್ಯಕವಾಗಿರುವ ಒಂದು ಬಗೆಯ ಸಾತ್ವಿಕ ಹಠವನ್ನು ಮೇಲಿನ ಭಾಗದಲ್ಲಿ ಕಾಣಬಹುದು. ವಸಾಹತುಶಾಹಿ ಭಾಷೆಯಲ್ಲಿ ಬರೆಯಬೇಕಾದ ಸಂದರ್ಭದಲ್ಲಿ ಈ ಬಗೆಯ ದೇಶೀ ಜೀವನಕ್ರಮಗಳನ್ನು, ಅಧಿಕೃತವಾಗಿ ಮಂಡಿಸುವುದರ ಮೂಲಕ ಪ್ರಜ್ಞೆಯ ಬಿಡುಗಡೆ ಆರಂಭವಾದರೂ, ಮುಂದುವರೆದು ಈ ಬಗೆಯ ಭಾಷಾಂತರದಿಂದಷ್ಟೇ ಎಲ್ಲವೂ ಸಾಧ್ಯವಿಲ್ಲವೆಂಬ ನಿರ್ಣಯಕ್ಕೆ ಬರುತ್ತಾರೆ. ಇದೇ ಕಾರಣದಿಂದಾಗಿ, ದೇಶೀ ಭಾಷೆಯ ಅಂತರ್ಗತ ಶಕ್ತಿಗಳನ್ನು ಅನ್ಯ ಭಾಷೆಯ ಬೆಳವಣಿಗೆಗೆ ಧಾರೆಯೆರೆಯುತ್ತಿರುವ ಕ್ರಮಗಳನ್ನು ಪ್ರಶ್ನಿಸುತ್ತಾರೆ.

ಈ ಬಗೆಯ ಪ್ರಯತ್ನಗಳಲ್ಲಿ ಭಾಷಾಂತರಕ್ಕಷ್ಟೇ ಸೀಮಿತವಾಗಿಬಿಡಬಹುದಾದ ದೇಶೀ ಜೀವನ ಮಾದರಿಗಳ ಚೈತನ್ಯವು ಆಯಾ ದೇಶೀ ಭಾಷೆಗಳಲ್ಲಿ ಅಭಿವ್ಯಕ್ತಿಯಾಗಿಸುವುದರತ್ತ ಅವರ ಮುಂದಿನ ಗಮನವಿದೆ. ಆ ಕಾರಣದಿಂದಾಗಿ ಅವರು ಕೆಲವು ಪ್ರಶ್ನೆಗಳಿಂದಲೇ ದೇಶೀ ಚಿಂತನಕ್ರಮಗಳನ್ನು ಎಚ್ಚರಿಸುವ ಪ್ರಯತ್ನವನ್ನು ಆರಂಭಿಸುತ್ತಾರೆ. ಇದುವರೆಗೆ ವಸಾಹತುಶಾಹಿಗಳಿಂದ ಪಡೆದ ನೋಟಕ್ರಮಗಳಲ್ಲೇ ಮುಂದುವರೆದರೆ, ಅಸಂಖ್ಯ ದೇಶೀ ಪರಿಭಾಷೆಗಳು, ನುಡಿಗಟ್ಟುಗಳು ನಂಬಿಕೆ, ಆಚರಣೆಗಳು ಹಂತ ಹಂತವಾಗಿ ಕಣ್ಮರೆಯಾಗುವ ಸಾಧ್ಯತೆಗಳಿರುವುದರಿಂದಾಗಿ; ಈ ಬಗೆಯ ದೇಶೀ ಮಾದರಿಗಳನ್ನು ಮರುರೂಪಿಸುವ ಜವಾಬ್ದಾರಿಯನ್ನು ತಾವು ಹೊರಬೇಕೆಂದು ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ಈ ರೀತಿಯ ನಿರ್ಧಾರಕ್ಕೆ ಪ್ರೇರೇಪಿಸುತ್ತಾರೆ:

“ನಾವು ಕೇಳಿಕೊಳ್ಳಬಹುದಾದ ಪ್ರಶ್ನೆಗಳೆಂದರೆ, ಯಾಕೆ ಒಬ್ಬ ಆಫ್ರಿಕನ್ ಲೇಖಕನಿಗೆ ತನ್ನ ತಾಯಿ ಭಾಷೆಯಿಂದ ಹೊತ್ತುಕೊಂಡು ಹೋಗಿ ಇತರರ ಭಾಷೆಯನ್ನು ಸಮೃದ್ಧಗೊಳಿಸುವ ಗೀಳು ಹತ್ತುತ್ತದೆ? ಈ ಕೆಲಸಕ್ಕೆ ಯಾಕೆ ಲೇಖಕರು ಅಷ್ಟೊಂದು ರಿಸ್ಕ್ ತೆಗೆದುಕೊಳ್ಳುತ್ತಾರೆ? ನಮ್ಮ ಭಾಷೆಗಳನ್ನು ಹೇಗೆ ಶ್ರೀಮಂತಗೊಳಿಸಿಕೊಳ್ಳಬೇಕು ಎಂದು ನಾವು ಯಾಕೆ ಕೇಳಿಕೊಳ್ಳಲಿಲ್ಲ? ಬೇರೊಂದು ಕಾಲಕ್ಕೆ ದೇಶಕ್ಕೆ ಜನತೆಗೆ ಸೇರಿದ ಉನ್ನತ ಮಾನವೀಯ ಹಾಗೂ ಡೆಮಾಕ್ರಟಿಕ್ ಹೋರಾಟ

ಪರಂಪರೆಗಳಿಂದ ಚೈತನ್ಯ ಪಡೆಯಲು ಏನು ಮಾಡಬೇಕೆಂದು ನಾವೇಕೆ ಕೇಳಿಕೊಳ್ಳಲಿಲ್ಲ?... ನಾವೇಕೆ ನಮ್ಮ ಭಾಷೆಗಳಲ್ಲಿ ದೊಡ್ಡ ಸಾಹಿತ್ಯಕ ಸಾಧನೆಯನ್ನು ಮಾಡಲಾಗಿಲ್ಲ? ಅಪಾರ ಅನುಭವ, ಆಳವಾದ ಚಿಂತನೆ ಹಾಗೂ ತತ್ವಜ್ಞಾನಗಳನ್ನು ತನ್ನ ಮಾತೃ ಭಾಷೆಯ ಮೂಲಕವೇ ಪಡೆದುಕೊಂಡಿರುವ ಗೆಬ್ರಿಯಲ್ ಒಕಾರನು, ಯಾಕೆ ತನ್ನ ಇಜವಾ ಭಾಷೆಯಲ್ಲಿ ಅವನ್ನೆಲ್ಲ ಅಭಿವ್ಯಕ್ತಿ ಮಾಡಲಿಲ್ಲ? ಈ ಕಠೋರ ಪ್ರಶ್ನೆಗಳನ್ನು ನಾವು ಎದುರಿಸಲಿಲ್ಲ. ಆಫ್ರಿಕನ್ ಜನತೆಯ ಹೋರಾಟಗಳಲ್ಲಿ ನಮ್ಮ ಹೊಣೆಯೇನೆಂಬ ಪ್ರಶ್ನೆಯನ್ನಂತೂ ಕೇಳಿಕೊಳ್ಳಲೇ ಇಲ್ಲ. ಇಲ್ಲ, ಈ ಯಾವ ಪ್ರಶ್ನೆಗಳನ್ನು ಕೇಳಿಕೊಳ್ಳಲಿಲ್ಲ."[೪೬] ಎನ್ನುವ ಗೂಗಿ ವಾ ಥಿಯಾಂಗೊ, ಸ್ವತಃ ವಸಾಹತುಶಾಹಿಯ ಶಿಕ್ಷಣ ಕ್ರಮದಲ್ಲಿ ವಿದ್ಯಾಭ್ಯಾಸ ಮಾಡಿದವರು. ಅಂತಿಮವಾಗಿ ವಸಾಹತುಶಾಹಿಯ ಅನೇಕ ಬಗೆಯ ಹಿಡಿತಗಳಿಂದ ಮುಕ್ತಿ ಪಡೆಯುವ ಕ್ರಮಗಳೆಡೆಗೆ ಅವರ ತುಡಿತವಿರುವುದಮನ್ನು ಮೇಲಿನ ಉಲ್ಲೇಖಗಳಲ್ಲಿ ಕಾಣಬಹುದು.

ವಸಾಹತುಶಾಹಿ ವಿರೋಧಿಯಾದ ತನ್ನ ಚಿಂತನೆಯನ್ನು ಬೆಳೆಸಿಕೊಳ್ಳುವ ಪ್ರಯತ್ನವಾಗಿ, ಗೂಗಿ ವಾ ಥಿಯಾಂಗೋ ತಮ್ಮ ಹೆಸರನ್ನು ಬದಲಾಯಿಸಿಕೊಳ್ಳುತ್ತಾರೆ. ತಾವು ಬಳಸುತ್ತಿದ್ದ ವಸಾಹತುಶಾಹಿ ಭಾಷೆಯ ಬದಲಿಗೆ ಗಿಕಯೂ ಭಾಷೆಯಲ್ಲಿ ಬರೆಯುವ ನಿರ್ಧಾರ ಕೈಗೊಳ್ಳುತ್ತಾರೆ. ಈ ಬಗೆಯ ಬೆಳವಣಿಗೆಯನ್ನು ಗಂಭೀರವಾಗಿ ಅಧ್ಯಯನ ನಡೆಸಬೇಕಿದೆ.

ವಸಾಹತುಗಳ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತುಶಾಹಿಗಳ ಆಡಳಿತ, ಶಿಕ್ಷಣಕ್ರಮ, ಭಾಷೆ, ಧರ್ಮ, ನೋಟಕ್ರಮಗಳನ್ನು ಮೀರುವ ಕ್ರಮಗಳಲ್ಲಿ ಪ್ರಜ್ಞೆಯನ್ನು ಆಕ್ರಮಿಸಿಕೊಂಡಿರುವ ವಸಾಹತುಶಾಹಿಯ ಹಿಡಿತಗಳಿಂದ ಭಾಷಿಕವಾಗಿ, ಅಭಿವ್ಯಕ್ತಿ ಕ್ರಮದಲ್ಲಿ, ನೋಟಕ್ರಮಗಳಲ್ಲಿ, ಚಿಂತನಕ್ರಮ ಮುಂತಾದ ನೆಲೆಗಳಲ್ಲಿನ ಪರಿವರ್ತನೆಯನ್ನು ಬಿಡುಗಡೆಯ ಚಿಂತನೆಗಳಲ್ಲಿ ಪ್ರತಿಪಾದಿಸಲಾಗುತ್ತಿದೆ. ಈ ಬಗೆಯ ಬಿಡುಗಡೆಯ ಸಾಧ್ಯತೆಗಳನ್ನು ಆಫ್ರಿಕನ್ ಸಂದರ್ಭದಲ್ಲಿ ಮಂಡಿಸುವಾಗ, ವಸಾಹತುಕಾಲೀನ ಸಂದರ್ಭದಲ್ಲಿ – ವಸಾಹತುಶಾಹಿಗಳು ಮಾಡಿದ ನಿರ್ನಾಮಗಳನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡ ವಸಾಹತು ವಿರೋಧಿ ಸಂಕಥನಗಳಲ್ಲಿ ಇವು ಮುಖ್ಯವಾದ ಪ್ರಮೇಯಗಳಾಗಿವೆ.

ಆಫ್ರಿಕನ್ನರನ್ನು ಕುರಿತ ವಸಾಹತುವಾದಿ ಸಂಕಥನಕ್ಕೆ ತಕ್ಕ ಪ್ರತಿಕ್ರಿಯೆ ನೀಡುವ ಪ್ರಯತ್ನದಲ್ಲಿ, ಅನೇಕ ಕಠೋರಾತ್ಮಕ ನಿಲುವು ತಾಳುವಾಗ, ದೇಶೀ ಭಾಷೆ, ಧರ್ಮ, ಆಚರಣೆ, ಸಂಸ್ಕೃತಿಗಳ ಕುರಿತು ಆಳವಾದ ಅಧ್ಯಯನದ ಪರಿಣಾಮದಿಂದ ಈ ಬಗೆಯ ಚಿಂತನೆಗಳು ವ್ಯಕ್ತಗೊಂಡಿವೆ. ಅಲ್ಲದೆ, ವಸಾಹತುಶಾಹಿಯ ಆಡಳಿತದ ಪರಿಣಾಮದಿಂದಾಗಿ, ದೇಶೀ ಮಾದರಿಗಳು ದಮನಗೊಂಡಿರುವುದನ್ನು, ಅವುಗಳಿಗೆ ಎದುರಾಗಿರುವ ಕಂಟಕಗಳನ್ನು ಮುಖ್ಯವಾಗಿ ಮಂಡಿಸುವ ಪ್ರಯತ್ನಗಳನ್ನು ಇಲ್ಲಿ ಕಾಣಬಹುದು.

೩.೪.೩. ಡಿ. ಆರ್. ನಾಗರಾಜ್ ಅವರ ಬಿಡುಗಡೆಯ ಚಿಂತನೆಗಳು

ಡಿ. ಆರ್. ನಾಗರಾಜ್ ಸಮಕಾಲೀನ ಸಂದರ್ಭದಲ್ಲಿ ಸಂಸ್ಕೃತಿಗಳು ಹಾಗೂ ಚರಿತ್ರೆಯ ಚಕ್ರೀಯ ಚಲನೆಯನ್ನು ಗ್ರಹಿಸಲು ಅನ್ಯಜ್ಞಾನಶಿಸ್ತುಗಳಿಂದ ಪಡೆದ ಅನೇಕ ಪರಿಕಲ್ಪನೆಗಳನ್ನು

ಬಳಸಿಕೊಳ್ಳುತ್ತಾರೆ. ಸಮಾಜಶಾಸ್ತ್ರ, ಮಾನವಶಾಸ್ತ್ರ, ಮನಃಶಾಸ್ತ್ರ, ಸಾಹಿತ್ಯಕ, ಸಾಮಾಜಿಕ, ಭಾಷಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಶಿಸ್ತುಗಳಿಂದ ಪಡೆದ ಪರಿಭಾಷೆಗಳು ಹಾಗು ಪರಿಕಲ್ಪನೆಗಳನ್ನು ಪ್ರಸ್ತುತ ಸಂದರ್ಭಕ್ಕೆ ಅನ್ವಯಿಸುವ ಮೂಲಕ ಸಮಕಾಲೀನ ಸಮಸ್ಯೆಗಳಿಗೆ ಅರ್ಥಪೂರ್ಣವಾಗಿ ಮುಖಾಮುಖಿಯಾಗುವ ಪ್ರಯತ್ನ ನಡೆಸಿದ್ದಾರೆ.

ವಸಾಹತೋತ್ತರ ಸಂದರ್ಭದಲ್ಲಿ ವಸಾಹತುಶಾಹಿ ಕಾಲದ ಸಾಂಸ್ಕೃತಿಕ ಯಾಜಮಾನ್ಯಕ್ಕೆ ಸಿಲುಕಿ ದೇಶೀ ಸಮುದಾಯಗಳು ತಮ್ಮ ಬಹುಮುಖತೆಯನ್ನು ಕಳೆದುಕೊಳ್ಳುತ್ತವೆ. ಇದಕ್ಕೆ ವಸಾಹತುಶಾಹಿಯು ಅನೇಕ ಸಾಂದರ್ಭಿಕ ಒತ್ತಡಗಳನ್ನು ಹೇರುವುದೇ ಕಾರಣವಾಗಿರುತ್ತದೆ. ವಸಾಹತುಗಳ ಆಳ್ವಿಕೆಯ ಅವಧಿಯಲ್ಲಿ ಆರಂಭವಾದ ಈ ಏಕರೂಪೀಕರಣವನ್ನೂ ಒಳಗೊಂಡು ಎಲ್ಲ ಬಗೆಯ ಏಕಮಾದರಿಯನ್ನು ಪ್ರಶ್ನಿಸುವ ಮಾದರಿ ಡಿ. ಆರ್. ನಾಗರಾಜ್ ಅವರ ಕೃತಿಗಳಲ್ಲಿ ದಾಖಲಾಗಿದೆ. ಇದಕ್ಕೆ ಪೂರಕವಾಗಿ 'ಅಕ್ಷರ ಚಿಂತನಮಾಲೆ'ಗೆ ಸಂಪಾದಿಸಿದ ಅನೇಕ ಕೃತಿಗಳಿಗೆ ಅವರು ಬರೆದ ಹಿನ್ನುಡಿಗಳು ಈ ಬಗೆಯ ಸಾಂಸ್ಕೃತಿಕ ಏಕರೂಪೀಕರಣವನ್ನು ನಿರಾಕರಿಸಿ ದೇಶೀ ಸಮುದಾಯಗಳಲ್ಲಿರುವ ಚೈತನ್ಯವನ್ನು ಮಂಡಿಸುತ್ತವೆ.

ಸಾಹಿತ್ಯ ವಿಮರ್ಶೆಯು ಸಂಸ್ಕೃತಿ ವಿಮರ್ಶೆಯಾಗಿ ಬೆಳೆಯುತ್ತಿರುವ ಸಂದರ್ಭದಲ್ಲಿ ಅನ್ಯಜ್ಞಾನಶಿಸ್ತುಗಳನ್ನು ಬಳಸಿಕೊಂಡು ಅಧ್ಯಯನ ನಡೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಡಿ. ಆರ್. ನಾಗರಾಜ್, ಜಾನಪದ-ಶಿಷ್ಟ, ಗಂಭೀರ-ಜನಪ್ರಿಯ ಎಂಬ ವಿಂಗಡಣೆಯನ್ನು ಒಪ್ಪದೆ, ಎಲ್ಲವುಗಳ ಅಧ್ಯಯನಕ್ಕೂ ಸಮಾನವಾದ ಒತ್ತನ್ನು ನೀಡುತ್ತಾರೆ. ಆಧುನಿಕಪೂರ್ವ ಕಾಲದಿಂದಲೂ ಪ್ರಜ್ಞಾವಂತರು ಪ್ರಭುತ್ವದ ಹೇರುವಿಕೆಯನ್ನು ಮೀರುವ ಸಾಧ್ಯತೆಗಳ ಹುಡುಕಾಟ ನಡೆಸಿದ್ದಾರೆ.

ಡಿ. ಆರ್. ನಾಗರಾಜ್ ಅವರ ಕೃತಿಗಳಲ್ಲಿ ಕೂಡ ಇದೇ ಮಾದರಿಯ ಚಿಂತನೆಗಳು ವ್ಯಕ್ತವಾಗಿವೆ. ಪ್ರಭುತ್ವದ ಹೇರಿಕೆಯನ್ನು ಮೀರುವ ಮುಖ್ಯ ಪ್ರಯತ್ನ ಅವರ ಕೃತಿಗಳಲ್ಲಿ ವ್ಯಕ್ತವಾಗಿದೆ. ಅವರ ಕೃತಿಗಳು ಒಂದು ಬಗೆಯಲ್ಲಿ ಪ್ರಭುತ್ವ ನಿರ್ಮಿಸಬಯಸುವ ಏಕರೂಪಿ ಜೀವನಕ್ರಮ, ಧರ್ಮ, ಭಾಷೆ, ಸಂಸ್ಕೃತಿಗಳ ಬದಲು ಬಹುಮುಖತೆಯನ್ನು ಮಂಡಿಸಲು ಯತ್ನಿಸಿವೆ. ವಸಾಹತುಶಾಹಿ ಪ್ರಭುತ್ವವನ್ನೂ ಒಳಗೊಂಡು ಆಧುನಿಕ ಪೂರ್ವ, ಆಧುನಿಕ ಹಾಗೂ ಆಧುನಿಕೋತ್ತರ ಪ್ರಭುತ್ವಗಳಿಗೆ ಬೇಕಾದುದು ಏಕರೂಪಿ ಸಂಸ್ಕೃತಿಯೇ ಹೊರತು ಬಹುಮುಖಿ ಸಂಸ್ಕೃತಿಯಲ್ಲ. ಪ್ರಭುತ್ವ ಅನೇಕ ಕಾರಣಗಳಿಂದಾಗಿ ಏಕರೂಪತೆಯನ್ನು ಬಯಸುತ್ತದೆ ಮತ್ತು ಅದನ್ನು ಏಕರೂಪದಲ್ಲೇ ಜೀವನಕ್ರಮವನ್ನು ಜಾರಿಯಲ್ಲಿಡಲು ಬಯಸುತ್ತದೆ.

ಇದಕ್ಕೆ ಕಾರಣಗಳು ಕೂಡ ಇವೆ. ಸುಗಮ ಆಡಳಿತದ ಅನುಕೂಲಕ್ಕಾಗಿ ಏಕ ಭಾಷೆ, ಧರ್ಮ, ಸಂಸ್ಕೃತಿಗಳನ್ನು ಪ್ರಭುತ್ವ ಬೆಂಬಲಿಸುತ್ತದೆ. ಆ ಮೂಲಕ ಪ್ರಜೆಗಳ ಮೇಲೆ ಏಕರೂಪತೆಯನ್ನು ಹೇರುವ ಪ್ರಯತ್ನವನ್ನು ನಡೆಸುತ್ತದೆ. ಪ್ರಭುತ್ವದ ಈ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದ್ದರೂ, ಅದನ್ನು ಪ್ರತಿರೋಧಿಸುವ ಕ್ರಮಗಳನ್ನು ಪ್ರಜೆಗಳು ಸಾಂದರ್ಭಿಕವಾಗಿ ಕಂಡುಕೊಳ್ಳುತ್ತಿರುತ್ತಾರೆ. ಈ ಹಂತ ಅನೇಕ ಸಂದರ್ಭದಲ್ಲಿ ತೀವ್ರ ಸಂಘರ್ಷದ ಸ್ವರೂಪವನ್ನೇ ತಳೆಯದಿರುವ ಸಾಧ್ಯತೆಗಳು

ಇವೆ. ಕೆಲವೊಮ್ಮೆ ಮಾತ್ರ ಈ ಬಗೆಯ ಸಂಘರ್ಷಗಳು ಎದುರಾದಾಗ ಪ್ರಭುತ್ವವು ದಮನದ ಕ್ರಮಗಳಿಂದ ಆ ಪ್ರಯತ್ನಗಳನ್ನು ಹತ್ತಿಕ್ಕುತ್ತದೆ.

ಪ್ರಭುತ್ವದ ದಮನದ ಮಾದರಿಗಳಿಗೆ ಪರ್ಯಾಯವಾಗಿ ದೇಶೀ ಜೀವನ ಪದ್ಧತಿಗಳಲ್ಲೇ ಅಸಂಖ್ಯ ಪ್ರತಿಭಟನೆಯ ಮಾದರಿಗಳು ಹುಟ್ಟಿಕೊಳ್ಳುತ್ತವೆ. ಆದರೆ, ಪ್ರಭುತ್ವವು ಇಂಥ ಪ್ರತಿಭಟನೆಗಳು ಘಟಿಸಿಯೇ ಇಲ್ಲವೆನ್ನುವಂತೆ ಉಪೇಕ್ಷಿಸುತ್ತದೆ ಅಥವಾ ಸಮನ್ವಯತೆಯನ್ನು ಪ್ರತಿಪಾದಿಸುವ ಪ್ರಯತ್ನಗಳನ್ನು ನಡೆಸುತ್ತದೆ. ಇದಕ್ಕೆ ಬುಕ್ಕನ ಶ್ರವಣಬೆಳಗೊಳದ ಶಾಸನ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಮಧ್ಯಕಾಲದ ಸಂದರ್ಭದಲ್ಲಿ ಜೈನ ಮತ್ತು ವೈಷ್ಣವರ ನಡುವೆ ನಡೆದ ಕಲಹದಲ್ಲಿ ಬಸದಿಯೊಂದಕ್ಕೆ ಹಾನಿಯಾಗುತ್ತದೆ. ಈ ಹಾನಿ ಮಾಡಿದವರು ವೈಷ್ಣವರು. ಆದರೆ, ಜೈನ ಬಸದಿಗೆ ಕಾವಲು ಕಾಯಲು ಪಹರೆ ಹಾಕುವ ಬುಕ್ಕ, ಇದರ ವೆಚ್ಚವನ್ನು ಜೈನರಿಂದಲೇ ವಸೂಲಿ ಮಾಡಬೇಕೆಂದು ಆದೇಶಿಸುತ್ತಾನೆ. ಇಂಥ ಘಟನೆಗಳಿಂದ ಪ್ರಭುತ್ವದ ಹುನ್ನಾರಗಳು ಅನಾವರಣವಾಗುತ್ತವೆ. ಆದರೆ, ಇಂಥ ಸಂದರ್ಭಗಳಲ್ಲಿ ಸೂಕ್ಷ್ಮ ತಂತ್ರವನ್ನು ಪ್ರಭುತ್ವ ಅನುಸರಿಸುತ್ತದೆ. ಬುಕ್ಕನ ಕಾಲದಿಂದ ಆರಂಭಿಸಿ, ಇಂದು ಕೂಡ ಆಧುನಿಕ ಪ್ರಭುತ್ವಗಳು ಮಂಡಿಸುತ್ತಿರುವ 'ವೈವಿಧ್ಯತೆಯಲ್ಲಿ ಏಕತೆ' ಹಾಗೂ 'ಸಮನ್ವಯತೆ'ಯ ಕಥನಗಳ ಮೂಲಕ ಇಂಥ ಹುನ್ನಾರಗಳನ್ನು ಕಂಡುಕೊಳ್ಳಬಹುದು.

ಆಧುನಿಕಪೂರ್ವ, ಆಧುನಿಕ ಹಾಗೂ ಆಧುನಿಕೋತ್ತರ ಸಂದರ್ಭದಲ್ಲಿ ಆಳ್ವಿಕೆಯ ಸಿದ್ಧಾಂತಗಳು ಕಾಲಾನುಕ್ರಮದಲ್ಲಿ ನಿರಂತರವಾಗಿ ತಮ್ಮ ಹಿಡಿತವನ್ನು ಅಸಂಖ್ಯ ಕ್ರಮಗಳ ಮೂಲಕ ಪ್ರಬಲಗೊಳಿಸುತ್ತಿವೆ. ಈ ಮಾದರಿಗಳಿಂದಾಗಿ, ಪ್ರಭುತ್ವಗಳನ್ನು ಎದುರಿಸಲು ಅನೇಕ ಬಗೆಯ ಕ್ರಮಗಳ ಶೋಧನೆ ಅನಿವಾರ್ಯವಾಗುತ್ತದೆ. ಇಂಥ ಸಂದರ್ಭದಲ್ಲಿ ಪ್ರಾಚೀನ ಕಾಲದಿಂದಲೂ ದೇಶೀ ಜೀವನ ಪದ್ಧತಿಗಳಲ್ಲಿಯೆ ಅಡಗಿರುವ ಪ್ರತಿರೋಧದ ಅನೇಕ ಮಾದರಿಗಳ ಶೋಧವೇ ಬಿಡುಗಡೆಯ ಪ್ರಕ್ರಿಯೆಯಲ್ಲಿ ಅಗತ್ಯ ಎಂಬುದನ್ನು ಡಿ. ಆರ್. ನಾಗರಾಜ್ ಅವರ ಚಿಂತನೆಗಳಲ್ಲಿ ಕಾಣಬಹುದು.

ದೇಶೀ ನೋಟಕ್ರಮ, ಚಿಂತನಶೀಲತೆ, ಜೀವನಕ್ರಮಗಳ ಶೋಧದ ಅನಿವಾರ್ಯತೆಗಳು ಅವರು ಸಂಪಾದಿಸಿದ 'ಅಕ್ಷರ ಚಿಂತನ ಮಾಲೆ'ಯ ಕೃತಿಗಳಲ್ಲಿ ವ್ಯಕ್ತವಾಗಿವೆ. ಈ ಚಿಂತನ ಮಾಲೆಯ ಪ್ರಣಾಳಿಕೆ ಹಾಗೂ ಅವರ ವ್ಯಾಖ್ಯಾನಾತ್ಮಕ ಹಿನ್ನುಡಿಗಳಲ್ಲಿ ಅನೇಕ ವಿಷಯಗಳನ್ನು ಅವರು ಪ್ರತಿಪಾದಿಸಿದ್ದಾರೆ.[೪೭]

೩.೪.೪. ರಾಜೇಂದ್ರ ಚೆನ್ನಿಯವರ ಚರ್ಚೆಗಳು

'ದೇಶೀವಾದ' ಎಂಬ ಕೃತಿಯಲ್ಲಿ ರಾಜೇಂದ್ರ ಚೆನ್ನಿಯವರು ಪ್ರಾಸಂಗಿಕವಾಗಿ ಬಿಡುಗಡೆ ಪ್ರಕ್ರಿಯೆಗಳ ಕುರಿತು ಚಿಂತನೆ ನಡೆಸಿದ್ದಾರೆ. ಅವರ ಪ್ರಕಾರ: "ವಸಾಹತುಶಾಹಿಯ ಆಳ್ವಿಕೆ ಹೊರಟುಹೋದ ಮೇಲೆ ದೇಶೀಯ ಸಂಸ್ಕೃತಿ ತನ್ನ ಸಾಂಸ್ಕೃತಿಕ ವ್ಯಕ್ತಿತ್ವದ ನಿಜವಾದ ಸ್ವರೂಪದ ಬಗ್ಗೆ ಕಳವಳ, ಕಸಿವಿಸಿ ಮತ್ತು ಸಂದಿಗ್ಧದ ಮನೋಭಾವನೆಯನ್ನು ತಾಳುವುದು ಸಹಜವೇ ಆಗಿದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆಯುವ ಆಂದೋಲನದ ಸಾಂಸ್ಕೃತಿಕ ಪುನರುಜ್ಜೀವನದ ಒಲವುಗಳಿಂದಾಗಿ ಸ್ವಲ್ಪ ಕಾಲದವರೆಗೆ ತೀಕ್ಷ್ಣವಾದ ಆತ್ಮವಿಮರ್ಶೆಯ ಆವಶ್ಯಕತೆ ಕಂಡುಬರುವುದಿಲ್ಲ.

ಮೊಕಾಶಿಯವರ ಮಾತಿನಲ್ಲಿ ಹೇಳುವುದಾದರೆ ಏತದ್ದೇಶೀಯತೆ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಒಂದು ಒಡ್ಡಾಗಿ (filter) ಕೆಲಸ ಮಾಡುವುದರಿಂದ ಪರಕೀಯ ಪ್ರಭಾವಗಳಿಂದ ಸಂಸ್ಕೃತಿಯ ಸ್ವಂತಿಕೆಯನ್ನು ಕಾಪಾಡುತ್ತದೆ. (೧೯೮೧, ಪುಟ. ೧೨) ಆದರೆ ಸ್ವಾತಂತ್ರ್ಯದ ನಂತರ ಈ ಒಡ್ಡು ಕುಸಿಯುವುದರಿಂದ ಪರಕೀಯ ಪ್ರಭಾವಗಳನ್ನು ಅರಗಿಸಿಕೊಳ್ಳುವ ಗಟ್ಟಿಗತನ ಹೊರಟುಹೋಗಿ ಸಂದಿಗ್ಧದ ಸ್ಥಿತಿಯೊಂದು ಹುಟ್ಟಿಕೊಳ್ಳುತ್ತದೆ. ಇನ್ನೊಂದು ರೀತಿಯಲ್ಲಿ ನೋಡುವುದಾದರೆ ದೇಶೀಯ ಸಂಸ್ಕೃತಿ ಮತ್ತು ಸಾಹಿತ್ಯಗಳು ತಮ್ಮ ಸ್ವಂತಿಕೆಯ ಬಗ್ಗೆ ತೀವ್ರವಾದ ಕಾಳಜಿ ತೋರಿಸುವುದು ನಿರ್ವಸಾಹತೀಕರಣದ ಒಂದು ಅಂಶವಾಗಿದೆ.”[೪೮]

ರಾಜೇಂದ್ರ ಚೆನ್ನಿಯವರ ಪ್ರಕಾರ ಬಿಡುಗಡೆ ಎನ್ನವುದು ವಸಾಹತುಶಾಹಿಗಳಿಂದ ಬಿಡುಗಡೆ ಹೊಂದಿದ ನಂತರದ ಪ್ರಕ್ರಿಯೆಯಾಗಿರುತ್ತದೆ. ಆದರೆ, ಬಿಡುಗಡೆಯನ್ನು ವಸಾಹತೋತ್ತರದಲ್ಲಿ ಇದ್ದಕ್ಕಿದ್ದಂತೆ ಆರಂಭಿಸುವುದು ಸಾಧ್ಯವೇ? ಎಂಬ ಪ್ರಶ್ನೆ ಎದುರಾಗುತ್ತದೆ. ರಾಷ್ಟ್ರೀಯತೆ, ಸ್ವಾತಂತ್ರ್ಯ ಚಳವಳಿ, ಸ್ವದೇಶಿ ಚಳವಳಿ, ಉಪ್ಪಿನ ಸತ್ಯಾಗ್ರಹ ಇತ್ಯಾದಿಗಳಿಗೆ ಸಾಕ್ಷಿಯಾಗಿರುವ ಭಾರತೀಯ ಇತಿಹಾಸ ಮತ್ತು ಭಾರತದ ಸ್ವಾತಂತ್ರ್ಯ ಚಳವಳಿಗಳು ಬಿಡುಗಡೆಯ ಮೂಲ ಉದ್ದೇಶದಿಂದಲೇ ರೂಪುಗೊಂಡಿದ್ದವು ಎನಿಸುತ್ತದೆ. ವಸಾಹತುಶಾಹಿಯ ಆಡಳಿತದಿಂದ ಬಿಡುಗಡೆಯನ್ನು ಬಯಸಿ ಈ ಹೋರಾಟಗಳು ರೂಪುಗೊಂಡಿದ್ದರೂ ವಿಶಾಲಾರ್ಥದಲ್ಲಿ ವಸಾಹತುಶಾಹಿಗಳಿಂದ ಸಮಗ್ರವಾದ ಬಿಡುಗಡೆಯ ಹಂಬಲ ಹೊಂದಿದ್ದವು. ಇದರ ಪರಿಣಾಮದಿಂದಾಗಿಯೇ ವಸಾಹತುಶಾಹಿಗಳ ವಿರುದ್ಧ ದೇಶದಾದ್ಯಂತ ಅನೇಕ ಚಳವಳಿಗಳು ನಡೆದಿದ್ದವು.

೩.೪.೫. ಜಿ. ಎನ್. ದೇವಿಯವರ ಚಿಂತನೆಗಳು

ಇಂಗ್ಲಿಷ್ ಅಧ್ಯಾಪಕರಾದ ಜಿ. ಎನ್. ದೇವಿ After Amnesiaಎಂಬ ಕೃತಿಯಲ್ಲಿ ದೇಶೀವಾದ ಕುರಿತ ಚಿಂತನೆ ನಡೆಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ೧೯೯೫ರಲ್ಲಿ ಕಾನ್ಪುರದಲ್ಲಿ ನಡೆಸಿದ Nativism ಕುರಿತ ವಿಚಾರ ಸಂಕಿರಣದಲ್ಲಿ ಪ್ರಾಸ್ತಾವಿಕ ಭಾಷಣವನ್ನು ಅವರು ಮಾಡಿದ್ದರು. ಇದಕ್ಕೆ ಲೇಖನ ರೂಪ ನೀಡಲಾಗಿದೆ. ಈ ಲೇಖನವನ್ನು ‘ದೇಶೀವಾದ’ ಹೆಸರಿನಲ್ಲಿ ವಿ. ಬಿ. ತಾರಕೇಶ್ವರ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಲ್ಲಿ ಜಿ. ಎನ್. ದೇವಿ ಪ್ರಸ್ತುತ ವಸಾಹತೋತ್ತರ ಸಂದರ್ಭದಲ್ಲಿ ಭಾರತೀಯ ಮನಸುಗಳು ಎದುರಿಸುತ್ತಿರುವ ದ್ವಂದ್ವಗಳನ್ನು ಈ ರೀತಿ ವ್ಯಕ್ತಪಡಿಸುತ್ತಾರೆ: “ಇದು ಒಂದು ವ್ಯಕ್ತಿಗತ ಟಿಪ್ಪಣಿ. ಗಿರೀಶ್ ಕಾರ್ನಾಡರ ಪ್ರಸಿದ್ಧ ನಾಟಕ ಹಯವದನವನ್ನು ಆರಂಭದಲ್ಲೇ ಉಲ್ಲೇಖಿಸಲಿಚ್ಛಿಸುತ್ತೇನೆ. ಅಪರಿಪೂರ್ಣತೆ ಈ ನಾಟಕದ ವಸ್ತು. ಅರ್ಧ ವ್ಯಕ್ತಿ, ಅರ್ಧ ಕುದುರೆಯ ಪಾತ್ರವಾದ ‘ಹಯವದನ’ವನ್ನು ಗಿರೀಶ್ ಕಾರ್ನಾಡರು ನಾಟಕದ ಆರಂಭದಲ್ಲೇ ಪರಿಚಯಿಸುತ್ತಾರೆ. ಸಮಕಾಲೀನ ಭಾರತದ ಬೌದ್ಧಿಕ ವಲಯದಲ್ಲಿ ವಿಮರ್ಶಕನಾಗಿ ದುಡಿಯುತ್ತಿರುವ ನನಗೆ, ನಾನೊಬ್ಬ ಬೌದ್ಧಿಕ ಹಯವದನ ಇರಬಹುದೇ ಎಂಬ ಭಾವನೆ ಆಗಾಗ ಕಾಡುತ್ತದೆ. ನನ್ನ ದೇಹದ ಎಲ್ಲಾ ರಕ್ತಕಣಗಳೂ ಭಾರತೀಯ ಮಣ್ಣು ನೀರು ಗಾಳಿಯಿಂದ ಮಾಡಲ್ಪಟ್ಟಿದ್ದರೆ, ನನ್ನ ಮಿದುಳಿನಲ್ಲಿ ಸಂಗ್ರಹಿತವಾಗಿರುವ ಜ್ಞಾನ ಎಲ್ಲಿಂದಲೋ ಬಂದಂತೆ ಕಾಣುತ್ತದೆ.”

ಜಿ. ಎನ್. ದೇವಿಯವರ ಮೇಲಿನ ಅಭಿಪ್ರಾಯಗಳಲ್ಲಿ ವ್ಯಕ್ತವಾಗುತ್ತಿರುವ ವಿಷಯಗಳು ವಸಾಹತು ರಾಷ್ಟ್ರಗಳ ಒಳತೋಟಿಗೆ ಸಾಕ್ಷಿ ಎನ್ನಬಹುದು. ಅವರ ಆಲೋಚನೆಯಲ್ಲಿರುವ ಬಿರುಕಿಗೆ ವಸಾಹತೋತ್ತರ ಭಾರತೀಯ ಮನಸ್ಸಿನಲ್ಲಿ ನೆಲೆಸಿರುವ, ವಸಾಹತುಶಾಹಿ ಆಳ್ವಿಕೆಯ ಅಳಿಸಲಾಗದ ಪ್ರಭಾವದ ಕಾರಣವೂ ಇರಬಹುದು. ಇದರೊಂದಿಗೆ ಒಂದು ಬಗೆಯ ಆತಂಕವೂ ಅವರ ದನಿಯಲ್ಲಿ ಅಡಗಿರುವುದನ್ನು ಕಾಣಬಹುದು.

ಆದರೆ, ಉದಾರೀಕರಣ, ಖಾಸಗೀಕರಣ ಜಾಗತೀಕರಣದ ನಂತರದಲ್ಲಿ ಈ ಆತಂಕಗಳ ಪ್ರಮಾಣ ಇನ್ನಷ್ಟು ಏರಿಕೆಯಾಗಿದೆ. ಆದ್ದರಿಂದ ಈ ಆತಂಕಗಳನ್ನು ಮುಖ್ಯವಾಗಿ ಪರಿಭಾವಿಸುವ ಕ್ರಮಗಳಲ್ಲಿ ಕೂಡ ಪರಿವರ್ತನೆಯಾಗಬೇಕಿದೆ ಎನಿಸುತ್ತದೆ. ಬಾಹ್ಯ ವಸಾಹತುಶಾಹಿ ಮತ್ತು ಆಂತರಿಕ ವಸಾಹತುಶಾಹಿಗಗಳಿಂದ ಬಿಡುಗಡೆಯಾಗುವ ಹುಡುಕಾಟದ ಜೊತೆಗೆ, ಇವುಗಳಿಂದ ಬಿಡುಗಡೆಯ ಪ್ರಯತ್ನ ದೇಶದ ಸ್ವಾತಂತ್ರ್ಯ ಸಾಧನೆಯ ನಂತರದ ಏಳು ದಶಕಗಳಲ್ಲಿ ಕೂಡ ಇನ್ನೂ ಇಕ್ಕಟ್ಟಿನಲ್ಲಿರುವುದು ಏಕೆ? ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕಿದೆ. ಜೊತೆಗೆ ವಸಾಹತುಗಳು ಇನ್ನೂ ಹಳಹಳಿಕೆಯ ಸ್ವರೂಪದಲ್ಲಿರುವುದಕ್ಕೆ ಕಾರಣ ಏನು? ಎಂಬ ಪ್ರಶ್ನೆ ಕೂಡ ಎದುರಾಗುತ್ತದೆ.

'ವಿಸ್ಮೃತಿ' ಎಂಬ ಪರಿಕಲ್ಪನೆಯ ಮೂಲಕ ಈ ಬಗೆಯ ಚರ್ಚೆಗಳನ್ನು ಮಂಡಿಸುವ ಪ್ರಯತ್ನ ನಡೆಸಿರುವ ಜಿ. ಎನ್. ದೇವಿಯವರು ಸಂಸ್ಕೃತದ ಪ್ರಭಾವ, ಆಚರಣೆ, ನಂಬಿಕೆಗಳು ಇತ್ಯಾದಿಗಳ ಬಗೆಗೆ ಭಾರತೀಯ ಮನಸ್ಸು ವಿಸ್ಮೃತಿಗೆ ಸಿಲುಕಿ ಇಬ್ಬಂದಿತನಕ್ಕೊಳಗಾಗಿರುವುದನ್ನು ಪ್ರತಿಪಾದಿಸುತ್ತಾರೆ. ನಾವು "ಸಂಪೂರ್ಣವಾಗಿ ಪಾಶ್ಚಾತ್ಯೀಕರಣದ ಹಾದಿಯನ್ನು ಒಪ್ಪಿಕೊಳ್ಳಬೇಕಾಗಿತ್ತೆಂದು ಕೆಲವೊಮ್ಮೆ ಅನಿಸುತ್ತದೆ. ಹಾಗೇನಾದರೂ ಆಗಿದ್ದರೆ ನಮ್ಮ ಸಾಂಸ್ಕೃತಿಕ ವ್ಯಕ್ತಿತ್ವ ಪರಿಪೂರ್ಣತೆ ಸಾಧಿಸಲು ಸಾಧ್ಯವಾಗಿರುತ್ತಿತ್ತು."[೫೦] ಎಂಬ ಹಳಹಳಿಕೆಯಲ್ಲಿಯೂ ಸಮಾಧಾನವಾಗದ ನಿಲುವನ್ನು ಅವರು ವ್ಯಕ್ತಪಡಿಸುತ್ತಾರೆ.

ಆದರೆ, ಈ ಬಗೆಯ ಆತಂಕಿತ, ಹಳಹಳಿಕೆಯ ಸ್ವರೂಪದ ಚಿಂತನೆಗಳಿಗಿಂತ ಮೊದಲೇ ಜಿ. ಎನ್. ದೇವಿಯವರಿಗಿಂತ ಭಿನ್ನವಾಗಿ, ಎ. ಕೆ. ರಾಮಾನುಜನ್ ಅವರು Speaking of Sivaದ ಪ್ರಸ್ತಾವನೆಯಲ್ಲಿ ಹೀಗೆ ಹೇಳುತ್ತಾರೆ: "ಮಹಾಭಾರತದಂಥ ಸಂಸ್ಕೃತ ಮಹಾಕಾವ್ಯವು ತನ್ನ ವಿಶ್ವಕೋಶಾತ್ಮಕ ಪರಿಧಿಯಲ್ಲಿ ಬಹುತೇಕ ಜಾನಪದ ದ್ರವ್ಯಗಳನ್ನು ಒಳಗೊಂಡಿದ್ದು ಕತೆ, ನಂಬಿಕೆ, ಗಾದೆ ಮಾತುಗಳನ್ನು ಜನಪದ ಮೂಲಗಳಿಂದ ಸ್ಪಷ್ಟವಾಗಿ ಎತ್ತಿಕೊಂಡಿದೆ, ಅಲ್ಲದೆ ಅವುಗಳನ್ನು ನವೀಕರಿಸುತ್ತಾ, ಸಂಸ್ಕೃತೀಕರಿಸುತ್ತಾ ಸಂಸ್ಕೃತ ಭಾಷೆಯ ಕಲಾ ನೈಪುಣ್ಯದ ನಿತ್ಯ ನೂತನತೆಯನ್ನು ಮೆರೆದಿದೆ. ಆದರೆ, ಸುಸಂಬದ್ಧ ವಿಚಾರವೆಂದರೆ ಭಾರತದಂಥ ತೋಂಡಿ ಸಂಸ್ಕೃತಿಯಲ್ಲಿ ಸಂಸ್ಕೃತ ಮಹಾಭಾರತವೇ ಮೌಖಿಕವಾದ ಜಾನಪದ ಪರಂಪರೆಗಳೆಡೆಗೆ ಹಿಂದಿರುಗಿ ಬಂದಿದೆಯಲ್ಲದೆ, ರೂಪಾಂತರಕ್ಕೊಳಗಾದ ಮೂಲಧಾತುಗಳನ್ನು 'ಕಿರಿಯ' ಪರಂಪರೆಗಳಿಗೆ ಕೊಡುಗೆಯಾಗಿ ನೀಡಿದ್ದು ಮರುಪ್ರಸಾರ ಮತ್ತು ಮರುದರ್ಶನಗಳಿಗೆ ಎಡೆಗೊಟ್ಟಿದೆ. 'ಅರ್ಥಾಂತರ'ಗಳ ಮಹಾಪ್ರಸ್ಥಾನದಲ್ಲಿ ಸಂಸ್ಕೃತದಿಂದ ಪ್ರಾದೇಶಿಕ ಭಾಷೆಗಳಿಗೆ 'ಅರ್ಥಾಂತರ'ಗೊಳ್ಳುತ್ತಾ, ಪ್ರಾದೇಶಿಕ ಕವಿಯೊಬ್ಬ ಅರ್ಕಗೊಳಿಸುವ ಸಮೃದ್ಧವಾದ ಸ್ಥಳೀಯ ಪರಂಪರೆಗಳಲ್ಲಿ ಸಾಗಿ ಬಂದಿದೆ. ಇಲ್ಲೆಲ್ಲ

ಭಾರತ ವ್ಯಾಪ್ತಿ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಮೆ'ಯೊಳಕ್ಕು ಪ್ರಾದೇಶಿಕ 'ಹಿರಿಮೆ'ಯನ್ನು ಪ್ರಾದೇಶಿಕ 'ಕಿರಿಯ' ಪರಂಪರೆಗಳ ಒಳಕ್ಕೂ ಸಂಯೋಜನೆ ಮಾಡಲಾಗಿದೆ. ಹೀಗೆ ಕೊಳು – ಕೊಡುಗೆಗಳ ಅನೇಕಾನೇಕ ವರ್ತುಲಗಳು ನಿರಂತರ ಚಲನೆಯಲ್ಲಿದೆ”[೩೮] ಎನ್ನುತ್ತಾರೆ. ಎ. ಕೆ. ರಾಮಾನುಜನ್ ಅವರ ಮೇಲಿನ ಅಭಿಪ್ರಾಯದಲ್ಲಿ ಸಂಸ್ಕೃತ – ದೇಶೀ, ಶಿಷ್ಟ – ಜಾನಪದಗಳ ನಡುವಿನ ಪರಸ್ಪರ ಕೊಡು – ಕೊಳುವಿಕೆಗಳ ಕುರಿತ ಚಿಂತನೆ ಇದೆ. ಈ ಚರ್ಚೆಯಲ್ಲಿ ಅವರು GreatTradition - Little Tradition ಎನ್ನಲಾದ ಎರಡು ಪರಂಪರೆಗಳ ನಡುವೆ ಪರಸ್ಪರ ಕೊಡು – ಕೊಳುವಿಕೆಗಳಿರುವುದನ್ನು ಮುಖ್ಯವಾಗಿ ಪರಿಗಣಿಸುತ್ತಾರೆ. ಇಲ್ಲಿ ವಸಾಹತುಶಾಹಿಗಳಿಂದ ವಸಾಹತುಗಳಲ್ಲಿ ಆಮೂಲಾಗ್ರವಾಗಿ ಪರಿವರ್ತನೆಯಾಗಿವೆ ಎಂಬ ನಿಲುವಿಲ್ಲ. ಬದಲಾಗಿ, ಸಾಮ್ರಾಜ್ಯಶಾಹಿ ಶಕ್ತಿಯ ಎದುರು ಸ್ಥಳೀಯವಾದ ಚಿಕ್ಕ ಪರಂಪರೆಗಳು ಸ್ವಾಯತ್ತತೆಯನ್ನು ಉಳಿಸಿಕೊಂಡಿವೆ ಎಂಬ ಆಶಾವಾದವಿರುವುದನ್ನು ಗಮನಿಸಬಹುದು.

ಇಂಗ್ಲಿಷ್ ಭಾಷೆಗೆ ಕನ್ನಡದ ವಚನಗಳನ್ನು ಅನುವಾದಿಸುವ ಸಂದರ್ಭದಲ್ಲಿ ವಚನಗಳನ್ನು ವಿಶ್ವಾತ್ಮಕ ದೃಷ್ಟಿಕೋನಕ್ಕೆ ಒಗ್ಗಿಸುವ ಸಂದರ್ಭದಲ್ಲಿ ಈ ಮುಖ್ಯ ಚಿಂತನಧಾರೆಯನ್ನು ಎ. ಕೆ. ರಾಮಾನುಜನ್ ಪ್ರಕಟಿಸಿದ್ದಾರೆ. ವಸಾಹತುಶಾಹಿ ಆಳ್ವಿಕೆಯಿಂದ ಬಿಡುಗಡೆ ಹೊಂದಿದ ನಂತರ, ಅದೇ ವಸಾಹತುಶಾಹಿಗಳಿಗೆ, ದೇಶೀಯ ಕಾವ್ಯ ಪರಂಪರೆಯ ಅನನ್ಯತೆಯನ್ನು ಪ್ರತಿಪಾದಿಸುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಸೂಕ್ಷ್ಮವಾಗಿ ಇಲ್ಲಿ ವಚನ ಕಾಲದ ಪ್ರಜಾಪ್ರಭುತ್ವದ ಮಾದರಿ, ಸ್ಥಳೀಯವಾಗಿ ಪ್ರಚಲಿತಕ್ಕೆ ಬಂದ ವಿಶ್ವಾತ್ಮಕ ಚಿಂತನೆಗಳು, ಕನ್ನಡ ವಚನಗಳಲ್ಲಿ ವ್ಯಕ್ತವಾಗಿರುವ ಜಾತ್ಯತೀತ ಸಮಾಜ ನಿರ್ಮಾಣದ ವಿಷಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಹೇಳುವ ಯತ್ನದ ಭಾಗವಾಗಿ ಅವರ ಪ್ರಸ್ತಾವನೆ ಇರುವುದನ್ನು ಗಮನಾರ್ಹ ಸಂಗತಿಯಾಗಿದೆ.

ಈ ಬಗೆಯ ದೇಶೀಯ ಮಾದರಿಗಳು ವಿಶ್ವಾತ್ಮಕಗೊಳ್ಳುವ ಅನೇಕ ಗುಣಗಳು ಇನ್ನಷ್ಟು ಬಗೆಗಳಲ್ಲಿ ಶೋಧನೆಯಾಗಬೇಕಿದೆ. ಇನ್ನೊಂದು ಮಹತ್ವದ ಸಂಗತಿ ಎಂದರೆ, ವಚನ ಕಾಲದ ಚಳವಳಿಯನ್ನು ವೈದಿಕ ಪುರೋಹಿತಶಾಹಿಗಳಿಂದ ಬಿಡುಗಡೆಗೊಳಿಸುವ ಪ್ರಕ್ರಿಯೆಯಾಗಿ ಕೂಡ ಗ್ರಹಿಸಬೇಕಿದೆ. ಜಾತಿ, ಲಿಂಗ, ಆರ್ಥಿಕ ಸಮಾನತೆಯನ್ನು ಬೋಧಿಸಿದ ವಚನ ಚಳವಳಿ ಅತ್ಯಾಧುನಿಕ ಚಿಂತನೆಯಾದ ಸೋದರತೆ, ಸಮಾನತೆ, ಸಮಾಜವಾದಿ ಚಿಂತನೆಗಳು ಚರ್ಚೆಗೆ ಬರುವ ಮುನ್ನವೇ ಸುಮಾರು ೭೦೦ ವರ್ಷಗಳಷ್ಟು ಹಿಂದೆಯೇ ಕರ್ನಾಟಕದಲ್ಲಿ ನಡೆದಿವೆ. ಈ ನಿಟ್ಟಿನಲ್ಲಿ ಇನ್ನಷ್ಟು ಸಂಶೋಧನೆಗಳು ನಡೆದಲ್ಲಿ ಜಿ. ಎನ್. ದೇವಿಯವರ ಹಳಹಳಿಕೆ ಮತ್ತು ಪರಿಪೂರ್ಣತೆಯ ಹುಡುಕಾಟಕ್ಕೆ ನಿರ್ದಿಷ್ಟ ದಾರಿ ಲಭಿಸಬಹುದು ಎನಿಸುತ್ತದೆ.

೩.೪.೬. ರಹಮತ್ ತರೀಕೆರೆಯವರ ಚರ್ಚೆಗಳು

ರಹಮತ್ ತರೀಕೆರೆಯವರು, 'ಮರದೊಳಗಣ ಕಿಚ್ಚು' ಎಂಬ ಕೃತಿಯ 'ತೊಡಕು' ಎಂಬ ಭಾಗದಲ್ಲಿ ಸಂಸ್ಕೃತೀಕರಣ, ಸುಧಾರಣಾವಾದ, ಸಮನ್ವಯವಾದ, ನಿರ್ವಸಾಹತೀಕರಣದ ಮಡುಕು ಇತ್ಯಾದಿ ವಿಭಾಗ ಕ್ರಮದಲ್ಲಿ ಸಂಸ್ಕೃತಿ–ಪ್ರತಿಸಂಸ್ಕೃತಿ ಹಾಗೂ ವಸಾಹತುಶಾಹಿಗಳು ಇವುಗಳ

ಗ್ರಹಿಕೆಯ ಕ್ರಮದ ಮೇಲೆ ಬೀರಿದ ಪರಿಣಾಮಗಳನ್ನು ವಿಶ್ಲೇಷಿಸಲು ಬಿಡುಗಡೆ ಪ್ರಕ್ರಿಯೆಯ ಕುರಿತು ಚರ್ಚೆ ನಡೆಸಿದ್ದಾರೆ. ಅವರ 'ಸಾಂಸ್ಕೃತಿಕ ಅಧ್ಯಯನ' ಕೃತಿಯಲ್ಲಿ ಬಿಡುಗಡೆಯ ಚರ್ಚೆಗಳ ಘಟ್ಟದ ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ: "ಕರ್ನಾಟಕದ ಚಿಂತನೆಯ ಇತಿಹಾಸವೆಂದರೆ, ವಿವಿಧ ಸಮುದಾಯಗಳು ಅಥವಾ ಗುಂಪುಗಳು ಎಚ್ಚೆತ್ತ ಘಟ್ಟಗಳು ನಿರಂತರವಾಗಿ ಬರುವುದು. ಅದರಲ್ಲಿ ೬೦ರ ದಶಕದಲ್ಲಿ ಉಚ್ಚ ಜಾತಿಯ ಪ್ರಜ್ಞಾವಂತರಿಗೆ ಬಂದ ಎಚ್ಚರದ ಘಟ್ಟವೂ ಒಂದು. ಪಾಶ್ಚಿಮಾತ್ಯ ಪ್ರಭಾವಕ್ಕೆ ತನ್ನನ್ನು ಅತಿಯಾಗಿ ತೆರೆದುಕೊಂಡು, ಅದು ತಪ್ಪೆಂದು ಅನಿಸಿ, ಒಂದು ಬಗೆಯ ಜ್ಞಾನೋದಯದ ಮನಸ್ಥಿತಿಯಲ್ಲಿದ್ದ ಈ ವರ್ಗಕ್ಕೆ ಎರಡು ಸಂಗತಿಗಳಿಂದ ಬಿಡುಗಡೆ ಪಡೆಯಬೇಕೆನಿಸಿತು. ಒಂದು, ಸನಾತನವಾದಿಯಾದ ಬ್ರಾಹ್ಮಣವಾದಿಂದ, ಎರಡು ಅತಿಯಾಗಿ ಪಾಶ್ಚಾತ್ತೀಕರಣಗೊಳ್ಳುತ್ತಿದ್ದ ವಿಚಾರ ಕ್ರಮಗಳಿಂದ. ಇಂತಹ ಇಬ್ಬದಿಯ ಬಿಡುಗಡೆಗಾಗಿ ಏಕಕಾಲಕ್ಕೆ ಇದು ಬ್ರಾಹ್ಮಣ ಹಿಂದೂ ಹಾಗೂ ಯೂರೋಪು ಎರಡನ್ನೂ ವಿಮರ್ಶಿಸಬೇಕಾಯಿತು. ಸ್ಥಳೀಯ ಬದುಕಿನಲ್ಲಿ ಬೇರುಬಿಡಬೇಕಾಯಿತು."[೫೨] ಎನ್ನುತ್ತಾರೆ. ಮುಂದೆ ಈ ಬಿಡುಗಡೆಯ ಚರ್ಚೆಯಲ್ಲಿರುವ ಆರಂಭಿಕ ಘಟ್ಟದಲ್ಲಿಯೇ ಎದುರಾದ ಒಳ ಮತ್ತು ಹೊರ ವಸಾಹತುಶಾಹಿಗಳೆರಡರಿಂದಲೂ ಬಿಡುಗಡೆಯ ಪ್ರಕ್ರಿಯೆಯೇ ಬಿಡುಗಡೆಯ ಚಿಂತನೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಮುಂದಿನ ಹಂತದಲ್ಲಿ ಶೂದ್ರವಾದಿ, ದಲಿತವಾದಿ, ಎಡವಾದಿ, ಆಧುನಿಕೋತ್ತರವಾದಿ ಘಟ್ಟಗಳಲ್ಲಿ ಬಿಡುಗಡೆಯ ಚಿಂತನೆಗಳು ಮುಂದುವರೆದದ್ದನ್ನು ದಾಖಲಿಸುತ್ತಾರೆ.[೫೩]

೩.೪.೭. ನಟರಾಜ್ ಹುಳಿಯಾರ್ ಅವರ ಚಿಂತನೆಗಳು

'ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ' ಎಂಬ ಸಂಶೋಧನಾ ಕೃತಿಯಲ್ಲಿ ಅಧ್ಯಯನದ ತಾತ್ವಿಕ ಭಿತ್ತಿಯಾಗಿ ಬಿಡುಗಡೆ ಪ್ರಕ್ರಿಯೆಯನ್ನು ನಟರಾಜ್ ಹುಳಿಯಾರ್ ಚರ್ಚಿಸಿದ್ದಾರೆ. ಅವರು, ವಸಾಹತುವಾದೀ ಸಂಕಥನಗಳ ಮೂಲಕ ದೇಶೀ ಜೀವನ ಮಾದರಿಗಳನ್ನು ವಸಾಹತುಶಾಹಿಗಳ ಕಟ್ಟುವಿಕೆ ಹಾಗೂ ಅದಕ್ಕೆ ವಸಾಹತುಗಳು ಒಡ್ಡುವ ಪ್ರತಿರೋಧಗಳ ನೆಲೆಯಲ್ಲಿರುವ ಮುಖಾಮುಖಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ, ಬಿಡುಗಡೆಯ ಸಾಧ್ಯತೆ ಮತ್ತು ಸವಾಲುಗಳೆರಡನ್ನೂ ಮಂಡಿಸುತ್ತಾರೆ. ಕನ್ನಡದಲ್ಲಿ ನಡೆದಿರುವ ಬಿಡುಗಡೆಯ ಚಿಂತನೆಗಳ ಬಗೆಗೆ, ನಟರಾಜ್ ಹುಳಿಯಾರ್ ಅವರ ಅಭಿಪ್ರಾಯ ಹೀಗಿದೆ. "ನಿರ್ವಸಾಹತೀಕರಣದ ಕಲ್ಪನೆ ಕುರಿತು ಆಫ್ರಿಕನ್ ಸಾಹಿತ್ಯ ಹಾಯ್ದು ಬಂದಿರುವ ತೀವ್ರ ವಾಗ್ವಾದಗಳ ಘಟ್ಟಗಳನ್ನು ಕನ್ನಡ ಸಾಹಿತ್ಯ ಹಾಯ್ದು ಬಂದಿಲ್ಲವಾದರೂ ಸೃಜನಶೀಲ ಲೇಖಕರು ತಳೆಯುತ್ತಾ ಬಂದಿರುವ ನಿಲುವುಗಳಲ್ಲಿ ಹಾಗೂ ನಡೆಸುತ್ತಾ ಬಂದಿರುವ ಪ್ರಯೋಗಗಳಲ್ಲಿ ಈ ನಿರ್ವಸಾಹತೀಕರಣದ ಹಂಬಲ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಹಂತಗಳಲ್ಲಿ ಪ್ರಕಟವಾಗುತ್ತಾ ಬಂದಿದೆ"[೫೪] ಎನ್ನುತ್ತಾರೆ. ಈ ಮೂಲಕ ಕನ್ನಡ ಮತ್ತು ಆಫ್ರಿಕನ್ ಸಾಹಿತ್ಯದ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸುತ್ತಾರೆ. ಮುಂದುವರೆದು, "ಎಂ.ಎಸ್.ಪುಟ್ಟಣ್ಣನವರ ಆರಂಭದ ಕಾದಂಬರಿಗಳ ಕಥನ ತಂತ್ರದಿಂದ ಹಿಡಿದು ದೇವನೂರ ಮಹಾದೇವರ ದೇಶೀ ವಾಸ್ತವವಾದೀ ನೋಟದವರೆಗೂ, ಮಾಸ್ತಿಯಿಂದ ಕಂಬಾರರವರೆಗಿನ ತಾತ್ವಿಕ ಜಗತ್ತಿನವರೆಗೂ ಈ ನಿರ್ವಸಾಹತೀಕರಣದ ತುಡಿತ ಹೆಚ್ಚು ಅಬ್ಬರವಿಲ್ಲದೆ ತನ್ನ ಕೆಲಸ ಮಾಡುತ್ತಾ ಬಂದಿದೆ. ಶಂಕರ ಮೊಕಾಶಿ ಪುಣೇಕರ ಹಾಗೂ ಭವದ ನಂತರದ

ಅನಂತಮೂರ್ತಿಯವರಲ್ಲಿ ಈ ನಿರ್ವಸಾಹತೀಕರಣದ ಹಂಬಲ ಹೆಚ್ಚು ಪ್ರಜ್ಞಾಪೂರ್ವಕವಾಗಿ ಕಾಣುತ್ತಾ ಬಂದಿದೆ"[೫೫] ಎಂದು ಅವರು ಅಭಿಪ್ರಾಯಪಡುತ್ತಾರೆ. ಮೇಲಿನ ಅಭಿಪ್ರಾಯಗಳ ಪ್ರಕಾರ, ಆಫ್ರಿಕನ್ ಮತ್ತು ಕನ್ನಡದ ಬಿಡುಗಡೆಯ ಚಿಂತನೆಗಳಲ್ಲಿ ವ್ಯತ್ಯಾಸವಿದೆ. ಆಫ್ರಿಕನ್ ಸಾಹಿತ್ಯಕ್ಕೂ ಕನ್ನಡ ಸಾಹಿತ್ಯಕ್ಕೂ ಸಾಮ್ಯತೆಯನ್ನು ಹುಡುಕುವ ಕೆಲಸ ನಡೆಯುತ್ತಿರುವ ಸಂದರ್ಭದಲ್ಲಿ ಬಿಡುಗಡೆಯ ಚಿಂತನೆಗಳಲ್ಲಿ ಕನ್ನಡ ಸಾಹಿತ್ಯ ಅಬ್ಬರವಿಲ್ಲದೇ ಬಿಡುಗಡೆ ಕುರಿತು ಚಿಂತಿಸುತ್ತಿರುವುದನ್ನು ಅವರು ದಾಖಲಿಸುತ್ತಾರೆ.

ಆಧುನಿಕೋತ್ತರ ಸಂದರ್ಭದಲ್ಲಿ ವಸಾಹತುವಾದಿಗಳು ಅನೇಕ ಸಂಕಥನಗಳನ್ನು ಕಟ್ಟಿರುತ್ತಾರೆ. ಉದಾಹರಣೆಗೆ, ವಸಾಹತುಗಳು ಆಳ್ವಿಕೆಗೆ ಯೋಗ್ಯವಾದವು, ಅವುಗಳಲ್ಲಿ ಸ್ವಂತದ್ದು ಎನ್ನುವುದು ಏನೂ ಇಲ್ಲ, ಭಾರತ ಹಾವಾಡಿಗರ ದೇಶ ಇತ್ಯಾದಿ. ಇಂತಹ ಸಂಕಥನಗಳಿಗೆ ವಸಾಹತು ವಿರೋಧೀ ಸಿದ್ಧಾಂತಗಳ ಸ್ವರೂಪವು ಬಿಡುಗಡೆಯ ಸಂದರ್ಭದಲ್ಲಿ ಮುಖಾಮುಖಿಯಾಗುವ ಪ್ರಕ್ರಿಯೆ ಮುಖ್ಯ ಪಾತ್ರ ವಹಿಸುತ್ತದೆ.

ನಟರಾಜ್ ಹುಳಿಯಾರ್ ಅವರ ಪ್ರಕಾರ: "'ನಾಗರಿಕತೆ,' 'ಅಭಿವೃದ್ಧಿ,' 'ಆಧುನಿಕತೆ', 'ಚರಿತ್ರೆ' 'ಸಂಸ್ಕೃತಿ ಪ್ರಸಾರ' 'ವಿಜ್ಞಾನ' ಎಂಬ ಹೊಸ ನೆಲೆಗಳು ರೂಪಿಸಿದ ಮಹಾಕಥನಗಳು ಅಥವಾ ಅಧಿಕಾರಸ್ಥ ಸಂಕಥನಗಳ ಮೂಲಕ ಆಧುನಿಕ ಪಶ್ಚಿಮವು 'ಅನಾಗರಿಕ,' 'ಹಿಂದುಳಿದ' ಹಾಗೂ 'ಸಾಂಪ್ರದಾಯಿಕ' ಸಮಾಜಗಳಾದ ವಸಾಹತುಗಳಲ್ಲಿ ತಾನು ರೂಪಿಸಿಕೊಂಡ ಸ್ವ-ಪ್ರತಿಬಿಂಬದ ಸ್ವರೂಪವನ್ನು ಈವರೆಗೆ ಚರ್ಚಿಸಲಾದ ಆಫ್ರಿಕನ್ ಹಾಗೂ ಭಾರತೀಯ ವಸಾಹತು ವಿರೋಧೀ ಸಿದ್ಧಾಂತಗಳು ಹೇಳುತ್ತವೆ. ಇಂಥ ತನ್ನ ಸ್ವ-ಪ್ರತಿರೂಪವನ್ನು ಸೃಷ್ಟಿಸಿಕೊಂಡ ವಸಾಹತುವಾದೀ ಸಂಸ್ಕೃತಿ ತನ್ನ ಆಕ್ರಮಣಕ್ಕೊಳಗಾದ ಸಂಸ್ಕೃತಿಗಳಲ್ಲಿ ಗುರುತಿಸುವ ಸಾಧನೆಗಳೇನಾದರೂ ಇದ್ದರೆ, ಅವು ಕಲೆ, ಧರ್ಮ, ಜಾನಪದೀಯ ಜ್ಞಾನದಂತ ಕ್ಷೇತ್ರಗಳಲ್ಲಿ ಅಥವಾ ಆ ಸಂಸ್ಕೃತಿಗಳ ಕೆಲವು 'ವಿಲಕ್ಷಣ' ಅಂಶಗಳಲ್ಲಿ ಮಾತ್ರ. ಆದರೆ ಆಧುನಿಕ ಜಗತ್ತಿನಲ್ಲಿ ಗೆಲ್ಲುವ, ಉಳಿಯುವ ಗುಣಗಳಾಗಲೀ, ಶ್ರೇಷ್ಠ ಗುಣಗಳಾಗಲೀ ಇರುವುದು ತನ್ನಲ್ಲಿ ಮಾತ್ರ ಎಂಬುದು ಅದರ ದೃಢ ನಂಬಿಕೆ"[೫೬] ಎಂದು ಅವರು ವಸಾಹತುವಾದಿ ನೋಟಕ್ರಮವನ್ನು ವ್ಯಾಖ್ಯಾನಿಸುತ್ತಾರೆ. ವಸಾಹತುವಾದವು ವಸಾಹತುಗಳನ್ನು ದಮನ ಮಾಡಲು ಆಕ್ರಮಣಕಾರಿ ಕ್ರಮಗಳನ್ನು ಕೈಗೊಳ್ಳುತ್ತದೆ. ಈ ಮೂಲಕ ವ್ಯವಸ್ಥಿತ ರೂಪಣೆಗಳನ್ನು ಹತಾರಗಳಾಗಿ ಬಳಸುವ ಸಮಯದಲ್ಲಿ ಅನೇಕ ಹೇರಿಕೆಯ ಕ್ರಮಗಳನ್ನು ದೇಶೀ ಜೀವನ ಪದ್ಧತಿ, ಲೋಕಗ್ರಹಿಕೆ, ನೋಟಕ್ರಮಗಳ ಮೇಲೆ ಬಲವಂತವಾಗಿ, ಕೆಲವೊಮ್ಮೆ ಸಮ್ಮತಿ ಪಡೆದು ಒಪ್ಪಿಸಲಾಗುತ್ತದೆ ಎಂಬುದನ್ನು ನಟರಾಜ್ ಹುಳಿಯಾರ್ ಅವರು ಪ್ರತಿಪಾದಿಸುತ್ತಾರೆ.

ಇದೇ ಮಾದರಿಯಲ್ಲಿ ದೇಶೀ ವಸಾಹತುಶಾಹಿಗಳು ಕೂಡ ಕಾರ್ಯ ನಿರ್ವಹಿಸುವುದನ್ನು ಗಮನಿಸಬೇಕಿದೆ. ಸಂಸ್ಕೃತದ ಹೇರಿಕೆಯಿಂದ ಜಾತಿ ವ್ಯವಸ್ಥೆಯವರೆಗೆ ಅನೇಕ ರೀತಿಯ ಸಮ್ಮತ ಒಪ್ಪಂದಗಳನ್ನು ಅಲಿಖಿತ ಸಂವಿಧಾನದ ಮೂಲಕ ಜಾರಿಗೆ ತರಲಾಗಿದೆ. ಇಲ್ಲಿ ಗಮನಾರ್ಹ ಸಂಗತಿ ಎಂದರೆ, ದಮನಕಾರಿ ಮಾದರಿಗಳಾದ ಜಾತಿಗಳಿಗೆ ಕೂಡ ಮಾನ್ಯತೆ ಸಿಕ್ಕಿರುವುದು ಮತ್ತು ಸ್ವತಃ ತುಳಿತಕ್ಕೊಳಗಾಗುವ ಜನಾಂಗವನ್ನೂ ಇದರ ಪರಿಧಿಯೊಳಗೆ ಹಿಡಿದಿಡಲು ನಡೆಸಿರುವ

ಯತ್ನಗಳು ಅಚ್ಚರಿಯನ್ನುಂಟು ಮಾಡುತ್ತವೆ. ಇದೇ ಮಾದರಿಯನ್ನು ವಸಾಹತುಗಳು ಕೂಡ ಚಲಾವಣೆಗೆ ತಂದಿವೆ.

ಈ ಬಗೆಯ ವಿರಾಟ್ ಕಥನಗಳು ಆಧುನಿಕೋತ್ತರ ಸಂದರ್ಭದಲ್ಲಿ ನವವಸಾತುಶಾಹಿಗಳ ಅವಧಿಯಲ್ಲಿ ಕೂಡ ಮುಂದುವರೆದಿವೆ. ಹಳೆಯ ಅದೇ ವ್ಯವಸ್ಥಿತ ತಂತ್ರವನ್ನು ಮತ್ತಷ್ಟು ತೀವ್ರವಾಗಿ ಮತ್ತು ವ್ಯವಸ್ಥಿತವಾಗಿ ಇಂದು ನಡೆಸಲಾಗುತ್ತಿದೆ. ಈ ಕಾರಣದಿಂದಾಗಿ ವಸಾಹತುಗಳಾಗಿ ಬಿಡುಗಡೆ ಹೊಂದಿರುವ ರಾಷ್ಟ್ರಗಳಲ್ಲಿ ಮತ್ತೊಮ್ಮೆ, ಇನ್ನೊಂದು ರೀತಿಯಲ್ಲಿ ದಾಸ್ಯದ ಸಂಕೋಲೆಗೆ ಸಿಲುಕಿಕೊಳ್ಳುತ್ತಿರುವುದರ ಕುರಿತು ಅಧ್ಯಯನಗಳು ನಡೆಯಬೇಕಿದೆ ಎನಿಸುತ್ತದೆ. ಆದರೆ, ಹೊರ ಮತ್ತು ಒಳ ವಸಾಹತುಶಾಹಿಗಳ ಕುರಿತ ಖಚಿತ ವ್ಯಾಖ್ಯಾನ, ತಿಳಿವಳಿಕೆಯಿಲ್ಲದೇ ಇಂತಹ ಹುನ್ನಾರಗಳನ್ನು ಅರಿಯಲು ಸಾಧ್ಯವಿಲ್ಲವೆನಿಸುತ್ತದೆ. ಇದೇ ಕಾರಣದಿಂದಾಗಿ ಬಿಡುಗಡೆಯ ಕುರಿತು ಕೂಡ ಮಹತ್ವದ ಚರ್ಚೆಗಳು ಮುನ್ನೆಲೆಗೆ ಬರುತ್ತಿಲ್ಲ ಎನಿಸುತ್ತದೆ. ಈ ಕುರಿತು ಬೆರಳೆಣಿಕೆಯಷ್ಟು ಚಿಂತಕರನ್ನು ಹೊರತುಪಡಿಸಿದರೆ, ವಸಾಹತುಶಾಹಿ ಮತ್ತು ನವ ವಸಾಹತುಶಾಹಿಗಳ ಹಿಡಿತದ ಮಾದರಿಗಳ ಕುರಿತು ಅಧ್ಯಯನ ನಡೆಸಿರುವವರ ಸಂಖ್ಯೆ ಕಡಿಮೆ ಇದೆ. ಇದೇ ಕಾರಣದಿಂದಾಗಿ ಒಳ ಮತ್ತು ಹೊರ ವಸಾಹತುಶಾಹಿಗಳು ನಡೆಸಿರುವ ಹುನ್ನಾರಗಳನ್ನು ಇನ್ನೂ ಗ್ರಹಿಸಲು ಸಾಧ್ಯವಾಗಿಲ್ಲ ಎನಿಸುತ್ತದೆ.

ಆರ್ಥಿಕ ರಾಜಕಾರಣದ ಭಾಗವಾಗಿರುವ ವಸಾಹತುವಾದಿ ಸಂಕಥನಗಳು ಮತ್ತು ಇವನ್ನೂ ಒಳಗೊಂಡು ಸಾಮಾಜಿಕ ಕಾರಣವನ್ನು ಒಳಗೊಂಡಿರುವ ಒಳ ವಸಾಹತುವಾದಿಗಳ ಸಂಕಥನಗಳನ್ನು ನಿರಚಿಸಿಕೊಳ್ಳದೆ, ಬಿಡುಗಡೆಯ ಚರ್ಚೆಗಳು ಮುಂದೆ ಸಾಗಲು ಒಡ್ಡುಗಳು ಎದುರಾಗುತ್ತವೆ. ಆದರೆ, ವಸಾಹತುವಾದಿ ರೂಪಣೆಗಳನ್ನು ಪ್ರಶ್ನಿಸುವ ದೇಶೀ ಮಾದರಿಗಳ ಬಹುಮುಖತೆಯನ್ನು ಏಕರೂಪೀಕರಣಗೊಳಿಸುವ ಯತ್ನ ನಡೆಯುತ್ತದೆ. ಅಧಿಕಾರಶಾಹಿಗಳು ಏಕತೆ, ರಾಷ್ಟ್ರೀಯತೆಯ ಹೆಸರಿನಲ್ಲಿ ಒಡೆದು ಆಳುವ, ಆ ಮೂಲಕ ತಾವು ನಿರಂತರವಾಗಿ ಅಧಿಕಾರದಲ್ಲಿ ಮುಂದುವರೆಯುವ ಸಾಧ್ಯತೆಗಳತ್ತ ಆಲೋಚಿಸುತ್ತಿರುವುದನ್ನು ಬಿಡುಗಡೆಯ ಚಿಂತನೆಗಳು ಮುಖ್ಯವೆಂದು ಭಾವಿಸಿವೆ. ಜೊತೆಗೆ, ತಾವು ಆಳುವವರು, ವಸಾಹತುಗಳು ಆಳಿಸಿಕೊಳ್ಳಬೇಕಾದವರು ಎಂಬ ಸಂಕಥನವನ್ನು ಕಟ್ಟಿ, ವಸಾಹತುಗಳನ್ನು ದಮನ ಮಾಡುವ ಆಕ್ರಮಣಕಾರಿ ಸಿದ್ಧಾಂತವನ್ನು ಹುಟ್ಟುಹಾಕಿರುವುದನ್ನು ಪ್ರಶ್ನಿಸುತ್ತಿವೆ. ವಸಾಹತುಶಾಹಿಗಳ ಈ ಬಗೆಯ ಏಕರೂಪೀಕರಣ ಮತ್ತು ವಸಾಹತುಶಾಹಿ ಸೃಷ್ಟಿಸುವ ಹಿಂಸೆಯ ಮಾದರಿಗಳನ್ನು ನಟರಾಜ್ ಹುಳಿಯಾರ್ ಹೀಗೆ ಗುರುತಿಸಿದ್ದಾರೆ: "ಯಜಮಾನಿಕೆಯ ಧೋರಣೆಯಿಂದ ಹೊರಟು ದೇಶೀ ಸಂಸ್ಕೃತಿಗಳ ದೈವೀ ನೆಲೆಗಳನ್ನು, ಬಹುರೂಪಿ ಗುಣವನ್ನೂ, ನ್ಯಾಯ ಬದ್ಧತೆಯನ್ನು ನಾಶಮಾಡಿ ಒಂದೇ ರೂಪದ ಯಾಂತ್ರಿಕ ಸಮಾಜವನ್ನೂ, ಆಧುನಿಕ ಹಿಂಸೆಗಳ ನೆಲೆಗಳನ್ನು ಸೃಷ್ಟಿಸುವ ವಸಾಹತು ಅನುಭವವನ್ನು ಮೂಲತಃ ಹಿಂಸೆಯ ಅನುಭವವನ್ನಾಗಿಯೇ ಈ ವರೆಗೆ ಚರ್ಚಿಸಲಾದ ವಸಾಹತು ವಿರೋಧಿ ಸಿದ್ಧಾಂತಗಳು ಗ್ರಹಿಸುತ್ತವೆ."[೫೭] ಆದುದರಿಂದ ಆಧುನಿಕ ವಸಾಹತುವಾದವನ್ನು ಚರ್ಚಿಸುವಾಗ ಈ ವಸಾಹತು ವಿರೋಧೀ ಸಿದ್ಧಾಂತಗಳ ಪ್ರಧಾನ ಧ್ವನಿ ಪಶ್ಚಿಮದ ವಿರೋಧಿಯಾಗುವುದು ಸಹಜವೆಂದು ನಟರಾಜ್ ಹುಳಿಯಾರ್ ಅಭಿಪ್ರಾಯಪಡುತ್ತಾರೆ: "ಇದಕ್ಕೆ ತದ್ವಿರುದ್ಧವಾಗಿ ದೇಶೀ ಪರಂಪರೆಗಳ ಮಹತ್ವವನ್ನು ಪ್ರತಿಪಾದಿಸುವ

ಭಾರತದ ನಿರ್ವಸಾಹತೀಕರಣದ ಚಿಂತಕರಾದ ಬಿಖುಪರೇಖ್, ಅಶೀಶ್ ನಂದಿ, ಗೌರಿ ವಿಶ್ವನಾಥನ್ ಮೊದಲಾದವರಿಗೆ ಭಾರತೀಯ ಚಿಂತನೆ ಎನ್ನುವುದು ಮುಖ್ಯವಾಗಿ ಗ್ರಾಂಥಿಕ ಭಾರತದಲ್ಲಿ ಕಾಣುತ್ತದೆಯೇ ಹೊರತು, ಜಾನಪದ ಕತೆ, ಕಾವ್ಯ, ದೇಶೀ ಮಹಾಕಾವ್ಯಗಳು, ಗಾದೆಗಳ ಜೀವಂತ ಭಾರತ ಅಷ್ಟು ಮುಖ್ಯವಾಗಿ ಕಾಣುವುದಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಈ ಚಿಂತಕರು ಅನಾಧುನಿಕ ಭಾರತವನ್ನು ಆಗಾಗ್ಗೆ ಪ್ರಸ್ತಾಪಿಸಿದರೂ, ಒಟ್ಟಾರೆಯಾಗಿ ಅನಾಧುನಿಕ ಭಾರತವಿನ್ನೂ ಈ ಸಿದ್ಧಾಂತಗಳಲ್ಲಿ ಕೇವಲ ಪರಿಕಲ್ಪನೆಯಾಗೆ ಉಳಿದಿದೆ. ಅನಾಧುನಿಕ ಭಾರತದ ಅವೈದಿಕ ಚಿಂತನೆಗಳನ್ನು ಡಿ. ಆರ್. ನಾಗರಾಜ್ ಅವರು ಸಂಪಾದಿಸಿರುವ ಅಕ್ಷರ ಚಿಂತನ ಮಾಲೆಯ ಕೆಲವು ಪುಸ್ತಕಗಳು ಮಂಡಿಸಲೆತ್ನಿಸಿವೆ."[೫೮] ಎನ್ನುತ್ತಾರೆ. ನಟರಾಜ್ ಹುಳಿಯಾರ್ ಅವರು ಭಾರತೀಯ ಬಿಡುಗಡೆಯ ಪ್ರಕ್ರಿಯೆಯಲ್ಲಿ ಅವೈದಿಕ ಚಿಂತನೆಯ ಪ್ರಸ್ತುತತೆ ಪ್ರಮುಖವೆಂದು ಭಾವಿಸುತ್ತಾರೆ. ಆಧುನಿಕೋತ್ತರ ಸಂದರ್ಭದಲ್ಲಿ ಆಧುನಿಕ ಪೂರ್ವದ ಅಧಿಕೃತತೆಯ (Athenticity) ಪ್ರಶ್ನೆಗಳನ್ನು ಉತ್ತರಿಸುವ ಬಗೆ ಹೇಗೆ ಎಂಬ ಪ್ರಶ್ನೆಯೊಂದನ್ನು ನಮ್ಮ ಮುಂದಿರಿಸುತ್ತಾರೆ. ಈ ಪ್ರಶ್ನೆಯನ್ನು ಬಿಡುಗಡೆಯ ಸಂದರ್ಭದಲ್ಲಿ ಮುಖ್ಯವಾಗಿ ಎದುರಿಸಬೇಕೆನಿಸುತ್ತದೆ.

ಏಕೆಂದರೆ, ಬಿಡುಗಡೆಯ ಪ್ರಕ್ರಿಯೆಯಲ್ಲಿ ವಸಾಹತುಶಾಹಿಯ ದಮನ ಹಾಗೂ ದೇಶೀ ವಸಾಹತುಶಾಹಿಗಳಿಬ್ಬರಿಂದಲೂ ಬಿಡುಗಡೆ ಹೊಂದುವುದು ನಿಜವಾದ ಬಿಡುಗಡೆಯಾಗುತ್ತದೆಯೇ ಹೊರತು, ಕೇವಲ ಪಶ್ಚಿಮದ ಆಡಳಿತದಿಂದ ಬಿಡುಗಡೆ ಹೊಂದುವುದಷ್ಟೇ ಅಲ್ಲ. ಅದನ್ನು ನಟರಾಜ್ ಹುಳಿಯಾರ್ ಅವರೇ ಹೀಗೆ ಸ್ಪಷ್ಟಪಡಿಸುತ್ತಾರೆ: "ವಸಾಹತುವಾದೀ ನೋಟಕ್ರಮ ಪೂರ್ವವನ್ನೂ, ಪಶ್ಚಿಮವನ್ನೂ ಬಿಡದೆ ಕಬಳಿಸುತ್ತಿರುವಾಗ, ಆಧುನಿಕ ಪೂರ್ವ ನೋಟಕ್ರಮಗಳ ಪ್ರತಿಪಾದನೆಯನ್ನು ಕುರಿತಂತೆ ಈ ಸಿದ್ಧಾಂತಗಳ ನಿಲುವು ನ್ಯಾಯಬದ್ಧವೆಂಬಂತೆ ಕಾಣತೊಡಗುತ್ತದೆ. ಆದರೆ ಇಲ್ಲೊಂದು ಮುಖ್ಯ ಮಿತಿಯಿದೆ. ಅದೇನೆಂದರೆ, ದೇಶೀ ಸಮಾಜಗಳ ಪಾರಂಪರಿಕ ಹಿಂಸೆಗಳನ್ನು ಅಚೀಬೆ, ಷೋಯಿಂಕಾ, ಕುವೆಂಪು, ತೇಜಸ್ವಿ, ಅನಂತಮೂರ್ತಿ, ಲಂಕೇಶ್, ಮಹಾದೇವ ಮೊದಲಾದ ಲೇಖಕರ ಸಾಹಿತ್ಯ ಕೃತಿಗಳು ಗ್ರಹಿಸಿದಂತೆ ಈ ಸಿದ್ಧಾಂತಗಳು ಗ್ರಹಿಸುವುದಿಲ್ಲ."[೫೯] ಎನ್ನುತ್ತಾ, ಈ ಬಗೆಯ ಗ್ರಹಿಕೆಗೆ ಫುಲೆ, ಗಾಂಧಿ, ಅಂಬೇಡ್ಕರ್, ಲೋಹಿಯಾ, ಪೆರಿಯಾರ್‌ರವರ ಚಿಂತನೆಗಳಿಂದ ಪ್ರೇರಣೆ ಪಡೆದ ಬಿಡುಗಡೆಯ ಚಿಂತನೆಗಳು ಪಶ್ಚಿಮದ ಚಿಂತನೆಗಳಿಗಿಂತ ಭಿನ್ನವಾಗುವ ಸಾಧ್ಯತೆಗಳಿವೆ ಎನ್ನುತ್ತಾರೆ.

ಇಂಥ ಮಹತ್ವದ ಬಿಡುಗಡೆಯ ಚಿಂತನೆಗಳು ಸಾಹಿತ್ಯ, ಸಂಶೋಧನೆ, ವಿಮರ್ಶಾ ಕ್ಷೇತ್ರಗಳಲ್ಲಿ ನಡೆದಿವೆ. ಆದರೆ, ಡಿ. ಎನ್. ಶಂಕರಬಟ್ಟ, ಕೆ. ವಿ. ನಾರಾಯಣ ಮೊದಲಾದವರನ್ನು ಹೊರತುಪಡಿಸಿದರೆ, ಭಾಷಿಕವಾಗಿ ಬಿಡುಗಡೆ ಕುರಿತ ಚರ್ಚೆಗಳು ಕನ್ನಡದಲ್ಲಿ ನಡೆದಿಲ್ಲ.

ವಸಾಹತೋತ್ತರ ಹಾಗೂ ಆಧುನಿಕೋತ್ತರ ಕಾಲಘಟ್ಟದ ಚಿಂತನೆಗಳು ವಸಾಹತುಶಾಹಿಗಳ ಪ್ರಭಾವದಿಂದ ಎಲ್ಲ ಮಾದರಿಯಿಂದ ಬಿಡುಗಡೆ ಹೊಂದುವತ್ತ ಗಮನ ಹರಿಸುತ್ತಿವೆ. ವಸಾಹತುಶಾಹಿ ಕಾಲದ ಆಡಳಿತದ ಪರಿಣಾಮದಿಂದಾಗಿ ದೇಶೀ ಸಮುದಾಯಗಳಲ್ಲಿದ್ದ ದೇಶೀ ಧರ್ಮ, ಸಂಜಿಕೆ, ರಾಜಕೀಯ ವ್ಯವಸ್ಥೆ, ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು, ಶಿಕ್ಷಣ ಪದ್ಧತಿ, ನ್ಯಾಯ ಪದ್ಧತಿ

ಮೊದಲಾದವುಗಳೆಲ್ಲ ಪಲ್ಲಟಕ್ಕೆ ಒಳಗಾಗಿವೆ. ಇವುಗಳಲ್ಲಿನ ಅರ್ಥಪೂರ್ಣವಾದ ವ್ಯವಸ್ಥೆಗಳನ್ನು ಪುನರ್ರೂಪಿಸಿಕೊಳ್ಳುವ ಹಂಬಲ ಈ ಬಿಡುಗಡೆ ಪ್ರಕ್ರಿಯೆಯ ಕೇಂದ್ರ ಎಂದರೆ ತಪ್ಪಾಗಲಾರದು. ಆದರೆ, ಇದರಲ್ಲೂ ಕೆಲವು ಮಿತಿಗಳಿವೆ.

ಈ ಬಿಡುಗಡೆಯ ಪ್ರಯತ್ನ ಅನೇಕ ವಲಯಗಳಲ್ಲಿ ಏಕಕಾಲಕ್ಕೆ ನಡೆಯಬೇಕಾಗುತ್ತದೆ. ಪ್ರಭಾವೀ ಬಿಡುಗಡೆಯ ಸಾಧ್ಯತೆಗಳಿಗೆ ಅಗತ್ಯವಾಗಿರುವುದು ಭಾಷಿಕ ಬಿಡುಗಡೆ. ಜಗತ್ತನ್ನು ಅರ್ಥೈಸಿಕೊಳ್ಳುವ, ಪರಿಭಾವಿಸುವ ಮಾಧ್ಯಮವೇ ಭಾಷೆ. ಆದ್ದರಿಂದ ಭಾಷಿಕವಾಗಿ ಬಿಡುಗಡೆ ಹೊಂದುವುದು ಅತ್ಯಗತ್ಯವಾಗಿದೆ.

ಆಧುನಿಕ ಪರಿಭಾಷೆಯಾದ ಬಿಡುಗಡೆ ಪ್ರಕ್ರಿಯೆ ಈ ಹಿಂದೆ ಕೂಡ ವಿವಿಧ ಹಂತಗಳಲ್ಲಿ, ಭಿನ್ನ ಪರಿಭಾಷೆಯಲ್ಲಿ ವ್ಯಕ್ತವಾಗಿದೆ. ಧಾರ್ಮಿಕ ಸುಧಾರಣಾ ಪ್ರಕ್ರಿಯೆಗಳು, ಚಳವಳಿಗಳು, ಪ್ರತಿರೋಧಗಳನ್ನು ಬಿಡುಗಡೆಯ ಆರಂಭಿಕ ಯತ್ನಗಳು ಎಂದೇ ಪರಿಭಾವಿಸಬಹುದು. ವೈದಿಕ–ಅವೈದಿಕ, ಸಂಸ್ಕೃತ–ಕನ್ನಡ, ಮಾರ್ಗ–ದೇಸಿ ಮುಂತಾದ ರಚನೆಗಳನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿದರೆ, ಅವುಗಳ ಒಟ್ಟು ಫಲಿತಗಳನ್ನು ಗಮನಿಸಿದರೆ ಅವುಗಳ ಆಳದಲ್ಲಿರುವುದು ಬಿಡುಗಡೆಯ ಆಶಯಗಳೇ ಎಂಬ ಅಂಶ ಬಹಿರಂಗವಾಗುತ್ತದೆ. ಇದರ ಖಚಿತತೆಗೆ ಸಂಸ್ಕೃತ–ಕನ್ನಡ, ಇಂಗ್ಲಿಷ್–ಕನ್ನಡ ಮೊದಲಾದ ವೈರುಧ್ಯಗಳ ವ್ಯವಸ್ಥಿತ ಅಧ್ಯಯನವೂ ಅಗತ್ಯವೆನಿಸುತ್ತದೆ. ಪ್ರಸ್ತುತ ಅಧ್ಯಯನದ ವಿವಿಧ ಹಂತಗಳಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಸಂಶೋಧನೆ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ವ್ಯಕ್ತವಾಗಿರುವ ಚಿಂತನೆಗಳನ್ನು ಅಧ್ಯಯನ ನಡೆಸಲಾಗಿದೆ.

ಆಧುನಿಕ ಮತ್ತು ಆಧುನಿಕ ಪೂರ್ವ ಚಿಂತನೆಗಳು ದೇಶೀ ಮತ್ತು ವಿದೇಶಿ ವಸಾಹತುಶಾಹಿಗಳಿಂದಲೂ ಬಿಡುಗಡೆ ಹೊಂದುವ ಪ್ರಯತ್ನವನ್ನು ನಡೆಸಿವೆ. ಈ ಬಗೆಯ ಚರ್ಚೆ ಹಾಗೂ ಚಿಂತನೆಗಳನ್ನು ಆಧುನಿಕ, ಆಧುನಿಕೋತ್ತರ ಸಂದರ್ಭದ ಅನೇಕ ಚಿಂತನೆ, ಪರಿಭಾಷೆಗಳೊಡನೆ ಅಧ್ಯಯನ ನಡೆಸಬೇಕಿದೆ.

ಶ್ರೀವಿಜಯ, ಪಂಪ, ವಚನಕಾರರು, ಕೇಶಿರಾಜ, ಆಂಡಯ್ಯ ಮೊದಲಾದವರು ಆರಂಭದಿಂದ ನಡೆಸಿರುವ ಚರ್ಚೆಗಳನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿ, ಅವರ ಚಿಂತನೆಗಳ ವಿಸ್ತೃತರೂಪವನ್ನು ಆಧುನಿಕ ಹಾಗೂ ಆಧುನಿಕೋತ್ತರ ಕಾಲಘಟ್ಟದ ಚಿಂತಕರಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳಿಗಿರುವ ಸಾಮ್ಯತೆ–ಭಿನ್ನತೆಗಳೊಡನೆ ಈ ಚಿಂತನೆಗಳಿಗೆ ಇರುವ ಸಾಧ್ಯತೆ ಮತ್ತು ಸಮಸ್ಯೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

೩.೫. ಅವಳಿ ವೈರುಧ್ಯಗಳು

ಕನ್ನಡದಲ್ಲಿ ಅವಳಿ ವೈರುಧ್ಯಗಳ ಪರಿಕಲ್ಪನೆಯನ್ನು ಕೆ. ವಿ. ನಾರಾಯಣ, ಸಿ. ಎನ್. ರಾಮಚಂದ್ರನ್, ಡಿ. ಆರ್. ನಾಗರಾಜ್, ಡಿ. ಡಾಮಿನಿಕ್ ಮೊದಲಾದವರು ಅವಳಿಗಳು, ಅವಳಿ ವಿರೋಧಗಳು, ಅವಳಿ ವೈರುಧ್ಯಗಳು, ದ್ವಿಮಾನ ವೈರುಧ್ಯ ಮತ್ತು ಅವಳಿ ದ್ವಂದ್ವಗಳು ಇವೇ

ಮೊದಲಾದ ಪರಿಭಾಷೆಯಲ್ಲಿ ಕರೆದಿದ್ದಾರೆ. ಲೋಕವನ್ನು ಗ್ರಹಿಸಲು ಅನುಕೂಲವಾಗುವಂತೆ ಮಾರ್ಕ್ಸ್‌ವಾದವು ಈ ವೈರುಧ್ಯಗಳನ್ನು ಬಂಡವಾಳಶಾಹಿ–ಶ್ರಮಿಕರ ನಡುವೆ ಕಂಡುಕೊಂಡು ವಿವರಿಸಿಕೊಂಡಿದೆ.[೬೦] ನಂತರ ಡೆರಿಡಾನ ಚಿಂತನೆಗಳಿಂದ ವೈರುಧ್ಯಗಳ ಗ್ರಹಿಕೆಯು ಸಾಹಿತ್ಯ, ಸಂಸ್ಕೃತಿ, ವಿಮರ್ಶೆಯ ಸಂದರ್ಭದಲ್ಲಿ ಹೆಚ್ಚು ವ್ಯಾಪಕವಾಗಿ ಚರ್ಚೆಗೆ ಒಳಗಾಗಿದೆ.[೬೧] ಡೆರಿಡಾನ ಬೈನರಿ ಆಪೋಸಿಶನ್ಸ್‌ನ ಗ್ರಹಿಕೆಯು ಲೋಕದಲ್ಲಿನ ವೈರುಧ್ಯದ ಗ್ರಹಿಕೆಗಿಂತ ತೀರಾ ಭಿನ್ನವಾಗಿದೆ.

ಅವಳಿ ವೈರುಧ್ಯಗಳು ಒಂದೇ ವಾತಾವರಣದಲ್ಲಿದ್ದರೂ ಪರಸ್ಪರ ವಿರುದ್ಧ ಎನ್ನುವಂತೆ ಕಾಣುತ್ತವೆ. ಆದ್ದರಿಂದ ಈ ಅವಳಿಗಳನ್ನು ಕೆಲವು ಸಾಮಾಜಿಕ ರಚನೆಗಳಲ್ಲಿ ವೈರುಧ್ಯಗಳೆಂದು ಪರಿಭಾವಿಸಲಾಗಿದೆ. ಈ ವೈರುಧ್ಯಗಳು ಪರಸ್ಪರ ವಿರುದ್ಧವೆನ್ನುಂತೆ ಬಿಂಬಿತವಾಗಿರುವುದೂ ಉಂಟು. ಅವುಗಳಲ್ಲಿ ನೈಜವಾದ ಭಿನ್ನತೆ ಇದೆಯೇ ಎಂಬ ಪ್ರಶ್ನೆಗೆ ಖಚಿತ ಉತ್ತರ ಸಿಕ್ಕಿಲ್ಲ. ಆದರೆ, ಆಳವಾದ ಅಧ್ಯಯನದಿಂದ ವೈರುಧ್ಯಗಳ ನಡುವಿನ ಭಿನ್ನತೆ ಆರೋಪಿತ ಎಂದು ಸಾಬೀತುಪಡಿಸಬಹುದು ಎನಿಸುತ್ತದೆ. ಅವಳಿ ವೈರುಧ್ಯಗಳಿಗೆ ಕೆಲವು ಉದಾಹರಣೆಗಳು ಇಲ್ಲಿವೆ: ವೈದಿಕ–ಅವೈದಿಕ, ಆರ್ಯ–ದ್ರಾವಿಡ, ಲೌಕಿಕ–ಅಲೌಕಿಕ, ವಸ್ತುಕ–ವರ್ಣಕ, ಮಾರ್ಗ–ದೇಸಿ, ಸಂಸ್ಕೃತ–ಕನ್ನಡ, ಇಂಗ್ಲಿಷ್–ಕನ್ನಡ, ಬರಹ–ಮಾತು,. ಶಿಷ್ಟ–ಜಾನಪದ, ಕಪ್ಪು–ಬಿಳುಪು, ಪುರುಷ–ಸ್ತ್ರೀ, ನಗರ–ಹಳ್ಳಿ ಮುಂತಾದವು.

ಇವುಗಳ ಅಧ್ಯಯನ ನಡೆಸಿರುವ ಡಿ. ಡಾಮಿನಿಕ್ ಅವರು ಇನ್ನಷ್ಟು ವಿಭಾಗ ಕ್ರಮಗಳನ್ನು ನೀಡಿದ್ದಾರೆ. ಅವರ ಪ್ರಕಾರ:

೧. ಸಾಹಿತ್ಯಕ / ಕಲಾತ್ಮಕ: ಜನಪ್ರಿಯ – ಶಾಸ್ತ್ರೀಯ, ಮೌಖಿಕ – ಲಿಖಿತ, ಲೇಖಕ – ಓದುಗ, ನವ್ಯ – ಬಂಡಾಯ, ಶ್ರೇಷ್ಠ – ಕನಿಷ್ಠ, ಸಂಪ್ರದಾಯ – ಆಧುನಿಕತೆ.

೨. ರಾಜಕೀಯ: ಭಾರತ – ಪಾಕಿಸ್ತಾನ, ಅಮೆರಿಕಾ – ಇರಾಕ್, ಪ್ರಭು – ಪ್ರಜೆ, ಹಳ್ಳಿ – ದಿಲ್ಲಿ, ಸ್ವದೇಶಿ – ವಿದೇಶಿ, ಕರಿಯ – ಬಿಳಿಯ, ಇತ್ಯಾದಿ.

೩. ಆರ್ಥಿಕ: ಶ್ರೀಮಂತ – ಬಡವ, ಮಾಲಿಕ – ಕಾರ್ಮಿಕ, ಲಾಭ – ನಷ್ಟ, ಶೋಷಕ – ಶೋಷಿತ, ಬೇಸಾಯ – ಕೈಗಾರಿಕೆ, ಕಪ್ಪು ಹಣ – ಬಿಳಿ ಹಣ ಇತ್ಯಾದಿ.

೪. ಧಾರ್ಮಿಕ: ಸ್ವರ್ಗ – ನರಕ, ನಾಸ್ತಿಕ – ಆಸ್ತಿಕ, ಲೌಕಿಕ – ಅಲೌಕಿಕ, ಆತ್ಮ – ದೇಹ, ರಾಮ – ರಾವಣ, ಜೀಸಸ್ – ಕಾರ್ಲ್ ಮಾರ್ಕ್ಸ್, ಇತ್ಯಾದಿ.

೫. ಜಾತ್ಯಾಧಾರಿತ: ಬ್ರಾಹ್ಮಣ – ದಲಿತ, ಶುದ್ಧ – ಅಶುದ್ಧ, ಶಿಷ್ಟ – ಪರಿಶಿಷ್ಟ. ಮೇಲು – ಕೀಳು, ಗಾಂಧೀಜಿ – ಅಂಬೇಡ್ಕರ್, ಆರ್ಯ – ದ್ರಾವಿಡ, ಇತ್ಯಾದಿಗಳು.

೬. ನೈತಿಕ: ಸತ್ಯ – ಅಸತ್ಯ, ಒಳಿತು – ಕೆಡುಕು, ಶೀಲ – ಅಶ್ಲೀಲ, ನ್ಯಾಯ – ಅನ್ಯಾಯ, ಇತ್ಯಾದಿ.

೭. ಸಾಮಾಜಿಕ: ವ್ಯಕ್ತಿ – ಸಮಾಜ, ಗ್ರಾಮ – ನಗರ, ಅಕ್ಷರಸ್ಥ – ಅನಕ್ಷರಸ್ಥ, ಪ್ರಧಾನ – ಅಧೀನ, ಚಪ್ಪಲಿ – ಬೂಟು, ಇತ್ಯಾದಿ.

೮. ಲಿಂಗಾಧಾರಿತ: ಗಂಡು – ಹೆಣ್ಣು, ಗರತಿ – ಸೂಳೆ, ಬಂಜೆ – ತಾಯ್ತನ, ಗಂಡಿಗ – ಹೆಣ್ಣಿಗ, ಇತ್ಯಾದಿ.

೯. ತಾತ್ವಿಕ: ಪೂರ್ವ – ಪಶ್ಚಿಮ, ಭ್ರಮೆ – ವಾಸ್ತವ, ಪುರುಷ – ಪ್ರಕೃತಿ, ವೈಚಾರಿಕ – ಅವೈಚಾರಿಕ, ಸರಳ – ಸಂಕೀರ್ಣ, ತರ್ಕ – ಅತರ್ಕಗಳನ್ನು ಸೇರಿಸಿದ್ದಾರೆ.[೭೨]

೩.೫.೧. ವೈದಿಕ – ಅವೈದಿಕ

ಯಾವುದೇ ಧರ್ಮ, ಸಿದ್ಧಾಂತಗಳು ಹುಟ್ಟುವ ಸಂದರ್ಭದಲ್ಲಿ ಉದಾತ್ತ ಧ್ಯೇಯಗಳನ್ನು ಹೊಂದಿರುತ್ತವೆ. ಆದರೆ ಅವುಗಳನ್ನು ಭವಿಷ್ಯದಲ್ಲಿ ವ್ಯಾಖ್ಯಾನಿಸುವವರು ಸಂಕುಚಿತ ಚೌಕಟ್ಟಿಗೆ ಒಳಗಾಗಿಸುತ್ತಾರೆ. ಎಲ್ಲ ಧರ್ಮಗಳು ಮಾನವರ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿದ್ದರೂ ಮುಂದಿನ ವ್ಯಾಖ್ಯಾನಕಾರರು ತಮ್ಮ ಧರ್ಮಗಳ ಶ್ರೇಷ್ಟತೆಯ ವ್ಯಸನಕ್ಕೆ ಸಿಲುಕಿ, ಅನ್ಯ ಧರ್ಮಗಳನ್ನು ಸಂಕುಚಿತ ದೃಷ್ಟಿಯಿಂದ ಪರಿಭಾವಿಸುವುದು ಆತಂಕಕಾರಿ ವಿಷಯವಾಗಿ ಪರಿಣಮಿಸಿದೆ. ಇತ್ತೀಚೆಗೆ ಧರ್ಮಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೂಲಭೂತವಾದ ಸುಳಿಗೆ ಸಿಲುಕಿ ನರಳುತ್ತಿವೆ.

ಭಾರತದಲ್ಲಿ ಅನೇಕ ಸಾಂಸ್ಥಿಕ ಕಾರಣಗಳಿಂದಾಗಿ ವೈದಿಕ ಚಿಂತನೆಗಳಿಗೆ ಪ್ರಾಧಾನ್ಯತೆ ಸಿಕ್ಕಿದೆ. ಪ್ರಭುತ್ವಗಳೇ ಧರ್ಮ ಪೋಷಣೆ ಹಾಗೂ ಸಂಸ್ಕೃತಿಯ ವಕ್ತಾರಿಕೆಯ ಕೆಲಸವನ್ನು ಕೂಡ ನಿರ್ವಹಿಸಿರುವುದಕ್ಕೆ ದೇಶದಲ್ಲಿ ಅನೇಕ ಉದಹಾರಣೆಗಳಿವೆ. ದೇಶದಲ್ಲಿ ಮೌರ್ಯರು, ಗುಪ್ತರು, ರಾಜ್ಯದಲ್ಲಿ ವಿಜಯನಗರ ಮತ್ತು ಮೈಸೂರು ಅರಸರ ಆಳ್ವಿಕೆಯ ಅವಧಿಯಲ್ಲಿ ಹಿಂದೂ ಧರ್ಮಕ್ಕೆ, ನೃಪತುಂಗ, ಅರಿಕೇಸರಿ ಮೊದಲಾದವರು ಆಳುವ ಸಂದರ್ಭದಲ್ಲಿ ಜೈನ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ ಅನೇಕ ಉದಾಹರಣೆಗಳಿವೆ. ಆದರೆ, ಆಧುನಿಕ ಸಂದರ್ಭದಲ್ಲಿ ಕೂಡ ಇಂಥದ್ದೇ ಪ್ರವೃತ್ತಿಗಳು ಮುಂದುವರೆದಿವೆ. ತಾವು ಪ್ರತಿನಿಧಿಸುವ ಅಥವಾ ತಮ್ಮ ಆಯ್ಕೆಯ ಧರ್ಮಗಳನ್ನು ಪ್ರಜಾಪ್ರಭುತ್ವದಡಿ ಆಯ್ಕೆಯಾದ ಸರ್ಕಾರಗಳು ಕೂಡ ಪೋಷಿಸುತ್ತಿವೆ.

ಇಂತಹ ಸಂದರ್ಭದಲ್ಲಿ ನಿರ್ದಿಷ್ಟ ಧರ್ಮ, ಭಾಷೆ, ಸಂಸ್ಕೃತಿಗಳನ್ನು ಬೆಂಬಲಿಸುವ ಪ್ರಭುತ್ವ, ಪರೋಕ್ಷವಾಗಿ ಇನ್ನುಳಿದ ಧರ್ಮಗಳನ್ನು ಅಂಚಿಗೆ ತಳ್ಳುತ್ತದೆ. ಈ ಪ್ರಕ್ರಿಯೆ ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿದ್ದರೆ, ಮತ್ತೆ ಕೆಲವು ಬಾರಿ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ಭಾರತದಂತಹ ಬಹು ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ವಾತಾವರಣದಲ್ಲಿ ಪ್ರಭುತ್ವಗಳು ತೆಗೆದುಕೊಳ್ಳುವ ಈ ಬಗೆಯ ನಿರ್ಣಯಗಳು ಕೆಲವು ಸಂದರ್ಭದಲ್ಲಿ ಅನ್ಯ ಧರ್ಮ, ಭಾಷೆ, ಸಂಸ್ಕೃತಿಗಳಿಗೆ ಮಾರಕವಾಗಿ ಪರಿಣಮಿತ್ತವೆ. ಭಾರತದ ದೇಶೀ ರಾಜರು, ಮೊಘಲರು, ಬ್ರಿಟಿಷ್ ಹಾಗೂ ಆಧುನಿಕ ಪ್ರಜಾಪ್ರಭುತ್ವದ ಸಂದರ್ಭಗಳಲ್ಲೂ ಈ ಬಗೆಯ ತಾರತಮ್ಯಗಳು ಮುಂದುವರೆದಿವೆ.

ಬೌದ್ಧ, ಜೈನ, ವೈಷ್ಣವ, ವೀರಶೈವ, ಮುಸ್ಲಿಂ, ಕ್ರಿಶ್ಚಿಯನ್ ಮುಂತಾದ ಧರ್ಮವನ್ನಾಶ್ರಯಿಸಿದ, ಪೋಷಿಸಿದ ಪ್ರಭುತ್ವಗಳು ಆಯಾ ಸಂದರ್ಭದಲ್ಲಿ ತಾನು ನಂಬಿದ ಧರ್ಮಗಳಿಗೆ ಉದಾರವಾಗಿ ದಾನ, ದತ್ತಿ ನೀಡಿರುವುದು ಮತ್ತು ಅನೇಕ ಕಾರಣಗಳಿಂದಾಗಿ ಮತಾಂತರಗಳು ನಡೆದಿರುವುದು ಚರಿತ್ರೆಯಲ್ಲಿ ದಾಖಲಾಗಿದೆ. ಅಂತೆಯೇ ಉದಾರ ಮನೋಧರ್ಮದ ರಾಜರು ಆಳ್ವಿಕೆ ನಡೆಸಿರುವುದಕ್ಕೆ ಕೂಡ ಇತಿಹಾಸದಲ್ಲಿ ಸಾಕ್ಷಿಗಳು ಇವೆ. ಆದರೆ, ಬಹುತೇಕ ಬ್ರಿಟಿಷರನ್ನೂ ಒಳಗೊಂಡಂತೆ ಪ್ರಭುತ್ವಗಳು ಏಕರೂಪೀಕರಣವನ್ನು ಬಯಸುತ್ತವೆ.

ಈ ಏಕರೂಪೀಕರಣ ಗರಿಷ್ಠ ಮಟ್ಟದಲ್ಲಿ ಪ್ರತಿಪಾದಿತವಾಗಿರುವುದು ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ. ಇಲ್ಲಿನ ವೈವಿಧ್ಯತೆ ವಸಾಹತುಶಾಹಿಗಳಿಗೆ ಆರಂಭದಲ್ಲಿ ಕುತೂಹಲಕಾರಿಯೆನಿಸಿದರೂ, ಸಮಗ್ರ ಅಧಿಕಾರ ಕೈವಶವಾದ ನಂತರದಲ್ಲಿ ದೇಶೀ ಸಮುದಾಯಗಳ ಬಹುತ್ವವೇ ಬ್ರಿಟಿಷರನ್ನು ಅಧೀರರನ್ನಾಗಿಸಿದೆ. ದೇಶದಾದ್ಯಂತ ಹಂತಹಂತವಾಗಿ ಅಧಿಕಾರವನ್ನು ವಿಸ್ತರಿಸಿದ ಬ್ರಿಟಿಷರು, ಪ್ರತಿಯೊಂದು ಪ್ರಾಂತ್ಯಕ್ಕೂ ಪ್ರತ್ಯೇಕ ಪರಿಸರ, ಭಾಷೆ, ಆಚರಣೆ, ಸಂಪ್ರದಾಯ, ವೃತ್ತಿ, ಸಂಸ್ಕೃತಿಗಳಿರುವುದನ್ನು ಮನಗಂಡರು. ತನ್ನ ಆಡಳಿತದ ಅವಧಿಯಲ್ಲಿ ನೀತಿ, ನ್ಯಾಯ, ಶಾಸನ ರೂಪಣೆ ಹಾಗೂ ಅವುಗಳನ್ನು ಪ್ರತಿಯೊಂದು ಪ್ರಾಂತ್ಯದ ಭಾಷೆಗಳಲ್ಲಿ ಹೊರಡಿಸಬೇಕಾದ ಅನಿವಾರ್ಯ ಪರಿಸ್ಥಿತಿಯನ್ನು ಅವರು ಎದುರಿಸಿದರು.

ಆರಂಭದಲ್ಲೆ ಈ ವಿಷಯವನ್ನು ಮನಗಂಡ ವಸಾಹತುಶಾಹಿಗಳು, ಭಾರತದ ಬಹುತ್ವದ ಸಮುದಾಯಗಳನ್ನು ಆಳುವುದು, ನಿಯಂತ್ರಿಸುವುದು ಸಾಧ್ಯವಾಗದು ಎಂಬ ಕಾರಣಕ್ಕೆ ಏಕರೂಪೀಕರಣದ ಮೊರೆಹೋದಂತೆನಿಸುತ್ತದೆ. ಇದರ ಮುಂದುವರೆದ ಭಾಗವನ್ನೇ ಇಂದು ಕಾಣುತ್ತಿದ್ದೇವೆ. ಮುಖ್ಯವಾಗಿ ದೇಶದಾದ್ಯಂತ ಒಂದು ರಾಷ್ಟ್ರೀಯ ಭಾಷೆ ಬೇಕು ಎಂಬ ವಾದ ಇಂದಿಗೂ ಕೇಳಿ ಬರುತ್ತಿದೆ. ಆಧುನಿಕ ಸಂದರ್ಭದಲ್ಲಿ ಕೂಡ ಪ್ರಭುತ್ವಗಳು ಒಂದಿಲ್ಲೊಂದು ಬಗೆಯಲ್ಲಿ ವಸಾಹತುಶಾಹಿ ಧೋರಣೆಯನ್ನೇ ಮುಂದುವರೆಸಿಕೊಂಡು ಬರುತ್ತಿವೆ. ಈ ಮೂಲಕ ಪರೋಕ್ಷವಾಗಿ ಹಿಂದಿ ಭಾಷೆಯನ್ನು ಹೇರುತ್ತವೆ. ಪ್ರಭುತ್ವದ ಈ ಹೇರಿಕೆಯ ಕಾರಣದಿಂದಾಗಿ ಅನೇಕ ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳು ಎದುರಾಗುತ್ತಿವೆ.

ಆದರೆ, ಆಧುನಿಕ ಸಂದರ್ಭದಿಂದೀಚೆಗೆ ಧಾರ್ಮಿಕ ಸಹಿಷ್ಣುತೆ ಪ್ರಭುತ್ವಗಳಲ್ಲಿ ಕಣ್ಮರೆಯಾಗುತ್ತಿದೆಯೇನೋ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಇದಕ್ಕೆ ಧಾರ್ಮಿಕ ಮೂಲಭೂತವಾದ ವಿಶ್ವವ್ಯಾಪಿಯಾಗುತ್ತಿರುವುದೇ ಸಾಕ್ಷಿಯಾಗಿದೆ. ಕ್ರಿಶ್ಚಿಯನ್, ಮುಸ್ಲಿಂ, ಹಿಂದೂ ಧರ್ಮಗಳು ಅನೇಕ ಹಂತಗಳಲ್ಲಿ ಏಕರೂಪೀಕರಣವನ್ನು ರೂಪಿಸಲು ಬಯಸುತ್ತಿವೆ. ಪ್ರಭುತ್ವ ನಿರ್ದೇಶಿತ ಧರ್ಮಗಳು, ಧರ್ಮ ನಿರ್ದೇಶಿತ ಪ್ರಭುತ್ವಗಳೆರಡೂ ಧಾರ್ಮಿಕ ಮೂಲಭೂತವಾದಕ್ಕೆ ಕಾರಣವಾಗುತ್ತಿವೆ.

ವಸಾಹತುಶಾಹಿಯ ಸಂಪರ್ಕದ ಕಾರಣಗಳಿಂದ, ದೇಶೀ ಸಮುದಾಯಗಳಲ್ಲಿದ್ದ ಸಾಮರಸ್ಯ, ಹೊಂದಾಣಿಕೆ, ಪರಸ್ಪರರ ಮೇಲಿನ ನಂಬಿಕೆ ಮುಂತಾದವುಗಳು ಇಲ್ಲವಾಗತೊಡಗಿದವು. ಏಕರೂಪೀಕರಣದ ದಾರಿಯಲ್ಲಿ ವಸಾಹತುಶಾಹಿಗಳು ಒಡೆದು ಆಳುವ ನೀತಿಯನ್ನು ರೂಪಿಸಿಕೊಂಡು,

ದೇಶೀ ಜೀವನಕ್ರಮಗಳಲ್ಲಿ ನಿರ್ಣಾಯಕ ಬಿರುಕನ್ನುಂಟು ಮಾಡಿವೆ. ಇದರಿಂದ ವಸಾಹತುಶಾಹಿ ಆಡಳಿತದ ನಂತರ ಕೂಡ ಒಂದು ರೀತಿಯ ಅಳುಕು ವ್ಯಕ್ತಿತ್ವ ಮುಂದುವರೆದಿದೆ ಎನಿಸುತ್ತದೆ.

ವಸಾಹತುಗಳ ಅವಧಿಯನ್ನೂ ಒಳಗೊಂಡಂತೆ ಇಂದಿಗೂ ಭಾರತದಲ್ಲಿರುವ ಎಲ್ಲ ಧರ್ಮಗಳ ಮೂಲ ವೈದಿಕ ಎಂಬಂತ ರಚನೆಗಳಿಗೆ ಬೆಲೆ ಬರಲಾರಂಭಿಸಿತು. ವಿದ್ಯೆ, ಅಧಿಕಾರ, ಆಸ್ತಿ, ಅಂತಸ್ತು ಹಾಗೂ ಸಾಮಾಜಿಕ ಸ್ಥಾಮಾನಗಳಿಂದಾಗಿ ವೈದಿಕ ಧರ್ಮಕ್ಕೆ ಪ್ರಾಧಾನ್ಯತೆ ಉಂಟಾಯಿತು. ಬೌದ್ಧ, ಜೈನ, ವೈಷ್ಣವ, ಲಿಂಗಾಯತ, ವೀರಶೈವ, ಕಾಳಾಮುಖ, ಕಾಪಾಲಿಕ, ಪಾರ್ಸಿ, ಬುಡಕಟ್ಟು ಧರ್ಮಗಳು, ಮುಸ್ಲಿಂ, ಕ್ರಿಶ್ಚಿಯನ್ ಮುಂತಾದ ಧರ್ಮಗಳು ಭಾರತದಲ್ಲಿದ್ದರೂ ವೈದಿಕ ಧರ್ಮಕ್ಕೆ ಪ್ರಾಧಾನ್ಯತೆ ಸಿಕ್ಕಿತು. ಜಗತ್ತಿನ ಯಾವ ಧರ್ಮವೂ ಸ್ವಯಂಪೂರ್ಣವಾಗಿರಲಾರದು, ಬದಲಾಗಿ ಸ್ವಯಂಪೂರ್ಣತೆಯತ್ತ ಚಲಿಸಬಲ್ಲುವೇನೋ? ಆದರೆ, ವೈದಿಕ ಧರ್ಮಕ್ಕೆ ಪ್ರಾಧಾನ್ಯತೆ ಸಿಕ್ಕಿದೆ. ಡಿ. ಆರ್. ನಾಗರಾಜ್ ಅವರು ಧಾರ್ಮಿಕ ಸಂಸ್ಕೃತಿಯ ಬಹುಮುಖಿ ಆಯಾಮ ಹಾಗೂ ಹೊಂದಾಣಿಕೆಗಳನ್ನು ಕುರಿತು ಹೀಗೆ ಹೇಳುತ್ತಾರೆ: "ಈ ವಸಾಹತುಶಾಹಿ ಪಲ್ಲಟದ ಒಂದು ಅತ್ಯಂತ ಮುಖ್ಯ ಬೆಳವಣಿಗೆ ಎಂದರೆ ನಮ್ಮ ಧಾರ್ಮಿಕ ಸಂಸ್ಕೃತಿಯ ಬಹುಮುಖೀ ಪರಂಪರೆ ಮರೆತು ಹೋದದ್ದು. ನಮ್ಮಲ್ಲಿ ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ಭಾರತೀಯ ಸಂಸ್ಕೃತಿ, ಭಾರತೀಯ ತತ್ವಜ್ಞಾನ ಎಂದರೆ ವೇದಾಂತ ಮಾತ್ರ ಎಂಬುದಾಗಿದೆ. ಈ ಪ್ರಾಧಾನ್ಯ ನಿಸ್ಸಂದೇಹವಾಗಿ ಬ್ರಿಟಿಷರ ಸಾಂಸ್ಕೃತಿಕ ನೀತಿಯ ಫಲ. ಬ್ರಿಟಿಷರು ಈ ದೇಶಕ್ಕೆ ಬಂದಾಗ ಅವರನ್ನು ಕಂಗೆಡಿಸಿದ್ದು ಇಲ್ಲಿನ ಧಾರ್ಮಿಕ ಬದುಕಿನ ಅಪಾರ ವೈವಿಧ್ಯತೆ ಮತ್ತು ಭಿನ್ನರೂಪಗಳು. ಒಬ್ಬ ಬ್ರಾಹ್ಮಣ ವೇದಾಂತಿಗೆಷ್ಟು ಬೆಲೆಯೊ ಅಷ್ಟೇ ಮಹತ್ವ ಒಬ್ಬ ಶೂದ್ರ ಯೋಗಿಗೂ ಇದ್ದ ಸ್ಥಿತಿ ಅದು. ಶೃಂಗೇರಿ ಶಂಕರಾಚಾರ್ಯ ಎಷ್ಟು ದೊಡ್ಡವನೊ ಅಷ್ಟೇ ದೊಡ್ಡವನು ಬಳೆಗಾರ ಕುಲದ ಕೈವಾರ ನಾರಣಪ್ಪ. ಗುರುಗೋವಿಂದನ ಸಮನಾಗಿ ನಿಲ್ಲಬಲ್ಲವನು ಷರೀಫ."[೬೩]

ಆದರೆ, ವಸಾಹತುಶಾಹಿ ಆಳ್ವಿಕೆಯ ತರುವಾಯ ಈ ಬಗೆಯ ಸಾಮರಸ್ಯವನ್ನು ಇಲ್ಲವಾಗಿಸಲಾಗಿದೆ. ವೈದಿಕ ರಚನೆಗಳಿಗೆ ಆತ್ಯಂತಿಕ ಪ್ರಮಾಣ ನೀಡುವ ರಚನೆಗಳನ್ನು ಕಟ್ಟಲಾಗಿದೆ. ಇವುಗಳನ್ನು ಸ್ವತಃ ಬ್ರಿಟಿಷ್ ಅಧಿಕಾರಿ, ವಿದ್ವತ್ ವರ್ಗವು ರೂಪಿಸಿ, ದೇಶೀ ಮಾದರಿಗಳ ಮೇಲೆ ಆರೋಪಿಸಿದ ಕಾರಣಕ್ಕಾಗಿ, ಮೇಲು-ಕೀಳು ಎಂಬ ವೈರುಧ್ಯಗಳು ಈ ಸಮುದಾಯಗಳಲ್ಲಿ ಉಂಟಾಗಿವೆ ಎನಿಸುತ್ತದೆ. ತಮ್ಮ ತಮ್ಮ ಸ್ವಗಳ ಹುಡುಕಾಟ, ಅಸ್ಮಿತೆಯ ಪ್ರತಿಪಾದನೆಯತ್ತ ಚಲಿಸುವ ಪ್ರಯತ್ನ ಆರಂಭವಾಗಿದೆ. ಇದೇ ಮುಂದುವರೆದು ಅನೇಕ 'ಅನ್ಯ'ಗಳ ಸೃಷ್ಟಿಗೆ ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ, ಈ ಹಿಂದೆ ಇದ್ದ ಪರಸ್ಪರರ ಮೇಲಿನ ನಂಬಿಕೆ, ಗೌರವ, ಆತ್ಮಾಭಿಮಾನ ಮುಂತಾದವುಗಳು ಇಲ್ಲವಾಗುತ್ತಿವೆ. ಭಾರತದ ವೈವಿಧ್ಯತೆಯನ್ನು ನಾಶಪಡಿಸುವ ಉದ್ದೇಶದಿಂದ ರೂಪಿಸಲ್ಪಟ್ಟ – ವೈದಿಕ, ವೇದಾಂತ ಪ್ರಾಮಾಣ್ಯದ ಕಾರಣದಿಂದಾಗಿ, ಅದುವರೆಗೆ ಇದ್ದ ಸಮಾನ ಗೌರವಗಳು ನಿಧಾನವಾಗಿ ಕಣ್ಮರೆಯಾಗಿವೆ. ವೈದಿಕ ರಚನೆಗಳಿಗೆ ಪ್ರಾಮುಖ್ಯತೆ ಬಂದಿದೆ. ಈ ದಿಸೆಯಲ್ಲಿ ಈ ಕಾಲವನ್ನು 'ಮಹಾನ್ ನಿರ್ನಾಮ ಮತ್ತು ವಿನಾಶಗಳ ಯುಗ'ವೆಂದು ಡಿ. ಆರ್. ನಾಗರಾಜ್ ಕರೆಯುತ್ತಾರೆ.

ವಸಾಹತುಶಾಹಿಯ ಈ ಧೋರಣೆಯಿಂದ ಸ್ವಾತಂತ್ರ್ಯಾನಂತರವೂ ಬಿಡುಗಡೆ ಹೊಂದದೆ, ಮತ್ತೆ ಅದು ನೇಯ್ದ ಬಲೆಯೊಳಗೆ ಬಿದ್ದು ಕಾಲು ಬಡಿಯುತ್ತಿರುವ ಆಧುನಿಕ ಸರ್ಕಾರಗಳಲ್ಲಿ ಕೂಡ, ಅನೇಕ ಸಂದರ್ಭಗಳಲ್ಲಿ, ಇಂತಹದೇ ಪ್ರತಿಕ್ರಿಯೆಗಳು ಮುಂದುವರೆಯುತ್ತಿವೆ. ವಸಾಹತುಶಾಹಿಯನ್ನು ವಿರೋಧಿಸಿ, ಗಳಿಸಿದ ಸ್ವಾತಂತ್ರ್ಯದ ನಿಜವಾದ ಸಾಧನೆಯ ಬಗೆಗೆ ಅನೇಕ ಅನುಮಾನಗಳು ಮೂಡುವಂತಹ ವಾತಾವರಣವೊಂದನ್ನು, ಸಮಕಾಲೀನ ರಾಜಕೀಯ ಪಕ್ಷಗಳು ತರುತ್ತಿರುವುದು ತೃತೀಯ ಜಗತ್ತಿನ ಅನೇಕ ಸಮಸ್ಯೆಗಳಲ್ಲಿ ಒಂದು.

ಪರಂಪರೆಯಲ್ಲಿನ ಒಳಿತುಗಳನ್ನೆಲ್ಲ ನಿರಾಕರಿಸುವ, ಆ ಮೂಲಕ ತನ್ನನ್ನು ತಾನೇ ಪತನದಂಚಿಗೆ ತಳ್ಳಿಕೊಳ್ಳುವ ಹಂತಕ್ಕೆ ಆಧುನಿಕ ಪ್ರಜಾಪ್ರಭುತ್ವದ ಅನೇಕ ಸರ್ಕಾರಗಳ ತೀರ್ಮಾನಗಳಿರುವುದನ್ನು ನೋಡಬಹುದು. ಸಂವಿಧಾನದ ಮೂಲ ಆಶಯಗಳಾದ ಜಾತ್ಯತೀತತೆ, ಧರ್ಮಾತೀತ ರಾಷ್ಟ್ರ ಎಂಬ ನಿಲುವುಗಳಿಗೆ ವ್ಯತಿರಿಕ್ತವಾಗಿ ಆಧುನಿಕ ಸರ್ಕಾರಗಳು ನಡೆದುಕೊಳ್ಳುತ್ತಿವೆ.

ಧಾರ್ಮಿಕ ಪ್ರಭುತ್ವದ ಕಾರಣಗಳಿಂದ ಉಂಟಾಗುವ ಕೆಲವು ಸಮಸ್ಯೆಗಳನ್ನು ಡಿ. ಆರ್. ನಾಗರಾಜ್‌ರವರು ವಸಾಹತುಶಾಹಿ ಶಿಕ್ಷಣ ಕ್ರಮದ ಸಂದರ್ಭದ ಚರ್ಚೆಯಲ್ಲಿ ಮುಖಾಮುಖಿ ಯಾಗಿಸುತ್ತಾರೆ. ಈ ಕಾಲಘಟ್ಟದಲ್ಲಿ ಅವೈದಿಕ ದರ್ಶನಗಳನ್ನೆಲ್ಲ ಹಿನ್ನೆಲೆಗೆ ತಳ್ಳಿ, ವೈದಿಕ ಧರ್ಮ, ಸಂಸ್ಕೃತಿಗಳನ್ನು ಬೆಂಬಲಿಸಿದ ಅನೇಕ ಸಾಂಸ್ಥಿಕ ರಚನೆಗಳನ್ನು ನಿರಚಿಸಿ ನೋಡುವ ಪ್ರಯತ್ನ ಇಲ್ಲಿದೆ.

ಡಿ. ಆರ್. ನಾಗರಾಜ್‌ರವರು ಟ್ರೆವಾರ್ ಲಿಂಗ್‌ನ ಮಾತುಗಳನ್ನು ಉದ್ಧರಿಸುತ್ತಾ ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: "'ಫೋರ್ಟ್ ವಿಲಿಯಂ ಕಾಲೇಜು ಮತ್ತು ಬ್ರಹ್ಮೋ ಸಮಾಜಗಳು ಪುನರುದ್ಧರಿಸಿದ ಈ ವೇದಾಂತ ತತ್ವಜ್ಞಾನಕ್ಕೆ ಶತಮಾನಗಳಿಂದ ಇರದಿದ್ದ ಪ್ರಾಧಾನ್ಯತೆ ಸಿಕ್ಕಿತು'. ಈ ವಿದ್ಯಮಾನ ತುಂಬ ಮುಖ್ಯವಾದದ್ದು ಎಂದು ನನಗನ್ನಿಸಿದೆ. ಭಾರತದಲ್ಲಿದ್ದ ಅನೇಕ ಪ್ರಸ್ಥಾನಗಳಲ್ಲಿ ವೇದಾಂತ ಕೂಡಾ ಒಂದು ಅಷ್ಟೆ. ಚರಿತ್ರೆಯಲ್ಲಿ ಆಗುವುದೇ ಹೀಗೆ. ನಿರ್ದಿಷ್ಟ ಘಟ್ಟದ ಜಾತಿ-ವರ್ಗದ ಒಕ್ಕೂಟಗಳು ತಮಗೆ ಅಗತ್ಯವಾದ ದರ್ಶನಗಳನ್ನು ಆಯ್ದುಕೊಂಡು ಅದರ ಮೂಲಕ ಮುನ್ನಡೆಯುತ್ತವೆ. ಅಧಿಕಾರಕ್ಕೆ, ಯಾಜಮಾನ್ಯಕ್ಕೆ ಹಾತೊರೆಯುತ್ತವೆ. ವಸಾಹತುಶಾಹಿ ಕಾಲಘಟ್ಟದಲ್ಲಿ ನಡೆದದ್ದು ಹೀಗೆ. ಈ ದರ್ಶನ ಬ್ರಿಟಿಷ್ -ಬನಿಯಾ (ಕ್ಯಾಪಿಟಲಿಸ್ಟ್ ಎಂಬರ್ಥದಲ್ಲಿ)-ಬ್ರಾಹ್ಮಣ ಒಕ್ಕೂಟದ ಸೈದ್ಧಾಂತಿಕ ಸಾಧನವಾಗಿ ಬಿಟ್ಟಿತು."[೬೪]

ವೇದಾಂತ ತತ್ವಜ್ಞಾನದ ಪ್ರಾಬಲ್ಯದ ಕಾರಣಕ್ಕೆ, ಭಾರತದ ದೇಶೀಯವಾದ ಅನೇಕ ಪ್ರಸ್ಥಾನಗಳಲ್ಲಿ ಒಂದಾಗಿದ್ದ ವೇದಾಂತದ ಮುಂದೆ ಉಳಿದ ಪ್ರಸ್ಥಾನಗಳು ಸತ್ವಪೂರ್ಣವಾಗಿದ್ದರೂ ಹಿನ್ನೆಲೆಗೆ ತಳ್ಳಲ್ಪಟ್ಟವೆ. ಈ ಬಗೆಯ ಸಾಂಸ್ಕೃತಿಕ ರಾಜಕಾರಣದಿಂದ ವಸಾಹತುಶಾಹಿಗಳ ವ್ಯವಸ್ಥಿತ ದಮನದ ಮಾದರಿಗಳು ಅಗೋಚರವಾಗಿಯೇ ಉಳಿದು ಬಿಡುತ್ತವೆ. ಆದರೆ ಇದರಿಂದ ಆಗುವ ನಷ್ಟವೆಂದರೆ, ದೇಶೀ ತತ್ವಜ್ಞಾನಗಳಲ್ಲಿದ್ದ ಚಿಂತನೆಗಳು ಕಾಣೆಯಾಗುವುದು.

ಏಕರೂಪೀಕರಣದಿಂದಲೇ ಹುಟ್ಟುವ ಅನ್ಯತೆಗಳು – ಭಿನ್ನಧಾರೆಗಳನ್ನು, ಅದರ ಸಾಂಸ್ಕೃತಿಕ ಮೌಲ್ಯಗಳನ್ನು ಕಳೆದು ಹಾಕುತ್ತವೆ. ಅದರ ಜೊತೆಗೆ ಆಯಾ ಧಾರೆಗಳನ್ನಾಧರಿಸಿದ ತತ್ವಜ್ಞಾನ, ತಂತ್ರಜ್ಞಾನ, ನೋಟಕ್ರಮ, ಆರ್ಥಿಕತೆ, ಭಾಷೆ ಮುಂತಾದವುಗಳು ಕೂಡ ಅವುಗಳ ಜೊತೆಯಲ್ಲೆ ಹಿನ್ನೆಲೆಗೆ ಸರಿಯತೊಡಗುತ್ತವೆ. ಈ ಸಂದರ್ಭದಲ್ಲೂ ಮೂಲಭೂತವಾದದಂತಹ ಅನಾಹುತಗಳು ಹುಟ್ಟುವ ಸಾಧ್ಯತೆಗಳಿರುತ್ತವೆ. ಧಾರ್ಮಿಕ, ಭಾಷಿಕ, ಸಾಂಸ್ಕೃತಿಕ ಮೂಲಭೂತವಾದಗಳು ಇಂತಹ ಸಂದರ್ಭದ ಕೂಸುಗಳೇ ಆಗಿರುತ್ತವೆಂಬುದನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಬಹುಮುಖಿ ಸಾಂಸ್ಕೃತಿಕ, ಧಾರ್ಮಿಕ ಧಾರೆಗಳಲ್ಲಿದ್ದ ಅನ್ಯೋನ್ಯತೆಯನ್ನು ಈ ಬಗೆಯ ತಾರತಮ್ಯಗಳೆ ಇಲ್ಲವಾಗಿಸುತ್ತವೆ.

ಡಿ. ಆರ್. ನಾಗರಾಜ್‌ರವರ ಪ್ರಕಾರ: "ಇಲ್ಲಿ ಧಾರ್ಮಿಕ ಅನುಭವ ಎಂದರೆ ವೇದಾಂತ ನಿರ್ಣಿತ ಅನುಭವ (ಈ ವೇದಾಂತದಲ್ಲಿ ಎಷ್ಟೇ ಒಳಪಂಗಡಗಳಿದ್ದರೂ ಅವಕ್ಕೆ ಕೆಲವು ಸಾಮಾನ್ಯ ಲಕ್ಷಣಗಳಿವೆ ಎಂಬುದಷ್ಟೇ ನಮಗೆ ಇಲ್ಲಿ ಮುಖ್ಯ). ಒಬ್ಬ ಕಾಡುಗೊಲ್ಲನ, ಒಬ್ಬ ಚಂಡಾಲನ, ಒಬ್ಬ ಕುರುಬನ, ಒಬ್ಬ ಕೊರವಂಜಿಯ ಧಾರ್ಮಿಕ ಅನುಭವದ ವಿಶಿಷ್ಟ ರೂಪಗಳು ಕ್ಷುದ್ರವಾಗಿ ಬಿಟ್ಟವು. ಅವೈಚಾರಿಕ ಮೂಢನಂಬಿಕೆಗಳಾಗಿ ಬಿಟ್ಟವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಇದು ಬಹುಸಂಖ್ಯಾತ ಶೂದ್ರರ ಧಾರ್ಮಿಕತೆಯ ನಿರಾಕರಣೆ. ನಮ್ಮ ಸೃಜನಶೀಲ ಪ್ರತಿಭೆಯ ಸಾಧ್ಯತೆಗಳು ತೀರಾ ಕುಗ್ಗಿ ಹೋದವು. ಸೃಜನಶೀಲ ಆಕೃತಿಯಲ್ಲೂ ಮನೋಲಿಥಿಕ್ ಸ್ಥಿತಿ"[೬೫]ಗಳಿಗೆ ಈ ಬಗೆಯ ಒತ್ತಡಗಳು ಬಹುಮುಖಿಧಾರೆಗಳನ್ನು ತಂದು ನಿಲ್ಲಿಸಿಬಿಡುತ್ತವೆ.

"ನಿರಂತರವಾಗಿ ಧರ್ಮದ ಹೆಸರು ಹೇಳಿಕೊಂಡೆ ಧರ್ಮ ಬಾಹಿರ, ನೀತಿಬಾಹಿರ ಕಾರ್ಯಗಳನ್ನು ಮಾಡುವ ಧಾರ್ಮಿಕ ವೇಷದ – ಧರ್ಮ ವಿರೋಧಿಗಳು ಎಲ್ಲ ಧರ್ಮಗಳಲ್ಲೂ ಇದ್ದಾರೆ. ಅದು ಕೇವಲ ಹಿಂದು ಅಥವಾ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಧರ್ಮಗಳಿಗೆ ಮಾತ್ರ ಸೀಮಿತವಲ್ಲ. ಭಾರತದಲ್ಲಿ ಇದು ಇನ್ನೂ ಉತ್ತುಂಗ ಶಿಖರಕ್ಕೇರಿರುತ್ತದೆ. ಕಾರಣ ಜನರಲ್ಲಿರುವ ಮೂಢನಂಬಿಕೆ. ಧರ್ಮ, ದೇವರು, ದೇವವಾಣಿಗಳ ಹೆಸರುಗಳನ್ನು ಹೇಳಿ ನಿರಂತರವಾಗಿ ಬಡವರನ್ನು, ಅಮಾಯಕರನ್ನು ಶೋಷಿಸುವ ಕೆಲಸ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಪರಸ್ಪರ ಧರ್ಮಗಳಲ್ಲಿರುವ ಸಾರವನ್ನು ಸ್ವೀಕರಿಸುವ, ಪುರಸ್ಕರಿಸುವ ಬದಲು ಧಾರ್ಮಿಕ ದ್ವೇಷದ ವಿಷ ಬೀಜವನ್ನು ಬಿತ್ತುವ ಕ್ರಿಯೆಯೂ ನಿರಂತರವಾಗಿ ನಡೆಯುತ್ತಿದೆ"[೬೬] ಎಂಬ ಸಂಗತಿ ಗಮನಾರ್ಹವಾಗಿದೆ.

ವಸಾಹತುಶಾಹಿಗಳ ಆಡಳಿತದ ಪೂರ್ವದಲ್ಲಿ ವೈದಿಕ, ಆರ್ಯ, ಸನಾತನ ಎಂಬ ಹೆಸರುಗಳಲ್ಲಿ ಕರೆಯಲಾಗುತ್ತಿದ್ದ ಪುರೋಹಿತಶಾಹಿ ಧರ್ಮವನ್ನು ತಮ್ಮ ಆಡಳಿತದ ಅನುಕೂಲಕ್ಕಾಗಿ ಉಳಿದ ಶೈವ, ಶಾಕ್ತ, ಕಾಪಾಲಿಕ, ಕಾಳಾಮುಖ, ಬುಡಕಟ್ಟು ಮುಂತಾದ ದೈವ–ಧರ್ಮಗಳೆಲ್ಲವನ್ನೂ ಸೇರಿಸಿ ಹಿಂದೂ ಧರ್ಮವೆಂದು ವಸಾಹತುಶಾಹಿಗಳು ಕರೆದರು. ಇದನ್ನೇ ಅಂದಿನ ಅನೇಕ ಬುದ್ಧಿಜೀವಿಗಳು, ಧಾರ್ಮಿಕ ವಕ್ತಾರರು, ಸಮಾಜ ಸುಧಾರಕರಿಗೂ ಹೇಳಿ ನಂಬಿಸಿ ಒಪ್ಪಿಸಲಾಯಿತು. ನಂತರ ಹಿಂದೂ V/S ಮುಸ್ಲಿಂ ಎಂಬ ಮತ್ತೊಂದು ಮಿಥ್ಯೆಯನ್ನು ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ವೈದಿಕೇತರ ಧರ್ಮಗಳನ್ನು ದ್ವಿತೀಯ ದರ್ಜೆಯ ಧರ್ಮಗಳೆಂದು ರೂಪಣೆಗಳನ್ನು ಕಟ್ಟಲಾಗಿದೆ.

ಭಾರತದಲ್ಲಿ ಶುದ್ಧಾಂಗವಾಗಿ ಒಂದು ಭಾಷೆ, ಧರ್ಮ, ಸಂಸ್ಕೃತಿ, ಕಲೆ, ಜೀವನ ವಿಧಾನ ಮುಂತಾದವುಗಳು ಇರಲು ಸಾಧ್ಯವಿಲ್ಲ. ಜಾಗತಿಕ ಸಂದರ್ಭ ಹಾಗೂ ಸ್ಥಳೀಯ ಒತ್ತಡಗಳಿಂದ ಪರಸ್ಪರ ಕೊಡುಕೊಳೆ ಅವುಗಳಿಗೆ ಆಧಾರ.

ಜೈನ, ಬೌದ್ಧ, ವೈದಿಕ, ಶೈವ, ಸಿಖ್, ಮುಸ್ಲಿಂ, ಕ್ರಿಶ್ಚಿಯನ್ ಮೊದಲಾದ ಧರ್ಮಗಳ ಸಾರಗಳು ಪರಸ್ಪರ ಧರ್ಮಗಳನ್ನು ಒಂದಕ್ಕೊಂದು ಪ್ರೇರೇಪಿಸುತ್ತಲೇ ತನ್ನತನವನ್ನು ಕಟ್ಟಿಕೊಳ್ಳುತ್ತವೆ. ಆದರೆ, ವೈದಿಕ – ಅವೈದಿಕ ಎಂಬ ಮೇಲು ಕೀಳು ಎಂಬ ಕಟ್ಟುವಿಕೆಯಿಂದಾಗಿ ಇದುವರೆಗೆ ಕಾಯ್ದುಕೊಂಡು ಬಂದಿದ್ದ ಸಾಮರಸ್ಯದ ಬದಲು, ಆದಾನ–ಪ್ರದಾನಗಳು ಇಲ್ಲವಾಗಿ, ಪರಸ್ಪರರನ್ನು ಮೂಢನಂಬಿಕೆಯವರೆಂಬ ರಚನೆಗಳು ಕೂಡ ಆರಂಭವಾಗುತ್ತವೆ. ಇದಕ್ಕೆ ಕನ್ನಡದಲ್ಲಿ ಜೈನ ಮಹಾಕಾವ್ಯಗಳಲ್ಲಿ ವೈದಿಕ, ಶೈವ ಧರ್ಮಗಳನ್ನು ಕುರಿತು ರಚಿತವಾಗಿರುವ ಕೃತಿಗಳನ್ನು ಉದಾಹರಣೆಯಾಗಿ ನೋಡಬಹುದು.

ಇದು ಈ ಹಿಂದೆ ಇದ್ದ ಚಾರ್ವಾಕ–ಆಸ್ತಿಕ ರೂಪಗಳಿಗಿಂತ ವ್ಯಗ್ರರೂಪತಾಳುತ್ತದೆ. ಆಧುನಿಕ ಪೂರ್ವದಿಂದಲೂ ಅಸ್ತಿತ್ವದಲ್ಲಿರುವ ಚಾರ್ವಾಕ ಸಿದ್ಧಾಂತವು ವೈದಿಕ ಧರ್ಮದ ವೇದ ಪ್ರಾಮಾಣ್ಯ, ಕ್ರಿಯಾವಿಧಿಗಳು, ಆಚರಣೆಗಳನ್ನು ಪ್ರಶ್ನಿಸುತ್ತಿತ್ತು. ಆದರೆ ಅದು ಇಂದಿಗೂ ಮೂಲಭೂತವಾದವಾಗಿ ರೂಪಾಂತರ ಹೊಂದಿಲ್ಲ. ಆದರೆ, ವಸಾಹತೋತ್ತರ ಸಂದರ್ಭದಲ್ಲಿ ಧಾರ್ಮಿಕ ಮೂಲಭೂತವಾದವು ರೂಪುಗೊಳ್ಳುತ್ತಿದೆ.

೩.೫.೨. ಮಾರ್ಗ–ದೇಸಿ

ಸಂಸ್ಕೃತ–ಕನ್ನಡದ ಪರಿಭಾಷೆಯಂತೆಯೆ ಮಾರ್ಗ–ದೇಸಿ ವೈರುಧ್ಯಗಳು ಬಳಕೆಯಾಗುತ್ತಿವೆ. ಆದರೆ, ಇವುಗಳು ಶಿಷ್ಟ–ಜಾನಪದದಂತೆ ಒಂದರೊಡನೊಂದು ಸಂಬಂಧಗಳನ್ನು ಇಟ್ಟುಕೊಂಡಿವೆ. ವಸ್ತುಕ–ವರ್ಣಕ, ಮಾರ್ಗ–ದೇಸಿ, ಶಿಷ್ಟ–ಜಾನಪದಗಳೆಲ್ಲವು ಕೇವಲ ಒಂದರ ವಿರುದ್ಧ ಒಂದನ್ನು ಎತ್ತಿಕಟ್ಟಲ್ಪಟ್ಟಿವೆ. ಕಲ್ಪಿತ ಶತೃವೊಬ್ಬನನ್ನು ಕಲ್ಪಿಸಿಕೊಂಡು ಸದಾ ಜಾಗೃತರಾಗಿರುವ ಮನಸ್ಥಿತಿಯೊಂದು ಸದಾ ಮಾನವರ ಮನಸ್ಸಿನಲ್ಲಿರುತ್ತದೆ. ಎದುರಾಳಿಯ ಎದುರು ಸದಾ ತನ್ನ ಅಸ್ಮಿತೆ, ಅಸ್ಥಿತ್ವಕ್ಕಾಗಿ ಈ ಬಗೆಯ ರೂಪಣೆಗಳನ್ನು ಕಟ್ಟಿಕೊಂಡು, ಅದನ್ನೆ ಇನ್ನಿತರರ ಮೇಲೂ ಹೇರುವ ಯತ್ನ ನಡೆಯುತ್ತದೆ.

ಪಂಪ, ವಚನಕಾರರು, ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ, ಕೀರ್ತನಕಾರರ ಕೃತಿಗಳು ಜಾನಪದ ಪ್ರಕಾರಗಳಂತೆ ಹಾಡಲ್ಪಡುತ್ತಿದ್ದವು. ಇವು ಕೇಳು ಕಾವ್ಯಗಳಾಗಿ ಹತ್ತೊಂಬತ್ತನೆ ಶತಮಾನದವರೆಗೂ ಹಾಡುಗಬ್ಬಗಳಂತೆ ಅಸ್ತಿತ್ವದಲ್ಲಿದ್ದವು. ಆಧುನಿಕ ಶಿಕ್ಷಣ ವ್ಯವಸ್ಥೆಯ ನಂತರ ಇವುಗಳು ಓದುವ ಪಠ್ಯಗಳಾಗಿ ಬದಲಾದವು. ಆದರೆ ಇವುಗಳನ್ನು ಒಂದಕ್ಕೊಂದು ವಿರುದ್ಧವೆಂಬಂತೆ ಕಟ್ಟಲ್ಪಟ್ಟ ಗ್ರಹಿಕೆಗಳು ಪರಸ್ಪರರನ್ನು ದುರ್ಬಲವೆಂದು ಹೇಳಿ, ತಮ್ಮನ್ನು ಮೇಲೆಂದು ಪರಿಗಣಿಸುತ್ತಿವೆ.

ಈ ಶ್ರೇಷ್ಠತೆಯ ವ್ಯಸನ ಸಂಸ್ಕೃತಿ ಗ್ರಹಿಕೆಯಲ್ಲಿ ಅರ್ಥಪೂರ್ಣವಾಗಲಾರದು. ಹಾಗೆ ನೋಡಿದರೆ ಅವಳಿ ವೈರುಧ್ಯಗಳ ಮೂಲದಲ್ಲಿರುವುದು ಒಂದೇ ಬೇರು. ಕಾಲಾನಂತರದ ಪ್ರಯಾಣದಲ್ಲಿ ಅವು ಪರಸ್ಪರ ಸಂಬಂಧವನ್ನು ಕಳೆದುಕೊಂಡ ಪರಿಣಾಮದಿಂದ ಈ ಬಗೆಯ ಅಪಕಲ್ಪನೆಗಳನ್ನು ಬಿತ್ತಲಾಗಿದೆಯೇ ಹೊರತು, ಅವುಗಳು ಆತ್ಯಂತಿಕ ವೈರುಧ್ಯಗಳಲ್ಲ ಎನಿಸುತ್ತದೆ.

೩.೫.೩. ಸಂಸ್ಕೃತ, ಇಂಗ್ಲಿಷ್, ಹಿಂದಿ – ಕನ್ನಡ

ಭಾರತದಲ್ಲಿ ಬಹುಕಾಲದಿಂದ ಸಂಸ್ಕೃತ ಯಜಮಾನ ಭಾಷೆಯ ಸ್ಥಾನದಲ್ಲಿದ್ದರೆ, ಇಂದು ಇಂಗ್ಲಿಷ್ ಆ ಸ್ಥಾನವನ್ನು ಆಕ್ರಮಿಸಿದೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಗೆ ಇಂದು ಸಂಸ್ಕೃತದೊಂದಿಗೆ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳು ಮಾರಕವಾಗಿ ಪರಿಣಮಿಸಿವೆ. ಈಗಾಗಲೆ ಸಂಸ್ಕೃತ ಭಾಷೆ ಮೃತಾವಸ್ಥೆ ತಲುಪಿದ್ದು, ಅದನ್ನು ವೈಭವೀಕರಿಸಲು ವಿಶ್ವವಿದ್ಯಾಲಯಗಳ ಸ್ಥಾಪನೆಯ ಯತ್ನ ಒಂದು ಕಡೆ ನಡೆಯುತ್ತಿದ್ದರೆ, ಇಂಗ್ಲಿಷ್ ಭಾಷೆ ದೇಶೀ ಭಾಷೆಗಳ ಮೇಲೆ ಸವಾರಿ ನಡೆಸುತ್ತಿದೆ.

ಇಲ್ಲಿ ಕೂಡ ಮೊದಲಿನವು ಶ್ರೇಷ್ಠವೆಂದೂ, ಕನ್ನಡ ಕನಿಷ್ಠವೆಂದು ವ್ಯಾಖ್ಯಾನಿಸಲಾಗಿದೆ. ಕನ್ನಡ ಭಾಷೆಯಷ್ಟೂ ಇತಿಹಾಸವಿಲ್ಲದ ಇಂಗ್ಲಿಷ್ ಭಾಷೆಗೆ ಈಗ ಪ್ರಥಮ ಸ್ಥಾನವು ಸಿಕ್ಕಿರುವುದು ಅದರ ಅಧಿಕಾರ ಸ್ಥಾನದಿಂದಾಗಿ. ಅದು ಭಾರತೀಯ, ಆಫ್ರಿಕನ್ ಭಾಷೆಗಳಷ್ಟು ಶಕ್ತಿಶಾಲಿ, ಪ್ರಭಾವಶಾಲಿಯಾದುದೇನಲ್ಲವೆಂಬುದು ಬಹುತೇಕ ವಿದ್ವಾಂಸರ ಅಭಿಪ್ರಾಯ. ಆದರೂ ಇಂದು ಅದು ಎಲ್ಲ ಭಾಷೆಗಳಿಂದ ಕಡ ಪಡೆದು, ಆ ಭಾಷೆಗಳನ್ನೆ ನುಂಗುವ ಪ್ರಯತ್ನದಲ್ಲಿದೆ.

ದೇಶೀ ಭಾಷೆಯೊಂದರ ಮೂಲಕವೇ ಇಂದು ಜೀವನ ನಡೆಸುವುದು ಕಷ್ಟಕರವೆಂದು ಕಥನಗಳನ್ನು ಕಟ್ಟಲಾಗುತ್ತಿದೆ. ಇದು ಒಂದು ಬಗೆಯ ಪಲಾಯನವಾದದಂತೆ ತೋರುತ್ತದೆ. ಭಾರತದಲ್ಲಿ ನಾವಿಂದು ಬದುಕಲು ದೇಶೀ ಭಾಷೆಗಳಲ್ಲಿ ಯಾವುದಾದರೂ ಭಾಷೆಗಳನ್ನು ಕಲಿತಿದ್ದರೂ ಸಾಕು. ಆದರೆ ವಿದೇಶಕ್ಕೆ ಹಾರಲು ಇಂಗ್ಲಿಷ್ ಭಾಷೆ ಅನಿವಾರ್ಯ. ಆದರೆ ಈಚಿನ ದಿನಗಳಲ್ಲಿ ಖಾಸಗಿ ಉದ್ಯೋಗ ಸಂಪಾದನೆಗೂ ಇಂಗ್ಲಿಷ್ ಭಾಷೆಗೂ ಸಂಬಂಧವನ್ನು ತಗುಳ್ಚಿ, ಇಂಗ್ಲಿಷ್ ಭಾಷಾ ವ್ಯಾಮೋಹವನ್ನು ಎಲ್ಲೆಡೆ ಪಸರಿಸಲಾಗಿದೆ. ನಾವಿಂದು ಭಾರತೀಯ ಸಾಹಿತ್ಯವನ್ನು ಕೂಡ ಇಂಗ್ಲಿಷ್‌ನಲ್ಲಿ ಓದಬೇಕಾದ, ಇಂಗ್ಲಿಷ್‌ನಿಂದ ಭಾಷಾಂತರಿಸಿಕೊಳ್ಳಬೇಕಾದ ಸಂದರ್ಭ ಸೃಷ್ಟಿಯಾಗಿದೆ.

ಯಾವ ಭಾಷೆಯೂ ಮೇಲು ಕೀಳಲ್ಲದಿದ್ದರೂ ವಸಾಹತುಶಾಹಿಯ ಹೇರಿಕೆಯನ್ನು ಮೀರಲಾಗದೆ ಇಂಗಿಷ್ ಪಾರಮ್ಯ ಮುಂದುವರೆದಿದ್ದರೆ, ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಹಿಂದಿ, ಮೃತ ಭಾಷಾ ಪ್ರೇಮಿಗಳು, ಪಂಡಿತರಿಂದ ಸಂಸ್ಕೃತ ಭಾಷೆಗೆ ಪ್ರಾಧಾನ್ಯತೆ ಸಿಕ್ಕಿದೆ. ಪಂಪ, ರನ್ನ, ಕುಮಾರವ್ಯಾಸ, ಬೇಂದ್ರೆ, ಕಂಬಾರ, ದೇವನೂರ ಮಹಾದೇವರವರ ಕೃತಿಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದರೆ ಕನ್ನಡದ ಕಾಕು, ಧ್ವನಿಗಳನ್ನು ಎಂದಿಗಾದರೂ ತರಲು ಸಾಧ್ಯವಿದೆಯೇ? ಹಾಗೆಂದು ಕೇವಲ ಧ್ವನಿಗಾಗಿ ಭಾಷೆ ಇರಬೇಕೆಂದೇನೂ ಅಲ್ಲ. ಆಯಾ ದೇಶೀ ಭಾಷೆಗಳು

ಆಯಾ ಪರಿಸರಕ್ಕೆ ಬದ್ಧವಾದ ಜೀವನಕ್ರಮ, ನೋಟಕ್ರಮ, ಚಿಂತನಕ್ರಮಗಳನ್ನು ರೂಢಿಸಿಕೊಂಡಿರುತ್ತವೆ. ಅವರ ಜೀವನ ಕ್ರಮಕ್ಕೂ ಉದ್ಯೋಗ, ಆರ್ಥಿಕ ಪರಿಸ್ಥಿತಿಗೂ ಸಂಬಂಧಗಳಿರುತ್ತವೆ. ಇವೆಲ್ಲವುಗಳ ಕೊಂಡಿಗಳನ್ನು ಕಳಚುವ, ವ್ಯವಸ್ಥಿತ ಏಕೀಕೃತ ರೂಪಣೆಯನ್ನು ಹೇರುವ ಯತ್ನವನ್ನು ಇಂದು ಇಂಗ್ಲಿಷ್, ಹಿಂದಿ, ಸಂಸ್ಕೃತ ಭಾಷೆಗಳನ್ನು ಜಾರಿಗೆ ತರುವ ಅಸಂಖ್ಯ ಹುನ್ನಾರಗಳು ನಡೆಯುತ್ತಿವೆ. ಆದರೆ, ಯಾವುದೇ ಭಾಷೆ ಮೇಲು ಅಥವಾ ಕೀಳಲ್ಲ ಎನ್ನುವುದು ಭಾಷಾ ವಿಜ್ಞಾನದ ಮೊದಲ ಪಾಠ ಎನ್ನುವುದನ್ನು ಮರೆಯಲಾಗಿದೆ.

೩.೫.೪. ಬರಹ-ಮಾತು

ನುಡಿದರೆ ಮುತ್ತಿನ ಹಾರದಂತಿರಬೇಕು

ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು

ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು

ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು

ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವ ನೆಂತೊಲಿವನಯ್ಯಾ?

– ಬಸವಣ್ಣ

ವಚನಕಾರರು ನಡೆ-ನುಡಿಗಳಲ್ಲಿ ವೈರುಧ್ಯಗಳಿರಬಾರದೆಂದು ಪ್ರತಿಪಾದಿಸಿದ್ದಾರೆ. ಮಾತು ಮೊದಲಾಗಿ ಬರಹ ಕೊನೆಯಲ್ಲಿ ಕಂಡುಕೊಳ್ಳಲ್ಪಟ್ಟರೂ ಬರಬರುತ್ತಾ ಮಾತಿನ ಮೇಲಿನ ನಂಬಿಕೆ ಹೊರಟುಹೋಯಿತು. ಇದರ ಪರಿಣಾಮದಿಂದಾಗಿಯೇ ರಾಜರು ಕೂಡ ಶಾಸನಗಳನ್ನು ಹಾಕಿಸುವ ಪರಿಪಾಠ ಆರಂಭವಾಯಿತು. ಆಧುನಿಕ ಕಾಲದಲ್ಲಿ ಕೂಡ ವಿಧಾನಸಭೆ, ವಿಧಾನಪರಿಷತ್ತು, ಲೋಕಸಭೆ, ರಾಜ್ಯಸಭೆಗಳಲ್ಲಿ ಶಾಸನಗಳನ್ನು ರೂಪಿಸುವ, ಅವುಗಳನ್ನು ಗೆಜೆಟಿಯರ್‌ಗಳಲ್ಲಿ ಪ್ರಕಟಿಸುವ ಪದ್ಧತಿ ರೂಢಿಯಲ್ಲಿದೆ. ಮಾನವರ ಮೇಲಿನ ಪರಸ್ಪರರ ಮಾತುಗಳ ಮೇಲೆ ನಂಬಿಕೆ ಇಲ್ಲದಂತ ಪರಿಸ್ಥಿತಿ ಇದಕ್ಕೆ ಪ್ರಮುಖ ಕಾರಣ ಎನಿಸುತ್ತದೆ.

ರಾಜರು ಹಾಕಿಸಿದ ಶಾಸನಗಳು ಕೂಡ ಇದಕ್ಕೆ ಉದಾಹರಣೆ. ಅದರಲ್ಲಿರುವ ಆರಂಭದ ಶಾಸನಗಳಲ್ಲಿನ ಶಾಪಾಶಯಗಳಿಗೂ, ನಂತರದ ಶಾನಸಗಳ ಶಾಪಾಶಯಗಳಿಗೂ ಆಗಿರುವ ವ್ಯತ್ಯಾಸಗಳನ್ನು ಗಮನಿಸಿದರೆ ಬರಬರುತ್ತಾ ಶಾಸನಗಳಿಗೂ ಮಾನ್ಯತೆ ಇಲ್ಲದ ವಾತಾವರಣ ಸಮಾಜದಲ್ಲಿ ಉಂಟಾಗಿರುವುದನ್ನು ಗುರುತಿಸಬಹುದು.

ಸಂವಿಧಾನದತ್ತ ಹಕ್ಕುಗಳಿಗೆ ವ್ಯತಿರಿಕ್ತವಾಗಿ ಸಮಾಜದ ನಡೆಗಳಿರುವುದನ್ನು ಇಂದಿನ ದಿನಗಳಲ್ಲಿ ಕಾಣುತ್ತಿದ್ದೇವೆ. ಲಿಖಿತ ಸಂವಿಧಾನದಲ್ಲಿನ ಯಾವ ಆರೋಗ್ಯಪೂರ್ಣ ಆಶಯಗಳೂ ಜಾರಿಯಾಗದೆ, ಅದರ ನಕಲಿ ರೂಪದ ಅಂಶಗಳ ಸೋಗಿನಲ್ಲಿ ನಡೆಯುತ್ತಿರುವ ಧೃತರಾಷ್ಟ್ರ ದೃಷ್ಟಿಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾತು-ಬರಹಗಳಿಗೆ ಅಂತರವೇನೂ ಇಲ್ಲ. ಚುನಾವಣಾ ಪ್ರಣಾಳಿಕೆಯ ಸಂದರ್ಭದಲ್ಲಿ

ಇನ್ನೇನು ತಾವು ಅಧಿಕಾರಕ್ಕೆ ಬಂದರೆ ಸ್ವರ್ಗವನ್ನೇ ಇಳಿಸಿ ಬಿಡುವಂತೆ ಮಯಸೌಧ ನಿರ್ಮಿಸಿ, ಘೋಷಿಸಿ, ಅಧಿಕಾರಕ್ಕೆ ಬಂದಾಕ್ಷಣ ಆ ಯಾವ ಪ್ರಗತಿಪರತೆಯನ್ನು ನೆನಪಿಸಿಕೊಳ್ಳದ ಪಕ್ಷಗಳು, ರಾಜಕಾರಣಿಗಳ ನಡುವೆ ಮಾತು – ಬರಹಗಳ ನಡುವೆ ಯಾವ ಅಂತರವಿದೆ? ಎಂಬ ಪ್ರಶ್ನೆ ಎದುರಾಗುತ್ತದೆ.

ಈ ಮೂಲಕ ಮಾತು ಮತ್ತು ಬರಹಗಳ ನಡುವೆ ಯಾವುದೇ ವೈರುಧ್ಯ ಇಲ್ಲ. ಅವುಗಳನ್ನು ನಡೆಸಿಕೊಡುವ ಜವಾಬ್ದಾರಿ ಇರುವವರ ಮೇಲೆ ಈ ವೈರುಧ್ಯ ನಿಂತಿದೆ. ಮಾತು – ಬರಹದ ನಡುವಿನ ವ್ಯತ್ಯಾಸ, ಪ್ರಾಮುಖ್ಯತೆಯನ್ನು ಮುಂದಿನ ಅಧ್ಯಾಯಗಳಲ್ಲಿ ಅಧ್ಯಯನ ನಡೆಸಲಾಗುತ್ತದೆ.

ಇನ್ನೊಂದು ಸಂಗತಿ ಎಂದರೆ, ನ್ಯಾಯವಾಗಿ, ನಿಷ್ಪಕ್ಷಪಾತವಾಗಿ, ಸಮಾನವಾಗಿ ಎಲ್ಲರನ್ನೂ ಕಾಣುವ ಪ್ರಮಾಣ ವಚನ ಸ್ವೀಕರಿಸಿ, ಅಧಿಕಾರಕ್ಕೆ ಬರುವ ಅಧಿಕಾರಿಗಳು, ರಾಜಕಾರಣಿಗಳು ಇಂದು ತಮ್ಮ ಮಾತುಗಳಿಗೆ, ಬರಹಗಳಿಗೆರಡಕ್ಕೂ ಬದ್ಧವಾಗಿದ್ದಾರೆಯೇ? ಎಂಬ ಪ್ರಶ್ನೆ ಇತ್ತೀಚೆಗೆ ಪ್ರಮುಖವಾಗಿ ಕೇಳಿಬರುತ್ತಿದೆ. ಮಾನವರ ನಡವಳಿಕೆಯಲ್ಲಿ ವೈರುಧ್ಯವಿದೆಯೇ ಹೊರತು ಬರಹ-ಮಾತುಗಳ ನಡುವೆ ವೈರುಧ್ಯವಿಲ್ಲ ಎಂಬ ಸಂಗತಿಯ ಕುರಿತು ಇನ್ನಷ್ಟು ಅಧ್ಯಯನ ನಡೆಯಬೇಕಿದೆ.

೩.೫.೫. ಶಿಷ್ಟ–ಜಾನಪದ

ಶಿಷ್ಟ ಹಾಗೂ ಜಾನಪದಗಳಲ್ಲಿ ಪರಸ್ಪರ ಕೊಡುಕೊಳೆ ನಿರಂತರ. ದ. ರಾ. ಬೇಂದ್ರೆ, ಚಂದ್ರಶೇಖರ ಕಂಬಾರ, ದೇವನೂರ ಮಹಾದೇವ, ಪೂರ್ವದಲ್ಲಿ ಪಂಪ, ವಚನಕಾರರು, ರಾಘವಾಂಕ, ಕುಮಾರವ್ಯಾಸ, ಕೀರ್ತನಕಾರರು, ಸರ್ವಜ್ಞ ಮೊದಲಾದವರು ಜಾನಪದದೊಡನೆ ನಿಕಟ ಸಂಬಂಧ ಹೊಂದಿದ್ದರೆಂಬ ಸಂಗತಿ ಅವರ ಕೃತಿಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಆಡುನುಡಿ, ನುಡಿಗಟ್ಟು, ಗಾದೆ ಮೊದಲಾದವುಗಳು ಜಾನಪದದಿಂದ ಶಿಷ್ಟದೊಳಕ್ಕೆ ಪ್ರವೇಶ ಪಡೆದಿವೆ. ಆದರೆ ಶಿಷ್ಟ-ಜಾನಪದ ಎಂಬ ಗ್ರಹಿಕೆಯಲ್ಲಿ ಶಿಷ್ಟಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತದೆ. ಜಾನಪದದಿಂದಲೇ ಶಿಷ್ಟಕ್ಕೆ ಕೊಡುಗೆ ಸಿಕ್ಕಿದ್ದರೂ ಶಿಷ್ಟ ಸಾಹಿತ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಶಿಷ್ಟವನ್ನು ಕೆಲವು ಲಕ್ಷಣಗಳ ಮೂಲಕ ವಿವರಿಸಿಕೊಂಡಂತೆಯೆ ಜಾನಪದವನ್ನೂ ಕೂಡ ವಿವರಿಸಿಕೊಳ್ಳಬಹುದು. ಛಂದಸ್ಸು, ವಿಸ್ತಾರಗಳು ಎರಡರಲ್ಲೂ ಇದ್ದರೂ ಬರಹ ಪ್ರಕಾರ, ಕೃತಿಕಾರ, ಕೃತಿಯ ಸಮಯ ಇತ್ಯಾದಿಗಳಲ್ಲಷ್ಟೆ ಕೆಲವು ಭಿನ್ನತೆಗಳಿವೆಯೆ ಹೊರತು ನಾವೀಗ ಗ್ರಹಿಸಿರುವಂತೆ ವೈರುಧ್ಯಗಳಾಗಿಯೇನೂ ನೋಡಬೇಕಾಗಿಲ್ಲ.

ಹರಿಹರನ ರಗಳೆಗಳಲ್ಲಿನ ಪುನರಾವರ್ತನೆಯನ್ನು ಗಮನಿಸಿದರೆ ಅವನ ಮೇಲೆ ಜಾನಪದದ ಪ್ರಭಾವವಾಗಿರುವುದನ್ನು ಕಾಣಬಹುದು. ಜಾನಪದದಂತೆಯೆ ಆವರ್ತನ ಗುಣ, ಗೇಯತೆಗಳನ್ನು ಇವನ ಕೃತಿಗಳಲ್ಲಿ ಗುರುತಿಸಬಹುದು. ಗಮನಿಸಬಹುದಾದ ಇನ್ನೊಂದು ಅಂಶವೆಂದರೆ, ಜಾನಪದವೆ ಶಿಷ್ಟದ ಮೂಲ. ಇಂದಿನ ಅಕ್ಷರ, ಲಿಪಿರೂಪದ ಪೂರ್ವದಲ್ಲಿ ಮಾತು ಮೊದಲು ರೂಪಗೊಂಡು ನಂತರ ಭಾಷೆಯು ಲಿಪಿರೂಪ ಪಡೆದು ಗ್ರಂಥಸ್ಥವಾಗಿದೆ. ಈ ಕಾರಣದಿಂದಾಗಿ ಜಾನಪದವೇ

ಪ್ರಧಾನವಾಗಿ ಚರ್ಚಿತವಾಗಬೇಕಿತ್ತು. ಆದರೆ ದುರಾದೃಷ್ಟವಶಾತ್ ಈ ಕೃತಿಗಳ ಕಾಲ ಲಭ್ಯವಾಗದ ಕಾರಣ ಸಾಹಿತ್ಯ ಚರಿತ್ರೆಯಂತ ರಚನೆಗಳಲ್ಲಿ ಈ ಕೃತಿಗಳಿಗೆ ಸ್ಥಾನ ಲಭಿಸದೇ ಹೋಗಿ ಅಂಚಿಗೆ ತಳ್ಳಲ್ಪಟ್ಟಿತ್ತು. ಆದರೆ ಈಚಿನ ದಿನಗಳಲ್ಲಿನ ಬಹುತೇಕ ಪಿ.ಎಚ್.ಡಿ., ಪದವಿಗಳು ಜಾನಪದ ವಸ್ತು, ವಿಷಯಗಳನ್ನಾಧರಿಸಿದ ಅಧ್ಯಯನಗಳೇ ಆಗಿವೆ.

ಜಾನಪದ – ಶಿಷ್ಟಗಳೆಡರ ಸಮ್ಮಿಲನದಿಂದ ಸಂಸ್ಕೃತಿ ಜೀವಂತವಾಗುತ್ತದೆಯೆ ಹೊರತು, ಭಿನ್ನ ಅಸ್ತಿತ್ವಗಳಿಂದ ಭಿನ್ನಧೃವಗಳತ್ತ ಚಲಿಸುವುದರಿಂದಲ್ಲ. ಇದುವರೆಗಿನ ಅಕಾಡೆಮಿಕ್ ಚರ್ಚೆಗಳಲ್ಲಿ ಶಿಷ್ಟ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿ, ಜಾನಪದ ಸಾಹಿತ್ಯದ ತುಣುಕೊಂದನ್ನು ಮಾತ್ರ ಪಠ್ಯದಲ್ಲಿ ಅಳವಡಿಸಲಾಗುತ್ತಿದೆ. ಜಾನಪದ ಸಮುದಾಯದ ಸೃಷ್ಟಿಯಾಗಿದ್ದು, ಅದು ಬಹುಧ್ವನಿಯುಳ್ಳದ್ದಾಗಿರುವುದರಿಂದ ಶಿಷ್ಟದಷ್ಟೆ ಸಶಕ್ತವಾಗಿದೆ. ಈ ಕಾರಣದಿಂದಾಗಿ ಶಿಷ್ಟದಂತೆಯೆ ಜಾನಪದವನ್ನು ಪರಿಗಣಿಸಿ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಬೇಕಾದ ಅಗತ್ಯವಿದೆ. ಜಾನಪದದ ವಸ್ತು, ವಿಷಯ, ವೈವಿಧ್ಯಗಳು ಅಪಾರವಾದವು. ಒಂದು ಸಾಲಿನ ಗಾದೆಯಿಂದ, ಒಗಟು, ದ್ವಿಪದಿ, ತ್ರಿಪದಿ, ಚೌಪದಿ, ಲಾವಣಿ, ಜಾನಪದ ಗೀತೆಗಳು, ಮಹಾಕಾವ್ಯಗಳು, ಕಥೆಗಳೆಲ್ಲವನ್ನೂ ಒಳಗೊಂಡಿದೆ. ಇದೇ ಬಗೆಯ ವೈವಿಧ್ಯಗಳಿರುವ ಶಿಷ್ಟಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿ ಜಾನಪದವನ್ನು ಪರಿಶಿಷ್ಟಗೊಳಿಸಲಾಗಿದೆ.

ಜಾನಪದವನ್ನು ವೈಭವೀಕರಿಸುವುದರಿಂದ ಮಾತ್ರ ಅದರ ಉಳಿವಿರುವುದಿಲ್ಲ. ಜಾನಪದದಲ್ಲೂ ಎಷ್ಟೋ ಅಪ್ರಸ್ತುತ ಆಚರಣೆಗಳಿವೆ. ಜೀವವಿರೋಧಿ ನಿಲುವುಗಳನ್ನು ಕೂಡ ಮೌಲ್ಯಗಳ, ಆಚರಣೆ, ನಂಬಿಕೆಗಳ ಹೆಸರಿನಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಉದಾಹರಣೆಗೆ ಕೆರೆ ಹೊನ್ನಮ್ಮ, ಭಾಗೀರಥಿ, ಗೋವಿನ ಹಾಡು. ಈ ಮಿತಿಗಳ ನಡುವೆಯೆ ಸಂಸ್ಕೃತಿಯ ಸೃಜನಶೀಲತೆಯನ್ನು ವೃದ್ಧಿಸುವ ತಂತುಗಳು ಜಾನಪದದಲ್ಲಿವೆ. ಅಂದ ಮಾತ್ರಕ್ಕೆ ಜಾನಪದದಲ್ಲಿಲ್ಲದ್ದೆ ಇಲ್ಲ. ಎಲ್ಲವೂ ಇಲ್ಲಿದೆ. ಇಲ್ಲಿಂದಲೇ ಎಲ್ಲ... ಮುಂತಾದ ವಾದಗಳನ್ನು ಕೂಡ ಬೆಂಬಲಿಸಬೇಕಿಲ್ಲ ಎನಿಸುತ್ತದೆ.

ಕೆರೆಗೆ ಹಾರ, ಗೋವಿನ ಹಾಡು, ಬೆತ್ತಲೆ ಸೇವೆ, ಜೋಗತಿ ಸಂಪ್ರದಾಯ ಮೊದಲಾದವುಗಳನ್ನು ಪರಿಭಾವಿಸುವುದು ಹೇಗೆ? ಎಂಬ ಪ್ರಶ್ನೆ ಈಗಾಗಲೇ ಎದುರಾಗಿವೆ. ಭಾಗೀರಥಿಯ ಸಾವು, ಗೋವಿನ ಹಾಡಿನಲ್ಲಿನ ಹುಲಿ ಅರ್ಭುತನ ಸಾವು, ಇವುಗಳ ಹಿಂದಿನ ವ್ಯವಸ್ಥಿತ ಹುನ್ನಾರಗಳ ಉದಾಹರಣೆಗಳಿಂದ ಜಾನಪದದಲ್ಲಿರುವುದೆಲ್ಲವೂ ಜೀವಪರವೆನ್ನಬಹುದೆ? ಎಂದು ನಾವಿಂದು ಪ್ರಶ್ನಿಸಿಕೊಳ್ಳಬೇಕಿದೆ. ಇನ್ನೂ ಇಂತವೇ ಹಲವು ಉದಾಹರಣೆಗಳನ್ನು ಕೊಡಬಹುದಾದರೂ ಸದ್ಯಕ್ಕೆ ವಿಷಯ ನಿರೂಪಣೆಗೆ ಈ ಉದಾಹರಣೆಗಳೆ ಸಾಕೆನಿಸುತ್ತದೆ. ಈ ಮಿತಿಗಳ ನಡುವೆ ಜಾನಪದ ಸಮುದಾಯದ ಸೃಷ್ಟಿಯಾಗಿರುವುದರಿಂದ ಅದನ್ನು ಪರಿಧಿಗೆ ತಳ್ಳಬಾರದು ಎನಿಸುತ್ತದೆ.

ಜಾನಪದ ಬಹುತೇಕ ಶ್ರಮಸಂಸ್ಕೃತಿಯ ಸೃಷ್ಟಿ. ಅವರು ಕುಟ್ಟುತ್ತಾ, ಕೇರುತ್ತಾ, ಬಿತ್ತುತ್ತಾ, ಕಳೆ ತೆಗೆಯುತ್ತಾ ಕಟ್ಟಿದ ಹಾಡುಗಳದೆ ಬಹುಪಾಲು. ಆದರೆ ಈಚಿನ ದಿನಗಳಲ್ಲಿ ಯಂತ್ರ ನಾಗರಿಕತೆಯ ಯುಗದಿಂದ ಜಾನಪದ ಸೃಷ್ಟಿ ಸೀಮಿತಗೊಂಡಿದೆ. ಇಂದಿನ ಬಹುತೇಕ ಜಾನಪದವು ರೈಲು, ಬಸ್ಸು, ಗೋಡೆ ಮೇಲಿನ ಬರಹ, ಎಸ್.ಎಂ.ಎಸ್.ಗಳಿಗೆ ಸೀಮಿತವಾಗಿದ್ದರೆ, ಕೆಲವು

ಜಾನಪದ ಆಚರಣೆಗಳು, ಹಾಡು, ನೃತ್ಯ, ಸಂಗೀತಗಳು ವ್ಯಾಪಾರೀ ಉದ್ದೇಶಕ್ಕಾಗಿ ಸಮೂಹ ಮಾಧ್ಯಮಗಳಲ್ಲಿ ರಂಜನೆಗೆ ಮೀಸಲಾಗಿವೆ. ಇಂತಹ ಸಂದರ್ಭದಲ್ಲಿ ಶಿಷ್ಟವನ್ನೊ ಜಾನಪದವನ್ನೋ ವೈಭವೀಕರಿಸುವ ಅಥವಾ ತುಚ್ಚೀಕರಿಸುವ ಬದಲು ಎರಡನ್ನೂ ಸಮಾನವಾಗಿ ಕಾಣುವುದು ಆರೋಗ್ಯಕರ ಎನಿಸುತ್ತದೆ.

೩.೫.೬. ಬಿಳುಪು-ಕಪ್ಪು

ಬಿಳುಪು ಎಂದರೇನು? ಎಂಬ ಪ್ರಶ್ನೆಗೆ ಉತ್ತರ ಏನು? ಬಿಳುಪು ಯಾವುದೆಂದು ನಿರ್ಧರಿಸಲು ಕಪ್ಪನ್ನು ಎದುರಾಗಿಸಿ ವಿವರಿಸಿಕೊಳ್ಳಲಾಗುತ್ತಿದೆ. ಇದು ವಸಾಹತುಕಾರನ ಆಗಮನದಿಂದ ಉಂಟಾದ ಮತ್ತೊಂದು ತಪ್ಪು ತಿಳಿವಳಿಕೆ. ಬಿಳುಪು ಶ್ರೇಷ್ಟ, ಕಪ್ಪು ಕನಿಷ್ಠ ಎಂಬಂತಹ ರೂಪಣೆಗಳನ್ನು ವ್ಯವಸ್ಥಿತವಾಗಿ ವಸಾಹತುಗಳ ಮನಸ್ಸಿನಲ್ಲಿ ತುಂಬಿ ಕೀಳರಿಮೆಯನ್ನು ಸೃಷ್ಟಿಸಿದ 'ಯೂರೋಕೇಂದ್ರಿತವಾದ'ವನ್ನು ಎಡ್ವರ್ಡ್ ಸೈದ್ ತನ್ನ 'ಓರಿಯಂಟಲಿಸಂ'[೬೭] ಕೃತಿಯಲ್ಲಿ ಆಮೂಲಾಗ್ರವಾಗಿ ಪ್ರಶ್ನಿಸಿದ್ದಾರೆ. ವಸಾಹತು ರೂಪಣೆಯನ್ನು ತಿರಸ್ಕರಿಸುವ ರಾಮ ಮನೋಹರ ಲೋಹಿಯಾ ಅವರ 'ಸೌಂದರ್ಯ ಮತ್ತು ಮೈಬಣ್ಣ',[೬೮] ಗೌರಿ ವಿಶ್ವನಾಥನ್‌ರವರ Masks of Conquest, ಫ್ರಾನ್ಜ್ ಫ್ಯಾನನ್‌ನ Black Skin, White masks, Black is Beautiful ಎಂಬ ಪ್ರತಿಸಂಕಥನ ನಿರ್ಮಿಸಿದ ಆಫ್ರಿಕನ್ ಬರಹಗಾರರು ಈ ವಸಾಹತುವಾದಿ ದೃಷ್ಟಿಕೋನವನ್ನು ಪ್ರಶ್ನಿಸಿದ್ದಾರೆ.

ಕಪ್ಪು-ಬಿಳುಪು ಬಣ್ಣಗಳನ್ನು ಯಾರೂ ತಾವು ನಿರ್ಧರಿಸಿ ಪಡೆಯಲಾಗದು. ಮೇಲು-ಕೀಳೆಂದು ಅವುಗಳಿಂದಲೆ ನಿರ್ಧರಿಸಲಾಗದು. ಹಾಗೆ ಹೇರಲ್ಪಟ್ಟ ಕಥನವನ್ನು ಮುರಿದು ಕಟ್ಟುವ ಪ್ರಯತ್ನಗಳು ಇಂದು ನಡೆಯುತ್ತಿವೆ. ಈಚಿನ ವಿಶ್ವಸುಂದರಿ ಸ್ಪರ್ಧೆಗಳಲ್ಲಿ ಕಪ್ಪು ಜನಾಂಗದವರು ಮೇಲುಗೈ ಸಾಧಿಸುತ್ತಿದ್ದಾರೆ. ಹಿಂದಿನ ಸಾಂಸ್ಕೃತಿಕ ರಾಜಕಾರಣದ ನಡುವೆಯೇ, ಕ್ರೀಡೆಗಳಲ್ಲಿ ಕಪ್ಪು ಜನಾಂಗದವರು ಮೇಲ್ಮೈ ಸಾಧಿಸುತ್ತಿದ್ದಾರೆ.

ಆದರೆ, ವಸಾಹತುಶಾಹಿ ಧೋರಣೆಯ ಹುನ್ನಾರಗಳನ್ನು ಅರ್ಥೈಸಿಕೊಳ್ಳದೆ ಕಪ್ಪು-ಬಿಳುಪಿನ ಶ್ರೇಷ್ಠತೆಯ ಪ್ರಶ್ನೆಯನ್ನು ಸಾಮಾನ್ಯೀಕರಿಸಿ ಹೇರಲಾಗಿದೆ. ವೈರುಧ್ಯವನ್ನು ಇಲ್ಲಿ ನಕಾರಾತ್ಮಕವಾಗಿ ಸಾರ್ವತ್ರಿಕ ಸಮ್ಮತಿಯ ಉತ್ಪಾದನೆಯನ್ನಾಗಿ ಗ್ರಹಿಸಲಾಗಿದೆ.

೩.೫.೭. ಪುರುಷ-ಸ್ತ್ರೀ

ಕಪ್ಪು-ಬಿಳುಪಿನಂತೆ ಇಲ್ಲಿ ಕೂಡ ತಾರತಮ್ಯವನ್ನು ಹೇರಲಾಗಿದೆ. ಹುಟ್ಟಿನಿಂದ ಯಾರೂ ಈ ಬಗೆಯ ಭಿನ್ನತೆಯನ್ನು ಕೇಳಿಕೊಂಡು ಹುಟ್ಟಲಾರರು. ಯಾರೂ ಶ್ರೇಷ್ಠರು, ಕನಿಷ್ಠರಾಗಿರಲು ಸಾಧ್ಯವಿಲ್ಲ. ಆದರೆ ಹೆಣ್ಣನ್ನು 'ಸೆಕೆಂಡ್ ಸೆಕ್ಸ್'[೬೯] ಎಂದು ರೂಪಿಸಲಾಗಿದೆ. ಹೆಣ್ಣಿಗೆ ದ್ವಿತೀಯ ದರ್ಜೆಯನ್ನು ನೀಡಲಾಗಿದೆಯೇ ಹೊರತು, ಅವರಿಬ್ಬರಲ್ಲಿ ಮೇಲು-ಕೀಳು ಎಂಬ ಬಿಂಗಡಣೆ ಸಾಧ್ಯವಿಲ್ಲ. ಈ ಎರಡೂ ಜೀವಗಳು ತಂತಾವೆ ಪರಿಪೂರ್ಣವಾಗಿರಲು ಸಾಧ್ಯವಿಲ್ಲ. ಜೀವದ

ಸೃಷ್ಟಿಗೆ ಎರಡೂ ಸಮಾನ ಪಾಲುದಾರರಾದರೂ ಹಕ್ಕುಗಳೆಲ್ಲ ಪುರುಷನಿಗೆ, ಬಾಧ್ಯತೆಗಳೆಲ್ಲ ಹೆಣ್ಣಿಗೆ ಹೇರಲ್ಪಟ್ಟಿವೆ.

ಇಂದು ಸ್ತ್ರೀ ವಿಮೋಚನಾ ಚಳವಳಿಗಳು ಈ ಬಗೆಯ ರೂಪಣೆಗಳನ್ನು ಪ್ರಶ್ನಿಸಿವೆ. ಈ ಬಗೆಯ ವಿಂಗಡಣೆಗಳಿಂದ ಪುರುಷ ಪ್ರಧಾನ ವ್ಯವಸ್ಥೆಯ ವ್ಯವಸ್ಥಿತ ದಬ್ಬಾಳಿಕೆ ನಡೆಯುತ್ತಿದೆ. ವೈರುಧ್ಯಗಳ ಗ್ರಹಿಕೆಯು ಈ ದಿಸೆಯಲ್ಲಿ ಭಿನ್ನವಾಗಬೇಕಾಗಿದೆ.

೩.೫.೮. ನಗರ-ಹಳ್ಳಿ

ಯೂರೋಪಿನ ಕೈಗಾರಿಕಾ ಕ್ರಾಂತಿಯ ಭ್ರಾಂತಿಯಿಂದ ಹುಟ್ಟಿದ ನಗರಗಳ ಇಂದಿನ ದುಸ್ಥಿತಿ ಕಣ್ಣ ಮುಂದಿದೆ. ದೂರದ ವಲಸಿಗರನ್ನು ಉದ್ಯೋಗಕ್ಕಾಗಿ ಆಕರ್ಷಿಸುವ ನಗರಗಳು ಇಂದು ಕೊಳೆಗೇರಿಗಳಾಗಿ ಬದಲಾಗುತ್ತಿವೆ. ಜನಸಂಖ್ಯಾ ಸ್ಫೋಟದಿಂದಾಗಿ ನೀರು, ನೈರ್ಮಲ್ಯ, ವಿದ್ಯುತ್, ಮೂಲಭೂತ ಸೌಕರ್ಯಗಳ ಸಮಸ್ಯೆಗಳು ಉದ್ಭವಿಸಿವೆ. ಆದರೆ ಹಳ್ಳಿಗಳೇನು ಸ್ವಯಂಪೂರ್ಣವೆಂದಲ್ಲ. ಹಳ್ಳಿಗಳಲ್ಲಿಯೂ ಈ ಸಮಸ್ಯೆಗಳಿದ್ದು, ಅಲ್ಲಿ ಕನಿಷ್ಠ ಖರ್ಚಿನಲ್ಲಿ ಬದುಕುವ ಸಾಧ್ಯತೆಯಿದೆ. ಇಂದು ಹಳ್ಳಿಗಳಲ್ಲಿ ನೀರು, ವಿದ್ಯುತ್‌ನ ಸಮರ್ಪಕ ಪೂರೈಕೆಯಿಲ್ಲ. ರೈತರಿಗೆ ಕೂಲಿ ಕಾರ್ಮಿಕರು ಸಿಗುತ್ತಿಲ್ಲ. ಕಷ್ಟಪಟ್ಟು ಬೆಳೆ ಬೆಳೆಯುವ ಹಳ್ಳಿಯ ರೈತನಿಗೆ, ನೈಜ ಬೆಲೆ ಸಿಗದೆ; ದಳ್ಳಾಳಿಗಳ ಪಾಲಾಗುತ್ತಿದೆ.

ನಗರಗಳಲ್ಲಿನ ಕೂಲಿ ಕಾರ್ಮಿಕರ ಸ್ಥಿತಿ ಕೂಡ ಭಿನ್ನವಾಗೇನಿಲ್ಲ. ಎಸ್.ಎಸ್.ಎಲ್.ಸಿ. ಮುಗಿಸಿ, ಕೆಲವೊಮ್ಮೆ ಇತರೆ ವಿದ್ಯಾಭ್ಯಾಸಗಳನ್ನು ಪೂರೈಸಿ, ಪೂರೈಸದೆ ಬಂದು ನಗರಗಳಲ್ಲಿ ನೆಲೆಸಿರುವ ಅಸಂಖ್ಯಾತ ಯುವಕರು ಅನೇಕ ಸಮಸ್ಯೆಗಳಲ್ಲಿ ನರಳುತ್ತಿದ್ದಾರೆ. ಔದ್ಯೋಗಿಕ ಅಭದ್ರತೆ, ವಾಸಯೋಗ್ಯ ಮನೆಗಳ ಅಲಭ್ಯತೆ, ಕೌಟುಂಬಿಕವಾಗಿ ದೂರವಾಗಿರುವುದರಿಂದ ಉಂಟಾಗುತ್ತಿರುವ ಅನೇಕ ಸಾಮಾಜಿಕ ತೊಂದರೆಗಳು ಮುಂತಾದವುಗಳನ್ನು ನಗರವಾಸಿಗಳು ಎದುರಿಸುತ್ತಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿ ಬೀದಿ, ಉದ್ಯಾನವನಗಳು, ಗುಡಿಸಲುಗಳು, ೧೦X೧೦ ರೂಮ್‌ಗಳಲ್ಲಿ ವಾಸ, ಅಡುಗೆ, ಸ್ನಾನ ಎಲ್ಲವುಗಳನ್ನು ಮಾಡಬೇಕಾಗಿರುವಂತೆಯೇ ವೈಭವೋಪೇತ ಅಪಾರ್ಟ್‌ಮೆಂಟ್‌ಗಳು, ಐಷಾರಾಮಿ ಮಾಲ್‌ಗಳೂ ಇವೆ.

ಈ ಬಗೆಯ ಅನೇಕ ತರತಮಗಳು ಎಲ್ಲೆಡೆ ಇರುವುದರಿಂದ ಶ್ರೇಷ್ಠ-ಕನಿಷ್ಠತೆಯ ಪ್ರಶ್ನೆಯೆಲ್ಲಿಯದು? ಎಂಬ ಪ್ರಶ್ನೆ ಉದ್ಭವಿಸಿದೆ. ನಗರಗಳಲ್ಲಿ ಏಕಾಂಗಿತನ, ಕೋಮು ದ್ವೇಷ, ಅಸಹನೆ ಇತ್ಯಾದಿಗಳು ನಿರಂತರವಾಗಿವೆ. ಹಳ್ಳಿಗಳಲ್ಲಿನ ದಲಿತರ ಮೇಲಿನ ದೌರ್ಜನ್ಯಗಳು ಕೂಡ ಉದಾಹರಣೆಗಳಾಗಿವೆ. ಈ ನಿಟ್ಟಿನಿಂದ ಯಾವುದೂ ಶ್ರೇಷ್ಠ-ಕನಿಷ್ಠತೆಯ ಅಳತೆಗೋಲಿಗೆ ಒಗ್ಗಲಾರದೆಂಬುದನ್ನು ಕಂಡುಕೊಳ್ಳಬಹುದು.

ವೈರುಧ್ಯಗಳ ವ್ಯವಸ್ಥಿತವಾದ ಅಧ್ಯಯನದ ಅವಶ್ಯಕತೆಯನ್ನು ಡೆರಿಡಾ ಪ್ರಸ್ತಾಪಿಸುತ್ತಾ, ವೈರುಧ್ಯಗಳ ಅಧ್ಯಯನವು ವೈರುಧ್ಯವಿದೆಯೆಂದು ಮಂಡಿಸಲಿಕ್ಕಲ್ಲ. ವೈರುಧ್ಯಗಳಿಲ್ಲವೆನ್ನುವುದನ್ನು

ಕಂಡುಕೊಳ್ಳಲಿಕ್ಕೆ ಎಂದು ಪ್ರತಿಪಾದಿಸುತ್ತಾನೆ. ಆದುದರಿಂದ ವೈರುಧ್ಯಗಳ ಅಧ್ಯಯನದ ದಿಕ್ಕು ವೈರುಧ್ಯದ ಪ್ರತಿಪಾದನೆಗಾಗಿ ಅಲ್ಲ, ಅದರ ನಿವಾರಣೆಗಾಗಿ ನಡೆಯಬೇಕಿದೆ.

ವೈರುಧ್ಯಗಳ ಅಧ್ಯಯನದ ಮೂಲಕ ಮನದಟ್ಟಾದ ಒಂದು ಸಂಗತಿ ಎಂದರೆ, ಯಾವುದೇ ಖಚಿತ ದಾಖಲೆ ಅಥವಾ ಆಧಾರಗಳಿಲ್ಲದೆ ಮೊದಲನೇ ವೈರುಧ್ಯಕ್ಕೆ ಪ್ರಾಧಾನ್ಯತೆ ಕೊಡಲಾಗುತ್ತಿದೆ. ಇಂಥದ್ದೇ ಮನಃಸ್ಥಿತಿ ಮುಂದುವರೆದಿರುವ ಕಾರಣದಿಂದಲೇ ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಪ್ರಾಧಾನ್ಯತೆ ಸಿಗಲು ಮತ್ತು ಕನ್ನಡವನ್ನು ಎರಡನೇ ದರ್ಜೆಯ ವೈರುಧ್ಯ ಎಂದು ಪರಿಗಣಿಸಲಾಗುತ್ತಿರುವ ಸಂಗತಿಯನ್ನು ಸ್ಪಷ್ಟಪಡಿಸಿಕೊಳ್ಳಬೇಕಿದೆ. ವೈರುಧ್ಯಗಳ ವ್ಯವಸ್ಥಿತ ಅಧ್ಯಯನದ ಮೂಲಕ ಲೋಕದ ಜನ ಗ್ರಹಿಸುವ ಸತ್ಯಕ್ಕೂ ವಾಸ್ತವದ ನಡುವೆ ಅಂತರ ಇರುವುದನ್ನು ಕಂಡುಕೊಳ್ಳಲಾಗಿದೆ. ಈ ಮೂಲಕ ಬಿಳುಪು, ಸಂಸ್ಕೃತ, ವೈದಿಕ ಮೊದಲಾದ ವೈರುಧ್ಯಗಳು ಮೇಲಲ್ಲ, ಕಪ್ಪು, ಕನ್ನಡ, ಅವೈದಿಕ ವೈರುಧ್ಯಗಳು ಕೀಳಲ್ಲ ಎಂದು ಕೂಡ ಕಂಡುಕೊಳ್ಳಲಾಗಿದೆ.

ಈ ಅಧ್ಯಾಯದಲ್ಲಿ ಭಾಷಿಕ ಬಿಡುಗಡೆಯ ಚಿಂತನೆಗಳೊಂದಿಗೆ ಅವಳಿ ವೈರುಧ್ಯಗಳಾದ ಮಾರ್ಗ – ದೇಸಿ, ಕನ್ನಡ – ಸಂಸ್ಕೃತ, ವೈದಿಕ – ಅವೈದಿಕ, ಕಪ್ಪು – ಬಿಳುಪು ಮೊದಲಾದ ವೈರುಧ್ಯಗಳನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಮೂಲಕ ಮಾತು – ಬರಹಗಳ ಪೈಕಿ ಬರಹಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದಕ್ಕೆ ಯಾವುದೇ ಕಾರಣಗಳಿಲ್ಲ ಎನ್ನುವುದನ್ನು ಕಂಡುಕೊಳ್ಳಲಾಗಿದೆ. ಇದರೊಂದಿಗೆ ವಸಾಹತುಶಾಹಿಗಳ ಅವಧಿಯಲ್ಲಿ ದೇಶೀ ಭಾಷೆ, ಧರ್ಮ, ಆಡಳಿತ ಇತ್ಯಾದಿಗಳ ಮೇಲೆ ನಡೆದಿರುವ ಪ್ರಭಾವ ಮತ್ತು ಅವುಗಳಿಂದ ಇಂದು ಎದುರಾಗಿರುವ ಇತಿಮಿತಿಗಳನ್ನು ಕಂಡುಕೊಳ್ಳಲಾಗಿದೆ.

ಉಲ್ಲೇಖಗಳು:

೧. ಸುಬ್ಬಣ್ಣ ಕೆ. ವಿ., ೨೦೦೯, ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಪ್ರಕಾಶನ, ಹೆಗ್ಗೋಡು, ಪು.೯

೨. ಉದ್ಧೃತ, ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ૩೧.

૩. ತಾರಿಣಿ ಶುಭದಾಯಿನಿ ಆರ್., ೨೦೧೦, ನಿರ್ವಸಾಹತೀಕರಣ ಎಂದರೇನು? ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೧.

೪. Consise Oxford English Dictinoary, Oxford University Press, 1st Indian Edition, 2009, p.372

೫. wordnetweb.princeton.edu/perl/webwn

೬. en.wikipedia.org/wiki/Decolonization

೭. wordnetweb.princeton.edu/perl/webwn

೮. en.wiktionary.org/wiki/decolonize

೯. www.socialpolicy.ca/d.htm

೧೦. teacherweb.ftl.pinecrest.edu/snyderd/MWH/AP/definitions/APdefinitions4.htm

೧೧. Globalsociology.pbworks.com/Glossary-and-Sources-(Global-Stratification)

೧೨. ತಾರಕೇಶ್ವರ್ ವಿ. ಬಿ., ೨೦೦೬, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು ೨૩

೧૩. ತಾರಿಣಿ ಶುಭದಾಯಿನಿ ಆರ್., ೨೦೧೦, ನಿರ್ವಸಾಹತೀಕರಣ ಎಂದರೇನು?, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ૩೬.

೧೪. ರಹಮತ್ ತರೀಕೆರೆ, ೨೦೦೨, ಮರದೊಳಗಣ ಕಿಚ್ಚು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ಪು ૩೨, ૩ૂ૩.

೧೫. ತಾರಕೇಶ್ವರ್ ವಿ. ಬಿ., ೨೦೦೬, ವಸಾಹತುಶಾಹಿ ಮತ್ತು ಭಾಷಾಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು ೯.

೧೬. ತಾರಿಣಿ ಶುಭದಾಯಿನಿ ಆರ್., ೨೦೧೦, ನಿರ್ವಸಾಹತೀಕರಣ ಎಂದರೇನು?, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೧.

೧೭. ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೯, ೧೦.

೧೮. ಸಂ: ಸೀತಾರಾಮಯ್ಯ ಎಂ. ವಿ., ಶ್ರೀವಿಜಯ ಕೃತ ಕವಿರಾಜಮಾರ್ಗಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೫, ಪ್ರಥಮ ಪರಿಚ್ಛೇದದ ೫೧ ರಿಂದ ೬೧ ರವರೆಗಿನ ಪದ್ಯ ಭಾಗಗಳಲ್ಲಿ ಕನ್ನಡ ಮತ್ತು ಸಂಸ್ಕೃತದ ಬಳಕೆಯ ಬಗೆಗೆ ಇರುವ ಸಾಧ್ಯಾಸಾಧ್ಯತೆಗಳ ಬಗೆಗೆ ಶ್ರೀ ವಿಜಯನು ಚರ್ಚಿಸಿದ್ದಾನೆ.

೧೯. ಅದೇ, ಪು. ೮೧-೮೩

೨೦. ಕವಿರಾಜ ಮಾರ್ಗದ ಹನ್ನೊಂದು ಕಂದಪದ್ಯಗಳ ಪದ ವಿಭಾಗ ಹಾಗೂ ಅರ್ಥವಿವರಣೆ ರಾಜಪ್ಪ ದಳವಾಯಿಯವರ ಕವಿರಾಜಮಾರ್ಗ: ಅಂತರ್‌ಶಿಸ್ತೀಯ ಅಧ್ಯಯನ, ಅಪ್ರಕಟಿತ ಡಿ.ಲಿಟ್., ಪ್ರಬಂಧದಲ್ಲಿನ ಉಲ್ಲೇಖವಾಗಿದೆ. ಪು. ೩೯-೪೬

೨೧. ರಾಜಪ್ಪ ದಳವಾಯಿ, ೨೦೧೩, ಕವಿರಾಜಮಾರ್ಗ: ಅಂತರ್‌ಶಿಸ್ತೀಯ ಅಧ್ಯಯನ, ಅಪ್ರಕಟಿತ ಡಿ.ಲಿಟ್., ಪ್ರಬಂಧ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ, ಪು ೩೯

೨೨. ಅದೇ, ಪು. ೧, ೨.

೨೩. ಷೆಲ್ಡನ್ ಪೊಲಾಕ್, ೨೦೦೩, ವಿಶ್ವಾತ್ಮಕ ದೇಶಭಾಷೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪು. ೧೫

೨೪. ಅದೇ,

೨೫. ಅದೇ, ಪು.೧೪.

೨೬. ಅದೇ, ಪು.೩೪.

೨೭. ಸೀತಾರಾಮಯ್ಯ ಎಂ. ವಿ., - ಶಾಸ್ತ್ರ ಸಾಹಿತ್ಯ, ಪುಟ. ೪೦-೪೧

೨೮. ಸಂ: ರಹಮತ್ ತರೀಕೆರೆ, ೨೦೦೬ ಕವಿರಾಜಮಾರ್ಗ: ಸಾಂಸ್ಕೃತಿಕ ಮುಖಾಮುಖಿ, ಮುನ್ನುಡಿ, ಪ್ರೊ. ಎಂ. ಎಂ. ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೯. ಅದೇ,

೩೦. ಬರಗೂರು ರಾಮಚಂದ್ರಪ್ಪ, ಕನ್ನಡ - ಸಂಸ್ಕೃತ ಸಂಬಂಧ, ಸ್ಥಾನಮಾನ, ಸಿಹಿಗಾಳಿ, ಮಾಸಿಕ ಫೆಬ್ರವರಿ ೨೦೧೪, ಸಂಪುಟ ೩, ಸಂಚಿಕೆ ೪, ಪು. ೬

೩೧. ಸಂಪಾದಕರು: ಮಹೀಶವಾಡಿ ಬಿ. ಬಿ., ಪಾಟೀಲ ಎಸ್. ಪಿ., ನಯಸೇನನ ಧರ್ಮಾಮೃತ, ಕನ್ನಡ ಅಧ್ಯಯನ ಪೀಠ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೪ ಪು. ೬. ೭

೩೨. ರಾಧಾಕೃಷ್ಣ ಕೆ. ಇ., ೨೦೧೦, ಪಂಪಾಧ್ಯಯನ, ಸಪ್ನಾ ಬುಕ್ ಹೌಸ್, ಬೆಂಗಳೂರು, ಪು. ೧೨೨

೩೩. ಬರಗೂರು ರಾಮಚಂದ್ರಪ್ಪ, ಕನ್ನಡ – ಸಂಸ್ಕೃತ ಸಂಬಂಧ, ಸ್ಥಾನಮಾನ, ಸಿಹಿಗಾಳಿ ಮಾಸಿಕ, ಫೆಬ್ರವರಿ ೨೦೧೪, ಸಂಪುಟ ೩, ಸಂಚಿಕೆ ೪, ಪು. ೬

೩೪. ಬರಗೂರು ರಾಮಚಂದ್ರಪ್ಪ, ಕನ್ನಡ – ಸಂಸ್ಕೃತ ಸಂಬಂಧ, ಸ್ಥಾನಮಾನ, ಸಿಹಿಗಾಳಿ ಮಾಸಿಕ, ಫೆಬ್ರವರಿ ೨೦೧೪, ಸಂಪುಟ ೩, ಸಂಚಿಕೆ ೪, ಪು. ೬

೩೫. ಕುಲಕರ್ಣಿ ಆರ್. ವಿ., ಕಬ್ಬಿಗರ ಕಾವಂ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೧, ೧೨

೩೬. ಅದೇ, ಪು. ೧೧, ೧೨

೩೭. ಅದೇ, ಪು. ೧೨

೩೮. ಅದೇ, ಪು. ೧೦

೩೯. ಅದೇ, ಪು. ೧೩

೪೦. ಅದೇ, ಪು. ೧೩

೪೧. ಅದೇ, ಪು. ೧೩

೪೨. ಅದೇ, ಪು. ೧೩

೪೩. ಬರಗೂರು ರಾಮಚಂದ್ರಪ್ಪ, ಕನ್ನಡ – ಸಂಸ್ಕೃತ ಸಂಬಂಧ, ಸ್ಥಾನಮಾನ, ಸಿಹಿಗಾಳಿ ಮಾಸಿಕ, ಫೆಬ್ರವರಿ ೨೦೧೪, ಸಂಪುಟ ೩, ಸಂಚಿಕೆ ೪, ಪು. ೬

೪೪. ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ೨೦೦೮, ಹಿಂದ್ ಸ್ವರಾಜ್ಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು, ಹಿಂದ್ ಸ್ವರಾಜ್ಯದ ಸಾರಾಂಶವನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ.

೪೫. ಅ: ರಹಮತ್ ತರೀಕೆರೆ, ಮೂ: ಗೂಗಿ ವಾ ಥಿಯಾಂಗೊ, ೧೯೯೬, ವಸಾಹತು ಪ್ರಜ್ಞೆ ಮತ್ತು ವಿಮೋಚನೆ, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಬೆಂಗಳೂರು, ಪು. ೧೮.

೪೬. ಅದೇ, ಪು. ೧೮, ೧೯.

೪೭. ಪ್ರದೀಪ್ ಎಲ್. ಎಂ., ೨೦೧೧, ನಿರ್ವಸಾಹತೀಕರಣ: ಡಿ.ಆರ್.ನಾಗರಾಜ್‌ರವರ ಚಿಂತನೆಗಳು, ಅಪ್ರಕಟಿತ ಎಂ.ಫಿಲ್., ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೩, ೨೪.

೪೮. ರಾಜೇಂದ್ರ ಚೆನ್ನಿ, ೧೯೯೯ ದೇಶೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ೫೮.

೪೯. ಅ: ತಾರಕೇಶ್ವರ್, ಮೂ: ಜಿ.ಎನ್.ದೇವಿ, ಸಂ: ರಹಮತ್ ತರೀಕೆರೆ, ಕನ್ನಡ ಅಧ್ಯಯನ (ಗಾಳಿ ಸಂಚಿಕೆ) ಸಂಪುಟ ೫, ಸಂಚಿಕೆ ೯ (ಜನವರಿ, ಫೆಬ್ರವರಿ, ಮಾರ್ಚ್–೧೯೯೯) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೯೫.

೫೦. ಅದೇ,

೫೧. ಅ: ಚಂದ್ರಶೇಖರ ನಂಗಲಿ, ಮೂ: ಎ.ಕೆ.ರಾಮನುಜನ್, ಸಂ: ರಹಮತ್ ತರೀಕೆರೆ, ಕನ್ನಡ ಅಧ್ಯಯನ, ಚಳಿ ಸಂಚಿಕೆ, ಸಂಪುಟ ೭, ಸಂಚಿಕೆ ೨, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೧, ಪು. ೬೬, ೬೭.

೫೨. ರಹಮತ್ ತರೀಕೆರೆ, ದ್ವಿ. ಮು. ೨೦೦೮, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ૩೧.

೫೩. ಅದೇ, ಪು. ೩೨-೩೭

೫೪. ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೩೦೬

೫೫. ಉಧೃತ, ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೨೨.

೫೬. ನಟರಾಜ್ ಹುಳಿಯಾರ್, ೨೦೦೪, ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಹಂಪಿ, ಪು. ೨೨.

೫೭. ಅದೇ ಪುಟ. ೨೩.

೫೮. ಅದೇ,

೫೯. ಅದೇ. ೩೦೬

೬೦. ಅ: ಕುಮಾರ್ ಬುರಡಿಕಟ್ಟಿ, ಎ. ನಿರಂಜನ್, ೨೦೦೮, ಮಾವೋ, ಆಚರಣೆ ಕುರಿತು ಹಾಗೂ ವೈರುಧ್ಯ ಕುರಿತು, ಸೃಜನ ಪ್ರಕಾಶನ, ಬೆಂಗಳೂರು, ಪು. ೪೯

೬೧. ಮಾಧವ ಪೆರಾಜೆ, ೨೦೦೩, ಡೆರಿಡಾ, ಕನ್ನಡ ಪುಸ್ತಕ ಪ್ರಾಧಿಕಾರ

೬೨. ಡೊಮಿನಿಕ್ ಡಿ., ೨೦೦೮, ಏಕರೂಪೀತನದ ಅಪಕಲ್ಪನೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪುಟ. ೧ - ೨

೬೩. ನಾಗರಾಜ್ ಡಿ. ಆರ್., ೨೦೦೬, ಸಂಸ್ಕೃತಿ ಕಥನ, ಸಂ: ಅಗ್ರಹಾರ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪು. ೭೬, ೭೭

೬೪. ಅದೇ, ಪು. ೭೮

೬೫. ಅದೇ,

೬೬. ಪ್ರದೀಪ್ ಎಲ್. ಎಂ., ಲೇಖನ: ದಳವಾಯಿ ಡಜನ್ ನಾಟಕಗಳು: ವಿರಳ ವಸ್ತು, ಪಾತ್ರಗಳ ಅನ್ವೇಷಣೆ, ಸಂ: ರವಿಕುಮಾರ್ ನೀಹ, ಕ್ರಿಯಾಪದ, ಪರಿಣತ ಪ್ರಕಾಶನ, ಬೆಂಗಳೂರು, ೨೦೧೧.

೬೭. Edward W. Said, 2001 Orientalism, Penguin Books, New Delhi,

೬೮. ಸಂ: ನಟರಾಜ್ ಹುಳಿಯಾರ್, ೨೦೦೮, ರಾಮಮನೋಹರ ಲೋಹಿಯಾ ಚಿಂತನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೧೭-೨೨೪

೬೯. ಅ: ಡಾ. ಎಚ್.ಎಸ್. ಶ್ರೀಮತಿ, ಮೂ: ಸಿಮೊನ್ ದ ಬೊವಾ, ೨೦೦೭, ದ ಸೆಕೆಂಡ್ ಸೆಕ್ಸ್, ಅಧ್ಯಯನ ಮಂಡಲ, ಬೆಂಗಳೂರು

ಅಧ್ಯಾಯ ನಾಲ್ಕು

ಜಗತ್ತಿನ ಲಿಪಿ ಸುಧಾರಣೆಯ ಇತಿಹಾಸ

ಕನ್ನಡದಲ್ಲಿ ೧೯೯೯ರಿಂದ ಲಿಪಿ ಸುಧಾರಣೆ ನಡೆಯಬೇಕು ಎಂದು ಡಿ. ಎನ್. ಶಂಕರ ಬಟ್ಟರು ಕೆಲವು ಪ್ರಮುಖ ಪ್ರಮೇಯಗಳನ್ನು ಮಂಡಿಸುತ್ತಿದ್ದಾರೆ. ಅವರ ಪ್ರಕಾರ, ಕನ್ನಡ ಮತ್ತು ಸಂಸ್ಕೃತ ಭಿನ್ನ ಮೂಲದವು. ಇದರಿಂದಾಗಿ ಸಂಸ್ಕೃತ ಪದ, ಅಕ್ಷರ, ವ್ಯಾಕರಣಗಳನ್ನು ಕನ್ನಡಕ್ಕೆ ಯಥಾವತ್ತಾಗಿ ಅನ್ವಯಿಸುವಂತಿಲ್ಲ. ಈ ನಿಟ್ಟಿನಲ್ಲಿ ಅವರು ಸರಣಿ ಕೃತಿಗಳನ್ನು ರಚಿಸುವ ಮೂಲಕ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ಇರುವ ಮೂಲಭೂತ, ತಾತ್ವಿಕ ಭಿನ್ನತೆಗಳನ್ನು ಗುರುತಿಸಿದ್ದಾರೆ. ಈ ಮೂಲಕ ಕನ್ನಡ ಬರಹದಲ್ಲಿ ಚಳವಳಿ ನಡೆಯಬೇಕು ಎಂದು ವಾದವನ್ನು ಮಂಡಿಸಿದ್ದಾರೆ.

ಡಿ. ಎನ್. ಶಂಕರ ಬಟ್ಟರ ವಾದಕ್ಕೆ ಪೂರಕವಾಗಿ ಮಲೇಷ್ಯಾ, ಫಿನ್‌ಲ್ಯಾಂಡ್, ರಷ್ಯಾ, ಚೀನಾ, ಜರ್ಮನಿ ದೇಶಗಳಲ್ಲಿ ಕೂಡ ಲಿಪಿ, ನುಡಿ ಬದಲಾವಣೆಗಾಗಿ ಚಳವಳಿ ನಡೆದ ಉದಾಹರಣೆಗಳಿವೆ. ಈ ಚಳವಳಿಗಳಿಂದಾಗಿ ಹಳೆಯ ಲಿಪಿಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ಈ ಕುರಿತ ಸಮೀಕ್ಷೆ ಇಲ್ಲಿದೆ.

೪.೧. ಮಲೇಷ್ಯಾದಲ್ಲಿ ನಡೆದ ಲಿಪಿ ಸುಧಾರಣೆ

ನುಡಿ ಕನ್ನಡ ವೆಬ್‌ತಾಣದಲ್ಲಿ ಮಲೇಶ್ಯಾದಲ್ಲಿ ಲಿಪಿ ಬದಲಾವಣೆ ಎಂಬ ಲೇಖನ ಪ್ರಕಟವಾಗಿದೆ. ಇದರಲ್ಲಿ ಮಲೇಷ್ಯಾದಲ್ಲಿ ನಡೆದ ಲಿಪಿ ಸುಧಾರಣೆಯ ಕುರಿತ ಉಲ್ಲೇಖವಿದೆ. ಈ ಮೂಲಕ ಕನ್ನಡದಲ್ಲಿ ಮಾತ್ರವಲ್ಲದೆ ಜಗತ್ತಿನ ಅನೇಕ ಭಾಷೆಗಳಲ್ಲಿ ಲಿಪಿ ಸುಧಾರಣೆಯ ಪ್ರಯತ್ನಗಳು ನಡೆದಿರುವುದಕ್ಕೆ ಸಾಕ್ಷಿಗಳು ಸಿಕ್ಕಿವೆ.

"ಮಲಾಯ್ ನುಡಿಯನ್ನಾಡುವ ಮಂದಿ ಹೆಚ್ಚಿರುವ ನಾಡೇ ಇವತ್ತಿನ ಮಲೇಶ್ಯಾ. ತಮಿಳಿನ ಲಿಪಿ ಪ್ರಭಾವ ಮಲಾಯ್ ನುಡಿಯನ್ನು ಬರೆಯಲು ಬಳಸುತ್ತಿದ್ದ ಲಿಪಿಯ ಮೇಲೂ ಆಗಿತ್ತೆಂದು ಹೇಳಲಾಗುತ್ತದೆ. ಹಳೆಯ ಮಲಾಯ್ ನುಡಿಯನ್ನು ಬರೆಯಲು ಪಲ್ಲವ, ಕಾವಿ ಮತ್ತು ರೆಂಕಾಂಗ್ ಎಂಬ ಲಿಪಿಗಳನ್ನು ಬಳಸಲಾಗುತ್ತಿತ್ತು. ತಮಿಳುನಾಡನ್ನು ೬ನೇ ಶತಮಾನದ ಹೊತ್ತಿನಲ್ಲಿ ಪಲ್ಲವ ಮನೆತನದವರು ಆಳುತ್ತಿದ್ದರು. ಅವರ ಆಳ್ವಿಕೆಯಡಿಯಲ್ಲಿ ತಮಿಳು ನುಡಿಯನ್ನು ಬರೆಯಲು ಮೂಡಿದ ಲಿಪಿಯೇ ಪಲ್ಲವ ಲಿಪಿ. ಇದನ್ನೇ ಬಳಸಿ ಮಲಾಯ್ ನುಡಿಯನ್ನೂ ಬರೆಯಲಾಗುತ್ತಿತ್ತು"[೧] ಎಂದು ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಇಲ್ಲಿ ಕಾವಿ ಮತ್ತು ರೆಂಕಾಂಗ್ ಲಿಪಿಯನ್ನು ಬಳಸಲಾಗುತ್ತಿತ್ತು. ಜಾವಾದಲ್ಲಿ ಕಾವಿ ಲಿಪಿ ರೂಪುಗೊಂಡಿತ್ತು ಕಾವಿ ಲಿಪಿಯೂ ತಮಿಳಿನ ಪಲ್ಲವ ಲಿಪಿಯಿಂದ ಮೂಡಿದೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ. ನಡು ಸುಮಾತ್ರಾ ಮತ್ತು ತೆಂಕಣ ಸುಮಾತ್ರಾ ಭಾಗದಲ್ಲಿ ಬಳಕೆಯಲ್ಲಿದ್ದ ಲಿಪಿಯನ್ನು ರೆಂಕಾಂಗ್ ಲಿಪಿ ಎಂದು ಕರೆಯಲಾಗುತ್ತದೆ ಎಂದು ವೆಬ್‌ತಾಣದಲ್ಲಿ ಹೇಳಲಾಗಿದೆ. ಈ ರೆಂಕಾಂಗ್ ಲಿಪಿ ಕಾಂಬೋಡಿಯಾದಲ್ಲಿ ಕಂಡುಬರುವ ಹಳೆಯ ಬರಿಗೆ(ಅಕ್ಷರ)ಗಳಿಗೆ ಹತ್ತಿರವಿತ್ತು ಎಂದು ಹೇಳಲಾಗಿದೆ. ಅಲ್ಲದೇ, ಸುಮಾರು ೧೮ನೇ ಶತಮಾನದವರೆಗೂ ರೆಂಕಾಂಗ್ ಲಿಪಿ ಸುಮಾತ್ರಾ ನಾಡು ಭಾಗದಲ್ಲಿ ಬಳಕೆಯಲ್ಲಿದ್ದ ಕುರಿತು ಉಲ್ಲೇಖಿಸಲಾಗಿದೆ.

ಇದರೊಂದಿಗೆ ಜಾವಿ ಲಿಪಿ "ಬೇರೆ ಬೇರೆ ಭಾಗಗಳಲ್ಲಿ ಮಲಾಯ್ ನುಡಿಯಾಡುತ್ತಿದ್ದ ಜನರು ಬೇರೆ ಬೇರೆ ಲಿಪಿಗಳನ್ನು ಬಳಸುತ್ತಿದ್ದರು. ಮಲೇಶ್ಯಾದಲ್ಲಿ ಇಸ್ಲಾಮ್ ಧರ್ಮ ಹಬ್ಬುತ್ತಾ ಬಂದಂತೆ, ಅರೇಬಿಕ್ ಲಿಪಿಗೆ ಹತ್ತಿರವಿರುವ ಜಾವಿ ಲಿಪಿ ಹೆಸರುವಾಸಿಯಾಯಿತು. ಪಲ್ಲವ, ಕಾವಿ ಮತ್ತು ರೆಂಕಾಂಗ್ ಲಿಪಿಗಳು ಜನಬಳಕೆಯಿಂದ ಮರೆಯಾಗತೊಡಗಿ ಮಲಾಯ್ ನುಡಿಯನ್ನು ಬರೆಯಲು ಜಾವಿ ಲಿಪಿಯ ಬಳಕೆ ಮುನ್ನೆಲೆಗೆ ಬಂದಿತು. ಅರೇಬಿಕ್ ಲಿಪಿಯಲ್ಲಿರುವ ಹಲವಾರು ಅಕ್ಷರಗಳನ್ನು ಜಾವಿ ಲಿಪಿ ಕಯ್ ಬಿಟ್ಟು, ಅರೇಬಿಕ್ ಲಿಪಿಯಲ್ಲಿಲ್ಲದ ಕೆಲವು ಅಕ್ಷರಗಳನ್ನು ಸೇರಿಸಿಕೊಂಡಿತು. ಮಲಾಯ್ ನುಡಿಯಲ್ಲಿನ ಕೆಲ ಉಲಿಗಳನ್ನು ಬರೆಯಲು ಬೇಕಂತಲೇ ಈ ಕೆಲವು ಅಕ್ಷರಗಳನ್ನು ಸೇರಿಸಿಕೊಳ್ಳಲಾಯಿತು"[೨] ಎಂಬ ಸಂಗತಿಯನ್ನು ಈ ತಾಣದಲ್ಲಿ ಕಾಣಬಹುದು. ಈ ಮೂಲಕ ಕನ್ನಡದಲ್ಲಿ ಡಿ. ಎನ್. ಶಂಕರ ಬಟ್ಟರು ಹೇಳುತ್ತಿರುವ ಲಿಪಿ ಸುಧಾರಣೆ ಕುರಿತು ಮಲೇಷ್ಯಾದಲ್ಲಿ ಕೂಡ ಯತ್ನ ನಡೆದಿದೆ ಎಂಬುದು ಗಮನಾರ್ಹ ಸಂಗತಿ. ಈ ನಿಟ್ಟಿನಲ್ಲಿ ಮಹತ್ವದ ಲಿಪಿ ಬದಲಾವಣೆಗೆ ನಡೆಸಿರುವ ಪ್ರಯತ್ನ ಮತ್ತು ಅವುಗಳಲ್ಲಿ ತಂದ ಬದಲಾವಣೆಗಳ ಕುರಿತು ಕೂಡ ಇದೇ ವೆಬ್‌ತಾಣದಲ್ಲಿ ಉಲ್ಲೇಖಿಸಲಾಗಿದೆ.

ಡಚ್ಚರು ಮತ್ತು ಬ್ರಿಟಿಶರ ಆಳ್ವಿಕೆಯಡಿ ಲಿಪಿ ಬದಲಾವಣೆಯಾಗಿದೆ ಎಂಬ ಈ ಲೇಖನದ ಪ್ರಕಾರ: "ಮಲಾಯ್ ಜನರು ನೆಲೆಸಿದ್ದ ಭಾಗಗಳು ಕೆಲ ವರುಶಗಳ ಕಾಲ ಡಚ್ಚರು ಮತ್ತು ಬ್ರಿಟಿಶರ ಆಳ್ವಿಕೆಯಡಿ ಹಂಚಿಹೋಗಿತ್ತು. ಆ ಹೊತ್ತಿನಲ್ಲಿ ಜಾವಿ ಲಿಪಿಯ ಬಳಕೆ ಕಡಿಮೆಯಾಗುತ್ತಾ ಸಾಗಿ, ರೋಮನ್ ಲಿಪಿಗೆ ಹತ್ತಿರವಿರುವ ಲಿಪಿಗಳು ಈ ನಾಡುಗಳಲ್ಲಿ ಬಳಕೆಗೆ ಬಂದವು. ಡಚ್ಚರ ಮತ್ತು ಬ್ರಿಟಿಶರ ಆಳ್ವಿಕೆಯಡಿ ಡಚ್ ಮತ್ತು ಇಂಗ್ಲಿಶ್ ಕಲಿಕೆಯೇರ್ಪಾಡು ಕಟ್ಟಿದ್ದೂ ಬೇರೆ

ಲಿಪಿಗಳು ಮುನ್ನೆಲೆಗೆ ಬರಲು ಕಾರಣವಾಯಿತು. ಡಚ್ಚರು ಮತ್ತು ಬ್ರಿಟಿಶರ ಆಳ್ವಿಕೆ ಕೊನೆಗೊಂಡ ಮೇಲೂ, ಮಲಾಯ್ ನುಡಿಗೆ ಬೇರೆ ಬೇರೆ ಲಿಪಿಗಳಿದ್ದವು"[೩] ಎನ್ನಲಾಗಿದೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ಲಿಪಿಯ ಅನುಕರಣೆಯ ಮಾದರಿಯಲ್ಲೇ ಅರೇಬಿಕ್, ಡಚ್, ಇಂಗ್ಲಿಷ್ ಭಾಷೆಯ ಪ್ರಭಾವವನ್ನು ಮಲೇಷ್ಯನ್ನರು ಎದುರಿಸಿರುವುದು ಸಾಬೀತಾಗುತ್ತದೆ.

೧೯೭೨ರಲ್ಲಿ ಮಲಾಯ್ ಭಾಷೆಗೆ ಅಳವಡಿಸಲಾದ ಲಿಪಿ

ಕನ್ನಡದಲ್ಲಿ ಡಿ. ಎನ್. ಶಂಕರ ಬಟ್ಟರು ಲಿಪಿ, ಪದಕ್ರಾಂತಿ ಕುರಿತು ಮಂಡಿಸುತ್ತಿರುವ ಚಿಂತನೆಗಳು ೧೯೯೯ರಲ್ಲಿ ಆರಂಭವಾಗಿವೆ. ೧೯೭೨ರಲ್ಲೇ ಮಲಾಯ್ ಭಾಷೆಗೆ ಹೊಸ ಲಿಪಿಯನ್ನು ಅಳವಡಿಸುವ ಕೆಲಸ ಆರಂಭವಾಗಿದೆ. "ಬೇರೆ ಬೇರೆ ಆಳ್ವಿಕೆಯಡಿ ಹಂಚಿ ಹೋಗಿದ್ದ ಮಲೇಶ್ಯಾ ಒಂದೇ ಆಳ್ವಿಕೆಯಡಿ ಬಂದಮೇಲೆ, ಒಂದೇ ಲಿಪಿಯನ್ನು ಮಲಾಯ್ ನುಡಿಗೆ ಅಳವಡಿಸುವ ಕೆಲಸ ಚುರುಕುಗೊಂಡಿತು. ಮಲಾಯ್ ನುಡಿಗೆ ಬಹಳ ಹತ್ತಿರವಿರುವ ನುಡಿಯನ್ನಾಡುವ ಇಂಡೋನೇಶ್ಯಾದ ಜನರೂ ಈ ಲಿಪಿ ಕಟ್ಟಣೆಯ ಕೆಲಸಕ್ಕೆ ಮಲೇಶ್ಯಾದ ಜೊತೆ ಕಯ್ ಜೋಡಿಸಿದರು. ಈ ಕೆಲಸದಿಂದ ೧೯೭೨ರಲ್ಲಿ ರುಮಿ ಲಿಪಿ ಬಳಕೆಗೆ ಬಂತು. ರೋಮನ್ ಲಿಪಿಯನ್ನು ಬಳಸಿಕೊಂಡೇ ರುಮಿ ಲಿಪಿಯನ್ನು ಕಟ್ಟಲಾಗಿದ್ದು, ಇದರಲ್ಲಿ ೨೬ ಅಕ್ಷರಗಳಿವೆ. ಇವತ್ತಿನ ದಿನದ ಮಲೇಶ್ಯಾದಲ್ಲಿ ಕಲಿಕೆಯಿಂದ ಹಿಡಿದು, ಸರಕಾರದ ವಹಿವಾಟುಗಳವರೆಗೆ ಎಲ್ಲದರಲ್ಲೂ ರುಮಿ ಲಿಪಿಯನ್ನೇ ಬಳಸಲಾಗುತ್ತಿದೆ. ನುಡಿಗೆ ಹತ್ತಿರವಾದ ಲಿಪಿ ಇದಾಗಿದ್ದು, ಇಂಡೋನೇಶ್ಯಾದಲ್ಲಿ ಈ ಲಿಪಿಯನ್ನು ಅಳವಡಿಸಿಕೊಂಡ ಬಳಿಕ ಸಾಕ್ಷರತೆ ಹೆಚ್ಚಿದೆ ಎಂದು ಹೇಳಲಾಗುತ್ತದೆ"[೪] ಎಂದು ವೆಬ್‌ತಾಣದಲ್ಲಿ ಪ್ರಕಟವಾದ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ಮೇಲಿನಂತೆ ಕರ್ನಾಟಕದಲ್ಲಿ ಕೂಡ ಏಕೀಕರಣದ ನಂತರ ಇಂತಹ ಪ್ರಯತ್ನಗಳು ನಡೆಯಬೇಕಿತ್ತು ಎನಿಸುತ್ತದೆ. ಮೈಸೂರು ಕರ್ನಾಟಕ, ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮೊದಲಾದ ಪ್ರದೇಶದಲ್ಲಿ ಹಂಚಿ ಹೋಗಿದ್ದ ಕರ್ನಾಟಕ ೧೯೭೩ ನವೆಂಬರ್ ೧ರಂದು ಏಕೀಕರಣವಾಯಿತು. ಅದರ ನಂತರ ಕೂಡ ಕರ್ನಾಟಕದಲ್ಲಿ ಮಲೇಷ್ಯಾದಲ್ಲಿ ನಡೆದಂತೆ ಲಿಪಿ ಬದಲಾವಣೆಯ ಯತ್ನ ಆರಂಭವಾಗಲಿಲ್ಲ. ಕನ್ನಡದಲ್ಲಿ ಅಶೋಕನ ಕಾಲದಲ್ಲಿ ಆರಂಭವಾದ ಬ್ರಾಹ್ಮೀ ಲಿಪಿಯ ಪ್ರಭಾವ, ಆಧುನಿಕ ಮತ್ತು ಆಧುನಿಕೋತ್ತರ ಕಾಲಘಟ್ಟದಲ್ಲಿ ಕೂಡ ಮುಂದುವರೆದಿದೆ. ಱಳ, ಕುಳ, ಕ್ಷಳಗಳನ್ನು ಕೈಬಿಟ್ಟದ್ದು ಮತ್ತು ಸಬಿಂದುಕಗಳಾದ ತೋಂಟ (ತೋಟ), ದಾಂಟು(ದಾಟು) ಮೊದಲಾದವುಗಳಲ್ಲಿ ಅಬಿಂದುಕಗಳಾಗಿ ಪರಿವರ್ತನೆಯಾದದ್ದು ಇಂತಹ ಕೆಲವು ಬೆರಳೆಣಿಕೆಯಷ್ಟು ಉದಾಹರಣೆಗಳನ್ನು ಹೊರತುಪಡಿಸಿದರೆ ಬರಹ ರೂಪದಲ್ಲಿ ಮಹತ್ವದ ಬದಲಾವಣೆಗಳಾಗಿಲ್ಲ.

೪.೨. ಚೀನಾದಲ್ಲಿ ನಡೆದ ಲಿಪಿ ಸುಧಾರಣೆ

ನೆರೆಯ ದೇಶ ಚೀನಾದಲ್ಲಿ ಕೂಡ ಲಿಪಿ ಸುಧಾರಣೆಯಲ್ಲಿ ಮಹತ್ವದ ಘಟ್ಟವನ್ನು ದಾಟಲಾಗಿದೆ. ಚೈನೀ ಬರಹದ ಭಾಷೆ ಚಿತ್ರಲಿಪಿ ಆಧಾರಿತವಾಗಿದೆ. ಇದಕ್ಕೆ ಸುಮಾರು ೨,೫೦೦ಕ್ಕೂ ಹೆಚ್ಚು

ಚಿತ್ರಗಳನ್ನು ಚೀನೀಯರು ನೆನಪಿನಲ್ಲಿಟ್ಟುಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಚೀನಾದಲ್ಲಿ ಲಿಪಿ ಸುಧಾರಣೆಯ ಯತ್ನವನ್ನು ನಡೆಸಲಾಗಿದೆ.

"ಚೈನೀಸ್ ನುಡಿಯನ್ನು ಬರೆಯಲು ಎರಡು ಬಗೆಯ ಲಿಪಿಗಳನ್ನು ಬಳಸಲಾಗುತ್ತಿದೆ. ಚೀನಾ ದೇಶ ಮತ್ತು ಸಿಂಗಾಪುರದಲ್ಲಿ ಬಳಸಲಾಗುವ ಲಿಪಿಯನ್ನು ಸರಳವಾಗಿಸಿದ ಚೈನೀಸ್ ಲಿಪಿ (simplified Chinese script) ಎಂದು ಕರೆಯಲಾಗುತ್ತದೆ. ಹಾಂಗ್ ಕಾಂಗ್, ಮಕಾವ್ ಮತ್ತು ತೈವಾನಿನಲ್ಲಿ ಬಳಸಲಾಗುತ್ತಿರುವ ಲಿಪಿಯು ತಲೆತಲಾಂತರದ ಚೈನೀಸ್ ಲಿಪಿ (traditional Chinese script) ಎಂದು ಕರೆಯಲ್ಪಡುತ್ತದೆ"[೫] ಎಂದು ನುಡಿಕನ್ನಡ ವೆಬ್ ತಾಣದಲ್ಲಿ ದಾಖಲಿಸಲಾಗಿದೆ. ಈ ಮೂಲಕ ಪಾರಂಪರಿಕ ಚೀನಾ ಲಿಪಿಯಲ್ಲಿ ಕೂಡ ಪರಿವರ್ತನೆಗಳನ್ನು ತರಲು ಯತ್ನಿಸಲಾಗಿದೆ.

ಚೀನಾದಲ್ಲಿ ಎರಡು ಬಗೆಯ ಲಿಪಿಗಳ ಬಳಕೆಗೆ ಅಲ್ಲಿ ಆಳಿದ ರಾಜಮನೆತನಗಳೇ ಕಾರಣ ಎನ್ನುವುದಕ್ಕೆ ಇತಿಹಾಸದಲ್ಲಿ ಸಾಕ್ಷಿ ಇದೆ. "ಸುಮಾರು ಐದನೇ ಶತಮಾನದಲ್ಲಿ ಹಾನ್ ಮನೆತನದವರು ಚೀನಾ ಮೇಲೆ ಆಡಳಿತ ನಡೆಸುತ್ತಿದ್ದಾಗ ಬರವಣಿಗೆಗಾಗಿ ಬಳಕೆಗೆ ಬಂದಿದ್ದ ಚೈನೀಸ್ ಲಿಪಿಯು ಮುಂದೆ ಹಲವೆಡೆಗಳಲ್ಲಿ ಬಳಸಲ್ಪಡುತ್ತಿತ್ತು. ಆಮೇಲಾಮೇಲೆ, ಚೈನೀಸ್ ನುಡಿಯನ್ನು ಬರೆಯುವುದು ಈ ಲಿಪಿಯಲ್ಲೇ ಎಂಬಂತಹ ವಾಡಿಕೆ ಬೆಳೆದುಬಿಟ್ಟಿತ್ತು. ಚೈನೀಸ್ ಲಿಪಿಯು ಗೆರೆಗಳಿಂದ ಕೂಡಿರುವುದಾದ್ದರಿಂದ, ಕೆಲವೊಂದು ಪದಗಳನು ಬರೆಯಲು ೧೮ರಿಂದ ೨೦ ಗೆರೆಗಳನ್ನು ಎಳೆಯಬೇಕು ಎಂಬಂತೆ ಲಿಪಿ ಮಾರ್ಪುಗೊಳ್ಳುತ್ತಾ ಸಾಗಿತ್ತು. ಉದಾಹರಣೆಗೆ, **"邊"** ಈ ಒಂದು ಅಕ್ಷರದಲ್ಲಿ ಸುಮಾರು ೧೮ ಗೆರೆಗಳಿವೆ"[೬] ಎಂದು ನುಡಿಕನ್ನಡ ವೆಬ್‌ತಾಣದಲ್ಲಿ ಉಲ್ಲೇಖಿಸಲಾಗಿದೆ. ಈ ಮೂಲಕ ಚೈನೀ ಭಾಷೆಯ ಲಿಪಿ ಅತ್ಯಂತ ಕ್ಲಿಷ್ಟಕರ ಎನ್ನುವುದನ್ನು ಮನಗಾಣಬಹುದು. ಕನ್ನಡದಲ್ಲಿ ಕೂಡ ಇಂತಹ ಅನವಶ್ಯಕ ಹೊರೆ ಇರುವುದನ್ನು ಗಮನಿಸಬೇಕಿದೆ. ಬರಹದಲ್ಲಿ ಮಾತ್ರ ಅಸ್ತಿತ್ವದಲ್ಲಿರುವ, ಬಹುತೇಕರ ಆಡುನುಡಿಯಲ್ಲಿ ಇಲ್ಲದ ಸಂಸ್ಕೃತ ರೂಪ ಮತ್ತು ಮಹಾಪ್ರಾಣಾಕ್ಷರಗಳ ಹೊರೆ ಕನ್ನಡದ ಮೇಲಿದೆ. ಇಂತಹ ಸಮಸ್ಯೆಗೆ ಚೀನಾದಲ್ಲಿ ಈಗಾಗಲೇ ಪರಿಹಾರವನ್ನು ಕಂಡುಕೊಳ್ಳಲಾಗಿದೆ.

"ಚೀನಾದ ಹಳಮೆಯಲ್ಲಿ ಮುಖ್ಯವಾದ ಚಳುವಳಿಯೆಂದು ಬಣ್ಣಿಸಲಾಗುವ ಮೇ ನಾಲ್ಕರ ಚಳುವಳಿಯ ಬಳಿಕ, ೧೯೧೯ರಲ್ಲಿ ಚೀನಾ ಏಳಿಗೆ ಹೊಂದಿದ ನಾಡಾಗಿ ಮಾಡಬೇಕಾದ ಹಾದಿಗಳ ಬಗ್ಗೆ ಸಾಕಷ್ಟು ಚರ್ಚೆಗಳು ಹುಟ್ಟುಕೊಂಡವು ಎನ್ನಲಾಗುತ್ತದೆ. ಅವಾಗಾಗಲೇ ಕೆಲವರಲ್ಲಿ ಚೈನೀಸ್ ಲಿಪಿಯನ್ನು ಕಲಿಯಲು ಇರುವ ತೊಡಕುಗಳ ಬಗ್ಗೆ ಅನಿಸಿಕೆಗಳು ಮೂಡಿದ್ದವು. ಈ ಅನಿಸಿಕೆಗಳಿಗೆ ಹೆಚ್ಚಿನ ಬೆಂಬಲ ೧೯೧೯ರ ಬಳಿಕ ದೊರೆಯತೊಡಗಿತು"[೭] ಎಂದು ವೆಬ್‌ತಾಣದಲ್ಲಿ ಉಲ್ಲೇಖಿಸಲಾಗಿದೆ. ಈ ಮೂಲಕ ಚೀನಾದಲ್ಲಿ ಲಿಪಿ ಸುಧಾರಣೆಗೆ ಚಳವಳಿ ಪ್ರೇರಕವಾಗಿರುವುದನ್ನು ಗಮನಿಸಬಹುದು. ಕರ್ನಾಟಕದಲ್ಲಿ ನಡೆಯುತ್ತಿರುವ ಕನ್ನಡ ಪರ ಹೋರಾಟಗಳಿಗೂ ಚೀನಾದಲ್ಲಿ ನಡೆಯುತ್ತಿರುವ ಹೋರಾಟಗಳಿಗೂ ವ್ಯತ್ಯಾಸವಿರುವುದನ್ನು ಕೂಡ ಮೇಲಿನ ಸಂಗತಿ ಸ್ಪಷ್ಟಪಡಿಸುತ್ತದೆ.

ಮೇ ೪ರ ಚಳವಳಿಯ ನಾಯಕನಾಗಿದ್ದ ಘು ಸಿನಿಯಾನ್ ಚೈನೀಸ್ ಲಿಪಿಯಲ್ಲಿ ತರಬೇಕಾದ ಬದಲಾವಣೆಗಳ ಕುರಿತು ಮೊದಲು ದನಿ ಎತ್ತಿದರು. “ಅವರು ಚೈನೀಸ್ ಲಿಪಿಯಲ್ಲಿ ಮಾಡಬೇಕಾದ ಸುಧಾರಣೆಗಳ ಬಗ್ಗೆ ಮಾತನಾಡತೊಡಗಿದರು. ಚೈನೀಸ್ ಲಿಪಿಯು ತುಂಬಾ ಸಿಕ್ಕಲು ಸಿಕ್ಕಲಾಗಿದ್ದು ಅದನ್ನು ಹೊಸದಾಗಿ ಕಲಿಯುವುದು ದೊಡ್ಡ ತ್ರಾಸವಾಗಿದೆ, ಇದನ್ನು ಸರಳಗೊಳಿಸುವ ಮೂಲಕ ಹೆಚ್ಚು ಜನರಿಗೆ ಅಕ್ಷರಗಳ ಪರಿಚಯ ಮಾಡಿಸಬಹುದು ಎಂಬ ಆಲೋಚನೆ ಹಬ್ಬತೊಡಗಿತು. ಆಗಿಂದ ಶುರುವಾದ ಲಿಪಿಯನ್ನು ಸರಳಗೊಳಿಸುವ ಕೆಲಸವು, ೧೯೬೪ರಲ್ಲಿ ಚೀನಾ ಜನರ ರಿಪಬ್ಲಿಕ್ ಸರಕಾರವು ಸರಳಗೊಳಿಸಿದ ಲಿಪಿಯನ್ನೇ ಬಳಸುವುದಾಗಿ ಹೇಳುವುದರೊಂದಿಗೆ ಒಂದು ಹಂತ ತಲುಪಿತು. ೨೦೦೯ರಲ್ಲಿ ಚೀನಾ ಜನರ ರಿಪಬ್ಲಿಕ್ ಸರಕಾರವು ಇನ್ನೂ ಕೆಲವು ಅಕ್ಷರಗಳನ್ನು ಸರಳಗೊಳಿಸಿ ಸುತ್ತೋಲೆ ಹೊರಡಿಸಿದೆ. ೧೯೬೪ರಿಂದೀಚೆಗೆ, ಚೀನಾದಲ್ಲಿ ಎಲ್ಲಾ ವಲಯಗಳಲ್ಲೂ ಸರಳವಾಗಿಸಿದ ಲಿಪಿಯನ್ನೇ ಬಳಸಲಾಗುತ್ತಿದೆ”[೮] ಎಂದು ವೆಬ್‌ತಾಣದಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಿನಲ್ಲಿ ೧೯೧೯ರಲ್ಲಿ ಆರಂಭವಾದ ಲಿಪಿ ಸುಧಾರಣೆಯ ಕ್ರಾಂತಿಗೆ ೯೦ ವರ್ಷಗಳ ನಂತರ ಫಲ ಸಿಕ್ಕಿದೆ. ಈ ಮೂಲಕ ಲಿಪಿಯಲ್ಲಿದ್ದ ಅನವಶ್ಯಕ ಹೊರೆಯನ್ನು ಇಳಿಸಲು ಅಲ್ಲಿನ ಸರ್ಕಾರ ಕ್ರಮ ಕೈಗೊಂಡಿದೆ. ಆದರೆ, “ಸರಳವಾಗಿಸಿದ ಚೈನೀಸ್ ಲಿಪಿಯ ಹುಟ್ಟಿನ ಕತೆ ಇದಾದರೆ, ಚೈನೀಸ್ ನುಡಿಯವರು ಹೆಚ್ಚಿನ ಎಣಿಕೆಯಲ್ಲಿರುವ ತೈವಾನ್, ಹಾಂಗ್ ಕಾಂಗ್ ಮತ್ತು ಮಕಾವ್ಗಳಲ್ಲಿ ತಲೆತಲಾಂತರದ ಚೈನೀಸ್ ಲಿಪಿಯನ್ನೇ ಇವತ್ತಿಗೂ ಬಳಸಲಾಗುತ್ತಿದೆ”[೯]ಯಂತೆ. ಇದೇ ಮಾದರಿಯಲ್ಲಿ ಕನ್ನಡದ ಇಂದಿನ ಲಿಪಿ ಇದೆ ಎನಿಸುತ್ತದೆ. ಸರಳ ಲಿಪಿಯನ್ನು ಬಳಸಲು ಎಲ್ಲ ಅವಕಾಶವಿದ್ದರೂ ಅದನ್ನು ಹೊರತುಪಡಿಸಿ ತೈವಾನ್, ಹಾಂಗ್ ಕಾಂಗ್ ಮತ್ತು ಮಕಾವ್ಗಳಲ್ಲಿ ಪಾರಂಪರಿಕ ಲಿಪಿಯನ್ನೇ ಬಳಸುವುದನ್ನು ಮುಂದುವರೆಸಲಾಗಿದೆ. ಇದೇ ಮಾದರಿ ಸದ್ಯಕ್ಕೆ ಕನ್ನಡದಲ್ಲಿ ಕೂಡ ಜಾರಿಯಲ್ಲಿದೆ.

ಲಿಪಿ ಬದಲಾವಣೆಯ ಲಾಭ

‘ಲಿಪಿ ಬದಲಾವಣೆಯ ಬಳಿಕ ಚೀನಾಗೆ ದಕ್ಕಿದ ಲಾಭವೇನು?’ ಎಂಬ ಲೇಖನದ ಭಾಗದಲ್ಲಿ ಚೀನಾದಲ್ಲಿ ಆಗಿರುವ ಬದಲಾವಣೆಗಳ ಕುರಿತು ಉಲ್ಲೇಖಿಸಲಾಗಿದೆ. “ಚೀನಾ ದೇಶದಲ್ಲಿ ಲಿಪಿ ಸುಧಾರಣೆ ಮಾಡಿಕೊಂಡ ಬಳಿಕ, ಅಕ್ಷರ ಬಲ್ಲವರ ಎಣಿಕೆ (literacy rate) ಹೆಚ್ಚಾಗಿದೆ. ಸರಳವಾಗಿಸಿದ ಲಿಪಿಯು ಕಡಿಮೆ ಗೆರೆಗಳನ್ನು ಹೊಂದಿದ್ದು, ತಲೆತಲಾಂತರದ ಲಿಪಿಯನ್ನು ಕಲಿಯುವುದಕ್ಕಿಂತಾ ಸುಲಭವಾಗಿ ಕಲಿಯಬಹುದಾಗಿದೆ... ಅಕ್ಷರ ಬಲ್ಲವರ ಎಣಿಕೆ ಹೆಚ್ಚಾದಂತೆ ಯಾವುದೇ ಸಮುದಾಯವು ಕಲಿಕೆಯಲ್ಲಿ ಮುಂದೆ ಸಾಗುತ್ತದೆ. ಹೆಚ್ಚೆಚ್ಚು ಮಂದಿ ಒಳ್ಳೆಯ ಕಲಿಕೆ ಪಡೆದುಕೊಂಡು ದುಡಿಮೆಗೆ ಇಳಿಯುತ್ತಿರುವುದು ಚೀನಾ ದೇಶಕ್ಕೆ ದೊಡ್ಡ ಮಟ್ಟಿನ ಬಲವೊಂದನ್ನು ತಂದುಕೊಟ್ಟಿದೆ. ಚೈನೀಸ್ ನುಡಿಯೂ ಕೂಡ ಇವತ್ತಿನ ದಿನ ಚಳಕದರಿಮೆ (technology), ಮಿಂಬಲೆ (internet), ಉನ್ನತ ಕಲಿಕೆ (higher education) ಹೀಗೆ ಹಲವು ವಲಯಗಳಲ್ಲಿ ಬಳಕೆಯಾಗುತ್ತಿದೆ”[೧೦] ಎಂದು ನುಡಿ ಕನ್ನಡ ವೆಬ್‌ತಾಣದಲ್ಲಿ ಅಭಿಪ್ರಾಯಪಡಲಾಗಿದೆ. ಮೇಲಿನ ಅಭಿಪ್ರಾಯದ ಪ್ರಕಾರ ಲಿಪಿ ಸುಧಾರಣೆಯ ಲಾಭವನ್ನು ಚೀನಾದ ಎಲ್ಲ ವರ್ಗ ಪಡೆಯುತ್ತಿದೆ. ಇದರೊಂದಿಗೆ ತಂತ್ರಜ್ಞಾನ, ಅಂತರ್ಜಾಲ, ಉನ್ನತ ಶಿಕ್ಷಣದಲ್ಲಿ ಕೂಡ ಹೊಸ ಲಿಪಿ ಬಳಕೆಯನ್ನು ಜಾರಿಗೆ ತರಲಾಗಿದೆ.

೪.೩. ಫಿನ್‌ಲ್ಯಾಂಡ್‌ನಲ್ಲಿ ನಡೆದ ಲಿಪಿ ಸುಧಾರಣೆ

ನುಡಿ ಕನ್ನಡ ಎಂಬ ವೆಬ್‌ತಾಣದಲ್ಲಿ ಪ್ರಕಟವಾಗಿರುವ 'ಫಿನ್ಲ್ಯಾಂಡಲ್ಲಿ ನಡೆದ ನುಡಿ ಹೋರಾಟ' ಎಂಬ ಲೇಖನದಲ್ಲಿ ಫಿನ್‌ಲ್ಯಾಂಡ್‌ನಲ್ಲಿ ನಡೆದ ಫಿನ್ನಿಶ್ ನುಡಿ ಹೋರಾಟದ ಕಥನವನ್ನು ದಾಖಲಿಸಲಾಗಿದೆ. ದಕ್ಷಿಣ ಕೊರಿಯಾದ ಈ ದೇಶ ಮೊಬೈಲ್ ಕಂಪನಿ ನೋಕಿಯಾದಿಂದ ವಿಶ್ವ ಪ್ರಸಿದ್ಧ. ಇದೇ ದೇಶದಲ್ಲಿ ವಿಶ್ವದ ಎಲ್ಲ ಭಾಷೆಗಳನ್ನೂ ಒಳಗೊಂಡ ನೊಕಿಯಾ ಮೊಬೈಲ್‌ಗಳು ತಯಾರಿಗಿವೆ. ಈ ಕುರಿತು ವೆಬ್‌ತಾಣದಲ್ಲಿ ಹೀಗೆ ಹೇಳಲಾಗಿದೆ: "ಫಿನ್ಲ್ಯಾಂಡ್ ಎಂದ ಕೂಡಲೇ ನಮಗೆ ನೆನಪಿಗೆ ಬರುವುದು ಅಲೆಯುಲಿಗಳನ್ನು ಮಾಡುವ ಹೆಸರಾಂತ ಕಂಪನಿ 'ನೋಕಿಯಾ' ಮತ್ತು ಅಲ್ಲಿನ ಕಲಿಕೆ ಏರ್ಪಾಡು. ತಾಯ್ನುಡಿಯ ನೆಲೆಯ ಮೇಲೆ ನಿಂತ ಈ ಏರ್ಪಾಡು ಜಗತ್ತಿನಲ್ಲೇ ಸಾಟಿಯಿಲ್ಲದ್ದು ಎಂದು ಹೆಸರು ಮಾಡಿದೆ. ಇಂತಹ ಕಲಿಕೆ ಏರ್ಪಾಡು ಇರುವುದರಿಂದಲೇ ೫೦ ಲಕ್ಷ ಜನಸಂಖ್ಯೆ ಇರುವ ಈ ಪುಟ್ಟ ದೇಶದಲ್ಲಿ ನೋಕಿಯಾದಂತಹ ಒಂದು ದೊಡ್ಡ ಕಂಪನಿಯೊಂದನ್ನು ಕಟ್ಟಲಾಯಿತು"[೧೧] ಎಂದು ವೆಬ್ ತಾಣದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಅತ್ಯಂತ ಪುಟ್ಟ ದೇಶವೊಂದು ಜಗತ್ತಿನಾದ್ಯಂತ ತನ್ನ ದೇಶದಲ್ಲಿ ತಯಾರಾಗುವ ಉಪಕರಣ ಒಂದರಿಂದ ಮನೆಮಾತಾಗುವುದರ ಹಿಂದಿನ ಕತೆ ನುಡಿಯ ಜೊತೆಗೆ ತಳುಕು ಹಾಕಿಕೊಂಡಿದೆ. ಈಗ ಜಗತ್ಪ್ರಸಿದ್ಧವಾಗಿರುವ ಪುಟ್ಟ ರಾಷ್ಟ್ರದಲ್ಲಿ ತಮ್ಮ ನುಡಿಯನ್ನು ಆಡಳಿತ ಭಾಷೆಯಾಗಿಸಲು ಹರಸಾಹಸ ಪಟ್ಟ ಕುರಿತು ಉಲ್ಲೇಖವಿದೆ. "ಈಗ ಇಷ್ಟು ಮುಂದುವರಿದಿರುವ ಫಿನ್ನರು, ಬರಿ ೧೦೦ ವರುಶಗಳ ಕೆಳಗೆ ತಮ್ಮ ನುಡಿಯನ್ನು ಆಡಳಿತದಲ್ಲಿ ತರಲು ಸಾಕಷ್ಟು ಕಷ್ಟ ಪಡಬೇಕಾಯಿತಂತೆ. ಫಿನ್ನಿಶ್ ನುಡಿಗೆ ಆಡಳಿತದಲ್ಲಿ ಮೇಲುಗೈ ತಂದು ಕೊಡಲು ೧೯ನೇ ಶತಮಾನದ ನಡುವಿನಿಂದ ಹಿಡಿದು ಸುಮಾರು ೧೯೩೦ರ ವರೆಗೂ ಹೋರಾಟ ನಡೆಸಬೇಕಾಯಿತು. ಫಿನ್ಲ್ಯಾಂಡ್ನ ಇತಿಹಾಸದಲ್ಲಿ ಇದು 'ನುಡಿ ಹೋರಾಟ' (Language Strife) ಎಂಬ ಹೆಸರನ್ನು ಪಡೆದುಕೊಂಡಿದೆ"[೧೨] ಎಂದು ನುಡಿ ಕನ್ನಡ ವೆಬ್ ತಾಣ ಲೇಖನವನ್ನು ಪ್ರಕಟಿಸಿದೆ. ನುಡಿ ಹೋರಾಟ ನಡೆಸಿದ ಫಿನ್‌ಲ್ಯಾಂಡ್ ಜನತೆ ಕಡೆಗೂ ತಮ್ಮ ಹೋರಾಟದಲ್ಲಿ ಜಯಗಳಿಸಿದ್ದಾರೆ.

ಭಾರತದಲ್ಲಿ ಆರಂಭದಲ್ಲಿ ಸಂಸ್ಕೃತ, ನಂತರ ವಸಾಹತುಶಾಹಿಗಳ ಭಾಷೆಗಳಾದ ಡಚ್, ಫ್ರೆಂಚ್, ಉರ್ದು, ನಂತರ ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳು ಸ್ಥಳೀಯ ಭಾಷೆಗಳನ್ನು ಆಕ್ರಮಿಸಿಕೊಂಡ ಮಾದರಿಯಲ್ಲೇ ಫಿನ್‌ಲ್ಯಾಂಡ್‌ನಲ್ಲಿ ಕೂಡ ಸ್ವೀಡಿಶ್ ಭಾಷೆ ಆಕ್ರಮಿಸಿಕೊಂಡಿತ್ತು. ಇದರಿಂದಾಗಿ ಸ್ಥಳೀಯ ಭಾಷೆಯ ಮೇಲೆ ಕರಿನೆರಳು ಆವರಿಸಿತ್ತು. "ಸುಮಾರು ೧೩ನೇ ಶತಮಾನದಲ್ಲಿ ಸ್ವೀಡನ್ ಸಾಮ್ರಾಜ್ಯದ ಹಿಡಿತದಲ್ಲಿ ಸಿಕ್ಕ ಫಿನ್ಲ್ಯಾಂಡ್ನಲ್ಲಿ, ಮೆಲ್ಲಗೆ ಕಲಿಕೆ ಮತ್ತು ಆಡಳಿತದಲ್ಲಿ ಫಿನ್ನರಲ್ಲಿಯೇ ಸ್ವೀಡಿಶ್ ನುಡಿ ಮೇಲುಗೈ ಪಡೆಯಲು ತೊಡಗಿತು. ಲ್ಯಾಟಿನ್ ಅನ್ನು ಕೂಡ ಕಲಿಕೆ ಮತ್ತು ಆಡಳಿತದಲ್ಲಿ ಬಳಕೆಗೆ ತರಲಾಯಿತಾದ್ದರಿಂದ ಫಿನ್ನಿಶ್ ನುಡಿಯು ಆಡಳಿತದಿಂದ ಸರಿದು ಹೋಯಿತು. ಜೊತೆಯಲ್ಲೇ ಹಲವು ಸ್ವೀಡಿಶ್ ಮಾತಾಡುವ ಮಂದಿ ಫಿನ್ಲ್ಯಾಂಡ್ನ ಕರಾವಳಿಯಲ್ಲಿಗೆ ವಲಸೆ ಬಂದು ನೆಲೆಸಿದರು. ೧೮೦೯ರಲ್ಲಿ ಹೆಲ್ಸಿಂಕಿಯಂತಹ ಕರಾವಳಿಯ ಪಟ್ಟಣಗಳಲ್ಲಿ ಸುಮಾರು ೯೦% ಮಂದಿ ಸ್ವೀಡಿಶ್ ಮಾತಾಡುವವರಿದ್ದರಂತೆ. ಇದರಿಂದಾಗಿ ಆಡಳಿತದಲ್ಲಿ ಸ್ವೀಡಿಶ್ ನುಡಿಯನ್ನು

ಬಳಸುವುದಕ್ಕೆ ಇನ್ನೂ ಹೆಚ್ಚಿನ ಒತ್ತು ಕೊಟ್ಟಂತಾಯಿತು"[೧೩] ಎನ್ನಲಾಗಿದೆ. ಈ ಮೂಲಕ ಸ್ಥಳೀಯ ಭಾಷೆಯನ್ನು ಸಂಪೂರ್ಣವಾಗಿ ಕಡೆಗಣಿಸಿ, ಆಡಳಿತ ಭಾಷೆಯಾಗಿ ಸ್ವೀಡಿಶ್ ವ್ಯಾಪಕವಾಗಿ ಬಳಕೆಗೆ ಬಂತು. ಇದರ ಪರಿಣಾಮದಿಂದಾಗಿ ಸ್ವೀಡಿಶ್ ಮತ್ತು ಲ್ಯಾಟಿನ್ ಭಾಷೆಯ ಪ್ರಭಾವ ದಟ್ಟವಾಗಿತ್ತು. ನಂತರ ರಷ್ಯಾ ಮತ್ತು ಸ್ವೀಡನ್ ನಡುವೆ ಫಿನ್‌ಲ್ಯಾಂಡ್ ಒಡೆತನಕ್ಕಾಗಿ ಯುದ್ಧ ನಡೆಯಿತು. ನಂತರ ಈ ದೇಶದಲ್ಲಿ ನುಡಿ ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವದ ಬದಲಾವಣೆಗಳು ನಡೆದವು. ಯುದ್ಧಾನಂತರ ಫಿನ್‌ಲ್ಯಾಂಡ್ ರಷ್ಯಾ ಸಾಮ್ರಾಜ್ಯದ ಸ್ವಾಯತ್ತ ಪ್ರಾಂತ್ಯವಾಯಿತು. ಇದರಿಂದಾಗಿ ಸ್ವೀಡನ್ ಭಾಷಿಕ ಹಿಡಿತದಿಂದ ಕಳಚಿಕೊಂಡು, ನುಡಿ ಚಳವಳಿಗೆ ವೇದಿಕೆ ಸಿದ್ಧವಾಯಿತು.

ಇದರ ನಡುವೆ ೧೮೩೫ರಲ್ಲಿ ಪ್ರಸಿದ್ಧ ಜನಪದ ಕಾವ್ಯ ಕಾಲೇವಾಲ ಪ್ರಕಟವಾಯಿತು. ಬಹುತೇಕ ಜಗತ್ತಿನ ಪ್ರಮುಖ ಭಾಷೆಗಳಿಗೆ ಈ ಕೃತಿ ಅನುವಾದವಾಗಿದೆ. "ಈ ಮಹಾಕಾವ್ಯವು ನಾಡೊಲುಮೆಯ ಕಿಚ್ಚನ್ನು ನಾಡಿನೆಲ್ಲೆಡೆ ಹಬ್ಬಲು ನೆರವಾಯಿತು. ಇದರಿಂದ ಎಚ್ಚೆತ್ತ ಫಿನ್ನರು ತಮ್ಮ ನುಡಿಯನ್ನು ಆಡಳಿತದಲ್ಲಿ ಮತ್ತು ಕಲಿಕೆಯಲ್ಲಿ ತರಲು ತೊಡಗಿದರು. ಆಡಳಿತದಲ್ಲಿ ಸ್ವೀಡಿಶ್ ಬಳಸಲಾಗುತ್ತಿತ್ತಾದರೂ ನಾಡೊಲುಮೆಯ ಅಲೆಗೆ ಸಿಕ್ಕ ಅಲ್ಲಿನ ಆಡಳಿತ ವರ್ಗ ಫಿನ್ನಿಶ್ ಬೇರ್ಮೆಯನ್ನು ಎತ್ತಿ ಹಿಡಿಯುವ ಎಲ್ಲದರಲ್ಲೂ ಆಸಕ್ತಿ ತೋರಿಸಲು ತೊಡಗಿತು. ಹಾಗಾಗಿ ಫಿನ್ನಿಶ್ ನುಡಿಯು ಫಿನ್ಲ್ಯಾಂಡ್ ನಾಡಿನ ಬೇರ್ಮೆಯನ್ನು, ಗುರುತನ್ನೂ ಎತ್ತಿ ಹಿಡಿಯುವ ಮುಖ್ಯವಾದ ಮೆರೆಗುರುತಾಗಿ ಹೊರಹೊಮ್ಮಿತು."[೧೪] ಪ್ರಸಿದ್ಧ ಮಹಾಕಾವ್ಯ ಒಂದು ನುಡಿ ಹೋರಾಟಕ್ಕೆ ಪ್ರೇರಣೆ ಒದಗಿಸಿದ ಸಂಗತಿ ಜಾಗತಿಕ ಮಟ್ಟದಲ್ಲಿ ಪ್ರಮುಖ ವಿದ್ಯಮಾನವಾಗಿ ಪರಿಣಮಿಸಿದೆ. ಇನ್ನೊಂದು ಮಹತ್ವದ ಸಂಗತಿ ಎಂದರೆ, ಫಿನ್ನನ್ನರ ನುಡಿ ಹೋರಾಟದಲ್ಲಿ ಸ್ವೀಡಿಶ್ ಭಾಷಿಕರಾದ ಮೇಲುವರ್ಗಕ್ಕೆ ಸೇರಿದ ಕೆಲವರ ಪಾಲಿದೆ. ಫಿನ್ನನ್ನರ ಹೋರಾಟವನ್ನು ಬೆಂಬಲಿಸಿದ ಈ ಮೇಲ್ವರ್ಗ ಗರಿಷ್ಠ ಮಟ್ಟದಲ್ಲಿ ಭಾಷಿಕ ಚಳವಳಿಯಲ್ಲಿ ಪಾಲ್ಗೊಂಡಿತ್ತು. "ಇವರ ಪಾಲ್ಗೊಳ್ಳುವಿಕೆ ಎಷ್ಟರ ಮಟ್ಟಿಗೆ ಇತ್ತೆಂದರೆ ತಮ್ಮ ಅಡ್ಡ ಹೆಸರುಗಳನ್ನೂ ಫಿನ್ನಿಶ್ ನುಡಿಗೆ ಒಗ್ಗಿಸಿಕೊಂಡು ಮನೆಯಲ್ಲೂ ಫಿನ್ನಿಶ್ ಮಾತಾಡಲು ತೊಡಗಿದರು. ಹೀಗೆ ಮುಂದುವರಿದ ಹೋರಾಟದ ಸಲುವಾಗಿ ಫಿನ್ನಿಶ್ ನುಡಿಗೆ ಸ್ವೀಡಿಶ್ ನುಡಿಯ ಸಮಾನ ಸ್ಥಾನ-ಮಾನಗಳು ಸಿಕ್ಕವು."[೧೫] ಆದರೆ, ಇಲ್ಲಿ ಕೂಡ ಭಾಷಿಕವಾಗಿ ಕೆಲವು ಸಂಘರ್ಷಗಳು ನಡೆದವು ಎನ್ನುವುದನ್ನು ನುಡಿಕನ್ನಡ ವೆಬ್‌ತಾಣದ 'ಫಿನ್ಲ್ಯಾಂಡಲ್ಲಿ ನಡೆದ ನುಡಿ ಹೋರಾಟ' ಲೇಖನ ದಾಖಲಿಸಿದೆ. ಈ ಲೇಖನದ ಪ್ರಕಾರ: ಮೊದಮೊದಲು ಈ ಎರಡೂ ನುಡಿಗಳ ಬೆಂಬಲಿಗರ ನಡುವೆ ತಿಕ್ಕಾಟಗಳು ನಡೆದರೂ ಅವು ಮೇಲ್ವರ್ಗಕ್ಕೆ ಮಾತ್ರ ಸೀಮಿತವಾಗಿದ್ದವು. ಸಾಮಾನ್ಯ ಮಂದಿಗೆ ಮಾತ್ರ ಮೊದಲ ದಿನದಿಂದಲೇ ಫಿನ್ನಿಶ್ ನುಡಿಯ ಬಳಕೆಯಿಂದ ಒಳಿತಾಗಲು ಶುರುವಾಯಿತು."[೧೬] ಈ ಮೂಲಕ ನುಡಿ ಹೋರಾಟವನ್ನು ಹತ್ತಿಕ್ಕಲು ಯತ್ನಿಸುವವರು ಯಾರು? ಎಂಬ ಪ್ರಶ್ನೆಗೆ ಉತ್ತರ ಸಿಕ್ಕಂತಾಗುತ್ತದೆ. ಸಂಸ್ಕೃತವನ್ನು ದೇಶದಲ್ಲಿ ಪುರಸ್ಕರಿಸುವವರಿಗೂ ಮತ್ತು ಫಿನ್‌ಲೆಂಡ್‌ನಲ್ಲಿ ಸ್ವೀಡಿಶ್ ಮತ್ತು ಲ್ಯಾಟಿನ್ ಭಾಷೆಗಳನ್ನು ಮುನ್ನೆಲೆಗೆ ತರಲು ಯತ್ನಿಸುವವರ ನಡುವೆ ಸಾಮ್ಯತೆ ಇರುವಂತಿದೆ.

ಇನ್ನು ಇತ್ತೀಚಿನ ದಿನಗಳಲ್ಲಿ ಭಾಷಿಕ ಸಂಘರ್ಷ ಕೂಡ ಮಾಯವಾಗಿ ಸ್ವೀಡಿಶ್ ಭಾಷಿಕರು ಅಲ್ಪಸಂಖ್ಯಾತರಾಗಿದ್ದಲ್ಲದೇ, ಅವರು ಕೂಡ ಈಗ ಫಿನ್ನಿಶ್ ಭಾಷೆಯನ್ನು ಕಲಿತಿದ್ದಾರೆ ಎಂದು ಲೇಖನದಲ್ಲಿ ಹೇಳಲಾಗಿದೆ. "ಫಿನ್‌ಲ್ಯಾಂಡ್‌ನ ದೈನಂದಿನ ವ್ಯವಹಾರಗಳಲ್ಲಿ ಸ್ವೀಡಿಶ್ ಕಾಣೆಯಾಗಿದ್ದರೂ, ಸರ್ಕಾರಿ ಕಚೇರಿಗಳಲ್ಲಿ ಈ ಭಾಷೆಯ ಅವಕಾಶವನ್ನು ಸರ್ಕಾರ ಕಲ್ಪಿಸಿದೆಯಂತೆ."[೧೭]

ಫಿನ್ನಿಶ್ ಭಾಷಿಕ ಚಳವಳಿಯ ಪಾಠ

ಕರ್ನಾಟಕ, ಕನ್ನಡ ಮತ್ತು ಫಿನ್‌ಲ್ಯಾಂಡ್, ಫಿನ್ನಿಶ್‌ಗೂ ಸಮಾನವಾದ ಹೋಲಿಕೆ ಇದೆ. ಆದರೆ, ಅಲ್ಲಿ ನಡೆದ ನುಡಿ ಹೋರಾಟಕ್ಕಲ್ಲ; ಬದಲಿಗೆ ಸದ್ಯದ ಕನ್ನಡ ಮತ್ತು ಹೋರಾಟಕ್ಕೂ ಮುನ್ನ ಫಿನ್‌ಲೆಂಡ್‌ನಲ್ಲಿದ್ದ ಪರಿಸ್ಥಿತಿಗೆ ಈ ಹೋಲಿಕೆ ಸೂಕ್ತವಾಗುತ್ತದೆ. ಈ ಕುರಿತು ವೆಬ್‌ಸೈಟ್‌ನಲ್ಲಿ ಬೆಳಕು ಚೆಲ್ಲಲಾಗಿದೆ. "ಆಡಳಿತವು ಮಂದಿಯ ಕೈಗೆ ಸಿಕ್ಕರೆ ಹೇಗೆ ತಮ್ಮ ಏಳ್ಗೆಯ ಬಗ್ಗೆ ತಾವೇ ಚಿಂತಿಸಿ, ಅದಕ್ಕೆ ತಕ್ಕುದಾದ ತೀರ್ಮಾನಗಳನ್ನು ತೆಗೆದುಕೊಂಡು ನಾಡು ಕಟ್ಟಬಹುದು ಎಂಬುದಕ್ಕೆ ಫಿನ್ಲ್ಯಾಂಡ್ ಒಂದು ಜೀವಂತ ಉದಾಹರಣೆ"[೧೮] ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

"ಇಂದು ನಮ್ಮ, ಅಂದರೆ ಕನ್ನಡ ನಾಡಿನ ಮಂದಿಯ ಬದುಕಿಗೆ ನೇರವಾಗಿ ನಂಟಿರುವ ವಿಷಯಗಳ ಬಗ್ಗೆ ದೂರದ ದೆಹಲಿಯಲ್ಲಿ ಕಟ್ಟಲೆಗಳನ್ನು ಮಾಡಲಾಗುತ್ತಿದೆ ಮತ್ತು ಹಲವು ತೀರ್ಮಾನಗಳನ್ನು ಅಲ್ಲಿಯೇ ತೆಗೆದುಕೊಳ್ಳಲಾಗುತ್ತಿದೆ (ಸ್ವೀಡಿಶ್ ಹಿಡಿತದಲ್ಲಿದ್ದ ಫಿನ್ಲ್ಯಾಂಡಿಗೆ ಹೋಲಿಸಬಹುದು). ಹೀಗೆಯೇ ಮುಂದುವರಿದರೆ ಕನ್ನಡಿಗರು ಕಲಿಕೆಯಲ್ಲಿ, ಹಣಕಾಸಿನಲ್ಲಿ ಏಳಿಗೆಯನ್ನು ಸಾಧಿಸಲು ಆಗದು, ಕನ್ನಡ ನೆಲದಿಂದ ನೋಕಿಯಾದಂತಹ ಕಂಪನಿ ಹುಟ್ಟಿ ಬರಲೂ ಆಗದು"[೧೯] ಎಂಬ ಆತಂಕ ಕೂಡ ವ್ಯಕ್ತವಾಗಿದೆ. ಮೇಲಿನ ಅಭಿಪ್ರಾಯದ ಪ್ರಕಾರ, ಸ್ಥಳೀಯ ಭಾಷೆಗೆ ಅಗತ್ಯ ಸೌಕರ್ಯಗಳಿಂದ, ನೀತಿ ನಿರೂಪಣೆಗಳವರೆಗೆ ಸ್ಥಳೀಯವಾಗಿಯೇ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯವಾಗಿ ಪರಿಹಾರಗಳು ಸಾಧ್ಯವೇ ಹೊರತು, ಹೊರಗಿನಿಂದ ಪರಿಹಾರಗಳು ಸಿಗಲಾರದು ಎಂಬ ಅಭಿಪ್ರಾಯವಿದೆ. ದೂರಗಾಮಿಯಾಗಿ ಆರ್ಥಿಕ ಪರಿಸ್ಥಿತಿಯ ಮೇಲೆ ಕೂಡ ಭಾಷಿಕ ಹಿಡಿತ ದುಷ್ಪರಿಣಾಮ ಬೀರಬಹುದು ಎಂಬ ಆತಂಕವನ್ನು ಮೇಲಿನ ಲೇಖನದಲ್ಲಿ ಕಾಣಬಹುದು.

ಫಿನ್‌ಲ್ಯಾಂಡ್‌ನಲ್ಲಿ ನಡೆದಂತೆ ಭಾಷಿಕ ಚಳವಳಿ ಕರ್ನಾಟಕದಲ್ಲಿ ನಡೆಯುತ್ತದೆಯೇ? ಎಂಬ ಪ್ರಶ್ನೆಗೆ ಸದ್ಯಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗದಿರುವ ಸಂಗತಿಯೇ ಉತ್ತರ. ಆದರೆ, 'ಫಿನ್ಲ್ಯಾಂಡಲ್ಲಿ ನಡೆದ ನುಡಿ ಹೋರಾಟ' ಲೇಖನದಲ್ಲಿ ನಮ್ಮ ತೀರ್ಮಾನಗಳನ್ನು ನಾವೇ ತೆಗೆದುಕೊಳ್ಳುವ ಒಕ್ಕೂಟದ ವ್ಯವಸ್ಥೆಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. "ಇಂಗ್ಲೀಶ್ ಮಾತಾಡುವ ಕೆಲ ಮೇಲ್ವರ್ಗದ ಮಂದಿಯನ್ನು ಕನ್ನಡ ಸಮಾಜದ ಒಳಗೆ ಸೇರಿಕೊಳ್ಳುವಂತೆ ಪ್ರೇರೇಪಿಸಬೇಕು. ಇತರೆ ನುಡಿ ಆಡುಗರನ್ನೂ ಕನ್ನಡ ಸಮಾಜದಲ್ಲಿ ಬೆರೆಯುವಂತೆ ಮಾಡಿ, ನಾಡೊಲುಮೆಯ ಚಳುವಳಿಯಲ್ಲಿ ಸೇರಿಸಿಕೊಳ್ಳಬೇಕು. ನಮಗೆ ಯಾವುದು ಒಳಿತು, ಯಾವುದು ಏಳಿಗೆಯ ದಾರಿ (ಕಲಿಕೆ, ಹಣಕಾಸು, ಹೂಡಿಕೆ, ರಾಜಕೀಯ ಮುಂತಾದ ವಿಷಯಗಳಲ್ಲಿ) ಎಂಬುದನ್ನು ಚಿಂತಿಸಿ, ಚರ್ಚಿಸಿ, ಬೇಕಾದ

ತೀರ್ಮಾನಗಳನ್ನು ನಾವೇ ತೆಗೆದುಕೊಂಡು ಮುನ್ನಡೆಯಬೇಕು"[20] ಎಂಬ ಅಭಿಪ್ರಾಯ ಕೂಡ ಮೇಲಿನ ಲೇಖನದಲ್ಲಿ ವ್ಯಕ್ತವಾಗಿದೆ.

೪.೫. ರಷ್ಯಾದಲ್ಲಿ ನಡೆದಿರುವ ಲಿಪಿ ಸುಧಾರಣೆ

ರಷ್ಯಾದಲ್ಲಿ ಕೂಡ ಲಿಪಿ ಸುಧಾರಣೆ ಸಂಬಂಧ ಹಲವು ಪ್ರಕ್ರಿಯೆಗಳು ನಡೆದಿವೆ. ನುಡಿ ಕನ್ನಡದ ವೆಬ್‌ತಾಣದಲ್ಲಿ ಮಲ್ಲೇಶ್ ಬೆಳವಾಡಿಯವರು 'ರಷ್ಯಾದಲ್ಲಿ ನಡೆದ ಲಿಪಿ ಸುಧಾರಣೆ' ಎಂಬ ಲೇಖನದಲ್ಲಿ ಈ ಕುರಿತು ಅನೇಕ ಸಂಗತಿಗಳನ್ನು ದಾಖಲಿಸಿದ್ದಾರೆ. "ರಷ್ಯನ್ ನುಡಿಯ ಲಿಪಿಯು ಕಾಲದಿಂದ ಕಾಲಕ್ಕೆ ಹಲವು ಸುಧಾರಣೆಗಳಿಗೆ ಒಳಪಟ್ಟಿದೆ. ರಷ್ಯನ್ ನುಡಿಯ ಹಿನ್ನಡವಳಿಯನ್ನು ನೋಡಿದಾಗ ಮುಖ್ಯವಾಗಿ ಎರಡು ಬಾರಿ ಬೇರೆ-ಬೇರೆ ಹೊತ್ತಿನಲ್ಲಿ ಅಂದರೆ, ೧೮ ಮತ್ತು ೧೯ ನೇ ಶತಮಾನದಲ್ಲಿ ಲಿಪಿ ಸುಧಾರಣೆ ಆಗಿರುವುದು ಕಂಡು ಬರುತ್ತದೆ"[21] ಎನ್ನುವುದು ಮಲ್ಲೇಶ್ ಬೆಳವಾಡಿಯವರ ಅಭಿಪ್ರಾಯವಾಗಿದೆ.

೧೮ನೇ ಶತಮಾನದಲ್ಲಿ ನಡೆದ ಲಿಪಿ ಸುಧಾರಣೆಯ ವೇಳೆ ರಷ್ಯನ್ ಭಾಷೆಯ ಲಿಪಿಯಲ್ಲಿ ಹೊಸತನ ತರಲು ಯತ್ನ ನಡೆದಿದೆ. ಮಲ್ಲೇಶ್ ಅವರ ಪ್ರಕಾರ, ೧೮ನೇ ಶತಮಾನಕ್ಕೂ ಹಿಂದೆ ಬಳಕೆಯಾಗುತ್ತಿದ್ದ ಲಿಪಿಯಾದ 'ಸಿರಿಲ್ಲಿಕ್' ಬದಲಿಗೆ 'ಸಿವಿಲ್' ಎಂಬ ಲಿಪಿಯನ್ನು ಪ್ರಚಲಿತಕ್ಕೆ ತರಲಾಗಿದೆ. "ರಷ್ಯನ್ ನುಡಿಯನ್ನು ಬರೆಯಲು ಬಳಸುತ್ತಿದ್ದ ಲಿಪಿ "ಸಿರಿಲ್ಲಿಕ್". ಈ ಲಿಪಿಯು ಹೊಸತನಕ್ಕೆ ತೆರೆದುಕೊಳ್ಳುತ್ತಿದ್ದ ಹೊತ್ತಿನಲ್ಲಿ ಪೀಟರ್ – I ಎನ್ನುವಾತ "ಸಿವಿಲ್" ಲಿಪಿ ಎನ್ನುವ ಸುಧಾರಣೆಯನ್ನು ೧೭೦೮ರ ಹೊತ್ತಿನಲ್ಲಿ ಪರಿಚಯಿಸುತ್ತಾನೆ"[22] ಎಂದು ಮಲ್ಲೇಶ್ ಅವರು ಅಭಿಪ್ರಾಯಪಡುತ್ತಾರೆ. ಇದರೊಂದಿಗೆ ಲಿಪಿ ಸುಧಾರಣೆಯಲ್ಲಿ Ѯ, Ѱ, Ѡ, Ѧ ಅಕ್ಷರಗಳನ್ನು ಕೈಬಿಟ್ಟು, Й ಅಕ್ಷರವನ್ನು ಹೊರತುಪಡಿಸಿ ಎಲ್ಲಾ ಒತ್ತಕ್ಷರಗಳು ಮತ್ತು ಅಕ್ಷರಮಾಲೆಯಲ್ಲಿ ಇಲ್ಲದಿದ್ದರೂ ಬಳಕೆಯಲ್ಲಿದ್ದ ಅಕ್ಷರಗಳನ್ನು ಕೈಬಿಡುವ ನಿರ್ಧಾರಕ್ಕೆ ಪೀಟರ್ ಬರುತ್ತಾನೆ ಎಂದು ಅವರು ಹೇಳುತ್ತಾರೆ. ಇದಕ್ಕೆ ಕನ್ನಡದಲ್ಲಿರುವ "ಘ"ವನ್ನು ಉದಾಹರಿಸುತ್ತಾರೆ. ಇದರೊಂದಿಗೆ ೧೮ನೇ ಶತಮಾನದಲ್ಲಿ ಮಾತು ಮತ್ತು ಬರಹಗಳ ಎರಡೂ ಮಾದರಿಯಲ್ಲಿ ಪರಿವರ್ತನೆಗೆ ಮುಂದಾಗಲಾಗಿತ್ತು ಎಂದು ಕೂಡ ಹೇಳಲಾಗಿದೆ. ಕಾಗುಣಿತದ ಬಳಕೆ ಮತ್ತು ಅದರ ಸಿದ್ಧಾಂತಗಳಲ್ಲಿ ಕೂಡ ಪರಿವರ್ತನೆಯನ್ನು ತರಲು ಯತ್ನಿಸಲಾಗಿದೆ ಎಂದು ಮಲ್ಲೇಶ್ ಅಭಿಪ್ರಾಯಪಟ್ಟಿದ್ದಾರೆ.

೧೮ನೇ ಶತಮಾನದ ಹೊತ್ತಿನಲ್ಲಿ ರಷ್ಯನ್ ಕಾಗುಣಿತದ ಕುರಿತು ಒಬ್ಬರು ಭಾಷಾ ವೈಜ್ಞಾನಿಕ ನೆಲೆಯಲ್ಲಿ ಒಲವು ತೋರಿಸಿದರೆ ಮತ್ತೊಬ್ಬರು ಉಲಿಯರಿಮೆಯ ನೆಲೆಯಲ್ಲಿ ಒಲವು ತೋರುವುದರಿಂದ ರಷ್ಯನ್ ಕಾಗುಣಿತದ ಬಳಕೆ ಮತ್ತದರ ಸಿದ್ಧಾಂತಗಳು ಒಂದೇ ಆಗಿರದೆ ಬೇರೆ-ಬೇರೆ ಬಗೆಗಳಾಗಿ ಕವಲೊಡೆದುಕೊಂಡವು ಎಂದು ಮಲ್ಲೇಶ್ ಅವರು 'ರಷ್ಯಾದಲ್ಲಿ ನಡೆದ ಲಿಪಿ ಸುಧಾರಣೆ' ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ.

ಇದರೊಂದಿಗೆ ರಷ್ಯಾದಲ್ಲಿ ೧೯ನೇ ಶತಮಾನದಲ್ಲಿ ಎರಡನೇ ಹಂತದಲ್ಲಿ ಲಿಪಿ ಸುಧಾರಣೆ ನಡೆದಿದೆ. ೧೮ ಮತ್ತು ೧೯ನೇ ಶತಮಾನದ ಉದ್ದಕ್ಕೂ ಸಮಯಕ್ಕೆ ತಕ್ಕಂತೆ ಅಗತ್ಯವಾದ ಮಾರ್ಪಾಡುಗಳನ್ನು ಮಾಡಿಕೊಳ್ಳಲಾಯಿತು ಎನ್ನುವ ಮಲ್ಲೇಶ್ ಅವರು ಈ ಕೆಳಗಿನ ಉದಾಹರಣೆಗಳನ್ನು ನೀಡಿದ್ದಾರೆ.

೧. ë ಅಕ್ಷರವನ್ನು ಪರಿಚಯಿಸಿದ್ದು

೨. ѣ (Yat) ಅಕ್ಷರದ ಬದಲು e ಅಕ್ಷರದ ಬಳಕೆ

೩. e ಅಕ್ಷರದ ಬದಲು ф ಅಕ್ಷರದ ಬಳಕೆ

೪. i ಮತ್ತು v ಅಕ್ಷರದ ಬದಲು и ಅಕ್ಷರದ ಬಳಕೆ

೫. ವ್ಯಂಜನಗಳ ಕೊನೆಯಲ್ಲಿ b ಅಕ್ಷರವನ್ನು ಬರೆಯುತ್ತಿದ್ದುದನ್ನು ಕೈಬಿಡಲಾಯಿತು[೨೩]

೧೯೧೭ರಲ್ಲಿ ರಷ್ಯನ್ ಕ್ರಾಂತಿ ನಡೆದ ನಂತರ ಲಿಪಿ ಸುಧಾರಣೆ ವಿಷಯದಲ್ಲಿ ಮಹತ್ವದ ಪಾತ್ರವಹಿಸಿದೆ. ಇದನ್ನು ದೊಡ್ಡ ಲಿಪಿ ಸುಧಾರಣೆ ಎನ್ನಲಾಗುತ್ತದೆ ಎಂದು ಮಲ್ಲೇಶ್ ಬೆಳವಾಡಿಯವರು ಹೇಳಿದ್ದಾರೆ. "ಇದರ ರೂಪುರೇಷೆಯನ್ನು ಅಲೆಕ್ಸಿ ಶಖ್ಮಟೊವ್ ಎನ್ನುವ ಬರಹದರಿಗ(philologist) ಸಿದ್ದಪಡಿಸಿದ್ದನು. ಈ ಲಿಪಿ ಸುಧಾರಣೆಯನ್ನು ಮೇ ೧೧, ೧೯೧೭ರಲ್ಲಿ ಮುಂದಿಡಲಾಯಿತು. ಮುಂದೆ ಇದನ್ನು ರಷ್ಯಾದ ಶಿಕ್ಷಣ ವ್ಯವಸ್ಥೆಯಲ್ಲೂ ಅಳವಡಿಸಿಕೊಳ್ಳಲಾಯಿತು"[೨೪] ಎಂಬುದು ಅವರ ಅಭಿಪ್ರಾಯವಾಗಿದೆ.

೧೯ನೇ ಶತಮಾನದಲ್ಲಿ ರಷ್ಯಾದಲ್ಲಿ ನಡೆದ ಲಿಪಿ ಸುಧಾರಣೆಯನ್ನು ಬಳಕೆಗೆ ತಂದ ಬಗೆ ಕುರಿತು ಅವರು ಹೀಗೆ ವಿವರಿಸಿದ್ದಾರೆ: "ಡಿಸೆಂಬರ್ ೧೯೧೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯು, ಎ.ವಿ.ಲೂನಕರ್ಸ್ಕಿ ಅವರ ಮುಂದಾಳ್ತನದಲ್ಲಿ ಆದೇಶವೊಂದನ್ನು ನೀಡಿತು. ಆ ಆದೇಶ ಹೀಗಿತ್ತು: ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಶಾಲೆಗಳಲ್ಲಿ ಹೊಸದಾಗಿ ಬದಲಾಯಿಸಿದ ಅಕ್ಷರಮಾಲೆಯನ್ನು ಬೇಗನೆ ಅಳವಡಿಸಿಕೊಳ್ಳಬೇಕು ಹಾಗೂ ಜನವರಿ ೧೯೧೮ರಿಂದ ಎಲ್ಲಾ ಬಗೆಯ ನಿಯತಕಾಲಿಕೆ/ಅನಿಯತಕಾಲಿಕೆ ಪತ್ರಿಕೆಗಳು ಈ ಹೊಸ ಅಕ್ಷರಮಾಲೆಯಲ್ಲಿ ಅಚ್ಚಾಗಬೇಕು"[೨೫] ಎಂಬುದು ಆದೇಶದ ಪ್ರತಿಯಾಗಿತ್ತು. ಈ ಮೂಲಕ ಲಿಪಿ ಸುಧಾರಣೆಯನ್ನು ಕಡ್ಡಾಯವಾಗಿ ಜಾರಿಗೆ ತರಲು ಸರ್ಕಾರ ಮುಂದಾಯಿತು. ಇದರ ಪರಿಣಾಮದಿಂದಾಗಿ ಶಾಲೆ ಸೇರಿದಂತೆ ಸರ್ಕಾರಿ ಇಲಾಖೆಗಳು ಹಾಗೂ ಮಾಧ್ಯಮಗಳು ಏಕಕಾಲಕ್ಕೆ ಹೊಸ ಲಿಪಿಯನ್ನು ಅಳವಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ. ಇದರನ್ವಯ ರಷ್ಯನ್ ಲಿಪಿಯಲ್ಲಿ ಭವಿಷ್ಯದಲ್ಲಿ ತಿದ್ದುಪಡಿಗಳು ಜಾರಿಯಾದವೆ? ಎಂಬ ಪ್ರಶ್ನೆಗೆ ಶೇ. ೧೦೦ರಷ್ಟು ಫಲಿತಾಂಶ ಸಿಕ್ಕಿಲ್ಲ ಎಂದೂ ಹೇಳಲಾಗುತ್ತಿದೆ.

ಹೊಸದಾಗಿ ಜಾರಿಗೆ ತಂದ ಲಿಪಿ ಸುಧಾರಣೆಯಿಂದಾಗಿ "ಮುಂದೆ I, Ѳ ಮತ್ತು ѣ ಅಕ್ಷರಗಳನ್ನು ಕೈಬಿಡುವ ಲಿಪಿ ಸುಧಾರಣೆಯ ಜೊತೆಗೆ b ಅಕ್ಷರವನ್ನೂ ಕೂಡ ಕೈಬಿಡಲಾಯಿತು. b ಅಕ್ಷರದ ಬದಲು ಬಿಡುಹ ಗುರುತು(apostrophe) ಹೆಚ್ಚು ಬಳಕೆಯಾಗತೊಡಗಿತು. ಇದೂ

ಕೂಡ ಲಿಪಿ ಸುಧಾರಣೆಯ ಒಂದು ಅಂಶವಾಯಿತು"[೨೬] ಎಂದು ಮಲ್ಲೇಶ್ ಬೆಳವಾಡಿ ಅಭಿಪ್ರಾಯಡುತ್ತಾರೆ. ಅಲ್ಲದೇ, "೧೯೧೮ರ ಆದೇಶದ ನಂತರ ಲಿಪಿ ಸುಧಾರಣೆಯ ಕುರಿತು ಮಹತ್ವದ ಬದಲಾವಣೆಗಳು ಕಂಡುಬರಲಿಲ್ಲ"ವೆಂದು ಮಲ್ಲೇಶ್ ಅವರು ಗುರುತಿಸಿದ್ದಾರೆ. "ಆದರೆ ಇದರ ಕುರಿತು ತಕ್ಕಮಟ್ಟಿಗೆ ಮಾತುಕತೆಗಳು ನಡೆದುಕೊಂಡು ಬರುತ್ತಿವೆ. ಅದರಲ್ಲಿ ಒಂದು ಗುರುತಿಸಬಹುದಾದ ಬದಲಾವಣೆಯೆಂದರೆ, ë ಅಕ್ಷರದ ಬದಲು e ಅಕ್ಷರವನ್ನು ಬಳಸುವುದು. ಆದರೂ ë ಅಕ್ಷರವು ಮಕ್ಕಳ ಪುಸ್ತಕಗಳು ಮತ್ತು ನಿಘಂಟುಗಳಲ್ಲಿ ಕಾಣಸಿಗುತ್ತವೆ ಎಂದು ಹೇಳಲಾಗುತ್ತದೆ"[೨೭] ಎಂದು 'ರಷ್ಯಾದಲ್ಲಿ ನಡೆದ ಲಿಪಿ ಸುಧಾರಣೆ' ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಲಿಪಿ ಸುಧಾರಣೆ ವೇಳೆ ѣ (Yat) ಮತ್ತು ಆ ಅಕ್ಷರವನ್ನು ರಷ್ಯನ್ ವರ್ಣಮಾಲೆಯಿಂದ ತೆಗೆದುಹಾಕಿದ ನಡೆ ರಷ್ಯನ್ ಸಾಂಸ್ಕೃತಿಕ ಇತಿಹಾಸದಲ್ಲಿ ಕುತೂಹಲಕರವಾದ ಹೆಜ್ಜೆಗುರುತು ಎಂದು ಮಲ್ಲೇಶ್ ಬೆಳವಾಡಿ ಅಭಿಪ್ರಾಯಪಡುತ್ತಾರೆ. ಇದರೊಂದಿಗೆ ೧೮ನೇ ಶತಮಾನದ ನಡುವಿನಲ್ಲಿ ѣ ಮತ್ತು e ಅಕ್ಷರಗಳ ಉಲಿಯುವಿಕೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ ಎನ್ನುವ ಚರ್ಚೆಗಳು ನಡೆದವು ಎನ್ನುವ ಅವರು, "ಒಂದು ಶತಮಾನದ ನಂತರ ಗ್ರಾಟ್ ಎನ್ನುವ ಬರಹದರಿಗ ಸಾಮಾನ್ಯವಾಗಿ ѣ ಹಾಗೂ e ಅಕ್ಷರಗಳ ಉಚ್ಚಾರಣೆಯಲ್ಲಿ ಯಾವ ವ್ಯತ್ಯಾಸವೂ ಕಾಣಸಿಗದು ಆದರೆ ಕೆಲ ಪ್ರಾದೇಶಿಕ ಉಪಭಾಷೆಗಳಲ್ಲಿ ಮಾತ್ರ ಉಚ್ಚಾರಣೆಯಲ್ಲಿ ವ್ಯತ್ಯಾಸ ಉಳಿದುಕೊಂಡಿರುವುದಾಗಿ ಹೇಳುತ್ತಾನೆ"[೨೮] ಎಂದಿದ್ದಾರೆ. ಮೇಲಿನ ಉದಾಹರಣೆಗಳನ್ನು ಕನ್ನಡದಲ್ಲಿ ಕೂಡ ನೋಡಬಹುದು. ಹಳಗನ್ನಡ ಱ ಮತ್ತು ೞಕಾರಗಳ ನಡುವೆ ಆಧುನಿಕ ಸಂದರ್ಭದಲ್ಲಿ ಹೆಚ್ಚಿನ ವ್ಯತ್ಯಾಸ ಕಂಡುಬರುತ್ತಿಲ್ಲ ಎಂಬ ನಿರ್ಣಯಕ್ಕೆ ಬರಲಾಗಿದೆ. ಈಗಾಗಲೇ ಬರಹದಲ್ಲಿ ಕೂಡ ಇದೇ ಮಾದರಿಯನ್ನು ಅನುಸರಿಸುವ ಬದಲಿಗೆ ಹೊಸಗನ್ನಡದ ರ, ಳಕಾರಗಳನ್ನು ಬಳಸಲಾಗುತ್ತಿದೆ.

ಇನ್ನು ಅಕ್ಷರಗಳ ಉಚ್ಚಾರಣೆ ವಿಷಯದಲ್ಲಿ ಡಿ. ಎನ್. ಶಂಕರ ಬಟ್ಟರು ಕೂಡ ಮೇಲಿನಂತೆ ಪ್ರಮೇಯಗಳನ್ನು ಮಂಡಿಸಿದ್ದಾರೆ. ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಮಾತನಾಡುವವರು ಉಚ್ಚರಿಸುವ ಕ್ರಮದ ಕುರಿತು ಅವರು ಹೇಳುತ್ತಿರುವ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಬೇಕು ಎನಿಸುತ್ತದೆ. ರಷ್ಯಾದಲ್ಲಿ ನಡೆದಿರುವ ಇಂತದ್ದೇ ಚರ್ಚೆಗಳನ್ನು ಶಂಕರ ಬಟ್ಟರು ೨೦ನೇ ಶತಮಾನದ ಕಡೆಯ ಭಾಗ ಮತ್ತು ೨೧ನೇ ಶತಮಾನದ ಆರಂಭದ ಸುಮಾರು ಎರಡು ದಶಕಗಳ ಕಾಲ ಮುನ್ನಡೆಸಿಕೊಂಡು ಬಂದಿದ್ದಾರೆ.

"೧೯೧೧ರಲ್ಲಿ ರಷ್ಯಾದ ವಿಜ್ಞಾನ ಅಕಾಡೆಮಿಯು ಮುಂದಿಟ್ಟಿದ್ದ ಅಕ್ಷರವನ್ನು ಕೈಬಿಡುವ ಹಾಗೂ ಇನ್ನಿತರ ಲಿಪಿಸುಧಾರಣೆಯ ಪ್ರಸ್ತಾವನೆಯನ್ನೂ ತಿರಸ್ಕರಿಸಲಾಗುತ್ತದೆ. ಇದರಿಂದ ಶಾಲೆಯ ಮಕ್ಕಳು ѣ ಅಕ್ಷರವಿರುವ ಉದ್ದದ ಪದಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾದ ಪರಿಸ್ಥಿತಿ ಇತ್ತು. ಮುಂದೆ ೧೯೧೭-೧೮ರಲ್ಲಿ ѣ ಅಕ್ಷರವನ್ನು ಕೈಬಿಟ್ಟು e ಅಕ್ಷರವನ್ನು ಉಳಿಸಿಕೊಳ್ಳಲಾಯಿತು"[೨೯] ಎನ್ನುವುದು ರಷ್ಯನ್ ಲಿಪಿ ಸುಧಾರಣೆ ಕುರಿತ ಮಲ್ಲೇಶ್ ಬೆಳವಾಡಿಯವರ ಅಭಿಪ್ರಾಯವಾಗಿದೆ. ಆದರೆ, ಕರ್ನಾಟಕದಲ್ಲಿ ಶಾಲಾ ಪಠ್ಯಗಳಲ್ಲಿ ಋ ಕಾರವನ್ನು ತೆಗೆದು ಹಾಕಬೇಕು ಎಂಬ ಪ್ರಸ್ತಾವನೆಗೆ

ವ್ಯಕ್ತವಾದ ವಿರೋಧವನ್ನು ಗಮನಿಸಬೇಕಾಗುತ್ತದೆ. ಸಂಸ್ಕೃತ ಪ್ರೇಮವಿರುವ ಪಂಡಿತರು ಕನ್ನಡದಿಂದ ಋಕಾರವನ್ನು ತೆಗೆದುಹಾಕಲು ಆಕ್ಷೇಪ ವ್ಯಕ್ತಪಡಿಸಿದರು. ಋ ಕಾರ ತೆರವುಗೊಳಿಸಿದರೆ ಕನ್ನಡ ವರ್ಣ ಮಾಲೆಯೇ ವಿರೂಪಗೊಳ್ಳುತ್ತದೆ ಎಂದು ಕೂಡ ಕೆಲವರು ವಾದಿಸಿದರು. ಇಂತಹದ್ದೇ ಪರಿಸ್ಥಿತಿಯನ್ನು ರಷ್ಯನ್ ಲಿಪಿ ಸುಧಾರಣೆಯ ಘಟ್ಟ ಹಾದುಬಂದಿದೆ. ಆದರೆ, ಕಾಲಾನಂತರದಲ್ಲಿ ಬಳಕೆಯಲ್ಲಿ ಇಲ್ಲದ ಅಕ್ಷರವನ್ನು ಕೈಬಿಟ್ಟಿರುವುದನ್ನೂ ಕೂಡ ರಷ್ಯನ್ ಲಿಪಿ ಸುಧಾರಣೆಯ ಇತಿಹಾಸದಲ್ಲಿ ದಾಖಲಾಗಿದೆ.

ರಷ್ಯನ್ ಲಿಪಿ ಸುಧಾರಣೆಯ ಲಾಭಗಳು

ರಷ್ಯಾದಲ್ಲಿ ನಡೆದ ಲಿಪಿ ಸುಧಾರಣೆ' ಎಂಬ ಲೇಖನದಲ್ಲಿ ಲಿಪಿ ಸುಧಾರಣೆಯಿಂದ ಆದ ಒಳಿತುಗಳು ಎಂಬ ಭಾಗದಲ್ಲಿ ಮುಖ್ಯವಾಗಿ ಮೂರು ಲಾಭಗಳನ್ನು ಮಲ್ಲೇಶ್ ಬೆಳವಾಡಿಯವರು ಗುರುತಿಸಿದ್ದಾರೆ:

೧. ಉಚ್ಚಾರಣೆಯಲ್ಲಿ ಇಲ್ಲದಿದ್ದರೂ, ಹಲವು ಸಾಂಪ್ರದಾಯಿಕ ಕಾಗುಣಿತದ ಕಟ್ಟಳೆಗಳು ಬಳಕೆಯಲ್ಲಿದ್ದವು. ಲಿಪಿ ಸುಧಾರಣೆಯಿಂದ ಅಂತಹ ಕಟ್ಟಳೆಗಳು ಕಡಿಮೆಯಾದವು. ಇದರಿಂದ ಜನರಿಗೆ ರಷ್ಯನ್ ಕಾಗುಣಿತ ಕಲಿಕೆ ಮತ್ತು ಬಳಕೆ ಸುಲಭವಾಯಿತು.

೨. ವ್ಯಂಜನಗಳ ಕೊನೆಯಲ್ಲಿ ಬರೆಯುತ್ತಿದ್ದ b ಅಕ್ಷರವನ್ನು ಕೈಬಿಟ್ಟ ಸುಧಾರಣೆಯಿಂದಾಗಿ ಬರವಣಿಗೆ ಮತ್ತು ಅಕ್ಷರಜೋಡಣೆ(Typesetting)ಯಂತಹ ಕೆಲಸಗಳಲ್ಲಿ ಉಳಿತಾಯವೂ ಆಗುವಂತಾಯಿತು.

೩. ಲಿಪಿ ಸುಧಾರಣೆಯಿಂದಾಗಿ, ರಷ್ಯನ್ನರ ನೈಜ ಉಚ್ಚಾರಣೆಗೆ ರಷ್ಯನ್ ವರ್ಣಮಾಲೆಯು ಹತ್ತಿರವಾಯಿತು.[೩೦]

ಮೇಲಿನ ಮೂರು ಲಾಭಗಳನ್ನು ರಷ್ಯನ್ ಲಿಪಿ ಸುಧಾರಣೆಯಿಂದ ಸಾಧಿಸಲಾಗಿದೆ. ಇವೇ ಮೂರು ಲಾಭಗಳೂ ಸೇರಿದಂತೆ ಇನ್ನಿತರ ಲಾಭಗಳೂ ಕನ್ನಡ ಬರಹಕ್ಕೂ ದಕ್ಕಬೇಕು ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜ್ಞಾನ ಕೇವಲ ಕೆಲವರ ಸ್ವತ್ತಾಗುವುದರ ಬದಲು ಎಲ್ಲರ ಸ್ವತ್ತಾಗಬೇಕು ಎಂದು ಅವರು ಚಿಂತನೆ ನಡೆಸಿದ್ದಾರೆ. ಇದಕ್ಕಾಗಿ ಎಲ್ಲರ ಕನ್ನಡಕ್ಕೆ ಮಾನ್ಯತೆ ಸಿಗಬೇಕು ಎಂದು ಅವರು ತಮ್ಮ ಕೃತಿಗಳಲ್ಲಿ ಒತ್ತಾಯಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ನಡೆದಿರುವ ಲಿಪಿ ಸುಧಾರಣೆಯ ಪ್ರಯತ್ನಗಳನ್ನು ಅಧ್ಯಯನಕ್ಕೆ ಒಳಪಡಿಸಿದ ಸಂದರ್ಭದಲ್ಲಿ ಕನ್ನಡದಲ್ಲಿ ನಡೆಯುತ್ತಿರುವ ಲಿಪಿ ಸುಧಾರಣೆಯ ಯತ್ನ ಬಹಳ ತಡವಾಗಿ ಆರಂಭವಾಗಿದೆ ಎನಿಸದಿರದು. ಆದರೆ, ಡಿ. ಎನ್. ಶಂಕರ ಬಟ್ಟರು ಈ ನಿಟ್ಟಿನಲ್ಲಿ ಮಹತ್ವದ ಸಂಶೋಧನೆಯಲ್ಲಿ ನಿರತರಾಗಿದ್ದು, ತಮ್ಮ ಕೃತಿಗಳಲ್ಲಿ ಮಾತು ಮತ್ತು ಬರಹದ ನಡುವಿನ ಗೊಂದಲ ನಿವಾರಣೆಯಾಗಬೇಕು ಎಂಬುದಕ್ಕೆ ಸಾಕ್ಷಿಗಳನ್ನು ಒದಗಿಸುತ್ತಿದ್ದಾರೆ.

೪.೭. ಜರ್ಮನಿಯಲ್ಲಿ ನಡೆದ ಲಿಪಿ ಸುಧಾರಣೆ

ನುಡಿ ಕನ್ನಡದ ವೆಬ್‌ತಾಣದಲ್ಲಿ 'ಜರ್ಮನ್ ನುಡಿಯಲ್ಲಿ ನಡೆದ ಲಿಪಿ ಸುಧಾರಣೆ' ಎಂಬ ಲೇಖನದಲ್ಲಿ ಜರ್ಮನಿಯಲ್ಲಿ ನಡೆದ ಲಿಪಿ ಸುಧಾರಣೆ ಕುರಿತ ವಿವರಗಳನ್ನು ಮಲ್ಲೇಶ್ ಬೆಳವಾಡಿಯವರು ದಾಖಲಿಸಿದ್ದಾರೆ. ಪ್ರಚಲಿತದಲ್ಲಿದ್ದ ಲಿಪಿಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಜರ್ಮನಿಯಲ್ಲಿ ಕೂಡ ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ.

"ಜರ್ಮನ್ ನುಡಿಯ ಲಿಪಿಯನ್ನು ಸರಳಗೊಳಿಸುವುದರ ಮೂಲಕ ಅದನ್ನು ಸುಲಭವಾಗಿ ಕಲಿಯುವಂತಾಗಬೇಕು ಎನ್ನುವ ಗುರಿಯೊಂದಿಗೆ ಜರ್ಮನ್ ಕಾಗುಣಿತದಲ್ಲಿ ಬದಲಾವಣೆಗಳನ್ನು ತರಲಾಯಿತು. ಜರ್ಮನ್ ನುಡಿಯನ್ನಾಡುವ ನಾಡುಗಳಾದ ಜರ್ಮನಿ, ಆಸ್ಟ್ರಿಯಾ ಮತ್ತು ಸ್ವಿಜ್ಜರ್‌ಲ್ಯಾಂಡ್ ಒಟ್ಟಿಗೆ ಸೇರಿ ೧೯೯೬ರಲ್ಲಿ ವಿಯೆನ್ನಾದಲ್ಲಿ ಅಂತರರಾಷ್ಟ್ರೀಯ ಒಪ್ಪಂದದಂತೆ ಈ ಸುಧಾರಣೆಗೆ ಒಪ್ಪಿಗೆ ಕೊಟ್ಟವು. ಲಕ್ಸಂಬರ್ಗ್ ನಾಡಿನಲ್ಲಿ ಜರ್ಮನ್ ಒಂದು ಅಧಿಕೃತ ಭಾಷೆ. ಆದರೂ, ಲಕ್ಸಂಬರ್ಗ್ ಮಾತ್ರ ಈ ಒಪ್ಪಂದದಲ್ಲಿ ಪಾಲ್ಗೊಳ್ಳಲಿಲ್ಲ. ಆದರೆ ಕಾಲಕ್ರಮೇಣ ಈ ಸುಧಾರಣೆಯನ್ನು ಲಕ್ಸಂಬರ್ಗ್ ಕೂಡ ಅಳವಡಿಸಿಕೊಂಡಿತು"[೩೧] ಎಂದು ಮಲ್ಲೇಶ್ ಬೆಳವಾಡಿಯವರು ಅಭಿಪ್ರಾಯಪಟ್ಟಿದ್ದಾರೆ. ಈ ಮೂಲಕ ಪಾರಂಪರಿಕ ಲಿಪಿಯಲ್ಲಿ ಬದಲಾವಣೆಗಳ ಅಗತ್ಯವಿದೆ ಎಂದು ಜರ್ಮನರು ಕೂಡ ಮನಗಂಡಿರುವುದು ಮತ್ತು ಈ ನಿಟ್ಟಿನಲ್ಲಿ ಪರಿವರ್ತನೆಗೆ ಮುಂದಾಗಿರುವುದನ್ನು ಕಾಣಬಹುದು.

ಲಿಪಿ ಸುಧಾರಣೆ ನಿಟ್ಟಿನಲ್ಲಿ ನಡೆದ ಒಪ್ಪಂದದಲ್ಲಿ ಪಾಲ್ಗೊಳ್ಳದ ಲಕ್ಸಂಬರ್ಗ್ ಕೂಡ ಭವಿಷ್ಯದಲ್ಲಿ ಜರ್ಮನ್ ಲಿಪಿಯನ್ನು ಅಳವಡಿಸಿಕೊಂಡಿದ್ದು ಮಹತ್ವದ ಸಂಗತಿ ಎನಿಸುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಜರ್ಮನ್ ಕಾಗುಣಿತದಲ್ಲಿ ತಂದ ಬದಲಾವಣೆ. ಲಿಪಿ ಸುಧಾರಣೆಯ ನಿಟ್ಟಿನಲ್ಲಿ ಜರ್ಮನಿಯ ಜನಾಂಗೀಯವಾದಿ ದೃಷ್ಟಿಕೋನವನ್ನೂ ಮೀರಿ ಲಿಪಿ ಸುಧಾರಣೆಯನ್ನು ಜರ್ಮನಿಯಲ್ಲಿ ಜಾರಿಗೆ ತಂದಿರುವುದು ಗಮನಾರ್ಹ ಸಂಗತಿ ಎನಿಸುತ್ತದೆ. ಹಿಟ್ಲರ್‌ನ ಶ್ರೇಷ್ಠತೆಯ ವ್ಯಸನಕ್ಕೆ ಸಿಲುಕಿ ನಲುಗಿದ ಜರ್ಮನಿಯಲ್ಲಿ ಕೂಡ ಲಿಪಿ ಸುಧಾರಣೆಯಾಗಿದೆ. ಈ ಮೂಲಕ ಲಿಪಿಯಲ್ಲಿ ಪರಿವರ್ತನೆ ಅಗತ್ಯ ಎಂಬ ವಿಷಯವನ್ನು ಅನೇಕ ದೇಶಗಳು ಮನಗಂಡು ಕ್ರಿಯಾಶೀಲವಾಗಿವೆ. ಈ ಮೂಲಕ ಪ್ರಚಲಿತದಲ್ಲಿಲ್ಲದ, ಅನವಶ್ಯಕವಾದ ಪದ, ಅಕ್ಷರಗಳನ್ನು ಬರಹದಿಂದ ಕೈಬಿಡುವ ನಿರ್ಧಾರವನ್ನು ಕೈಗೊಂಡಿವೆ.

ಮಲ್ಲೇಶ್ ಬೆಳವಾಡಿಯವರ ಪ್ರಕಾರ ಜರ್ಮನ್ ಲಿಪಿಯಲ್ಲಿ ಎರಡು ನಿಟ್ಟಿನಲ್ಲಿ ಸುಧಾರಣೆಯನ್ನು ಜಾರಿಗೆ ತರಲಾಗಿದೆ.

೧. ಜರ್ಮನ್ ಲಿಪಿ ಸುಧಾರಣೆಯನ್ನು ಶಾಲೆ ಮತ್ತು ಸಾರ್ವಜನಿಕ ಆಡಳಿತದಲ್ಲಿ ಕಡ್ಡಾಯ ಮಾಡಲಾಗಿದೆ.

೨. ಮಾಧ್ಯಮಗಳಲ್ಲಿ ಕೂಡ ಹೊಸ ಲಿಪಿಯನ್ನು ಬಳಕೆಗೆ ತರಲಾಗಿದೆ ಮತ್ತು ಹೊಸ ಪುಸ್ತಕಗಳಲ್ಲಿ ಕೂಡ ಹೊಸ ಲಿಪಿಯನ್ನು ಬಳಸಲಾಗುತ್ತಿದೆ.

ಆದರೆ, ಈ ಲಿಪಿ ಸುಧಾರಣೆ ಸರಳವಾಗಿ ಜಾರಿಗೆ ಬರಲಿಲ್ಲ. "ಈ ಸುಧಾರಣೆಗಳ ವಿರುದ್ಧ ಆಂದೋಲನ ನಡೆಯಿತು. ಸಾರ್ವಜನಿಕವಾಗಿ ಇದರ ಬಗ್ಗೆ ಹೆಚ್ಚು ಚರ್ಚೆಗಳಾಗತೊಡಗಿದವು. ಇದರ ಪರಿಣಾಮವಾಗಿ ಲಿಪಿ ಸುಧಾರಣೆಯ ವಿಷಯ ಜರ್ಮನಿಯ ಸಾಂವಿಧಾನಿಕ ನ್ಯಾಯಾಲದವರೆಗೂ ಮುಟ್ಟಿತು. ನಂತರ ನ್ಯಾಯಾಲಯವು ಜಾರಿಗೊಳಿಸಬೇಕೆಂದಿರುವ ಲಿಪಿ ಸುಧಾರಣೆಯ ಕುರಿತು ಹೆಚ್ಚಿನ ವಿವರಣೆ ನೀಡುವಂತೆ ಆದೇಶಿಸಿತು. ಮುಂದೆ ನ್ಯಾಯಾಲಯವು ಲಿಪಿ ಸುಧಾರಣೆ ಕುರಿತು ನಿರ್ದೇಶನ ನೀಡಲು ಯಾವುದೇ ಕಾನೂನು ಇಲ್ಲದಿರುವುದರಿಂದ, ಶಾಲೆಯ ಹೊರಗೆ ಸಾರ್ವಜನಿಕವಾಗಿ ಜನರು ತಮ್ಮಾಯ್ಕೆಯ ಕಾಗುಣಿತವನ್ನು ಬಳಸಬಹುದು ಎಂಬುದಾಗಿ ೧೯೯೮ರಲ್ಲಿ ತೀರ್ಪು ಕೊಟ್ಟಿತು"[೩೨] ಎಂದು ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಸರಳ ಲಿಪಿ ಅಳವಡಿಕೆ ಕುರಿತು ಸಂವಿಧಾನದಲ್ಲಿ ಕೂಡ ಸೂಕ್ತ ನಿಯಮಾವಳಿಗಳನ್ನು ರಚಿಸದೇ ಇರುವುದು ಜರ್ಮನಿಯ ಈ ಪ್ರಕರಣದಿಂದ ಸಾಬೀತಾಗಿದೆ. ಜೊತೆಗೆ, ಲಿಪಿ ಸುಧಾರಣೆ ವಿರುದ್ಧ ಆಂದೋಲನ ನಡೆಯುವಷ್ಟರ ಮಟ್ಟಿಗೆ ವ್ಯಾಪಕ ವಿರೋಧ ಇರುವುದು ಕೂಡ ಬಹಿರಂಗವಾದಂತಾಯಿತು. ವಿಚಾರಣೆ ನಡೆಸಿದ ನ್ಯಾಯಾಲಯ ಸರ್ಕಾರಿ ಇಲಾಖೆ ಮತ್ತು ಶಾಲೆಗಳಲ್ಲಿ ಸರಳ ಲಿಪಿಯನ್ನು ಬಳಸಲು ಅನುಮತಿ ನೀಡಿರುವುದು ಮಹತ್ವದ ಸಂಗತಿ ಎನ್ನಬಹುದು.

ಇಷ್ಟಕ್ಕೆ ಜರ್ಮನಿಯಲ್ಲಿ ಲಿಪಿ ಸುಧಾರಣೆಯ ವಿವಾದ ಬಗೆಹರಿಯಲಿಲ್ಲ. "ನಂತರದ ಪ್ರಮುಖ ಬೆಳವಣಿಗೆಯಲ್ಲಿ "ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ" ಎನ್ನುವ ಸಮಿತಿಯನ್ನು ಮಾರ್ಚ್ ೨೦೦೬ರಲ್ಲಿ ಹುಟ್ಟು ಹಾಕಲಾಯಿತು. ಈ ಸಮಿತಿಯು ಲಿಪಿ ಸುಧಾರಣೆಯಲ್ಲಿ ವಿವಾದಾತ್ಮಕ ಎನಿಸಿದ ಬದಲಾವಣೆಗಳನ್ನು ಕೈಬಿಟ್ಟು ವಿವಾದಾತ್ಮಕವಲ್ಲ ಎನಿಸಿದಂತಹ ಬದಲಾವಣೆಗಳನ್ನು ಜಾರಿಗೆ ತರಲು ಒಪ್ಪಿಕೊಂಡಿತು. ಕೌನ್ಸಿಲ್‌ನ ಈ ನಡೆಯನ್ನು ಈ ಹಿಂದೆ ಲಿಪಿ ಸುಧಾರಣೆಯನ್ನು ವಿರೋಧಿಸಿದ್ದ ಹೆಸರಾಂತ ದಿನ ಪತ್ರಿಕೆಗಳೂ ಕೂಡ ಬಹುತೇಕವಾಗಿ ಒಪ್ಪಿಕೊಂಡವು"[೩೩] ಎಂದು 'ಜರ್ಮನ್ ನುಡಿಯಲ್ಲಿ ನಡೆದ ಲಿಪಿ ಸುಧಾರಣೆ' ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ ಸಮಿತಿ ಹೊಸ ಕಾಗುಣಿತದ ನಿಯಮಗಳಿಗೆ ಒಪ್ಪಿಗೆ ನೀಡಿದ ಪಟ್ಟಿ ಈ ಕೆಳಗಿನಂತಿದೆ.

೧. ಅಕ್ಷರಗಳು ಮತ್ತು ಅವುಗಳ ಉಚ್ಚಾರಣೆಯ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವುದು(ಇದು ಬೇರೆ ಭಾಷೆಯಿಂದ ಎರವಲು ಪಡೆದ ಪದಗಳಿಗೂ ಅನ್ವಯಿಸುತ್ತದೆ)

೨. ದೊಡ್ಡಕ್ಷರಗಳ ಬಳಕೆ

೩. ಕೂಡುಪದಗಳು

೪. ಹೈಫನ್(-) ಬಳಕೆ

೫. ವಿರಾಮ ಚಿಹ್ನೆಗಳು(ಅಲ್ಪ ವಿರಾಮ, ಪೂರ್ಣವಿರಾಮ ಮುಂತಾದವು)

೬. ಉದ್ದನೆಯ ಪದಗಳನ್ನು ಚಿಕ್ಕ ಪದಗಳಾಗಿ ಒಡೆದು ಸರಳಗೊಳಿಸುವುದು[೩೪]

ಒಟ್ಟಿನಲ್ಲಿ ರೂಢಿಗತವಾಗಿದ್ದ ಕೆಲವಾದರೂ ಅಂಶಗಳನ್ನು ಜರ್ಮನಿ ಭಾಷೆಯಲ್ಲಿ ಕೈಬಿಡುವ ನಿರ್ಧಾರಕ್ಕೆ ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ ಸಮಿತಿ ಸೂಚಿಸಿತು. ಈ ಮೂಲಕ ಜರ್ಮನ್ ಲಿಪಿ ಸುಧಾರಣೆಯಲ್ಲಿ ಪ್ರಮುಖವಾದ ೬ ಬದಲಾವಣೆಗಳಿಗೆ ಅವಕಾಶವಾಯಿತು.

ಇನ್ನೊಂದು ಮಹತ್ವದ ಸಂಗತಿಯೆಂದರೆ "ಸ್ಥಳದ ಹೆಸರುಗಳು ಹಾಗೂ ಕುಟುಂಬದ ಹೆಸರುಗಳನ್ನು ಈ ಸುಧಾರಣೆಯಿಂದ ಹೊರಗಿಡಲಾಯಿತು. ಅಂದರೆ ಸ್ಥಳದ ಹೆಸರು ಹಾಗೂ ಕುಟುಂಬದ ಹೆಸರುಗಳನ್ನು ಬರೆಯುವಾಗ ಈ ಹೊಸ ಕಾಗುಣಿತದ ನಿಯಮಗಳನ್ನು ಪಾಲಿಸುವುದು ಕಡ್ಡಾಯವೇನಲ್ಲ ಎನ್ನುವ ತೀರ್ಮಾನ ತೆಗೆದುಕೊಳ್ಳಲಾಗಿತ್ತು"[೩೫]. ಈ ಮೂಲಕ ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ ಸಮಿತಿ ಜಾಣ ನಡೆಯೊಂದನ್ನು ಇಟ್ಟಿತ್ತು. ಬಹುತೇಕ ಸಂದರ್ಭದಲ್ಲಿ ಸ್ಥಳ ಮತ್ತು ಕುಟುಂಬದ ಹೆಸರುಗಳಲ್ಲಿದ್ದ ಪರಂಪರೆಯನ್ನು ಉಳಿಸಿಕೊಳ್ಳಬೇಕು ಎಂದು ಸಂಪ್ರದಾಯವಾದಿಗಳು ವಾದಿಸುತ್ತಾರೆ. ಆದ್ದರಿಂದ ಈ ಎರಡನ್ನು ಸಾಂಪ್ರದಾಯಿಕವಾಗಿ ಬರೆಯುವಂತೆ ಬರೆಯಲು ಅನುಮತಿ ನೀಡುವ ಮೂಲಕ ಸಮಸ್ಯೆಯೊಂದನ್ನು ನಿವಾರಿಸಲು ಸಮಿತಿ ಯೋಜಿಸಿದಂತೆ ತೋರುತ್ತದೆ.

ಜರ್ಮನಿಯಲ್ಲಿ ಹೊಸ ಕಾಗುಣಿತ ಜಾರಿಗೆ ಸಹಮತ

ಜರ್ಮನಿಯಲ್ಲಿ ನಡೆದ ಲಿಪಿ ಬದಲಾವಣೆಯ ಹೋರಾಟಕ್ಕೆ ಕಡೆಗೂ ೧೯೯೬ರಲ್ಲಿ ಆರಂಭಿಕ ಜಯ ಸಿಕ್ಕಿತು. "ಜರ್ಮನಿ ಒಕ್ಕೂಟದ ಎಲ್ಲಾ ರಾಜ್ಯಗಳು ಹಾಗೂ ಜರ್ಮನ್ ನುಡಿಯಾಡುವ ಆಸ್ಟ್ರಿಯಾ, ಸ್ವಿಜ್ಜರ್ಲ್ಯಾಂಡ್ ನಾಡುಗಳು ಹೊಸ ಕಾಗುಣಿತವನ್ನು ೧೯೯೮ರ ಆಗಸ್ಟ್ ೧ರಿಂದ ಜಾರಿಗೆ ತರುವುದಾಗಿ ೧೯೯೬ರಲ್ಲಿ ಒಪ್ಪಿಕೊಂಡವು. ಜರ್ಮನ್ ಒಕ್ಕೂಟದಲ್ಲಿರುವ ೧೬ ರಾಜ್ಯಗಳ ಪೈಕಿ ಕೆಲವು ರಾಜ್ಯಗಳು ೧೯೯೬-೯೭ರ ಶಾಲಾ ವರ್ಷದಲ್ಲಿಯೇ ಹೊಸ ಕಾಗುಣಿತದ ಕಟ್ಟಳೆಗಳನ್ನು ಜಾರಿಗೆ ತಂದವು"[೩೬] ಎಂದು ಮಲ್ಲೇಶ್ ಬೆಳವಾಡಿ ಹೇಳಿದ್ದಾರೆ. ಜರ್ಮನಿಯಲ್ಲಿ ನಡೆದ ಲಿಪಿ ಸುಧಾರಣೆಯ ಹೋರಾಟಕ್ಕೆ ಮೊದಲ ವರ್ಷದಲ್ಲೇ ಯಶಸ್ಸು ಸಿಕ್ಕಿರುವುದು ಗಮನಾರ್ಹ ಸಂಗತಿ ಎನ್ನಬಹುದು. ವಿವಾದಾತ್ಮಕ ಎನಿಸುವ ಕೆಲವನ್ನು ಕೈಬಿಟ್ಟು, ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ ಸಮಿತಿ ಶಿಫಾರಸು ಮಾಡಿದ ಬದಲಾವಣೆಗಳನ್ನು ಜರ್ಮನಿಯಲ್ಲಿ ೧೯೯೬-೯೭ರ ಅಕಾಡೆಮಿಕ್ ವರ್ಷದಲ್ಲೇ ಜಾರಿಗೆ ತರಲಾಗಿದೆ.

ಲಿಪಿ ಸುಧಾರಣೆಯ ನಂತರ ಜರ್ಮನಿಯಲ್ಲಿ ನಡೆದ ಬೆಳವಣಿಗೆಗಳು

೧೯೯೬ರ ಲಿಪಿ ಸುಧಾರಣೆ ಚಳವಳಿಯ ನಂತರ ಜರ್ಮನಿಯಲ್ಲಿ ಅನೇಕ ಪರಿವರ್ತನೆಗೆ ಕಾರಣವಾಯಿತು. ಈ ಸಂಗತಿಯನ್ನು ಮಲ್ಲೇಶ್ ಬೆಳವಾಡಿಯವರು '೧೯೯೬ರ ಲಿಪಿ ಸುಧಾರಣೆಯ ಒಪ್ಪಂದದ ನಂತರದ ಬೆಳವಣಿಗೆಗಳು' ಎಂಬ ಭಾಗದಲ್ಲಿ ಹೀಗೆ ಗುರುತಿಸುತ್ತಾರೆ:

೧. ಹೊಸ ಕಾಗುಣಿತದಲ್ಲಿ ಯಾವುದೇ ಅನುಮಾನ, ತೊಡಕುಗಳು ಕಂಡುಬಂದಲ್ಲಿ ಅವುಗಳನ್ನು ಬಗೆಹರಿಸುವ ಸಲುವಾಗಿ ಅಂತರರಾಷ್ಟ್ರೀಯ ಸಮಿತಿಯೊಂದನ್ನು ೧೯೯೭ರಲ್ಲಿ ಜಾರಿಗೆ ತರಲಾಯಿತು.

೨. ೨೦೦೪ರಲ್ಲಿ ಹಳೆಯ ಸಾಂಪ್ರದಾಯಿಕ ಕಾಗುಣಿತ ಹಾಗೂ ಲಿಪಿ ಸುಧಾರಣೆಯನ್ನೊಳಗೊಂಡ ಹೊಸ ಕಾಗುಣಿತ ಇವೆರಡನ್ನೂ ಬಳಸಬಹುದು ಎನ್ನುವ ಬದಲಾವಣೆಯನ್ನು ಮಾಡಲಾಯಿತು.

೩. ಈ ಹಿಂದೆ ೧೯೯೭ರಲ್ಲಿ ಜಾರಿಗೆ ತಂದಿದ್ದ "ಅಂತರರಾಷ್ಟ್ರೀಯ ಸಮಿತಿ"ಯ ಬದಲಾಗಿ ಐದು ದೇಶಗಳಿಂದ, ೩೮ ಪರಿಣಿತರನ್ನೊಳಗೊಂಡ "ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ" ಹೆಸರಿನ ಸಮಿತಿಯನ್ನು ರಚಿಸಲಾಯಿತು. (ಈ ಸಮಿತಿಯಲ್ಲಿ ಭಾಷಾ ವಿಜ್ಞಾನಿಗಳು, ಶಿಕ್ಷಕರು, ಪ್ರಕಾಶಕರು, ಬರಹಗಾರರು, ಪತ್ರಿಕೆ ಸಂಪಾದಕರು ಮತ್ತು ಪೋಷಕರನ್ನು ಒಳಗೊಂಡಿತ್ತು. ಈ ಸಮಿತಿಯು ಲಿಪಿ ಸುಧಾರಣೆಯಲ್ಲಿ ವಿವಾದಾತ್ಮಕ ಎನಿಸುವ ನಿಯಮಗಳನ್ನು ಕೈಬಿಟ್ಟು ವಿವಾದಾತ್ಮಕವಲ್ಲ ಎನಿಸಿದ ಬದಲಾವಣೆಗಳನ್ನು ಜಾರಿಗೆ ತರಲು ಒಪ್ಪಿಕೊಂಡಿತು. ಇದನ್ನು ಆಗಸ್ಟ್ ೧, ೨೦೦೬ರಿಂದ ಜಾರಿಗೆ ತರಲಾಯಿತು). ಎಂದು ಮಲ್ಲೇಶ್ ಬೆಳವಾಡಿಯವರು ಜರ್ಮನಿಯಲ್ಲಿ ಆದ ಬದಲಾವಣೆಗಳ ಪಟ್ಟಿಯನ್ನು ನೀಡಿದ್ದಾರೆ.[೩೭]

ಇಲ್ಲಿ ಲಿಪಿ ಸುಧಾರಣೆಯಲ್ಲಿ ಎದುರಾಗಬಹುದಾದ ಅಡ್ಡಿ ಆತಂಕಗಳೇನು? ಅವುಗಳನ್ನು ನಿವಾರಿಸಲು ಯಾವೆಲ್ಲ ಮಾರ್ಗೋಪಾಯಗಳನ್ನು ರೂಪಿಸಬೇಕು ಎನ್ನುವುದಕ್ಕೆ ಜರ್ಮನ್ ಲಿಪಿ ಸುಧಾರಣೆ ಚಳವಳಿ ಮುಖ್ಯ ಉದಾಹರಣೆಯಾಗಿದೆ. ಭಾಷಾ ವಿಜ್ಞಾನಿಗಳು, ಶಿಕ್ಷಕರು, ಪ್ರಕಾಶಕರು, ಬರಹಗಾರರು, ಸಂಪಾದಕರು ಮತ್ತು ಪೋಷಕರನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಈ ಮೂಲಕ ಎಲ್ಲರಿಗೆ ಸಮಿತಿಯಲ್ಲಿ ಪ್ರಾತಿನಿಧ್ಯ ನೀಡಲು ಯತ್ನಿಸಲಾಗಿದೆ. ಜೊತೆಗೆ ವಿವಾದಾತ್ಮಕ ಎಂದು ಸಮಿತಿ ತೀರ್ಮಾನಿಸಿದ ತಿದ್ದುಪಡಿಗಳನ್ನು ಕೈಬಿಡಲು ತೀರ್ಮಾನಿಸಲಾಗಿದೆ. ಈ ಮೂಲಕ ತಕ್ಷಣಕ್ಕೆ ಲಿಪಿ ಸುಧಾರಣೆಯಲ್ಲಿ ಆಗಬಹುದಾದ ವಿಳಂಬವನ್ನು ತಪ್ಪಿಸಲು ಯತ್ನಿಸಿರುವಂತೆ ತೋರುತ್ತದೆ.

ಜರ್ಮನಿಯಲ್ಲಿ ಲಿಪಿ ಸುಧಾರಣೆಯ ಅನುಷ್ಠಾನ

ನುಡಿಕನ್ನಡ ವೆಬ್‌ತಾಣದಲ್ಲಿ ಪ್ರಕಟವಾಗಿರುವ ಮಲ್ಲೇಶ್ ಬೆಳವಾಡಿಯವರ ಲೇಖನದ 'ಲಿಪಿ ಸುಧಾರಣೆಯ ಅನುಷ್ಠಾನ' ಎಂಬ ಭಾಗದಲ್ಲಿ ಲಿಪಿ ಸುಧಾರಣೆಯ ನಂತರ ಅದರ ಅನುಷ್ಠಾನದ ಮಾದರಿಗಳ ವಿವರಗಳನ್ನು ನೀಡಲಾಗಿದೆ. "ಹೊಸ ಕಾಗುಣಿತ ನಿಯಮಗಳನ್ನು ಜರ್ಮನ್ ಸುದ್ದಿಹಾಳೆಗಳು ಹಾಗೂ ನಿಯತಕಾಲಿಕೆಗಳು ಬಹುತೇಕವಾಗಿ ಒಪ್ಪಿಕೊಂಡಿವೆ. ಹೊಸದಾಗಿ ಮುದ್ರಣಗೊಂಡ ಶೇಕಡಾ ೮೦%ರಷ್ಟು ಪುಸ್ತಕಗಳು ಹೊಸ ಕಾಗುಣಿತ ನಿಯಮಗಳನ್ನು ಬಳಸಿ ಮುದ್ರಣಗೊಂಡಿವೆ. ಶಾಲೆ ಹಾಗೂ ಮಕ್ಕಳ ಪುಸ್ತಕಗಳು ಹೊಸ ಕಾಗುಣಿತ ನಿಯಮಗಳನ್ನು ಬಳಸುತ್ತಿವೆ"[೩೮]ಯಂತೆ. ಈ ಮೂಲಕ ಹೊಸ ತಲೆಮಾರು ತಂತಾನೆ ಹೊಸ ಲಿಪಿಗೆ ಒಗ್ಗಿಕೊಳ್ಳುತ್ತಿದೆ. ಭವಿಷ್ಯದಲ್ಲಿ ಈ ತಲೆಮಾರು ಹೊಸ ಲಿಪಿಯನ್ನೇ ಬಳಸುತ್ತದೆ. ಇದರಿಂದಾಗಿ ಕ್ಲಿಷ್ಟಕರವಾದ ಹಳೆಯ ಲಿಪಿ ತಂತಾನೇ ಹಿನ್ನೆಲೆಗೆ ಸರಿಯುವ ಸಾಧ್ಯತೆ ಇದೆ.

ಲಿಪಿ ಸುಧಾರಣೆಯ ಆರಂಭದ ಘಟ್ಟದಲ್ಲೇ ಜರ್ಮನಿ ಯಶಸ್ಸುಗಳಿಸಿರುವುದಕ್ಕೆ ನಿಯತಕಾಲಿಕೆಗಳು ಮತ್ತು ಮುದ್ರಿತ ಕೃತಿಗಳ ಪೈಕಿ ಶೇ.೮೦ರಷ್ಟು ಹೊಸ ಲಿಪಿಯನ್ನು ಬಳಸಿರುವುದೇ

ಸಾಕ್ಷಿ. ಇದಕ್ಕೆ ವ್ಯತಿರಿಕ್ತವಾದ ಉದಾಹರಣೆಗಳಿಗೆ ಕೂಡ ಜರ್ಮನ್ ಲಿಪಿ ಸುಧಾರಣೆ ಚಳವಳಿ ಸಾಕ್ಷಿಯಾಗಿದೆ. "ಕಥೆ-ಕಾದಂಬರಿಗಳಲ್ಲಿನ ಲಿಪಿಯನ್ನು ಬರಹಗಾರರ ಆಯ್ಕೆಗೆ ಬಿಡಲಾಗಿದೆ. ಶಾಸ್ತ್ರೀಯ ಸಾಹಿತ್ಯ ಕೃತಿಗಳನ್ನು ಹಳೆಯ ಕಾಗುಣಿತದಲ್ಲಿಯೇ ಮುದ್ರಿಸಲಾಗುತ್ತಿದೆ, ಆದರೆ ಶಾಲೆಗಳಲ್ಲಿ ಶಾಸ್ತ್ರೀಯ ಸಾಹಿತ್ಯ ಕುರಿತು ಹೇಳಿಕೊಡುವುದಾದರೆ ಇವುಗಳನ್ನು ಹೊಸ ಕಾಗುಣಿತದಲ್ಲಿ ಮುದ್ರಿಸಿ ಹೇಳಿಕೊಡಲಾಗುತ್ತದೆ"ಯಂತೆ.[೩೯] ಈ ಅವಕಾಶಗಳನ್ನು ನೀಡುವ ಮೂಲಕ ಲಿಪಿ ಸುಧಾರಣೆಯಲ್ಲಿ ಎದುರಾಗಬಹುದಾದ ಬಹುತೇಕ ಸಮಸ್ಯೆಗಳಿಗೆ ಪರಿಹಾರವನ್ನು ಜರ್ಮನಿಯಲ್ಲಿ ಕಂಡುಕೊಳ್ಳಲಾಗಿದೆ. ಲಿಪಿ ಸುಧಾರಣೆಗಾಗಿ ಸಮಿತಿ ರಚಿಸುವ ಮೂಲಕ ಜರ್ಮನ್ ಸರ್ಕಾರ ಕೂಡ ಲಿಪಿ ಸುಧಾರಣೆಯ ಅವಶ್ಯಕತೆಯನ್ನು ಪೂರೈಸಲು ನೆರವಾಗಿರುವುದು ಕೂಡ ಗಮನಾರ್ಹ ಸಂಗತಿಯಾಗಿದೆ.

ಒಟ್ಟಿನಲ್ಲಿ ಹಿಟ್ಲರ್ ನಾಡಿನಲ್ಲಿ ಕೂಡ ಲಿಪಿ ಸುಧಾರಣೆ ಜಾರಿಯಾಗಿದೆ. ಅಸ್ತಿತ್ವದಲ್ಲಿದ್ದ ಕ್ಲಿಷ್ಟ ನುಡಿಯನ್ನು ಸರಳಗೊಳಿಸುವ ಕುರಿತು ಪ್ರಪಂಚದ ಅನೇಕ ದೇಶಗಳಲ್ಲಿ ಚಳವಳಿಗಳು ನಡೆದಿವೆ. ಈ ಮೂಲಕ ಬರಹ, ಮಾತುಗಳಲ್ಲಿದ್ದ ಪಾರಂಪರಿಕ ಪದ, ಅಕ್ಷರಗಳನ್ನು ಕೈಬಿಡುವ, ಪರಿವರ್ತಿಸುವ ಪ್ರಕ್ರಿಯೆಗಳು ನಡೆದಿವೆ.

೪.೮. ಕೊರಿಯಾದಲ್ಲಿ ಹಂಗುಲ್ ಲಿಪಿ ಸುಧಾರಣೆ

ಕೊರಿಯಾದಲ್ಲಿ ನಡೆದ ಲಿಪಿ ಸುಧಾರಣೆ ಯತ್ನದ ಕುರಿತು ನುಡಿಕನ್ನಡ ವೆಬ್‌ತಾಣದಲ್ಲಿ ಸಂದೀಪ್ ಕಂಬಿಯವರು 'ಹಂಗುಲ್ ಲಿಪಿ – ನುಡಿಯರಿಮೆಯ ತಳಹದಿಯ ಮೇಲೆ ಸಾಮಾಜಿಕ ಕ್ರಾಂತಿ' ಎಂಬ ಲೇಖನವನ್ನು ಬರೆದಿದ್ದಾರೆ. ಕೊರಿಯಾವನ್ನು ಅವರು ಭಾರತದ ಕರ್ನಾಟಕಕ್ಕೂ, ೧೪೧೮ರಿಂದ ೧೪೫೦ರವರೆಗೆ ಕೊರಿಯಾವನ್ನು ಆಳಿದ ರಾಜ ಸೆಜೋಂಗ್‌ನನ್ನು ಮೈಸೂರು ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಹೋಲಿಸುತ್ತಾರೆ. ಅಲ್ಲದೇ, ಈ ಇಬ್ಬರಿಗೂ ಜನರ ಸಮಸ್ಯೆಗಳನ್ನು ಪರಿಹರಿಸಬೇಕು ಎಂಬ ಹೆಬ್ಬಯಕೆ ಇತ್ತು ಎಂದು ಕೂಡ ಅವರು ಅಭಿಪ್ರಾಯಪಡುತ್ತಾರೆ.

ಇದೇ ನಿಟ್ಟಿನಲ್ಲಿ ಸೆಜೋಂಗ್ ಲಿಪಿ ಸುಧಾರಣೆಗೆ ಮುಂದಾದ ಕಥನ ಕುತೂಹಲಕಾರಿಯಾಗಿದೆ. ನುಡಿಯಲ್ಲಿ ಪರಿವರ್ತನೆ ತರುವ ಸಲುವಾಗಿಯೇ ಸೆಜೋಂಗ್ "ತನ್ನ ಓಲಗದಲ್ಲಿರುವ ಪಂಡಿತರೊಡನೆ ಚರ್ಚಿಸಿ, ಚಿಂತಿಸಿ, ತನ್ನ ನಾಡಿನ ಉದ್ದಗಲಕ್ಕೂ ಹಲವು ಯೋಜನೆಗಳನ್ನು ಹಮ್ಮಿಕೊಂಡನು. ಹೊಸ ಅರಿಮೆ-ಚಳಕಗಳನ್ನು ಬಳಸಿಕೊಳ್ಳಲು ಕೂಡ ಮುಂದಾದನು. ಉದಾಹರಣೆಗೆ, ತನ್ನ ನಾಡಿನ ಸಾಮಾನ್ಯ ರೈತರಿಗೆ ನೆರವಾಗಲೆಂದು ಕೊರಿಯಾದ ಬೇರೆ ಬೇರೆ ಕಡೆಗಳಲ್ಲಿ ಬಳಕೆಯಲ್ಲಿದ್ದ ಬೇಸಾಯದ ಬಗೆಗಳ, ವ್ಯವಸ್ಥೆಗಳ ಬಗ್ಗೆ ಆರಯ್ಕೆ ನಡೆಯಿಸಿ, ಬೇಸಾಯದ ಆರಂಬದ ಚಳಕಗಳ ಬಗ್ಗೆ ಒಂದು ಕೈಪಿಡಿಯನ್ನು ಹೊರ ತಂದನು. ಇದೇ ಬಗೆಯಲ್ಲಿ ಅವನು ಕೈಗೊಂಡ ಇನ್ನೊಂದು ಹಮ್ಮುಗೆ ಎಂದರೆ 'ಹಂಗುಲ್' ಎಂಬ ಹೊಸ ಲಿಪಿ ಕಟ್ಟಣೆಯದು"[೪೦] ಎಂದು ಸಂದೀಪ್ ಕಂಬಿಯವರು ಕೊರಿಯಾದಲ್ಲಿ ನಡೆದ ಲಿಪಿ ಸುಧಾರಣೆಯ ಇತಿಹಾಸವನ್ನು ದಾಖಲಿಸುತ್ತಾರೆ. ಕೊರಿಯಾದಲ್ಲಿ ರಾಜರ ಆಳ್ವಿಕೆಯ ಅವಧಿಯಲ್ಲೇ ಲಿಪಿ ಸುಧಾರಣೆ ನಡೆದಿರುವುದು ಗಮನಾರ್ಹ

ಸಂಗತಿಯಾಗಿದೆ. ಈ ಮೂಲಕ ಜನರ ಆಡುಭಾಷೆ ಮತ್ತು ಬರಹ, ಆಡಳಿತ ಭಾಷೆಗಳ ನಡುವೆ ಕೊಂಡಿಯೊಂದನ್ನು ಬೆಸೆಯುವ ಕೆಲಸ ೧೪ನೇ ಶತಮಾನದಲ್ಲೇ ಆರಂಭವಾಗಿದೆ.

ಆ ಕಾಲದಲ್ಲಿ “ಕೊರಿಯಾದಲ್ಲಿ ಓದು ಬರಹ ಬರಿಯ ಮೇಲ್ವರ್ಗದವರ ಸೊತ್ತಾಗಿತ್ತು. ಕೊರಿಯನ್ ಬರೆಯಲು ಹಂಜ ಎಂಬ ಚೈನೀಸ್ ಲಿಪಿಯನ್ನು ಬಳಸಲಾಗುತ್ತಿತ್ತು. ಕೊರಿಯನ್ ನುಡಿಗೆ ಹೊಂದಿಸುವ ಸಲುವಾಗಿ ಈ ಲಿಪಿಗೆ ಮಾರ್ಪಾಡುಗಳನ್ನು ಮಾಡಿದ್ದರೂ, ಇದರಲ್ಲಿ ಕೊರಿಯನ್ ಬರೆಯಲು ಹಲವು ತೊಡಕುಗಳಿದ್ದವು. ಇದಕ್ಕೆ ಕಾರಣ, ಚೈನೀಸ್ ನುಡಿಗೂ ಕೊರಿಯನ್ ನುಡಿಗೂ ಇದ್ದ ವ್ಯಾಕರಣ ಮತ್ತು ವಾಕ್ಯ ಕಟ್ಟುವಿಕೆಗಳಲ್ಲಿ ಇದ್ದ ಬೇರೆತನ. ಜೊತೆಗೆ ಹಂಜ ಲಿಪಿಯಲ್ಲಿ ಸಾವಿರಾರು ಅಕ್ಷರಗಳಿದ್ದುದರಿಂದ, ಅದನ್ನು ಸರಿಯಾಗಿ ಓದಲು ಕಲಿಯಲು ಹಲವಾರು ವರುಶಗಳೇ ಬೇಕಾಗಿತ್ತು. ಈ ಕಾರಣಗಳಿಂದಾಗಿ ಸಾಮಾನ್ಯ ಕೊರಿಯನ್ನನಿಗೆ ಓದು-ಬರಹವೆಂಬುದು ಕೈಗೆಟುಕದ ಹಣ್ಣಾಗಿತ್ತು”[೪೧] ಎಂಬ ಸಂಗತಿಯನ್ನು ಸಂದೀಪ್ ಕಂಬಿಯವರು ಉಲ್ಲೇಖಿಸುತ್ತಾರೆ. ಮೇಲಿನ ಸಮಸ್ಯೆಯನ್ನು ಕನ್ನಡ ಮತ್ತು ಸಂಸ್ಕೃತ ಭಾಷೆಗಳೊಂದಿಗೆ ಹೋಲಿಸಬಹುದು ಎನಿಸುತ್ತದೆ. ಕನ್ನಡದಲ್ಲಿ ಸಂಸ್ಕೃತ ಪದ, ಅಕ್ಷರ, ವ್ಯಾಕರಣಾಂಶಗಳನ್ನು ಇಂದಿಗೂ ಬಳಸಲಾಗುತ್ತಿದೆ. ಇನ್ನೊಂದು ನಿಟ್ಟಿನಲ್ಲಿ ಕರ್ನಾಟಕ ಸೇರಿದಂತೆ ಜಗತ್ತಿನಲ್ಲಿ ಭಾಷೆ ಅಸ್ತಿತ್ವದಲ್ಲಿದ್ದೂ ಲಿಪಿರಹಿತ ಭಾಷೆಗಳ ಸಮಸ್ಯೆಗಳಿಗೂ ಹೋಲಿಸಬಹುದು. ರಾಜ್ಯದಲ್ಲಿ ತುಳು, ಕೊಡವ ಮೊದಲಾದ ಭಾಷೆಗಳದ್ದು ಇದೇ ಅವಸ್ಥೆ ಎನ್ನಬಹುದು. ಆದರೆ, ಚೀನೀ ಲಿಪಿಯಲ್ಲಿ ಕೊರಿಯನ್ ನುಡಿಯನ್ನು ಬರೆಯುತ್ತಿದ್ದ ಸಮಸ್ಯೆಗೆ ಪರಿಹಾರ ಹುಡುಕಲು ಸೆಜೋಂಗ್ ಮುಂದಾಗಿದ್ದು ಗಮನಾರ್ಹವಾಗಿದೆ.

ಭಾಷೆಯಲ್ಲಿದ್ದ ಸಮಸ್ಯೆಯನ್ನು ಪರಿಹರಿಸಲು ಮುಂದಾದ ಸೆಜೋಂಗ್ ಓದು ಮತ್ತು ಬರಹಕ್ಕೆ ಸುಲಭವಾಗುವಂತೆ ಹೊಸ ಲಿಪಿ ರೂಪಿಸಲು ಯೋಜನೆ ರೂಪಿಸಿದ. “ಈ ಕಟ್ಟಣೆಯಲ್ಲಿ ಚಿತ್ರಲಿಪಿಯನ್ನು (logographic script) ತೊರೆದು ಉಲಿಬರಿಗೆಯ (phonetic writing) ಏರ್ಪಾಟನ್ನು ಅನುಸರಿಸಲಾಯಿತು. ಹೀಗೆ ಕಟ್ಟಿದ ಹಂಗುಲ್ ಲಿಪಿಯಲ್ಲಿ ಕೊರಿಯನ್ ನುಡಿಯಲ್ಲಿ ಇದ್ದ ಉಲಿಗಳಿಗೆ ಗುರುತುಗಳನ್ನು ಕೊಡಲಾಗಿದೆಯಲ್ಲದೇ, ನಮ್ಮ ಬ್ರಾಹ್ಮಿ ಲಿಪಿಗಳಲ್ಲಿ ಇರುವಂತೆ, ವ್ಯಂಜನಗಳನ್ನು ಅವು ಬಾಯಲ್ಲಿ ಹೇಗೆ ಹುಟ್ಟುತ್ತವೆಂಬುದರ ಮೇಲೆ ಗುಂಪಿಸಲಾಗಿದೆ. ಆದರೆ, ಈ ಗುಂಪಿಸುವಿಕೆಯೂ ಕೊರಿಯನ್ ಉಲಿಕೆಗೆ ತಕ್ಕಂತೆ ಇದೆಯೇ ಹೊರತು ಬ್ರಾಹ್ಮಿ ಲಿಪಿಗಳಿಂದ ಕುರುಡಾಗಿ ಎತ್ತಿಕೊಂಡಂತೆ ಕಾಣುವುದಿಲ್ಲ”[೪೨] ಎಂದು ಸಂದೀಪ್ ಅಭಿಪ್ರಾಯಪಡುತ್ತಾರೆ. ಈ ಮೂಲಕ ಕನ್ನಡದಲ್ಲಿ ಬ್ರಾಹ್ಮಿ ಲಿಪಿ ತಂದೊಡ್ಡಿರುವಂತಹ ಸಮಸ್ಯೆಗಳನ್ನು ಕೂಡ ನಿವಾರಿಸುವಲ್ಲಿ ಹಂಗುಲ್ ಲಿಪಿ ಯಶಸ್ವಿಯಾಗಿದೆ ಎನಿಸುತ್ತದೆ.

ಜೊತೆಗೆ, ಉಲಿಗಳ ಹುಟ್ಟು ಬಾಯಿಯ ಅಂಗಗಳ ಆಕಾರ, ಉಲಿಗಳ ಬಾಗುಗಳನ್ನು ಹೋಲುವ ಗುರುತುಗಳನ್ನೇ ಅಕ್ಷರಗಳನ್ನಾಗಿ ಬಳಸಲಾಗಿದೆ. ಇದಕ್ಕೆ “ㄱ” ಅಕ್ಷರವನ್ನು ಉದಾಹರಿಸಲಾಗಿದೆ. ಈ ಗುರುತು ಕೊರಿಯನ್ ಭಾಷೆಯಲ್ಲಿ ‘ಕ/ಗ’ ಅಕ್ಷರವನ್ನು ಸೂಚಿಸುತ್ತದೆ ಎಂದು ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಈ ಮೂಲಕ ಅಕ್ಷರಗಳನ್ನು ನೆನಪಿಟ್ಟುಕೊಳ್ಳುವುದು ಕೂಡ ಸುಲಭ ಎಂಬುದು ಸಂದೀಪ್ ಅವರ ಅಭಿಪ್ರಾಯವಾಗಿದೆ.

"ಹಂಗುಲ್ನಲ್ಲಿ ೭ ಮೂಲ ಸ್ವರಗಳನ್ನು ಗುರುತಿಸಿರುವುದಲ್ಲದೆ ಅವುಗಳನ್ನು ಕೊರಿಯನ್ ನುಡಿಯ ಉಲಿಯುವಿಕೆಗೆ ತಕ್ಕಂತೆ ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಸ್ವರಗಳನ್ನು ಸೂಚಿಸುವ ಅಕ್ಷರಗಳು ಬರಿಯ ಗೀಟು ಮತ್ತು ಚುಕ್ಕೆಗಳಿಂದ ಕಟ್ಟಲಾಗಿದೆ, ಆದ ಕಾರಣ ವ್ಯಂಜನಗಳಿಂದ ಅವು ಬೇರೆಯಾಗಿ ಎದ್ದು ಕಾಣುತ್ತವೆ ಮತ್ತು ಬರಹದಲ್ಲಿ ಗುರುತು ಹಿಡಿಯಲು ಸುಳುವಾಗುತ್ತದೆ. ಹೀಗೆ ತಮ್ಮ ನುಡಿಯ ನುಡಿಯರಿಮೆ ಮತ್ತು ಉಲಿಯರಿಮೆಗಳನ್ನು ಚೆನ್ನಾಗಿ ಅರಿತು ಅದಕ್ಕೆ ತಕ್ಕಂತೆ ತೀರಾ ವೈಜ್ಞಾನಿಕವಾಗಿ ಕಟ್ಟಿರುವ ಲಿಪಿ ಜಗತ್ತಿನಲ್ಲಿ ಬಹುಶಃ ಮತ್ತೊಂದು ಇಲ್ಲ. ಇದೇ ಕಾರಣಕ್ಕೆ ಇದನ್ನು ಯಾರು ಬೇಕಾದರೂ ಕಲಿಯಬಹುದು ಎಂಬ ಹೊಗಳಿಕೆಗೆ ಹಂಗುಲ್ ಪಾತ್ರವಾಯಿತು."[೪೩] ಹೀಗೆ ಕೊರಿಯಾದಲ್ಲಿ ಲಿಪಿ ಸುಧಾರಣೆಯನ್ನು ಜಾರಿಗೆ ತರಲಾಗಿದೆ. ಇನ್ನೊಂದು ಸಂಗತಿ ಎಂದರೆ, ಲಿಪಿ ಸುಧಾರಣೆಗೆ ಸಂಪ್ರದಾಯವಾದಿಗಳು ವಿರೋಧ ವ್ಯಕ್ತಪಡಿಸುತ್ತಾರೆ ಎಂಬ ಸಂಗತಿ ರಾಜ ಸೆಜೋಂಗ್‌ಗೆ ತಿಳಿದಿತ್ತಂತೆ. ಇದಕ್ಕಾಗಿ ಆತ ಗುಟ್ಟಾಗಿ ಲಿಪಿ ಸುಧಾರಣೆ ಕಾರ್ಯವನ್ನು ಗುಟ್ಟಾಗಿ ಮಾಡಿಸಿದ ಎಂದು ಕೂಡ ಇದೇ ಲೇಖನದಲ್ಲಿ ದಾಖಲಿಸಲಾಗಿದೆ. ಇನ್ನು ಕೆಲವರ ಪ್ರಕಾರ, 'ಸೆಜೋಂಗ್ ತನ್ನ ಈ ಆಪ್ತ ಪಂಡಿತರಿಗೂ ತಿಳಿಸದೆ ತಾನೇ ಗುಟ್ಟಾಗಿ ಇದನ್ನು ಕಟ್ಟಿದನೆಂದು' ಹೇಳಲಾಗಿದೆ. ಆದರೆ, ಹೊಸ ಹಂಗುಲ್ ಲಿಪಿಯನ್ನು ಸಾಮಾನ್ಯ ಕೊರಿಯನ್ನರು ಮೆಚ್ಚಿಕೊಂಡರೆ, ಮೇಲ್ವರ್ಗದವರು ಪಾರಂಪರಿಕ ಹಂಜ ಲಿಪಿಯನ್ನು ಮುಂದುವರಿಸಿದರು.

ಹಂಗುಲ್ ಲಿಪಿಯ ಬಳಕೆ ಕುರಿತು ಸಂದೀಪ್ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಹಂಗುಲ್ ಇಲ್ಲದೇ ಹೋಗಿದ್ದರೆ ಆ ಕಾಲದಲ್ಲಿ ಸಾಮಾನ್ಯ ಕೊರಿಯನ್ನರು ಓದು-ಬರಹ ಕಲಿಯಲು ಆಗುತ್ತಲೇ ಇರಲಿಲ್ಲವೇನೋ. ಹಾಗಾಗಿ, ಹಂಗುಲ್ ತರುವುದರ ಹಿಂದೆ ನುಡಿಯರಿಮೆಯ ಕಾರಣಗಳು, ಸಾಮಾಜಿಕ ಕಳಕಳಿಗಳ ಜೊತೆಗೆ ಚೈನೀಸ್ ಹಿಡಿತದಿಂದ, ಅದರ ಗುರುತಿನಿಂದ ಹೊರಬಂದು ಕೊರಿಯನ್ನರ ಬೇರ್ಮೆಯನ್ನು ಎತ್ತಿ ಹಿಡಿಯುವ ಬಯಕೆಯೂ ಕಾಣುತ್ತದೆ. ಹಂಗುಲ್ ಮೂಲಕ ಕೊರಿಯನ್ ಹೆಮ್ಮೆಯನ್ನು, ಬೇರ್ಮೆಯನ್ನು ಗುರುತಿಸಿಕೊಳ್ಳುವ ಹಂಬಲ ಇಪ್ಪತ್ತನೆಯ ಶತಮಾನದಿಂದ ಕೊರಿಯನ್ನರಲ್ಲಿ ಹೆಚ್ಚು ಕಾಣುತ್ತದೆ"[೪೪]ಯಂತೆ. ಸೆಂಜೋಂಗ್ ಪ್ರಾಯಶಃ ಒಬ್ಬ ಮುಂಗಾಣ್ಕೆಯ ರಾಜನಿದ್ದಿರಬಹುದು. ಭವಿಷ್ಯದಲ್ಲಿ ಉದ್ದೇಶಿತ ಲಿಪಿ ಸುಧಾರಣೆ ಸಾಮಾಜಿಕ ಪರಿಣಾಮ ಬೀರಬಲ್ಲುದು ಎಂದು ಅವನು ಎಣಿಸಿದಂತೆ ಕಾಣುತ್ತದೆ. ಇದರಿಂದಾಗಿ ಆತ ತನ್ನ ಗುರಿಯನ್ನು ಸಾಧಿಸಿದಂತೆ ತೋರುತ್ತದೆ.

ಹೊಸ ಲಿಪಿ ಹಂಗುಲ್ ಕೊರಿಯಾದಲ್ಲಿ ಜಾರಿಗೆ ಬಂದರೂ, "ಹಳೆಯ ಹಂಜ ಲಿಪಿಯನ್ನು ಇರಿಸಿಕೊಳ್ಳಬೇಕೇ, ಮತ್ತು ಅದನ್ನು ಮಕ್ಕಳಿಗೆ ಕಲಿಸಬೇಕೇ ಎಂಬ ಪ್ರಶ್ನೆಗಳು ದಕ್ಷಿಣ ಕೊರಿಯಾದಲ್ಲಿ ಇನ್ನೂ ಜೀವಂತವಾಗಿದ್ದರೂ ಹಂಗುಲ್ ಲಿಪಿಯನ್ನೇ ಸಾಮಾನ್ಯವಾಗಿ ಎಲ್ಲೆಡೆ ಬಳಸಲಾಗುತ್ತಿದೆ. ಮೊದಮೊದಲು ಚೈನೀಸ್ ಮೂಲದ ಪದಗಳನ್ನು ಬರೆಯುವಾಗ ಹಂಜವನ್ನು ಹಂಗುಲ್ ನಡುವೆ ಹೇರಳವಾಗಿ ಬಳಸಲಾಗುತ್ತಿತ್ತಾದರೂ ಇಂದು ಅದರ ಬಳಕೆ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ"[೪೫] ಎಂಬ ಮಾತು ಲಿಪಿ ಸುಧಾರಣೆಯಲ್ಲಿ ಕೊರಿಯಾದಲ್ಲಿ ಬದಲಾವಣೆಯಾಗಿರುವುದಕ್ಕೆ ಸಾಕ್ಷಿಯಾಗಿದೆ. ಮುಖ್ಯವಾಗಿ ಪಾರಂಪರಿಕವಾಗಿ ಬಳಕೆಯಾಗುತ್ತಿದ್ದ ಲಿಪಿಯನ್ನು ಹೊರತುಪಡಿಸಿ ಹಂಗುಲ್ ಲಿಪಿಯನ್ನೇ ಬಳಸುತ್ತಿರುವುದು ಭವಿಷ್ಯದ ಲಿಪಿ ಸುಧಾರಕರಿಗೆ ಆಶಾದಾಯಕ ಬೆಳವಣಿಗೆ ಎನಿಸುತ್ತದೆ.

ಅಂತರ್ಜಾಲದಲ್ಲೂ ಹಂಗುಲ್ ಲಿಪಿ ಬಳಕೆಯಾಗುತ್ತಿದೆ. ಕೇವಲ ೨೪ ಅಕ್ಷರಗಳ ಹಂಗುಲ್ ಲಿಪಿಯ ಕೀಬೋರ್ಡ್‌ಗಳನ್ನು ಕೂಡ ಕೊರಿಯಾದಲ್ಲಿ ಬಳಸಲಾಗುತ್ತಿದೆ. ಈ ಮೂಲಕ ಮಧ್ಯಕಾಲದ ಲಿಪಿ ಸುಧಾರಣೆಯ ಪ್ರಯೋಗ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಆಧುನಿಕೋತ್ತರ ಯುಗದಲ್ಲೂ ಸಮರ್ಥವಾಗಿ ಬಳಕೆಯಾಗುತ್ತಿದೆ.

ಲಿಪಿ ಸುಧಾರಣೆ ಮೂಲಕ ಕೊರಿಯಾದಲ್ಲಿ ಸಾಮಾಜಿಕ ಕ್ರಾಂತಿಗೆ ಕಾರಣನಾದ ಎಂಬ ಕಾರಣಕ್ಕಾಗಿ ಸೆಜೋಂಗ್‌ಗೆ ದ ಗ್ರೇಟ್ (ಮಹಾಶಯ) ಬಿರುದು ನೀಡಲಾಗಿದೆ ಎಂದು 'ಹಂಗುಲ್ ಲಿಪಿ – ನುಡಿಯರಿಮೆಯ ತಳಹದಿಯ ಮೇಲೆ ಸಾಮಾಜಿಕ ಕ್ರಾಂತಿ' ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಕೊರಿಯನ್ನರು ಸೆಜೋಂಗ್ "ಕಟ್ಟಿ ಹೊರತಂದ ಹಂಗುಲ್ ಲಿಪಿಯನ್ನು ತಮ್ಮ ನಾಡಿನ ಹೆಮ್ಮೆಯೆಂದು ಕಾಣುತ್ತಾರೆ. ಪ್ರತಿ ವರುಶ ಅಕ್ಟೋಬರ್ ೯ರಂದು (ಇದೇ ದಿನ ೧೪೪೬ರಲ್ಲಿ 'ಹನ್ಮಿನ್ಜಿಯೋಂಗೆಯಮ್' ಎಂಬ ಹೊತ್ತಗೆಯ ಮೂಲಕ ಸೆಜೋಂಗ್ ಹಂಗುಲ್ ಲಿಪಿಯನ್ನು ಬಳಸುವುದಾಗಿ ಪ್ರಸ್ತಾಪಿಸಿದನಂತೆ) 'ಹಂಗುಲ್ ದಿನ' ಆಚರಿಸಲಾಗುತ್ತದೆ. ಇದು ಹಂಗುಲ್ ಲಿಪಿಯ ಹಿಂದಿನ ಅರಿಮೆಯನ್ನು ಮತ್ತು ಕೊರಿಯನ್ನರ ಬೇರ್ಮೆಯನ್ನು, ಜಗತ್ತಿಗೇ ಸಾರಿ ತಿಳಿಸುವ ನಾಡ ಹೆಮ್ಮೆಯ ದಿನವಾಗಿ ಹೊಮ್ಮಿದೆ"[೪೬] ಎಂದು ಸಂದೀಪ್ ಅವರು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿನಲ್ಲಿ ಲಿಪಿ ಸುಧಾರಣೆಯ ನಿಟ್ಟಿನಲ್ಲಿ ಕೊರಿಯಾದ ರಾಜನಿಗೆ ಅಪಾರ ಮನ್ನಣೆ ಸಿಕ್ಕಿದೆ. ಇದೇ ಕಾರಣದಿಂದಾಗಿ ಆತ ಜನಮಾನಸದಲ್ಲಿ ಇಂದಿಗೂ ನೆನಪಿನಲ್ಲಿ ಉಳಿದಿದ್ದಾನೆ.

೪.೯. ಕನ್ನಡದಲ್ಲಿ ನಡೆದ ಲಿಪಿ ಸುಧಾರಣೆ ಯತ್ನಗಳು

ಡಿ. ಎನ್. ಶಂಕರ ಬಟ್ಟರು ಕನ್ನಡ ಲಿಪಿ ಸುಧಾರಣೆ ಕುರಿತ ಚಿಂತನೆಗೆ ಪೂರಕವಾಗಿ ೧೯೩೦ರ ಕಾಲದಲ್ಲೇ ಕೆಲವು ಆರಂಭಿಕ ಯತ್ನಗಳು ನಡೆದಿದ್ದವು. ಅದರಲ್ಲೂ ಮುಖ್ಯವಾಗಿ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂದು ಕರೆಯಲ್ಪಡುವ ಕನ್ನಡ ಸಾಹಿತ್ಯ ಪರಿಷತ್ತೇ ಇದರ ನೇತೃತ್ವ ವಹಿಸಿರುವುದು ಗಮನಾರ್ಹ ಸಂಗತಿ. ಈ ಕುರಿತು ಬಿ. ಎಂ. ಶ್ರೀಕಂಠಯ್ಯನವರ ಅಭಿಪ್ರಾಯ ಹೀಗಿದೆ: "ಕನ್ನಡದ ಬಾವುಟ ಎಂಬ ಕವಿತೆಯ ಅಚ್ಚಿನ ವಿಷಯದಲ್ಲಿ ಒಂದು ಮಾತು. ಕನ್ನಡ ಬರವಣಿಗೆಯಲ್ಲಿ ಈಗಿರುವ ಅಕ್ಷರ ಸಂಯೋಜನೆಯ ಕ್ರಮ ಹಲವು ದೃಷ್ಟಿಗಳಿಂದ ಅದರಲ್ಲಿಯೂ ಮುದ್ರಣ ದೃಷ್ಟಿಯಿಂದ ಬಲು ತೊಡಕಾದ್ದೆಂದೂ, ಯಾವ ರೀತಿಯಲ್ಲಾದರೂ ಕೊಂಚಮಟ್ಟಿಗಾದರೂ ತೊಡಕು ಬಿಡಿಸಿ ಸರಳ ಮಾಡಬೇಕೆಂದೂ ಹಲವರು ಅಭಿಪ್ರಾಯಪಟ್ಟು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ ಆಗಬೇಕಾದ ಮಾರ್ಪಾಟುಗಳ ಪರ್ಯಾಲೋಚನೆಯನ್ನು ಆ ಸಮಿತಿಗೆ ವಹಿಸಿದರು"[೪೭] ಎನ್ನುತ್ತಾರೆ. ಮೇಲಿನ ಮಾತುಗಳ ಪ್ರಕಾರ, ೧೯೩೦ಕ್ಕೂ ಪೂರ್ವದಲ್ಲೇ ಕನ್ನಡ ಬರಹದ ಭಾಷೆಯಲ್ಲಿರುವ ಸಮಸ್ಯೆಗಳ ಕುರಿತು ಕೆಲವರಿಗೆ ಸುಧಾರಣೆಯ ಅಗತ್ಯ ಇದೆ ಎಂದು ಮನದಟ್ಟು ಮಾಡಿಕೊಂಡಿದ್ದ ಸಂಗತಿ ಸ್ಪಷ್ಟವಾಗುತ್ತದೆ. ಬಿ. ಎಂ. ಶ್ರೀಯವರ ಪ್ರಕಾರ, ಕನ್ನಡ ಬರಹವನ್ನು ಆಧುನಿಕ ಮಾಧ್ಯಮಕ್ಕೆ ಒಗ್ಗಿಸಲು ಆಗಲೇ ಅನೇಕರು ಪ್ರಯತ್ನ ಆರಂಭಿಸಿದ್ದಾರೆ. ಅದರಲ್ಲೂ ಕನ್ನಡವನ್ನು ಮುದ್ರಣ ಮಾಧ್ಯಮಕ್ಕೆ ಸಜ್ಜುಗೊಳಿಸುವ ಕುರಿತು ಚಿಂತನೆ ಆ ಕಾಲಕ್ಕೆ ಆರಂಭವಾಗಿದೆ. ಅಲ್ಲದೇ, ಅಂದಿನ ಕನ್ನಡದಲ್ಲಿದ್ದ ಸಮಸ್ಯೆ ಎಂದು ಅನಿಸಿದ ಅಕ್ಷರಗಳಿಗೆ ತಿದ್ದುಪಡಿಗೆ ಸಮಿತಿಯನ್ನೂ ರಚಿಸಿರುವ ಕುರಿತು ಬಿ. ಎಂ. ಶ್ರೀಕಂಠಯ್ಯನವರು ಉಲ್ಲೇಖಿಸಿದ್ದಾರೆ.

ಬಿ. ಎಂ. ಶ್ರೀಕಂಠಯ್ಯನವರ ಪ್ರಕಾರ, "ಆ ಸಮಿತಿ ಚರ್ಚೆಗಳನ್ನು ನಡಸಿ ಕೆಲವು ತೀರ್ಮಾನಗಳಿಗೆ ಬಂತು. ಅದು ಸೂಚಿಸಿದ ಕೆಲವು ಮಾರ್ಪಾಟುಗಳನ್ನು ಇಲ್ಲಿ ಬಳಕೆಗೆ ತಂದಿದೆ ಮುಖ್ಯವಾಗಿ ಮಾಡಿರುವ ಮಾರ್ಪಾಟುಗಳು ಮೂರು: (i) ದೀರ್ಘ ಚಿಹ್ನೆಯನ್ನು ಎಲ್ಲ ಕಡೆಯೂ ಒಂದೇ ರೀತಿ ಬರೆಯುವುದು–ಆ=ಅೀ, ಬಾ=ಬೀ, ಕೂ=ಕುೀ: (ii) ಒತ್ತಕ್ಷರಗಳನ್ನು ಬಿಡಿಸಿ ಪಕ್ಕದಲ್ಲಿ ಬರೆಯುವುದು– ಕನ್ನಡ=ಕನ್‌ನಡ, ಶ್ರೀ=ಶ್ ರೀ: (iii) ಎಲ್ಲಾ ಮಹಾಪ್ರಾಣ ಚಿಹ್ನೆಗಳನ್ನೂ ಅಲ್ಪಪ್ರಾಣ ಚಿಹ್ನೆಗಳ ಹೊಕ್ಕಳು ಸೀಳಿಯೇ ಮಾಡಿಕೊಳ್ಳುವುದು– ಛ=ಚ; ಭ=ಬ. ಈ ಸಣ್ಣ ಮಾರ್ಪಾಟುಗಳನ್ನು ತಾಳ್ಮೆಯಿಂದಲೂ, ದೂರದೃಷ್ಟಿಯಿಂದಲೂ ನೋಡಿ ಎಲ್ಲರೂ ಒಪ್ಪಿಕೊಂಡು ಆದಷ್ಟು ಬೇಗ ಬಳಕೆಗೆ ತಂದರೆ ಎಳೆಯ ಮಕ್ಕಳ ಹೊರೆ, ಅಚ್ಚುಕೂಟಗಳ ತೊಡಕು ಅರ್ಧಕ್ಕರ್ಧ ಕಡಮೆಯಾಗುವುದೆಂದು ನಂಬಿದ್ದೇನೆ"[೪೮] ಎನ್ನುತ್ತಾರೆ. ಒಟ್ಟಿನಲ್ಲಿ ಕನ್ನಡದ ಬರಹ ರೂಪದಲ್ಲಿ ಮಾರ್ಪಾಡಾಗಬೇಕು ಎಂಬ ಕೂಗು ಇಂದು ನಿನ್ನೆಯದಲ್ಲ ಎನ್ನುವುದು ಮೇಲಿನ ವಿಚಾರಗಳಿಂದ ಸ್ಪಷ್ಟವಾಗುತ್ತದೆ. ಅದರಲ್ಲೂ ಎಳೆಯ ಮಕ್ಕಳ ಹೊರೆ ಮತ್ತು ಅಚ್ಚುಕೂಟದ ತೊಡಕುಗಳ ಪೈಕಿ ಅರ್ಧದಷ್ಟು ಸಮಸ್ಯೆ ನಿವಾರಣೆಯಾಗುವ ನಂಬಿಕೆ ಸ್ವತಃ ಬಿ. ಎಂ. ಶ್ರೀಕಂಠಯ್ಯನವರಿಗೆ ಇತ್ತು ಎಂಬ ಸಂಗತಿ ಕೂಡ ಮೇಲಿನ ಉಲ್ಲೇಖದಲ್ಲಿ ಸ್ಪಷ್ಟವಾಗಿದೆ. ಆದರೆ, ೧೯೩೮ರ ಈ ಪ್ರಸ್ತಾವನೆಯನ್ನು ಕನ್ನಡದಲ್ಲಿ ಪುರಸ್ಕರಿಸಿರುವುದಕ್ಕೆ ಯಾವುದೇ ಸಾಕ್ಷಿಗಳು ಸಿಗುವುದಿಲ್ಲ.

ಆದರೆ, ಮೇಲಿನ ಮಾರ್ಪಾಡುಗಳಿಗೆ ಪೂರಕವಾಗಿ ಬಿ.ಎಂ.ಶ್ರೀ.ಯವರೇ ಒಂದು ಕವಿತೆಯನ್ನು ಹೊಸ ಬರಹದಲ್ಲಿ ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ಅವರು ಸಂಪಾದಿಸಿರುವ ಕನ್ನಡದ ಬಾವುಟ ಶಾಸನ, ಹಳಗನ್ನಡ, ನಡುಗನ್ನಡ, ಕನ್ನಡ–ಸಕ್ಕದ, ಜಾನಪದ, ನವೋದಯ ಕವಿಗಳ ಪ್ರಾತಿನಿಧಿಕ ಕೃತಿಯಾಗಿದ್ದು, ಇದರಲ್ಲಿ ಕನ್‌ನಡದ ಬಾವುಟ ಶೀರ್ಷಿಕೆಯ ಕವಿತೆಯಲ್ಲಿ ಸಮಿತಿ ಸೂಚಿಸಿದ ಮಾರ್ಪಾಡುಗಳನ್ನು ಪಾಲಿಸಿದ್ದಾರೆ. ಇದರಲ್ಲಿ ಶೀರ್ಷಿಕೆ ಹೊರತುಪಡಿಸಿ ೭೯, ಶೀರ್ಷಿಕೆ ಸಹಿತ ೮೦ ಸಾಲುಗಳುಳ್ಳ ಕನ್‌ನಡದ ಬೀವುಟ ಹೆಸರಿನ ದೀರ್ಘ ಕವಿತೆಯಲ್ಲಿ ಕನ್ನಡ ಬರಹ ಪರಿಷ್ಕರಣ ಸಮಿತಿ ನೀಡಿದ ಸೂಚನೆಗಳನ್ನು ಪಾಲಿಸಲಾಗಿದೆ.

"ಎೀರಿಸಿ, ಹೀರಿಸಿ, ಕನ್‌ನಡದ ಬೀವುಟ!

ಒೀಹೊಕನ್‌ನಡದ ನೀಡು. ಅಹೀಕನ್‌ನಡ ನುಡಿ!

ಹೀರಿಸಿ, ತೋೀರಿಸಿ. ಕೆಚ್‌ಚೆದೆಯ ಬೀವುಟ!

ಗೀಳಿಯಲಿ ಫಟಪಟ, ದೀಳಿಯಲಿ ಚಟಚಟ,

ಉರಿಯಿತೋೀ ಉರಿಯಿತು ಹಗೆಯ ಹಟ ಮನೆ ಮಟ,

ಹೀಳ್ ಹೀಳ್ ಸುರಿಯಿತು ಹಗೆಯ ಜೀಡಕ್‌ಕಟ!

ಬೀಳ್ ಕನ್‌ನಡ ತೀಯ್!

ಬೀಳ್ ಕನ್‌ನಡ ತೀಯ್!

ಅೀಳ್ ಕನ್‌ನಡ ತೀಯ್!

ಕನ್‌ನಡಿಗರೊಡತಿ ಒೀ ರೀಜೀಶ್‌ವರೀ![೨೯]

ಸಮಿತಿ ಸೂಚಿಸಿದಂತೆ ಬಿ.ಎಂ.ಶ್ರೀ. ಕೊಟ್ಟ ಮಾದರಿ	**ಅಂದಿನ ಕನ್ನಡ ರೂಪ**
ಬೀಳ್ ಕನ್‌ನಡ ತೀಯ್!	ಬಾಳ್ ಕನ್ನಡ ತಾಯ್!
ಏೀಳ್ ಕನ್‌ನಡ ತೀಯ್!	ಏಳ್ ಕನ್ನಡ ತಾಯ್!
ಅೀಳ್ ಕನ್‌ನಡ ತೀಯ್!	ಆಳ್ ಕನ್ನಡ ತಾಯ್!
ಕನ್‌ನಡಿಗರೊಡತಿ ಒೀ ರೀಜೀಶ್‌ವರೀ!	ಕನ್ನಡಿಗರೊಡತಿ ಓ ರಾಜೇಶ್ವರಿ!

ಈ ಕವಿತೆಯಲ್ಲಿ ಕೆಲವು ಮಾರ್ಪಾಡುಗಳನ್ನು ಬಿ. ಎಂ. ಶ್ರೀ.ಯವರು ತರಲು ಪ್ರಯತ್ನಿಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಆ, ಒತ್ತಕ್ಷರ, ್ರ, ೃ ಮೊದಲಾದವುಗಳನ್ನು ಬಳಸದೆ ಕನ್ನಡವನ್ನು ಬರೆಯುವ ಮಾದರಿಯೊಂದನ್ನು ನೀಡಿದ್ದಾರೆ.

ಬಿ.ಎಂ. ಶ್ರೀ. ತಂದ ಮಾರ್ಪಾಡು	**ಚಾಲ್ತಿಯಲ್ಲಿದ್ದ ಬರಹ**
ರಾಜರ ವಂಶದಲ್ಲಿ ಮಾಡಿರುವ ಮಾರ್ಪಾಡುಗಳು	
ಮೌರ್‌ಯ	ಮೌರ್ಯ
ಕಳಚೂರ್‌ಯರು	ಕಳಚೂರ್ಯರು
ರಟ್‌ಟ್‌ರು	ರಟ್ಟರು
ಹೊಯ್ ಸಳರು	ಹೊಯ್ಸಳರು
ಯೀದವರು	ಯಾದವರು
ನಾಮಪದಗಳಲ್ಲಿ ಮಾಡಿರುವ ಮಾರ್ಪಾಟುಗಳು	
ವಿರೀಪಾಕ್‌ಷ	ವಿರೂಪಾಕ್ಷ
ರನ್‌ನನೋ	ರನ್ನನೋ
ಮೀಧವನೊ	ಮಾಧವನೋ
ಅಕ್‌ಕಮಹದೇವಿ	ಅಕ್ಕಮಹದೇವಿ
ನೀರಣಪ್ಪ	ನಾರಾಣಪ್ಪ
ಶ್‌ರೀ	ಶ್ರೀ[೩೦]

ಮೇಲಿನ ಕವಿತೆಯಲ್ಲಿ ಬಿ. ಎಂ. ಶ್ರೀಕಂಠಯ್ಯನವರು ಮಾಡಿರುವ ಪ್ರಯೋಗದಲ್ಲಿ ಮುಖ್ಯವಾಗಿ ತಮ್ಮ ಕಾವ್ಯನಾಮವನ್ನು ಕೂಡ ಹೊಸ ಮಾದರಿಯಲ್ಲಿ ಬರೆಯುವ ಮೂಲಕ ಮಾದರಿಯಾಗಿದ್ದಾರೆ. ಹೊಸ ಬರಹದಲ್ಲಿ ಕವಿತೆ ಬರೆಯುವುದಲ್ಲದೇ, ತಮ್ಮ ಕಾವ್ಯನಾಮವಾದ 'ಶ್ರೀ'ಯನ್ನು ಶ್ರೀ ಎಂದು ದಾಖಲಿಸಿದ್ದಾರೆ. ಈ ಮೂಲಕ ಕನ್ನಡದಲ್ಲಿ ೧೯೩೦ರ ಅವಧಿಯಲ್ಲೇ ಕನ್ನಡ ನುಡಿಯಲ್ಲಿ ಬದಲಾವಣೆಯಾಗಬೇಕು ಎಂಬ ದಿಸೆಯಲ್ಲಿ ಆರಂಭಿಕ ಯತ್ನ ನಡೆದಿದೆ. ಆದರೆ, ಕಾಲಾನಂತರದಲ್ಲಿ ಈ ಯತ್ನ ಹಿನ್ನೆಲೆಗೆ ಸರಿದಿದೆ. ಇದಕ್ಕೆ ಪ್ರಾಯಶಃ ಅಂದಿನ ಕನ್ನಡ ಬರಹಗಾರರು, ವಿಮರ್ಶಕರು, ಭಾಷಾ ವಿದ್ವಾಂಸರು ಶ್ರೀಯವರ ಪ್ರಯತ್ನವನ್ನು ಪುರಸ್ಕರಿಸದೇ ಇರುವುದೇ ಕಾರಣ ಎನ್ನಬಹುದು. ಇಂತಹ ಯತ್ನವನ್ನು ಬೆಂಬಲಿಸದೇ ಇರುವುದಕ್ಕೆ ಮತ್ತದೇ ಸಂಸ್ಕೃತದ ಮೇಲಿನ ವ್ಯಾಮೋಹವಲ್ಲದೇ ಮತ್ತಾವ ಬಲವಾದ ಕಾರಣವೂ ಪ್ರಾಯಶಃ ಇರಲಾರದು ಎನಿಸುತ್ತದೆ. ಆದರೆ, ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ಮಹತ್ವದ ಬದಲಾವಣೆಗಳು ನಡೆಯಲಿಲ್ಲ.

ಕರ್ನಾಟಕದಲ್ಲಿ ೧೯೩೦ರಲ್ಲಿ ಆರಂಭವಾದ ಈ ಚರ್ಚೆಗಳನ್ನು ಡಿ. ಎನ್. ಶಂಕರ ಬಟ್ಟರು ೨೦ನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತೊಮ್ಮೆ ಆರಂಭಿಸಿದರು. ಆದರೆ, ಬಿ. ಎಂ. ಶ್ರೀ. ಮತ್ತು ಅಂದಿನ ಸಮಿತಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟು, ಲಿಪಿ ಸುಧಾರಣೆ ನಿಟ್ಟಿನಲ್ಲಿ ಶಂಕರ ಬಟ್ಟರು ತೊಡಗಿದ್ದಾರೆ. ಇದೇ ಮಾದರಿಯಲ್ಲಿ ಲಿಪಿ ಸುಧಾರಣೆ ಕುರಿತು ಕನ್ನಡದಲ್ಲಿ ಕೂಡ ಚರ್ಚೆ ಆರಂಭವಾಗಿದೆ. ಇದಕ್ಕೆ ಡಿ. ಎನ್. ಶಂಕರ ಬಟ್ಟ, ಕೆ. ವಿ. ನಾರಾಯಣ ಮೊದಲಾದ ವಿದ್ವಾಂಸರು ದನಿಗೂಡಿಸಿದ್ದಾರೆ. ಇದರ ಮುಂದುವರೆದ ಭಾಗವಾಗಿ ಕನ್ನಡ ವಿಶ್ವವಿದ್ಯಾಲಯ ಬಸವರಾಜ ಕೋಡಗುಂಟಿಯವರ ಮಸ್ಕಿ ಕನ್ನಡದಾಗ ವಿಬಕ್ತಿ ರೂಪಗಳು ಎಂಬ ಕೃತಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮೇಟಿ ಮಲ್ಲಿಕಾರ್ಜುನ ಸಂಪಾದನೆಯ ತೆಂಕಣದ ನುಡಿಗಳು ಎಂಬ ಕೃತಿಗಳನ್ನು ಹೊಸ ಬರಹದ ರೂಪದಲ್ಲಿ ಪ್ರಕಟಿಸಿವೆ. ಇಂತಹ ಹೆಜ್ಜೆಗಳು ಕನ್ನಡ ಲಿಪಿ, ಪದ, ಅಕ್ಷರ ಕ್ರಾಂತಿಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಗಳಾಗಬಲ್ಲವು ಎನಿಸುತ್ತದೆ.

ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು ಎಂಬ ಪ್ರಬಂಧ ರಚನೆಗೆ ಪೂರಕವಾಗಿ ಜಗತ್ತಿನ ಆಯ್ದ ದೇಶಗಳಲ್ಲಿ ನಡೆದಿರುವ ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಈ ಅಧ್ಯಾಯದಲ್ಲಿ ಅಧ್ಯಯನ ನಡೆಸಲಾಗಿದೆ. ಲಿಪಿ ಸುಧಾರಣೆ ಮತ್ತು ಅಕ್ಷರ, ಪದ, ವ್ಯಾಕರಣಾಂಶಗಳಲ್ಲಿ ಪರಿವರ್ತನೆಯಾಗಬೇಕು ಎಂಬ ವಾದ ಕೇವಲ ಕನ್ನಡಕ್ಕೆ ಸೀಮಿತವಲ್ಲ ಎಂಬ ಸಂಗತಿಯನ್ನು ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಜಾಗತಿಕ ಮಟ್ಟದಲ್ಲಿ ನಡೆದ ನುಡಿ ಹೋರಾಟ ಮತ್ತು ಅವುಗಳ ಸಾಧಕ - ಬಾಧಕಗಳ ಆಧಾರದಲ್ಲಿ ಕನ್ನಡದಲ್ಲಿ ಕೂಡ ಭವಿಷ್ಯದ ಲಿಪಿ ಬದಲಾವಣೆಯ ಯತ್ನಗಳು ಮುನ್ನಡೆಯಬೇಕು ಎನಿಸುತ್ತದೆ.

ಉಲ್ಲೇಖಗಳು:

೧. https://nudikannada.wordpress.com/2015/08/17/%E0%B2%9A%E0%B3%80%E0%B2%A8%E0%B2%BE%E0%B2%A6%E0%B2%B2%E0%B3%8D%E0%B2%B2%E0%B2%BF-%E0%B2%A8%E0%B2%A1%E0%B3%86%E0%B2%A6-%E0%B2%B2%E0%B2%BF%E0%B2%AA%E0%B2%BF-%E0%B2%B8%E0%B3%81%E0%B2%A7%E0%B2%BE/

೨. ಅದೇ,

೩. ಅದೇ,

೪. ಅದೇ,

೫. ಅದೇ,

೬. ಅದೇ,

೭. ಅದೇ,

೮. ಅದೇ,

೯. ಅದೇ,

೧೦. ಅದೇ,

೧೧. https://nudikannada.wordpress.com/೨೦೧೫/೦೮/೧೯/%ಇ೦%ಃ೨%೦ಃ%ಇ೦%ಃ೨%ಃಈ%ಇ೦%ಃ೨%೦೮%ಇ೦%ಃ೩%೮ಆ%ಇ೨%೮೦%೮ಆ%ಇ೦%ಃ೨%ಃ೨%ಇ೦%ಃ೩%೮ಆ%ಇ೦%ಃ೨%೦ಈ%ಇ೦%ಃ೨%ಃಇ%ಇ೦%ಃ೨%೮೨%ಇ೦%ಃ೨%೦೧%ಇ೦%ಃ೨%ಃ೨%ಇ೦%ಃ೩%೮ಆ%ಇ೦%ಃ೨%ಃ೨%ಇ೦%ಃ೨%ಃಈ-%ಇ೦%ಃ೨%೦೮%ಇ೦%ಃ೨%೦೧%ಇ೦%ಃ೩%೮೬%ಇ೦%ಃ೨%೦೬-%ಇ೦%ಃ೨%೦೮%ಇ೦%ಃ೩%೮೧%ಇ೦%ಃ೨%೦೧/

೧೨. ಅದೇ,

೧೩. ಅದೇ,

೧೪. ಅದೇ,

೧೫. ಅದೇ,

೧೬. ಅದೇ,

೧೭. ಅದೇ,

೧೮. ಅದೇ,

೧೯. ಅದೇ,

೨೦. ಅದೇ,

೨೧. https://nudikannada.wordpress.com/2017/04/14/
%E0%B2%B0%E0%B2%B7%E0%B3%8D%E0%B2%AF%E0%B2%BE%E0%B2%A6%E0%B2%B2%E0%B3%8D%E0%B2%B2%E0%B2%BF-
%E0%B2%A8%E0%B2%A1%E0%B3%86%E0%B2%A6-
%E0%B2%B2%E0%B2%BF%E0%B2%AA%E0%B2%BF-
%E0%B2%B8%E0%B3%81%E0%B2%A7/

೨೨. ಅದೇ,

೨೩. ಅದೇ,

೨೪. ಅದೇ,

೨೫. ಅದೇ,

೨೬. ಅದೇ,

೨೭. ಅದೇ,

೨೮. ಅದೇ,

೨೯. ಅದೇ,

೩೦. ಅದೇ,

೩೧. https://nudikannada.wordpress.com/2017/05/08/
%E0%B2%9C%E0%B2%B0%E0%B3%8D%E0%B2%AE%E0%B2%A8%E0%B3%8D-
%E0%B2%A8%E0%B3%81%E0%B2%A1%E0%B2%BF%E0%B2%AF%E0%B2%B2%E0%B3%8D%E0%B2%B2%E0%B2%BF-
%E0%B2%A8%E0%B2%A1%E0%B3%86%E0%B2%A6-
%E0%B2%B2%E0%B2%BF/

೩೨. ಅದೇ.

೩೩. ಅದೇ,

೩೪. ಅದೇ,

೩೫. ಅದೇ,

೩೬. ಅದೇ,

೩೭. ಅದೇ,

೩೮. ಅದೇ,

೩೯. ಅದೇ,

೪೦. https://nudikannada.wordpress.com/2015/07/21/%E0%B2%B9%E0%B2%82%E0%B2%97%E0%B3%81%E0%B2%B2%E0%B3%8D-%E0%B2%B2%E0%B2%BF%E0%B2%AA%E0%B2%BF-%E0%B2%A8%E0%B3%81%E0%B2%A1%E0%B2%BF% E0%B2%AF%E0%B2%B0%E0%B2%BF%E0%B2%AE%E0%B3%86%E0%B2%AF/

೪೧. ಅದೇ,

೪೨. ಅದೇ,

೪೩. ಅದೇ,

೪೪. ಅದೇ,

೪೫. ಅದೇ,

೪೬. ಅದೇ,

೪೭. ಬಿ.ಎಂ.ಶ್ರೀ., ೨೦೧೭, ಕನ್ನಡದ ಬಾವುಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಪು. Vi

೪೮. ಅದೇ,

೪೯. ಪು. Vii

೫೦. ಅದೇ, ಪು. viii, xi

ಅಧ್ಯಾಯ ಐದು

ಆಧುನಿಕೋತ್ತರ ಭಾಷಿಕ ಬಿಡುಗಡೆಯ ಚಿಂತನೆಗಳು

ಕನ್ನಡ ಬರಹ ಮತ್ತು ಆಡುನುಡಿಯಲ್ಲಿರುವ ವ್ಯತ್ಯಾಸಗಳ ಕುರಿತು ಡಿ. ಎನ್. ಶಂಕರ ಬಟ್ಟರು ನಿರಂತರವಾದ ಅಧ್ಯಯನದಲ್ಲಿ ತೊಡಗಿದ್ದಾರೆ. ಅವರ ಕೃತಿಗಳಲ್ಲಿ ಕನ್ನಡ ನುಡಿಯಲ್ಲಿ ಸಂಸ್ಕೃತ ಭಾಷೆಯ ಅಕ್ಷರ, ಪದ, ವ್ಯಾಕರಣಾಂಶಗಳು ಬಳಕೆಯಲ್ಲಿವೆ ಹಾಗೂ ಅವುಗಳ ಬಳಕೆಯ ಅಗತ್ಯವಿಲ್ಲ ಎಂದು ಹಲವು ಪ್ರಮೇಯಗಳನ್ನು ಮಂಡಿಸಿದ್ದಾರೆ. ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ನುಡಿ ಮತ್ತು ಸಂಸ್ಕೃತ ಭಾಷೆಗಳ ನಡುವೆ ಇರುವ ವ್ಯತ್ಯಾಸವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರೊಂದಿಗೆ ಕೆ. ವಿ. ನಾರಾಯಣ ಮೊದಲಾದವರು ಸಂಸ್ಕೃತದ ಹಾವಳಿಯಿಂದ ಕನ್ನಡ ಭಾಷೆಯ ಬಿಡುಗಡೆ ಕುರಿತು ನಡೆಸಿರುವ ಚರ್ಚೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

೫.೧. ಡಿ.ಎನ್.ಶಂಕರ ಬಟ್‌ರವರ ಭಾಷಿಕ ಬಿಡುಗಡೆಯ ಚಿಂತನೆಗಳು

ಕಾಲಾನುಕ್ರಮದಲ್ಲಿ ಡಿ.ಎನ್.ಶಂಕರ ಬಟ್‌ರವರು ಭಾಷೆ ಕುರಿತು ಬೆಳೆಸಿದ ಚರ್ಚೆಗಳಲ್ಲಿ ಭಾಷಿಕ ಬಿಡುಗಡೆಯ ಸಾಧ್ಯತೆಗಳ ಶೋಧಗಳು ಗಮನಾರ್ಹವಾಗಿವೆ. ಅವರ ಕೃತಿಗಳಾದ 'ಕನ್ನಡ ಭಾಷೆಯ ಸಂಕ್ಷಿಪ್ತ ಚರಿತ್ರೆ'(೧೯೭೯) ಹಾಗೂ ಈ ಕೃತಿಯ ಪರಿಷ್ಕೃತ ಮುದ್ರಣವಾದ 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ'(೧೯೯೫), 'ಕನ್ನಡ ಪದಗಳ ಒಳರಚನೆ' (೧೯೯೯), 'ಬಾಶೆಯ ಬಗೆಗೆ ನೀವೇನು ಬಲ್ಲಿರಿ?'(೨೦೦೨), 'ಕನ್ನಡದ ಸರ್ವನಾಮಗಳು'(೨೦೦೩), 'ಕನ್ನಡ ಬರಹವನ್ನು ಸರಿಪಡಿಸೋಣ!'(೨೦೦೫), 'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?'(೨೦೦೫), 'ಕನ್ನಡ ವಾಕ್ಯಗಳ ಒಳರಚನೆ' (೨೦೦೬), 'ಕನ್ನಡ ನುಡಿಯ ಬಗೆಗೆ ಚಿಂತನೆ'(೨೦೦೬), 'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ'(೨೦೦೬), 'ಕನ್ನಡ ನುಡಿ ನಡೆದು ಬಂದ ದಾರಿ'(೨೦೦೭), 'ಮಾತಿನ ಒಳಗುಟ್ಟು'(೨೦೦೮), 'ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು'(೨೦೦೮), 'ಕನ್ನಡ ವ್ಯಾಕರಣ ಯಾಕೆ ಬೇಕು?'(೨೦೦೯), 'ಭಾಷೆಯ ಬಗೆಗೆ ನೀವೇನು ಬಲ್ಲಿರಿ?'(೨೦೧೦), 'ಕನ್ನಡ ಬರಹದ ಸೊಲ್ಲರಿಮೆ – ೧'(೨೦೧೦), 'ಕನ್ನಡ ಬರಹದ ಸೊಲ್ಲರಿಮೆ – ೨'(೨೦೧೧), ೩, ೪, ೫, ೬ 'ಮಾತು ಮತ್ತು ಬರಹದ ನಡುವಿನ ಗೊಂದಲ'(೨೦೧೧), ಮತ್ತು 'ಹವ್ಯಕ ಕನ್ನಡ'

ಮುಂತಾದ ಕೃತಿಗಳಲ್ಲಿ ಹಾಗೂ ಅವರ ಇತ್ತೀಚಿನ ಬರಹಗಳಲ್ಲಿ ಕನ್ನಡ ಭಾಷೆಯಲ್ಲಿ ಸಂಸ್ಕೃತದ ವ್ಯಾಕರಣ, ಪದಸಂಪತ್ತು, ಮಹಾಪ್ರಾಣಗಳು, ಭಾಷಿಕ ರಚನೆ ಮೊದಲಾದವುಗಳಲ್ಲಿ ಇಂದಿಗೂ ಮುಂದುವರಿದಿರುವ ಸಂಸ್ಕೃತದ ಪ್ರಭಾವವನ್ನು ಕುರಿತು ಆಳವಾಗಿ ಚಿಂತಿಸಿದ್ದಾರೆ.

ಸಂಸ್ಕೃತ ಭಾಷೆಯ ಹಿಡಿತದಿಂದ ಬಿಡುಗಡೆಯ ಹಾದಿಗಳನ್ನು ತೋರುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಸಂಸ್ಕೃತದ ಪದಗಳ ಬದಲಿಗೆ ಕನ್ನಡದ ಸಾಧಿತ ರೂಪಗಳನ್ನು ಪದ, ವಾಕ್ಯ, ಪದ ಸಮುಚ್ಚಯಗಳನ್ನು ಬಳಸುವ ಪ್ರಯೋಗವೊಂದನ್ನು ಮಂಡಿಸುತ್ತಿದ್ದಾರೆ. ಹಾಗೆಯೇ ಅವರ ಪುಸ್ತಕಗಳ ಹೆಸರುಗಳಲ್ಲಿಯೂ ಕನ್ನಡದ ಸಾಧಿತರೂಪಗಳ ಬಳಕೆಯನ್ನು ಹಾಗೂ ಕನ್ನಡ ಲಿಪಿಯಲ್ಲಿ ಸಂಸ್ಕೃತ ಶಬ್ದಗಳಿಂದ ನಡೆಯಬೇಕಾದ ಬಿಡುಗಡೆಯ ಪ್ರಯತ್ನವನ್ನು ಕಾಣಬಹುದು.

ಕನ್ನಡ ಭಾಷೆಯ ಕಲ್ಪಿತ ಚರಿತ್ರೆ ಕೃತಿ ಕನ್ನಡ ಭಾಷಾ ಅಧ್ಯಯನ ಕ್ಷೇತ್ರದಲ್ಲಿ ಹೊಸ ಹಾದಿಯನ್ನು ಹುಡುಕುವ ಪ್ರಯತ್ನವನ್ನು ನಡೆಸುತ್ತದೆ. ಕನ್ನಡ ಭಾಷೆಯ ಕಲ್ಪಿತ ಚರಿತ್ರೆಯನ್ನು ಕಟ್ಟುವ ಪ್ರಯತ್ನವನ್ನು ಈಗಾಗಲೆ ಈ ಹಿಂದಿನ ಅಧ್ಯಯನಕಾರರು ಕೆಲವು ಊಹೆಗಳ ಮೇಲೆ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಅನೇಕ ಸಿದ್ಧಾಂತಗಳನ್ನು ಕಟ್ಟುವ ಪ್ರಯತ್ನ ನಡೆದಿದೆ. ದ್ರಾವಿಡ ಭಾಷೆಯ ಮೂಲವನ್ನು ಕುರಿತು ಬಿ.ಎಂ.ಶ್ರೀ.ಯವರು ಹೀಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ: "ಬಂಗಾಳಿ, ಹಿಂದಿ, ಗುಜರಾತಿ ಮೊದಲಾದ ಉತ್ತರ ಇಂಡಿಯದ ಭಾಷೆಗಳಿಗೆ ಸಂಸ್ಕೃತ ಭಾಷೆಯು ಮಾತೃಭಾಷೆಯಾಗಿರುವಂತೆ ಕನ್ನಡ, ತೆಲುಗು, ತಮಿಳು ಮೊದಲಾದ ದಕ್ಷಿಣ ಇಂಡಿಯದ ಭಾಷೆಗಳಿಗೂ ಮಾತೃಭಾಷೆಯೊಂದಿತ್ತಷ್ಟೆ. ಅದನ್ನು ಮೂಲದ್ರಾವಿಡವೆಂದು ಕರೆಯಬಹುದು. ಆ ಮೂಲದ್ರಾವಿಡ ಭಾಷೆಯ ಸ್ವರೂಪವೇನು, ಅದು ಯಾವಾಗ ಕವಲೊಡೆದು ಬೇರೆಬೇರೆ ಭಾಷೆಗಳಾಗಿ ಪರಿಣಮಿಸಿತು ಎಂಬುದನ್ನು ಸ್ಪಷ್ಟವಾಗಿ ನಿರ್ಧರಿಸುವುದಕ್ಕೆ ಯಾವ ಆಧಾರಗಳೂ ಈಗ ಇಲ್ಲ. ಆದರೆ ಕನ್ನಡ, ತೆಲುಗು, ತಮಿಳು, ಮಲೆಯಾಳ ಇವುಗಳ ಗ್ರಾಂಥಿಕ ಭಾಷೆಗಳಿಗೆ ಈಗ ಇರುವ ಮತ್ತು ಹಿಂದೆ ಇದ್ದ ಹೋಲಿಕೆಯ ಆಧಾರದ ಮೇಲೆ ಅವುಗಳಲ್ಲಿ ಮೊದಲು ಯಾವುದು ಕವಲೊಡೆದು ಭಿನ್ನಭಾಷೆಯಾಯಿತು, ಆಮೇಲೆ ಯಾವುದು ಭಿನ್ನಭಾಷೆಯಾಯಿತೆಂಬುದನ್ನು ಊಹಿಸಬಹುದು."[೧]

ಇಂತಹ ಊಹೆಗಳಿಗೆ ಅಧ್ಯಯನಶೀಲ ಚೌಕಟ್ಟನ್ನು 'ಕನ್ನಡ ಭಾಷೆಯ ಕಲ್ಪಿತ ಚರಿತ್ರೆ' ಕೃತಿ ಒದಗಿಸಿಕೊಡುತ್ತದೆ. ಡಿ. ಎನ್. ಶಂಕರ ಬಟ್ಟರು ಕನ್ನಡ ಭಾಷೆಯ ಚರಿತ್ರೆಯನ್ನು ಎರಡು ವಿಧಾನಗಳೆಂದು ಕರೆಯುತ್ತಾರೆ.

೧. ಲಿಖಿತ ಚರಿತ್ರೆ – ಲಭ್ಯ ಭಾಷಿಕ ದಾಖಲೆಗಳನ್ನು ಆಧರಿಸಿದ್ದು.

೨. ಕಲ್ಪಿತ ಚರಿತ್ರೆ – ದ್ರಾವಿಡ ಭಾಷೆಗಳ ನಡುವೆ ಹೋಲಿಕೆ ಹಾಗೂ ಪ್ರಾದೇಶಿಕ ಉಪಭಾಷಾ ಅಧ್ಯಯನ (ತೌಲನಿಕ ಅಧ್ಯಯನ).

ಈ ಎರಡು ವಿಧಾನಗಳನ್ನೂ ಕನ್ನಡ ಭಾಷೆಯ ನಿಜವಾದ ಚರಿತ್ರೆಯೆಂತಹುದು ಎಂಬುದನ್ನು ಕಂಡುಹಿಡಿಯಲು ಪೂರಕವಾಗಿ ಬಳಸುವುದೇ ಅತ್ಯುತ್ತಮ ಎಂಬ ನಿರ್ಣಯಕ್ಕೆ ಬರುತ್ತಾರೆ. ಈ

ಮೂಲಕ ಸಂಬಂಧವನ್ನು ಕಂಡುಕೊಳ್ಳುವ ಮೂಲಕ ಮೂಲಕನ್ನಡಕ್ಕೂ ಕನ್ನಡದ ಆಧುನಿಕ ಪ್ರಭೇದಗಳಿಗೆ ಇರುವ ಕಲ್ಪಿತ ಚರಿತ್ರೆಯನ್ನು ಬರೆಯಬಹುದು ಎನ್ನುತ್ತಾರೆ. ನಂತರ ಈ ಎರಡು ವಿಧಾನಗಳ ಮಿತಿಗಳನ್ನು ಚರ್ಚಿಸುತ್ತಾರೆ. ಆ ನಂತರ ಈ ಎರಡೂ ವಿಧಾನಗಳ ಭಾಷಾ ಚರಿತ್ರೆಯ ರಚನೆಯ ಕೊರತೆಗಳನ್ನು ನಿವಾರಿಸಲು ಸಾಧ್ಯವೆನ್ನುತ್ತಾರೆ.[೨]

ಈ ಕೃತಿಯ ಹೊಸ ಸಾಧ್ಯತೆಗಳನ್ನು ಕುರಿತು ಕೆ.ವಿ.ನಾರಾಯಣ ಅವರು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ: “ಕನ್ನಡ ಭಾಷೆಯ ಕಲ್ಪಿತ ಚರಿತ್ರೆ ಈ ಪ್ರಶ್ನೆಗಳಲ್ಲಿ ಕೆಲವನ್ನು ಬಿಡಿಸಲು ಯತ್ನಿಸಿದೆ. ನಮ್ಮ ರೂಢಮೂಲ ಕನ್ನಡ ಭಾಷಾಚರಿತ್ರೆಯ ಕೆಲವು ರಚನೆಗಳನ್ನು ಇದು ಒಡೆಯುತ್ತದೆ. ಬೇರೆ ರೀತಿಯಲ್ಲಿ ಕಟ್ಟುವ ಸಾಧ್ಯತೆಯನ್ನು ಮುಂದಿಡುತ್ತದೆ. ನಮಗೆ ಲಭ್ಯವಿದ್ದ ಸಾಮಗ್ರಿಯನ್ನು ಈವರೆಗೆ ನೋಡದಿದ್ದ ನಿಟ್ಟಿನಲ್ಲಿ ಅಳವಡಿಸುವ ಪ್ರಯತ್ನ ಇಲ್ಲಿದೆ, ಹೀಗಾಗಿ ಇದು ಭಾಷಾ ಚರಿತ್ರೆ ರಚನೆಯ ವಿಧಾನಶಾಸ್ತ್ರಕ್ಕೂ ಹೊಸ ಕೊಡುಗೆಗಳನ್ನು ನೀಡಿದೆ.”[೩]

ಕನ್ನಡದ ಉಪಭಾಷಾ ಪ್ರಭೇದಗಳು, ಕನ್ನಡದ ಪ್ರಾಚೀನ ರೂಪಗಳು ಹಾಗೂ ದ್ರಾವಿಡ ಭಾಷಾ ಪರಿವಾರದ ತೌಲನಿಕ ಅಧ್ಯಯನವನ್ನು ಡಿ. ಎನ್. ಶಂಕರಬಟ್ಟರು ಈ ಕೃತಿಯಲ್ಲಿ ನಡೆಸಿದ್ದಾರೆ.

ಹಳಗನ್ನಡ	**ಹೊಸಗನ್ನಡ**
ಕರೆ (ಬರಹೇಳು)	ಕರೆ
ಕಱೆ (ಹಾಲುಕರೆ)	–
ಕಿರಿ (ಹಲ್ಲುಕಿರಿ)	ಕಿರಿ
ಕಿಱಿ (ಚಿಕ್ಕದು)	ಇತ್ಯಾದಿ

ಗುಲ್ಬರ್ಗದ ಕನ್ನಡ	**ಬರಹದ ಕನ್ನಡ**
ಕ್ಞತ್ತಿ	ಕತ್ತಿ
ಕತ್ತಿ	ಕತ್ತೆ
ಕ್ಞಲಿ	ಕಲಿ
ಬಳಿ	ಬಳೆ ಇತ್ಯಾದಿ

ಕನ್ನಡ	**ತೆಲುಗು**
ಮೆಲ್ಲ	ಮೆಲ್ಲ
ಮುಳ್ಳು	ಮುಲ್ಲು
ಹುಲಿ	ಪುಲಿ
ಚಳಿ	ಚಲಿ ಇತ್ಯಾದಿ[೪]

"ಭಾಷೆಯೊಂದರ ಚರಿತ್ರೆಯನ್ನು ಈ ರೀತಿ ಮೂಲಭಾಷೆಯೊಂದನ್ನು ಕಲ್ಪಿಸಿ ವಿವರಿಸುವ ಕ್ರಮ ಪಾಶ್ಚಾತ್ಯದೇಶಗಳಲ್ಲಿ ಬಹಳ ಹಿಂದಿನಿಂದಲೂ ಬಳಕೆಯಲ್ಲಿದೆ. ಆದರೆ, ಕನ್ನಡದಲ್ಲಿ ಈ ರೀತಿಯ ಸಂಶೋಧನೆ ನಡೆದಿರುವುದು ಬಹಳ ಕಡಿಮೆ. ಬರಹದ ಬೇರೆಬೇರೆ ರೂಪಗಳನ್ನು ಮಾತ್ರವೇ ಆಧರಿಸಿ ಭಾಷೆಯ ಚರಿತ್ರೆಯನ್ನು ಬರೆಯುವುದೇ ಕನ್ನಡದಲ್ಲಿ ಪ್ರಚಲಿತವಾಗಿರುವ ಮುಖ್ಯ ವಿಧಾನ. ಈ ಎರಡು ರೀತಿಯ ವಿಧಾನಗಳ ಗುಣಾವಗುಣಗಳನ್ನು ಈ ಪುಸ್ತಕದಲ್ಲಿ ವರ್ಣಿಸಲಾಗಿದೆ. ಮತ್ತು ಇವೆರಡು ಹೇಗೆ ಒಂದಕ್ಕೊಂದು ಪೂರಕವಾಗಬಲ್ಲುವೆಂಬುದನ್ನು ಸೂಚಿಸಲಾಗಿದೆ."[೫] ಈ ಮೇಲಿನ ಉದಾಹರಣೆಗಳ ಮೂಲಕ ಅಧ್ಯಯನ ನಡೆಸುವುದರಲ್ಲೂ ಇರುವ ಅನೇಕ ಮಿತಿಗಳನ್ನು ವಿವರಿಸುತ್ತಾರೆ.

ದ್ರಾವಿಡ ಕುಟುಂಬದ ಭಾಷೆಗಳು

ಮೂಲದ್ರಾವಿಡ

ಉತ್ತರ ದ್ರಾವಿಡ	**ಮಧ್ಯದ್ರಾವಿಡ**	**ದಕ್ಷಿಣದ್ರಾವಿಡ**
ಕುಡುಖ್(ಒರಾಂವೋ)	ಕುಯಿ	ಕನ್ನಡ
ಮಾಲ್ತೊ	ಕುವಿ	
	ಪೆಂಗು	
	ಗದಬ	
	ಕೋಲಾಮಿ	ತಮಿಳು
	ಕೊಂಡ	ಮಲಯಾಳಂ
ಕೊರಗ	ನಾಯ್ಕಿ	ತೊದ
	ಪರ್ಜಿ	ಕೋತ
	ಕೊಯ	ಬಡಗ
ಬ್ರಾಹುಈ	ಒಲ್ಲಾರಿ	ಕೊಡಗು
	ಗೋಂಡಿ	
	ತೆಲುಗು	
	ಮುಂಡ	ತುಳು

ಕನ್ನಡ ಭಾಷೆಯ ಕಲ್ಪಿತ ಚರಿತ್ರೆ ಕೃತಿ ಮುಖ್ಯವಾಗಿ ದ್ರಾವಿಡ ಭಾಷೆಗಳ ಕಲ್ಪಿತ ಚರಿತ್ರೆಗೆ ನಿರ್ದಿಷ್ಟ ಚೌಕಟ್ಟನ್ನು ಒದಗಿಸುತ್ತದೆ. ಈ ಕೃತಿಯಲ್ಲಿ ಕನ್ನಡ ಸೇರಿದಂತೆ ದ್ರಾವಿಡ ಭಾಷೆಗಳ ಮೂಲ, ಪ್ರಾಚೀನತೆ ಕುರಿತು ಅಧ್ಯಯನ ನಡೆಸಲಾಗಿದೆ. ಕರ್ನಾಟಕದಲ್ಲಿರುವ ಭಾಷಾ ಪ್ರಭೇದಗಳನ್ನೂ ಒಳಗೊಂಡಂತೆ ಸಂಸ್ಕೃತ, ತೆಲುಗು, ತಮಿಳು ಭಾಷೆಗಳಲ್ಲಿರುವ ಸಾಮ್ಯತೆ – ಭಿನ್ನತೆಗಳನ್ನು ಈ ಕೃತಿಯಲ್ಲಿ ಸಮಗ್ರವಾಗಿ ಅಧ್ಯಯನ ನಡೆಸಲಾಗಿದೆ. ದ್ರಾವಿಡ ಮತ್ತು ಸಂಸ್ಕೃತ ಭಾಷೆಗಳ ನಡುವಿನ ಪ್ರಾಯೋಗಿಕ ವ್ಯತ್ಯಾಸಗಳ ಅಧ್ಯಯನಕ್ಕೂ ಈ ಕೃತಿಯಲ್ಲಿ ಒತ್ತು ನೀಡಲಾಗಿದೆ. ಜೊತೆಗೆ, ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು, ತಮಿಳು, ಮಲಯಾಳಂ, ತುಳು ಮೊದಲಾದವುಗಳ ಭಾಷಾ ರಚನೆಯಲ್ಲಿರುವ ಸಾಮ್ಯತೆಗಳ ಕುರಿತು ಮಹತ್ವದ ವಿಚಾರಗಳನ್ನು ಚರ್ಚಿಸಲಾಗಿದೆ.

'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯಲ್ಲಿ ಕನ್ನಡ ಭಾಷೆಯು ಎದುರಿಸುತ್ತಿರುವ ಆತಂಕಗಳತ್ತ ಗಮನ ಸೆಳೆಯುವ ಶಂಕರಬಟ್ಟರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತಪಡಿಸುತ್ತಾರೆ:

"ಕನ್ನಡ ಬರಹ ಇವತ್ತು ಒಂದು ಸಂಧಿ ಕಾಲವನ್ನು ಎದುರಿಸುತ್ತಿದೆ. ಕರ್ನಾಟಕದ ನಗರಗಳಲ್ಲಿ ವಾಸಿಸುವ ಮೇಲ್ವರ್ಗದವರ ಮಕ್ಕಳಿಗೆಲ್ಲ ಈಗಾಗಲೇ ಅದು ಅನವಶ್ಯಕವಾಗಿದೆ. ಬರಹದ ಮೂಲಕ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯಲು ಸಾಧ್ಯವೋ ಅವನ್ನೆಲ್ಲ ಇಂಗ್ಲಿಷ್ ಬರಹದ ಮೂಲಕವೇನೆ ಅವರು ಈಗ ಪಡೆಯಬಲ್ಲವರಾಗಿದ್ದಾರೆ."[೨]

ಪ್ರಸ್ತುತ ನಗರದ ಯಾವ ವರ್ಗದವರಿಗೂ ಕನ್ನಡವನ್ನು ಹೊರತುಪಡಿಸಿಯೇ ಜೀವಿಸುವ ಅನೇಕ ಅವಕಾಶಗಳನ್ನು ಕಲ್ಪಿಸಬಲ್ಲ ಆಧುನಿಕತೆಯ, ಉದ್ಯೋಗಾವಕಾಶದ ಅನೇಕ ಸಾಧ್ಯತೆಗಳು ಹೆಚ್ಚಳವಾಗಿವೆ. ಆದ್ದರಿಂದ, ಇಂದು ಬೆಂಗಳೂರಿನಲ್ಲಿ ಕನ್ನಡ ಭಾಷೆಯು ಅನಿವಾರ್ಯವೆನಿಸುವ ವಾತಾವರಣವೇ ಇಲ್ಲವಾಗಿದೆ. ಈ ಬಗೆಯ ಬೆಳವಣಿಗೆಗಳು ಭಾಷೆಯ ಬಗೆಗೆ ದೂರಗಾಮಿಯಾಗಿ ಅನೇಕ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ.

"ನಮ್ಮ ಸಮಾಜದ ಉಳಿದ ಮಕ್ಕಳೂ ಇದೇ ದಾರಿಯನ್ನು ಹಿಡಿದಲ್ಲಿ ಕ್ರಮೇಣ ಕನ್ನಡ ಬರಹಕ್ಕೆ ಸಂಸ್ಕೃತ ಬರಹದ ಅವಸ್ಥೆಯೇ ಬಂದೀತು... ಈ ಸಂಧಿ ಕಾಲದಲ್ಲಿ ನಮ್ಮ ಸಮಾಜ ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎಂಬುದರ ಮೇಲೆ ಕನ್ನಡ ಬರಹದ ಅಳಿವು ಇಲ್ಲವೇ ಉಳಿವು ಅವಲಂಬಿಸಿದೆ ಎಂದು ನನಗೆ ತೋರುತ್ತದೆ."[೩] ಎನ್ನುತ್ತಾ, ಕನ್ನಡವನ್ನು ಆಧುನಿಕ ಸಂದರ್ಭದಲ್ಲಿ ಜನೋಪಯೋಗಿ ಭಾಷೆಯಾಗಿ ಬೆಳೆಸುವ ಅನೇಕ ಕ್ರಮಗಳನ್ನು ಮುಂದಿಡುತ್ತಾರೆ. ಭಾಷೆಯನ್ನು ಸಾರ್ವತ್ರಿಕಗೊಳಿಸುವ ಸಲುವಾಗಿ ಅನೇಕ ಕ್ರಮಗಳನ್ನು, ಆವಿಷ್ಕಾರಗಳನ್ನು ಶಂಕರಬಟ್ಟರು ಮಂಡಿಸುತ್ತಾರೆ.

ಜ್ಞಾನವನ್ನು ಎಲ್ಲರಿಗೂ ಹಂಚಬೇಕಾದ ಒಂದು ಸಾಧ್ಯತೆಯಾಗಿ ಬರಹವನ್ನು ಎಲ್ಲರ ಸ್ವತ್ತಾಗಿಸುವುದರ ಬಗ್ಗೆ ಅವರ ಅಭಿಪ್ರಾಯಗಳು ಹೀಗಿವೆ: **"ಕನ್ನಡ ಬರಹ ಮೇಲ್ವರ್ಗದವರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಸೊತ್ತಾಗಬೇಕು ಮತ್ತು ಕನ್ನಡ ಬರಹದ ಬಳಕೆಯ ಮೂಲಕ ಇವತ್ತು ಮೇಲ್ವರ್ಗದವರು ಮಾತ್ರವೇ ಪಡೆಯುತ್ತಿರುವ ಹಲವು ರೀತಿಯ ಪ್ರಯೋಜನಗಳನ್ನು ಎಲ್ಲಾ**

ವರ್ಗದ ಕನ್ನಡಿಗರೂ ಸಮಾನವಾಗಿ ಪಡೆಯುವ ಹಾಗಾಗಬೇಕು ಎಂಬ ಕಳಕಳಿಯಿಂದ ಈ ಪುಸ್ತಕವನ್ನು ಬರೆಯಲು ಹೊರಟಿದ್ದೇನೆ”[೯] ಎನ್ನುತ್ತಾರೆ.

ಶಂಕರ ಬಟ್ಟರ ಈ ವಿಚಾರಗಳು ಭಾಷೆಯ ಬಳಕೆ, ಪ್ರಯೋಗ, ಸಾಮಾಜಿಕ ಅಂತಸ್ತಿಗೆ ಸಂಬಂಧಿಸಿದಂತೆ ಬಳಕೆಯಲ್ಲಾಗುತ್ತಿರುವ ವ್ಯತ್ಯಾಸಗಳ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿವೆ. ಜೊತೆಗೆ ಮಹಾಪ್ರಾಣಾಕ್ಷರಗಳನ್ನು ಸ್ಪಷ್ಟವಾಗಿ ಉಚ್ಚರಿಸಲಾಗದ ಕಾರಣದಿಂದಾಗಿ ಭಾಷೆಯ ಬಳಕೆಗೆ ಹಿಂಜರಿಯುವ ಪ್ರವೃತ್ತಿಯನ್ನು ಕುರಿತು ಅವರು ಚಿಂತನೆ ನಡೆಸಿದ್ದಾರೆ. ಅಲ್ಲದೇ ಇದೇ ಕಾರಣಗಳಿಂದಾಗಿ ಸಾರ್ವಜನಿಕವಾಗಿ ಭಾಷೆಯನ್ನು ಸಂವಹನ, ಭಾಷಣಗಳಿಗೂ ಬಳಸದಿರುವ ಅನೇಕ ಸಮಸ್ಯೆಗಳನ್ನು ಪರಿಶೀಲಿಸುತ್ತಾರೆ. ಸ – ಶ, ಷ, ಅ – ಹ, ಮೊದಲಾದ ಅಕ್ಷರಗಳ ಸ್ಪಷ್ಟ ಉಚ್ಚಾರ ಸಾಧ್ಯವಾಗದ ಹಲವರು ಕನ್ನಡ ಭಾಷೆಯ ಬಳಕೆಯನ್ನೇ ನಿಲ್ಲಿಸುತ್ತಿದ್ದಾರೆ ಎಂಬ ಹಿನ್ನೆಲೆಯಲ್ಲಿ ಅವರು ಅಧ್ಯಯನ ನಡೆಸಿದ್ದಾರೆ.

ಡಿ. ಎನ್. ಶಂಕರ ಬಟ್ಟರು, ಕನ್ನಡ ಭಾಷೆಯು ಸಂಸ್ಕೃತವನ್ನು ಅನವಶ್ಯಕವಾಗಿ ಅನುಕರಿಸುತ್ತಿರುವುದಕ್ಕೆ ಹಾಗೂ ಕನ್ನಡ ಭಾಷೆಯು ಜನರಿಂದ ದೂರವಾಗುತ್ತಿರುವುದಕ್ಕೆ ಎರಡು ಕಾರಣಗಳನ್ನು ನೀಡುತ್ತಾರೆ.

೧. ಕನ್ನಡ ಭಾಷೆಯಲ್ಲಿ ಕನ್ನಡದ ವರ್ಣಮಾಲೆಗಳ ಜೊತೆಗೆ ಸಂಸ್ಕೃತ ವರ್ಣಮಾಲೆಗಳನ್ನು ಬಳಸುತ್ತಿರುವುದು.

೨. ಅವಶ್ಯಕತೆ ಇದ್ದರೂ, ಇಲ್ಲದಿದ್ದರೂ ಸಂಸ್ಕೃತ ಪದಗಳ ಬಳಕೆ ಕನ್ನಡದಲ್ಲಿದೆ.

ಈ ಎರಡು ಕಾರಣಗಳಿಂದಾಗಿ ಕನ್ನಡ ಭಾಷೆಯು ಸಾರ್ವತ್ರಿಕಗೊಳ್ಳುವ ಬದಲು ಮಿತಿಗೊಳಗಾಗುತ್ತಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಈ ಸಮಸ್ಯೆಗಳಿಗೆ ಅವರು ನೀಡುವ ಪರಿಹಾರೋಪಾಯಗಳು ಹೀಗಿವೆ:

೧. ಮಹಾಪ್ರಾಣಾಕ್ಷರಗಳಾದ ಖ, ಛ, ಠ, ಥ, ಫ, ಮತ್ತು ಘ, ಝ, ಢ, ಧ, ಭ ಗಳ ಬಳಕೆಯನ್ನು ಬಿಡುವುದು.

೨. ಸಂಸ್ಕೃತ ಪದಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು.[೧೦]

ಈ ಬಗೆಯ ಭಾಷಿಕ ಚಿಂತನೆಗಳಲ್ಲಿ ಕನ್ನಡ ಭಾಷೆಯ ಸ್ವಂತಿಕೆಯ ಪ್ರತಿಪಾದನೆ ಇದೆ. ಅಲ್ಲದೆ, ಭಾಷೆಯ ಬಳಕೆ, ಕಲಿಕೆಯ ಸಂದರ್ಭದಲ್ಲಿ ಇರುವ ಸುಲಭೋಪಾಯಗಳೆಡೆಗೆ ಅವರ ಗಮನವಿದೆ. ಈ ಬಗೆಯ ಪ್ರಯತ್ನದಿಂದ ಕನ್ನಡವನ್ನು ಬರೆಯುವ ಮತ್ತು ಉಚ್ಚರಿಸುವ ಕ್ರಮಗಳೆರಡು ಒಂದಾಗುವುದಲ್ಲದೆ, ಕಲಿಕೆಯು ಕೂಡ ಸರಳವಾಗುತ್ತದೆ.

“ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ನನ್ನ ಪುಸ್ತಕವನ್ನೋದಿದ ಮಿತ್ರರೊಬ್ಬರು ‘ಸಂಸ್ಕೃತದ್ವೇಶಿ’ ಎಂಬ ಹಣೆಪಟ್ಟಿಯನ್ನು ನನಗೆ ಕಟ್ಟಿದ್ದರು. ಕನ್ನಡ ಬರವಹವನ್ನು ಸರಿಪಡಿಸೋಣ ಎಂಬ ಈ ಪುಸ್ತಕವನ್ನು ನೋಡಿದಲ್ಲಿ ಅವರ ಅನಿಸಿಕೆ ಇನ್ನಷ್ಟು ಗಟ್ಟಿಯಾಗಬಹುದು.

ಆದರೆ, ನಿಜಕ್ಕೂ ನನಗೆ ಸಂಸ್ಕೃತದ ಮೇಲೆ ದ್ವೇಶ ಇಲ್ಲ. ಮೇಲಿನ ಎರಡು ಪುಸ್ತಕಗಳನ್ನೂ ತುಸು ಎಚ್ಚರಿಕೆಯಿಂದ ಓದಿದವರಿಗೆ ಅದರಲ್ಲಿ ನಾನು ಮುಂದಿಟ್ಟಿರುವ ಒಂದೇ ಒಂದು ವಾದವೂ ದ್ವೇಶದಿಂದ ಹುಟ್ಟಿದುದಲ್ಲ ಎಂಬುದು ಸ್ಪಷ್ಟವಾಗದಿರದು”[೧೧] ಎನ್ನುತ್ತಾರೆ. ಈ ಮೂಲಕ ತಮ್ಮ ಕೃತಿಗಳ ಕುರಿತು ವ್ಯಕ್ತವಾಗಿರುವ ಆರೋಪಗಳನ್ನು ನಿರಾಕರಿಸುವ ಡಿ. ಎನ್. ಶಂಕರ ಬಟ್ಟರು, ತಾವು ಕನ್ನಡವನ್ನು ಕುರಿತು ಹೇಳುತ್ತಿರುವ ವಿಷಯಗಳು ಸಂಸ್ಕೃತ ದ್ವೇಷದಿಂದ ಜನಿಸಿಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಅಲ್ಲದೇ, ಸ್ವತಃ ತಾವೇ ಸಂಸ್ಕೃತ ವಿಷಯವನ್ನು ಆಳವಾಗಿ ಅಧ್ಯಯನ ನಡೆಸಿರುವ ಸಂಗತಿಯನ್ನು ಓದುಗರೊಂದಿಗೆ ಹಂಚಿಕೊಳ್ಳುವ ಮೂಲಕ ತಮ್ಮ ವಾದಗಳಲ್ಲಿ ಸಂಸ್ಕೃತ ದ್ವೇಷವಿಲ್ಲ; ಬದಲಾಗಿ ಕನ್ನಡದಲ್ಲಿರುವ ಸಂಸ್ಕೃತದ ಹೇರಿಕೆಯನ್ನು ತ್ಯಜಿಸಬೇಕೆಂಬ ಹಠವಿದೆ ಎಂದು ಅವರು ಹೇಳುತ್ತಾರೆ.

“ಕನ್ನಡ ಬರಹಕ್ಕೂ ಸಾಮಾನ್ಯ ಕನ್ನಡಿಗರ ಮಾತಿಗೂ ನಡುವಿರುವ ಅಂತರ ಹೆಚ್ಚುತ್ತಿರುವುದಕ್ಕೆ ಎರಡು ಮುಕ್ಯ ಕಾರಣಗಳಿವೆ. ಮೊದಲನೆಯದಾಗಿ, ಕನ್ನಡದವೇ ಆದ ಪದಗಳನ್ನು ಬರೆಯಲು ಒಟ್ಟು ಮೂವತ್ತೊಂದು ಅಕ್ಕರಗಳಿದ್ದರೆ ಸಾಕು. ಆದರೆ, ನಾವು ಇವತ್ತು ಬಳಸುವ ಕನ್ನಡ ಬರಹದಲ್ಲಿ ಅಯ್ವತ್ತು ಅಕ್ಕರಗಳಿವೆ! ಸಂಸ್ಕ್ರುತದಿಂದ ಎರವಲಾಗಿ ಪಡೆದ ಪದಗಳನ್ನು ಕನ್ನಡ ಬರಹಗಳಲ್ಲಿ ನಾವು ಉಚ್ಚರಿಸುವ ಹಾಗೆ ಬರೆಯುವ ಬದಲು ಸಂಸ್ಕ್ರುತದಲ್ಲಿರುವ ಹಾಗೆಯೇ ಬರೆಯಬೇಕೆಂಬ ಅನವಶ್ಯಕವಾದ ನಿರ್ಬಂದದಿಂದಾಗಿ ಈ ರೀತಿ ಬೇಕಾದುದಕ್ಕಿಂತ ಹೆಚ್ಚು ಅಕ್ಕರಗಳನ್ನು ಕನ್ನಡ ಬರಹಗಳಲ್ಲಿ ಬಳಸಬೇಕಾಗಿದೆ. ಮತ್ತು ಇದರಿಂದಾಗಿ ಕನ್ನಡ ಬರಹವನ್ನು ಕಲಿಯುವ ಕೆಲಸ ಬಹಳ ತೊಡಕಿನದಾಗಿದೆ”[೧೨] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಸದ್ಯಕ್ಕೆ ಪ್ರಚಲಿತದಲ್ಲಿರುವ ಬರಹ ಮತ್ತು ಆಡು ಮಾತಿಗೂ ನಡುವೆ ವ್ಯತ್ಯಾಸ ಇರುವುದನ್ನು ಗುರುತಿಸುತ್ತಾರೆ. ಇದರೊಂದಿಗೆ ಅಕ್ಷರಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಎನ್ನುವುದು ಅವರ ಅಭಿಪ್ರಾಯವಾಗಿದೆ. ಸದ್ಯಕ್ಕೆ ಬಳಕೆಯಲ್ಲಿರುವ ೪೭ ಅಕ್ಷರಗಳ ಬದಲಿಗೆ ಕೇವಲ ೩೧ ಅಕ್ಷರಗಳ ಮೂಲಕ ಕನ್ನಡ ಬರಹವನ್ನು ಕೈಗೊಳ್ಳಬಹುದು ಎನ್ನುವುದು ಅವರ ಪ್ರಮೇಯವಾಗಿದೆ.

“ಬೇಕಿದ್ದರೂ ಬೇಡದಿದ್ದರೂ ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕ್ರುತ ಪದಗಳನ್ನು ಬಳಸುವಂತಹ ಕೆಟ್ಟ ಚಾಳಿ ನಮ್ಮ ಬರಹಗಾರರಲ್ಲಿ ಕಾಣಿಸುತ್ತಿದೆ. ಇದಲ್ಲದೆ ಈ ಪದಗಳನ್ನು ಆದಶ್ಟು ಮಟ್ಟಿಗೆ ಸಂಸ್ಕ್ರುತದಲ್ಲಿರುವ ಹಾಗೆಯೇ ಉಳಿಸಿಕೊಳ್ಳುವ ಪ್ರಯತ್ನವೂ ನಡೆಯುತ್ತಿದೆ. ಆದರೆ, ಸಾಮಾನ್ಯ ಕನ್ನಡಿಗರ ಮಾತಿನಲ್ಲಿ, ಅದರಲ್ಲೂ ಕೆಳವರ್ಗದ ಜನರ ಮಾತಿನಲ್ಲಿ ಬಹಳ ಕಡಿಮೆ ಸಂಸ್ಕ್ರುತ ಪದಗಳು ಬಳಕೆಯಾಗುತ್ತವೆ ಮತ್ತು ಆ ರೀತಿ ಬಳಕೆಯಾಗುವ ಪದಗಳೂ ಹಲವು ರೀತಿಯಲ್ಲಿ ಬದಲಾಗಿರುತ್ತವೆ. ಸಾಮಾನ್ಯ ಕನ್ನಡಿಗರಿಗೆ ಕನ್ನಡ ಬರಹ ತೊಡಕಿನದಾಗಿ ಕಾಣಿಸಲು ಇದು ಇನ್ನೊಂದು ಮುಕ್ಯ ಕಾರಣ”[೧೩] ಎನ್ನುತ್ತಾರೆ. ಕನ್ನಡದ ಬರಹಗಾರರಲ್ಲಿ ತಲೆದೋರಿರುವ ಪ್ರಮುಖ ಸಮಸ್ಯೆಯೊಂದರ

ಕುರಿತು ಗಮನ ಸೆಳೆಯುವ ಡಿ. ಎನ್. ಶಂಕರ ಬಟ್ ಅವರು, ಅನವಶ್ಯಕವಾಗಿ ಸಂಸ್ಕೃತ ಪದಗಳನ್ನು ಬಳಸುತ್ತಿರುವುದರ ಕುರಿತು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಕನ್ನಡ ಬರಹಗಾರರು ಅನವಶ್ಯಕವಾಗಿ ಕನ್ನಡ ಪದಗಳನ್ನು ಹೊರತುಪಡಿಸಿ, ಸಂಸ್ಕೃತದ ಮೊರೆ ಹೋಗಬೇಕಾಗಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಶಂಕರ ಬಟ್ಟರು ಕನ್ನಡ ಬರಹವನ್ನು ಎಲ್ಲರ ಸೊತ್ತಾಗಿಸಲು ಎರಡು ಸಮಸ್ಯೆಗಳಿವೆ ಎನ್ನುತ್ತಾರೆ. ಅವುಗಳನ್ನು ನಿವಾರಿಸಿಕೊಳ್ಳಬೇಕು ಎನ್ನುವುದು ಅವರ ಅಭಿಪ್ರಾಯವಾಗಿದೆ. ಅವರ ಪ್ರಕಾರ: **"ಕನ್ನಡಕ್ಕೆ ಬೇಕಾಗಿರುವ ಅಕ್ಕರಗಳನ್ನು ಮಾತ್ರವೇ ಬಳಸುವಂತಹ ಒಂದು 'ಹೊಸ ಬರಹ'ವನ್ನು ಕನ್ನಡಕ್ಕೆ ಅಳವಡಿಸಿಕೊಳ್ಳಬೇಕು ಮತ್ತು ಎರಡನೆಯದಾಗಿ ಕನ್ನಡ ಬರಹದಲ್ಲಿ ಸಾದ್ಯವಿರುವಲ್ಲೆಲ್ಲ ಕನ್ನಡದವೇ ಆದ ಪದಗಳನ್ನು ಬಳಸಲು ತೊಡಗಬೇಕು"**[೧೪]

ಜೊತೆಗೆ ಕನ್ನಡದವೇ ಆದ ಪದಗಳನ್ನು ಬಳಸಲು ಸಮಸ್ಯೆ ಎದುರಾದ ಸಂದರ್ಭದಲ್ಲಿ ಕನ್ನಡದ ಪದಗಳಿಗೆ ಹೊಂದಿಕೆಯಾಗುವ 'ತತ್ಸಮ' ಪದಗಳ ಬದಲು ಅವುಗಳ 'ತದ್ಬವ' ರೂಪಗಳನ್ನು ಬಳಸಬೇಕು ಎಂದು ಸಲಹೆ ನೀಡಿದ್ದಾರೆ. ಈ ಮೂಲಕ ಕನ್ನಡದ ಬರಹದಲ್ಲಿ ಸೇರಿಕೊಂಡಿರುವ ಸಂಸ್ಕೃತ ಪದಗಳು ಮತ್ತು ಅಕ್ಷರಗಳನ್ನು ಕೈಬಿಡಬೇಕು ಎಂದು ಅವರು ತಮ್ಮ ಕನ್ನಡ ಬರಹವನ್ನು ಸರಿಪಡಿಸೋಣ ಕೃತಿಯಲ್ಲಿ ಮಂಡಿಸಿದ್ದಾರೆ.

ಇದರೊಂದಿಗೆ ಕನ್ನಡದಲ್ಲಿ ಎರಡು ಕ್ರಾಂತಿಗಳು ನಡೆಯಬೇಕು ಎನ್ನುವುದು ಅವರ ಅಭಿಪ್ರಾಯ. ಅವರ ಪ್ರಕಾರ: **"ನಾವು ಇವತ್ತು ಕನ್ನಡ ಬರಹದಲ್ಲಿ ನಡೆಸಬೇಕಾಗಿರುವ ಈ ಎರಡು ರೀತಿಯ ಬದಲಾವಣೆಗಳನ್ನು 'ಲಿಪಿಕ್ರಾಂತಿ (ಇಲ್ಲವೇ 'ಅಕ್ಕರಕ್ರಾಂತಿ') ಮತ್ತು 'ಪದಕ್ರಾಂತಿ' ಎಂಬುದಾಗಿ ಕರೆಯಬಹುದು. ಇವನ್ನು ಕಯ್ಗೊಂಡಲ್ಲಿ ಕನ್ನಡ ಬರಹವನ್ನು ಕಲಿಯುವ ಕೆಲಸ ಸುಲಬವಾಗಬಲ್ಲುದು ಮತ್ತು ಅದು ಎಲ್ಲಾ ವರ್ಗದ ಕನ್ನಡಿಗರನ್ನೂ ತಲುಪುವಂತೆ ಮಾಡುವ ಕೆಲಸವೂ ಸುಲಬವಾಗಬಲ್ಲುದು"**[೧೫] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಲಿಪಿಕ್ರಾಂತಿ ಮತ್ತು ಪದಕ್ರಾಂತಿಯ ಅವಶ್ಯಕತೆ ಎಡೆಗೆ ಗಮನ ಸೆಳೆಯುತ್ತಾರೆ. ಈ ಎರಡು ಕ್ರಾಂತಿಗಳು ನಡೆದಲ್ಲಿ ಕನ್ನಡ ಬರಹ ಎಲ್ಲರ ಸೊತ್ತಾಗಲಿದೆ ಎಂಬ ಅವರ ಪ್ರಮೇಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಇನ್ನು ಬರಹ ಜನರ ಜೀವನದ ಮೇಲೆ ಎಷ್ಟು ಪರಿಣಾಮ ಬೀರಬಲ್ಲುದು ಎಂಬುದರ ಕುರಿತು ಮತ್ತು ಬರಹದಿಂದ ಲಾಭ ಪಡೆಯುತ್ತಿರುವವರು ಮತ್ತು ಪಡೆಯದವರ ಕುರಿತು ಅವರು ಬೆಳಕು ಚೆಲ್ಲಿದ್ದಾರೆ. ಆಧುನಿಕ ಕಾಲದಲ್ಲಿ ಬರಹದಿಂದ ವಂಚಿತರಾದವರು ಸೌಲಭ್ಯಗಳಿಂದ ಕೂಡ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದು ಅವರ ಅಭಿಪ್ರಾಯ.

"ಬರಹವನ್ನು ಕಲಿತಿರುವವರು ಇವತ್ತು ಅದರಿಂದ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯುತ್ತಿದ್ದಾರೆ ಎಂಬುದನ್ನು ಸ್ವಲ್ಪ ವಿವರವಾಗಿ ಪರಿಶೀಲಿಸಿದೆವಾದಲ್ಲಿ ಅದನ್ನು ಎಲ್ಲರೂ ಕಲಿಯುವ ಅವಶ್ಯಕತೆ ಯಾಕೆ ಎಂಬುದು ಸ್ಪಷ್ಟವಾಗದಿರದು. ಇವತ್ತಿನ ಕಾಲದಲ್ಲಿ ಬರಹವೆಂಬುದು ಒಂದು ಅತ್ಯಮೂಲ್ಯವಾದ ಆಸ್ತಿಯಾಗಿ ಬೆಳೆದು ಬಂದಿದೆ. ಅದನ್ನು ಪಡೆಯದಿರುವವರು ಜೀವನದಲ್ಲಿ ಮುಂದೆ ಬರಲು ಸಾಧ್ಯವೇ ಇಲ್ಲ

ಎಂಬಷ್ಟರ ಮಟ್ಟಿಗೆ ಅದು ಮಹತ್ವವನ್ನು ಪಡೆದಿದೆ"[೧೬] ಎನ್ನುತ್ತಾರೆ. ಈ ಮೂಲಕ ಆಧುನಿಕ ಕಾಲದಲ್ಲಿ ಬರಹಕ್ಕೆ ಸಿಕ್ಕಿರುವ ಮಹತ್ವ ಮತ್ತು ಅದನ್ನು ಕಲಿಯದವರ ನಡುವೆ ಉಂಟಾಗುವ ಸಾಮಾಜಿಕ ಅಸಮಾನತೆಯ ಕಡೆಗೆ ಗಮನ ಸೆಳೆಯುತ್ತಾರೆ.

ಬರಹ ಮಾಧ್ಯಮಕ್ಕೆ ತನ್ನನ್ನು ತಾನು ತೆರೆದುಕೊಳ್ಳದ ವ್ಯಕ್ತಿ, ಪ್ರತಿಯೊಂದು ಸಂದರ್ಭದಲ್ಲೂ ಬೇರೆಯವರನ್ನು ಆಶ್ರಯಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಇದಕ್ಕೆ ಸಮಾಜದಲ್ಲಿ ಪೂರಕ ಸಾಕ್ಷಿಗಳು ಕೂಡ ಸಿಗುತ್ತವೆ. ಉದಾಹರಣೆಗೆ, ಬ್ಯಾಂಕ್‌ನಲ್ಲಿ ವಹಿವಾಟು ನಡೆಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ಇತ್ತೀಚೆಗೆ ನಿರ್ಮಾಣವಾಗಿದೆ. ಆದರೆ, ಬ್ಯಾಂಕ್ ವ್ಯವಹಾರ ನಡೆಯುವುದೇ ಬರಹದ ಮೂಲಕ. ಇನ್ನೊಂದು ಉದಾಹರಣೆ, ಕಂದಾಯ ಇಲಾಖೆಯೊಂದಿಗೆ ಪ್ರತಿಯೊಬ್ಬರೂ ಒಂದಿಲ್ಲೊಂದು ಕಾರಣಕ್ಕೆ ವ್ಯವಹರಿಸಬೇಕಾಗುತ್ತದೆ. ಅಲ್ಲಿ ಕೂಡ ಬರಹ ಆತ್ಯಂತಿಕ ಪ್ರಮಾಣದ ಅವಶ್ಯಕತೆಯಾಗಿದೆ. ಆದರೆ, ಬರಹ ಬಾರದೇ ಇರುವವರು ವ್ಯವಹರಿಸುವುದಕ್ಕೆ ಕಷ್ಟಪಡುತ್ತಿರುವ ಸಂಗತಿ ಮತ್ತು ಅವರ ಅಜ್ಞಾನವನ್ನು ಯಾರಾದರೂ ಹೇಗಾದರೂ ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಗಳು ಇವೆ.

"ಕೆಳವರ್ಗದ ಜನರನ್ನು ಮೇಲೆತ್ತಲು ಮತ್ತು ಅವರಲ್ಲಿರುವ ಬಡತನವನ್ನು ಹೋಗಲಾಡಿಸಲು ಸರಕಾರ ಹಲವಾರು ಯೋಜನೆಗಳನ್ನು ಹಾಕಿಕೊಂಡಿದೆ. ಆದರೆ, ಇವಾವುವೂ ಅವರನ್ನು ತಲುಪುವ ಹಾಗೆ ಕಾಣಿಸುವುದಿಲ್ಲ. ಅಂತಹ ಯೋಜನೆಗಳ ಇರುವಿಕೆಯನ್ನು ಮತ್ತು ಅವುಗಳ ಮೂಲಕ ತಾವು ಪಡೆಯಬಹುದಾದ ಪ್ರಯೋಜನಗಳನ್ನು ತಿಳಿದುಕೊಳ್ಳಲು ಅವಶ್ಯವಿರುವ ಬರಹದ ಅರಿವು ಕೆಳವರ್ಗದ ಜನರಲ್ಲಿ ಇಲ್ಲದಿರುವುದೇ ಮುಖ್ಯ ಕಾರಣ"[೧೭] ಎನ್ನುವ ಮೂಲಕ ಸಮಾಜದಲ್ಲಿ ಯೋಜನೆಗಳ ಫಲಾನುಭವಕ್ಕೆ ಕೂಡ ಅಕ್ಷರ ಜ್ಞಾನ ಅವಶ್ಯಕ ಎಂದು ಡಿ. ಎನ್. ಶಂಕರ ಬಟ್ ಅವರು ಅಭಿಪ್ರಾಯಪಡುತ್ತಾರೆ.

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕುಗಳು ಸಿಗಬೇಕು ಎಂದಿರುವಂತೆ ಅಕ್ಷರ ಜ್ಞಾನ ಕೂಡ ಎಲ್ಲರ ಸ್ವತ್ತಾಗಬೇಕು ಎಂಬುದು ಅವರ ವಾದವಾಗಿದೆ. ಅವರ ಪ್ರಕಾರ: **"ಪ್ರಜಾಪ್ರಬುತ್ವದ ಆಳ್ವಿಕೆಯ ಒಂದು ಅಂಶ ಪ್ರತಿಯೊಬ್ಬ ಪ್ರಜೆಯಲ್ಲೂ ಇರುತ್ತದೆ. ಹಾಗಾಗಿ, ಒಂದು ಪ್ರಜಾಪ್ರಬುತ್ವ ಸರಿಯಾಗಿ ನಡೆಯಬೇಕಾದರೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಹೊಣೆಗಾರಿಕೆಯನ್ನು ಮತ್ತು ಹಕ್ಕುಬಾದ್ಯತೆಗಳನ್ನು ಸರಿಯಾಗಿ ತಿಳಿದುಕೊಂಡಿರಬೇಕಾಗುತ್ತದೆ. ಇವತ್ತಿನ ದಿನಗಳಲ್ಲಿ ಇದು ಪ್ರತಿಯೊಬ್ಬನೂ ಬರಹವನ್ನು ತಿಳಿದಿದ್ದರೆ ಮಾತ್ರ ಸಾದ್ಯವಾಗಬಲ್ಲುದು"**[೧೮] ಎನ್ನುವುದು ಅವರ ಅಭಿಪ್ರಾಯ. ಮೇಲಿನ ಅವರ ಮಾತುಗಳು ಪ್ರಜಾಪ್ರಭುತ್ವದ ವ್ಯವಸ್ಥಿತ ಜಾರಿಗೆ ಕೂಡ ಬರಹ ಮತ್ತು ಅಕ್ಷರ ಜ್ಞಾನ ಎಲ್ಲರಿಗೂ ಸಮಾನವಾಗಿ ದಕ್ಕಬೇಕು ಎಂಬುದಕ್ಕೆ ಪೂರಕವಾಗಿವೆ. ಈ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಸಮಾನರು ಎಂಬ ಆದರ್ಶ ತತ್ವ ನಿಜಕ್ಕೂ ಜಾರಿಗೆ ಬರಬೇಕು ಎಂದಾದಲ್ಲಿ ಬರಹ ಎಲ್ಲರ ಸ್ವತ್ತಾಗಬೇಕು ಎಂಬುದು ಅವರ ವಾದವಾಗಿದೆ.

೫.೨. ಕನ್ನಡಕ್ಕೆ ಸಂಸ್ಕೃತ ಮೂಲವಲ್ಲ

ಕನ್ನಡಕ್ಕೆ ಸಂಸ್ಕೃತ ಮೂಲ ಎಂಬ ವಾದವನ್ನು ಸಂಸ್ಕೃತ ವಿದ್ವಾಂಸರು ಹೂಡಿದ್ದಾರೆ. ಆದರೆ, ಅವರ ವಾದವನ್ನು ಉದಾಹರಣೆಗಳ ಸಹಿತ ಡಿ. ಎನ್. ಶಂಕರ ಬಟ್ಟರು ತಿರಸ್ಕರಿಸುತ್ತಾರೆ. ಇದಕ್ಕೆ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಪದಗಳ ಬರಹದ ರೂಪಕ್ಕೂ ಮತ್ತು ಆಡು ಮಾತಿನ ರೂಪಕ್ಕೂ ಇರುವ ವ್ಯತ್ಯಾಸವನ್ನು ಅವರು ಉದಾಹರಿಸಿದ್ದಾರೆ. ಅವರ ಪ್ರಕಾರ: **"ಸಂಸ್ಕೃತ ಪದಗಳನ್ನು ಮಾತ್ರ ನಾವು ನಮ್ಮ ಉಚ್ಚಾರಣೆ ಹೇಗಿದೆಯೋ ಹಾಗೆ ಬರೆಯುವ ಬದಲು ಹೆಚ್ಚು ಕಡಿಮೆ ಸಂಸ್ಕೃತ ಬರಹಗಳಲ್ಲಿರುವ ಹಾಗೆ ಬರೆಯುತ್ತೇವೆ; ವಿಶೇಷ ಎಂಬುದಾಗಿ ಬರೆಯುತ್ತೇವೆ, ಆದರೆ, ವಿಶೇಶ ಎಂಬುದಾಗಿ ಓದುತ್ತೇವೆ; ಕೃತಿ ಎಂಬುದಾಗಿ ಬರೆಯುತ್ತೇವೆ, ಕ್ರುತಿ ಎಂಬುದಾಗಿ ಓದುತ್ತೇವೆ; ಭ್ರಮೆ ಎಂಬುದಾಗಿ ಬರೆಯುತ್ತೇವೆ; ಬ್ರಮೆ ಎಂಬುದಾಗಿ ಓದುತ್ತೇವೆ"**[೧೯] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ಪದಗಳ ಬರಹ ಮತ್ತು ಉಚ್ಚಾರಣೆಗಳಲ್ಲಿ ವ್ಯತ್ಯಾಸ ಇರುವುದನ್ನು ಗುರುತಿಸುತ್ತಾರೆ.

ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆ ಕುರಿತು ವಯ್ಯಾಕರಣಿಗಳ ತಪ್ಪು ತಿಳಿವಳಿಕೆಯನ್ನು ತಮ್ಮ ಬರಹಗಳಲ್ಲಿ ಡಿ. ಎನ್. ಶಂಕರ ಬಟ್ಟರು ಪ್ರತಿಪಾದಿಸುತ್ತಿದ್ದಾರೆ. ಆರಂಭದಿಂದ ಕನ್ನಡಕ್ಕೆ ಬ್ರಾಹ್ಮೀ ಲಿಪಿಯನ್ನು ಅಳವಡಿಸುವ ಸಮಯದಲ್ಲಿ ಕನ್ನಡ ಬರಹಗಾರರು ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿ ಇರುವಂತೆಯೇ ಬಳಸಲು ಆರಂಭಿಸಿದರು. ಇದರ ಪರಿಣಾಮದಿಂದಾಗಿ ಕನ್ನಡದಲ್ಲಿ ಸಂಸ್ಕೃತ ಪದಗಳ ಯಥಾವತ್ ಬಳಕೆ ಜಾರಿಯಲ್ಲಿದೆ ಎನ್ನುವುದು ಅವರ ಅಭಿಪ್ರಾಯ.[೨೦]

ಅಲ್ಲದೇ, ಕನ್ನಡದಲ್ಲಿ ಸಂಸ್ಕೃತದ ಕುರಿತು ಇರುವ ಮೂಢನಂಬಿಕೆಯ ಕುರಿತ ಅವರ ಅಭಿಪ್ರಾಯ ಹೀಗಿದೆ: **"ಇವತ್ತಿಗೂ ಆ ರೀತಿ ಸಂಸ್ಕ್ರುತ ಒಂದು ಪವಿತ್ರನುಡಿಯೆಂಬುದಾಗಿ ಮತ್ತು ಕನ್ನಡ ಅದರಿಂದ ಬೆಳೆದುಬಂದಿದೆಯೆಂಬುದಾಗಿ ಬಾವಿಸುವ ಕನ್ನಡ (ಮತ್ತು ಸಂಸ್ಕ್ರುತ) ವಿದ್ವಾಂಸರು ಹಲವರಿದ್ದಾರೆ. ಅವರ ಮಾತನ್ನು ನಂಬುವ ಇತರ ಮಂದಿಯೂ ಹಲವರಿದ್ದಾರೆ. ಕನ್ನಡದಲ್ಲಿ ಬರುವ ಸಂಸ್ಕ್ರುತ ಪದಗಳನ್ನು ಸಂಸ್ಕ್ರುತದಲ್ಲಿರುವ ಹಾಗೆಯೇ ಬರೆಯುವ ಬದಲು ನಮ್ಮ ಉಚ್ಚಾರಣೆ ಹೇಗಿದೆಯೋ ಹಾಗೆ ಬರೆಯುವುದಕ್ಕೆ ಈ ವಿದ್ವಾಂಸರ ಮತ್ತು ಅವರನ್ನು ನಂಬುವ ಇತರ ಮಂದಿಯ ವಿರೋದವಿದೆ."**[೨೧] ಎನ್ನುತ್ತಾರೆ. ಇದರೊಂದಿಗೆ 'ಕನ್ನಡ ಸಂಸ್ಕ್ರುತಜನ್ಯ', 'ಬಾರತದ ಎಲ್ಲಾ ನುಡಿಗಳಿಗೂ ಸಂಸ್ಕ್ರುತವೇ ಮೂಲ' ಎಂಬ ನಂಬಿಕೆಗಳು ತಪ್ಪು ಎಂದು ತೋರಿಸಿಕೊಡುವ ಅವಶ್ಯಕತೆ ಇದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಕನ್ನಡ ಸಂಸ್ಕೃತಜನ್ಯ ಭಾಷೆ ಎಂಬ ವಾದವನ್ನು ತಿರಸ್ಕರಿಸಲು ಅವರು ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. **"ಕನ್ನಡಕ್ಕೆ ಸಂಸ್ಕ್ರುತ ಮೂಲ ಎಂಬ ವಾದಕ್ಕೆ ಆದಾರವಾಗಬಲ್ಲ ಒಂದೇ ಒಂದು ಸಂಶೋದನೆಯೂ ಇದುವರೆಗೆ ನಡೆದಿಲ್ಲ. ಅದು ಸಂಸ್ಕ್ರುತದ ಮೇಲೆ ಹೆಚ್ಚಿನ ಅಬಿಮಾನವಿರುವ ಕೆಲವು ವಿದ್ವಾಂಸರ ಕುರುಡು ನಂಬಿಕೆಯನ್ನು ಮಾತ್ರವೇ ಅವಲಂಬಿಸಿದೆ"**[೨೨] ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

೫.೩. ಲಿಪಿಕ್ರಾಂತಿ ಕುರಿತು ಡಿ. ಎನ್. ಶಂಕರ ಬಟ್ಟರ ಚಿಂತನೆಗಳು

ಕನ್ನಡದಲ್ಲಿ ಸೇರಿ ಹೋಗಿರುವ ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿ ಬರೆಯುವಂತೆಯೇ ಬರೆಯುವುದರಿಂದ ಕಲಿಸಲು ಮತ್ತು ಕಲಿಯಲು ಸಾಕಷ್ಟು ಸಮಸ್ಯೆಯಾಗಿದೆ. ಉಚ್ಚಾರ ಮತ್ತು ಬರಹದ ಮಾದರಿಗಳಲ್ಲಿ ಭಿನ್ನತೆ ಇರುವ ಕಾರಣದಿಂದಾಗಿ ವಿದ್ಯಾರ್ಥಿಗಳಲ್ಲಿ ಕೂಡ ಸಾಕಷ್ಟು ಗೊಂದಲ ಉಂಟಾಗುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಬೇಕು ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದ.

“ಕನ್ನಡ ಬರಹವನ್ನು ಕಲಿಯುವ ಮತ್ತು ಬಳಸುವ ಕೆಲಸ ಹೆಚ್ಚಿನ ಕನ್ನಡಿಗರಿಗೂ ತುಂಬಾ ಕಶ್ಟವಾದುದೆಂದು ತೋರುವುದಕ್ಕೆ ಅದರಲ್ಲಿ ಕನ್ನಡದ ಮಟ್ಟಿಗೆ ಅವಶ್ಯವಿಲ್ಲದಂತಹ ಹಲವಾರು ಹೆಚ್ಚಿನ ಅಕ್ಶರಗಳನ್ನು ಬಳಸುತ್ತಿರುವುದು ಒಂದು ಮುಕ್ಯ ಕಾರಣ. ನಿಜಕ್ಕೂ ಕನ್ನಡದವೇ ಆದ ಪದಗಳನ್ನು ಬರೆಯುವುದಕ್ಕೆ ಒಟ್ಟು ೩೧ ಅಕ್ಷರಗಳಿದ್ದರೆ ಸಾಕು. ಆದರೆ, ಕನ್ನಡ ಬರಹಗಳಲ್ಲಿ ನಾವು ಇಂದು ೫೦ಕ್ಕಿಂತಲೂ ಹೆಚ್ಚು ಅಕ್ಶರಗಳನ್ನು ಬಳಸುತ್ತಿದ್ದೇವೆ”[೨೩] ಎನ್ನುತ್ತಾರೆ. ತಮಿಳಿನ ಮಾದರಿಯಲ್ಲಿ ಕನ್ನಡವೂ ಅಕ್ಷರಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎನ್ನುವುದು ಅವರ ಅಭಿಪ್ರಾಯವಾಗಿದೆ. ಈ ಮೂಲಕ ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳು ಮತ್ತು ಅನುನಾಸಿಕಗಳ ಪೈಕಿ ಙ, ಞಗಳು ಹಾಗೂ ಋ, ಷ ಮತ್ತು ಅನುಸ್ವಾರ, ವಿಸರ್ಗಗಳನ್ನು ಕೈಬಿಡಬೇಕು ಎನ್ನುತ್ತಾರೆ.

“ಮಹಾಪ್ರಾಣಾಕ್ಶರಗಳಿರುವ ಪದಗಳನ್ನು ಉಚ್ಚರಿಸುವಾಗ ಹೆಚ್ಚಿನವರೂ ಆ ಅಕ್ಶರಗಳನ್ನು ಅಲ್ಪ ಪ್ರಾಣಾಕ್ಶರಗಳಾಗಿಯೇ (ಕಚಟತಪ ಮತ್ತು ಗಜಡದಬ ಗಳೆಂಬುದಾಗಿಯೇ) ಉಚ್ಚರಿಸುತ್ತಾರೆ. ಗ್ರಂಥಾಲಯ ಎಂಬ ಪದ ಹೆಚ್ಚಿನವರ ಉಚ್ಚಾರಣೆಯಲ್ಲೂ ಗ್ರಂತಾಲಯ ಎಂದಾಗುತ್ತದೆ, ವಿಧಾನಸಭೆ ಎಂಬುದು ವಿದಾನ ಸಬೆ ಎಂದಾಗುತ್ತದೆ”[೨೪] ಎನ್ನುತ್ತಾರೆ. ಇದರೊಂದಿಗೆ, **“ಕನ್ನಡ ಬರಹಗಳಲ್ಲಿ ಬಳಕೆಯಾಗುವ ಋಕಾರ, ಷಕಾರ, ವಿಸರ್ಗ ಮೊದಲಾದವುಗಳೂ ಈ ಮಹಾಪ್ರಾಣಾಕ್ಶರಗಳ ಹಾಗೆ ಉಚ್ಚಾರಣೆಯಲ್ಲಿ ಕಾಣಿಸುವುದಿಲ್ಲ. ಋಕಾರ ಉಚ್ಚಾರಣೆಯಲ್ಲಿ ರು ಎಂದಾಗುತ್ತದೆ (ಕೃತಿ > ಕ್ರುತಿ, ಋಷಿ > ರುಶಿ), ಷಕಾರ ಶಕಾರವಾಗುತ್ತದೆ (ವಿಷ > ವಿಶ, ವಿಷಯ > ವಿಶಯ) ಮತ್ತು ವಿಸರ್ಗ ಹಕಾರವಾಗುತ್ತದೆ (ಬಹುಶಃ > ಬಹುಶಹ) ಇಲ್ಲವೇ ಅದರ ಮುಂದಿನ ವ್ಯಂಜನದೊಂದಿಗೆ ಸೇರಿ ಒತ್ತಕ್ಶರವಾಗುತ್ತದೆ (ದುಃಖ > ದುಕ್ಕ)”**[೨೫] ಎಂಬ ಉದಾಹರಣೆಗಳ ಮೂಲಕ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುವ ಸಮಯದಲ್ಲಿ ಸಂಸ್ಕೃತದ ಮಾದರಿಯನ್ನು ಅನುಸರಿಸಬೇಕಿಲ್ಲ ಎನ್ನುತ್ತಾರೆ. ಅಲ್ಲದೇ, ಮೇಲಿನ ಉದಾಹರಣೆಗಳು ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುವ ಸಮಯದಲ್ಲಿ ವ್ಯತ್ಯಾಸ ಇರುವುದಕ್ಕೆ ಸಾಕ್ಷಿಗಳಾಗಿವೆ. ಮೇಲಿನ ಉದಾಹರಣೆಗಳಿಗೆ ಕೆಲವು ಅಪವಾದಗಳಿವೆ. ಸಂಸ್ಕೃತ ಪಾಂಡಿತ್ಯ ಉಳ್ಳವರು ಹಾಗೂ ಕನ್ನಡವನ್ನು ಶುದ್ಧವಾಗಿ ಉಚ್ಚರಿಸಬೇಕು ಎನ್ನುವವರು ಮತ್ತು ಮೇಲು ವರ್ಗದ ಜನರಲ್ಲಿ ಮೇಲಿನ ಬಳಕೆ ಕಂಡು ಬಾರದೆ ಇರಬಹುದು. ಆದರೆ, ಬಹುತೇಕ ಜನಸಾಮಾನ್ಯರ ಆಡು ಭಾಷೆ ಮೇಲಿನ ಶಂಕರ ಬಟ್ಟರ ಉದಾಹರಣೆಗೆ ಬಹುತೇಕ ಅನ್ವಯವಾಗುತ್ತದೆ.

ಅವರ ವಾದದ ಪ್ರಕಾರ, ಕನ್ನಡ ಬರಹಗಳಲ್ಲಿ ಬಳಕೆಯಾಗುವ ಋಕಾರ, ಷಕಾರ, ವಿಸರ್ಗ, ಮೊದಲಾದವುಗಳು ಹಾಗೂ ಮಹಾಪ್ರಾಣಾಕ್ಷರಗಳು ಕನ್ನಡ ಬರಹದಲ್ಲಿ ಅನವಶ್ಯಕ.

ಅದಕ್ಕೆ ಪೂರಕವಾದ ಸಾಕ್ಷಿಗಳನ್ನೂ ಅವರು ಒದಗಿಸುತ್ತಾರೆ. ಈ ಮೂಲಕ ಕನ್ನಡ ಭಾಷೆಯ ಕಲಿಕೆಗೆ ಹೊರೆಯಾಗಿರುವ ಅಕ್ಷರಗಳ ಸಂಖ್ಯೆಯನ್ನು ಇಳಿಸಬೇಕು ಎನ್ನುವುದು ಅವರ ಒತ್ತಾಯವಾಗಿದೆ.

ಬರಹ ಮತ್ತು ಸಂಸ್ಕೃತಿ ಎಂಬ ಭಾಗದಲ್ಲಿ ಕನ್ನಡದ ಪಠ್ಯಪುಸ್ತಕಗಳಲ್ಲಿ ಋಕಾರ ಬಳಕೆಯನ್ನು ಬಿಡಬೇಕು ಎಂಬ ಪ್ರಸ್ತಾವನೆ ಸಮಯದಲ್ಲಿ ಎದುರಾದ ವಾಗ್ವಾದಗಳನ್ನು ಕುರಿತು ಅವರು ಉಲ್ಲೇಖಿಸುತ್ತಾರೆ. **“ಆದರೆ ಹೀಗೆ ಮಾಡಿದಲ್ಲಿ ನಮ್ಮ ಸಂಸ್ಕೃತಿಯೇ ಅಳಿದುಹೋಗಬಲ್ಲುದೆಂಬುದಾಗಿ ಈ ಬದಲಾವಣೆಗೆ ಹಲವು ಮಂದಿ ಹಿರಿಯ ಸಾಹಿತಿಗಳು ಮತ್ತು ವಿದ್ವಾಂಸರು ಅಡ್ಡಿಯಾದರು. ಹಾಗಾಗಿ, ಈ ಪ್ರಸ್ತಾಪವನ್ನು ಅಲ್ಲಿಗೇ ಬಿಟ್ಟುಕೊಡಲಾಯಿತು”**[೨೬]. ಎನ್ನುತ್ತಾರೆ. ಮುಂದುವರೆದು, **“ನಿಜಕ್ಕೂ ಮೇಲಿನ ಪ್ರಸ್ತಾಪಕ್ಕೆ ಬಂದ ಈ ಅಡ್ಡಿ ನುಡಿಯ ಮೇಲಿನ ಅಜ್ಞಾನದಿಂದ ಮಾತ್ರವೇ ಹುಟ್ಟಿಕೊಂಡಿದೆ. ಯಾಕೆಂದರೆ, ಎರವಲಾಗಿ ಪಡೆದ ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವುದು ಎಂದಿಗೂ ನಮ್ಮ ‘ಸಂಸ್ಕೃತಿ’ಯಾಗಲಾರದು. ಅದು ಬರಿಯ ಕುರುಡು ಅನುಕರಣೆ ಮಾತ್ರ ಆಗಬಲ್ಲುದು. ಉಚ್ಚಾರಣೆಯಲ್ಲಿ ಈ ಪದಗಳೆಲ್ಲ ನಮ್ಮ ನುಡಿಯ ಪದ ಸ್ವರೂಪಕ್ಕೆ ಹೊಂದಿಕೆಯಾಗುವ ಹಾಗೆ ಬದಲಾಗಿವೆ. ಇದನ್ನು ಗಮನಿಸಿ ಅವನ್ನು ಆ ರೀತಿ ಬರೆಯುವುದೇ ನಿಜಕ್ಕೂ ನಮ್ಮ ಸಂಸ್ಕೃತಿಯಾಗಬಲ್ಲುದು”**[೨೭] ಎನ್ನುತ್ತಾರೆ. ಎರವಲಾಗಿ ಕನ್ನಡಕ್ಕೆ ಬಂದಿರುವ ಪದಗಳ ಬಳಕೆಯಲ್ಲಿ ಕೂಡ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಪದಗಳನ್ನು ರಚಿಸಿಕೊಳ್ಳುವುದು ಮತ್ತು ಕನ್ನಡದಲ್ಲಿ ಆಡುನುಡಿಯಲ್ಲಿರುವಂತೆ ಪರಿವರ್ತಿಸಿಕೊಳ್ಳುವುದು ಕನ್ನಡ ಸಂಸ್ಕೃತಿ ಎಂದು ಡಿ. ಎನ್. ಶಂಕರ ಬಟ್ ಅಭಿಪ್ರಾಯಪಡುತ್ತಾರೆ. ಮಹಾಪ್ರಾಣಗಳ ಬದಲು ಅಲ್ಪ ಪ್ರಾಣಗಳು ಮತ್ತು ಋ, ಷ ಕಾರಗಳ ಬದಲು ರು, ಶ ಬಳಸುವ ಮೂಲಕ ಕನ್ನಡದ ಆಡುನುಡಿಯ ಜಾಯಮಾನಕ್ಕೆ ತಕ್ಕಂತೆ ಎರವಲು ಪದಗಳನ್ನು ಬರೆಯಬೇಕು ಎನ್ನುವುದು ಅವರ ವಾದವಾಗಿದೆ.

೫.೪. ಬರಹದ ಉದ್ದೇಶದ ಕುರಿತು ಡಿ. ಎನ್. ಶಂಕರ ಬಟ್ ಚಿಂತನೆಗಳು

ಬರಹದ ಮುಖ್ಯ ಉದ್ದೇಶವೇ ನಾವು ಹೇಳಬೇಕಿರುವ ವಿಷಯವೊಂದನ್ನು ಮಾತಿನ ಮೂಲಕ ತಿಳಿಸಲು ಸಾಧ್ಯವಿಲ್ಲದ ಸಮಯದಲ್ಲಿ ಬಳಸುವುದು ಎಂದು ಡಿ. ಎನ್. ಶಂಕರ ಬಟ್ ಹೇಳುತ್ತಾರೆ. **“ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಕನ್ನಡ ಬರಹಗಳಲ್ಲಿ ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವ ಮೂಲಕ ನಾವು ಬರಹಕ್ಕಿರುವ ಈ ಮುಕ್ಯವಾದ ಉದ್ದೇಶಕ್ಕೇ ತಡೆಯೊಡ್ಡುತ್ತಿದ್ದೇವೆ. ಹೀಗೆ ಮಾಡಲು ಕನ್ನಡದ ಬರಹಗಾರರಿಗೆ ಸಂಸ್ಕೃತದ ಮೇಲಿರುವ ಕುರುಡು ಅಬಿಮಾನವೊಂದೇ ಕಾರಣ. ಕನ್ನಡದವೇ ಆದ ಪದಗಳನ್ನು ಹೇಗೆ ಬೇಕಿದ್ದರೂ ಬದಲಾಯಿಸಬಹುದು; ಸಂಸ್ಕೃತ ಪದಗಳನ್ನು ಮಾತ್ರ ಅವು ಎರಡು ಸಾವಿರ ವರ್ಶಗಳಶ್ಟು ಹಿಂದೆ ಹೇಗಿದ್ದುವೋ ಹಾಗೆಯೇ ಇವತ್ತೂ ಬರೆಯಬೇಕೆಂಬ ಅವರ ಈ ವಾದ ಕುರುಡು ಅಬಿಮಾನವಲ್ಲದೆ ಬೇರೇನೂ ಅಲ್ಲ”**[೨೮] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ರೂಪಗಳ ಬಳಕೆಯಿಂದಾಗಿ ಬರಹದ ಮುಖ್ಯವಾದ ಉದ್ದೇಶಕ್ಕೇ ಅಡ್ಡಗಾಲಾಗಿರುವ ಸಂಗತಿಯನ್ನು ಅನಾವರಣಗೊಳಿಸುತ್ತಾರೆ. ಮತ್ತು ಮಾತು ಮತ್ತು ಬರಹದ ನಡುವೆ ನಿರ್ಮಾಣವಾಗಿರುವ ಅಂತರವನ್ನು ಇಲ್ಲವಾಗಿಸಬೇಕು ಎಂದು ವಾದಿಸುತ್ತಾರೆ.

ಮಾತು ಮತ್ತು ಬರಹದ ಗೊಂದಲದ ವಿಸ್ತೃತ ರೂಪವನ್ನು ತೋರಿಸಲು ಯತ್ನಿಸಿರುವ ಅವರು, ಮೇಲ್ವರ್ಗ ಮತ್ತು ಕೆಳವರ್ಗಗಳ ನಡುವೆ ಇರುವ ತಾರತಮ್ಯಕ್ಕೂ ಈ ಗೊಂದಲವೇ ಪ್ರಮುಖ ಕಾರಣ ಎನ್ನುತ್ತಿದ್ದಾರೆ. ಅವರ ಪ್ರಕಾರ: **"ಕೆಳವರ್ಗದ ಜನರು ದೇವಾಲಯಗಳನ್ನು ಮತ್ತು ತಮ್ಮ ಮನೆಗಳನ್ನು ಪ್ರವೇಶಿಸಿದಲ್ಲಿ ತಮ್ಮ 'ದರ್ಮ'ವೇ ನಾಶವಾದೀತೆಂದು ಮೇಲ್ವರ್ಗದ ಜನರು ವಾದಿಸುತ್ತಿದ್ದರು. ನಿಜಕ್ಕೂ ಕೆಳವರ್ಗದ ಜನರು ಕೆಳವರ್ಗದಲ್ಲಿಯೇ ಅಸ್ಪ್ರುಶ್ಯರಾಗಿ ಉಳಿಯುವಂತೆ ಮಾಡುವುದೇ ಈ ವಾದದ ಮೂಲ ಉದ್ದೇಶವಾಗಿತ್ತು. ಇವತ್ತಿಗೂ ಹಳ್ಳಿಗಳಲ್ಲಿ ಇದೇ ದರ್ಮದ ಹೆಸರಿನಲ್ಲಿ ಕೆಳವರ್ಗದ ಜನರನ್ನು ದೂರ ಇರಿಸಲಾಗುತ್ತದೆ. ಆದರೆ, ಇದು ತಪ್ಪು, ಇದನ್ನು ಸರಿಪಡಿಸಬೇಕು ಎಂಬುದನ್ನು ಇವತ್ತು ಹೆಚ್ಚಿನವರೂ ಒಪ್ಪಿಕೊಳ್ಳುತ್ತಾರೆ"**[೨೯] ಎನ್ನುತ್ತಾರೆ. ಮುಂದುವರೆದು ಸಂಸ್ಕೃತದ ಪದಗಳನ್ನು ಅಲ್ಲಿರುವಂತೆಯೇ ಕನ್ನಡದಲ್ಲಿ ಬರೆದರೆ ಅದು ಕೆಳವರ್ಗದ ಮಕ್ಕಳ ಬರಹದಿಂದ ದೂರ ಉಳಿಯಲು ಕಾರಣವಾಗುತ್ತದೆ ಎಂಬ ಆತಂಕವನ್ನೂ ಅವರು ವ್ಯಕ್ತಪಡಿಸುತ್ತಾರೆ.

ಇದು ಭಾಷಾ ವಿಜ್ಞಾನಿಯೊಬ್ಬರ ಸಾಮಾಜಿಕ ಸ್ತರ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ತಾರತಮ್ಯದ ಕುರಿತ ಪ್ರಮುಖ ಚಿಂತನೆಯಾಗಿದೆ. ಜಾತಿ, ಧರ್ಮ, ಅಂತಸ್ತುಗಳ ಆಧಾರದಲ್ಲಿ ಅಸಮಾನತೆ ಜಾರಿ ಇರುವ ಈ ದೇಶದಲ್ಲಿ ಕೆಳವರ್ಗದವರನ್ನು ಶಾಶ್ವತವಾಗಿ ಕೆಳಗೇ ಉಳಿಯುವಂತೆ ಮಾಡುವ ಹುನ್ನಾರಗಳನ್ನು ಶಂಕರ ಬಟ್ಟರು ಪ್ರಶ್ನಿಸುತ್ತಿದ್ದಾರೆ. ಪಟ್ಟಭದ್ರ ಹಿತಾಸಕ್ತಿ ಭಾಷಿಕವಾಗಿ ಯಾಜಮಾನ್ಯ ಚಲಾಯಿಸುತ್ತಿರುವುದು ತಪ್ಪು ಎನ್ನುವುದು ಅವರ ಪ್ರಮುಖ ವಾದವಾಗಿದೆ. ಇದಕ್ಕೆ ಪೂರಕವಾಗಿ ಶಂಕರ ಬಟ್ಟರ ವಾದಗಳಿಗೆ ತಕರಾರು ಎತ್ತಲಾಗಿದೆ. ಈ ಕುರಿತು ಸವಾಲುಗಳು ಮತ್ತು ಸಾಧ್ಯತೆಗಳು ಎಂಬ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೫.೫. ಪದಕ್ರಾಂತಿ ಕುರಿತು ಡಿ. ಎನ್. ಶಂಕರ ಬಟ್ಟರ ಚಿಂತನೆಗಳು

ವರ್ಗ ಆಧಾರಿತ ಸಮಾಜದಲ್ಲಿ ಭಾಷೆಯ ಮೂಲಕ ಹಿಡಿತ ಸಾಧಿಸುವ ಮೇಲ್ವರ್ಗದ ಹುನ್ನಾರಗಳನ್ನು ಬಯಲು ಮಾಡುವ ಡಿ. ಎನ್. ಶಂಕರ ಬಟ್, ಕೆಳವರ್ಗದ ಜನ ಸರಳವಾಗಿ ಕನ್ನಡವನ್ನು ಅರ್ಥಮಾಡಿಕೊಳ್ಳುವ ವಾತಾವರಣ ನಿರ್ಮಿಸುವ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಪದಕ್ರಾಂತಿ ಎಂಬ ಅಧ್ಯಾಯದಲ್ಲಿ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: **"ಕನ್ನಡ ಬರಹಗಳಲ್ಲಿ ಸಾದ್ಯವಿರುವಲ್ಲೆಲ್ಲ ಕನ್ನಡದವೇ ಆದ ಪದಗಳನ್ನು ಬಳಸಲು ಯತ್ನಿಸುವುದು ಮತ್ತು ಅವಶ್ಯವಿಲ್ಲದಿರುವಲ್ಲೂ ಸಂಸ್ಕೃತ ಪದಗಳನ್ನ ಬಳಸುವ ಚಾಳಿಗೆ ಕಡಿವಾಣ ಹಾಕುವುದು"**[೩೦] ಮುಖ್ಯ ಕೆಲಸ ಎನ್ನುತ್ತಾರೆ. ಇದಕ್ಕೆ ಪೂರಕವಾಗಿ ಜನ ಸಾಮಾನ್ಯರ ಆಡುನುಡಿಯಲ್ಲಿ ಸಂಸ್ಕೃತ ಪದಗಳು ಬಹಳ ಅಪರೂಪ ಸಂದರ್ಭದಲ್ಲಿ ಬಳಕೆಯಾಗುತ್ತವೆ ಎನ್ನುತ್ತಾರೆ. ಅವರ ಈ ವಾದಕ್ಕೆ ಪೂರಕವಾಗಿ ಸಮಾಜದಲ್ಲಿ ಸಾಕಷ್ಟು ಉದಾಹರಣೆಗಳು ಕೂಡ ಸಿಗುತ್ತವೆ. ಜನ ಸಾಮಾನ್ಯರು ಆಡು ಭಾಷೆಯಲ್ಲಿ ಪ್ರಾದೇಶಿಕ ಮತ್ತು ಎಲ್ಲರಿಗೂ ಸರಳವಾಗಿ ಸಂವಹನವಾಗುವ ಭಾಷೆಯನ್ನು ಬಳಸುತ್ತಾರೆಯೇ ಹೊರತು ಸಂಸ್ಕೃತ ಪದಗಳನ್ನು ಬಳಸುವುದಿಲ್ಲ. ಆದರೆ, ಬಹುಸಂಖ್ಯಾತರು ಆಡುವ ಭಾಷೆಯನ್ನು ಸಂಸ್ಕೃತದ ಮೂಸೆಯಿಂದ ತಿದ್ದುವುದು ಸರಿಯಲ್ಲ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇದರೊಂದಿಗೆ ಹೊಸ ಪದ ನಿರ್ಮಿಸುವ ಸಮಯದಲ್ಲಿ ಅನವಶ್ಯಕವಾಗಿ ಸಂಸ್ಕೃತದ ಮೊರೆ ಹೋಗುವ ಸಂಗತಿ ಕಡೆಗೆ ಡಿ. ಎನ್. ಶಂಕರ ಬಟ್ ಅವರು ಗಮನ ಸೆಳೆಯುತ್ತಾರೆ. **"ದೂರದರ್ಶನ, ದಿನಪತ್ರಿಕೆ, ದೂರವಾಣಿ, ಚಲನಚಿತ್ರ, ಗ್ರಂತಾಲಯ, ವಸ್ತುಪ್ರದರ್ಶನ, ಪಟ್ಯಪುಸ್ತಕ, ಉಚ್ಚಶಿಕ್ಶಣ, ದ್ವನಿವರ್ದಕ, ನಿರುದ್ಯೋಗ ಸಮಸ್ಯೆ, ಲೋಕಾಯುಕ್ತ, ಜನಗಣನೆ ಮೊದಲಾದ ಹಲವಾರು ದಿನಬಳಕೆಯ ಪದಗಳಲ್ಲಿ ಕಾಣಿಸುವ ಹಾಗೆ, ಕನ್ನಡದಲ್ಲಿ ಹೊಸ ಪದಗಳನ್ನು ಉಂಟುಮಾಡಬೇಕಾದಾಗಲೆಲ್ಲ ಸಂಸ್ಕ್ರುತಕ್ಕೇನೇ ಮೊರೆಹೋಗುತ್ತಿದ್ದಾರೆ. ಇದಕ್ಕಾಗಿ ಕನ್ನಡದವೇ ಆದ ಪದಗಳನ್ನು ಬಳಸಲು ಸಾದ್ಯವಿದ್ದರೂ ಅವು ಗಮನಕ್ಕೇ ಬರುವುದಿಲ್ಲ"**[೧೧] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ನವ ಪದ ನಿರ್ಮಾಣ ಸಮಯದಲ್ಲಿ ಕನ್ನಡವನ್ನು ಕಡೆಗಣಿಸಲಾಗುತ್ತಿರುವುದರ ಕುರಿತು ಹೇಳಿದ್ದಾರೆ.

ಇದರೊಂದಿಗೆ ಸುಲಭವಾಗಿ ಅರ್ಥವಾಗುವ ಕನ್ನಡ ಪದಗಳು ಚಾಲ್ತಿಯಲ್ಲಿದ್ದರೂ ಅವುಗಳ ಬದಲಿಗೆ ಕ್ಲಿಷ್ಟಕರವಾದ ಸಂಸ್ಕೃತ ಪದಗಳನ್ನು ಹೆಚ್ಚಿನ ಬರಹಗಾರರು ಬಳಸುತ್ತಿರುವ ಸಂಗತಿಯೆಡೆಗೆ ಅವರು ಗಮನ ಸೆಳೆಯುತ್ತಾರೆ. ಇದಕ್ಕೆ ಉದಾಹರಣೆಯಾಗಿ ಕನ್ನಡ ದಿನಪತ್ರಿಕೆಗಳಲ್ಲಿ ಬಳಕೆಯಾಗುತ್ತಿರುವ ಲಭ್ಯ, ಶೀಘ್ರ, ಆಬಾಧಿತ, ಪ್ರಥಮ, ಬೃಹತ್, ಸೂಕ್ತ, ಭುವಿ, ಧರೆ, ನಭ ಮೊದಲಾದ ಹಲವು ಸಂಸ್ಕೃತ ಪದಗಳನ್ನು ಬಳಸುವುದನ್ನು ಉದಾಹರಿಸುತ್ತಾರೆ.[೨]

ಜನಸಾಮಾನ್ಯರನ್ನು ಚಿತ್ರಿಸುವ ಕತೆ, ಕಾದಂಬರಿ, ನಾಟಕ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಸಂಸ್ಕೃತ ಪದಗಳ ಬಳಕೆಯ ಪ್ರಮಾಣ ಶೇ. ೬-೧೦ ಬಳಕೆಯಲ್ಲಿದ್ದರೆ, ಕನ್ನಡದ ದಿನ ಮತ್ತು ವಾರ ಪತ್ರಿಕೆಗಳಲ್ಲಿ ಶೇ. ೩೦ರಷ್ಟು ಸಂಸ್ಕೃತ ಪದಗಳ ಬಳಕೆಯಾಗುತ್ತಿದೆ ಎಂದು ಶಂಕರ ಬಟ್ಟರು ಹೇಳುತ್ತಾರೆ. ಈ ಮೂಲಕ ಕನ್ನಡದ ಮಾಧ್ಯಮಗಳಲ್ಲಿ ಕೂಡ ಕನ್ನಡದ ಬದಲಿಗೆ ಸಂಸ್ಕೃತ ಪದಗಳಿಗೆ ಒತ್ತು ನೀಡುತ್ತಿರುವುದರ ಕುರಿತು ವಿವರಿಸಿದ್ದಾರೆ.

೪.೬. ಹೊಸ ಪದಗಳನ್ನು ಕಟ್ಟುವ ಯತ್ನ

ಡಿ. ಎನ್. ಶಂಕರ ಬಟ್ಟರ ಸಂಸ್ಕೃತರಹಿತ ಕನ್ನಡ ಪದಗಳ ನಿರ್ಮಾಣದ ಕುರಿತು ಅನೇಕ ಪ್ರಶ್ನೆಗಳು ಎದುರಾಗಿದ್ದವು. ಈಗ ಸಂಸ್ಕೃತ ಪದಗಳ ಜಾಗದಲ್ಲಿ ಕನ್ನಡ ಪದಗಳನ್ನು ಕಟ್ಟುವುದು ಹೇಗೆ? ಅವುಗಳನ್ನು ಕಟ್ಟುವವರು ಯಾರು? ಅವುಗಳನ್ನು ಬಳಸುವವರು ಯಾರು? ಯಾವೆಲ್ಲ ಪದಗಳಿಗೆ ಪರ್ಯಾಯ ಪದಗಳನ್ನು ಕಟ್ಟಬೇಕು? ಎಂಬಿತ್ಯಾದಿ ಪ್ರಶ್ನೆಗಳಿಗೆ ಮೊದಲು ಸ್ವತಃ ಶಂಕರ ಬಟ್ಟರೇ ಹೊಸ ಪದಗಳನ್ನು ಕಟ್ಟುವ ಮೂಲಕ ಉತ್ತರಿಸಿದ್ದಾರೆ.

"ಕನ್ನಡ ಬರಹದ ಮೇಲೆ ಸಂಸ್ಕ್ರುತ ಪದಗಳ ಹೊರೆ ಜಾಸ್ತಿಯಾಗದ ಹಾಗೆ ಮಾಡಲು ನಾವು ಹೊಸ ಹೊಸ ಪದಗಳನ್ನು ಉಂಟುಮಾಡಬೇಕಾದಾಗಲೆಲ್ಲ ಸಂಸ್ಕ್ರುತದ ಪದ ಮತ್ತು ಪ್ರತ್ಯಯಗಳನ್ನು ಬಳಸುವ ಚಾಳಿಯನ್ನು ಸಾದ್ಯವಿದ್ದಶ್ಟು ಕಡಿಮೆ ಮಾಡಬೇಕು. ಯಾಕೆಂದರೆ, ಈ ಚಾಳಿಯಿಂದಾಗಿ ಇವತ್ತು ಕನ್ನಡ ಬರಹದ ಸ್ವರೂಪವೇ ಬದಲಾಗುತ್ತಿದೆ. ಅದು ತನ್ನ ಸಹಜತೆಯನ್ನು ಕಳೆದುಕೊಂಡು ಕ್ರುತಕವಾಗುತ್ತಿದೆ ಮತ್ತು ಆಡುಮಾತಿನಿಂದ ದೂರಹೋಗುತ್ತಿದೆ"[೩] ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ.

ಇದಕ್ಕೆ ಕನ್ನಡ ಪದಗಳ ಬದಲು ಸಂಸ್ಕೃತ ಪದಗಳನ್ನು ಬಳಸಿದಲ್ಲಿ ಬರಹದ ಮಟ್ಟ ಮೇಲಕ್ಕೇರುತ್ತದೆ ಎಂಬ ಕೀಳರಿಮೆಯಿಂದ ಇಂಥ ಪ್ರವೃತ್ತಿ ಬೆಳೆದು ಬಂದಿದೆ ಎಂದು ಹಾಗೂ ಕೆಲವು ಬರಹಗಾರರಲ್ಲಿ ಈ ಪ್ರವೃತ್ತಿ ಇದೆ ಎನ್ನುವುದು ಅವರ ಹೇಳಿಕೆ. ಇದಕ್ಕೆ ಪೂರಕವಾಗಿ ಕನ್ನಡದಲ್ಲಿ ಕೆಲವು ಲೇಖಕರ ಕೃತಿ, ಲೇಖನಗಳಲ್ಲಿ ಸಂಸ್ಕೃತ ಪದಗಳ ಬಳಕೆಯನ್ನೂ ಕಾಣಬಹುದು. ದೇವನೂರ ಮಹಾದೇವ ಅವರಂಥ ಕೆಲವು ಲೇಖಕರನ್ನು ಹೊರತುಪಡಿಸಿದರೆ ಸಂಸ್ಕೃತ ಪದಗಳನ್ನು ಬಳಸದೆ ಬರೆದ ಲೇಖಕರ ಸಂಖ್ಯೆ ವಿರಳವೆಂದೇ ಹೇಳಬಹುದು.

"ಹೊಸ ಪದಗಳನ್ನು ಉಂಟು ಮಾಡಬೇಕಾದಾಗಲೆಲ್ಲ ಸಂಸ್ಕೃತದ ಮೊರೆಹೋಗುವುದು ಅನಿವಾರ್ಯವೆಂಬುದಾಗಿಯೂ ಕನ್ನಡದ ಬರಹಗಾರರಲ್ಲಿ ಹಲವು ಮಂದಿ ಬಾವಿಸುತ್ತಾರೆ. ಸಂಸ್ಕೃತದಲ್ಲಿರುವಷ್ಟು ಪ್ರತ್ಯಯಗಳು ಮತ್ತು ಪದಗಳು ಕನ್ನಡದಲ್ಲಿಲ್ಲ ಎಂಬ ಅವರ ಅನಿಸಿಕೆ ಇದಕ್ಕೆ ಒಂದು ಕಾರಣವಾದರೆ, ಹೊಸ ಪದಗಳನ್ನು ಉಂಟುಮಾಡುವಲ್ಲಿ ಸಂಸ್ಕೃತಕ್ಕಿರುವ ಕಸುವು ಕನ್ನಡಕ್ಕಿಲ್ಲ ಎಂಬ ಅವರ ಅನಿಸಿಕೆ ಇನ್ನೊಂದು ಕಾರಣ"[೩೪] ಎಂದು ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬಳಸುವವರ ಹಿಂದಿರುವ ಎರಡು ಕಾರಣ ಮತ್ತು ಕೀಳರಿಮೆಗಳನ್ನು ವಿವರಿಸುತ್ತಾರೆ. ಜೊತೆಗೆ, ಇವೆರೆಡೂ ತಪ್ಪು ಅನಿಸಿಕೆಗಳು ಎನ್ನುವ ಅವರು, **"ಯಾವ ರೀತಿಯ ಆಶಯವನ್ನು ಬೇಕಿದ್ದರೂ ಸ್ಪಷ್ಟವಾಗಿ ತಿಳಿಸಬಲ್ಲ ಪದಸಂಪತ್ತು ಮತ್ತು ಪದರಚನೆಯ ವಿದಾನಗಳು ಕನ್ನಡದಲ್ಲಿವೆ. ಮೇಲ್ನೋಟಕ್ಕೆ ಸಂಸ್ಕೃತ ಈ ವಿಶಯದಲ್ಲಿ ಹೆಚ್ಚು ಶ್ರೀಮಂತವಾದ ನುಡಿಯೆಂಬುದಾಗಿ ಅನಿಸಬಹುದು. ಆದರೆ ಆಳವಾಗಿ ಪರಿಶೀಲಿಸಿದಾಗ ಸಂಸ್ಕೃತದ ಈ ಶ್ರೀಮಂತಿಕೆ ಇಲ್ಲವೇ ಹೆಚ್ಚುಗಾರಿಕೆ ನಿಜಕ್ಕೂ ಪದರಚನೆಯಲ್ಲಿ ಕನ್ನಡದ ಮಟ್ಟಿಗೆ ಅನವಶ್ಯಕವಾದ ಗೊಂದಲವನ್ನು ತಂದುಹಾಕುತ್ತದಲ್ಲದೆ, ಅವಶ್ಯವಿರುವ ಸಂಪತ್ತನ್ನೇನೂ ಒದಗಿಸುವುದಿಲ್ಲ ಎಂಬ ವಿಶಯ ಸ್ಪಶ್ಟವಾಗುತ್ತದೆ"**[೩೫] ಎನ್ನುತ್ತಾರೆ. ಈ ಮೂಲಕ ಕನ್ನಡದ ಕೀಳರಿಮೆ ಮತ್ತು ಸಂಸ್ಕೃತದ ಮೇಲರಿಮೆಗೆ ಯಾವುದೇ ಖಚಿತ ಆಧಾರ ಇಲ್ಲ ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

೫.೭. ಪಾರಿಭಾಷಿಕ ಪದಗಳ ನಿರ್ಮಾಣದಲ್ಲಿ ತೊಡಕು

ಕನ್ನಡದಲ್ಲಿ ತಂತ್ರಜ್ಞಾನ, ವಿಜ್ಞಾನ ಮೊದಲಾದ ಅನ್ಯಜ್ಞಾನ ಶಿಸ್ತುಗಳ ಕುರಿತ ಬರಹಗಳಲ್ಲಿ ಪಾರಿಭಾಷಿಕ ಪದಗಳ ಸೃಷ್ಟಿಯಲ್ಲಿ ಕೂಡ ಸಂಸ್ಕೃತ ಮೇಲುಗೈ ಸಾಧಿಸಿದೆ. ಸ್ವತಃ ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ಕೂಡ ಕನ್ನಡದ ಪಾರಿಭಾಷಿಕ ಪದ ಬಳಕೆಯ ಬದಲಿಗೆ ಸಂಸ್ಕೃತ ನೆಲೆಯಾಗಿದೆ. ಇಂತಹ ಪರಿಸ್ಥಿತಿ ನಿರ್ಮಾಣವಾಗಲು ಕನ್ನಡದ ಕುರಿತ ಕೀಳರಿಮೆ, ಅಜ್ಞಾನ ಮತ್ತು ಸಂಸ್ಕೃತ ಕುರಿತ ಮೇಲರಿಮೆ ಹಾಗೂ ಪ್ರೇಮವೇ ಕಾರಣವಾಗಿದೆ.

ಈ ವಿಷಯವನ್ನು ಮತ್ತಷ್ಟು ಖಚಿತಪಡಿಸುವ ಡಿ. ಎನ್. ಶಂಕರ ಬಟ್ಟರು, **"ಹೊಸ ಪದಗಳನ್ನು ಉಂಟುಮಾಡಬೇಕಾಗಿರುವಲ್ಲೆಲ್ಲ ಸಂಸ್ಕೃತದ ಮೊರೆ ಹೋಗುವ ಕೆಟ್ಟ ಚಾಳಿ ವಿಜ್ಞಾನ ಬರಹಗಳಿಗಾಗಿ ಮತ್ತು ಇತರ ಶಾಸ್ತ್ರೀಯ ಬರಹಗಳಿಗಾಗಿ ಪಾರಿಬಾಶಿಕ ಪದಗಳನ್ನು ಉಂಟುಮಾಡುವಲ್ಲಿ ಇನ್ನಷ್ಟು ಹೆಚ್ಚು ಕಾಣಿಸುತ್ತದೆ. ಈ ಚಾಳಿಯಿಂದಾಗಿ ಕನ್ನಡದಲ್ಲಿ ಇದುವರೆಗೆ ಈ ವಿದ್ವಾಂಸರು**

ಉಂಟುಮಾಡಿರುವ ಪಾರಿಬಾಶಿಕ ಪದಗಳಲ್ಲಿ ಹೆಚ್ಚಿನವೂ ಕನ್ನಡದ ಮಟ್ಟಿಗೆ ತುಂಬಾ ತೊಡಕಿನವಾಗಿವೆ”[೩೬] ಎನ್ನುತ್ತಾರೆ.

ಇದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು. ಆರಕ್ಷಕ ಠಾಣೆ, ಅಭಿಯಂತರರು, ಮಹಾಲೇಖಪಾಲ, ಜಿಲ್ಲಾ ದಂಡಾಧಿಕಾರಿ, ತಾಲೂಕು ದಂಡಾಧಿಕಾರಿ, ಸೇನಾ ವರಿಷ್ಠ, ಸೇನಾ ದಂಡಾಧಿಕಾರಿ ವ್ಯವಸ್ಥಾಪಕರು, ಮುಖ್ಯಸ್ಥರು, ಉಪ ನೋಂದಣಾಧಿಕಾರಿ, ನ್ಯಾಯಾಧೀಶ, ನ್ಯಾಯಮೂರ್ತಿ, ಲೋಕಪಾಲ, ಲೋಕಾಯುಕ್ತ, ಘನತೆವೆತ್ತ ರಾಜ್ಯಪಾಲರು, ರಾಷ್ಟ್ರಪತಿ, ಪ್ರಧಾನ ಮಂತ್ರಿ, ಇತ್ಯಾದಿ ಪದಗಳನ್ನು ನೋಡಬಹುದು. ಮೇಲಿನ ಎಲ್ಲ ಪದಗಳಲ್ಲಿ ಸಂಸ್ಕೃತದ ಪ್ರಭಾವ ಅಚ್ಚಳಿಯದಂತೆ ಇದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಕೃತದ ಮೇಲಿನ ವ್ಯಾಮೋಹವೇ ಎನ್ನುವುದಕ್ಕೆ ಇಂಥ ಇನ್ನಷ್ಟು ಪುರಾವೆಗಳು ಸಾಕ್ಷಿಯಾಗಿವೆ.

ಆದರೆ, ಪಾರಿಭಾಷಿಕ ಪದಗಳಲ್ಲಿ ಸಂಸ್ಕೃತದ ಮಾದರಿಯನ್ನು ಅನುಸರಿಸಬೇಕಿಲ್ಲ ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದ. ಅದಕ್ಕಾಗಿ ಅವರು ‘ಕನ್ನಡ ಬರಹ ಸರಿಪಡಿಸೋಣ’ ಸೇರಿದಂತೆ ಇತರ ಪುಸ್ತಕಗಳಲ್ಲಿ ಸಾಕ್ಷಿಗಳನ್ನು ಒದಗಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಈ ಕುರಿತು ಸಂಸ್ಕೃತದ ಮಾದರಿ ಅನುಸರಿಸುವ ಬದಲು, ತಮಿಳಿನ ಮಾದರಿ ಅನುಸರಿಸಬೇಕು ಎಂದು ಅವರು ಹೇಳಿದ್ದಾರೆ. **“ಕನ್ನಡಕ್ಕೆ ತೀರ ಹತ್ತಿರದ ನಂಟಸ್ತಿಕೆಯಿರುವ ತಮಿಳು ನುಡಿಯಲ್ಲಿ ಪಾರಿಬಾಶಿಕ ಪದಗಳ ತಯಾರಿಕೆ ಹೇಗೆ ನಡೆಯುತ್ತಿದೆಯೆಂಬುದನ್ನು ಪರಿಶೀಲಿಸಿದೆವಾದರೆ ಈ ವಿಶಯ ಸ್ಪಷ್ಟವಾಗುತ್ತದೆ. ಹೊಸ ಪಾರಿಬಾಶಿಕ ಪದಗಳನ್ನು ತಯಾರಿಸುವಲ್ಲಿ ಸಂಸ್ಕೃತ ಪದಗಳ ಬಳಕೆ ತಮಿಳಿನಲ್ಲಿ ನೂರಕ್ಕೆ ಒಂದೆರಡರಶ್ಟಿರಬಹುದು, ಅಶ್ಟೆ! ತಮಿಳಿನಲ್ಲಿ ಸಾದ್ಯವಾಗಿರುವುದು ಕನ್ನಡದಲ್ಲಿ ಯಾಕೆ ಸಾದ್ಯವಾಗುವುದಿಲ್ಲ?”**[೩೭] ಎಂದು ಅವರು ಪ್ರಶ್ನಿಸಿದ್ದಾರೆ. ಇದರೊಂದಿಗೆ ತಮಿಳಿನ ಮಾದರಿಯಲ್ಲಿ ಕನ್ನಡ ಪದಗಳನ್ನು ರಚಿಸುವುದರೊಂದಿಗೆ, ಸಂಸ್ಕೃತ ಪದಗಳ ಬದಲಿಗೆ ಹಳೆಗನ್ನಡದ ಪದಗಳನ್ನು ಬಳಸಬಹುದು ಎಂದು ಅವರು ಸಲಹೆ ನೀಡಿದ್ದಾರೆ. ಆದರೆ, ಈ ನಿಟ್ಟಿನಲ್ಲಿ ಕನ್ನಡದ ವಿದ್ವಾಂಸ ವಲಯ ಮನಸು ಮಾಡುತ್ತಿಲ್ಲ ಎನ್ನುವುದು ಅವರ ಆರೋಪವಾಗಿದೆ. ಇದಕ್ಕೆ ಅವರು ಕನ್ನಡದಲ್ಲಿ ಆಗಿರುವ ಅನಾಹುತಗಳನ್ನು ಉದಾಹರಣೆಯಾಗಿ ನೀಡುತ್ತಾರೆ.

“ನುಡಿಯ ನಿಜವಾದ ಸ್ವರೂಪವೇನು, ಅದು ಯಾವ ರೀತಿಯಲ್ಲಿ ನಮ್ಮ ದಿನನಿತ್ಯದ ಜೀವನದ ಮೇಲೆ ಪ್ರಬಾವವನ್ನು ಬೀರಬಲ್ಲುದು, ನುಡಿಗೂ ಬರಹಕ್ಕೂ ನಡುವೆ ಎಂತಹ ಸಂಬಂದವಿದೆ ಎಂಬಂತಹ ಹಲವು ರೀತಿಯ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡಬೇಕಿದ್ದಲ್ಲಿ ನಾವು ನುಡಿಯ ಕುರಿತಾಗಿ ಆಳವಾದ ಸಂಶೋದನೆಗಳನ್ನು ನಡೆಸುವ ಅವಶ್ಯಕತೆಯಿದೆ”[೩೮] ಎನ್ನುತ್ತಾರೆ. ಅಲ್ಲದೇ, ಕಳೆದ ನೂರರಿಂದ ನೂರೈವತ್ತು ವರ್ಷಗಳ ಅವಧಿಯಲ್ಲಿ ಕನ್ನಡದಲ್ಲಿ ಬೆರಗು ಹುಟ್ಟಿಸುವ ಸಂಗತಿಗಳನ್ನು ನುಡಿಯರಿಗರು ಕಂಡುಹಿಡಿದಿದ್ದಾರೆ ಎನ್ನುವ ಡಿ. ಎನ್. ಶಂಕರ ಬಟ್ ಅವರು, ಕನ್ನಡ ಭಾಷೆಗೆ ಸಂಬಂಧಿಸಿದಂತೆ ಇನ್ನಷ್ಟು ಕೆಲಸಗಳು ನಡೆಯಬೇಕಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂಗ್ಲಿಷ್, ಮಣಿಪುರಿ ಮತ್ತು ಅಸಾಮಿಯಾ ಭಾಷೆಯಲ್ಲಿ ಅರ್ಥಕೋಶಗಳನ್ನು ತಯಾರಿಸುವ ಸಮಯದಲ್ಲಿ ವ್ಯುತ್ಪತ್ತಿಗೆ ಹೆಚ್ಚಿನ

ಒತ್ತು ನೀಡಲಾಗಿದೆ. ಆದರೆ, ಬರಹದ ನಿಜವಾದ ಉದ್ದೇಶವನ್ನು ಸಾಧಿಸುವಲ್ಲಿ ಇದಕ್ಕೆ ಯಾವ ಕೆಲಸವೂ ಇಲ್ಲ. ಆ ಎರಡು ಭಾಷೆಗಳಲ್ಲಿ ಆದ ತಪ್ಪುಗಳೇ ಕನ್ನಡದಲ್ಲೂ ಆಗಿವೆ ಎನ್ನುತ್ತಾರೆ.

"ಕನ್ನಡಕ್ಕೆ ಬ್ರಾಹ್ಮೀ ಲಿಪಿಯನ್ನು ಅಳವಡಿಸಿಕೊಳ್ಳುವ ಸಮಯದಲ್ಲಿ ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಸಂಸ್ಕೃತ ಬರಹಗಳಲ್ಲಿರುವ ಹಾಗೆಯೇ ಬರೆಯಬೇಕು ಎಂಬುದಾಗಿ ಕನ್ನಡದ ವಿದ್ವಾಂಸರು ನಿರ್ದರಿಸಿದ್ದುದೂ ಅಂತಹದೇ ಒಂದು ತಪ್ಪು ನಿರ್ದಾರ. ಬರಹದ ನಿಜವಾದ ಸ್ವರೂಪ, ಅದಕ್ಕೂ ನುಡಿಗೂ ನಡುವಿರುವ ಸಂಬಂದ ಮತ್ತು ಬರಹದ ಬಳಕೆಯ ಮುಕ್ಯ ಉದ್ದೇಶ ಮೊದಲಾದವನ್ನು ತಿಳಿದುಕೊಳ್ಳದೆ ಕನ್ನಡದ ವಿದ್ವಾಂಸರು ಈ ತಪ್ಪು ನಿರ್ದಾರವನ್ನು ಮಾಡಿದ್ದರು"[೩೯] ಎನ್ನುತ್ತಾರೆ. ಈ ಮೂಲಕ ಕನ್ನಡದ ಆರಂಭದ ಕಾಲಘಟ್ಟದಲ್ಲೇ ಸಂಸ್ಕೃತದ ಹೇರಿಕೆಯನ್ನು ಕನ್ನಡ ಸ್ವೀಕರಿಸುವ ಪ್ರಮಾದ ಆಗಿರುವುದರ ಕಡೆಗೆ ಭಾಷಾ ವಿಜ್ಞಾನಿಗಳ ಗಮನ ಸೆಳೆಯುತ್ತಾರೆ. ಆದರೆ, ಅವರ ಮಾತುಗಳನ್ನು ಪ್ರಚಲಿತ ಭಾಷೆಯ ಅಧ್ಯಯನಕಾರರ ಪೈಕಿ ಬೆರಳೆಣಿಕೆಯಷ್ಟು ವಿದ್ವಾಂಸರು (ಉದಾಹರಣೆಗೆ, ಕೆ. ವಿ. ನಾರಾಯಣ, ಬಸವರಾಜ ಕೋಡಗುಂಟಿ, ಆರ್. ಚಲಪತಿ, ಮಲ್ಲಿಕಾರ್ಜುನ ಮೇಟಿ ಮೊದಲಾದವರು) ಮಾತ್ರ ಸಮರ್ಥಿಸುತ್ತಿದ್ದರೆ, ಬಹುತೇಕರು (ಉದಾಹರಣೆಗೆ, ಕೆ. ವಿ. ತಿರುಮಲೇಶ್ ಮೊದಲಾದವರು) ವಿರೋಧಿಸುತ್ತಿದ್ದಾರೆ. ಈ ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಕುರಿತು ಡಿಎನ್‌ಎಸ್ ಹೇಳಿಕೆ: **"ಕನ್ನಡ ವ್ಯಾಕರಣವನ್ನು ಬರೆಯುವುದರಲ್ಲಿ ಮತ್ತು ಕಲಿಸುವುದರಲ್ಲಿಯೂ ಹೇಗೆ ನಮ್ಮ ವಿದ್ವಾಂಸರು ಒಂದು ಸಾವಿರ ವರ್‍ಶಗಳಿಂದಲೂ ಇಂತಹುದೇ ಒಂದು ತಪ್ಪನ್ನು ಮಾಡುತ್ತಾ ಬಂದಿದ್ದಾರೆ, ಸಂಸ್ಕ್ರುತ ವ್ಯಾಕರಣವನ್ನೇ ಕನ್ನಡ ವ್ಯಾಕರಣವೆಂಬುದಾಗಿ ಅವರು ಬ್ರಮಿಸಿದುದರಿಂದಾಗಿ ಹೇಗೆ ನಮ್ಮ ಮಕ್ಕಳಿಗೆ ಇವತ್ತು ವ್ಯಾಕರಣವೆಂಬುದು ಒಂದು ಅನವಶ್ಯಕವಾದ ಮತ್ತು ಅರ್‍ತವಿಲ್ಲದ ಕಗ್ಗಂಟಾಗಿದೆ ಮತ್ತು ಈ ಸಮಸ್ಯೆಯಿಂದ ಹೊರಗೆ ಬರುವುದು ಹೇಗೆ ಎಂಬುದನ್ನು ನಾನು ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ಪುಸ್ತಕದಲ್ಲಿ ತೋರಿಸಿಕೊಟ್ಟಿದ್ದೇನೆ"**[೪೦] ಎನ್ನುತ್ತಾರೆ. ಮೇಲಿನ ಅವರ ಮಾತುಗಳಲ್ಲಿ ಪ್ರಮುಖವಾಗಿ ಕನ್ನಡದಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿರುವ ಸಂಸ್ಕೃತ ವ್ಯಾಕರಣದ ಕುರಿತ ತಪ್ಪು ತಿಳಿವಳಿಕೆಯನ್ನು ಮನವರಿಕೆ ಮಾಡುವ ಯತ್ನವಿದೆ. ಕನ್ನಡದ ಹೆಸರಿನಲ್ಲಿ ಕಲಿಸಲಾಗುತ್ತಿರುವ ಸಂಸ್ಕೃತ ವ್ಯಾಕರಣದಿಂದಾಗಿ ವ್ಯಾಕರಣ ಕಲಿಕೆಯೇ ಕಗ್ಗಂಟಾಗಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಕನ್ನಡ ನುಡಿಗೂ ಸಂಸ್ಕೃತಕ್ಕೂ ಸಂಬಂಧ ಇಲ್ಲ ಎನ್ನುವುದು ಡಿ. ಎನ್. ಶಂಕರ ಬಟ್ ಅವರ ಪ್ರಮುಖ ಪ್ರಮೇಯ. ಈ ಕುರಿತು ಅವರ ಅಭಿಪ್ರಾಯ ಹೀಗಿದೆ: "'ಕನ್ನಡಕ್ಕೆ ಸಂಸ್ಕ್ರುತ ಮೂಲ' ಎಂಬ ಮಾತಿನಲ್ಲಿ ನಂಬಿಕೆಯನ್ನಿರಿಸಿಕೊಂಡಿರುವವರು ಇವತ್ತಿಗೂ ಕರ್‍ನಾಟಕದಲ್ಲಿ ಬಹಳ ಮಂದಿ ಇದ್ದಾರೆ. ಕನ್ನಡಕ್ಕೆ ಮಾತ್ರವಲ್ಲ ಪ್ರಪಂಚದ ಎಲ್ಲಾ ನುಡಿಗಳಿಗೂ ಸಂಸ್ಕ್ರುತವೇ ಮೂಲ ಎಂಬುದಾಗಿ ನಂಬುವವರೂ ಹಲವು ಮಂದಿ ಇದ್ದಾರೆ. ಇದಲ್ಲದೇ, ಈ ನಂಬಿಕೆಗಳನ್ನು ಪೋಶಿಸಿಕೊಂಡು ಬರುವ ವಿದ್ವಾಂಸರೂ ನಮ್ಮಲ್ಲಿ ಹಲವು ಮಂದಿ ಇದ್ದಾರೆ"[೪೧] ಎನ್ನುತ್ತಾರೆ. ಆದರೆ, ಇದಕ್ಕೆ ಯಾವುದೇ ಆಧಾರವಿಲ್ಲ ಎನ್ನುವುದನ್ನು ಅವರು ಮುಂದಿನ ವಾಕ್ಯಗಳಲ್ಲಿ ಹೇಳುತ್ತಾರೆ. "ಈ ನಂಬಿಕೆಗಳಿಗೆ

ಆದಾರವೇನು ಎಂಬುದಾಗಿ ಯಾರಾದರೂ ಕೇಳಿದಲ್ಲಿ ಅದಕ್ಕೆ ಉತ್ತರ ಕೊಡಬಲ್ಲವರು ಯಾರೂ ಇಲ್ಲ. ನಿಜಕ್ಕೂ ಅಂತಹ ಆದಾರ ಯಾವುದೂ ಇಲ್ಲ. 'ಕನ್ನಡಕ್ಕೆ ಸಂಸ್ಕ್ರುತ ಮೂಲ' ಎಂಬುದು ಒಂದು ಕುರುಡು ನಂಬಿಕೆ ಮಾತ್ರ. ನಮ್ಮ ವಿದ್ವಾಂಸರಿಗೆ ಮತ್ತು ಇತರ ಹಲವು ಜನರಿಗೆ ಸಂಸ್ಕ್ರುತದ ಮೇಲಿರುವ ಆದರ ಮತ್ತು ಅಬಿಮಾನಗಳು ಮಾತ್ರವೇ ಆ ನಂಬಿಕೆಗೆ ಆದಾರವಾಗಿವೆ"[೪೨] ಎನ್ನುವುದು ಡಿ. ಎನ್. ಶಂಕರ ಬಟ್ ಅವರ ಖಚಿತ ಹೇಳಿಕೆ. ಈ ಮೂಲಕ ಕನ್ನಡಕ್ಕೆ ಸಂಸ್ಕೃತ ಮೂಲವಲ್ಲ ಎಂದು ಅವರು ಹೇಳುತ್ತಾರೆ.

ತಮ್ಮ ಹೇಳಿಕೆಯನ್ನು ಸಮರ್ಥಿಸಲು ಅವರು ಹೀಗೆ ಹೇಳುತ್ತಾರೆ: **"ವಿವರಿಸಲು ಸಾದ್ಯವಾಗದ ವ್ಯತ್ಯಾಸಗಳನ್ನಾದರಿಸಿ, ಸಂಸ್ಕ್ರುತ ಮತ್ತು ಕನ್ನಡ ನುಡಿಗಳನ್ನು ಎರಡು ತೀರ ಬೇರಾಗಿರುವ ಮೂಲ ನುಡಿಗಳಿಂದ ಬೆಳೆದು ಬಂದಿರುವವುಗಳೆಂಬುದಾಗಿ ಪರಿಗಣಿಸಬೇಕಾಗಿದೆ. ಸಂಸ್ಕ್ರುತ 'ಇಂಡೋ-ಆರ್ಯನ್' ಎಂಬ ಹೆಸರಿನ ಮೂಲ ನುಡಿಯಿಂದ ಮತ್ತು ಕನ್ನಡ ಅದಕ್ಕಿಂತ ತೀರ ಬೇರಾಗಿರುವ 'ದ್ರಾವಿಡ' ಎಂಬ ಹೆಸರಿನ ಮೂಲ ನುಡಿಯಿಂದ ಬಂದಿದೆಯೆಂಬುದಾಗಿ ಇವತ್ತು ಕಲ್ಪಿಸಿಕೊಳ್ಳಬೇಕಾಗಿದೆ"**[೪೩] ಎನ್ನುತ್ತಾರೆ. ಇದಕ್ಕಾಗಿ ಅವರು ಸಂಸ್ಕೃತ ನುಡಿ ಇವತ್ತಿನ ಮರಾಠಿ ನುಡಿಯಾಗಿ ಬದಲಾಗಿದೆ. ಜೊತೆಗೆ ಮರಾಠಿ, ಕೊಂಕಣಿ, ಹಿಂದಿ, ಗುಜರಾತಿ, ಪಂಜಾಬಿ, ಬಂಗಾಲಿ ಮೊದಲಾದ ಹಲವು ಭಾಷೆಗಳಾಗಿ ಒಡೆದುಕೊಂಡಿದೆ ಎಂದು ಅಭಿಪ್ರಾಯಪಡುತ್ತಾರೆ. ಇದರೊಂದಿಗೆ ನುಡಿ ಕುಟುಂಬದಲ್ಲಿ ಆಗುವ ವ್ಯತ್ಯಾಸಗಳನ್ನು ಕರ್ನಾಟಕದ ಬಡಗು, ತೆಂಕು ಮತ್ತು ಕರಾವಳಿ ಪ್ರದೇಶಗಳಲ್ಲಿರುವ ವ್ಯತ್ಯಾಸಗಳನ್ನು ಉದಾಹರಿಸುತ್ತಾರೆ. ಒಂದೇ ಕುಟುಂಬದಿಂದ ಟಿಸಿಲೊಡೆದ ಭಾಷೆ ಕಾಲಾನಂತರದಲ್ಲಿ ವ್ಯತ್ಯಾಸಗೊಳ್ಳುವುದನ್ನು ವಿವರಿಸುತ್ತಾರೆ.

"ಭಾರತದಲ್ಲಿ ಬಳಕೆಯಲ್ಲಿರುವ ನುಡಿಗಳನ್ನು ಇಂಡೋ-ಯೂರೋಪಿಯನ್, ದ್ರಾವಿಡ, ಟಿಬೆಟೋ-ಬರ್ಮನ್ ಮತ್ತು ಆಸ್ಟ್ರೋ-ಏಶಿಯಾಟಿಕ್ ಎಂಬ ನಾಲ್ಕು ಮುಕ್ಯ ನುಡಿಕುಟುಂಬಗಳಲ್ಲಿ ವಿಂಗಡಿಸಿ ಹೇಳಲಾಗುತ್ತದೆ. ಅವುಗಳ ನಡುವೆ ಕಾಣಿಸುವ ವ್ಯತ್ಯಾಸಗಳಲ್ಲಿ ಹೆಚ್ಚಿನವನ್ನೂ ಮೇಲೆ ವಿವರಿಸಿದ ಹಾಗೆ ನಾಲ್ಕು ಮೂಲ ನುಡಿಗಳಲ್ಲಿ ನಡೆದ ಬದಲಾವಣೆಗಳಿಂದಾಗಿ ಉಂಟಾದವುಗಳು ಎಂಬುದಾಗಿ ತೋರಿಸಿಕೊಡಲು ಸಾದ್ಯವಾಗಿರುವುದೇ ಇದಕ್ಕೆ ಆದಾರ"[೪೪] ಎನ್ನುತ್ತಾರೆ. ಮುಂದುವರೆದು ಹಿಂದಿ ಮರಾಠಿ, ಗುಜರಾತಿ, ಪಂಜಾಬಿ, ಬಂಗಾಲಿ ಮೊದಲಾದ ಉತ್ತರದ ಭಾಷೆಗಳ ನಡುವೆ ವ್ಯತ್ಯಾಸಗಳಲ್ಲಿ ಹೆಚ್ಚಿನವನ್ನು ಸಂಸ್ಕೃತ ಅಥವಾ ಅದಕ್ಕೆ ಹತ್ತಿರದ ಒಂದು ಮೂಲ ನುಡಿಯಲ್ಲಿ ಬೇರೆ ಬೇರೆ ದಿಕ್ಕುಗಳಲ್ಲಿ ನಡೆದ ಬದಲಾವಣೆಗಳಿಂದ ಉಂಟಾಗಿರುವುದು ಎಂದು ಸಾಬೀತುಪಡಿಸಲು ಸಾಧ್ಯ. ಪ್ರಾಕೃತ, ಪಾಲಿ, ಅಪಭ್ರಂಶ ಮೊದಲಾದ ಪ್ರಭೇದಗಳಲ್ಲಿ ಬದಲಾವಣೆಯ ಹಂತಗಳನ್ನು ಕಾಣಬಹುದು ಎಂದು ಅವರು ಅಭಿಪ್ರಾಯಪಡುತ್ತಾರೆ. ಜೊತೆಗೆ, ಕನ್ನಡಕ್ಕೂ ಮತ್ತು ಹಿಂದಿ, ಮರಾಟಿ, ಗುಜರಾತಿ ಮೊದಲಾದ ಇಂಡೋ-ಆರ್ಯನ್ ನುಡಿಗಳಿಗೂ ನಡುವೆ ಕಾಣಿಸುವ ವ್ಯತ್ಯಾಸಗಳನ್ನು ಅದೇ ರೀತಿ ಸಂಸ್ಕೃತದಲ್ಲಿ ತೋರಿಸಲು ಸಾಧ್ಯವಿಲ್ಲ ಎನ್ನುತ್ತಾರೆ.[೪೫]

"ಎರಡು ನುಡಿಗಳನ್ನು ಒಂದೇ ನುಡಿಕುಟುಂಬದಲ್ಲಿ ಸೇರಿಸಿ ಹೇಳಲು ಸಾಧ್ಯವೇ ಅತವಾ ಇಲ್ಲವೇ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಲು ನಮಗಿರುವ ಆದಾರ ಒಂದೇ. ಅದೇನೆಂದರೆ, ಆ

ಎರಡು ನುಡಿಗಳ ನಡುವೆ ಕಾಣಿಸುವ ವ್ಯತ್ಯಾಸಗಳೆಲ್ಲ ಮೂಲನುಡಿಯೊಂದರಲ್ಲಿ ಪದ ಬದಲಾವಣೆಗಳಿಂದಾಗಿ ಉಂಟಾಗಿವೆಯೆಂಬುದಾಗಿ ವಿವರಿಸಲು ಸಾದ್ಯವಾಗುತ್ತಿದೆಯೇ ಅತವಾ ಇಲ್ಲವೇ ಎಂಬುದು"[೪೬] ಎನ್ನುವ ಡಿ. ಎನ್. ಶಂಕರ ಬಟ್ಟರು, ಹಾಗೆ ವಿವರಿಸಲು ಸಾಧ್ಯವಾಗುತ್ತಿದೆ ಎನ್ನುವುದಾದರೆ, ಅವೆರೆಡು ನುಡಿಗಳು ಒಂದೇ ನುಡಿಕುಟುಂಬಕ್ಕೆ ಸೇರಿವೆಯೆಂದು ಹೇಳಬಹುದು; ಇಲ್ಲವಾದರೆ ಅವು ಬೇರೆ ನುಡಿಕುಟುಂಬಗಳಿಗೆ ಸೇರಿವೆಯೆಂದೇ ಹೇಳಬೇಕು ಎಂಬ ಖಚಿತ ನಿಧಾರಕ್ಕೆ ಬರುತ್ತಾರೆ. ಇದಕ್ಕಾಗಿ ಕನ್ನಡ ಮತ್ತು ಮರಾಠಿಗಳಲ್ಲಿರುವ ವ್ಯತ್ಯಾಸಗಳನ್ನು ಮತ್ತು ದ್ರಾವಿಡ ಭಾಷೆಗಳಲ್ಲಿ ಆಗಿರುವ ವ್ಯತ್ಯಾಸಗಳಲ್ಲಿರುವ ಸಾಮ್ಯತೆಗಳನ್ನು ಉದಾಹರಿಸುತ್ತಾರೆ.

"ಕನ್ನಡ ಮತ್ತು ಮರಾಟಿ ನುಡಿಗಳ ಕೆಲವು ದಿನಬಳಕೆಯ ಪದಗಳನ್ನು ಕೆಳಗೆ ಕೊಡಲಾಗಿದೆ. ಇವನ್ನು ಸಂಸ್ಕ್ರುತ ಪದಗಳೊಂದಿಗೆ ಹೋಲಿಸಿ ನೋಡಿದಾಗ, ಮರಾಟಿ ಸಂಸ್ಕ್ರುತದಿಂದ (ಇಲ್ಲವೇ ಅದಕ್ಕೆ ಹತ್ತಿರವಿರುವ ಬೇರೊಂದು ಇಂಡೋ-ಆರ್ಯನ್ ಮೂಲನುಡಿಯಿಂದ) ಬೆಳೆದುಬಂದಿದೆ, ಆದರೆ, ಕನ್ನಡ ಆ ಮೂಲದಿಂದ ಬೆಳೆದುಬಂದಿಲ್ಲ ಎಂಬ ವಿಶಯ ಸ್ಪಶ್ಟವಾಗುತ್ತದೆ.

ಕನ್ನಡ	ಸಂಸ್ಕ್ರುತ	ಮರಾಟಿ
ಎರಡು	ದ್ವೌ	ದೋನ್
ಬೆಲ್ಲ	ಗುಡ	ಗೂಳ್
ಏಳು	ಸಪ್ತ	ಸಾತ್
ಬೆಂಕಿ	ಅಗ್ನಿ	ಆಗ್
ಹುಲ್ಲು	ಗ್ರಾಸ	ಘಾಸ್
ಎಳ್ಳು	ತಿಲ	ತೀಳ್
ನಾಲಿಗೆ	ಜಿಹ್ವಾ	ಜೀಭ್
ಹತ್ತು	ದಶ	ದಸ್
ಎಲೆ	ಪರ್ಣ	ಪಾನ್
ಹುಡುಗ	ಬಾಲ	ಬಾಳ್
ಕೈ	ಹಸ್ತ	ಹಾತ್
ದಾರಿ	ಮಾರ್ಗ	ಮಾಗ್
ಮಗ	ಪುತ್ರ	ಪೂತ್
ಇವತ್ತು	ಅದ್ಯ	ಆಜ್
ನಾಚುಗೆ	ಲಜ್ಜಾ	ಲಾಜ್
ಹಾವು	ಸರ್ಪ	ಸಾಪ್"[೪೭]

ಮೇಲಿನ ಉದಾಹರಣೆಗಳ ಮೂಲಕ ಮರಾಠಿ ಮತ್ತು ಸಂಸ್ಕೃತ ಪದಗಳಿಗೆ ಸಾಮ್ಯತೆ ಇದೆಯೇ ಹೊರತಾಗಿ ಕನ್ನಡ ಮತ್ತು ಸಂಸ್ಕೃತಕ್ಕೆ ಯಾವುದೇ ರೀತಿಯ ಸಾಮ್ಯತೆ ಇಲ್ಲವೆನ್ನುವುದು ಸಾಬೀತಾಗುತ್ತದೆ. ಇದಕ್ಕೆ ಪೂರಕವಾಗಿ ಕನ್ನಡ, ಸಂಸ್ಕೃತ ಕ್ರಿಯಾಪದಗಳಲ್ಲಿರುವ ವ್ಯತ್ಯಾಸಗಳನ್ನು ಕೂಡ ಅವರು ಉದಾಹರಿಸಿದ್ದಾರೆ.

ಮರಾಠಿ	**ಸಂಸ್ಕೃತ**	**ಕನ್ನಡ**
ಕರ್	ಕೃ	ಮಾಡು
ಖಣ್	ಖನ್	ಅಗೆ
ಖಾ	ಖಾದ್	ತಿನ್ನು
ಖೇಳ್	ಖೇಲ್	ಆಡು
ಜಾಣ್	ಜ್ಞಾ	ತಿಳಿ
ತುಟ್	ತೃಟ್	ಕಡಿ
ದೇಖ್	ದೃಷ್	ನೋಡು
ಕೋಪ್	ಕುಪ್	ಕೋಪಿಸು/ಕನಲು
ಜಳ್	ಜ್ವಲ್	ಜ್ವಲಿಸು/ಉರಿ
ನಾಚ್	ನೃತ್	ನರ್ತಿಸು/ಕುಣಿ
ಪಢ್	ಪಠ್	ಪಟಿಸು/ಓದು
ಠೇವ್	ಸ್ಥಾ(ಪಯ್)	ಸ್ಥಾಪಿಸು/ಇಡು
ಸಾಹ್	ಸಹ್	ಸಹಿಸು/ತಾಳು
ವಾಢ್	ವರ್ಧ್	ವರ್ಧಿಸು/ಬೆಳೆ[೪೮]

ಮೇಲಿನ ಪಟ್ಟಿಯಲ್ಲಿ ಎರಡು ವಿಭಾಗಗಳಿವೆ. ಕೋಪಿಸು ಪದದ ನಂತರದ ಪದಗಳು – ಇಸು ಪ್ರತ್ಯಯವನ್ನು ಒಳಗೊಂಡಿವೆ. ಅದರ ಮೇಲಿನ ಪದಗಳಲ್ಲಿ ಯಾವುದೇ ರೀತಿಯ ಸಾಮ್ಯತೆ ಇಲ್ಲ. – ಇಸು ಪ್ರತ್ಯಯ ಒಳಗೊಂಡಿರುವ ಪದಗಳು ಸಂಸ್ಕೃತದಿಂದ ಬಂದ ಪದಗಳು ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. ಇದರೊಂದಿಗೆ ಕನ್ನಡದ ಶಬ್ದಗಳು ಕೂಡ ಇವೆ ಎನ್ನುವುದಕ್ಕೆ ಅಲ್ಲಿ ಸಂಸ್ಕೃತದ ಬದಲಾಗಿ ಕನ್ನಡ ಪದವನ್ನೂ ಕೊಡಲಾಗಿದೆ. ಈ ಉದಾಹರಣೆಗಳು ಕನ್ನಡ ಮತ್ತು ಸಂಸ್ಕೃತಕ್ಕೆ ನಡುವಿರುವ ಭಿನ್ನತೆಗೆ ಪೂರಕವಾದ ಉದಾಹರಣೆಗಳಾಗಿವೆ.

ಮರಾಠಿ ಮತ್ತು ಸಂಸ್ಕೃತದ ಸಂಬಂಧ ಮತ್ತು ಕನ್ನಡದ ನಡುವಿನ ಭಿನ್ನತೆಗೆ ಅವರು ಮತ್ತಷ್ಟು ಉದಾಹರಣೆಗಳನ್ನು ಕೊಡುತ್ತಾರೆ. ಅವರ ಪ್ರಕಾರ: **“ಮರಾಟಿಯಲ್ಲಿ ಕನ್ನಡದ ಹಾಗೆ**

ಎರಡು ರೀತಿಯ ಕ್ರಿಯಾಪದಗಳು ಕಾಣಿಸುವುದಿಲ್ಲ. ಸಂಸ್ಕೃತದಿಂದ ಇತ್ತೀಚೆಗೆ ಎರವಲಾಗಿ ಪಡೆದ ರಚ್‌ಣೇ, 'ರಚಿಸು', ಲಾಭ್‌ಣೇ, 'ಲಭಿಸು', ಸ್ತವ್‌ಣೇ 'ಸ್ತುತಿಸು', ನಮ್‌ಣೇ 'ನಮಿಸು' ಮೊದಲಾದ 'ತತ್ಸಮ' ಪದಗಳಿಗೂ ಮರಾಟಿಯವೇ ಆದ ಕರ್, ಖಾ, ಜಾಣ್ ಮೊದಲಾದ ಕ್ರಿಯಾಪದಗಳ ಹಾಗೆ ಕ್ರಿಯಾಪ್ರತ್ಯಯಗಳನ್ನು ನೇರವಾಗಿ ಸೇರಿಸಿ ಬಳಸಲು ಸಾಧ್ಯವಿದೆ"[೬೯] ಎಂಬ ಉಲ್ಲೇಖವನ್ನು ಅವರು ನೀಡಿದ್ದಾರೆ.

ಮೇಲಿನ ಎಲ್ಲ ಉದಾಹರಣೆಗಳ ನಂತರ ಕನ್ನಡ ದ್ರಾವಿಡ ಮೂಲ ಎಂಬುದಕ್ಕೆ ಮತ್ತಷ್ಟು ಸಾಕ್ಷಿಗಳನ್ನು ಡಿ. ಎನ್. ಶಂಕರ ಬಟ್ಟರು ಒದಗಿಸಿದ್ದಾರೆ.

	ಕನ್ನಡ	ತಮಿಳು	ತೆಲುಗು	ಮೂಲದ್ರಾವಿಡ	ಸಂಸ್ಕೃತ
೧.	ಕಿವಿ	ಚೆವಿ	ಚೆವಿ	ಕೆವಿ	ಕರ್ಣ
೨.	ಕಿರು	ಚಿರು	ಚಿರು	ಕಿರು	ಅಲ್ಪ
೩.	ಕಾಲು	ಕಾಲ್	ಕಾಲು	ಕಾಲ್	ಪಾದ
೪.	ಕಣ್ಣು	ಕಣ್	ಕನು	ಕಣ್	ಅಕ್ಷಿ
೫.	ಕೊಳ	ಕುಳಮ್	ಕೊಲನು	ಕುಳಮ್	ತಟಾಕ
೬.	ಕೊಲ್ಲು	ಕೊಲ್	ಕೊಲ್ಲು	ಕೊಲ್	ಹನ್
೭.	ಸಿಕ್ಕು	ಚಿಕ್ಕು	ಚಿಕ್ಕು	ಚಿಕ್ಕು	ಲಭ್
೮.	ಸೆರೆ	ಚಿರೈ	ಚೆರ	ಚೆರೈ	ಬಂಧನಂ
೯.	ಸುಡು	ಚುಡು	ಚುಡು	ಚುಡು	ದಹ್
೧೦.	ಸಾಯು	ಚಾ	ಚಚ್ಚು	ಚಾ	ಮೃ
೧೧.	ಸಪ್ಪೆ	ಚಪ್ಪೈ	ಚಪ್ಪ	ಚಪ್ಪಯ್	ನೀರಸ
೧೨.	ಸೊಕ್ಕು	ಚೊಕ್ಕು	ಚೊಕ್ಕು	ಚೊಕ್ಕು	ಉನ್ಮತ್ತ"[೫೦]

ಮೇಲಿನ ಉದಾಹರಣೆಗಳ ಮೂಲಕ ಅಂಗವಾಚಕಗಳು, ಕ್ರಿಯಾಪದ ಮೊದಲಾದ ಪದಗಳಲ್ಲಿ ಕೂಡ ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ತೆಲುಗು ಮತ್ತು ಮೂಲದ್ರಾವಿಡ ಭಾಷೆಗಳ ನಡುವೆ ಯಾವುದೇ ಸಂಬಂಧ ಇಲ್ಲ ಎನ್ನುವುದು ಸಾಬೀತಾಗುತ್ತದೆ. ಇದರೊಂದಿಗೆ ಜ್ಞಾತಿ ಭಾಷೆಗಳಾದ ದ್ರಾವಿಡ ಭಾಷೆಗಳಲ್ಲಿ ಸಾಮ್ಯತೆ ಇರುವುದು ಕೂಡ ಕಂಡು ಬರುತ್ತದೆ. ಈ ಎಲ್ಲ ಉದಾಹರಣೆಗಳ ಮೂಲಕ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ನಡುವೆ ಮಾತೃ ಸಂಬಂಧ ಇಲ್ಲ ಎಂದು ಡಿ. ಎನ್. ಶಂಕರ ಬಟ್ ಅವರು ಸಾಬೀತುಪಡಿಸಲು ಸಾಕ್ಷಿಗಳನ್ನು ಒದಗಿಸಿದ್ದಾರೆ.

ಇದರೊಂದಿಗೆ ವ್ಯಾಕರಣದಲ್ಲಿರುವ ಭಿನ್ನಾಂಶಗಳನ್ನು ಕೂಡ 'ಕನ್ನಡ ಬರಹ ಸರಿಪಡಿಸೋಣ' ಕೃತಿಯಲ್ಲಿ ಉದಾಹರಿಸಿದ್ದಾರೆ. ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳಲ್ಲಿರುವ ವ್ಯತ್ಯಾಸಗಳ ಪಟ್ಟಿಯನ್ನು ನೀಡಿದ್ದಾರೆ.

"ಕನ್ನಡ ಸಂಸ್ಕೃತ ಮೂಲ ಎಂಬ ವಾದಕ್ಕಾಗಲಿ ಇಲ್ಲವೇ ಎಲ್ಲಾ ನುಡಿಗಳಿಗೂ ಸಂಸ್ಕೃತವೇ ಮೂಲ ಎಂಬ ವಾದಕ್ಕಾಗಲಿ ಯಾವುದೊಂದು ಸಂಶೋದನೆಯೂ ಆದಾರವಾಗಿಲ್ಲ. ಅದೊಂದು ಹಳೇ ನಂಬಿಕೆಯ ಮೇಲೆ ನಿಂತಿರುವ ವಾದ ಮಾತ್ರ. ನಮ್ಮಲ್ಲಿರುವ ಕೆಲವರು ವಿದ್ವಾಂಸರಿಗೆ ಸಂಸ್ಕೃತದ ಮೇಲಿರುವ ಅಬಿಮಾನ ಮತ್ತು ಆದರಗಳು ಮಾತ್ರ ಅದಕ್ಕೆ ಇವತ್ತು ಆದಾರವಾಗಬಲ್ಲವು"[೫೧] ಎನ್ನುವ ಮೂಲಕ ಕನ್ನಡಕ್ಕೆ ಸಂಸ್ಕೃತ ಮೂಲ ಎಂಬ ಎಲ್ಲ ವಾದಗಳೂ ಆಧಾರ ರಹಿತ ಎಂಬ ಅಭಿಪ್ರಾಯವನ್ನು ಡಿ. ಎನ್. ಶಂಕರ ಬಟ್ಟರು ಮಂಡಿದ್ದಾರೆ. ಈ ಮೂಲಕ ಕನ್ನಡಕ್ಕೆ ಕನ್ನಡದ್ದೇ ಆದ ಅಸ್ಮಿತೆ ಇದೆ ಎಂದು ಸಾಬೀತುಪಡಿಸಲು ಯತ್ನಿಸಿದ್ದಾರೆ.

ಕನ್ನಡದಲ್ಲಿ ಸಂಸ್ಕೃತದ ಪದ, ಪರಿಭಾಷೆಗಳನ್ನು ಬಳಸುವ ಸಮಯದಲ್ಲಿ ಸಂಸ್ಕೃತದಲ್ಲಿರುವ ಮಾದರಿಯಲ್ಲೇ ಬರೆಯಬಾರದು ಎನ್ನುವುದು ಡಿ. ಎನ್. ಶಂಕರ ಬಟ್ಟರ ಪ್ರಮುಖ ಪ್ರಮೇಯ. ಇದಕ್ಕಾಗಿ ಅವರು ಕನ್ನಡ ದ್ರಾವಿಡ ಮೂಲದ ಭಾಷೆ. ಸಂಸ್ಕೃತಕ್ಕೂ ಕನ್ನಡ ಭಾಷೆಗೂ ತಾಯಿ – ಮಗುವಿನ ಸಂಬಂಧವಿಲ್ಲ ಎಂದು ಸಾಕಷ್ಟು ಉದಾಹರಣೆಗಳನ್ನು ನೀಡಿದ್ದಾರೆ. ಇದರ ಮುಂದುವರೆದ ಭಾಗವಾಗಿ ಕನ್ನಡದಲ್ಲಿ ಲಿಪಿಕ್ರಾಂತಿಯಾಗಬೇಕು ಎಂದು ಅವರು ಹೇಳಿದ್ದಾರೆ.

"ಕನ್ನಡ ಬರಹ ಮೇಲ್ವರ್ಗದವರ ಬಳಕೆಯಲ್ಲಿ ಮಾತ್ರವೇ ಉಳಿಯದೆ ಇಡೀ ಸಮಾಜದ ಬಳಕೆಗೆ ಒಳಪಡಬೇಕಾಗಿದ್ದಲ್ಲಿ ಮತ್ತು ಅದು ಎಲ್ಲಾ ಕನ್ನಡಿಗರ ಸೊತ್ತಾಗಬೇಕಿದ್ದಲ್ಲಿ ಹೆಚ್ಚಿನ ಜನರ ಕನ್ನಡ ಮಾತಿಗೂ ಕನ್ನಡ ಬರಹಕ್ಕೂ ನಡುವಿರುವ ಅಂತರ ಸಾಕಷ್ಟು ಕಡಿಮೆಯಾಗುವುದು ಅವಶ್ಯ"[೫೨] ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಮೂಲಕ ಸಮಾಜದಲ್ಲಿ ಬರಹ ಮತ್ತು ಮಾತುಗಳ ಗೊಂದಲದಿಂದಾಗಿ ಉಂಟಾಗುತ್ತಿರುವ ಅಸಮಾನತೆಯ ಕುರಿತು ಹೊಳವುಗಳನ್ನು ನೀಡಿದ್ದಾರೆ. 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಕೃತಿಯಲ್ಲಿ ಪದ, ಲಿಪಿ, ಅಕ್ಷರ ಕ್ರಾಂತಿಯಾಗಬೇಕು ಎಂಬ ನಿಟ್ಟಿನಲ್ಲಿ ಮಹತ್ವದ ವಿಷಯಗಳನ್ನು ಚರ್ಚಿಸಿದ್ದಾರೆ. ಇವುಗಳ ಪೈಕಿ ಲಿಪಿಕ್ರಾಂತಿಯಲ್ಲಿ ಕನ್ನಡದ ಸ್ಪೆಲ್ಲಿಂಗ್ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

"ಸಂಸ್ಕೃತ ಪದಗಳ ಬಳಕೆಯಲ್ಲಿ ಉಚ್ಚಾರಣೆ ಮತ್ತು ಬರವಣಿಗೆಗಳ ನಡುವೆ ಕಾಣಿಸುವ ಈ ವ್ಯತ್ಯಾಸಗಳಿಂದಾಗಿ ಕನ್ನಡ ಬರಹದಲ್ಲಿ ಹಲವು ರೀತಿಯ ಸ್ಪೆಲ್ಲಿಂಗ್ ಸಮಸ್ಯೆಗಳು ಮೂಡಿಬಂದಿವೆ. ಈ ಸ್ಪೆಲ್ಲಿಂಗ್ ಸಮಸ್ಯೆಗಳೆಲ್ಲವನ್ನೂ ಬಹಳ ಸುಲಬವಾಗಿ ಹೋಗಲಾಡಿಸಬಹುದು. ಅದಕ್ಕಾಗಿ ಸಂಸ್ಕೃತ ಪದಗಳನ್ನು ಅವು ನಮ್ಮ ಉಚ್ಚಾರಣೆಯಲ್ಲಿ ಹೇಗಿವೆಯೋ ಹಾಗೆಯೇ ಬರೆಯತೊಡಗಿದರೆ ಸಾಕು"[೫೩] ಎನ್ನುತ್ತಾರೆ. ಈ ಮೂಲಕ ಕನ್ನಡ ಕಲಿಕೆಯಲ್ಲಿ ಎದುರಾಗಿರುವ ಅಕ್ಷರ ದೋಷ ಸಮಸ್ಯೆಗೆ ಸಂಸ್ಕೃತ ಪದಗಳ ಸ್ವೀಕಾರ ಮತ್ತು ಅವುಗಳ ಯಥಾವತ್ ಬಳಕೆಯೇ ಕಾರಣ ಎಂದು ಅವರು ಹೇಳುತ್ತಾರೆ. ಮುಂದುವರೆದು ಕನ್ನಡ ಬರಹ ಎಲ್ಲರ ಸೊತ್ತಾಗಬೇಕಿದ್ದಲ್ಲಿ ಮಹತ್ವದ ಬದಲಾವಣೆಗಳು ಆಗಬೇಕು ಎನ್ನುತ್ತಾರೆ.

"ಕನ್ನಡ ಬರಹ ಎಲ್ಲರ ಸೊತ್ತಾಗಬೇಕಿದ್ದಲ್ಲಿ ಉಚ್ಚಾರಣೆಗೆ ಮಹತ್ವ ಕೊಡುವ ಮತ್ತು ಅವಶ್ಯವಿಲ್ಲದ ಇಂತಹ ಅಕ್ಕರಗಳನ್ನು ನಮ್ಮ ಬರಹದಿಂದ ತೆಗೆದುಹಾಕುವ ಒಂದು 'ಲಿಪಿಕ್ರಾಂತಿ' ನಡೆಯಬೇಕಾಗಿದೆ"[೩೨] ಎನ್ನುತ್ತಾರೆ. ಈ ಮೂಲಕ ಸಂಸ್ಕೃತದ ಪದಗಳನ್ನು ಕನ್ನಡದಲ್ಲಿ ಬಳಸಲು ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕನ್ನಡ ಲಿಪಿ ಮತ್ತು ಸಂಸ್ಕೃತ ಲಿಪಿಗೆ ಇರುವ ವ್ಯತ್ಯಾಸವನ್ನು ಡಿ. ಎನ್. ಶಂಕರ ಬಟ್ಟರು ಹೀಗೆ ವಿವರಿಸುತ್ತಾರೆ. ಅವರ ಪ್ರಕಾರ: **"ಸಂಸ್ಕ್ರುತ, ಪಾಲಿ, ಪ್ರಾಕ್ರುತ ಮೊದಲಾದ ಇಂಡೋ-ಆರ್ಯನ್ ನುಡಿಗಳನ್ನು ಬರಹಕ್ಕಿಳಿಸುವುದಕ್ಕಾಗಿ ತಯಾರಾಗಿದ್ದಂತಹ ಬ್ರಾಹ್ಮೀ ಲಿಪಿಯಿಂದ ಕನ್ನಡ ಲಿಪಿ ಬೆಳೆದು ಬಂದಿದೆ. ಇದನ್ನು ತಮ್ಮ ನುಡಿಗೆ ಅಳವಡಿಸಿಕೊಳ್ಳುವ ಸಮಯದಲ್ಲಿ ಕನ್ನಡ ಬರಹಗಾರರು ಅದರಲ್ಲಿ ತಮ್ಮ ನುಡಿಗೆ ಬೇಕಾಗುವ ಕೆಲವು ಹೆಚ್ಚಿನ ಅಕ್ಕರಗಳನ್ನು (ಎ, ಒ, ೞ ಮತ್ತು ಱಗಳನ್ನು) ಹೊಸದಾಗಿ ಉಂಟುಮಾಡಿ ಸೇರಿಸಿಕೊಂಡಿದ್ದರು"**[೩೩] ಎನ್ನುತ್ತಾರೆ. ಈ ಮೂಲಕ ಕನ್ನಡ ಭಾಷೆಯಲ್ಲಿ ಎರವಲು ಪದಗಳನ್ನು ಮೂಲದಲ್ಲಿರುವಂತೆಯೇ ಬರೆಯುವ ಒತ್ತಡ ಎದುರಾಗಿರುವುದನ್ನು ವಿವರಿಸುತ್ತಾರೆ. ಆದರೆ, ಇದಕ್ಕೆ ಅಪವಾದಗಳು ಇರುವುದನ್ನೂ ಅವರು ಉದಾಹರಿಸಿದ್ದಾರೆ.

"ಇಂಗ್ಲಿಶ್‌ನಂತಹ ಬೇರೆ ನುಡಿಗಳಿಂದ ಎರವಲಾಗಿ ಪಡೆದ ಪದಗಳನ್ನು ನಾವು ಹೀಗೆ ಮೂಲ ನುಡಿಯಲ್ಲಿರುವ ಹಾಗೆ ಬರೆಯುವುದಿಲ್ಲ. ಹಾಗೆ ಮಾಡಲು ಅದಕ್ಕೆ ಅವಶ್ಯವಿರುವ ಅಕ್ಕರಗಳು ನಮ್ಮ ಲಿಪಿಯಲ್ಲಿಲ್ಲದಿರುವುದು ಇದಕ್ಕೆ ಒಂದು ಕಾರಣ. ಸಾಮಾನ್ಯವಾಗಿ ಆ ಪದಗಳನ್ನು ನಾವು ಹೇಗೆ ಉಚ್ಚರಿಸುತ್ತೇವೆಯೋ ಹಾಗೆಯೇ ಬರೆಯುತ್ತೇವೆ"[೩೪] ಎನ್ನುತ್ತಾರೆ. ತಮ್ಮ ಹೇಳಿಕೆಗೆ ಸಮರ್ಥನೆಯಾಗಿ ಟಯ್ಸ್, ಟೀವಿ, ರೇಡಿಯೋ, ಡಾಕ್ಟರ್, ಡ್ಯೂಟಿ ಮೊದಲಾದ ಉದಹಾರಣೆಗಳನ್ನೂ ನೀಡಿದ್ದಾರೆ. **"ಟಕಾರ-ಡಕಾರಗಳು ಇಂಗ್ಲಿಶ್ ಬರಹದಲ್ಲಿಲ್ಲ. ಈ ಪದಗಳನ್ನು ನಾವು ಟಕಾರ-ಡಕಾರಗಳನ್ನು ಬಳಸಿ ಉಚ್ಚರಿಸುತ್ತೇವೆ, ಮತ್ತು ಹಾಗೆಯೇ ಬರೆಯುತ್ತೇವೆ"**[೩೫] ಎನ್ನುವುದು ಅವರ ಅಭಿಪ್ರಾಯವಾಗಿದೆ. ಇದಕ್ಕೆ ಮದರ್, ಬ್ರದರ್, ವಯ್ರಸ್, ವಯ್ಪರ್ ಮೊದಲಾದ ಹೆಚ್ಚಿನ ಉದಾಹರಣೆಗಳನ್ನು ನೀಡುವ ಅವರು, ಕನ್ನಡದಲ್ಲಿ ಬಳಕೆಯಾಗಿರುವ ದಕಾರ ಮತ್ತು ವಕಾರಗಳಿಗೂ ಇಂಗ್ಲಿಷ್ ಉಚ್ಚಾರಣೆಗಳಿಗೂ ವ್ಯತ್ಯಾಸವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ, ಹಿಂದಿ, ಮರಾಠಿ, ಉರ್ದು, ತಮಿಳು ಮೊದಲಾದ ಭಾಷೆಗಳ ಪದಗಳನ್ನು ಕನ್ನಡದಲ್ಲಿ ಹೇಗೆ ಉಚ್ಚರಿಸುತ್ತೇವೆಯೋ ಹಾಗೆಯೇ ಬರೆಯುತ್ತೇವೆ; ಮೂಲ ಭಾಷೆಯಲ್ಲಿರುವಂತೆ ಬರೆಯುವುದಿಲ್ಲ ಎಂದು ಅವರು ಹೇಳುತ್ತಾರೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ಪದಗಳನ್ನೂ ಇದೇ ಮಾದರಿಯಲ್ಲಿ ಬರೆಯಬೇಕು ಎಂದು ಅವರು ಅಭಿಪ್ರಾಯಪಡುತ್ತಾರೆ.

ಇದರೊಂದಿಗೆ ಕನ್ನಡದಲ್ಲಿ ಅನವಶ್ಯಕವಾಗಿ ಕೆಲವು ಅಕ್ಷರ ಮತ್ತು ಪದಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ ಎಂದು ಡಿ. ಎನ್. ಶಂಕರ ಬಟ್ಟರು ಹೇಳುತ್ತಾರೆ. ಅವರ ಪ್ರಕಾರ: **"ಶಾಲೆಗಳಲ್ಲಿ ಕನ್ನಡ ಬರಹವನ್ನು ಕಲಿಯಹೊರಡುವ ಚಿಕ್ಕ ಮಕ್ಕಳಿಗೆ ಕನ್ನಡಕ್ಕೆ ಅವಶ್ಯವಿಲ್ಲದ ಛ, ಝ, ಠ ಮೊದಲಾದ ಅಕ್ಕರಗಳನ್ನು ಕಲಿಸುವುದಕ್ಕಾಗಿ ಕನ್ನಡದಲ್ಲೆಲ್ಲೂ ಕಾಣಿಸದಂತಹ ಛಗ, 'ಹೋತ' ಛದ,**

'ಮುಚ್ಚಳ', ಖರ, 'ಹೇಸರಗತ್ತೆ' ಮೊದಲಾದ ಪದಗಳನ್ನು ಕಲಿಸಬೇಕಾಗಿದೆ. ಈ ಪದಗಳನ್ನು ಮುಂದೆಂದೂ ತಮ್ಮ ಜೀವನದಲ್ಲಿ ಓದುವ ಇಲ್ಲವೇ ಬರೆಯುವ ಸಂದರ್ಭಗಳು ಬರಲಾರವೆಂದೇ ಹೇಳಬಹುದು"[೫೮] ಎಂದು ಅವರು ಕನ್ನಡದಲ್ಲಿ ಅನವಶ್ಯಕವಾಗಿ ಅಕ್ಷರ ಮತ್ತು ಪದಗಳನ್ನು ಕಲಿಸುವ ವ್ಯರ್ಥ ಕಸರತ್ತು ಅಗತ್ಯವಿಲ್ಲ ಎನ್ನುತ್ತಾರೆ.

ಹಳಗನ್ನಡದಲ್ಲಿ ಕೂಡ ಮಹಾಪ್ರಾಣಾಕ್ಷರಗಳು ಇರಲಿಲ್ಲ ಎನ್ನುವುದಕ್ಕೆ ಡಿ. ಎನ್. ಶಂಕರ ಬಟ್ಟರು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ. ಸ, ಶ, ಷಗಳಿಗೆ ಕನ್ನಡದಲ್ಲಿ ಸಕಾರವನ್ನು ಮಾತ್ರ ಬಳಸಲಾಗುತ್ತಿತ್ತು ಎನ್ನುವುದಕ್ಕೆ ಕೆಳಗಿನ ಉದಾಹರಣೆಗಳನ್ನು ನೀಡಿದ್ದಾರೆ.

ತತ್ಸಮ ಪದಗಳು	**ತದ್ಭವ ಪದಗಳು**
ಅಂಕುಶ	ಅಂಕುಸ
ನಿಶ್ಶಂಕ	ನಿಸ್ಸಂಕ
ಪಶು	ಪಸು
ಶರ್ಕರ	ಸಕ್ಕರೆ
ಆಕಾಶ	ಆಗಸ
ಆಮಿಷ	ಆಮಿಸ
ದೋಷ	ದೋಸ
ನಿಮಿಷ	ನಿಮಿಸ
ಷಣ್ಣ	ಸಣ್ಣ
ಶೇಷ	ಸೇಸ
ಭಾಷೆ	ಬಾಸೆ[೫೯]

ಇದರೊಂದಿಗೆ ಹಳಗನ್ನಡದಲ್ಲಿ ಇನ್ನಿತರ ಮಹಾಪ್ರಾಣಾಕ್ಷರಗಳಿಗೆ ಅಲ್ಪಪ್ರಾಣಗಳ ಬಳಕೆಯನ್ನೂ ಉದಾಹರಿಸಿದ್ದಾರೆ.

ತತ್ಸಮ ಪದಗಳು	**ತದ್ಭವ ಪದಗಳು**
ಶೃಂಖಲೆ	ಸಂಕಲೆ
ಸಂಘ	ಸಂಗ
ಛಾನ್ದಸ	ಚಾಂದಸ

ಶುಣ್ಠಿ	ಸುಂಟಿ
ಮಠ	ಮಟ
ಢಕ್ಕೆ	ಡಕ್ಕೆ
ಕಥೆ	ಕತೆ
ಧಾರೆ	ದಾರೆ
ಕಫ	ಕಪ
ಭಕ್ತಿ	ಬಕ್ತಿ[೬೦]

ಹಳಗನ್ನಡದಲ್ಲಿ ಋಕಾರದ ಬದಲಿಗೆ ಬಳಕೆಯಾಗಿರುವ ಪದಗಳಿಗೆ ಉದಾಹರಣೆಗಳು:

ತತ್ಸಮ ಪದಗಳು	**ತದ್ಬವ ಪದಗಳು**
ಋಷಿ	ರುಸಿ
ಋತು	ರುತು
ಋಣ	ರಿಣ
ಋಜು	ರಿಜು[೬೧]

ಋಕಾರ ವ್ಯಂಜನದ ನಂತರ ಬಂದ ಪದಗಳಿಗೆ ಕನ್ನಡದಲ್ಲಿ ಇಕಾರವಾಗಿ ಬದಲಾವಣೆಯಾಗುವುದಕ್ಕೆ ಉದಾಹರಣೆ:

ತತ್ಸಮ ಪದಗಳು	**ತದ್ಬವ ಪದಗಳು**
ತೃಣ	ತಿಣ
ವೃತ್ತಿ	ವಿತ್ತಿ
ವೃದ್ಧಿ	ವಿದ್ದಿ
ಶೃಂಗಾರ	ಸಿಂಗಾರ
ಶೃಂಗಿ	ಸಿಂಗಿ
ಸೃಷ್ಟಿ	ಸಿಟ್ಟಿ
ಭೃಂಗಾರ	ಬಿಂಗಾರಿ[೬೨]

ಹಳಗನ್ನಡದಲ್ಲಿ ಒತ್ತಕ್ಷರಗಳು ಸಂಸ್ಕೃತದಲ್ಲಿದ್ದರೆ ಅವುಗಳಿಗೆ ಪರ್ಯಾಯವಾಗಿ ಪದಗಳ ಬಳಕೆಯಾಗಿರುವುದಕ್ಕೆ ಉದಾಹರಣೆಗಳು:

ತತ್ಸಮ ಪದಗಳು	**ತದ್ಭವ ಪದಗಳು**
ರಾಕ್ಷಸ	ರಕ್ಕಸ
ಸಂಸ್ಕೃತ	ಸಕ್ಕದ
ಅಗ್ನಿ	ಅಗ್ಗಿ
ಅಧ್ಯಕ್ಷ	ಅದ್ದಿಕ
ಉತ್ಕಟ	ಉಗ್ಗಟ
ಕ್ಷೀರ	ಕೀರ
ಜ್ವರ	ಜರ
ಧ್ವನಿ	ದನಿ
ಸ್ಥಾನ	ಠಾಣ
ಪ್ರಜ್ವಲ	ಪಜ್ಜಳ
ತಂತ್ರ	ತಂತುರ
ಸ್ಪರ್ಶ	ಪರುಸ
ಭ್ರಷ್ಟ	ಬಟ್ಟ
ಲಕ್ಷ್ಮಣ	ಲಕುಮಣ
ಆಜ್ಞೆ	ಆಣೆ
ಕಷ್ಟ	ಕಟ್ಟ
ಗ್ರಂಥ	ಗ್ರಂತ[೬೩]

ಮೇಲಿನ ಉದಾಹರಣೆಗಳಲ್ಲದೆ ಕನ್ನಡದಲ್ಲಿ ಇಂತಹ ಇನ್ನಷ್ಟು ಪ್ರಯೋಗಗಳು ನಡೆದಿರುವುದನ್ನು ಕೂಡ ಡಿ. ಎನ್. ಶಂಕರ ಬಟ್ಟರು ಉದಾಹರಿಸುತ್ತಾರೆ. ಕಬ್ಬಿಗರ ಕಾವ ಮತ್ತು ಪುಟ್ಟಣ್ಣ ಗವ್ಡರ ಅಚ್ಚಗನ್ನಡ ನುಡಿಕೋಶದ ವಿಷಯವನ್ನು ಪ್ರಸ್ತಾಪಿಸುವ ಅವರು, ಹೀಗೆ ಅಭಿಪ್ರಾಯಪಡುತ್ತಾರೆ: **"ಇತ್ತೀಚೆಗೆ ಕೊಳಂಬೆ ಪುಟ್ಟಣ್ಣ ಗವ್ಡರು ಇಂತಹದೇ ಕಳಕಳಿಯಿಂದ ತತ್ಸಮ ಪದಗಳನ್ನು ಹೊರಗಿರಿಸಿರುವ (ಇಲ್ಲವೇ ಕಂಸದೊಳಗಿರಿಸಿರುವ) ಮತ್ತು ಆದಶ್ಟು ಹೆಚ್ಚು ಕನ್ನಡದವೇ ಆದ ಪದಗಳನ್ನು ಕೊಟ್ಟಿರುವ ಅಚ್ಚಗನ್ನಡ ನುಡಿಕೋಶವೊಂದನ್ನು ರಚಿಸಿದ್ದಾರೆ. ಇಂತಹ ಪ್ರಯತ್ನಗಳೆಲ್ಲ ಕನ್ನಡದ ಸೊಗಡನ್ನು ಎಂದರೆ ಕನ್ನಡದ್ದೇ 'ಸಂಸ್ಕೃತಿ'ಯನ್ನು ಉಳಿಸುವ ಪ್ರಯತ್ನಗಳಲ್ಲದೆ ಅಳಿಸಿಹಾಕುವ ಪ್ರಯತ್ನಗಳಲ್ಲ"**[೬೪] ಎನ್ನುತ್ತಾರೆ. ಸಂಸ್ಕೃತ ಪದಗಳಿಗೆ ಪರ್ಯಾಯವಾದ ಪದಗಳನ್ನು ಕನ್ನಡದಲ್ಲಿ ರಚಿಸಲು ಸಾಧ್ಯವಿದೆ ಎಂದು ಅವರು ಮೇಲಿನ ಅನೇಕ ಉದಾಹರಣೆಗಳ ಮೂಲಕ ಖಚಿತಪಡಿಸುತ್ತಾರೆ.

ಮುಂದೆ ತಮಿಳು, ಪಂಜಾಬಿ, ಸಿಂದಿ ಮೊದಲಾದ ಭಾಷೆಗಳಲ್ಲಿ ಕೂಡ ಸಂಸ್ಕೃತದ ಪದಗಳನ್ನು ಆಯಾ ಭಾಷೆಗಳಿಗೆ ಒಗ್ಗಿಸಿಕೊಂಡು ಬಳಸುತ್ತಿರುವ ಪಟ್ಟಿಯನ್ನೇ ಡಿ. ಎನ್. ಶಂಕರಬಟ್ಟರು ನೀಡಿದ್ದಾರೆ. ಈ ಮೂಲಕ ಕನ್ನಡದಲ್ಲಿ ಕೂಡ ಇದೇ ಮಾದರಿಯನ್ನು ಅನುಸರಿಸುವ ಮೂಲಕ ಕನ್ನಡದ ಸೊಗಡನ್ನು ಉಳಿಸಬೇಕು ಎನ್ನುವುದು ಅವರ ಅಭಿಪ್ರಾಯವಾಗಿದೆ.

ಅಕ್ಷರದೋಷಗಳ ಕುರಿತು ಇಂಗ್ಲಿಷ್‌ನಲ್ಲಿರುವ ವಿವಿಧ ರೀತಿಯ ಪದಬಳಕೆ ಮತ್ತು ಉಚ್ಚಾರಣೆಯಲ್ಲಿರುವ ವಿಷಯವನ್ನು ಅವರು ವಿವರಿಸಿದ್ದಾರೆ. **"ಇಂಗ್ಲಿಶ್‌ನಲ್ಲಿ know ಮತ್ತು no ಎಂಬ ಎರಡು ಪದಗಳ ನಡುವೆ ಬರಹದಲ್ಲಿ ವ್ಯತ್ಯಾಸವಿದೆ, ಆದರೆ ಉಚ್ಚಾರಣೆಯಲ್ಲಿ ವ್ಯತ್ಯಾಸವಿಲ್ಲ; heard, bird, curd ಮತ್ತು word ಪದಗಳಲ್ಲಿ e, a, i, u, o ಎಂಬ ಬೇರೆ ಬೇರೆ ಸ್ವರಗಳು ಬರವಣಿಗೆಯಲ್ಲಿ ಕಾಣಿಸುತ್ತವೆ; ಆದರೆ ಉಚ್ಚಾರಣೆಯಲ್ಲಿ ಒಂದೇ ಸ್ವರವಿದೆ; doubt, debt, climb, thumb ಮೊದಲಾದ ಹಲವು ಪದಗಳಲ್ಲಿ b ವ್ಯಂಜನವೊಂದು ಬರಹದಲ್ಲಿದೆ, ಆದರೆ, ಉಚ್ಚಾರಣೆಯಲ್ಲಿಲ್ಲ; minute ಎಂಬ ಪದವನ್ನು ಒಂದು ಅರ್ತದಲ್ಲಿ ಮಿನಿಟ್ ಎಂಬುದಾಗಿ ಉಚ್ಚರಿಸಲಾಗುತ್ತದೆ ಮತ್ತು ಇನ್ನೊಂದು ಅರ್ತದಲ್ಲಿ ಮಯ್‌ನ್ಯೂಟ್ ಎಂಬುದಾಗಿ ಉಚ್ಚರಿಸಲಾಗುತ್ತದೆ"**[೬೫] ಎಂದು ಒಂದೇ ಸ್ವರದ ಬೇರೆ ಬೇರೆ ಉಚ್ಚಾರಗಳು ಇಂಗ್ಲಿಷ್ ಭಾಷೆಯಲ್ಲಿ ಅಸ್ತಿತ್ವದಲ್ಲಿರುವುದರ ಕುರಿತು ಗಮನ ಹರಿಸುತ್ತಾರೆ. ಇದೇ ಮಾದರಿಯಲ್ಲಿ ಕನ್ನಡದಲ್ಲಿ ಕೂಡ ಪದಗಳನ್ನು ಗ್ರಹಿಸಲು ಸಾಧ್ಯ ಎನ್ನುವುದು ಅವರ ವಾದವಾಗಿದೆ.

ಕನ್ನಡದಲ್ಲಿ ಸಂಸ್ಕೃತ ಪದಗಳಿಂದ ಎದುರಾಗಿರುವ ಅಕ್ಷರ ದೋಷ ಸಮಸ್ಯೆಯ ನಿವಾರಣೆ ಕುರಿತು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ ಹೀಗಿದೆ: **"ಕನ್ನಡ ಬರಹದ ಸ್ಪೆಲ್ಲಿಂಗ್ ಸಮಸ್ಯೆಗೆ ಒಂದು ಬಹಳ ಸುಲಬವಾದ ಪರಿಹಾರ ನಮ್ಮೆದುರಿಗಿದೆ. ಸಂಸ್ಕ್ರುತದಿಂದ ಎರವಲಾಗಿ ಪಡೆದ ಪದಗಳನ್ನು ನಾವು ನಮ್ಮ ಬರಹಗಳಲ್ಲಿ ಆದಶ್ಟು ಕಡಿಮೆ ಬಳಸಬೇಕು ಮತ್ತು ಬಳಸಬೇಕಿರುವಲ್ಲೆಲ್ಲ ಅವನ್ನು ನಮ್ಮ ಉಚ್ಚಾರಣೆಗೆ ಅನುಸಾರವಾಗಿ ಬರಹದಲ್ಲೂ ಬದಲಾಯಿಸಿಕೊಳ್ಳಬೇಕು"**[೬೬] ಎನ್ನುತ್ತಾರೆ. ಇದರೊಂದಿಗೆ ನಾವು ಈಗಾಗಲೇ ಕನ್ನಡದಲ್ಲಿ ಬಳಸುತ್ತಿರುವ ಸಂಸ್ಕೃತ ಭಾಷೆಯ ಪದಗಳಲ್ಲಿ ಕೂಡ ಸಾಕಷ್ಟು ಪರಿವರ್ತನೆಯಾಗಿರುವುದರ ಕಡೆಗೆ ಗಮನ ಸೆಳೆಯುತ್ತಾರೆ. ಹಳೆಗನ್ನಡದಲ್ಲಿ ಬಳಕೆಯಾಗುತ್ತಿದ್ದ ರಳ, ಕುಳಗಳು ಮತ್ತು ದಾಂಟು, ಈಂಟು ಇತ್ಯಾದಿ ರೂಪಗಳನ್ನು ನಡುಗನ್ನಡದ ಕಾಲಕ್ಕೇ ಕೈಬಿಟ್ಟ ಉದಾಹರಣೆಗಳನ್ನು ನೀಡುವ ಅವರು, ಇದೇ ಮಾದರಿಯಲ್ಲಿ ಸಂಸ್ಕೃತ ಭಾಷೆಯ ಪದಗಳಲ್ಲಿ ಕೂಡ ಬದಲಾವಣೆಗಳು ನಡೆದಿವೆ ಎನ್ನುತ್ತಾರೆ. ಇದಕ್ಕೆ ಋ ಕಾರದ ಬದಲು ರು ಕಾರ ಬಳಸುವ ವಿಷಯವನ್ನು ಪ್ರಸ್ತಾಪಿಸುವ ಅವರು, ಇನ್ನಷ್ಟು ಉದಾಹರಣೆಗಳನ್ನು ನೀಡುತ್ತಾರೆ.

"ನಾವು ಈಗಾಗಲೇ ಸಂಸ್ಕ್ರುತದಿಂದ ಎರವಲಾಗಿ ಪಡೆದಿರುವ ಕ್ಲುಪ್ತ ಪದದಲ್ಲಿ ಇಂತಹದೇ ಬದಲಾವಣೆಯನ್ನು ಮಾಡಿಕೊಂಡಿದ್ದೇವೆ. ಸಂಸ್ಕ್ರುತದ ಈ ಪದದಲ್ಲಿ ಋಕಾರದ ಹಾಗೆಯೇ ಇರುವ ಬೇರೊಂದು ಸ್ವರವಿದೆ. ಆದರೆ, ಅದನ್ನು ಬರೆಯಲು ಕನ್ನಡ ಲಿಪಿಯಲ್ಲಿ ಅಕ್ಶರವಿಲ್ಲ. ಹಾಗಾಗಿ ಅದನ್ನು ಲು ಎಂದೇ ಬರೆಯುತ್ತೇವೆ. ಋಕಾರವನ್ನು ರು ಎಂಬುದಾಗಿ ಬರೆಯುವುದು ನಾವು ಮಾಡಬೇಕಾಗಿರುವ ಇಂತಹದೇ ಒಂದು ಬದಲಾವಣೆ"[೬೭] ಎನ್ನುತ್ತಾರೆ. ಇದಕ್ಕೆ ಇನ್ನಷ್ಟು ಉದಾಹರಣೆಗಳನ್ನು ನೀಡುವ

ಅವರು, ಸೀತಾ – ಸೀತೆ, ಗುಹಾ – ಗುಹೆ, ಪತಾಕಾ – ಪತಾಕೆ, ಮಾಲಾ – ಮಾಲೆಯಲ್ಲಿ ದೀರ್ಘ ಸ್ವರ ಹ್ರಸ್ವಸ್ವರವಾಗಿದೆ. ಇನ್ನು ಜ್ಞಾನಂ – ಜ್ಞಾನ, ತೃಣಂ – ತೃಣ, ನಿವೇಶನಂ – ನಿವೇಶನ ಎಂದು ಬದಲಾಗಿದೆ. ಈ ಉದಾಹರಣೆಗಳಲ್ಲಿ ಸೊನ್ನೆಯನ್ನು ಕೈಬಿಡಲಾಗಿದೆ. ಈ ಮೂಲಕ ಈಗಾಗಲೇ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಪದಗಳ ಬಳಕೆಯಲ್ಲಿ ವ್ಯತ್ಯಾಸವಾಗಿರುವುದನ್ನು ಗುರುತಿಸುತ್ತಾರೆ.[೬೮]

“ಸಂಸ್ಕೃತದಲ್ಲಿ ಕಂಠ, ಉಪವಾಸ, ಮಾರ್ಗ, ದೇಶ, ದೀಪ ಮೊದಲಾದ ಪದಗಳು ಪುಲ್ಲಿಂಗದಲ್ಲಿವೆ; ಜಟಾ, ಜಿಹ್ವಾ, ತುಲಸೀ, ಬುದ್ಧಿ ಮೊದಲಾದವು ಸ್ತ್ರೀಲಿಂಗದಲ್ಲಿವೆ; ಕರ್ಮ, ಕಾರ್ಯ, ಚರ್ಮ, ರಹಸ್ಯ, ತೈಲ ಮೊದಲಾದವು ನಪುಂಸಕ ಲಿಂಗದಲ್ಲಿವೆ. ಆದರೆ, ಇವೆಲ್ಲವನ್ನು ನಾವು ಕನ್ನಡದಲ್ಲಿ ನಪುಂಸಕ ಲಿಂಗದಲ್ಲೇನೇ ಬಳಸುತ್ತೇವೆ. ಮಾರ್ಗ ಸಿಕ್ಕಿತು, ಬುದ್ಧಿ ಬಂತು ಎನ್ನುತ್ತೇವಲ್ಲದೆ ಮಾರ್ಗ ಸಿಕ್ಕಿದ, ಬುದ್ಧಿ ಬಂದಳು ಎನ್ನುವುದಿಲ್ಲ”[೬೯] ಎನ್ನುವ ಮೂಲಕ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ಲಿಂಗ ವಿಷಯದಲ್ಲಿ ಕೂಡ ವ್ಯತ್ಯಾಸ ಇರುವುದನ್ನು ಸಾಕ್ಷಿ ಸಮೇತ ತೋರಿಸಿಕೊಟ್ಟಿದ್ದಾರೆ. ಇದರೊಂದಿಗೆ, ವ್ಯಾವಹಾರಿಕ, ಸಾಮಾಜಿಕ, ಯಾಂತ್ರಿಕ ಪದಗಳಲ್ಲಿ ಕೂಡ ವ್ಯತ್ಯಾಸವಿರುವುದನ್ನು ಚರ್ಚಿಸಿದ್ದಾರೆ. ಅವರ ಪ್ರಕಾರ, **“ಸಂಸ್ಕೃತದಿಂದ ಎರವಲಾಗಿ ಪಡೆದ ವ್ಯಾವಹಾರಿಕ, ಸಾಮಾಜಿ, ಯಾಂತ್ರಿಕ ಮೊದಲಾದ ಹಲವು ನಾಮಪದಗಳನ್ನು ನಾವು ಕನ್ನಡದಲ್ಲಿ ಗುಣಪದಗಳಾಗಿ ಬಳಸುತ್ತೇವಲ್ಲದೆ ನಾಮಪದಗಳಾಗಿ ಬಳಸುವುದಿಲ್ಲ (* ಸಾಮಾಜಿಕವನ್ನು, *ಯಾಂತ್ರಿಕಕ್ಕೆ ಎಂಬಂತಹ ಬಳಕೆಗಳು ಕನ್ನಡದಲ್ಲಿಲ್ಲ). ಬೇರೆ ಕೆಲವು ಪದಗಳಲ್ಲಿ ಸಂಸ್ಕೃತದಲ್ಲಿಲ್ಲದ ನ/ಣ/ನೆ/ಣೆಯಂತಹ ವ್ಯತ್ಯಾಸಗಳನ್ನು ಹುಟ್ಟಿಸಿಕೊಂಡು ಅವನ್ನು ಗುಣಪದ – ನಾಮಪದ ವ್ಯತ್ಯಾಸವನ್ನು ಸೂಚಿಸುವುದಕ್ಕಾಗಿ ಬಳಸುತ್ತೇವೆ”**[೭೦] ಎನ್ನುವ ಮೂಲಕ ಸಂಸ್ಕೃತ ಮತ್ತು ಕನ್ನಡದಲ್ಲಿ ಬಳಕೆಯಲ್ಲಿರುವ ನಾಮಪದ ಮತ್ತು ಗುಣಪದಗಳಲ್ಲಿ ಕೂಡ ವ್ಯತ್ಯಾಸಗಳಿರುವುದಕ್ಕೆ ಉದಾಹರಣೆಗಳನ್ನು ನೀಡಿದ್ದಾರೆ. ಅಲ್ಲದೇ, ಸಂಸ್ಕೃತ ಪದಗಳನ್ನು ಯಥಾವತ್ತಾಗಿ ಬಳಸಬೇಕೆಂದು ಕನ್ನಡ, ಮಲಯಾಳ, ತೆಲುಗು, ಮರಾಠಿ ಮೊದಲದ ಭಾಷಿಕರು ಮಾತ್ರ ಭಾವಿಸುತ್ತಾರೆ. ಆದರೆ, ತಮಿಳು, ಪಂಜಾಬಿ, ಸಿಂಧಿ, ಉರ್ದು, ಕಾಶ್ಮೀರಿ ಮೊದಲಾದ ಭಾಷಿಕರು ಹಾಗೆ ಭಾವಿಸುವುದಿಲ್ಲ ಎಂದು ಕೂಡ ಅವರು ಅಭಿಪ್ರಾಯಪಡುತ್ತಾರೆ.[೭೧]

ಡಿ. ಎನ್. ಶಂಕರ ಬಟ್ಟರು ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬಳಸುವ ಕುರಿತು ವಹಿಸಬೇಕಾದ ಎಚ್ಚರ, ಇಟ್ಟುಕೊಳ್ಳಬೇಕಾದ ಅಂತರದ ಕುರಿತ ಈ ಸಲಹೆಯನ್ನು ಕನ್ನಡದಲ್ಲಿ ಅನ್ವಯಿಸಿದಲ್ಲಿ ಈಗ ಬೃಹತ್ ಸಮಸ್ಯೆಯಂತೆ ತೋರುತ್ತಿರುವ ಅಕ್ಷರ ದೋಷಗಳ ಸಮಸ್ಯೆಗೆ ಪರಿಹಾರ ಸಿಗುವ ಸಾಧ್ಯತೆ ಇದೆ. ಆದರೆ, ಕನ್ನಡದಲ್ಲಿ ಡಿ. ಎನ್. ಶಂಕರ ಬಟ್ಟರ ಸಲಹೆಗಳನ್ನು ಪುರಸ್ಕರಿಸುತ್ತಿಲ್ಲ.

೫.೮. ಕನ್ನಡಕ್ಕೆ ಹೊಸ ಬರಹದ ಸಿದ್ಧತೆಯಲ್ಲಿ ಡಿ. ಎನ್. ಶಂಕರ ಬಟ್ಟರ ಪಾತ್ರ

ಸಂಸ್ಕೃತ ಮತ್ತು ಕನ್ನಡದ ನಡುವೆ ಇರುವ ಜ್ಞಾತಿ ಸಂಬಂಧ, ನಾಮಪದ, ಕ್ರಿಯಾಪದ, ಗುಣಪದ, ವಚನ, ಲಿಂಗದ ಬಳಕೆಯಲ್ಲಿರುವ ಭಿನ್ನತೆಗಳು ಮತ್ತು ದ್ರಾವಿಡ ಭಾಷೆಗಳಾದ ಕನ್ನಡ,

ತಮಿಳು, ತೆಲುಗು, ಮಲಯಾಳ, ಇಂಡೋ – ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದ ಸಂಸ್ಕೃತ, ಮರಾಠಿ ಮೊದಲಾದ ಭಾಷೆಗಳಲ್ಲಿರುವ ವ್ಯತ್ಯಾಸಗಳನ್ನು ಎತ್ತಿ ತೋರಿಸಿದ ನಂತರ ಡಿ. ಎನ್. ಶಂಕರ ಬಟ್ಟರು ಹೊಸ ಬರಹದ ಕುರಿತು ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯಲ್ಲಿ ಚರ್ಚಿಸುತ್ತಾರೆ. ಅವರು ರೂಪಿಸುತ್ತಿರುವ ಹೊಸ ಬರಹದಲ್ಲಿ ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳು, ಋ, ಐ, ಔ, ಅನುಸ್ವಾರ ವಿಸರ್ಗ, ಅನುನಾಸಿಕಗಳಲ್ಲಿ ಙ, ಞ, ಷ ಅಕ್ಷರ ರಹಿತ ಪದಗಳನ್ನು ರಚಿಸುತ್ತಿದ್ದಾರೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತದ ಪ್ರಭಾವವನ್ನು ಇಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದ್ದಾರೆ.

"ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳಲ್ಲಿ ಬರುವ ಮಹಾಪ್ರಾಣಾಕ್ಶರಗಳನ್ನು ಹೆಚ್ಚಿನ ಕನ್ನಡಿಗರೂ ಅಲ್ಪಪ್ರಾಣಾಕ್ಶರಗಳಾಗಿ ಉಚ್ಚರಿಸುತ್ತಾರೆ. ಹಾಗಾಗಿ ಅಂತಹ ಪದಗಳನ್ನು ಬರೆಯುವಾಗ ಅವನ್ನು ಅಲ್ಪ ಪ್ರಾಣಾಕ್ಶರಗಳಾಗಿಯೇ ಬರೆಯಲು ಸಾದ್ಯವಾಗಬೇಕು. ಈ ಒಂದು ಬದಲಾವಣೆಯ ಮೂಲಕ ಕನ್ನಡ ಬರಹಗಳಲ್ಲಿ ಇವತ್ತು ಕಡ್ಡಾಯವಾಗಿ ಬಳಕೆಯಾಗುತ್ತಿರುವ ಹತ್ತು ಅಕ್ಶರಗಳನ್ನು (ಖಛಠಥಫ ಮತ್ತು ಘಝಢಧಭಗಳನ್ನು) ಮತ್ತು ಒತ್ತಕ್ಶರಗಳಲ್ಲಿ ಅವುಗಳಿಗಿರುವ ಸ್ವಲ್ಪ ಮಟ್ಟಿಗೆ ಬೇರಾದ ಸನ್ನೆಗಳನ್ನು (್ಖ ್ಛ ್ಠ ್ಥ ್ಫ ಮತ್ತು ್ಘ ್ಝ ್ಢ ್ಧ ್ಭ) ಎಂಬವುಗಳನ್ನು) ಬದಿಗಿರಿಸಬಹುದು"[೭] ಎಂದು ಅವರು ಹೇಳಿದ್ದಾರೆ.

ಹೊಸ ಬರಹದ ಮಾದರಿಗೆ ಡಿ. ಎನ್. ಶಂಕರ ಬಟ್ಟರು ಬಳಸಿರುವ ಕೆಲವು ಪದಗಳ ಉದಾಹರಣೆಗಳು ಇಂತಿವೆ:

ಹಳೆ ಬರಹ	ಹೊಸ ಬರಹ
ಮುಖ್ಯ	ಮುಕ್ಯ
ಇಚ್ಛೆ	ಇಚ್ಚೆ
ಪಾಠ	ಪಾಟ
ನಿಷ್ಠೆ	ನಿಶ್ಟೆ
ಕಥೆ	ಕತೆ
ಸಂಸ್ಥೆ	ಸಂಸ್ತೆ
ಸಫಲ	ಸಪಲ
ನಿಷ್ಫಲ	ನಿಶ್ಪಲ
ಶ್ಲಾಘನೆ	ಶ್ಲಾಗನೆ
ಝೇಂಕಾರ	ಜೇಂಕಾರ

ದೃಢ	ದ್ರುಡ
ಆಧಾರ	ಆದಾರ
ಬುದ್ಧಿ	ಬುದ್ದಿ
ಭ್ರಮೆ	ಬ್ರಮೆ[೭೩]

ಈ ಪ್ರಯತ್ನಗಳ ಮೂಲಕ ಅಲ್ಪಪ್ರಾಣಗಳಲ್ಲೇ ಕನ್ನಡ ಬರಹವನ್ನು ರೂಪಿಸಬಹುದು ಎಂದು ಡಿ. ಎನ್. ಶಂಕರ ಬಟ್ಟರು ತೋರಿಸುತ್ತಿದ್ದಾರೆ. ಇದರಲ್ಲಿ ಸಂಸ್ಕೃತ ಪದಗಳನ್ನು ಕನ್ನಡದ ಉಚ್ಛಾರಣೆಯ ಸ್ವರೂಪದಲ್ಲೇ ಬರೆಯಬಹುದು ಎನ್ನುವುದು ಅವರ ಅಭಿಪ್ರಾಯ. ಋಕಾರದ ಬದಲಿಗೆ ರುಕಾರ, ಷಕಾರದ ಬದಲಿಗೆ ಶಕಾರ ಮೊದಲಾದವುಗಳನ್ನು ಬಳಸುವ ಪ್ರಯೋಗಗಳನ್ನು ಅವರು ನಡೆಸಿದ್ದಾರೆ.

ಇದರೊಂದಿಗೆ ತಾವು ಸೂಚಿಸಿರುವುದನ್ನು ಎಲ್ಲರೂ ಕಡ್ಡಾಯವಾಗಿ ಬಳಸಬೇಕೆಂಬ ನಿಯಮ ಬೇಕಿಲ್ಲ ಎಂದು ಕೂಡ ಅವರು ಅಭಿಪ್ರಾಯಪಡುತ್ತಾರೆ. **"ಮೇಲೆ ಸೂಚಿಸಿರುವ ಬದಲಾವಣೆಗಳನ್ನು ಎಲ್ಲರೂ ಕಡ್ಡಾಯವಾಗಿ ಬಳಸಬೇಕೆಂಬುದಾಗಿ ನಿಯಮವನ್ನು ಮಾಡುವ ಬದಲು ಆಯ್ಕೆಯನ್ನು ಬರಹಗಾರರಿಗೆ ಬಿಡುವುದು ಒಳ್ಳೆಯದೆಂದು ನನಗೆ ಅನಿಸುತ್ತದೆ. ಹಳೆ ಬರಹವೇ ಕನ್ನಡಕ್ಕೆ ಯೋಗ್ಯವಾದುದೆಂದು ನಂಬುವವರು ತಮ್ಮ ಬರಹಗಳಲ್ಲಿ ಅದನ್ನೇ ಬಳಸುತ್ತಿರಬಹುದು ಮತ್ತು ಅದಕ್ಕಿಂತ ಹೊಸ ಬರಹ ಉತ್ತಮವೆಂದು ನಂಬುವವರು ಅದನ್ನು ಬಳಸುತ್ತಿರಬಹುದು"**[೭೪] ಎನ್ನುತ್ತಾರೆ. ಈ ಮೂಲಕ ತಮ್ಮ ಬರಹದ ಮಾದರಿಯನ್ನು ಎಲ್ಲರೂ ಅನುಸರಿಸಬೇಕೆಂಬ ಒತ್ತಾಯದ ಬದಲಾಗಿ ಆಯ್ಕೆಯ ಅವಕಾಶವನ್ನು ಮುಕ್ತವಾಗಿ ಎಲ್ಲರಿಗೂ ಇದೆ ಎಂದು ಹೇಳುತ್ತಾರೆ.

ಆದರೆ, ತಮ್ಮ ಹೊಸ ಬರಹದ ಆಯ್ಕೆ ಭವಿಷ್ಯದಲ್ಲಿ ಯಶಸ್ಸಾಗುವ ಭರವಸೆಯನ್ನು ಕೂಡ ಅವರು ವ್ಯಕ್ತಪಡಿಸುತ್ತಾರೆ. **"ಸಮಯ ಕಳೆದಂತೆಲ್ಲ ಹೆಚ್ಚು ಹೆಚ್ಚು ಮಂದಿ ಕನ್ನಡದ ಮಟ್ಟಿಗೆ ಹೊಸ ಬರಹವೇ ಸರಿಯಾದುದೆಂಬುದನ್ನು ಕಂಡುಕೊಳ್ಳದಿರರು ಮತ್ತು ಅದನ್ನು ಬಳಸುವವರ ಎಣಿಕೆ ಹೆಚ್ಚುತ್ತಾ ಹೋಗಿ ಕೊನೆಗೆ ಅದು ಹಳೆಯದರ ಜಾಗವನ್ನು ಆಕ್ರಮಿಸದಿರದು. ಇದು ನನ್ನ ನಂಬಿಕೆ"**[೭೫] ಎನ್ನುತ್ತಾರೆ. ಈ ಮೂಲಕ ತಮ್ಮ ಹೊಸ ಬರಹದ ಪ್ರಯೋಗ ಭವಿಷ್ಯದಲ್ಲಿ ಎಲ್ಲರ ಆಯ್ಕೆಯಾಗಲಿದೆ ಎನ್ನುವುದು ಅವರ ನಂಬಿಕೆಯಾಗಿದೆ.

"ಬರಹದಲ್ಲಿ ಬದಲಾವಣೆಯಾಗಬೇಕಿದ್ದಲ್ಲಿ ಯಾರಾದರೂ ಬರಹಗಾರರು ಬುದ್ದಿಪೂರ್ವಕವಾಗಿ ಅದರಲ್ಲಿ ಬದಲಾವಣೆಗಳನ್ನು ನಡೆಸಲು ಪ್ರಯತ್ನಿಸಬೇಕು. ಹಳೆಗನ್ನಡ ಬರಹ ನಡುಗನ್ನಡ ಬರಹವಾಗಿ ಬದಲಾಗಲು ದಾಸರು ಮತ್ತು ವಚನಕಾರರು ಮಾಡಿರುವಂತಹ ಇಂತಹ ಪ್ರಯತ್ನ ಕಾರಣ. ನಡುಗನ್ನಡ ಬರಹ ಹೊಸಗನ್ನಡ ಬರಹವಾಗಿ ಬದಲಾಗಲು ಮಯ್ಸೂರಿನ ಬರಹಗಾರರು ಮಾಡಿರುವ ಅಂತಹದೇ ಇನ್ನೊಂದು ಪ್ರಯತ್ನ ಕಾರಣ. ಆದರೆ ಈ ರೀತಿ ಬದಲಾಗುವ ಸಂದರ್ಬಗಳಲ್ಲೆಲ್ಲ ಬರಹ ಮಾತನ್ನನುಸರಿಸುತ್ತದೆ ಎಂಬುದನ್ನು ಗಮನಿಸಬೇಕು"[೭೬] ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. ಈ ಮೂಲಕ ಬರಹ ಮಾತನ್ನು ಅನುಸರಿಸಿ ಕಾಲಾನುಕ್ರಮದಲ್ಲಿ ಬದಲಾವಣೆಯನ್ನು ಮಾಡಿಕೊಂಡಿದೆ

ಎಂದು ಅವರು ಹೇಳಿದ್ದಾರೆ. ಇದಕ್ಕೆ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಉದಾಹರಣೆಗಳು ಕೂಡ ಸಿಗುತ್ತವೆ. ಹಳಗನ್ನಡದಲ್ಲಿ ಬಳಕೆಯಲ್ಲಿದ್ದ ಱಳ ೞಗಳು ಮತ್ತು ದಾಂಟು, ಈಂಟು ಮೊದಲಾದ ಪದಗಳು ಹೊಸಗನ್ನಡದ ಹೊತ್ತಿಗೆ ರ, ಳಕಾರಗಳಾಗಿ ಮತ್ತು ಅನುಸ್ವಾರವನ್ನು ಕಳೆದ ರೂಪಗಳು ಚಾಲ್ತಿಯಲ್ಲಿರುವುದನ್ನು ಗಮನಿಸಬೇಕಾಗುತ್ತದೆ.

ಮಾತನ್ನು ಅನುಸರಿಸಿ ಬರಹ ಬದಲಾಗದೇ ಇದ್ದಲ್ಲಿ ಭಾಷೆ ನಿಂತ ನೀರಾಗುತ್ತದೆ ಎಂದು ಕೂಡ ಅವರು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ: **"ಮಾತನ್ನನುಸರಿಸಿ ಬರಹ ಬದಲಾಗದೆ ಉಳಿದಲ್ಲಿ ಅದು ನಿಂತ ನೀರಿನ ಹಾಗೆ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತದೆ. ವೇದ ಕಾಲದ ಸಂಸ್ಕೃತದಲ್ಲಿದ್ದ ಜೀವಂತಿಕೆ ಕಾವ್ಯಗಳ ಕಾಲದ ಸಂಸ್ಕೃತದಲ್ಲಿ ಕಾಣಿಸದಿರುವುದಕ್ಕೆ ಅದರಲ್ಲಿ ಬದಲಾವಣೆಗಳಾಗುವುದು ನಿಂತುಹೋಗಿದ್ದೇ ಮುಖ್ಯ ಕಾರಣ. ಕಾವ್ಯಗಳ ಕಾಲದ ಸಂಸ್ಕೃತವನ್ನು ಆಳವಾಗಿ ಪರಿಶೀಲಿಸಿದವರಿಗೆ ಅದರಲ್ಲಿ ಬಹಳಷ್ಟು ಕೃತಕತೆ ತುಂಬಿರುವುದು ಅರಿವಿಗೆ ಬರುತ್ತದೆ"**[೭೭] ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಈ ಮೂಲಕ ಮಾತನ್ನು ಅನುಸರಿಸಿ ಬರಹ ಬದಲಾಗದೇ ಇದ್ದಲ್ಲಿ ಭಾಷೆಯಲ್ಲಿ ಯಾವೆಲ್ಲ ಬಗೆಯ ಸಮಸ್ಯೆಗಳು ತಲೆದೋರುತ್ತವೆ ಎನ್ನುವುದರ ಕಡೆಗೆ ಕೂಡ ಅವರು ಗಮನ ಹರಿಸುತ್ತಾರೆ.

೫.೯. ಅರ್ಥ ಸಂದಿಗ್ಧತೆಯ ಪ್ರಶ್ನೆಗೆ ಡಿ. ಎನ್. ಶಂಕರ ಬಟ್ಟರ ಪರಿಹಾರ

ಬರಹ ಮತ್ತು ಮಾತಿನ ನಡುವೆ ಇರುವ ಅಂತರವನ್ನು ಹೋಗಲಾಡಿಸಿದಲ್ಲಿ ಅರ್ಥಸಂದಿಗ್ಧತೆ ಉಂಟಾಗುತ್ತದೆ ಎನ್ನುವುದು ಕೆಲವರ ವಾದ. ಇದಕ್ಕೆ ಕೂಡ ಸ್ವತಹ ಡಿ. ಎನ್. ಶಂಕರ ಬಟ್ಟರೇ ಕೆಲವು ಉದಾಹರಣೆಗಳನ್ನು ಕೊಡುತ್ತಾರೆ. ಕನ್ನಡ ಸಂಘ ಎಂದು ಬರೆದರೂ ಅದು ಮಾತಿನಲ್ಲಿ ಕನ್ನಡ ಸಂಗ ಎಂದಾಗುತ್ತದೆ ಎನ್ನುವ ಅವರು, ನಾವು ಬರಹದಲ್ಲಿ ಬಳಸುವ ಪದಗಳಿಗೆ ಕೂಡ ಕೆಲ ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚಿನ ಅರ್ಥ ಇರುವುದಕ್ಕೆ ಉದಾಹರಣೆಗಳನ್ನು ನೀಡಿದ್ದಾರೆ. ಅಲ್ಲದೇ, ಹೊಸ ಬರಹವನ್ನು ಬಳಸಿದಲ್ಲಿ ಊಹಿಸಿದಷ್ಟು ಸಮಸ್ಯೆಯಾಗದು ಎಂಬುದು ಅವರ ಅನಿಸಿಕೆ.

"ಕನ್ನಡದ ಕಡಿ ಪದಕ್ಕೆ ಕಿಟ್ಟೆಲ್ ಡಿಕ್ಶನರಿಯಲ್ಲಿ ಒಟ್ಟು ಒಂಬತ್ತು ಅರ್ತಗಳನ್ನು ಕೊಡಲಾಗಿದೆ. ಹಾಲು ಪದಕ್ಕೆ 'ದನದ ಹಾಲು' ಎಂಬ ಅರ್ತವೂ ಇದೆ, 'ಕಬ್ಬಿನ ಹಾಲು' ಎಂಬ ಅರ್ತವೂ ಇದೆ. ಇದಲ್ಲದೆ ಕೆಲವು ಗಿಡಗಳ 'ಸೊನೆ' ಎಂಬ ಅರ್ತವೂ ಇದೆ"[೭೮] ಎನ್ನುತ್ತಾರೆ. ಅಲ್ಲದೇ, ಅರವೆ ಎಂಬ ಪದಕ್ಕೆ ಜೀರ್ಣ, ಅಜೀರ್ಣ ಎಂಬ ಪರಸ್ಪರ ವಿರುದ್ಧಾರ್ಥ ಇರುವುದನ್ನು ಅವರು ಉದಾಹರಿಸಿದ್ದಾರೆ. ಈ ರೀತಿಯ ನಾನಾರ್ಥಗಳು ಸಂಸ್ಕೃತದಲ್ಲಿ ಇನ್ನೂ ಹೆಚ್ಚು ಎಂದು ಅವರು ಹೇಳುತ್ತಾರೆ. ಇಂಥ ಇನ್ನಷ್ಟು ಪದಗಳನ್ನು ಕೂಡ ಉದಾಹರಿಸಬಹುದು. ಕರೆ (ಕೂಗು, ಹಾಲು ಕರೆ), ಕತ್ತಿ (ಕತ್ತೆ, ಮರ ಕಡಿಯುವ ಕತ್ತಿ, ಖಡ್ಗ) ತಂದೆ (ಅಪ್ಪ, ನೀರು ತಂದೆ), ಹಿಂದಿಯಲ್ಲಿ ಕಲ್ ಎಂಬ ಪದಕ್ಕೆ ನಿನ್ನೆ ಮತ್ತು ನಾಳೆ ಎಂಬ ಎರಡೂ ಅರ್ಥಗಳಿವೆ. ಇವುಗಳು ಆಯಾ ಸಂದರ್ಭವನ್ನು ಅನುಸರಿಸಿ ಸಂವಹನಕ್ಕೆ ಒಳಗಾಗುತ್ತವೆ. ಓದು ಮತ್ತು ಬರಹ ಹಾಗೂ ಮಾತುಗಳ ಸಂದರ್ಭದಲ್ಲಿ ಆಯಾ

ಭಾಷಿಕರು ಯಾವ ಅರ್ಥವಿದೆಯೋ ಅದನ್ನು ಸರಿಯಾಗಿ ಗ್ರಹಿಸುತ್ತಾರಲ್ಲದೇ, ವಿರುದ್ಧಾರ್ಥಗಳನ್ನೋ ಅಥವಾ ತಮಗೆ ಬೇಕಾದ ಅರ್ಥಗಳನ್ನೋ ಗ್ರಹಿಸುವುದಿಲ್ಲ. ಈ ಎಲ್ಲ ಉದಾಹರಣೆಗಳಿಂದ ಡಿ. ಎನ್. ಶಂಕರ ಬಟ್ಟರ ಪ್ರಮೇಯಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇದೆ ಎನಿಸುತ್ತದೆ.

ಲಿಪಿಕ್ರಾಂತಿಯಿಂದ ಆಗುವ ಅನುಕೂಲಗಳೇನು? ಎನ್ನುವುದನ್ನು ಡಿ. ಎನ್. ಶಂಕರ ಬಟ್ಟರು ಹೀಗೆ ಮಂಡಿಸಿದ್ದಾರೆ: **“‘ಸಂಸ್ಕೃತದಿಂದ ಎರವಲಾಗಿ ಪಡೆದ ಪದಗಳನ್ನು ಹೆಚ್ಚು ಕಡಿಮೆ ಸಂಸ್ಕೃತದಲ್ಲಿ ಇರುವ ಹಾಗೆಯೇ ಬರೆಯಬೇಕು’ ಎಂಬ ನಿರ್ಬಂದವನ್ನು ತೆಗೆದುಹಾಕುವ ಮೂಲಕ ಮತ್ತು ಅಂತಹ ಪದಗಳನ್ನು ಹೇಗೆ ಓದುತ್ತೇವೆಯೋ ಹಾಗೆಯೇ ಬರೆಯುವ ಮೂಲಕ ‘ಹೊಸ ಬರಹ’ವನ್ನು ಉಂಟುಮಾಡಲಾಗಿದೆ. ಇದರಲ್ಲಿ ಒಟ್ಟು ೩೧ ಅಕ್ಶರಗಳು ಮಾತ್ರ ಕಡ್ಡಾಯವಾಗಿ ಬಳಕೆಯಾಗುತ್ತವೆ”**[೭೯] ಎನ್ನುವುದು ಅವರ ಅಭಿಪ್ರಾಯ. ಈ ಮೂಲಕ ಕನ್ನಡದಲ್ಲಿ ನಾವು ಈಗ ಬೋಧಿಸುತ್ತಿರುವ ಮತ್ತು ಮಕ್ಕಳು ಕಲಿಯುತ್ತಿರುವ ಅಕ್ಷರಗಳ ಸಂಖ್ಯೆಯಲ್ಲಿ ಇಳಿಕೆಯಾಗಲಿದೆ. ಈ ಮೂಲಕ ಕಲಿಕೆ ಸರಾಗವಾಗಲಿದೆ ಎನ್ನುವುದು ಅವರ ಪ್ರಮೇಯವಾಗಿದೆ.

ಹೊಸ ಬರಹದ ಪ್ರಯೋಜನದ ಪಟ್ಟಿ

೧. ಚಿಕ್ಕವರು, ದೊಡ್ಡವರಿಗೆ ೫೦ ಅಕ್ಷರಗಳ ಬದಲು ೩೧ ಅಕ್ಷರಗಳನ್ನು ಕಲಿಸುವುದು ಸರಳ

೨. ಓದುವ ಮಾದರಿಯಲ್ಲೇ ಬರೆಯುವುದರಿಂದ ಅಕ್ಷರ ದೋಷ ಸಮಸ್ಯೆ ಪರಿಹಾರ

೩. ಋ, ಷ, ಮಹಾಪ್ರಾಣಾಕ್ಷರಗಳನ್ನು ಕೈಬಿಡುವುದರಿಂದ ತಪ್ಪುಗಳಲ್ಲಿ ಇಳಿಕೆ

೪. ಹೊಸ ಬರಹದಿಂದ ಸಂಶಯಗಳು ಇಲ್ಲವಾಗುತ್ತವೆ

೫. ಕೆಳವರ್ಗದ ಮಕ್ಕಳಿಗೆ ಉಚ್ಚಾರಣೆಯಲ್ಲಿಲ್ಲದ ಅಕ್ಷರ ಕಲಿಯುವ ಸಮಸ್ಯೆ ನಿವಾರಣೆ

೬. ಹೊಸಬರಹದಲ್ಲಿ ಬೆರಳಚ್ಚು, ಟೈಪ್ ಮಾಡುವುದು ಸುಲಭ. ವಿಳಂಬವಿಲ್ಲದೇ ಕೆಲಸ ಮಾಡಬಹುದು.

೭. ಬರಹ ಮತ್ತು ಆಡು ಮಾತಿನ ನಡುವಿನ ಅಂತರ ಕಡಿಮೆಯಾಗುತ್ತದೆ

೮. ಬರಹದ ಕ್ಲಿಷ್ಟತೆ ಮತ್ತು ಕೃತಕತೆ ಕಡಿಮೆಯಾಗುತ್ತದೆ. ಬರಹದ ಜೀವಂತಿಕೆ ಹೆಚ್ಚಾಗುತ್ತದೆ[೮೦] ಎಂಬ ಎಂಟು ಉಪಯೋಗಗಳನ್ನು ಡಿ. ಎನ್. ಶಂಕರ ಬಟ್ಟರು ಪಟ್ಟಿ ಮಾಡಿದ್ದಾರೆ. ಈ ಮೂಲಕ ಕನ್ನಡದಲ್ಲಿ ಲಿಪಿ ಕ್ರಾಂತಿಗಾಗಿ ಹೊಸ ಬರಹದ ಅವಶ್ಯಕತೆ ಇದೆ ಎಂದು ಅವರು ಹೇಳುತ್ತಾರೆ.

೫.೧೦. ಪದಕ್ರಾಂತಿ ಕುರಿತು ಡಿ. ಎನ್. ಶಂಕರ ಬಟ್ಟರ ಚಿಂತನೆಗಳು

ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬಳಸಲು ಲಿಪಿಕ್ರಾಂತಿಯ ಜೊತೆಗೆ ಪದಕ್ರಾಂತಿ ಕೂಡ ಆಗಬೇಕು ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. **“ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವುದರಿಂದಾಗಿ ಕನ್ನಡ ಬರಹ ತನ್ನತನವನ್ನೂ ಕಳೆದುಕೊಳ್ಳುತ್ತಿದೆ. ಕನ್ನಡದಲ್ಲಿ ಹೊಸ ಪದಗಳನ್ನು ಉಂಟುಮಾಡಬೇಕಾದಾಗಲೆಲ್ಲ ನಮ್ಮ ಬರಹಗಾರರು ಕನ್ನಡದ ಬದಲು ಸಂಸ್ಕೃತದ ಮೊರೆ ಹೋಗುತ್ತಿದ್ದಾರೆ. ನಮಗೆ ಅವಶ್ಯವಿರುವ ಹೊಸ ಪದಗಳನ್ನು ಉಂಟುಮಾಡುವ ಶಕ್ತಿಯೇ ಕನ್ನಡಕ್ಕಿಲ್ಲ ಎಂಬ ತಪ್ಪು ಕಲ್ಪನೆಯೂ ಇದರಿಂದಾಗಿ ಜನರಲ್ಲಿ ಬೆಳೆಯುತ್ತಿದೆ”**[೮೧] ಎನ್ನುವುದು ಅವರ ಅಭಿಪ್ರಾಯವಾಗಿದೆ. ಇದಲ್ಲದೇ ಕನ್ನಡದಲ್ಲಿ ರಚನೆಯಾಗುತ್ತಿದ್ದ ಶಾಸ್ತ್ರ ಗ್ರಂಥಗಳು ಸಂಸ್ಕೃತವನ್ನು ಅನುಸರಿಸಿದ ಪರಿಣಾಮದಿಂದಾಗಿ ಕನ್ನಡದಲ್ಲಿ ಸಂಸ್ಕೃತ ಪದಗಳ ಯಥಾವತ್ತಾದ ಬಳಕೆಯ ಸಮಸ್ಯೆ ತಲೆದೋರಿದೆ ಎನ್ನುವ ಅವರು, ಸಂಸ್ಕೃತದ ಕುರಿತು ಕನ್ನಡದಲ್ಲೇ ನಡೆದಿರುವ ಎರಡು ಪ್ರಮುಖ ಪ್ರಯೋಗಗಳನ್ನು ಉದಾಹರಿಸುತ್ತಾರೆ.

“ಹದಿಮೂರನೇ ಶತಮಾನದಲ್ಲಿದ್ದ ಆಂಡಯ್ಯನು ಕನ್ನಡ ಕಾವ್ಯಗಳಲ್ಲಿ ಈ ರೀತಿ ಸಂಸ್ಕೃತ ಪದಗಳನ್ನು ಅವುಗಳಲ್ಲಿ ಸ್ವಲ್ಪವೂ ಬದಲಾವಣೆ ಮಾಡದೆ ಹಾಗೆಯೇ ತಂದು ತುರುಕುವುದು ಸರಿಯಲ್ಲ, ಕನ್ನಡ ಬರಹಗಳಲ್ಲಿ ಕಾಣಿಸುವ ಕನ್ನಡದವೇ ಆದ ಪದಗಳನ್ನು ಬಳಸಿದಲ್ಲಿ ಮತ್ತು ಸಂಸ್ಕೃತ ಪದಗಳನ್ನು ಬಳಸುವುದಿದ್ದರೂ ಅವನ್ನು ಕನ್ನಡದ ಪದಸ್ವರೂಪಕ್ಕೆ ಹೊಂದಿಕೊಳ್ಳುವ ಹಾಗೆ ಬದಲಾಯಿಸಿ ಬಳಸಿದಲ್ಲಿ ಕನ್ನಡದ ಸೊಬಗು ಉಳಿಯುತ್ತದೆ ಎಂಬುದನ್ನು ತನ್ನ ಬರವಣಿಗೆಗಳ ಮೂಲಕ ತೋರಿಸಿ ಕೊಟ್ಟಿದ್ದ”[೮೨] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಈಗಾಗಲೇ ಸಂಸ್ಕೃತ ರಹಿತ ಪದಗಳ ರಚನೆ ಮತ್ತು ಬಳಕೆಯ ಕುರಿತು ನಡುಗನ್ನಡದ ಅವಧಿಯಲ್ಲಿ ಆಂಡಯ್ಯ ನಡೆಸಿದ ಯತ್ನವನ್ನು ನೆನಪಿಸುತ್ತಾರೆ. ಇದರೊಂದಿಗೆ ಹಳಗನ್ನಡದ ಅವಧಿಯ ಇನ್ನೊಂದು ಉದಾಹರಣೆಯನ್ನೂ ನೀಡುತ್ತಾರೆ.

“ಒಂಬತ್ತನೇ ಶತಮಾನದಲ್ಲಿ ಬರೆದ ಕವಿರಾಜಮಾರ್ಗದಲ್ಲಿ, ಕೋತಿನ (೧೯೮೫:೫೬) ಅವರು ವಿವರಿಸಿದ ಹಾಗೆ, ‘ಸಕ್ಕದದ ಅತಿಯಾದ ಸಂಬಂಧ ಕನ್ನಡಕ್ಕೆ ಕಕ್ಕಸ (ಕರ್ಕಶ)ವಾಗುತ್ತಿ’ರುವುದನ್ನು ಮತ್ತು ಕನ್ನಡ ನುಡಿಗೆ ಮುಳುವಾಗುತ್ತಿರುವುದನ್ನು ಗಮನಿಸಲಾಗಿತ್ತು. ಇದನ್ನು ತಡೆಯುವುದಕ್ಕಾಗಿ ಕಕ್ಕಸವಾಗದಂತೆ ಬರುವ ಸಕ್ಕದ ಪದಗಳಿಗೆ ಮಾತ್ರ ಅನುಮತಿಯನ್ನು ಕೊಡಲಾಗಿತ್ತು”[೮೩] ಎನ್ನುತ್ತಾರೆ. ಈ ಕುರಿತು ಕವಿರಾಜಮಾರ್ಗಕಾರನು ನಡೆಸಿರುವ ಚರ್ಚೆಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಇದರೊಂದಿಗೆ ಸಂಸ್ಕೃತ ಪದಗಳ ಅತಿಯಾದ ಬಳಕೆಗೆ ಇದ್ದ ಕಾರಣಗಳನ್ನು ಕೂಡ ಡಿ. ಎನ್. ಶಂಕರ ಬಟ್ಟರು ಶೋಧಿಸಿದ್ದಾರೆ. ಅವರ ಪ್ರಕಾರ: **“ಹಿಂದಿನ ಕಾಲದಲ್ಲಿ ಕನ್ನಡ ಬರಹಗಳನ್ನು ಮತ್ತು ಗ್ರಂತಗಳನ್ನು ಬರೆಯುತ್ತಿದ್ದವರಲ್ಲಿ ಹೆಚ್ಚಿನವರೂ ವಯ್ದಿಕ ಬ್ರಾಹ್ಮಣರಾಗಿದ್ದರು. ಇವರಿಗೆ ಸಂಸ್ಕೃತ ಉಚ್ಚಮಟ್ಟದ ಪ್ರತಿಶ್ಟೆಯ ನುಡಿಯಾಗಿತ್ತು ಮತ್ತು ಕನ್ನಡ ಕೆಳಮಟ್ಟದ ಮ್ಲೇಚ್ಚ ನುಡಿಯಾಗಿತ್ತು. ಬ್ರಾಹ್ಮಣರು ಆರ್ಯಮೂಲದವರಾಗಿದ್ದುದು ಇದಕ್ಕೆ ಕಾರಣವಿರಬಹುದು (ಕಲಬುರ್ಗಿ ೧೯೬೭, ಕೋತಿನ ೧೯೮೫:೨೯ನೋಡಿ). ಇವತ್ತಿನ ಕಾಲದಲ್ಲೂ ಪೂಜೆ ಮಾಡುವ ಸಮಯದಲ್ಲಿ ಕನ್ನಡ ನುಡಿಯನ್ನು**

ಬಳಸಿದಲ್ಲಿ ಅಶುದ್ಧವಾಗುತ್ತದೆಯೆಂದು ನಂಬುವ ಬ್ರಾಹ್ಮಣರು ಕೆಲವರಿದ್ದಾರೆ"[೮೪] ಎಂದು ಅವರು ಎಂ. ಎಂ. ಕಲಬುರ್ಗಿ ಮತ್ತು ಕೋತಿನ ಅವರ ವಾದಗಳನ್ನು ಉಲ್ಲೇಖಿಸುತ್ತಾರೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆ ಚಾಲ್ತಿಗೆ ಬರುವುದಕ್ಕೆ ವೈದಿಕರ ನಿಲುವುಗಳೇ ಕಾರಣ ಎಂದು ಅಭಿಪ್ರಾಯಪಡುತ್ತಾರೆ. ಅಲ್ಲದೇ, ಕನ್ನಡದ ಬಹುತೇಕ ಬರಹಗಾರರು ಸಂಸ್ಕೃತದ ಮೇಲೆ ವಿಶಿಷ್ಟವಾದ ಆದರ ಮತ್ತು ಅಭಿಮಾನಗಳನ್ನು ಇಟ್ಟುಕೊಂಡು, ಕನ್ನಡದ ಕುರಿತು ಕೀಳು ಭಾವನೆ ಬೆಳೆಸಿಕೊಂಡಿದ್ದರಿಂದ ಕನ್ನಡದಲ್ಲಿ ಸಂಸ್ಕೃತದ ಬಳಕೆಯ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಅವರು ಹೇಳುತ್ತಾರೆ.

ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಮೂಲದಲ್ಲಿರುವಂತೆಯೇ ಬಳಸುವುದರಿಂದ ಎದುರಾಗುವ ಸಮಸ್ಯೆಗಳ ಕುರಿತು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ ಹೀಗಿದೆ: **"ಇವತ್ತು ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಬರಹವನ್ನು ಬಳಸುವಂತಾಗಬೇಕಾಗಿದೆ. ದಿನಪತ್ರಿಕೆ, ವಾರಪತ್ರಿಕೆಗಳಂತಹ ಬರಹಗಳ ಮೂಲಕ ತಮ್ಮ ಹೊಣೆಗಾರಿಕೆ ಮತ್ತು ಹಕ್ಕುಬಾದ್ಯತೆಗಳನ್ನು ಅರಿತುಕೊಂಡು ಅವನ್ನನುಸರಿಸಿ ಎಲ್ಲರೂ ನಡೆದುಕೊಳ್ಳಲು ಸಾದ್ಯವಾದಾಗ ಮಾತ್ರ 'ಪ್ರಜಾಪ್ರಬುತ್ವ' ತನ್ನ ನಿಜವಾದ ಅರ್ತದಲ್ಲಿ ಉಳಿಯಬಲ್ಲುದು. ಇಲ್ಲವಾದರೆ ಇವತ್ತಿನ ಹಾಗೆ ಹೆಸರಿಗೆ ಮಾತ್ರ ಪ್ರಜಾಪ್ರಬುತ್ವವೆಂದಿದ್ದು ದೇಶದ ನಿಜವಾದ ಆಳ್ವಿಕೆ ಓದುಬರಹಗಳಲ್ಲಿ ನಿಪುಣರಾಗಿರುವ ಕೆಲವೇ ಕೆಲವು ಮಂದಿಯ ಹಿಡಿತದಲ್ಲೇ ಉಳಿದೀತು"**[೮೫] ಎಂಬ ಆತಂಕ ವ್ಯಕ್ತಪಡಿಸುತ್ತಾರೆ. ಈ ಮೂಲಕ ಪ್ರಜಾಪ್ರಭುತ್ವದ ನಿಜವಾದ ಆಶಯ ಆಚರಣೆಗೆ ಬರಬೇಕಾದಲ್ಲಿ ಎಲ್ಲರಿಗೂ ಬರಹ ಅರಿವಾಗಬೇಕು ಎಂದು ಅವರು ಪ್ರತಿಪಾದಿಸುತ್ತಿದ್ದಾರೆ.

ಬರಹ ಎಲ್ಲರ ಸೊತ್ತಾಗುವುದರಿಂದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವ ವಿಶಾಲ ತಳಹದಿಯೂ ಇದೆ ಎನ್ನುವುದು ಅವರ ಅನಿಸಿಕೆಯಾಗಿದೆ. **"ಅಸ್ಪ್ರುಶ್ಯತೆಯಂತಹ ಸಾಮಾಜಿಕ ಅನಿಶ್ಟಗಳನ್ನು ತೊಡೆದುಹಾಕಬೇಕಿದ್ದಲ್ಲಿ ಮತ್ತು ಕೆಳವರ್ಗದವರು ಕೆಳಗೆಯೇ ಉಳಿಯದೆ ಮೇಲೆ ಬರಬೇಕಿದ್ದಲ್ಲಿ ಎಲ್ಲರೂ ಬರಹವನ್ನು ಬಳಸುವಂತಾಗುವುದು ಅತ್ಯವಶ್ಯ. ಈ ರೀತಿ ಎಲ್ಲರೂ ಮುಂದೆ ಬಂದಾಗ ಮಾತ್ರ ನಮ್ಮ ನಾಡು ಬೆಳವಣಿಗೆ ಪಡೆದ ನಾಡೆಂದೆನಿಸಬಲ್ಲುದು"**[೮೬] ಎನ್ನುತ್ತಾರೆ. ಈ ಮೂಲಕ ಸಮಾಜದಲ್ಲಿ ಬೇರುಬಿಟ್ಟಿರುವ ಅನಿಷ್ಟ ಪದ್ಧತಿಗಳ ನಿವಾರಣೆಗೆ ಕೂಡ ಬರಹ ಬಳಕೆಯಾಗಬಲ್ಲುದು ಎಂಬುದು ಅವರ ಅನಿಸಿಕೆಯಾಗಿದೆ. ಆದರೆ, ಇವುಗಳನ್ನು ಸಾಧಿಸಲು ಬರಹವೇ ಅಡ್ಡಿಯಾಗುತ್ತಿದೆ. ಈ ಸಮಸ್ಯೆಯನ್ನು ತೊಡೆದುಹಾಕಲು ಹೊಸ ಬರಹದ ಮಾದರಿಯ ಅವಶ್ಯಕತೆ ಇದೆ ಎಂದು ಅವರು ಪ್ರತಿಪಾದಿಸುತ್ತಿದ್ದಾರೆ.

ಜೊತೆಗೆ ಜನರ ಆಡುನುಡಿಗಳಲ್ಲಿರುವಂತೆ ಈ ಹಿಂದೆ ಬರಹದಲ್ಲಿ ಕನ್ನಡ ಪದಗಳು ಬಳಕೆಯಾಗಿರುವ ಕುರಿತು ಉದಾಹರಣೆಗಳನ್ನು ಡಿ. ಎನ್. ಶಂಕರ ಬಟ್ಟರು ನೀಡುತ್ತಾರೆ. **"ದಾಸರ ಪದಗಳಲ್ಲಿ ಮತ್ತು ಶಿವಶರಣರ ವಚನಗಳಲ್ಲಿ ಹೆಚ್ಚು ಹೆಚ್ಚು ಕನ್ನಡದೇ ಆದ ಪದಗಳ ಮತ್ತು ಪದರೂಪಗಳ ಬಳಕೆಯಾಗಿದೆ. ವಿದ್ವಾಂಸರನ್ನು ಮೆಚ್ಚಿಸುವುದಕ್ಕಾಗಿ ಬರೆದಂತಹ ಕಾವ್ಯ ಮತ್ತು ಶಾಸ್ತ್ರ ಗ್ರಂತಗಳಲ್ಲಿ ಮಾತ್ರ ಹೆಚ್ಚು ಹೆಚ್ಚು ಸಂಸ್ಕ್ರುತ ಪದಗಳ ಬಳಕೆಯಾಗಿದೆ"**[೮೭] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ವಚನಕಾರರು ಮತ್ತು ಕೀರ್ತನಕಾರರು ಕನ್ನಡದ ಆಡುನುಡಿಗೆ ಒತ್ತು ನೀಡಿದಂತೆ ಆಧುನಿಕೋತ್ತರ

ಕಾಲದಲ್ಲಿ ಬರಹ, ಲಿಪಿ. ಪದಗಳಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯವಿದೆ ಎನ್ನುವುದು ಅವರ ಅಭಿಪ್ರಾಯವಾಗಿದೆ. ವಚನಕಾರರು ಮತ್ತು ಕೀರ್ತನಕಾರರು ಅಂದಿನ ಕಾಲದಲ್ಲಿ ಜನಜನಿತವಾಗಿದ್ದ ಸಂಸ್ಕೃತದ ಮಾದರಿ, ಸಂಸ್ಕೃತ ಕಥನ, ಸಂಸ್ಕೃತ ಶೈಲಿಗಳನ್ನು ಹೊರತುಪಡಿಸಿ ವಚನ ಮತ್ತು ಕೀರ್ತನೆಗಳನ್ನು ರಚಿಸಿದರು. ಅದರಲ್ಲೂ ಎಲ್ಲ ಜಾತಿಯವರೂ ಈ ಚಳವಳಿಯಲ್ಲಿ ಭಾಗವಹಿಸಿ, ಸಾಹಿತ್ಯ ರಚನೆಯಲ್ಲಿ ತೊಡಗಿದ ಪರಿಣಾಮದಿಂದಾಗಿ ಸಹಜವಾಗಿಯೇ ಎಲ್ಲ ಬಗೆಯ ಭಾಷಿಕ ಅಭಿವ್ಯಕ್ತಿ ಸಾಧ್ಯವಾಗಿದೆ. ಮೇಲುವರ್ಗದ ವಚನಕಾರರು ಮತ್ತು ಕೀರ್ತನಕಾರರಲ್ಲಿ ಕೆಲವೆಡೆ ಸಂಸ್ಕೃತ ಪದಗಳ ಬಳಕೆ ಕಂಡುಬಂದರೂ ಬಹುತೇಕರ ರಚನೆಗಳಲ್ಲಿ ಆಡುನುಡಿಗೆ ಒತ್ತು ನೀಡಲಾಗಿದೆ. ಇದಕ್ಕೆ ಕೆಲವು ಅಪವಾದಗಳೂ ಸಿಗುತ್ತವೆ. ಆದರೆ, ನಡುಗನ್ನಡದ ಈ ಅವಧಿಯಲ್ಲಿ ಕನ್ನಡ ಪದಗಳ ಬಳಕೆ ಹೆಚ್ಚಿರುವುದಂತೂ ನಿಜ ಎನ್ನಬಹುದು.

ಅಕ್ಷರಸ್ಥರು ತಮ್ಮ ವಿದ್ಯಾಭ್ಯಾಸದ ನಂತರ ಓದಿನಿಂದ ದೂರವಾಗಲು ಕೂಡ ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆಯೇ ಕಾರಣ ಎಂದು ಡಿ. ಎನ್. ಶಂಕರ ಬಟ್ಟರು ಅಭಿಪ್ರಾಯಪಟ್ಟಿದ್ದಾರೆ. 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಅವರ ಕೃತಿಯಲ್ಲಿ **"'ಸಾಕ್ಶರ'ರೆಂದೆನಿಸಿಕೊಳ್ಳುವ ವ್ಯಕ್ತಿಗಳ ಎಣಿಕೆ ನಮ್ಮ ನಾಡಿನಲ್ಲಿ ಶೇಕಡಾ ಅಯ್ವತ್ತಕ್ಕಿಂತಲೂ ಹೆಚ್ಚಿದೆಯೆಂದು ಸಮೀಕ್ಶೆಗಳು ತಿಳಿಸಬಹುದು; ಆದರೆ ಈ ವ್ಯಕ್ತಿಗಳಲ್ಲಿ ನಿಜಕ್ಕೂ ಓದನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಬಳಸಿಕೊಳ್ಳುವವರ ಎಣಿಕೆ ಇದಕ್ಕಿಂತ ಎಶ್ಟೋ ಕಡಿಮೆಯಿದೆ... ಕನ್ನಡ ಬರಹಗಳಲ್ಲಿ ಅತಿಯಾಗಿ ಸಂಸ್ಕ್ರುತ ಪದಗಳ ಬಳಕೆಯಾಗುತ್ತಿರುವುದೂ ಇದಕ್ಕೆ ಒಂದು ಕಾರಣವೆಂದು ನನಗೆ ಅನಿಸುತ್ತದೆ. ಸುಲಬವಾಗಿ ಅರ್ತವಾಗದ ಈ ಬರಹಗಳನ್ನು ಕಶ್ಟಪಟ್ಟು ಓದಿ ಅರ್ತಮಾಡಿಕೊಳ್ಳುವುದಕ್ಕೆ ಬೇಕಾಗುವ ತಾಳ್ಮೆ ಹೆಚ್ಚಿನವರಲ್ಲೂ ಇರುವುದಿಲ್ಲ"**[೮೮] ಎನ್ನುತ್ತಾರೆ. ಈ ಮೂಲಕ ಸಾಕ್ಷರರು ಕೂಡ ಓದಿನಿಂದ ದೂರವಾಗಲು ಕನ್ನಡದಲ್ಲಿ ಅನವಶ್ಯಕವಾಗಿ ಸಂಸ್ಕೃತ ಪದಗಳ ಬಳಕೆಯೇ ಕಾರಣವಾಗಿರಬಹುದು ಎಂಬ ಪ್ರಮೇಯ ಒಂದನ್ನು ಮಂಡಿಸಿದ್ದಾರೆ. ಇದರ ಕುರಿತು ಇನ್ನಷ್ಟು ಅಧ್ಯಯನದ ಅವಶ್ಯಕತೆ ಇರುವಂತೆ ತೋರುತ್ತದೆ. ಶೇ. ೫೦ಕ್ಕಿಂತ ಹೆಚ್ಚಿನ ಸಾಕ್ಷರ ರಾಜ್ಯದಲ್ಲಿ ಕನ್ನಡ ದೈನಿಕ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ದ್ವೈಮಾಸಿಕ, ತ್ರೈಮಾಸಿಕ, ಅರ್ಧ ವಾರ್ಷಿಕ, ವಾರ್ಷಿಕಗಳ ಓದುಗರ ಸಂಖ್ಯೆ ಎಷ್ಟಿದೆ? ಎಂಬ ಕುರಿತು ಅಧ್ಯಯನ ನಡೆಯಬೇಕಿದೆ. ಆಗ ಕನ್ನಡದ ಸಾಕ್ಷರರ ಪೈಕಿ ಎಷ್ಟು ಪ್ರಮಾಣದ ನಾಗರಿಕರು ಶಾಲಾ–ಕಾಲೇಜುಗಳ ವಿದ್ಯಾಭ್ಯಾಸದ ನಂತರ ಕೂಡ ಓದು, ಬರಹಗಳನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಸಿಗಬಹುದು. ಸದ್ಯದ ದೈನಿಕಗಳ ಲೆಕ್ಕದ ಪ್ರಕಾರ ೨೦ ಲಕ್ಷಕ್ಕೂ ಹೆಚ್ಚಿನ ಪ್ರತಿಗಳು ಮಾರಾಟವಾಗುತ್ತಿಲ್ಲ. ಸದ್ಯಕ್ಕೆ ಕನ್ನಡದಲ್ಲಿ ೬.೫ ಕೋಟಿ ಜನಸಂಖ್ಯೆ ಇರುವ ಸಾಧ್ಯತೆ ಇದೆ. ಈ ಲೆಕ್ಕದಲ್ಲಿ ಕನ್ನಡ ಪತ್ರಿಕೆಗಳ ಓದುಗರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆ ಇರುವುದಕ್ಕೆ ಸಾಕ್ಷಿ ಇದೆ. ಶಂಕರಬಟ್ಟರು ಹೇಳುವ ಕಾರಣದಿಂದಲೇ ಓದುಗರು ಓದಿನಿಂದ ದೂರಾಗಿದ್ದಾರೆಯೇ? ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ.

ಇನ್ನು ಸಂಸ್ಕೃತ ಮತ್ತು ಇತರ ಭಾಷೆಗಳ ಪದಗಳನ್ನು ಕನ್ನಡದಲ್ಲಿ ಬಳಸಲೇಬಾರದು ಎಂಬ ಕಟ್ಟುನಿಟ್ಟಿನ ವ್ರತ ಆಚರಿಸಬೇಕು ಎಂದು ಕೂಡ ಡಿ. ಎನ್. ಶಂಕರ ಬಟ್ಟರು ಹೇಳುತ್ತಿಲ್ಲ: **"ಸಂಸ್ಕ್ರುತದಿಂದ ಇಲ್ಲವೇ ಇಂಗ್ಲಿಶ್, ಹಿಂದಿ, ಮರಾಟಿ ಮೊದಲಾದ ಇತರ ನುಡಿಗಳಿಂದ ಪದಗಳನ್ನು**

ಎರವಲಾಗಿ ಪಡೆಯಲೇ ಬಾರದೆಂದೇನೂ ಇದರ ಅರ್ಥವಲ್ಲ. ನಿಜಕ್ಕೂ ಅವು ಬೇಕಾಗಿವೆಯಾದಲ್ಲಿ ದಾರಾಳವಾಗಿ ಅಂತಹ ಪದಗಳನ್ನು ಎರವಲಾಗಿ ಪಡೆದು ಬಳಸಬಹುದು. ಈ ಸ್ವಾತಂತ್ರ್ಯ ನಮಗೆ ಯಾವಾಗಲೂ ಇದ್ದೇ ಇರುತ್ತದೆ. ಆದರೆ ಈ ಸ್ವಾತಂತ್ರ್ಯದ ಮೇಲೆ ಸ್ವಲ್ಪ ಮಟ್ಟಿಗಾದರೂ ಹತೋಟಿಯನ್ನು ಇರಿಸಿಕೊಳ್ಳುವ ಅವಶ್ಯಕತೆಯಿದೆ"[೬೯] ಎನ್ನುವುದು ಅವರ ಅಭಿಪ್ರಾಯವಾಗಿದೆ. ಇದರೊಂದಿಗೆ ಬರಹದಲ್ಲಿ ಖಚಿತತೆ ಅಗತ್ಯವಿದೆ ಎಂದು ಕೂಡ ಅವರು ಹೇಳುತ್ತಾರೆ. ಮಾತು ಮತ್ತು ಬರಹದ ನಡುವೆ ಕೆಲ ವ್ಯತ್ಯಾಸವಿದೆ. ಮಾತನಾಡುವ ವ್ಯಕ್ತಿಯ ಮಾತುಗಳನ್ನು ಕೇಳಿಸಿಕೊಳ್ಳುವುದಕ್ಕೂ ಮತ್ತು ಬರಹ ಒಂದನ್ನು ಓದಿ ಅರ್ಥ ಮಾಡಿಕೊಳ್ಳುವುದಕ್ಕೂ ವ್ಯತ್ಯಾಸವಿದೆ ಎನ್ನುವ ಅವರು, ನೇರ ಸಂವಹನದ ಸಾಧ್ಯತೆ ಮಾತಿನಲ್ಲಿದೆ. ಆದರೆ, ಓದಿನಲ್ಲಿ ಬಹುತೇಕ ಈ ಸಾಧ್ಯತೆ ಇಲ್ಲ ಎನ್ನುತ್ತಾರೆ. ಮಾತು ಕೇಳುವವರು ತಮಗೆ ಎದುರಾದ ಸಂದೇಹವನ್ನು ಪರಿಹರಿಸಿಕೊಳ್ಳಲು ಸಾಧ್ಯವಿದೆ. ಆದರೆ, ಓದುಗನಿಗೆ ಈ ಅವಕಾಶ ಸಿಗುವ ಸಾಧ್ಯತೆ ಕಡಿಮೆ ಎನ್ನುವ ಅವರು, ಇದೇ ಕಾರಣದಿಂದಾಗಿ ಬರಹ ಖಚಿತವಾಗಿರಬೇಕು ಎನ್ನುತ್ತಾರೆ.

ಮೇಲಿನ ಎಲ್ಲ ಉದಾಹರಣೆಗಳ ಜೊತೆಗೆ ಕನ್ನಡಿಗರ ಅಭಿಮಾನದ ಕೊರತೆ ಕುರಿತು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ ಹೀಗಿದೆ: **"ಕನ್ನಡಿಗರಿಗೆ ತಮ್ಮ ನುಡಿಯ ಮೇಲೆ ಅಬಿಮಾನವಿರುವುದು ತುಂಬಾ ಕಡಿಮೆ ಎಂದು ಹೆಚ್ಚಿನವರೂ ಹೇಳುತ್ತಾರೆ. ನಾವು ಬೇರೆಯವರ ಮೇಲೆ ನಮ್ಮ ನುಡಿಯನ್ನು ಹೇರಲು ಹೋಗುವುದಿಲ್ಲ. ಆದಶ್ಟು ಮಟ್ಟಿಗೆ ಬೇರೆಯವರ ನುಡಿಯನ್ನು ನಾವೇ ಕಲಿತುಕೊಳ್ಳಲು ಪ್ರಯತ್ನಿಸುತ್ತೇವೆ"**[೭೦] ಎನ್ನುತ್ತಾರೆ. ಬೆಂಗಳೂರಿಗರು ಮತ್ತು ಬಂಗಾಲಿ, ಕೊಂಕಣಿ, ತಮಿಳು ಭಾಷಿಕರ ನಡುವಿರುವ ವ್ಯತ್ಯಾಸವನ್ನು ಪ್ರಸ್ತಾಪಿಸುವ ಅವರು, ಬೆಂಗಳೂರಿನಲ್ಲಿ ನಮ್ಮ ನಡುವೆ ಅನ್ಯ ಭಾಷಿಕರು ಇದ್ದಲ್ಲಿ ಅವರಿಗೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ಇಂಗ್ಲಿಷ್ ಭಾಷೆ ಬಳಸುವ ಚಾಳಿ ಇದೆ. ಆದರೆ, ಬೇರೆ ರಾಜ್ಯಗಳಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ ಎನ್ನುತ್ತಾರೆ. ಈ ಮೂಲಕ ಅನ್ಯ ಭಾಷಿಕರಿಗೆ ಕನ್ನಡವನ್ನು ಕಲಿಸುವ ಕೆಲಸ ಕೂಡ ಸಾಧ್ಯವಾಗುತ್ತಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ.

"ಕನ್ನಡಿಗರ ಈ ಸ್ವಬಾವ ಅವರ ನುಡಿತಾಳ್ಮೆಯನ್ನು ಸೂಚಿಸುತ್ತದೆ. ಇದು ಒಳ್ಳೆಯದೇ. ಆದರೆ ಈ ಸ್ವಬಾವ ತಮ್ಮ ನುಡಿಯನ್ನೇ ಮರೆತುಬಿಡುವಶ್ಟು ಮುಂದೆ ಹೋಗಬಾರದು. ಯಾಕೆಂದರೆ ತಮ್ಮ ತಾಯ್ನುಡಿಯನ್ನು ಕಳೆದುಕೊಂಡವರು ತನ್ನ ಬೇರುಗಳನ್ನೆಲ್ಲ ಕಳೆದುಕೊಂಡಿರುವ ಮರದ ಹಾಗಾಗುತ್ತಾರೆ. ತಮ್ಮ ತಾಯ್ನುಡಿಯ ಮೇಲೆ ಅಬಿಮಾನವಿಲ್ಲದವರಿಗೆ ತಮ್ಮ ಮೇಲೂ ಅಬಿಮಾನವಿರುವುದಿಲ್ಲ. ನುಡಿ ಅಬಿಮಾನವೆಂಬುದು ದುರಬಿಮಾನವಾಗಬಾರದು ಅಶ್ಟೆ"[೭೧] ಎನ್ನುವುದು ಭಾಷಿಕ ಅಭಿಮಾನದ ಕುರಿತ ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ.

ಭಾಷೆಯೊಂದರಲ್ಲಿ ನಿರ್ದಿಷ್ಟ ಪದಗಳಿಲ್ಲ ಎಂಬ ಕೊರಗು ಬೇಕಿಲ್ಲ ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದವಾಗಿದೆ. **"ಕೆಲವು ಸಂದರ್ಬಗಳಲ್ಲಿ ನಾವು ತಿಳಿಸಬೇಕಾದ ವಿಶಯಗಳನ್ನು ತಿಳಿಸಲು ಇಲ್ಲವೇ ಹೆಸರಿಸಬೇಕಾದ ವಸ್ತುಗಳನ್ನು ಹೆಸರಿಸಲು ತಕ್ಕುದಾದ ಪದವೇ ನಮ್ಮ ನುಡಿಯಲ್ಲಿ ಇಲ್ಲವೆಂದು ಅನಿಸುವುದಿದೆ. ಇದಕ್ಕೆ ನಮ್ಮ ನುಡಿಯ 'ಬಡತನ'ವೇನೂ ಕಾರಣವಲ್ಲ. ಎಲ್ಲಾ ನುಡಿಗಳಲ್ಲೂ ಅಂತಹ**

ಸಂದರ್ಭಗಳು ಬರುತ್ತಲೇ ಇರುತ್ತವೆ. ಅತ್ಯಂತ ‘ಶ್ರೀಮಂತ’ವೆನಿಸಿದ ಸಂಸ್ಕೃತ, ಇಂಗ್ಲಿಶ್ ಮೊದಲಾದ ನುಡಿಗಳಲ್ಲೂ ಅವು ಬರುತ್ತಿರುತ್ತವೆ”[೯೨] ಎನ್ನುವುದು ಅವರ ಅಭಿಪ್ರಾಯವಾಗಿದೆ. ಅಲ್ಲದೇ, ಪ್ರಾದೇಶಿಕ, ವೃತ್ತಿ, ಮೂಲ ಸೌಕರ್ಯ ಮೊದಲಾದ ಅಂಶಗಳು ಆಯಾ ಪ್ರದೇಶದ ಜನರ ಭಾಷೆಯಲ್ಲಿ ಬಳಕೆಯಲ್ಲಿರುವುದು ಸಹಜ ಪ್ರಕ್ರಿಯೆ. ಇದರ ಆಧಾರದಲ್ಲಿ ವೃತ್ತಿ, ಪ್ರದೇಶಗಳಿಗೆ ಅನುಗುಣವಾಗಿ ಜನ ಪದಗಳನ್ನು ಬಳಸುತ್ತಿರುತ್ತಾರೆ. ಈ ಮೂಲಕ ಭಾಷೆಯೊಂದರಲ್ಲಿ ಯಾವುದೋ ಭಾಷೆಯಲ್ಲಿರುವ ಪದ ಇಲ್ಲವೆಂಬ ಕೀಳರಿಮೆ ಬೇಕಿಲ್ಲ ಎನ್ನುವುದು ಅವರ ಪ್ರಮುಖ ಹೇಳಿಕೆಯಾಗಿದೆ.

೫.೧೧. ಪಾರಿಭಾಷಿಕ ಪದಗಳಲ್ಲಿ ಸಂಸ್ಕೃತದ ಪ್ರಾಬಲ್ಯ

ಕನ್ನಡದಲ್ಲಿ ಅನೇಕ ಪಾರಿಭಾಷಿಕ ಪದಗಳನ್ನು ರಚಿಸುವ ಕೆಲಸ ನಡೆಯುತ್ತಿದೆ. ಆದರೆ, ಇದರಲ್ಲಿ ಬಹುತೇಕ ವಿಷಯಗಳಿಗೆ ಸಂಬಂಧಿಸಿದಂತೆ ಸಂಸ್ಕೃತದ ಮೊರೆಹೋಗುವ ಚಾಳಿ ರೂಢಿಯಲ್ಲಿದೆ. ಉದಾಹರಣೆಗೆ, ಇಂಗ್ಲಿಷ್‌ನ ಓಪನ್ ಹಾರ್ಟ್ ಸರ್ಜರಿ ಪದಕ್ಕೆ ಪರ್ಯಾಯವಾಗಿ ತೆರೆದ ಹೃದಯ ಶಸ್ತ್ರಚಿಕಿತ್ಸೆ ಎಂಬ ಪದವನ್ನು ಬಳಸಲಾಗುತ್ತಿದೆ. ಆದರೆ, ಇದು ಇಂಗ್ಲಿಷ್‌ನಲ್ಲಿ ಕೊಡುವ ಅರ್ಥವಲ್ಲ. ಇಂತಹ ಅನೇಕ ಉದಾಹರಣೆಗಳು ಕನ್ನಡದಲ್ಲಿ ಸಿಗುತ್ತವೆ. ಇಂತಹ ಸಂದರ್ಭದಲ್ಲಿ ಸಂಸ್ಕೃತದ ಮೊರೆ ಹೋಗಬೇಕಿಲ್ಲ, ಅದರ ಬದಲಾಗಿ ಹಳಗನ್ನಡದ ಪದಗಳನ್ನು ಬಳಸಬಹುದು ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. **“ಕನ್ನಡಕ್ಕಾಗಿ ಹೊಸ ಪಾರಿಬಾಷಿಕಗಳನ್ನು ಉಂಟುಮಾಡುವವರು ಅದಕ್ಕಾಗಿ ಸಂಸ್ಕ್ರುತ ಪದಗಳನ್ನು ಇಲ್ಲವೇ ಪದಕಾಂಡಗಳನ್ನು ಬಳಸಿಕೊಳ್ಳುವಾಗ ಅವುಗಳಿಗೆ ಸಂಸ್ಕ್ರುತದಲ್ಲಿ ಎಂತಹ ಅರ‍್ತವಿದೆ ಎಂಬುದಕ್ಕೆ ಪ್ರಾಶಸ್ತ್ಯ ಕೊಡುವುದಿಲ್ಲ. ತಮಗೆ ಬೇಕಾಗಿರುವ ಅರ‍್ತ ಅವಕ್ಕಿಲ್ಲವಾದರೂ ಆ ಅರ‍್ತವನ್ನು ಸ್ವಲ್ಪ ಮಟ್ಟಿಗೆ ಸೂಚಿಸುವ ಹಾಗಿದ್ದರೆ ಸಾಕು, ಅವನ್ನು ಎರವಲಾಗಿ ಪಡೆದು ತಮಗೆ ಬೇಕಾಗಿರುವ ಅರ‍್ತದಲ್ಲಿ ಬಳಸಿಕೊಳ್ಳಲು ಅವರು ಹಿಂದೆಮುಂದೆ ನೋಡುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಅವರಿಗೆ ಬೇಕಾಗುವಂತಹ ಅರ‍್ತವನ್ನು ಕೊಡಬಲ್ಲ ಪದಗಳು ಸಂಸ್ಕ್ರುತದಲ್ಲಿಯೂ ಬಳಕೆಯಲ್ಲಿರುವುದಿಲ್ಲ”**[೯೩] ಎನ್ನುತ್ತಾರೆ.

ಆಧುನಿಕ ಘಟನೆ, ವಿದ್ಯಮಾನ, ಸಂಶೋಧನೆ, ತಂತ್ರಜ್ಞಾನ ಇತ್ಯಾದಿಗಳಿಗೆ ಪಾರಿಭಾಷಿಕ ಪದಗಳನ್ನು ರಚಿಸುವ ಸಂದರ್ಭದಲ್ಲಿ ಪ್ರಾಚೀನ ಸಂಸ್ಕೃತ ಭಾಷೆಯ ಮೊರೆಹೋಗುವುದೇ ವಿಪರ್ಯಾಸವೆನಿಸುತ್ತದೆ. ಈ ವಿಷಯವನ್ನು ಇನ್ನಷ್ಟು ಮನದಟ್ಟು ಮಾಡಿಕೊಡುವ ಡಿ. ಎನ್. ಶಂಕರ ಬಟ್ಟರು, **“ಈ ರೀತಿ ಪಾರಿಬಾಶಿಕ ಪದಗಳನ್ನು ತಯಾರಿಸುವಲ್ಲಿ ಸಂಸ್ಕ್ರುತ ಪದಗಳ ಮೊರೆಹೊಗಲು ಇವರು ಕೊಡುವ ಕಾರಣವೇನೆಂದರೆ ಇದಕ್ಕಾಗಿ ಕನ್ನಡದ ದಿನಬಳಕೆಯ ಪದಗಳನ್ನು ಬಳಸಿದಲ್ಲಿ ಅವಕ್ಕೆ ದಿನಬಳಕೆಯ ಅರ‍್ತವಿರುವ ಕಾರಣ ಗೊಂದಲವುಂಟಾಗಬಲ್ಲುದು ಎಂಬುದು. ಆದರೆ ಇಂತಹ ಸಂದರ‍್ಬಗಳಲ್ಲಿ ದಿನಬಳಕೆಯಲ್ಲಿಲ್ಲದ ಹಳೆಗನ್ನಡ ಪದಗಳನ್ನು ಇಲ್ಲವೇ ಪದಕಾಂಡಗಳನ್ನು ಬಳಸುವ ಸಾದ್ಯತೆಯಿದೆಯೆಂಬುದನ್ನು ಈ ವಿದ್ವಾಂಸರು ಗಮನಿಸುವುದೇ ಇಲ್ಲ”**[೯೪] ಎನ್ನುತ್ತಾರೆ. ಈ ಮೂಲಕ ವಿನಾಕಾರಣ ಕನ್ನಡ ಪದಗಳ ಬದಲು ಸಂಸ್ಕೃತದ ಮೊರೆ ಹೋಗಬೇಕಿಲ್ಲ ಎನ್ನುತ್ತಾರೆ.

"ಸಂಸ್ಕೃತ ಪದಗಳ ಬದಲು ಹಳೆಗನ್ನಡ ಪದಗಳನ್ನು ಬಳಸುವುದರ ಮೂಲಕ ಪಾರಿಬಾಷಿಕ ಪದಗಳಲ್ಲಿ ಕನ್ನಡದ ಪದಸ್ವರೂಪವನ್ನು ಮತ್ತು ಸೊಗಡನ್ನು ಉಳಿಸಿಕೊಳ್ಳಲು ಸಾದ್ಯವಾಗುತ್ತದೆ. ಇದರಿಂದಾಗಿ ಅವನ್ನು ಕಲಿಯುವ ಮತ್ತು ನೆನಪಿನಲ್ಲಿರಿಸಿಕೊಳ್ಳುವ ಕೆಲಸವೂ ಸುಲಬವಾಗುತ್ತದೆ"[೯೫] ಎನ್ನುತ್ತಾರೆ. ಇದರೊಂದಿಗೆ ಸಂಸ್ಕೃತ ಪದಗಳ ಬದಲಿಗೆ ಹಳಗನ್ನಡ ಪದಗಳನ್ನು ಬಳಸಿದಲ್ಲಿ ಹೊಸಗನ್ನಡದಲ್ಲಿ ಪ್ರತ್ಯಯಗಳನ್ನು ಹೊಂದಿಸುವುದು ಕೂಡ ಸರಳವಾಗುತ್ತದೆ. ಅಕ್ಷರ ದೋಷಗಳ ಸಮಸ್ಯೆ ಕೂಡ ಉದ್ಭವಿಸುವುದಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ. ಜೊತೆಗೆ, ಹಳೆಗನ್ನಡ ಪದಗಳನ್ನು ಬಳಸಿದಲ್ಲಿ ಅವಶ್ಯಕತೆಗೆ ತಕ್ಕಂತೆ ಹೊಂದಾಣಿಕೆಗಳನ್ನು ಕೂಡ ಮಾಡಿಕೊಳ್ಳಬಹುದು ಎಂಬ ಅವರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎನಿಸುತ್ತದೆ.

ಅಲ್ಲದೇ, ಸಂಸ್ಕೃತ ಪದಗಳ ಬದಲು ಹಳಗನ್ನಡ ಮತ್ತು ಇಂಗ್ಲಿಶ್ ರೂಪಗಳನ್ನೇ ಬಳಸುವುದು ಉತ್ತಮ ದಾರಿ ಎನ್ನುವುದು ಅವರ ಅಭಿಪ್ರಾಯ. ಇಂಗ್ಲಿಷ್‌ನ ಸಾಲ್ಟ್ ಪದಕ್ಕೆ ಪರ್ಯಾಯವಾಗಿ ಕನ್ನಡದ ಉಪ್ಪು ಮತ್ತು ಸಂಸ್ಕೃತದ ಲವಣ ಎಂಬ ಎರಡು ಪದಗಳನ್ನು ಬಳಸಬಹುದು. ಆದರೆ, ವಿದ್ಯಾರ್ಥಿ ಭವಿಷ್ಯದಲ್ಲಿ ಉಪ್ಪು ಮತ್ತು ಲವಣ ಎಂಬ ಎರಡೂ ಪದಗಳ ಬದಲು ಸಾಲ್ಟ್ ಎಂಬ ಪದವನ್ನೇ ಕಲಿತಲ್ಲಿ ಹೆಚ್ಚಿನ ಅನುಕೂಲ ಎನ್ನುತ್ತಾರೆ.

"ಇಂಗ್ಲಿಶ್ ಪಾರಿಬಾಶಿಕ ಪದಗಳಿಗೆ ಸಮಾನ ಪದಗಳನ್ನು ಸಂಸ್ಕ್ರುತದಿಂದ ಎರವಲಾಗಿ ಪಡೆಯುವ ಬದಲು ಇಂಗ್ಲಿಶ್‌ನಿಂದಲೇ ಎರವಲು ಪಡೆಯುವುದು ಕನ್ನಡಕ್ಕೆ ಅನುಕೂಲ. ಉದಾಹರಣೆಗಾಗಿ ವಿಜ್ನಾನ ಬರಹಗಳಲ್ಲಿ ಎರವಲು ಬರುವ ಸಾಲ್ಟ್ ಪದದ ಬದಲು ಕನ್ನಡದಲ್ಲಿ ಉಪ್ಪು ಪದವನ್ನು ಬಳಸಿದಲ್ಲಿ ಇಂಗ್ಲಿಶ್‌ನ ಹಾಗೆ ಕನ್ನಡದಲ್ಲೂ ಗೊಂದಲವುಂಟಾಗುವ ಸಾದ್ಯತೆ ಇದೆಯಾದರೆ, ಅದಕ್ಕೆ ಬದಲು ಸಂಸ್ಕ್ರುತದ ಲವಣ ಪದವನ್ನು ಎರವಲಾಗಿ ಪಡೆದು ಬಳಸುವ ಬದಲು ಇಂಗ್ಲಿಶ್‌ನ ಸಾಲ್ಟ್ ಪದವನ್ನೇ ಬಳಸಬಹುದಲ್ಲವೇ?"[೯೬] ಎನ್ನುವುದು ಅವರ ಪ್ರಶ್ನೆಯಾಗಿದೆ. ಇದಕ್ಕೆ ಅವರು ಕಾರಣವನ್ನೂ ನೀಡುತ್ತಾರೆ. ಕನ್ನಡದ ಉಪ್ಪು ಅಥವಾ ಸಂಸ್ಕೃತದ ಲವಣಗಳೆರಡಕ್ಕಿಂತ ಸಾಲ್ಟ್ ಎಂಬ ಪದವೇ ಭವಿಷ್ಯದಲ್ಲಿ ಸಹಕಾರಿ ಎನ್ನುತ್ತಾರೆ. ಕನ್ನಡ ಅಥವಾ ಸಂಸ್ಕೃತ ಪದ ಬಳಕೆಗಿಂತ ಅಧ್ಯಯನದಲ್ಲಿ ಸಮಸ್ಯೆ ತಲೆದೋರದಂತೆ ಮುಂದುವರೆಯಬೇಕಿರುವುದರೆಡೆಗೆ ಅವರು ಒತ್ತು ನೀಡುತ್ತಾರೆ.

ಸಂಸ್ಕೃತ ಪದಗಳ ಬಳಕೆಯಿಂದ ಉಂಟಾಗುವ ಅರ್ಥ ಸಂದಿಗ್ಧತೆ ಕುರಿತು ಡಿ. ಎನ್. ಶಂಕರಬಟ್ಟರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: **"ಪಾರಿಬಾಶಿಕ ಪದಗಳು ಅರ‍್ತವನ್ನು ಕಟ್ಟುನಿಟ್ಟಾಗಿ ಸೂಚಿಸುವ ಅವಶ್ಯಕತೆಯಿದೆ. ವಿಜ್ನಾನ ಬರಹಗಳಿಗೆ ಬೇಕಾಗುವ ಇಂತಹ ಕಟ್ಟುನಿಟ್ಟಾದ ಅರ‍್ತವನ್ನು ಸಂಸ್ಕ್ರುತ ಪದ ಮತ್ತು ಪ್ರತ್ಯಯಗಳ ಬಳಕೆಯಿಂದ ಪಡೆಯಲು ಸಾದ್ಯ ಎಂಬುದಾಗಿ ಕನ್ನಡದ ವಿದ್ವಾಂಸರು ಹೇಳಿಕೊಳ್ಳುತ್ತಿದ್ದಾರೆ. ಆದರೆ, ವಸ್ತುಸ್ತಿತಿ ಇದಕ್ಕಿಂತ ತೀರ ಬೇರಾಗಿದೆ. ಅವರು ತಯಾರಿಸಿರುವ ಪಾರಿಬಾಶಿಕ ಪದಗಳನ್ನು ಸ್ವಲ್ಪ ಆಳವಾಗಿ ಪರಿಶೀಲಿಸಿದಾಗ ಇದು ಸ್ಪಶ್ಟವಾಗುತ್ತದೆ. ಎರಡು ಬೇರೆ ಬೇರೆ ಕಾರಣಗಳಿಂದಾಗಿ ಸಂಸ್ಕ್ರುತ ಪದ ಮತ್ತು ಪ್ರತ್ಯಯಗಳು ಕನ್ನಡದಲ್ಲಿ ಅರ‍್ತ ಸಂದಿಗ್ದತೆಯನ್ನು ತಂದುಹಾಕುತ್ತವೆ"**[೯೭] ಎನ್ನುತ್ತಾರೆ. ಇದಕ್ಕೆ ಕನ್ನಡ ಮತ್ತು ಸಂಸ್ಕೃತ ನುಡಿಗಳ ನಡುವೆ ವ್ಯಾಕರಣದ ಮೂಲ ತತ್ವಗಳಲ್ಲೇ ಹಲವು ವ್ಯತ್ಯಾಸಗಳಿರುವುದರಿಂದ ಕನ್ನಡ ವಾಕ್ಯಗಳಲ್ಲಿ ಬಳಕೆಯಾಗುವ ಸಂಸ್ಕೃತ ಪದಗಳು ಅರ್ಥಸಂದಿಗ್ಧತೆಯನ್ನು

ಉಂಟು ಮಾಡುತ್ತವೆ ಎನ್ನುವುದು ಅವರು ಕೊಡುವ ಮೊದಲ ಕಾರಣ. ಇದಕ್ಕೆ ರೆಸೊನೆನ್ಸ್, ಡೆವಲಪ್‌ಮೆಂಟ್, ಡಿಸ್ಟ್ರಿಬ್ಯೂಶನ್, ರೆಪ್ರೊಡಕ್ಷನ್ ಮೊದಲಾದ ನಾಮಪದಗಳನ್ನು ಉದಾಹರಿಸುತ್ತಾರೆ.

ಇನ್ನು ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಯಥೇಚ್ಛವಾಗಿ ಬಳಸುವುದರ ಕುರಿತು ಕೂಡ ಅವರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ವಿಜ್ಞಾನ ಬರಹಗಳನ್ನು ಜನಪ್ರಿಯಗೊಳಿಸುವ ಯೋಜನೆಯೊಂದರಲ್ಲಿ ಬಳಕೆಯಾಗಿರುವ ಪದಗಳನ್ನು ಉದಾಹರಿಸುತ್ತಾರೆ. **"'ಅಂತರ-ಬ್ರಹ್ಮಾಂಡೀಯ ಆಕಾಶದ ಚಿರಂತನ ರಾತ್ರಿ ದಟ್ಟೈಸಿರುವ ವಿಶಾಲ ಶೀತಲ ಸರ್ವವ್ಯಾಪೀ ಶೂನ್ಯದಲ್ಲಿ' ವಿಶ್ವದ ಒಂದೇ ಒಂದು ಪ್ರರೂಪೀ ನೆಲೆಯಿದೆ. ನಾರಾಯಣ ರಾವ್ ಅವರ ಇಂತಹದೇ ಬರಹ ತುಸು ಕಟಿಣವಾಗಿದೆಯೆಂಬುದಾಗಿ ಕನ್ನಡ ವಾರಪತ್ರಿಕೆಯೊಂದರ ಸಂಪಾದಕರು ಆಕ್ಶೇಪಿಸಿದಾಗ ಅವರು ಈ ಉತ್ತರ ಕೊಟ್ಟಿದ್ದರಂತೆ: 'ಕಲಗಚ್ಚು ಅತಿ ಸರಳ. ಕುಂಕುಮ ಕೇಸರಿ ಮಿಶ್ರಿತ ಕೆನೆ ಹಾಲು ಅತಿ ಕಠಿಣ. ನಿಮಗೆ ಕಲಗಚ್ಚು ಪ್ರಿಯವಾದರೆ ಧಾರಾಳವಾಗಿ ಅದನ್ನು ಕುಡಿಯಿರಿ'"**[೯೮] ಎಂದಿದ್ದರಂತೆ. ಮೇಲಿನ ಉದಾಹರಣೆ ಕನ್ನಡದಲ್ಲಿ ವಿಜ್ಞಾನ ಬರಹದ ಅವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ವಿಜ್ಞಾನವನ್ನು ಜನಪ್ರಿಯಗೊಳಿಸಬೇಕಾದ ಯೋಜನೆಯೊಂದರಲ್ಲಿ ಹೀಗೆ ಸಂಪೂರ್ಣ ಸಂಸ್ಕೃತಮಯ ಪದಗುಚ್ಛಗಳನ್ನು ಬಳಸುವುದರ ಮೂಲಕ ಕನ್ನಡವನ್ನು ಕಳೆದುಹಾಕುವ ಕೆಲಸ ನಡೆಯುತ್ತಿದೆ.

ಇಂತಹ ಇನ್ನೊಂದು ಉದಾಹರಣೆಯನ್ನೂ ಅವರು ನೀಡಿದ್ದಾರೆ. **"ಜನಪ್ರಿಯ ಎನ್ನುವುದಕ್ಕೆ ಎರಡು ಅರ್ತಗಳಿವೆ. ವಿಜಯ ಕರ್ನಾಟಕದಲ್ಲಿ ಬರುತ್ತಿದ್ದ ಶತಾವದಾನಿ ಆರ್. ಗಣೇಶ್ ಅವರ ಬರಹಗಳನ್ನು ನನಗೆ ಪರಿಚಯವಿದ್ದವರೊಬ್ಬರು ಬಹಳವಾಗಿ ಮೆಚ್ಚಿಕೊಂಡಿದ್ದರು. ಆದರೆ ನಿಜಕ್ಕೂ ಆ ಬರಹಗಳಲ್ಲಿ ಏನು ಹೇಳಲಾಗಿದೆಯೆಂಬುದು ಅವರಿಗೆ ಸ್ವಲ್ಪವೂ ಅರ್ತವಾಗುತ್ತಿರಲಿಲ್ಲ. ಸಂಸ್ಕೃತ ಮಂತ್ರಗಳು ಹೇಗೆ ಸ್ವಲ್ಪವೂ ಅರ್ತವಾಗದಿದ್ದರೂ ಜನರ ಮೆಚ್ಚುಗೆಯನ್ನು ಪಡೆಯುತ್ತವೋ ಅದೇ ರೀತಿಯಲ್ಲಿ ಈ ಬರಹಗಳೂ ಅವರ ಮೆಚ್ಚುಗೆಯನ್ನು ಪಡೆದಿದ್ದವು"**[೯೯] ಎನ್ನುತ್ತಾರೆ. ಈ ಮೂಲಕ ಕನ್ನಡದ ಅಂಕಣ ಬರಹಗಳಲ್ಲಿ ಕೂಡ ಸಂಸ್ಕೃತದ ಪ್ರಾಬಲ್ಯ ಹೇಗಿದೆ? ಎನ್ನುವುದನ್ನು ತೋರಿಸಿಕೊಡುತ್ತಾರೆ.

ಕನ್ನಡ ಭಾಷಾ ವಿಜ್ಞಾನದಲ್ಲಿ ಕೂಡ ಸಂಸ್ಕೃತದ ಪ್ರಾಬಲ್ಯ ಇದೆ ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. **"ಕನ್ನಡದಲ್ಲಿ ಬಾಶಾವಿಜ್ನಾನದ ಪಾರಿಬಾಶಿಕ ಪದಗಳನ್ನು ತಯಾರಿಸಿದವರು (ಕೆಂಪೇಗವ್ಡ ೧೯೭೬, ಆಚಾರ್ಯ ೨೦೦೩) ನೂರರಲ್ಲಿ ೯೦ಕ್ಕಿಂತಲೂ ಹೆಚ್ಚು ಪದಗಳ ತಯಾರಿಕೆಯಲ್ಲಿ ಸಂಸ್ಕ್ರುತ ಪದಗಳನ್ನು ಮತ್ತು ಪ್ರತ್ಯಯಗಳನ್ನು ಬಳಸಿದ್ದಾರೆ! ಇವುಗಳಲ್ಲಿ ಹೆಚ್ಚಿನವನ್ನೂ ಇವರು ಸ್ವಲ್ಪವೂ ಬದಲಾಯಿಸದೆ ಸಂಸ್ಕ್ರುತದಲ್ಲಿರುವ ಹಾಗೆಯೇ ಉಳಿಸಿಕೊಂಡಿದ್ದಾರೆ ಮತ್ತು ಅವುಗಳ ರಚನೆಯಲ್ಲಿ ಸಂಸ್ಕ್ರುತದವೇ ಆದ ಸೇರಿಕೆಯ (ಸಂದಿಯ) ನಿಯಮಗಳನ್ನು ಬಳಸಿದ್ದಾರೆ"**[೧೦೦] ಎನ್ನುತ್ತಾರೆ. ಆದರೆ, ತಮಿಳಿನಲ್ಲಿ ಭಾಷಾ ವಿಜ್ಞಾನದ ಪರಿಭಾಷೆಗಳನ್ನು ರಚಿಸಿರುವ ರಂಗನ್ ಮತ್ತು ಚಂದ್ರಶೇಕರನ್ ಅವರು ಶೇ.೫ಕ್ಕಿಂತ ಕಡಿಮೆ ಸಂಸ್ಕೃತ ಪದಗಳನ್ನು ಬಳಸಿದ್ದಾರೆ ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದವಾಗಿದೆ. ಅಲ್ಲದೇ ತಮಿಳಿನಲ್ಲಿ ಸಾಧ್ಯವಾಗಿರುವುದು ಕನ್ನಡದಲ್ಲಿ ಏಕೆ ಸಾಧ್ಯವಿಲ್ಲ ಎನ್ನುವುದು ಅವರ ಪ್ರಶ್ನೆಯಾಗಿದೆ. ಕನ್ನಡದಲ್ಲಿ ಇಂತಹ ಪ್ರಯತ್ನಗಳು ನಡೆದಿಲ್ಲ ಎನ್ನುವುದಕ್ಕೆ ಕನ್ನಡದಲ್ಲಿರುವ ಅಪಾರ ಭಾಷಾ ವಿಜ್ಞಾನ ಸಂಬಂಧಿ ಪುಸ್ತಕಗಳ ರಾಶಿ ಸಾಕ್ಷಿಯಾಗಿದೆ.

'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯ ಕಡೆಯ ಭಾಗದಲ್ಲಿ ಕನ್ನಡದಲ್ಲಿರುವ ಸಂಸ್ಕೃತ ಪದಗಳನ್ನು ತ್ಯಜಿಸಲು ಅವರು ಲೇಖಕರಿಗೆ ಕೂಡ ಕರೆನೀಡಿದ್ದಾರೆ. **"ತಮ್ಮ ಸ್ವಂತ ಅನುಬವದ ಮೂಲಕ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಆಯಾಮವನ್ನು ಉಂಟು ಮಾಡಿರುವ ಬಂಡಾಯ ಬರಹಗಾರರು ಕನ್ನಡ ಬರಹಕ್ಕೆ ಅವಶ್ಯವಿರುವ ಈ ಬದಲಾವಣೆಗಳನ್ನು ತರುವಲ್ಲಿ ಮುಂದಾಳುಗಳಾಬೇಕೆಂದು ನನಗೆ ಅನಿಸುತ್ತದೆ"**[೧೦೧] ಎನ್ನುತ್ತಾರೆ. ಅಲ್ಲದೇ, ಮೇಲ್ವರ್ಗದಲ್ಲಿ ಹುಟ್ಟಿರುವ ತಮಗಿಂತ ಹೆಚ್ಚು ಸ್ಪಷ್ಟವಾಗಿ ಮತ್ತು ಶಕ್ತವಾಗಿ ತಮ್ಮ ಕನ್ನಡ ಬರಹವನ್ನು ಸರಿಪಡಿಸುವ ಕೆಲಸವನ್ನು ಬಂಡಾಯದ ಬರಹಗಾರರು ಮಾಡಬಲ್ಲರು ಎಂದು ಅಭಿಪ್ರಾಯಪಡುತ್ತಾರೆ. ಆದರೆ, ಇವರ ಕರೆಗೆ ಕನ್ನಡ ಸಾಹಿತ್ಯ, ಚಳವಳಿಗಳಲ್ಲಿ ನಿರತರಾಗಿರುವವರು ಬೆಂಬಲ ನೀಡಿಲ್ಲ.

ಸಾಮಾಜಿಕವಾಗಿ ಕ್ರಾಂತಿಯಾಗಬೇಕು ಎಂದು ಅಭಿಪ್ರಾಯಪಡುವ, ಹೋರಾಟಗಳನ್ನು ಸಂಘಟಿಸುವ, ಬರಹ ಮತ್ತು ಭಾಷಣಗಳ ಮೂಲಕ ಪ್ರಚಾರ ಮಾಡುವ ಹೋರಾಟಗಾರರು, ಲೇಖಕರು, ಚಳವಳಿಗಾರರು ಕೂಡ ಭಾಷಿಕವಾಗಿ ಬದಲಾವಣೆಗೆ ಒಪ್ಪುತ್ತಿಲ್ಲ. ಋಕಾರವನ್ನು ಕನ್ನಡ ಪಠ್ಯಪುಸ್ತಕಗಳಿಂದ ಬಿಡಬೇಕು ಎಂಬ ವಾದ ಆರಂಭವಾದ ಸಂದರ್ಭದಲ್ಲಿ ಯು. ಆರ್. ಅನಂತಮೂರ್ತಿ, ಕೆ. ವಿ. ತಿರುಮಲೇಶ್ ಮೊದಲಾದ ಅನೇಕ ಕನ್ನಡ ವಿದ್ವಾಂಸರು ಕೂಡ ತಕರಾರು ತೆಗೆದರು. ಈ ಮೂಲಕ ಕನ್ನಡ ಲಿಪಿ ಸುಧಾರಣೆಯ ಸಾಧ್ಯತೆಗಳಿಗೆ ಸವಾಲಾಗಿ ಮಾರ್ಪಟ್ಟರು. (ಈ ಕುರಿತು ಸವಾಲುಗಳು ಮತ್ತು ಸಾಧ್ಯತೆಗಳು ಅಧ್ಯಾಯದಲ್ಲಿ ಸಮಗ್ರವಾಗಿ ಚರ್ಚಿಸಲಾಗಿದೆ.)

ಕನ್ನಡದಲ್ಲಿ ಸಂಸ್ಕೃತದ ಪದಗಳನ್ನು ಯಥಾವತ್ತಾಗಿ ಬಳಸಲಾಗುತ್ತಿದೆ. ಇದರಿಂದ ಭಾಷೆಯ ಬಳಕೆಯಲ್ಲೇ ಸಾಮಾಜಿಕ ಸ್ತರಗಳು ಉಂಟಾಗಿವೆ. ಈ ಪರಿಣಾಮದಿಂದ ಸಾಮಾಜಿಕ ಅಸಮಾನತೆಯ ಪ್ರಶ್ನೆಗಳ ಮೂಲಕ ಡಿ.ಎನ್.ಶಂಕರ ಬಟ್ಟರ ಈ ಚರ್ಚೆಗಳು, ಭಾಷಿಕವಾಗಿ, ಕನ್ನಡಕ್ಕಿರುವ ಅಭಿವ್ಯಕ್ತಿ ಸಾಧ್ಯತೆಯ ಶೋಧಗಳು ಮತ್ತು ಸವಾಲುಗಳಿಗೆ ಮುಖಾಮುಖಿಯಾಗುತ್ತಿದ್ದಾರೆ.

ಭಾಷಿಕ ಬಿಡುಗಡೆಯ ಚರ್ಚೆಯ ಸಂದರ್ಭದಲ್ಲಿ ಸಂಸ್ಕೃತದ ಯಜಮಾನಿಕೆಯಿಂದ ಬಿಡಿಸಿಕೊಳ್ಳಬೇಕಾದ ಈ ಬಗೆಯ ಪ್ರಯತ್ನಗಳನ್ನು ಮಂಡಿಸಿದ ಕೆಲವೇ ಕೆಲವರಲ್ಲಿ ಶಂಕರ ಬಟ್ಟರು ಒಬ್ಬರು. ನಿಜವಾದ ಬಿಡುಗಡೆಯ ಸಾಧ್ಯತೆಗಳಲ್ಲಿ ಭಾಷಿಕ ಬಿಡುಗಡೆಯೂ ಅವಶ್ಯಕವಾಗಿರುವುದರಿಂದ ಹಾಗೂ ನಮ್ಮ ಎಲ್ಲ ಲೋಕ ಗ್ರಹಿಕೆ, ಚಿಂತನಕ್ರಮಗಳ ಮೇಲೆ ಹೆಚ್ಚಿನ ಪ್ರಭಾವ ಬೀರಬಲ್ಲ ಭಾಷಿಕ ಚಿಂತನೆಗಳಿಂದ ಬಿಡುಗಡೆಯ ಚಿಂತನೆಗಳು ಹೆಚ್ಚು ಪ್ರಖರಗೊಳ್ಳಬಲ್ಲವು. ಈ ನಿಟ್ಟಿನಲ್ಲಿ ಅವರ ಕೃತಿಗಳು ಭಾಷಿಕ ಬಿಡುಗಡೆಯ ಚರ್ಚೆಗಳಲ್ಲಿ ಮಹತ್ವದ ವಾಗ್ವಾದಗಳನ್ನು ಹುಟ್ಟುಹಾಕಿವೆ.

೫.೧೨ ಭಾಷಿಕ ಬಿಡುಗಡೆಯ ಸಾಧ್ಯತೆಗಳು

ಭಾಷೆಯು ಮಾನವರ ಲೋಕಗ್ರಹಿಕೆಯನ್ನು ಮಾತು ಹಾಗೂ ಬರಹದ ರೂಪಗಳೆರಡರಲ್ಲೂ ಅಭಿವ್ಯಕ್ತಿಸುವ ಮಾಧ್ಯಮ. ಲಿಪಿರಹಿತ ಭಾಷೆಗಳಿಗೆ ಬರಹ ರೂಪ ಇಲ್ಲದಿದ್ದರೂ, ಲಿಪಿಸಹಿತ

ಭಾಷೆಯಲ್ಲಿ ಅಭಿವ್ಯಕ್ತಿಸುವ ಸಾಧ್ಯತೆ ಇದೆ. ಭಾಷೆಯ ಪ್ರಾಥಮಿಕ ಅಗತ್ಯವಿರುವುದು ಸಂವಹನಕ್ಕಾಗಿ. ಆದರೆ, ಅದು ಅಷ್ಟಕ್ಕೆ ಸೀಮಿತವಾಗಿಲ್ಲ. ಭಾಷೆಯು ಲೋಕಗ್ರಹಿಕೆಯ ಅಭಿವ್ಯಕ್ತಿಯಾಗಿರುವಂತೆಯೆ, ಲೋಕಗ್ರಹಿಕೆಯ ನಿಯಂತ್ರಣವಾಗುವುದೂ ಸಾಧ್ಯ. ಇದು ಜ್ಞಾನದ ರಾಜಕಾರಣದ ಸ್ಥಿತಿ. ಇಂತಹ ಸಂದರ್ಭದಲ್ಲಿ ಭಾಷೆಯ ಬಗೆಗಿನ ವಾಗ್ವಾದಗಳು ಅವಶ್ಯಕ. ಇಂತಹ ಚರ್ಚೆಗಳನ್ನು ಡಿ. ಎನ್. ಶಂಕರಬಟ್ಟರು ಜೀವಂತವಾಗಿಟ್ಟಿದ್ದಾರೆ.

ಭಾಷಿಕ ಬಿಡುಗಡೆಯ ಚರ್ಚೆಯಲ್ಲಿ ಗೂಗಿ ವಾ ಥಿಯಾಂಗೊ ಮಂಡಿಸಿದ 'ಪ್ರಜ್ಞೆಯ ಬಿಡುಗಡೆ'ಯ ಚಿಂತನೆಗಳು ಮುಂದುವರೆಯುತ್ತಿವೆ. ಗೂಗಿ ವಾ ಥಿಯಾಂಗೊ ತನ್ನ ಹಳೆಯ ಹೆಸರಾದ 'ಎನ್ ಗೂಗಿ' ಎಂಬ ತನ್ನ ಹೆಸರನ್ನು ಬದಲಿಸಿಕೊಂಡು ವಸಾಹತುಶಾಹಿ ಭಾಷೆಯಿಂದ ಬಿಡುಗಡೆ ಹೊಂದಲು ಗಿಕಯು ಭಾಷೆಯನ್ನು ಬಳಸಲಾರಂಭಿಸಿದ್ದು, ಈ ದೃಷ್ಟಿಯಿಂದ ಕ್ರಾಂತಿಕಾರಕ ಕ್ರಮವಾಗಿದೆ.

ಪ್ರಸ್ತುತ ಕನ್ನಡದಲ್ಲಿ ಡಿ. ಎನ್. ಶಂಕರ ಭಟ್ ಅವರು ಕೂಡ ಡಿ. ಎನ್. ಶಂಕರ ಬಟ್ ಎಂದು ತಮ್ಮ ಹೆಸರನ್ನು ಬದಲಿಸಿಕೊಂಡಿದ್ದಾರೆ. ಈ ಮೂಲಕ, ಕನ್ನಡ ಭಾಷೆಯ ಬಿಡುಗಡೆಯ ಕುರಿತು ಸಂಶೋಧಿಸುತ್ತಿದ್ದಾರೆ.

ಡಿ. ಎನ್. ಶಂಕರ ಬಟ್‌ರವರ ಕೆಲವು ಪ್ರಮೇಯಗಳೆಂದರೆ:

೧. ಕನ್ನಡ ಭಾಷೆಗೆ ಸಂಸ್ಕೃತ ಮೂಲವಲ್ಲ

೨. ಆ ಕಾರಣದಿಂದ ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು

೩. ಸಂಸ್ಕೃತದ ಅನವಶ್ಯಕ ಹೇರಿಕೆ ಕನ್ನಡದ ಮೇಲಿದೆ

೪. ಕನ್ನಡದ ಕಲಿಕೆಗೆ ಸಂಸ್ಕೃತವೆ ಅಡ್ಡಿ

೫. ಸಂಸ್ಕೃತ ಪದಗಳ ಬದಲು ಕನ್ನಡದ ಪದಗಳ ಸೃಷ್ಟಿ ಸಾಧ್ಯ

೬. ಸಂಸ್ಕೃತದ ಮಹಾಪ್ರಾಣಾಕ್ಷರಗಳು ಬೇಕಿಲ್ಲ

ಈ ಪ್ರಮೇಯಗಳನ್ನು ಮಂಡಿಸುತ್ತಿರುವಾಗ ಶಂಕರ ಬಟ್ ಅವರು ಭಾಷಿಕ ಬಿಡುಗಡೆಯ ಸಾಧ್ಯತೆಗಳನ್ನು ಶೋಧಿಸುತ್ತಿದ್ದಾರೆ.

ಅವರ ಪ್ರಕಾರ: "ಅವಶ್ಯವಿದ್ದರೂ ಇಲ್ಲದಿದ್ದರೂ ಕನ್ನಡ ಬರಹಗಳಲ್ಲಿ ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವಂತಹ ಪ್ರವೃತ್ತಿ ನಮ್ಮ ಬರಹಗಾರರಲ್ಲಿ ಕಾಣಿಸುತ್ತಿದೆ. ಇದಲ್ಲದೆ ಈ ಪದಗಳನ್ನು ಆದಷ್ಟು ಮಟ್ಟಿಗೆ ಸಂಸ್ಕೃತದಲ್ಲಿರುವ ಹಾಗೆಯೇ ಉಳಿಸಿಕೊಳ್ಳುವ ಪ್ರಯತ್ನವೂ ನಡೆಯುತ್ತಿದೆ. ಆದರೆ, ಸಾಮಾನ್ಯ ಕನ್ನಡಿಗರ ಮಾತಿನಲ್ಲಿ, ಅದರಲ್ಲೂ ಕೆಳವರ್ಗದ ಜನರ ಮಾತಿನಲ್ಲಿ, ಸಂಸ್ಕೃತ ಪದಗಳು ಜಾಸ್ತಿ ಬಳಕೆಯಾಗುವುದಿಲ್ಲ ಮತ್ತು ಬಳಕೆಯಾಗುವವುಗಳೂ ಹಲವು ರೀತಿಯಲ್ಲಿ ಬದಲಾಗಿರುತ್ತವೆ."

ಶಂಕರ ಬಟ್ಟರು ಈ ವಿಚಾರಗಳ ಮೂಲಕ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ತಿಳಿವಳಿಕೆಯ ಮಿತಿಗಳನ್ನು ಮಂಡಿಸುತ್ತಿದ್ದಾರೆ. ಅಂತೆಯೇ, ಅವರು ಭಾಷಿಕ ಕಾರಣದಿಂದಾಗಿ ಸಾಮಾಜಿಕ ಸ್ತರದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಯ ಬಳಕೆಯಲ್ಲಿರುವ ವ್ಯತ್ಯಸ್ತರೂಪಗಳಲ್ಲಿ ಕನ್ನಡವೇ ಪ್ರಧಾನವಾಗಿರುವುದನ್ನು ಗುರುತಿಸುತ್ತಾರೆ.

ಭಾಷೆಯು ಪ್ರಜ್ಞೆ ಹಾಗೂ ಲೋಕಗ್ರಹಿಕೆಗಳನ್ನು ನಿಯಂತ್ರಿಸುವುದರಿಂದಾಗಿ ಭಾಷಿಕ ಬಿಡುಗಡೆಯು ಅಗತ್ಯವಾಗುತ್ತದೆ. ಸಂಸ್ಕೃತಿ ವ್ಯಕ್ತವಾಗುವ ಒಂದು ರೂಪ ಭಾಷೆಯಾಗಿರುವಂತೆಯೆ, ಬೌದ್ಧಿಕ ಚಟುವಟಿಕೆಗಳಲ್ಲೊಂದು. ಆಧುನಿಕ ತಂತ್ರಜ್ಞಾನ, ವಿಜ್ಞಾನ, ಶಿಕ್ಷಣಗಳಲ್ಲಿ ಭಾಷೆಯ ಅಗತ್ಯವು ಆತ್ಯಂತಿಕ ಪ್ರಮಾಣದ್ದು. ಜ್ಞಾನದ ಪ್ರಜಾಪ್ರಭುತ್ವೀಕರಣದಲ್ಲಿ ಭಾಷೆಯು ವಹಿಸುವ ಪಾತ್ರವು ಗಮನಾರ್ಹ ಸಂಗತಿಯಾಗಿದೆ.

ಆಧುನಿಕೋತ್ತರ ಸಂದರ್ಭದಲ್ಲಿಯೂ ಭಾಷೆಯ ಅವಶ್ಯಕತೆಯು ತೀರಾ ಅನಿವಾರ್ಯವಾಗಿದೆ. ಈ ಬಗೆಯ ಒತ್ತಡಗಳಲ್ಲಿ, ಭಾಷೆಯ ಬಳಕೆಯನ್ನು ನಿಯಂತ್ರಿಸುತ್ತಿರುವ ಕ್ರಮಗಳು ಸಾಮಾಜಿಕ ಕಾರಣಗಳಿಂದ ಉಂಟಾಗುತ್ತವೆ. ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಲಾಗದ ಶೂದ್ರಾತಿಶೂದ್ರರ ಅಭಿವ್ಯಕ್ತಿಯು ಈ ಕಾರಣದಿಂದ ಕುಂಠಿತವಾಗುತ್ತಿದೆ.

ಡಿ. ಎನ್. ಶಂಕರ ಬಟ್ ಅವರ ಪ್ರಕಾರ, ನಾವೀಗ ಬರೆಯುತ್ತಿರುವ ಹಾಗೂ ಮಾತನಾಡುತ್ತಿರುವ ಕನ್ನಡ ರೂಪಗಳಿಗೆ ವ್ಯತ್ಯಾಸವಿದೆ. ಮಹಾಪ್ರಾಣಾಕ್ಷರಗಳಾದ ಖ, ಛ, ಠ, ಥ, ಫ ಮತ್ತು ಘ, ಝ, ಢ, ಧ, ಭ ಗಳು ಸಂಸ್ಕೃತದಿಂದ ಎರವಲಾಗಿ ಪಡೆದ ಅಕ್ಷರಗಳು. ಉದಾಹರಣೆಗೆ: ಸುಖ, ವ್ಯಥೆ, ಪರಿಚ್ಛೇದ, ವಿಘ್ನೇಶ್ವರ, ಪ್ರಧಾನ, ವಿಫಲ, ಭಯಂಕರ ಮೊದಲಾದ ಪದಗಳಲ್ಲಿ ಮಾತ್ರ ಬಳಕೆಯಾಗುವುದರಿಂದ ಕನ್ನಡ ಪದಗಳಲ್ಲಿ ಬರುವುದಿಲ್ಲ. ಇವುಗಳನ್ನು ಅಲ್ಪ ಪ್ರಾಣಾಕ್ಷರಗಳಾಗಿಯೆ (ಕ, ಚ, ಟ, ತ, ಪ ಮತ್ತು ಗ, ಜ, ಡ, ದ, ಬ – ಸುಕ, ವೈತೆ, ಪರಿಚ್ಚೇದ, ವಿಗ್ನೇಶ್ವರ, ಪ್ರದಾನ, ವಿಪಲ, ಬಯಂಕರ) ಉಚ್ಚರಿಸಲಾಗುತ್ತದೆ.[೧೦೩]

ಕನ್ನಡ ವರ್ಣ ಮಾಲೆ

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ ಸ್ವರಗಳು = ೧೩

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ	ವರ್ಗೀಯ ವ್ಯಂಜನಗಳು	=	೨೫
ಯ ರ ಲ ವ ಶ ಷ ಸ ಹ ಳ	ಅವರ್ಗೀಯ ವ್ಯಂಜನಗಳು	=	೦೯
	ಒಟ್ಟು		೪೭
ಋ, ಐ, ಔ, ಖ, ಘ, ಙ, ಛ, ಝ, ಞ, ಠ, ಢ, ಥ, ಧ, ಫ, ಭ, ಷ–			೧೬
	ಒಟ್ಟು		೩೧

ಈಗ ಬಳಸುತ್ತಿರುವ ಕನ್ನಡ ವರ್ಣಮಾಲೆಯಲ್ಲಿ ಹೆಚ್ಚುವರಿಯಾಗಿ ಬಳಕೆಯಾಗುತ್ತಿರುವ ಮೂರು ಸ್ವರಗಳು, ೧೨ ವರ್ಗೀಯ ವ್ಯಂಜನಗಳು ಹಾಗೂ ಷ ಅವರ್ಗೀಯ ವ್ಯಂಜನವನ್ನು ತೆಗೆದರೆ ಉಳಿದ ೩೧ ಅಕ್ಷರಗಳು ಕನ್ನಡದ ಬರಹಕ್ಕೆ ಸಾಕು ಎಂಬುದು ಶಂಕರ ಬಟ್ಟರ ಅಭಿಪ್ರಾಯವಾಗಿದೆ.

ಇಂಗ್ಲಿಷ್‌ನಿಂದ ಪದಗಳನ್ನು ಅನುವಾದ ಮಾಡುವಾಗ ಕನ್ನಡದ ಪದಗಳ ಬದಲಿಗೆ ಸಂಸ್ಕೃತ ಪದಗಳನ್ನು ಸೃಷ್ಟಿಸಲಾಗುತ್ತಿದೆ. ಆದರೆ, ಅದರ ಬದಲು ಕನ್ನಡದ್ದೇ ಸಾಧಿತರೂಪಗಳನ್ನು ಪಡೆಯಬಹುದು ಅಥವಾ ಹಳಗನ್ನಡದ ಪದಗಳನ್ನು ಬಳಸಬಹುದು ಎಂಬ ಅಭಿಪ್ರಾಯವನ್ನು ಶಂಕರ ಬಟ್‌ರವರು ವ್ಯಕ್ತಪಡಿಸುತ್ತಾರೆ.

ಅವರ ಪ್ರಕಾರ ಈ ಎಲ್ಲ ಬಗೆಗಳೂ ಸಂಸ್ಕೃತದ ಅಂಧಾನುಕರಣೆಯಿಂದ ನಡೆಯುತ್ತಿದೆ. ಆದ್ದರಿಂದ ಕನ್ನಡದಲ್ಲಿ ಲಿಪಿಕ್ರಾಂತಿಯಾಗಬೇಕೆಂದು 'ಹೊಸ ಬರಹ'ದ ಪ್ರಯತ್ನ ನಡೆಸಿದ್ದಾರೆ. ಈ ಪ್ರಯೋಗದಲ್ಲಿ ಋ, ಐ, ಔ, ಖ, ಛ, ಠ, ಥ, ಫ, ಘ, ಝ, ಢ, ಧ, ಭ, ಷ ಹಾಗೂ ಅನುಸ್ವಾರ ವಿಸರ್ಗಗಳಿಲ್ಲದ ಕನ್ನಡವನ್ನು ಬರೆಯುವ ಪ್ರಯೋಗವಿದೆ.[೧೦೪]

ಸಂಸ್ಕೃತದಿಂದ ಬಿಡುಗಡೆ ಹೊಂದುವುದರ ಜೊತೆಗೆ ಇಂಗ್ಲಿಷ್ ಪದಗಳಿಗೂ ಕನ್ನಡದ ರೂಪಗಳನ್ನೆ ಬಳಸುವ ಹಾಗೂ ಪ್ರಾಚೀನ ಕನ್ನಡ ರೂಪಗಳನ್ನು ಸಂಸ್ಕೃತದ ಬದಲು ಬಳಸುವ ಪ್ರಯತ್ನವನ್ನು ಕೂಡ ಶಂಕರ ಬಟ್‌ರವರು ನಡೆಸುತ್ತಿದ್ದಾರೆ.[೧೦೫]

ಭಾಷಿಕ ಬಿಡುಗಡೆಯ ಸಾಧ್ಯತೆಗಳ ಶೋಧವು ಎಲ್ಲ ಬಗೆಯ ಬಿಡುಗಡೆಯ ಸಾಧ್ಯತೆಗಳಿಗೂ ಪೋಷಕ ಹಾಗೂ ಪ್ರೇರಕವಾಗಬಲ್ಲದು. ಈ ಬಗೆಯ ಪ್ರಯತ್ನವು ಸಾಮಾಜಿಕ ತಾರತಮ್ಯಗಳ ನಿವಾರಣೆ ಮಾಡುತ್ತದೆ ಮತ್ತು ಭಾಷೆಯ ಕಲಿಕೆಯನ್ನು ಸರಳಗೊಳಿಸುತ್ತದೆ. ಶಂಕರ ಬಟ್‌ರವರು ಹೇಳುವಂತೆ ಸಂಸ್ಕೃತ ಪದಗಳನ್ನು ಬಿಡುವುದರಿಂದ ಅಕ್ಷರಗಳು ಕಡಿಮೆಯಾಗುವ ಮೂಲಕ ಭಾಷೆಯನ್ನು ಕಲಿಯುವುದು ಸುಲಭವಾಗುತ್ತದೆ. ಇದರೊಂದಿಗೆ ಬರಹದ ರೂಪಕ್ಕೂ ಆಡುಮಾತಿನ ರೂಪಕ್ಕೂ ಇರುವ ಅಂತರವನ್ನು ಇಲ್ಲವಾಗಿಸುವುದು ಸಾಧ್ಯವಾಗುತ್ತದೆ.

ಪ್ರಚಲಿತ ರೂಪ	ಹೊಸ ಬರಹ
ಉದಾ: ಸಂಸ್ಕೃತ	ಸಂಸ್ಕ್ರುತ
ವಿಷಯ	ವಿಶಯ
ಕೆಳವರ್ಗ	ಕೆಳವರ‍್ಗ
ಮುಖ್ಯ	ಮುಕ್ಯ[೧೦೬]

ಈ ಬಗೆಯ ಪ್ರಯತ್ನವೊಂದು ಆರಂಭವಾಗಿರುವುದು ಕನ್ನಡದಲ್ಲಿ ಭಾಷಿಕ ಬಿಡುಗಡೆಯ ಚಿಂತನೆಗಳಿಗೆ ಪೂರಕವಾಗಿದೆ.

'ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು' ಎಂಬ ಕೃತಿಯಲ್ಲಿ ಡಿ. ಎನ್. ಶಂಕರಬಟ್ಟರು ಸಂಸ್ಕೃತದಿಂದ ಹೊರತಾಗಿಯೂ ಕನ್ನಡದ ಸಾಧ್ಯತೆಗಳ ಬಗೆಗೆ ಹೀಗೆ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ: **"ನಮಗೆ ಬೇಕಾಗಿರುವ ಎಂತಹ ಪದಗಳನ್ನು ಬೇಕಿದ್ದರೂ ಸಂಸ್ಕ್ರುತದ ಸಹಾಯವಿಲ್ಲದೆ ಕನ್ನಡದಲ್ಲೇನೇ ಉಂಟುಮಾಡಬಲ್ಲೆವು. ಅಂತಹ ಕಸುವು ಕನ್ನಡಕ್ಕಿದೆ. ಹಾಗೆ ಉಂಟುಮಾಡಲು ಬೇಕಾಗುವ ಸಲಕರಣೆಗಳೆಲ್ಲವೂ ಕನ್ನಡದಲ್ಲಿವೆ. ಇದನ್ನು ತೋರಿಸಿ ಕೊಡುವುದಕ್ಕಾಗಿಯೇ ನಾನು ಈ ಪದಕೋಶವನ್ನು ತಯಾರಿಸಲು ಹೊರಟಿದ್ದೇನೆ"**[೧೦೭] ಎನ್ನುತ್ತಾರೆ. ಈ ಕೃತಿಯ ಮೂಲಕ ಕನ್ನಡ ಭಾಷೆಯ ಸಾಧ್ಯತೆಗಳನ್ನು ಮಂಡಿಸುತ್ತಿದ್ದಾರೆ. ಉದಾ: ಹೆಸರುಪದ(ನಾಮಪದ), ಪರಿಚೆಪದ(ಗುಣಪದ), ಎಸಕಪದ(ಕ್ರಿಯಾಪದ), ಒಲವು(ಆಯ್ಕೆ), ಎದುರುಪದ(ವಿರುದ್ಧಪದ), ಹುರುಳು(ಅರ್ಥ).

'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಹೊತ್ತಿಗೆಯಲ್ಲಿ ಡಿ. ಎನ್. ಶಂಕರ ಬಟ್‌ರವರು ಕನ್ನಡದಲ್ಲಿ ಲಿಪಿಕ್ರಾಂತಿ, ಪದಕ್ರಾಂತಿಗಳ ಅವಶ್ಯಕತೆ ಇರುವುದನ್ನು ಗುರುತಿಸುತ್ತಾರೆ. ಇಂದಿಗೂ ಅನೇಕರಿಗಿರುವ ಸಂಸ್ಕೃತದ ಮೇಲಿನ ವ್ಯಾಮೋಹದಿಂದ ಬಿಡುಗಡೆ ಹೊಂದಬೇಕಾದ ಅಗತ್ಯವನ್ನು ಪ್ರತಿಪಾದಿಸುತ್ತಾರೆ.

ಲಿಪಿಕ್ರಾಂತಿ, ಪದಕ್ರಾಂತಿಗಳಿಗೆ ಉದಾಹರಣೆ:

ಬಹುಶಃ – ಬಹುಶಹ

ದುಃಖ – ದುಕ್ಕ

ವಿಶೇಷ – ವಿಶೇಶ

ಮುಖ್ಯ – ಮುಕ್ಯ

ಇಚ್ಛೆ – ಇಚ್ಚೆ

ಪಾಠ – ಪಾಟ

ನಿಷ್ಠೆ – ನಿಶ್ಟೆ ಇತ್ಯಾದಿ.

ಇಂತಹ ಪ್ರಯತ್ನಕ್ಕೆ ಕನ್ನಡದಲ್ಲಿ ಪರ ವಿರೋಧದ ಚರ್ಚೆಗಳು ನಡೆಯುತ್ತಿವೆ. ಡಿ. ಎನ್. ಶಂಕರ ಬಟ್ಟರ ಆಲೋಚನೆಗಳಿಗೆ ಪೂರಕವಾಗಿ ಇತ್ತೀಚೆಗೆ ಹಿರಿಯ ವಿದ್ವಾಂಸರನ್ನೂ ಒಳಗೊಂಡು ಯುವಕರೂ ಕೆಲಸ ಮಾಡುತ್ತಿದ್ದಾರೆ. ಉದಾಹರಣೆಗೆ ಕೆ. ವಿ. ನಾರಾಯಣ ಅವರ ಇತ್ತೀಚಿನ ಕೃತಿಯಲ್ಲಿ ಇಂತಹ ಪ್ರಯತ್ನವಿದೆ. 'ಕನ್ನಡದ ಆಡುನುಡಿಯ ಸೊಲ್ಲರಿಮೆ: ೧ – ಕನ್ನಡದ ಉಲಿಕಂತೆಗಳು' ಎಂಬ ಕೃತಿಯಲ್ಲಿ "ಎಲ್ಲಕ್ಕಿಂತ ಹೆಚ್ಚಾಗಿ ಈ ಬರವಣಿಗೆಯಲ್ಲಿ ಹೆಚ್ಚಾಗಿ ಕನ್ನಡ ಪದಗಳನ್ನೇ ಬಳಸಲಾಗಿದೆ. ಅರಿಮೆಯ ಪದಗಳಿಗೂ ಹೊಸದಾಗಿ ಕನ್ನಡ ಪದಗಳನ್ನು ಆಯ್ದುಕೊಳ್ಳಲಾಗಿದೆ. ಈ ಕೆಲಸವನ್ನು ಶಂಕರ ಬಟ್ ಅವರು ಮೊದಲು ಮಾಡಿದ್ದಾರೆ. ಇಲ್ಲಿ ಅದನ್ನು ಮುಂದುವರೆಸಲಾಗುತ್ತಿದೆ. ಈವರೆಗೆ ಕನ್ನಡದಲ್ಲಿ ನುಡಿಯರಿಮೆಯ ಬರಹಗಳನ್ನು ಓದುತ್ತ ಬಂದವರಿಗೆ ಇಲ್ಲಿನ ಕೆಲವು ಅರಿಮೆಯ ಪದಗಳು ಹೊಸದಾಗಿ ತೋರಬಹುದು. ಆದರೆ ಹೀಗೆ ಮಾಡುತ್ತಿರುವುದೇಕೆ ಎಂಬುದನ್ನು ಒಪ್ಪಿದರೆ ಈ ಬರವಣಿಗೆಯನ್ನು ಓದಲು ಸುಳುವಾದೀತು."[೧೦೮] ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ನಂತರ ತಮ್ಮ ಪುಸ್ತಕದಲ್ಲಿ ಉಲಿ, ಸೊಲ್ಲರಿಮೆ, ಉಲಿಕಂತೆ, ಏರು, ನಡು, ಇಳಿ, ತೆರೆದ ಉಲಿಕಂತೆ, ಮುಚ್ಚಿದ ಉಲಿಕಂತೆ, ಗಿಡ್ಡ ತೆರೆದ ಉಲಿ, ಉದ್ದ ತೆರೆದ ಉಲಿ, ಮೂಗುಲಿ, ನುಡಿಯರಿಮೆ, ನುಡಿ ಕಸುವು, ನುಡಿ ನಡೆ, ಸೊಲ್ಲು, ಅರೆ ತಡೆಯುಲಿಗಳು, ದಿಂಡು, ಪತ್ತುಗೆ ಇತ್ಯಾದಿ ಕನ್ನಡದ ಪದಗಳನ್ನು ಭಾಷಾ ವಿಜ್ಞಾನದ ಪರಿಭಾಷೆ, ಪಾರಿಭಾಷಿಕ ಪದಗಳಾಗಿ ಬಳಕೆಗೆ ತರುವ ಕೆಲಸವನ್ನು ಮಾಡುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ಶಂಕರಬಟ್ಟರ ಕೆಲಸವನ್ನು ಸಮರ್ಥಿಸುತ್ತ ಸಂಸ್ಕೃತದಿಂದ ಬಿಡುಗಡೆ ಹೊಂದಲು ಇರುವ ಮತ್ತೊಂದು ದಾರಿಯನ್ನು ಮಂಡಿಸುತ್ತಾರೆ. "ಈ ಗೋಜಲಿನಿಂದ ಹೊರಬರಲು ಇನ್ನೊಂದು ದಾರಿ ಇರುವಂತಿದೆ. ಅದೆಂದರೆ ನಮ್ಮ ಬರವಣಿಗೆಯಲ್ಲಿ 'ಮಹಾಪ್ರಾಣ'ಗಳಿರುವ ಪದಗಳನ್ನೇ ದೂರವಿಡುವುದು. ಈ ಬರವಣಿಗೆಯಲ್ಲಿ ಆ ದಾರಿಯನ್ನು ಹಿಡಿಯಲಾಗಿದೆ. ಇದರಿಂದ ಕನ್ನಡದ ಪದಗಳನ್ನು ಹುಡುಕಿ ಬಳಸುವ ಹೊಣೆ ಹೆಚ್ಚಾಗಿದೆ. ಓದುವವರು ಮುಜುಗರಕ್ಕೆ ಒಳಗಾಗುವ ಗೋಜೂ ಇಲ್ಲ. ಇದೆಲ್ಲ ಸೇರಿ ಈ ಬರವಣಿಗೆಯ ಚಹರೆಯನ್ನು ಕೊಂಚ ಬದಲಿಸಿವೆ. ಓದುವವರು ತಾಳ್ಮೆಯಿಂದ ಏಕೆ ಹೀಗೆ ಬರೆಯಲಾಗಿದೆ ಎಂಬುದನ್ನು ತಿಳಿದು ಓದಬೇಕಾಗುತ್ತದೆ"[೧೦೯] ಎಂದು ಎರಡರ ನಡುವಿನ ದಾರಿಯೊಂದರ ಅನ್ವೇಷಣೆಯ ಕಡೆಗೆ ದಿಕ್ಕನ್ನು ತೋರಿಸುತ್ತಿದ್ದಾರೆ.

'ಕನ್ನಡ ಪದಗಳ ಒಳರಚನೆ' ಎಂಬ ಕೃತಿಯಲ್ಲಿ ಡಿ ಎನ್ ಶಂಕರ ಬಟ್ ಅವರು, ಕನ್ನಡ ಪದಗಳ ಒಳ ರಚನೆ ಮತ್ತು ಸಂಸ್ಕೃತ ಪದಗಳ ರಚನೆಯಲ್ಲಿರುವ ವ್ಯತ್ಯಾಸಗಳ ಕುರಿತು ಸುದೀರ್ಘವಾಗಿ ವಿವರಿಸಿದ್ದಾರೆ. ಕನ್ನಡದ ಸಂಬಂಧ ವಾಚಕಗಳಾದ ತಾಯಿ. ತಂದೆ. ತಂಗಿ ಮತ್ತು ಪದಗಳಾದ ಕಾಲ್ಗಣೆ. ಮೆಟ್ಟಿಲು ಮೊದಲಾದ ರಚನೆಗಳ ವಿವಿಧ ಸ್ತರಗಳನ್ನು ವಿವರಿಸಿದ್ದಾರೆ. ಈ ಮೂಲಕ ಕನ್ನಡ ಮತ್ತು ಸಂಸ್ಕೃತ ಪದ ರಚನೆಗಳಿಗೆ ಇರುವ ವ್ಯತ್ಯಾಸವನ್ನು ಮಂಡಿಸಿದ್ದಾರೆ.

"ಉದಾಹರಣೆಗೆ, ಮೆಟ್ಟಲು ಎಂಬ ಪದವನ್ನು ಗಮನಿಸಬಹುದು. ತಯಾರಿಕೆಯ ಕಾಲದಲ್ಲಿ ಅದು ಮೆಟ್ಟು ಎಂಬ ಕ್ರಿಯಾಪದಕ್ಕೆ ಅಲು ಎಂಬ ಪ್ರತ್ಯಯವನ್ನು ಸೇರಿಸುವುದರ ಮೂಲಕ ಸಿದ್ದವಾಗಿದೆಯೆಂಬುದು ಸ್ಪಷ್ಟ. ಹೀಗಿದ್ದರೂ ನಮ್ಮ ದಿನನಿತ್ಯದ ಬಳಕೆಯಲ್ಲಿ ಅದು ಹೆಚ್ಚಿನ ಮಟ್ಟಿಗೆ ಒಂದು ಒಳ ರಚನೆಯಿಲ್ಲದ ಪದದ ಹಾಗೆಯೇ ಕಾಣಿಸುತ್ತದೆ. ಅದನ್ನು ಬಳಸುವಾಗ ಮೆಟ್ಟು ಎಂಬ ಕ್ರಿಯಾಪದಕ್ಕೂ ಮತ್ತು ಅದಕ್ಕೂ ನಡುವಿರುವ ಸಂಬಂಧ ಸಾಮಾನ್ಯವಾಗಿ ಗಮನಕ್ಕೆ ಬರುವುದಿಲ್ಲ"[೧೧೦] ಎನ್ನುತ್ತಾರೆ. ಈ ಮೂಲಕ ಸಂಸ್ಕೃತದ ವ್ಯಾಕರಣ ಪರಂಪರೆಯನ್ನು ಕನ್ನಡಕ್ಕೆ ಯಥಾವತ್ತಾಗಿ ಅನ್ವಯಿಸಬಾರದು ಎಂದು ಅವರು ಅಭಿಪ್ರಾಯಪಡುತ್ತಾರೆ.

"ಕನ್ನಡದಲ್ಲಿ ವ್ಯಾಕರಣ ಶಾಸ್ತ್ರಕ್ಕೆ ಸಂಸ್ಕೃತದ ಬಳುವಳಿ ಜಾಸ್ತಿ. ಅದರಲ್ಲಿ ಬಳಕೆಯಾಗುವ ಪಾರಿಭಾಷಿಕ ಪದಗಳಲ್ಲಿ ನೂರಕ್ಕೆ ನೂರೂ ಸಂಸ್ಕೃತ ಪದಗಳೇ. ಇದಲ್ಲದೇ ಕನ್ನಡ ಶಾಸ್ತ್ರೀಯ ಬರಹಗಳಲ್ಲೆಲ್ಲ ಸರಾಗವಾಗಿ ಸಂಸ್ಕೃತ ಪದಗಳನ್ನು ಪಡೆಯುವ ಪ್ರವೃತ್ತಿ ಬೆಳೆದುಬಂದಿದೆ. ಒಂದೇ ಬಾರಿಗೆ ಈ ಪದಗಳನ್ನೆಲ್ಲ ತೆಗೆದು ಹಾಕಿ ಅವುಗಳ ಬದಲಿಗೆ ಹೊಸದಾಗಿ ತಯಾರಿಸಿದ ಪದಗಳನ್ನು ಬಳಸಿದಲ್ಲಿ ನಾನು ನನ್ನ ಓದುಗರನ್ನೇ ಕಳೆದುಕೊಳ್ಳಬೇಕಾದೀತು"[೧೧೧] ಎಂಬ ಆತಂಕವನ್ನೂ ಡಿ ಎನ್ ಶಂಕರ ಬಟ್ಟರು ವ್ಯಕ್ತಪಡಿಸುತ್ತಾರೆ. ಕನ್ನಡದ ಮೇಲಿರುವ ಸಂಸ್ಕೃತದ ಪ್ರಭಾವ ಮತ್ತು ಕನ್ನಡದ ಒಳರಚನೆಗಳ ಕುರಿತು ಕನ್ನಡ ಪದಗಳ ಒಳರಚನೆ ಕೃತಿಯುದ್ದಕ್ಕೂ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಈ ಮೂಲಕ ಕನ್ನಡಕ್ಕೆ ಸಂಸ್ಕೃತ ರಹಿತ ವ್ಯಾಕರಣದ ಅಗತ್ಯ ಇದೆ ಎಂದು ಅವರು ಅಭಿಪ್ರಾಯಪಡುತ್ತಾರೆ.

ಕೇಶಿರಾಜನ ಕಾಲದಿಂದಲೂ ಕನ್ನಡದಲ್ಲಿ ಸಂಸ್ಕೃತ ವ್ಯಾಕರಣ ಮಾದರಿಗಳೇ ಮೂಲವಾಗಿವೆ. ಇದರಿಂದಾಗಿ ವ್ಯಾಕರಣದ ಪರಿಭಾಷೆಗಳಿಂದ ಉದಾಹರಣೆಗಳವರೆಗೆ ಸಂಸ್ಕೃತದ ಅನುಕರಣೆ ಸಾಮಾನ್ಯ ಸಂಗತಿಯಾಗಿದೆ. ಕನ್ನಡದಲ್ಲಿ ಬಳಕೆಯಲ್ಲಿರುವ ಬಹುತೇಕ ವ್ಯಾಕರಣ ಮತ್ತು ಭಾಷಾ ವಿಜ್ಞಾನದ ಪರಿಭಾಷೆಗಳು ಕನ್ನಡದಲ್ಲಿಲ್ಲ ಬದಲಾಗಿ ಸಂಸ್ಕೃತದಲ್ಲಿವೆ. ಇದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದು. ಕನ್ನಡದ ಭಾಷಾ ವಿಜ್ಞಾನದ ಪ್ರಮುಖ ಕೃತಿ ಎಂದು ಪರಿಗಣಿತವಾಗಿರುವ ಎಂ. ಚಿದಾನಂದ ಮೂರ್ತಿಯವರ ಭಾಷಾ ವಿಜ್ಞಾನದ ಮೂಲ ತತ್ವಗಳು ಎಂಬ ಕೃತಿಯಲ್ಲಿ ಕನ್ನಡ ನುಡಿಗಳ ಉತ್ಪತ್ತಿ ಸ್ಥಾನದ ಕುರಿತು ಬಳಕೆಯಾಗಿರುವ ಕೆಲವು ಪದಗಳನ್ನು ನೋಡಿದರೆ, ಇದು ಕನ್ನಡ ಭಾಷಾ ವಿಜ್ಞಾನದ ಮೂಲತತ್ವಗಳನ್ನು ಕುರಿತ ಕೃತಿಯೋ? ಅಥವಾ ಸಂಸ್ಕೃತ ಭಾಷಾ ವಿಜ್ಞಾನವನ್ನು ಕನ್ನಡದಲ್ಲಿ ಹೇಳಲಾಗಿರುವ ಕೃತಿಯೋ? ಎಂಬ ಅನುಮಾನ ಮೂಡದಿರದು. ಧ್ವನಿವಿಜ್ಞಾನ ಎಂಬ ಅಧ್ಯಾಯದಲ್ಲಿ ಧ್ವನ್ಯಂಗಳ ಕುರಿತ ವಿವರಣೆ ಇದೆ. ಇದರಲ್ಲಿ ಓಷ್ಠ್ಯ, ದಂತೋಷ್ಠ್ಯ, ದಂತ್ಯ, ವರ್ತ್ಸ, ತಾಲವ್ಯ, ಮೂರ್ಧನ್ಯ ಅಥವಾ ಪ್ರತಿವೇಷ್ಠಿತ, ಕಂಠ್ಯ ಎಂಬ ಸಂಸ್ಕೃತ ಪರಿಭಾಷೆಗಳನ್ನು ಬಳಸಲಾಗಿದೆ. ಇದು ಸಾಮಾನ್ಯ ಕನ್ನಡಿಗರಿಗೆ ಇರಲಿ ಕನ್ನಡ ಮಾತ್ರ ಅರಿವಿರುವ ವಿದ್ವಾಂಸರಿಗೂ ಮೇಲಿನ ಪದಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯವಾಗಿದೆ. ಇನ್ನೂ ಮುಂದುವರೆದು, ಸ್ಫೋಟ, ಅನುನಾಸಿಕ, ಪಾರ್ಶ್ವಿಕ, ಲೋಡಿತ, ತಾಡಿತ, ಘರ್ಷ ಮೊದಲಾದ ಪದಗಳನ್ನು ಬಳಸಲಾಗಿದೆ. ಇದಕ್ಕೆ ನೀಡಿರುವ ವಿವರಣೆಗಳು ಕೂಡ ಬಹುತೇಕ ಸಂಸ್ಕೃತ ಪದಗಳಿಂದ ಕೂಡಿವೆ.[೧೧೨]

ಇದಲ್ಲದೇ ಭಾಷಾ ವಿಜ್ಞಾನದ ಮೂಲ ತತ್ವಗಳು ಕೃತಿಯ ಒಟ್ಟು ೧೩ ಅಧ್ಯಾಯಗಳಲ್ಲಿ ಕೂಡ ಸಂಸ್ಕೃತದ ಪರಿಭಾಷೆಗಳನ್ನೇ ಭಾಷಾ ವಿಜ್ಞಾನದ ಮೂಲ ತತ್ವಗಳನ್ನು ಹೇಳಲು ಬಳಸಲಾಗಿದೆ. ಈ ಮೂಲಕ ಕನ್ನಡದಲ್ಲಿ ಭಾಷಾ ವಿಜ್ಞಾನದ ಕುರಿತ ಆರಂಭದ ಪ್ರಯತ್ನದಲ್ಲೇ ಸಂಸ್ಕೃತವನ್ನು ಅನವಶ್ಯಕವಾಗಿ ಆವಾಹಿಸಿಕೊಳ್ಳಲಾಗಿದೆ. ಮುಂದಿನ ಕನ್ನಡ ಭಾಷಾ ವಿಜ್ಞಾನದ ಬರಹಗಳ ಮೇಲೆ ಕೂಡ ಇದೇ ಕೃತಿಯ ಪ್ರಭಾವ ಆಗಿದೆ. ಇದರ ಪರಿಣಾಮದಿಂದಾಗಿ ಬಹುತೇಕ ಕನ್ನಡ ಭಾಷಾ ವಿಜ್ಞಾನಿಗಳು ಕನ್ನಡ ಪದ, ಪರಿಭಾಷೆಗಳನ್ನು ಕನ್ನಡದಲ್ಲಿ ರಚಿಸುವ ಗೊಡವೆಯಿಂದ ದೂರಾಗಿದ್ದಾರೆ ಎನಿಸುತ್ತದೆ. ಅಲ್ಲದೇ, ಮುಂದೆ ಬಂದ ಕೆಂಪೇಗೌಡ ಮೊದಲಾದ ಭಾಷಾ ವಿಜ್ಞಾನದ ಬರಹಗಾರರು ಕೂಡ ಕನ್ನಡ ಭಾಷಾ ವಿಜ್ಞಾನದಲ್ಲಿ ಕನ್ನಡದವೇ ಆದ ಪರಿಭಾಷೆಗಳನ್ನು ಹುಡುಕುವ ಅಥವಾ ಕಟ್ಟಿಕೊಳ್ಳುವ ಯತ್ನವನ್ನು ಮಾಡಲಿಲ್ಲ.

ಇದಕ್ಕೆ ಕೆಲವು ಅಪವಾದಗಳೂ ಇಲ್ಲದಿಲ್ಲ. ಆದರೆ, ಅಪವಾದಗಳು ಮುಖ್ಯವಾಹಿನಿಯಲ್ಲಿ ಚರ್ಚೆಗೆ ಬರಲಿಲ್ಲ ಎನ್ನುವುದು ಕೂಡ ಗಮನಾರ್ಹ ಸಂಗತಿಯಾಗಿದೆ. ಈ ಅಪವಾದಕ್ಕೆ ಒಂದು ಉದಾಹರಣೆ ಎಂದರೆ, ಪುಟ್ಟಣ್ಣ ಗವ್ದರ ಅಚ್ಚಗನ್ನಡ ನುಡಿಕೋಶ. ಈ ಕೃತಿಯಲ್ಲಿ ಸಂಸ್ಕೃತ ಪದಗಳ ಬದಲಿಗೆ ಕನ್ನಡ ಪದಗಳನ್ನೇ ಬಳಸುವುದಕ್ಕೆ ಇರುವ ಅವಕಾಶಗಳನ್ನು ಸಂಶೋಧಿಸಲಾಗಿದೆ. ಆದರೆ, ಈ ಅಚ್ಚಗನ್ನಡ ನುಡಿಕೋಶವನ್ನು ಮುಂದಿನ ದಿನಗಳಲ್ಲಿ ಯಾರೂ ಅನುಕರಿಸುವ ಗೊಡವೆಗೆ ಹೋಗಲಿಲ್ಲ. ಇದೇ ಮಾದರಿಯಲ್ಲಿ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ಕನ್ನಡ ಮತ್ತು ಸಂಸ್ಕೃತದ ನಡುವೆ ಇರಬೇಕಾದ ಅಂತರದ ಕುರಿತ ವಿಚಾರಗಳಾಗಲಿ, ಆಂಡಯ್ಯ ತನ್ನ ಕಬ್ಬಿಗರ ಕಾವ ಕೃತಿಯಲ್ಲಿ ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ ಕನ್ನಡ ಪದಗಳನ್ನು ಬಳಸಿರುವ ಕ್ರಮಗಳಾಗಲಿ ಪ್ರಚಲಿತಕ್ಕೆ ಬರಲಿಲ್ಲ. ಬೆರಳೆಣಿಕೆಯಷ್ಟು ವಿದ್ವಾಂಸರು ಇವರನ್ನು ಅನುಸರಿಸಿದರು. ಆದರೆ, ಬಹು ಸಂಖ್ಯಾತರು ಕನ್ನಡದ ಈ ಮಾದರಿಯನ್ನು ಕೈಬಿಟ್ಟರು. ಇದರ ಪರಿಣಾಮದಿಂದಾಗಿ ಕನ್ನಡದಲ್ಲಿ ಇಂದು ಕೂಡ ಸಂಸ್ಕೃತ ಪರಿಭಾಷೆಗಳ ಬಳಕೆ ಜಾರಿಯಲ್ಲಿದೆ.

ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ಇರುವ ಅನೇಕ ವ್ಯತ್ಯಾಸಗಳನ್ನು ಕುರಿತು ಡಿ. ಎನ್. ಶಂಕರ ಬಟ್ಟರು ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಅವರ ಪ್ರಕಾರ, **“ಒಳ ರಚನೆಯಿಲ್ಲದ ನಾಮಪದ, ಕ್ರಿಯಾಪದ ಮತ್ತು ಗುಣಪದಗಳಿಗೂ ಮತ್ತು ನಾಮಧಾತು, ಕ್ರಿಯಾಧಾತು ಮತ್ತು ಗುಣಧಾತುಗಳಿಗೂ ನಡುವೆ ಕನ್ನಡದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ನಿಜಕ್ಕೂ ಕನ್ನಡ ವ್ಯಾಕರಣದಲ್ಲಿ 'ಧಾತು' ಎಂಬ ಪಾರಿಭಾಷಿಕ ಪದವನ್ನು ಬಳಸದಿರಲೂ ಸಾಧ್ಯವಿದೆ”**[೧೧೩] ಎನ್ನುವ ಮೂಲಕ ಕನ್ನಡ ವ್ಯಾಕರಣದಲ್ಲಿ ಸಂಸ್ಕೃತದ ಪರಿಭಾಷೆಗಳ ಅಗತ್ಯ ಕೂಡ ಇಲ್ಲ ಎನ್ನುತ್ತಾರೆ. ಪದ, ಪ್ರತ್ಯಯ, ಪದ ರಚನೆಗಳ ಉದಾಹರಣೆಗಳ ಮೂಲಕ ತಮ್ಮ ವಾದಕ್ಕೆ ಸಮರ್ಥನೆಗಳನ್ನು ನೀಡುತ್ತಾರೆ. ಜೊತೆಗೆ ಕನ್ನಡ ಪದಗಳ ಒಳರಚನೆಗೂ ಸಂಸ್ಕೃತ ಪದಗಳ ಒಳರಚನೆಗೂ ಇರುವ ಭಿನ್ನತೆಯನ್ನು ಗುರುತಿಸುತ್ತಾರೆ.

“ಕನ್ನಡದಲ್ಲಿ ಪೂರ್ವಪ್ರತ್ಯಯ ಎಂಬುದಿಲ್ಲದಿದ್ದರೂ ಅಂತಹ ಪ್ರತ್ಯಯವನ್ನೊಳಗೊಂಡಿರುವ ಸಂಸ್ಕೃತದ ಅಪಜಯ, ಅಪಹಾರ, ಅಪವಾದ, ಅಪಮಾನ, ಅಪಮೃತ್ಯು ಮೊದಲಾದ ಹಲವಾರು ಪದಗಳು ಎರವಲಾಗಿ ಬಂದಿವೆ. ಇದಲ್ಲದೆ, ಈ ಪದಗಳಲ್ಲಿರುವ ಅಪ ಎಂಬ ಪೂರ್ವಪ್ರತ್ಯಯ

ಕನ್ನಡದವೇ ಆದ ನಂಬಿಕೆ ಎಂಬಂತಹ ಪದಗಳಿಗೂ (ಉದಾ: ಅಪನಂಬಿಕೆ) ಸೇರಿಕೊಂಡು ಹೊಸ ಪದಗಳ ತಯಾರಿಕೆಯಲ್ಲಿ ಬಳಕೆಯಾಗಿದೆ"[೧೧೪] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಪೂರ್ವ ಪ್ರತ್ಯಯ ಇಲ್ಲವೆಂದು ಅವರು ಅಭಿಪ್ರಾಯಪಡುತ್ತಾರೆ. ಸಂಸ್ಕೃತದ ಮಾದರಿಯ ಅನುಕರಣೆಯಿಂದಾಗಿ ಕನ್ನಡದ ಪದಗಳಿಗೂ ಪೂರ್ವ ಪತ್ಯಯವನ್ನು ಬಳಸಿ, ಕನ್ನಡದ ರೂಪವನ್ನು ಸಂಸ್ಕೃತ ಮಾದರಿಯಲ್ಲಿ ಪರಿವರ್ತಿಸುತ್ತಿರುವುದಕ್ಕೆ ನಂಬಿಕೆ ಎಂಬ ಪದವನ್ನು ಅವರು ಉದಾಹರಿಸಿದ್ದಾರೆ.

"ಕನ್ನಡ ಬಾಶೆಯು ತಮಿಳು, ತೆಲುಗು, ತುಳು, ಮಲಯಾಳ, ಗೋಂಡಿ, ಕುಡುಖ್ ಮೊದಲಾದ ಬೇರೆ ಕೆಲವು ಬಾಷೆಗಳೊಂದಿಗೆ 'ದ್ರಾವಿಡ' ಎಂಬ ಹೆಸರಿನ ಬಾಶಾಕುಟುಂಬಕ್ಕೆ ಸೇರಿರುವ ಬಾಶೆ. ಈ ಎಲ್ಲಾ ಭಾಷೆಗಳಲ್ಲೂ ಕನ್ನಡದ ಹಾಗೆ ನಾಮಪದ, ಕ್ರಿಯಾಪದ ಮತ್ತು ಗುಣಪದಗಳೆಂಬ ಮೂರು ಮುಖ್ಯ ಪದವರ್ಗಗಳಿವೆ, ಮತ್ತು ಅವು ವಾಕ್ಯಗಳಲ್ಲಿ ವ್ಯಕ್ತಿ, ವಸ್ತು ಮೊದಲಾದವನ್ನು ಗುರುತಿಸುವುದು, ಘಟನೆಗನ್ನು ನಿದೇಶಿಸುವುದು ಮತ್ತು ಗುಣಧರ್ಮಗಳನ್ನು ಸೂಚಿಸುವುದು ಎಂಬುದಾಗಿ ಮೂರು ಬೇರೆ ಬೇರೆ ಕೆಲಸಗಳನ್ನು ನಡೆಸಿಕೊಡುತ್ತವೆ"[೧೧೫] ಎಂಬ ಉದಾಹರಣೆಯನ್ನು ನೀಡುತ್ತಾರೆ. ಈ ಮೂಲಕ ದ್ರಾವಿಡ ನುಡಿಗಳಿಗೂ ಸಂಸ್ಕೃತಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುತ್ತಾರೆ. ಸಂಸ್ಕೃತದ ರಚನೆಗಳಿಗೂ ದ್ರಾವಿಡ ಪದಗಳ ರಚನೆಗಳಿಗೂ ಇರುವ ವ್ಯತ್ಯಾಸವನ್ನು ಹೇಳುವ ಮೂಲಕ ಸಂಸ್ಕೃತದ ವ್ಯಾಕರಣಾಂಶಗಳು, ಉದಾಹರಣೆಗಳು ಕನ್ನಡದಲ್ಲಿ ಬಳಕೆಯಾಗಬೇಕಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ.

"ಸಂಸ್ಕೃತ ಭಾಷೆಯು ಹಿಂದಿ, ಮರಾಠಿ, ಗುಜರಾತಿ, ಬಂಗಾಲಿ, ಕಾಶ್ಮೀರಿ ಮೊದಲಾದ ಬೇರೆ ಕೆಲವು ಬಾಶೆಗಳೊಂದಿಗೆ ಆರ್ಯ (ಇಲ್ಲವೇ ಇಂಡೋ-ಆರ್ಯನ್) ಎಂಬ ಬಾಶಾಕುಟುಂಬಕ್ಕೆ ಸೇರಿರುವ ಭಾಷೆ. ಈ ಭಾಷೆಗಳಲ್ಲಿ ಬರುವ ಪದಗಳು ಮುಖ್ಯವಾಗಿ ನಾಮಪದ ಮತ್ತು ಕ್ರಿಯಾಪದಗಳೆಂಬ ಎರಡು ಪದವರ್ಗಗಳಲ್ಲಿ ಸೇರುತ್ತವೆ. ಇವುಗಳಲ್ಲಿ ನಾಮಪದಗಳು ವ್ಯಕ್ತಿ, ವಸ್ತು ಮೊದಲಾದುವನ್ನು ಗುರುತಿಸುವ ಕೆಲಸವನ್ನೂ ಮತ್ತು ಕ್ರಿಯಾಪದಗಳು ಘಟನೆಗಳನ್ನು ನಿರ್ದೇಶಿಸುವ ಕೆಲಸವನ್ನೂ ನಡೆಸುತ್ತವೆ. ಗುಣಪದಗಳೆಂಬ ಮೂರನೇ ಪದವರ್ಗ ಈ ಭಾಷೆಗಳಲ್ಲಿಲ್ಲ. 'ಬಿಳೀ', 'ದೊಡ್ಡ', 'ಒಳ್ಳೇ' ಮೊದಲಾದ ಗುಣಧರ್ಮಗಳನ್ನು ಸೂಚಿಸಬೇಕಾಗಿರುವ ಪದಗಳು ಈ ಬಾಶೆಗಳಲ್ಲಿ ನಾಮಪದಗಳಾಗಿ ಬರುತ್ತವೆ, ಮತ್ತು ಅವು ಆ ಗುಣಧರ್ಮಗಳನ್ನು ಪಡೆದಿರುವ ವ್ಯಕ್ತಿ, ವಸ್ತು ಮೊದಲಾದುವನ್ನು ಗುರುತಿಸುತ್ತವೆ"[೧೧೬] ಎನ್ನುತ್ತಾರೆ. ಈ ಮೂಲಕ ಇಂಡೋ-ಆರ್ಯನ್ ಭಾಷೆಗೂ ಮತ್ತು ಕನ್ನಡದಂತಹ ದ್ರಾವಿಡ ಭಾಷೆಗಳಿಗೂ ಭಾಷೆಯ ರಾಚನಿಕ ಸ್ವರೂಪದಲ್ಲೇ ವ್ಯತ್ಯಾಸ ಇದೆ ಎಂಬ ಸಂಗತಿಯನ್ನು ಹೇಳಿದ್ದಾರೆ. ಇದಕ್ಕಾಗಿ ಕನ್ನಡದ ಕಪ್ಪು ಹಾವು ಮತ್ತು ಸಂಸ್ಕೃತದ ಕೃಷ್ಣಃ ಸರ್ಪಃ ಪದಗಳನ್ನು ಉದಾಹರಿಸುತ್ತಾರೆ. ಕನ್ನಡದ ಕಪ್ಪು ಹಾವಿನ ಅರ್ಥ ಮತ್ತು ಸಂಸ್ಕೃತದ ಕೃಷ್ಣಃ ಸರ್ಪಃದ ಅರ್ಥಗಳ ನಡುವಿನ ವ್ಯತ್ಯಾಸವನ್ನು ವಿವರಿಸಿದ್ದಾರೆ. ಸಂಸ್ಕೃತದಲ್ಲಿ ಎರಡೂ ಪದಗಳು ಸ್ವತಂತ್ರ ನಾಮಪದಗಳು. ಆದರೆ, ಕನ್ನಡದಲ್ಲಿ ಕಪ್ಪು ಗುಣಪದವಾದರೆ, ಹಾವು ನಾಮಪದವಾಗಿ ಬಳಕೆಯಾಗಿದೆ ಎನ್ನುತ್ತಾರೆ.

"ಕನ್ನಡದ ವೈಯಾಕರಣೆಗಳು ಈ ರೀತಿ ನಾಮಪದ ಮತ್ತು ನಾಮಪದ ಗುಚ್ಚ ಇವೆರಡರ ನಡುವಿರುವ ವ್ಯತ್ಯಾಸವನ್ನು ಗಮನಿಸದಿರಲು ಒಂದು ಮುಕ್ಯವಾದ ಕಾರಣವಿದೆ. ಅವರು ಕನ್ನಡದ

ಸಮಾಸವನ್ನು ನೇರವಾಗಿ ಕನ್ನಡದಲ್ಲಿ ಬರುವ ಪದಗಳ ಪರಿಶೀಲನೆಯ ಆದಾರದ ಮೇಲೆ ವರ್ಣಿಸುವ ಬದಲು, ಸಂಸ್ಕೃತ ಸಮಾಸಗಳನ್ನು ಮೊದಲು ವರ್ಣಿಸಿ, ಅನಂತರ ಅವಕ್ಕೆ ಸರಿಹೊಂದುವಂತೆ ಕನ್ನಡದಲ್ಲಿ ಉದಾಹರಣೆಗಳನ್ನು ಕಂಡುಹಿಡಿಯುವ ಇಲ್ಲವೇ ತಯಾರಿಸಿಕೊಳ್ಳುವ ಪ್ರಯತ್ನವನ್ನು ಮಾಡಿರುತ್ತಾರೆ. ಈ ಪದ್ಧತಿ ಕೇಶಿರಾಜನ ಕಾಲದಿಂದಲೂ ನಡೆದು ಬಂದಿದೆಯಾದ ಕಾರಣ, ಕನ್ನಡ ವ್ಯಾಕರಣಗಳ ಮಟ್ಟಿಗೆ ಸಮಾಸವೆಂಬುದು ಒಂದು ಅರ್ಥವಾಗದ ಕಗ್ಗಂಟಾಗಿದೆ"[೧೧೭] ಎನ್ನುತ್ತಾರೆ. ಈ ಮೂಲಕ ಕನ್ನಡ ವ್ಯಾಕರಣ ಪರಂಪರೆಯಲ್ಲಿ ಮೊದಲಿನಿಂದಲೂ ಸಂಸ್ಕೃತದ ಎಲ್ಲ ವ್ಯಾಕರಣದ ಅಂಶಗಳಿಗೆ ಪೂರಕವಾಗಿ ಕನ್ನಡದಲ್ಲಿ ಉದಾಹರಣೆಗಳನ್ನು ರಚಿಸುವ ಮತ್ತು ಹುಡುಕುವ ಪರಿಪಾಠ ಜಾರಿಯಲ್ಲಿದೆ ಎಂದು ಅಭಿಪ್ರಾಯಪಡುತ್ತಾರೆ.

"ಕೇಶಿರಾಜನ ಕಾಲದಿಂದಲೂ ಕನ್ನಡ ವ್ಯಾಕರಣಗಳಲ್ಲಿ ಸಮಾಸಗಳ ವರ್ಣನೆಯೆಂಬುದು ಒಂದು ದೊಡ್ಡ ಗೋಜಲುಮಯ ವಿಷಯವಾಗಿದೆ. ಸಂಸ್ಕೃತ ಸಮಾಸಗಳ ಪರಿಶೀಲನೆಯ ಮೂಲಕ ಕನ್ನಡ ಸಮಾಸಗಳನ್ನು ವಿವರಿಸಲು ಯತ್ನಿಸಿರುವುದು ಇದಕ್ಕೆ ಒಂದು ಕಾರಣವಾದರೆ, ಜೋಡುಪದಗಳಿಗೂ ಮತ್ತು ಪದಗುಚ್ಛಗಳಿಗೂ ನಡುವಿರುವ ವ್ಯತ್ಯಾಸವನ್ನು ಸರಿಯಾಗಿ ಪರಿಶೀಲಿಸಬೇಕಾದ ವಸ್ತು ಯಾವುದು ಎಂಬುದನ್ನೇ ಸರಿಯಾಗಿ ತಿಳಿದುಕೊಳ್ಳದೆ ಸ್ಪಷ್ಟವಾಗಿ ಅರ್ಥವಾಗುವಂತಹ ವರ್ಣನೆಯೊಂದನ್ನು ಕೊಡಲು ಸಾಧ್ಯವಿಲ್ಲ ತಾನೆ?"[೧೧೮] ಎಂದು ಶಂಕರ ಬಟ್ ಪ್ರಶ್ನಿಸುತ್ತಾರೆ.

ಅಲ್ಲದೇ, ಈ ಗೊಂದಲಗಳಿಂದ ಮುಕ್ತವಾಗಲು ಪರಿಹಾರವನ್ನೂ ಅವರು ಹೀಗೆ ಸೂಚಿಸುತ್ತಾರೆ: "ಹೊಸಗನ್ನಡದಲ್ಲಿ ಬರುವ ಸಮಾಸಗಳೆಂತಹವು ಎಂಬುದನ್ನು ತಿಳಿಯಬೇಕಿದ್ದರೆ ನಾವು ಸಂಸ್ಕೃತದಲ್ಲಿ ಬರುವ ಸಮಾಸಗಳೆಂತಹವು ಎಂಬುದನ್ನು ತಿಳಿಯುವ ಅವಶ್ಯಕತೆಯಿಲ್ಲ. ಸಂಸ್ಕೃತದಿಂದ ಕನ್ನಡಕ್ಕೆ ಎರವಲಾಗಿ ಬಂದಿರುವ ಪದಗಳ ಒಳರಚನೆಯೆಂತಹುದು ಎಂಬುದನ್ನು ತಿಳಿದುಕೊಳ್ಳುವಲ್ಲಿ ಮಾತ್ರ ಸಂಸ್ಕೃತ ಸಮಾಸಗಳ ತಿಳುವಳಿಕೆ ಸಹಾಯಕವಾಗಬಲ್ಲುದಾದರೂ ಅಲ್ಲಿಯೂ ಅದು ಅತ್ಯವಶ್ಯವೇನಲ್ಲ"[೧೧೯] ಎನ್ನುತ್ತಾರೆ. ಈ ಮೂಲಕ ಸಂಸ್ಕೃತದ ಸಮಾಸಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಅನ್ವಯಿಸಬಾರದು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

"ಸಂಸ್ಕೃತ ವ್ಯಾಕರಣಗಳಲ್ಲಿ ಬಳಕೆಯಲ್ಲಿರುವ ತತ್ಪುರುಷ, ಕರ್ಮಧಾರಯ, ದ್ವಿಗು, ದ್ವಂದ್ವ, ಬಹುವ್ರೀಹಿ ಮೊದಲಾದ ಪಾರಿಭಾಷಿಕ ಪದಗಳನ್ನೇ ಕನ್ನಡದ ಜೋಡುಪದಗಳನ್ನು (ಮತ್ತು ಅವುಗಳ ಒಳರಚನೆಯಲ್ಲಿ ಕಾಣಿಸುವ 'ಸಮಾಸ'ವೆಂಬ ಹೆಸರಿನ ವಿಧಾನವನ್ನು) ವರ್ಣಿಸುವುದಕ್ಕಾಗಿಯೂ ಬಳಸುವುದು ರೂಢಿ. ಆದರೆ, ಈ ಪದಗಳು ನಮ್ಮೆದುರು ಸಂಸ್ಕೃತ ಸಮಾಸಗಳನ್ನೇ ತಂದಿರಿಸುವ ಕಾರಣ, ಅವನ್ನು ಬಳಸಿದಲ್ಲಿ ಕನ್ನಡ ಜೋಡುಪದಗಳ ವರ್ಣನೆಯಲ್ಲಿ ಸಂಸ್ಕೃತ ಸಮಾಸಗಳಿಂದಾಗಿರುವ ಗೊಂದಲವನ್ನು ಹೋಗಲಾಡಿಸಲು ಸಾಧ್ಯವಾಗದು"[೧೨೦] ಎನ್ನುವುದು ಅವರ ಖಚಿತ ಹೇಳಿಕೆಯಾಗಿದೆ. ಕನ್ನಡ ವ್ಯಾಕರಣ ರಚನೆಯಲ್ಲಿ ಸಮಾಸ ಎಂಬ ಹೆಸರಿನಲ್ಲಿ ಜಾರಿಯಲ್ಲಿರುವ ಸಂಸ್ಕೃತ ವ್ಯಾಕರಣ ನಿಯಮಗಳು ಮತ್ತು ಸಂಸ್ಕೃತದ ಹೇರಿಕೆ ತಪ್ಪು ಎಂದು ಶಂಕರ ಬಟ್ಟರು ಹೇಳುತ್ತಾರೆ.

"ಜೋಡುಪದ ಮತ್ತು ಪದಗುಚ್ಛಗಳ ನಡುವಿರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಕನ್ನಡದ ಮಟ್ಟಿಗೆ ಒಂದು ಪ್ರಾಮುಖ್ಯವಾದ ಕೆಲಸ. ಯಾಕೆಂದರೆ, ಕನ್ನಡದ ಹೆಚ್ಚಿನ ವ್ಯಾಕರಣಗಳಲ್ಲೂ ಈ ಎರಡು

ರೀತಿಯ ವಾಕ್ಯಾಂಶಗಳ ನಡುವಿರುವ ವ್ಯತ್ಯಾಸ ಅಸ್ಪಷ್ಟವಾಗಿಯೇ ಉಳಿದಿದೆ ಮಾತ್ರವಲ್ಲ, ಕೆಲವೆಡೆಗಳಲ್ಲಿ ಅವೆರಡೂ ಒಂದೇ ಎಂಬ ಭಾವನೆಯೂ ಬರುವಂತಿದೆ. ಉದಾಹರಣೆಗಾಗಿ, ಆ ಮನೆ, ಬಾಳೆಯ ಹಣ್ಣು, ಓದುವ ಹುಡುಗ ಮೊದಲಾದವುಗಳಲ್ಲಿ ಗಮಕ, ತತ್ಪುರುಷ ಮೊದಲಾದ ಸಮಾಸಗಳಿವೆಯೆಂಬುದಾಗಿ ಕನ್ನಡ ವ್ಯಾಕರಣಗಳಲ್ಲಿ ಬರೆದಿರುವುದನ್ನು ಕಾಣಬಹುದು"[೧೨೧] ಎನ್ನುತ್ತಾರೆ. ಈ ಮೂಲಕ ಕನ್ನಡ ಮತ್ತು ಸಂಸ್ಕೃತದಲ್ಲಿರುವ ಸಮಾಸಗಳ ಕುರಿತು ಮಹತ್ವದ ಅಂಶಗಳನ್ನು ಬಹಿರಂಗಪಡಿಸಿದ್ದಾರೆ. ಕನ್ನಡದಲ್ಲಿ ಇಲ್ಲದ, ಸಂಸ್ಕೃತದಲ್ಲಿರುವ ಸಮಾಸಗಳನ್ನು ಕನ್ನಡದಲ್ಲಿ ಅನವಶ್ಯಕವಾಗಿ ಕಲಿಸಲಾಗುತ್ತಿದೆ ಎನ್ನುವುದು ಅವರ ಪ್ರಮುಖ ಆರೋಪವಾಗಿದೆ.

ತೀ.ನಂ.ಶ್ರೀಕಂಠಯ್ಯನವರು ಬರೆದಿರುವ 'ಕನ್ನಡ ಮಧ್ಯಮ ವ್ಯಾಕರಣ' ಕೃತಿಯಲ್ಲಿ ತತ್ಪುರುಷ ಸಮಾಸ ಕುರಿತು ಹೀಗೆ ಹೇಳಿದ್ದಾರೆ:

"ಬೇಟೆಗಾರನು ಬಿಟ್ಟ ಬಾಣವು ಕಾಡು ಹಂದಿಗೆ ತಾಗಲೇ ಇಲ್ಲ.

ಹಲ್ಲು ನೋವನ್ನು ಸಹಿಸಿಕೊಳ್ಳುವುದು ಕಷ್ಟ.

ಕಾಡು ಹಂದಿ = ಕಾಡಿನ ಹಂದಿ; ಹಲ್ಲುನೋವು = ಹಲ್ಲಿನಲ್ಲಿ ನೋವು. ಈ ಎರಡು ಸಮಾಸಗಳಲ್ಲೂ, ಉತ್ತರಪದಗಳಾದ ಹಂದಿ, ನೋವು ಇವನ್ನು ಮುಖ್ಯವಾಗಿ ಕುರಿತು ಮಾತನಾಡುತ್ತಿದ್ದೇವೆ. ಎಲ್ಲಿಯ ಹಂದಿ ಎಂಬುದನ್ನು ತಿಳಿಸುವುದಕ್ಕೋಸ್ಕರ 'ಕಾಡು' ಎಂಬುದು ಹಿಂದೆ ಸೇರಿದೆ; ಎಲ್ಲಿ ನೋವು ಎಂಬ ಪ್ರಶ್ನೆಗೆ ಉತ್ತರವಾಗಿ 'ಹಲ್ಲು' ಎಂಬುದು ಸೇರಿದೆ. ಹೀಗೆ ಉತ್ತರಪದದ ಅರ್ಥವನ್ನು ಮುಖ್ಯವಾಗಿ ಉಳ್ಳ ಸಮಾಸಕ್ಕೆ ತತ್ಪುರುಷ ಸಮಾಸವೆಂದು ಹೆಸರು"[೧೨೨] ಎನ್ನುತ್ತಾರೆ.

ಮೇಲಿನ ಎರಡು ಉದಾಹರಣೆಗಳಲ್ಲದೇ, ಮರಗಾಲು, ಸಂಜೆಗೆಂಪು, ಮಳೆಗಾಲ, ಬೆಟ್ಟದಾವರೆ, ಕೈತಪ್ಪು, ಕಲ್ಲುಮಂಟಪ, ಕಣ್ಣುರಿ, ಬಿಸಿಲುಕೋಲು, ಹಗಲುಗನಸು, ತಲೆನೋವು, ಕಣ್ಣುಸನ್ನೆ ಪದಗಳನ್ನು ತೀ. ನಂ. ಶ್ರೀಕಂಠಯ್ಯ ಉದಾಹರಣೆಗಳಾಗಿ ನೀಡಿದ್ದು, ಇವುಗಳಿಗೆ ವಿಗ್ರಹವಾಕ್ಯದ ಮಾದರಿಯನ್ನೂ ನೀಡಿದ್ದಾರೆ. ಆದರೆ, ಡಿ. ಎನ್. ಶಂಕರ ಬಟ್ಟರು ವಿಗ್ರಹವಾಕ್ಯ ಎಂಬ ಪಾರಿಭಾಷಿಕವನ್ನೂ ತಿರಸ್ಕರಿಸುತ್ತಾರೆ. ಸಂಸ್ಕೃತದ ಸಮಾಸ ಎಂಬ ಪರಿಭಾಷೆಯ ಬದಲಾಗಿ ಜೋಡುನುಡಿಗಳು ಎಂಬ ಪದವನ್ನು ಸ್ವತಃ ಬಳಸುವ ಮೂಲಕ ಸಮಾಸವೆಂಬುವು ಕನ್ನಡದಲ್ಲಿ ಇಲ್ಲ ಎಂದು ಅವರು ವಾದಿಸುತ್ತಾರೆ.

"ಎರಡು ಅಥವಾ ಜಾಸ್ತಿ ಪದಗಳನ್ನು ಒಟ್ಟಾಗಿ ಜೋಡಿಸಿ ಒಂದೇ ಪದವಾಗಿ ಮಾಡುವ ವಿಧಾನಕ್ಕೆ ಸಮಾಸವೆಂದೂ ಮತ್ತು ಅಂತಹ ವಿಧಾನದ ಮೂಲಕ ತಯಾರಾದ ಪದವನ್ನು ಜೋಡುಪದವೆಂದೂ ಕರೆಯಬಹುದು. ಉದಾಹರಣೆಗಾಗಿ ಕೆಳದುಟಿ ಎಂಬುದು ಒಂದು ಜೋಡುಪದ. ಯಾಕೆಂದರೆ, ಇದರಲ್ಲಿ ಕೆಳಗೆ ಮತ್ತು ತುಟಿ ಎಂಬ ಎರಡು ಪದಗಳನ್ನು ಒಟ್ಟಾಗಿ ಜೋಡಿಸಿ ಬೇರೆಯೇ ಒಂದು ಪದವನ್ನು ತಯಾರಿಸಲಾಗಿದೆ, ಮತ್ತು ಈ ಪದದ ಮೂಲಕ ಬಾಯಲ್ಲಿರುವ ಎರಡು ತುಟಿಗಳಲ್ಲಿ

ಕೆಳಗಿನದನ್ನು ಹೆಸರಿಸಲಾಗಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಇಂತಹ ಪದಗಳಲ್ಲಿ ಎರಡು ಪದಗಳು ಮಾತ್ರವೇ ಸೇರಿರುತ್ತವೆಯಾದ ಕಾರಣ, ಜೋಡುಪದ ಎಂಬ ಈ ಹೆಸರು ಸೂಚಿಸಬಹುದಾದ 'ಎರಡು' ಎಂಬ ಅರ್ಥದಿಂದಲೂ ಕನ್ನಡದ ಮಟ್ಟಿಗೆ ತೊಂದರೆಯಾಗುವುದಿಲ್ಲ"[೧೨೩] ಎನ್ನುವುದು ಸಮಾಸ ಪದ ಬಳಕೆ ಕುರಿತು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ. ಈ ಮೂಲಕ ಸಂಸ್ಕೃತದ ವ್ಯಾಕರಣ ನಿಯಮ ಮತ್ತು ಪರಿಭಾಷೆಗಳ ಬಳಕೆ ಕೂಡ ಸರಿಯಲ್ಲ ಎಂದು ಅವರು ವಾದಿಸಿದ್ದಾರೆ.

"ಜೋಡುಪದ ಮತ್ತು ಪ್ರತ್ಯಯವಿರುವ ಪದಗಳ ನಡುವಿರುವ ವ್ಯತ್ಯಾಸವೂ ಕೆಲವು ವಿಷಯದಲ್ಲಿ ಮೇಲಿನ ವ್ಯತ್ಯಾಸದ ಹಾಗೆಯೇ ಅಸ್ಪಷ್ಟವಾಗಿದೆ. ಆದರೆ, ಇದಕ್ಕೆ ಬೇರೆಯೇ ಒಂದು ಕಾರಣವಿದೆ. ಒಂದು ಪದಕ್ಕೆ ಒಂದು ಅಥವಾ ಜಾಸ್ತಿ ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ಪ್ರತ್ಯಯವಿರುವ ಪದ ತಯಾರಾಗುತ್ತದೆ ಮತ್ತು ಎರಡು ಅಥವಾ ಜಾಸ್ತಿ ಪದಗಳನ್ನು ಒಟ್ಟಿಗೆ ಸೇರಿಸಿ ಒಂದೇ ಪದವಾಗಿ ಮಾಡುವುದರ ಮೂಲಕ ಜೋಡುಪದ ತಯಾರಾಗುತ್ತದೆ ಎಂಬುದಾಗಿ ಇವುಗಳ ನಡುವಿರುವ ವ್ಯತ್ಯಾಸವೇನೋ ಸ್ಪಷ್ಟವಾಗಿದೆ, ಆದರೆ ಪದ ಮತ್ತು ಪ್ರತ್ಯಯಗಳ ನಡುವಿರುವ ವ್ಯತ್ಯಾಸ ಅಷ್ಟೊಂದು ಸ್ಪಷ್ಟವಾದುದಲ್ಲ"[೧೨೪] ಎಂದು ಅಭಿಪ್ರಾಯಪಡುತ್ತಾರೆ. ಕನ್ನಡದಲ್ಲಿ ಜೋಡು ನುಡಿಗಳಿಗೂ ಸಂಸ್ಕೃತದ ಸಮಾಸಗಳಿಗೂ ಸಂಬಂಧ ಕಲ್ಪಿಸಬೇಕಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ. ಸಂಸ್ಕೃತದ ಸಮಾಸಗಳ ರಚನೆಗೂ ಕನ್ನಡದ ಜೋಡುನುಡಿಗಳ ರಚನೆಗೂ ವ್ಯತ್ಯಾಸವಿದೆ. ಜೋಡುನುಡಿಗಳ ಮಾದರಿಗೂ ಸಮಾಸಕ್ಕೂ ಸಂಬಂಧ ಕಲ್ಪಿಸಬೇಕಿಲ್ಲ ಎನ್ನುವುದು ಅವರ ವಾದವಾಗಿದೆ.

"ಸಂಸ್ಕೃತದ ಇನ್ನೊಂದು ವೈಶಿಷ್ಟ್ಯವೇನೆಂದರೆ, ಅದರಲ್ಲಿ ಲಿಂಗ, ವಚನ ಮತ್ತು ವಿಭಕ್ತಿಗಳನ್ನು ಸೂಚಿಸಲು ಕನ್ನಡದಲ್ಲಿರುವ ಹಾಗೆ ಬೇರೆ ಬೇರೆ ಪ್ರತ್ಯಯಗಳಿಲ್ಲ. ಇವು ಮೂರನ್ನೂ ಪದದ ಕೊನೆಯಲ್ಲಿ ಬರುವ ಸಂಬಂತ ಎಂಬ ಹೆಸರಿನ ಒಂದೇ ಪ್ರತ್ಯಯ ಸೂಚಿಸುತ್ತದೆ. ಉದಾಹರಣೆಗಾಗಿ ಮೇಲೆ ಕೊಟ್ಟಿರುವ ಪದಗಳೆಲ್ಲವೂ (ದಾರಾಃ ಎಂಬುದನ್ನು ಬಿಟ್ಟು) ಅಲ್ಲಿ ಸೂಚಿಸಿರುವ ಲಿಂಗವನ್ನು ಮಾತ್ರವಲ್ಲದೆ ಏಕವಚನ ಮತ್ತು ಪ್ರಥಮಾ ವಿಭಕ್ತಿಗಳನ್ನೂ ಸೂಚಿಸುವ ಪ್ರತ್ಯಯವೊಂದರಿಂದ ಬಂದಿದೆ"[೧೨೫] ಎನ್ನುತ್ತಾರೆ. ಇದಕ್ಕೆ ಅವರು ಒಂದು ಸಂಸ್ಕೃತ ಮತ್ತು ಕನ್ನಡದ ಪಟ್ಟಿಯನ್ನು ನೀಡಿದ್ದಾರೆ.

ಪುಲ್ಲಿಂಗ	ಸ್ತ್ರೀಲಿಂಗ	ನಂಪುಸಕ ಲಿಂಗ
ನೃಪಃ – ಅರಸು	ಜನನೀ – ತಾಯಿ	ಜ್ಞಾನಂ – ತಿಳುವಳಿಕೆ
ವೃಕ್ಷಃ – ಮರ	ಮಾಲಾ – ಮಾಲೆ	ಉದಕಂ – ನೀರು
ಅಶ್ವಃ – ಕುದುರೆ	ಆಜ್ಞಾ – ಆಜ್ಞೆ	ಬ್ರಹ್ಮ – ಪರಮಾತ್ಮ
ಅನಿಲಃ – ಗಾಳಿ	ಧನೂ – ಬಿಲ್ಲು	ಕಲತ್ರಂ – ಹೆಂಡತಿ
ದಾರಃ – ಹೆಂಡತಿ	ಪತ್ನೀ – ಹೆಂಡತಿ	ಪುರಂ – ಪಟ್ಟಣ

ಎಂಬ ಉದಾಹರಣೆಗಳನ್ನು ಕೊಟ್ಟಿದ್ದಾರೆ. "ಕನ್ನಡದ ನಾಮಪದಗಳ ಲಿಂಗ ಭೇದ ಈ ರೀತಿ ಕೊನೆಯ ಅಕ್ಷರವನ್ನು ಇಲ್ಲವೇ ವಿಭಕ್ತಿ ಪ್ರತ್ಯಯದ ರೂಪವನ್ನು ಅವಲಂಬಿಸಿರದೆ ಅವು ಗುರುತಿಸುವ

ವ್ಯಕ್ತಿ, ವಸ್ತು ಮೊದಲಾದವುಗಳ ಸ್ವರೂಪವನ್ನವಲಂಬಿಸಿದೆ. ಸಾಮಾನ್ಯವಾಗಿ ಗಂಡಸರನ್ನು ಗುರುತಿಸುವ ನಾಮಪದಗಳು ಪುಲ್ಲಿಂಗದಲ್ಲೂ, ಹೆಂಗಸರನ್ನು ಗುರುತಿಸುವ ನಾಮಪದಗಳು ಸ್ತ್ರೀಲಿಂಗದಲ್ಲೂ ಮತ್ತು ಉಳಿದ ನಾಮಪದಗಳು ನಪುಂಸಕ ಲಿಂಗದಲ್ಲೂ ಬರುತ್ತವೆಯೆಂದು ಕನ್ನಡದಲ್ಲಿ ಒಂದು ನಿಯಮವನ್ನು ಮಾಡಲು ಸಾಧ್ಯವಿದೆ. ಇದಕ್ಕೆ ಕೆಲವು ಅಪವಾದಗಳು ಮಾತ್ರ ಇವೆ"[೧೨೬] ಎನ್ನುತ್ತಾರೆ. ಈ ಮೂಲಕ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಜಾಯಮಾನದಲ್ಲೇ ವ್ಯತ್ಯಾಸವಿದೆ ಎಂದು ಅವರು ಉದಾಹರಣೆಗಳನ್ನು ನೀಡುತ್ತಾರೆ. ಸಂಸ್ಕೃತ ಮತ್ತು ಕನ್ನಡ ರಚನೆಗಳಲ್ಲಿರುವ ವ್ಯತ್ಯಾಸಗಳ ಪೈಕಿ ಮೇಲಿನ ಸಂಗತಿ ಪ್ರಮುಖವಾದುದು. ಲಿಂಗಭೇದಕ್ಕೆ ವಿಭಕ್ತಿ ಪ್ರತ್ಯಯದ ಬದಲಿಗೆ ವ್ಯಕ್ತಿ, ವಸ್ತುವನ್ನು ಅವಲಂಬಿಸಿದ್ದರೆ, ಸಂಸ್ಕೃತದಲ್ಲಿ ಈ ಮಾದರಿ ಇಲ್ಲ ಎನ್ನುವುದು ಡಿ. ಎನ್. ಶಂಕರ ಬಟ್ಟರ ಹೇಳಿಕೆಯಾಗಿದೆ.

"ಇವತ್ತಿನ ಕನ್ನಡ ವ್ಯಾಕರಣಗಳಲ್ಲಿ ಕಾಣಿಸುವ ಜೋಡುಪದಗಳ ವರ್ಣನೆಗಳು (ಮತ್ತು ಅವುಗಳ ತಯಾರಿಕೆಯಲ್ಲಿ ಬಳಸಿರುವ ಸಮಾಸ ಎಂಬ ಪದ ರಚನೆಯ ವಿಧಾನದ ವರ್ಣನೆಗಳು) ಈ ವಿಷಯಕ್ಕೆ ಜಾಸ್ತಿ ಗಮನ ಕೊಟ್ಟಿಲ್ಲ. ಇದಕ್ಕೆ ಬದಲು, ಸಂಸ್ಕೃತ ವ್ಯಾಕರಣಗಳನ್ನನುಸರಿಸಿ, ಜೋಡುಪದದ ಅಂಗಗಳಾಗಿ ಬಂದಿರುವ ಪದಗಳಲ್ಲಿ ಯಾವುದು 'ಪ್ರಧಾನ ಪದ' ಎಂಬ ವಿಷಯಕ್ಕೆ ಅವು ಹೆಚ್ಚಿನ ಗಮನ ಕೊಟ್ಟಿವೆ. ಇದರಿಂದಾಗಿ ಅವುಗಳಲ್ಲಿ ಬರುವ ಜೋಡುಪದಗಳ ವರ್ಣನೆ ಕನ್ನಡದ ಮಟ್ಟಿಗೆ ಅಷ್ಟೊಂದು ತೃಪ್ತಿಕರವಾಗಿಲ್ಲ"[೧೨೭] ಎನ್ನುತ್ತಾರೆ. ಈ ಮೂಲಕ ಸಮಾಸ ಮತ್ತು ಜೋಡುಪದಗಳ ನಡುವಿನ ವ್ಯತ್ಯಾಸ ಹಾಗೂ ಕನ್ನಡ ವ್ಯಾಕರಣಗಳ ಆರಂಭ ಕಾಲದ ರಚನೆಗಳಿಂದ ಆಗಿರುವ ತಪ್ಪು ತಿಳಿವಳಿಕೆಗಳ ಕುರಿತು ಗಮನಹರಿಸುತ್ತಾರೆ.

"ಸಂಸ್ಕೃತಕ್ಕೂ ಕನ್ನಡಕ್ಕೂ ನಡುವಿರುವ ವ್ಯತ್ಯಾಸಗಳಲ್ಲಿ ಪದವರ್ಗಗಳಿಗೆ ಸಂಬಂಧಿಸಿದ ವ್ಯತ್ಯಾಸ ಬಹಳ ಪ್ರಾಮುಖ್ಯವಾದುದು. ಕನ್ನಡದಲ್ಲಿ ನಾಮಪದ, ಕ್ರಿಯಾಪದ ಮತ್ತು ಗುಣಪದಗಳೆಂಬ ಮೂರು ಮುಖ್ಯ ಪದವರ್ಗಗಳಿವೆ; ಆದರೆ, ಸಂಸ್ಕೃತದಲ್ಲಿ ನಾಮಪದ ಮತ್ತು ಕ್ರಿಯಾಪದಗಳೆಂಬ ಎರಡೇ ಮುಖ್ಯ ಪದವರ್ಗಗಳು ಮಾತ್ರ ಇವೆ. ಕನ್ನಡದ ಪದಗಳನ್ನು ಸಂಸ್ಕೃತಕ್ಕೆ ಅನುವಾದಿಸುವಾಗ, ಅದರಲ್ಲಿರುವ ಗುಣಪದಗಳಲ್ಲಿ ಹೆಚ್ಚಿನದನ್ನೂ ನಾಮಪದಗಳಾಗಿಯೇ ಅನುವಾದಿಸಬೇಕಾಗುತ್ತದೆ ಎಂಬುದರಿಂದ ಈ ವಿಶಯ ಸ್ಪಷ್ಟವಾಗುತ್ತದೆ"[೧೨೮] ಎನ್ನುತ್ತಾರೆ. ಈ ಮೂಲಕ ಕನ್ನಡ ಮತ್ತು ಸಂಸ್ಕೃತಕ್ಕೆ ಇರುವ ಪ್ರಮುಖ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಕನ್ನಡಕ್ಕೆ ವಿಶಿಷ್ಟವಾಗಿರುವ ಮೂರು ಪದವರ್ಗಗಳಾದ ನಾಮಪದ, ಕ್ರಿಯಾಪದ ಮತ್ತು ಗುಣಪದಗಳ ಪೈಕಿ, ಗುಣಪದ ಸಂಸ್ಕೃತದಲ್ಲಿ ಇಲ್ಲ ಎಂದಿದ್ದಾರೆ.

"ಸಂಸ್ಕೃತದ ವ್ಯಾಕರಣ ಪರಂಪರೆಯ ಹಾಗೆಯೇ ಲ್ಯಾಟಿನ್ ಮತ್ತು ಇಂಗ್ಲಿಷ್ ಬಾಶೆಯ ವ್ಯಾಕರಣ ಪರಂಪರೆಗಳೂ ಆ ಬಾಶೆಗಳ ವ್ಯಾಕರಣಗಳನ್ನು ವರ್ಣಿಸುವಲ್ಲಿ ಉಪಯೋಗಕ್ಕೆ ಬರಬಲ್ಲುವಲ್ಲದೆ ಕನ್ನಡದ ವ್ಯಾಕರಣವನ್ನು ವರ್ಣಿಸುವಲ್ಲಿ ಹೆಚ್ಚಿಗೆ ಪ್ರಯೋಜನಕ್ಕೆ ಬರಲಾರವು. ಕನ್ನಡ ವ್ಯಾಕರಣದಲ್ಲಿ ಅದರದೇ ಆದ ಹಲವಾರು ವೈಶಿಷ್ಟ್ಯಗಳಿದ್ದು, ಅವನ್ನು ಕಂಡುಕೊಳ್ಳಲು ಅದರದೇ ಆದ ವ್ಯಾಕರಣ ಪರಂಪರೆಯೊಂದನ್ನು ಬೆಳೆಸಿಕೊಳ್ಳುವ ಅವಶ್ಯಕತೆಯಿದೆ"[೧೨೯] ಎನ್ನುವುದು ಅವರ ಅಭಿಪ್ರಾಯವಾಗಿದೆ. ಮೇಲಿನ ಅನೇಕ ಉದಾಹರಣೆಗಳ ಮೂಲಕ ಕನ್ನಡ ಮತ್ತು ಸಂಸ್ಕೃತ ಪದ, ಪದ ರಚನೆ, ವ್ಯಾಕರಣ, ಮೂಲ ಇತ್ಯಾದಿ ವಿಷಯಗಳಲ್ಲಿರುವ ವ್ಯತ್ಯಾಸವನ್ನು ಸಾಬೀತುಪಡಿಸಲು ಯತ್ನಿಸಿದ್ದಾರೆ.

ಅವರ ಬಹುತೇಕ ಕೃತಿಗಳು ಈ ವಿಷಯವನ್ನು ಸ್ಪಷ್ಟಪಡಿಸುವ ನಿಟ್ಟಿನಲ್ಲೇ ರಚಿತವಾಗಿವೆ.

'ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?' ಎಂಬ ಕೃತಿಯಲ್ಲಿ ಡಿ. ಎನ್. ಶಂಕರ ಬಟ್ ಅವರು, **"ನಾವು ನಮ್ಮ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಇವತ್ತು ಬಳಸುತ್ತಿರುವ ಕನ್ನಡ ವ್ಯಾಕರಣಗಳು ನಿಜಕ್ಕೂ ಕನ್ನಡದ ವ್ಯಾಕರಣವೆಂತಹದು ಎಂಬುದನ್ನು ತಿಳಿಸುವುದಿಲ್ಲ; ಕನ್ನಡದ ಪದ, ಪದರೂಪ ಮತ್ತು ವಾಕ್ಯಗಳ ಹಿಂದಿರುವ ನಿಯಮಗಳೆಂತವು ಎಂಬುದನ್ನು ವಿವರಿಸುವ ಬದಲು ಇವು ಸಂಸ್ಕೃತದ ವ್ಯಾಕರಣ ನಿಯಮಗಳನ್ನು ಕನ್ನಡಕ್ಕೆ ಅಳವಡಿಸಲು ಪ್ರಯತ್ನಿಸುತ್ತವೆ; ಕನ್ನಡಕ್ಕೆ ಇವು ತಿಳಿಸುವ ವ್ಯಾಕರಣ ನಿಯಮಗಳಿಗಿಂತ ತೀರ ಭಿನ್ನವಾದ ಮತ್ತು 'ಕನ್ನಡದ್ದೇ ಅದ' ವ್ಯಾಕರಣ ನಿಯಮಗಳಿವೆ; ಅವನ್ನೇ ಇಂತಹ ಕನ್ನಡ ವ್ಯಾಕರಣಗಳು ತಿಳಿಸಬೇಕು ಎಂಬುದನ್ನು ನಾನು ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ಪುಸ್ತಕದಲ್ಲಿ ವಿವರಿಸಿದ್ದೆ"**[೧೩೦] ಎನ್ನುತ್ತಾರೆ.

ಕನ್ನಡದಲ್ಲಿ ಈ ಬಗೆಯ ಪ್ರಭಾವಕ್ಕೆ ಕಾರಣಗಳೇನು ಎಂಬುದಕ್ಕೆ ಅವರು ಕೊಡುವ ಕಾರಣ ಹೀಗಿದೆ: **"ಕನ್ನಡದ ವ್ಯಾಕರಣ ಪುಸ್ತಕಗಳಲ್ಲಿ ಈ ತಪ್ಪನ್ನು ಯಾಕೆ ಮಾಡಲಾಗುತ್ತದೆ ಎಂಬುದಕ್ಕೆ ವಿವರಣೆ ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪ್ರಾಚೀನ ವೈಯಾಕರಣಿಗಳು ಹಳೆಗನ್ನಡದ ಮೇಲೆ ಬರೆದಿರುವ ವ್ಯಾಕರಣ ಗ್ರಂಥಗಳಲ್ಲಿದೆ. ಈ ವೈಯಾಕರಣಿಗಳು ಮೊದಲಿಗೆ ಸಂಸ್ಕೃತ ವ್ಯಾಕರಣಗಳನ್ನು ಆಳವಾಗಿ ಅಭ್ಯಸಿಸಿದ್ದರು; ಅನಂತರ ಕನ್ನಡಕ್ಕೂ ಅಂತಹವೇ ಆದ ವ್ಯಾಕರಣಗಳ ಅವಶ್ಯಕತೆಯಿದೆ ಎಂಬುದನ್ನು ಮನಗಂಡು ಈ ಗ್ರಂಥಗಳನ್ನು ಬರೆದಿದ್ದರು"**[೧೩೧]ಎನ್ನುತ್ತಾರೆ.

ಮೇಲಿನ ರೀತಿಯಲ್ಲಿ ಕನ್ನಡದಲ್ಲಿ ವ್ಯಾಕರಣಗಳನ್ನು ಬರೆಯುವುದಕ್ಕೆ ತಕರಾರು ತೆಗೆಯುವ ಡಿ. ಎನ್. ಶಂಕರ ಬಟ್ ಅವರು, **"ನಿಜಕ್ಕೂ ಹಳೆಗನ್ನಡ ವ್ಯಾಕರಣವೊಂದನ್ನು ರಚಿಸುವಲ್ಲಿ ಸಂಸ್ಕೃತ ವ್ಯಾಕರಣ ಅಷ್ಟೊಂದು ಉತ್ತಮವಾದ ಮಾದರಿಯಲ್ಲ. ಇದಕ್ಕೆ ಕಾರಣವೇನು ಎಂದರೆ, ಸಂಸ್ಕೃತ ಇಂಡೋ – ಆರ್ಯನ್ ಭಾಷಾಕುಟುಂಬಕ್ಕೆ ಸೇರಿದೆ ಮತ್ತು ಕನ್ನಡ ಅದಕ್ಕಿಂತ ತೀರ ಭಿನ್ನವಾದ ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದೆ; ಈ ಎರಡು ಭಾಷಾ ಕುಟುಂಬಗಳ ನಡುವೆ ವ್ಯಾಕರಣದ ಮೂಲತತ್ವಗಳಲ್ಲೇನೇ ಹಲವು ಮುಖ್ಯವಾದ ವ್ಯತ್ಯಾಸಗಳಿವೆ"**[೧೩೨] ಎಂದು ಅಭಿಪ್ರಾಯಪಡುತ್ತಾರೆ.

ನಾಗವರ್ಮ, ಕೇಶಿರಾಜ, ಭಟ್ಟಾಕಳಂಕ ಮೊದಲಾದ ಪ್ರಾಚೀನ ವೈಯಾಕರಣಿಗಳ ದಾರಿಯಲ್ಲಿ ಸಾಗುತ್ತಿರುವುದರಿಂದಾಗಿ ಕನ್ನಡದಲ್ಲೇ ಕನ್ನಡದ ವ್ಯಾಕರಣ ನಿಯಮಗಳನ್ನು ರಚಿಸಲು ಸಾಧ್ಯವಾಗಿಲ್ಲ ಎನ್ನುವ ಅವರು, ಕನ್ನಡದಲ್ಲೇ ಕನ್ನಡದ ವ್ಯಾಕರಣ ಬರೆಯಲು ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟ ಅವರು ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹುದು ಎಂಬ ಕೃತಿಯಲ್ಲಿ ವ್ಯಾಕರಣಗಳನ್ನು ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಮೊದಲನೆಯದನ್ನು ಅರಿವಿಗೆ ಎಟಕದ ನಿಯಮಾವಳಿ ಮತ್ತು ಎರಡನೆಯದಾದ ಅರಿವಿಗೆ ಎಟಕುವ ನಿಯಮಮಾವಳಿ ಎಂದು ಕರೆಯುತ್ತಾರೆ. ಅವರ ಪ್ರಕಾರ: **"ವ್ಯಾಕರಣ ಎಂಬ ಪದವನ್ನು 'ಅರಿವಿಗೆ ಎಟಕದ ನಿಯಮಾವಳಿ ಮತ್ತು 'ಅರಿವಿಗೆ ಎಟಕುವ ನಿಯಮಾವಳಿ' ಎಂಬುದಾಗಿ ಎರಡು ಅರ್ಥಗಳಲ್ಲಿ ಬಳಸಲು ಸಾಧ್ಯವಿದೆ. ಇವುಗಳಲ್ಲಿ ಮೊದಲನೆಯ ಅರ್ಥವಿರುವ 'ವ್ಯಾಕರಣ'ವನ್ನು ಭಾಷೆಯನ್ನು ಬಳಸುವವರೆಲ್ಲರೂ ತಿಳಿದಿರುತ್ತಾರೆ ಮತ್ತು**

ಇಂತಹ ವ್ಯಾಕರಣಗಳು ಎಲ್ಲಾ ಭಾಷೆಗಳಿಗೂ ಇದ್ದೇ ಇರುತ್ತವೆ"[೧೩೩] ಎನ್ನುತ್ತಾರೆ. ಮುಂದುವರೆದು, ಅರಿವಿಗೆ ಎಟಕದ ನಿಯಮಾವಳಿಯನ್ನು ಅರಿವಿಗೆ ಎಟಕುವಂತೆ ಮಾಡುವುದಕ್ಕಾಗಿ ವಿದ್ವಾಂಸರು ವ್ಯಾಕರಣ ಗ್ರಂಥಗಳನ್ನು ರಚಿಸುತ್ತಾರೆ. ಈ ಗ್ರಂಥಗಳಲ್ಲಿ ಒಂದು ಭಾಷೆಯ ಪದ, ಪದರೂಪ, ವಾಕ್ಯ ಮೊದಲಾದವುಗಳ ತಯಾರಿಕೆಯಲ್ಲಿ ಎಂತಹ ನಿಯಮಗಳನ್ನೆಲ್ಲ ಬಳಸಬೇಕಾಗುತ್ತದೆ ಎಂಬುದನ್ನು ವಿವರಿಸಿ ಹೇಳಲಾಗುತ್ತದೆ. ಇವು ಮೇಲೆ ಸೂಚಿಸಿರುವ ಎರಡನೆಯ ಅರ್ಥದ ವ್ಯಾಕರಣಗಳು. ಇಂತಹ ವ್ಯಾಕರಣ ಗ್ರಂಥಗಳನ್ನು ಸದ್ಯಕ್ಕೆ ಕೆಲವೇ ಕೆಲವು ಭಾಷೆಗಳಿಗೆ ಮಾತ್ರ ಬರೆಯಲು ಸಾಧ್ಯವಾಗಿದೆ ಎನ್ನುತ್ತಾರೆ.

ಈ ಮೂಲಕ ಕನ್ನಡದ ಜಾಯಮಾನಕ್ಕೂ ಸಂಸ್ಕೃತದ ಜಾಯಮಾನಕ್ಕೂ ಒಂದೇ ಬಗೆಯ ವ್ಯಾಕರಣವನ್ನು ಅನ್ವಯಿಸುವುದು ಸಾಧ್ಯವಿಲ್ಲ ಮತ್ತು ಸಾಧುವಲ್ಲ ಎಂಬ ಅಭಿಪ್ರಾಯವನ್ನು ಡಿ. ಎನ್. ಶಂಕರ ಬಟ್ಟರು ವ್ಯಕ್ತಪಡಿಸುತ್ತಾರೆ. ಅವರ ಪ್ರಕಾರ: **"ಸಂಸ್ಕೃತ ಭಾಷೆಯಲ್ಲಿ ಬಳಕೆಯಾಗುವ ವ್ಯಾಕರಣದ ಮೂಲತತ್ವಗಳಲ್ಲಿ ಹೆಚ್ಚಿನವನ್ನೂ ಅದು ಇಂಡೋ – ಯೂರೋಪಿಯನ ಮೂಲಭಾಷೆಯಿಂದ ಆನುವಂಶಿಕವಾಗಿ ಪಡೆದಿದೆ ಮತ್ತು ಕನ್ನಡ ಭಾಷೆಯಲ್ಲಿ ಬಳಕೆಯಾಗುವ ವ್ಯಾಕರಣದ ಮೂಲತತ್ವಗಳಲ್ಲಿ ಹೆಚ್ಚಿನವನ್ನೂ ಅದು ದ್ರಾವಿಡ ಮೂಲಭಾಷೆಯಿಂದ ಆನುವಂಶಿಕವಾಗಿ ಪಡೆದಿದೆ. ಈ ಎರಡು ಮೂಲಭಾಷೆಗಳು ಒಂದಕ್ಕಿಂತ ಒಂದು ತೀರ ಭಿನ್ನವಾಗಿದ್ದುವಾದ ಕಾರಣ ಅವುಗಳಿಂದ ಈ ಭಾಷೆಗಳು ಪಡೆದಿರುವ ವ್ಯಾಕರಣದ ಮೂಲತತ್ವಗಳ ಒಂದಿಕ್ಕಿಂತ ಒಂದು ತೀರ ಭಿನ್ನವಾಗಿವೆ"**[೧೩೪] ಎಂದು ಅಭಿಪ್ರಾಯಪಡುತ್ತಾರೆ.

ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹುದು? ಎಂಬ ಕೃತಿಯಲ್ಲಿ ಪೀಠಿಕೆ, ಮುಕ್ತಾಯ ಸೇರಿ ೧೨ ಅಧ್ಯಾಯಗಳಿದ್ದು, ಪಾರಿಭಾಷಿಕ ಪದಗಳ ಬಳಕೆ, ವರ್ಣಗಳ ಬಳಕೆ, ಪದವರ್ಗಗಳು, ಪದಗಳ ಒಳರಚನೆ, ನಾಮಪದಗಳ ಸ್ವರೂಪ, ಲಿಂಗ ಮತ್ತು ವಚನಗಳು, ವಿಭಕ್ತಿಗಳು ಮತ್ತು ಕಾರಕಗಳು, ಕ್ರಿಯಾರೂಪಗಳು, ವಾಕ್ಯಗಳ ಜೋಡಣೆ ಮತ್ತು ವಿಷಯವಾಕ್ಯಗಳು ಎಂಬ ಅಧ್ಯಾಯಗಳಲ್ಲಿ ಕನ್ನಡ ಮತ್ತು ಸಂಸ್ಕೃತ ವ್ಯಾಕರಣಗಳ ನಡುವೆ ಇರುವ ಅಂತರವನ್ನು ವಿವರಣೆಗಳ ಸಹಿತ ಸಾಬೀತುಪಡಿಸಿದ್ದಾರೆ.

"ಕೇಶಿರಾಜನು ವ್ಯಾಕರಣವನ್ನು ರಚಿಸುವ ಕಾಲಲ್ಲಿ ಗ್ರಂಥರಚನೆಯಲ್ಲಿ ಬಳಕೆಯಾಗುತ್ತಿದ್ದ ಹಳೆಗನ್ನಡ ಭಾಷಾ ಪ್ರಭೇದ ಮಾತಿನಲ್ಲಿ ಬಳಕೆಯಲ್ಲಿದ್ದ ಪ್ರಭೇದಕ್ಕಿಂತ ಭಿನ್ನವಾಗಿದ್ದಿರಬೇಕು. ಈ ಕಾರಣಕ್ಕಾಗಿ ಆತನು ತನ್ನ ವ್ಯಾಕರಣ ನಿಯಮಗಳಿಗೆ ಮಾತಿನಲ್ಲಿ ಬಳಕೆಯಾಗುವ ವಾಕ್ಯಗಳನ್ನು ಆಧಾರವಾಗಿ ಕೊಡುವ ಬದಲು ಗ್ರಂಥಗಳಲ್ಲಿ ಕಂಡುಬರುವ ಪ್ರಯೋಗಗಳನ್ನು ಆಧಾರವಾಗಿ ಕೊಡುವ ಅವಶ್ಯಕತೆಯುಂಟಾಗಿತ್ತು"[೧೩೫] ಎನ್ನುವ ಅವರು, ಎನ್ನುವ ಅವರು, ಸುಮಾರು ೩೫೦ ವರ್ಷಗಳಷ್ಟು ದೀರ್ಘವಾದ ಅವಧಿಯಲ್ಲಿ ರಚಿತವಾದ ಹಳೆಗನ್ನಡ ಗ್ರಂಥಗಳನ್ನು ಆತನು ತನ್ನ ವ್ಯಾಕರಣಕ್ಕೆ ಆಕರಗಳನ್ನಾಗಿ ಬಳಸಿದ್ದಾನೆ. ಈ ದೀರ್ಘವಾದ ಅವಧಿಯಲ್ಲಿ ಹಳೆಗನ್ನಡ ಹಲವು ರೀತಿಯ ಬದಲಾವಣೆಗಳನ್ನು ಕಂಡಿದ್ದು ಅವುಗಳಲ್ಲಿ ಕೆಲವು ಗ್ರಂಥಗಳನ್ನೂ ಬಾಧಿಸಿವೆ. ಆದರೆ, ಕೇಶಿರಾಜನಿಗೆ

ಇವನ್ನು 'ಭಾಷೆಯಲ್ಲಿ ನಡೆದ ಬದಲಾವಣೆ'ಗಳೆಂಬುದಾಗಿ ಪರಿಗಣಿಸಲು ಸಾಧ್ಯವಾಗಿರಲಿಲ್ಲ ಎಂದು ಎಚ್ ಎಸ್ ಬಿಳಿಗಿರಿಯವರ ಮಾತುಗಳನ್ನು ಉಲ್ಲೇಖಿಸುತ್ತಾರೆ.

ಒಟ್ಟಿನಲ್ಲಿ ಕನ್ನಡ ವ್ಯಾಕರಣಗಳು ಮತ್ತು ವೈಯಾಕರಣಿಗಳು ಸಂಸ್ಕೃತ ವ್ಯಾಕರಣ ಪರಂಪರೆಯನ್ನು ಅನುಸರಿಸಿರುವುದಕ್ಕೆ ಅವರು ಸಾಕಷ್ಟು ವಿವರಣೆಗಳನ್ನು ಮತ್ತು ಉದಾಹರಣೆಗಳನ್ನು ಈ ಕೃತಿಯುದ್ದಕ್ಕೂ ನೀಡಿದ್ದಾರೆ. **"ಅಂತಹ ಐತಿಹಾಸಿಕ ದೃಷ್ಟಿಯಿಲ್ಲದಿದ್ದುದು ಆತನ ವ್ಯಾಕರಣಕ್ಕೆ ಹಲವು ರೀತಿಯ ಸಮಸ್ಯೆಗಳನ್ನು ತಂದೊಡ್ಡಿದೆ. ಆತನು ವ್ಯಾಕರಣಕ್ಕೆ ಆಧಾರವಾಗಿ ಬಳಸಿದಂತಹ ಗ್ರಂಥಗಳಲ್ಲಿ ಕಾಣಿಸುವ 'ಬದಲಾವಣೆ'ಗಳಲ್ಲಿ ಕೆಲವನ್ನು ವಿಕಲ್ಪಗಳೆಂದು ಪರಿಗಣಿಸಿರುವನಾದರೆ ಇನ್ನು ಕೆಲವನ್ನು ತಪ್ಪು ಎಂದು ಸಾರಿದ್ದಾನೆ. ವಿಕಲ್ಪಗಳೆಂದು ಪರಿಗಣಿಸಿರುವಲ್ಲೆಲ್ಲ ಅನವಶ್ಯಕವಾಗಿ ವ್ಯಾಕರಣ ನಿಯಮಗಳನ್ನು ಕಲ್ಪಿಸಬೇಕಾಗಿದೆಯಾದ ಕಾರಣ, ಅದರಿಂದಾಗಿ ಆತನ ವ್ಯಾಕರಣ ಕ್ಲಿಷ್ಟವಾಗಿದೆ"**[೧೩೬] ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಮೂಲಕ ಕೇಶಿರಾಜನನ್ನು ಅನುಸರಿಸಿ ರಚನೆಯಾಗಿರುವ ಎಲ್ಲ ವ್ಯಾಕರಣಗಳು ಅನವಶ್ಯಕವಾಗಿ ಕ್ಲಿಷ್ಟಕರವಾಗಿವೆ ಎಂದು ಅವರು ವಾದಿಸಿದ್ದಾರೆ.

ಸಂಸ್ಕೃತ ವ್ಯಾಕರಣವನ್ನು ಆಧರಿಸಿ ಕನ್ನಡದಲ್ಲಿ ವ್ಯಾಕರಣ ರಚಿಸಿದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಯೊಂದರ ಕುರಿತು ಅವರು ಹೀಗೆ ಅಭಿಪ್ರಾಯಪಡುತ್ತಾರೆ: **"ವ್ಯಾಕರಣವೊಂದನ್ನು ಸಂಸ್ಕೃತದಲ್ಲಿ ಬರೆದಿದೆಯಾದರೆ, ಅದರಲ್ಲಿ ಈ ರೀತಿ ಸಂಸ್ಕೃತದವೇ ಆದ ಪಾರಿಭಾಷಿಕ ಪದಗಳನ್ನು ಬಳಸುವುದರಲ್ಲಿ ಔಚಿತ್ಯವಿದೆ. ಆದರೆ, ಕನ್ನಡದಲ್ಲಿ ವ್ಯಾಕರಣವನ್ನು ಬರೆಯುವವರು ಅವಶ್ಯವಿರುವಲ್ಲಿ ಪಾರಿಭಾಷಿಕ ಪದಗಳನ್ನೆಲ್ಲ ಆದಷ್ಟು ಮಟ್ಟಿಗೆ ಕನ್ನಡದಲ್ಲೇನೇ ತಯಾರಿಸಿಕೊಳ್ಳುವ ಅವಶ್ಯಕತೆಯಿದೆಯಲ್ಲವೇ? ಹಾಗೆ ತಯಾರಿಸಲು ಸಾಧ್ಯವಿಲ್ಲವಾದಲ್ಲಿ ಮಾತ್ರ ಅವನ್ನು ಸಂಸ್ಕೃತದಿಂದ ಇಲ್ಲವೇ ಬೇರೊಂದು ಭಾಷೆಯಿಂದ ಎರವಲಾಗಿ ಪಡೆದುಕೊಳ್ಳಬೇಕು. ಕನ್ನಡದಲ್ಲಿ ಹಳೆಗನ್ನಡಕ್ಕೆ ಇಲ್ಲವೇ ಹೊಸಗನ್ನಡಕ್ಕೆ ವ್ಯಾಕರಣವನ್ನು ಬರೆಯಲು ಪ್ರಯತ್ನಿಸುವವರೆಲ್ಲರೂ ಈ ವಿಷಯವನ್ನು ಗಮನದಲ್ಲಿರಿಸುವುದು ಅವಶ್ಯ ಎಂದು ನನಗೆ ತೋರುತ್ತದೆ. ಹೀಗೆ ಮಾಡುವುದರಿಂದ ಹಲವು ರೀತಿಯ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿದೆ"**[೧೩೭] ಎನ್ನುತ್ತಾರೆ.

ಡಿ. ಎನ್. ಶಂಕರ ಬಟ್ ಅವರ ಪ್ರಕಾರ:

೧. ಕನ್ನಡದವೇ ಆದ ಪಾರಿಭಾಷಿಕ ಪದಗಳನ್ನು ಬಳಸುವುದರಿಂದ ಸಂಸ್ಕೃತ ಗೊತ್ತಿಲ್ಲದವರಿಗೆ ಕನ್ನಡ ವ್ಯಾಕರಣವನ್ನು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ.

೨. ಕೆಲವು ಪಾರಿಭಾಷಿಕ ಪದಗಳು ಸಂಸ್ಕೃತದಲ್ಲಿ ಬಳಕೆಯಾಗುವ ವ್ಯಾಕರಣದ ಮೂಲ ತತ್ವಗಳ ಮೇಲೆ ಅವಲಂಬಿತವಾಗಿದ್ದು, ಕನ್ನಡ ವ್ಯಾಕರಣಕ್ಕೆ ಅನುಕೂಲವಾದುವಲ್ಲ. ಅವನ್ನು ಬಳಸುವುದರಿಂದ ಸಂಸ್ಕೃತ ಮತ್ತು ಕನ್ನಡ ಭಾಶೆಗಳ ನಡುವೆ ಈ ಮೂಲತತ್ವಗಳ ಮಟ್ಟಿಗೆ ವ್ಯತ್ಯಾಸವಿದೆಯೆಂಬ ವಿಷಯ ಸ್ಪಷ್ಟವಾಗುವುದಿಲ್ಲ.

೩. ಪದ ಮತ್ತು ಶಬ್ದ ಎಂಬೆರೆಡು ಪಾರಿಭಾಷಿಕ ಪದಗಳ ನಡುವಿರುವ ವ್ಯತ್ಯಾಸ ಇನ್ನೊಂದು ರೀತಿಯದು. ಸಂಸ್ಕೃತ ವ್ಯಾಕರಣದಲ್ಲಿ ಸುಪ್ ಮತ್ತು ತಿಙ್ ಎಂಬ ಎರಡು ರೀತಿಯ

ಪ್ರತ್ಯಯಗಳೊಂದಿಗೆ ಬರುವವುಗಳನ್ನು ಮಾತ್ರ ಪದಗಳೆಂದು ಕರೆಯಬೇಕೆಂಬ ನಿಯಮವನ್ನು ಮಾಡಲಾಗಿದೆ. ಈ ಪ್ರತ್ಯಯಗಳು ಸೇರಿಲ್ಲವಾದರೆ ಅದನ್ನು ಶಬ್ದ ಎಂದು ಕರೆಯಬಹುದು. ಆದರೆ, ಸಂಸ್ಕೃದಲ್ಲೇನೇ ಈ ನಿಯಮಗಳನ್ನು ಅಷ್ಟೊಂದು ಕಟ್ಟುನಿಟ್ಟಾಗಿ ಅನುಸರಿಸಿಲ್ಲ. ಕೆಲವೆಡೆಗಳಲ್ಲಿ ಶಬ್ದ ಎಂಬರ್ಥದಲ್ಲೂ ಪದ ಎಂಬುದನ್ನು ಬಳಸಲಾಗುತ್ತದೆ.

೪. ಕನ್ನಡದಲ್ಲಿ ಬಳಕೆಯಾಗುವ ಪದಗಳಲ್ಲಿ ಯಾವುದು ತಪ್ಪು ಮತ್ತು ಯಾವುದು ಸರಿ ಎಂಬ ವಿಷಯದಲ್ಲೂ ಕನ್ನಡದ್ದೇ ಆದ ನಿಯಮಗಳಿವೆ. ಇವು ಸಂಸ್ಕೃತದ ನಿಯಮಗಳಿಗಿಂತ ಭಿನ್ನವಾಗಿರಲು ಸಾಧ್ಯವಿದೆಯಾದ ಕಾರಣ, ಕನ್ನಡ ಬರಹಗಳ ಮೇಲೆ ಸಂಸ್ಕೃತದ ನಿಯಮಗಳನ್ನು ಹೇರುವುದು ಸರಿಯಲ್ಲ. ಹಲವರು ಸಂಸ್ಕೃತ ವಿದ್ವಾಂಸರು ಈ ವಿಷಯವನ್ನು ಗಮನಿಸುವುದಿಲ್ಲ ಎಂದು ಅವರು ಹೇಳುತ್ತಾರೆ. ಈ ೪ ವಿಭಾಗಗಳಿಗೂ ಅವರು ಪ್ರತ್ಯೇಕ ಉದಾಹರಣೆಗಳನ್ನು ನೀಡುತ್ತಾರೆ.

ಡಿ. ಎನ್. ಶಂಕರ ಬಟ್ಟರ ಚಿಂತನೆಗಳಿಗೆ ಪೂರಕವಾಗಿ ಕೆ. ವಿ. ನಾರಾಯಣ ಅವರು ಮಹತ್ವದ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಅವರ ಇತ್ತೀಚಿನ ಕೃತಿಯಾದ 'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡದ ಪದಗಳು' ಕೃತಿಯಲ್ಲಿ ಸಂಸ್ಕೃತ ಪದಗಳಿಗೆ ಬದಲಾಗಿ ಕನ್ನಡ ಪದಗಳನ್ನು ಬಳಸಲು ಸಾಧ್ಯವಿದೆ ಎಂದು ಸಾಬೀತುಪಡಿಸಿದ್ದಾರೆ. ಅವರ ಪ್ರಕಾರ: "ಕನ್ನಡ ಬರವಣಿಗೆಯಲ್ಲಿ ಬಳಕೆಯಾಗುವ ಪದಕೋಶ ಎಂತಹದಿರಬೇಕೆಂಬ ಬಗೆಗೆ ಚರ್ಚೆ ಸುಮಾರು ಹನ್ನೆರಡು ಶತಮಾನಗಳಿಂದ ನಡೆಯುತ್ತಿದೆ. ಕವಿರಾಜಮಾರ್ಗಕಾರನೇ ಸಂಸ್ಕೃತ ಪದಗಳನ್ನು ಬಳಸುವುದು ಬೇಡವೆಂದು ಹೇಳಲಿಲ್ಲವಾದರೂ ಹಾಗೆ ಬಳಕೆಯಾಗುವ ಪದಗಳು ಕನ್ನಡದ ನಡೆಗೆ ಸರಿಹೊಂದುವಂತೆ ಇರಬೇಕೆಂದು ಹೇಳಿದ್ದಾನೆ. ಹಾಗೆ ಸರಿಹೊಂದುವ ಪದಗಳ ಚಹರೆಯನ್ನು ಕೂಡ ಅಷ್ಟಿಷ್ಟು ಪಟ್ಟಿ ಮಾಡಿಕೊಟ್ಟಿದ್ದಾನೆ. ಮುಂದೆ ಈ ಚರ್ಚೆ ಹಲವು ನೆಲೆಗಳಲ್ಲಿ ಮುಂದುವರೆಯುತ್ತ ಬಂದಿದೆ"[೧೩೮] ಎನ್ನುತ್ತಾರೆ. ಈ ಮೂಲಕ ಡಿ ಎನ್ ಶಂಕರ ಬಟ್ಟರ ಚಿಂತನೆಗಳನ್ನು ಸಮರ್ಥಿಸಿದ್ದಾರೆ.

'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ' ಎಂಬ ಕೃತಿಯಲ್ಲಿ ಡಿ. ಎನ್. ಶಂಕರ ಬಟ್ಟರು ಕನ್ನಡದಲ್ಲಿ ಬೋಧಿಸುತ್ತಿರುವ ವ್ಯಾಕರಣದ ಮಾದರಿಗಳ ಕುರಿತು ಹೀಗೆ ಅಭಿಪ್ರಾಯಪಟ್ಟಿದ್ದಾರೆ: **"ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ವ್ಯಾಕರಣವನ್ನು ಕಲಿಸುವ ಅವಶ್ಯಕತೆಯಿದೆಯೇ ಅಥವಾ ಇಲ್ಲವೇ? ಇದೆಯಾದರೆ ಅದನ್ನು ಯಾವ ರೀತಿಯಲ್ಲಿ ಕಲಿಸಬೇಕು? ನೇರವಾಗಿ ಕಲಿಸಬೇಕೇ ಅಥವಾ ಪದಗಳ ಮತ್ತು ವಾಕ್ಯಗಳ ಬಳಕೆಯನ್ನು ವಿವರಿಸುವುದರ ಮೂಲಕ ಪರೋಕ್ಷವಾಗಿ ಕಲಿಸಬೇಕೆ? ಇಂತಹ ಪ್ರಶ್ನೆಗಳಿಗೆ ಉತ್ತರವನ್ನು ಶಿಕ್ಷಣತಜ್ಞರೇ ಕೊಡಬೇಕು. ನಾನು ಶಿಕ್ಷಣ ತಜ್ಞನಲ್ಲ, ವೈಯಾಕರಣಿ ಮಾತ್ರ, ಹಾಗಾಗಿ, ಮೇಲಿನ ಪ್ರಶ್ನಗೆಗಳಿಗೆ ಉತ್ತರವನ್ನು ಹೇಳಲು ನಾನಿಲ್ಲಿ ಪ್ರಯತ್ನಿಸಿಲ್ಲ"**[೧೩೯] ಎಂದಿದ್ದಾರೆ. ಈ ಮೂಲಕ ಸದ್ಯಕ್ಕೆ ಕನ್ನಡದಲ್ಲಿ ಬೋಧಿಸಲಾಗುತ್ತಿರುವ ವ್ಯಾಕರಣದ ಕುರಿತು ಮಹತ್ವದ ಪ್ರಶ್ನೆಗಳನ್ನು ಕೇಳಿದ್ದಾರೆ. ಕಲಿಸಲಾಗುತ್ತಿರುವ ವ್ಯಾಕರಣದ ಅವಶ್ಯಕತೆ, ಕಲಿಸುವ ಮಾದರಿ ಇತ್ಯಾದಿಗಳನ್ನು ಕುರಿತು ಕನ್ನಡದಲ್ಲಿ ಇದುವರೆಗೆ ನಡೆದಿರುವ ಚರ್ಚೆಗಳನ್ನು ಈ ನಿಟ್ಟಿನಲ್ಲಿ ಸಮಗ್ರವಾಗಿ ಅಧ್ಯಯನ ನಡೆಸಬೇಕಾದ ಅಗತ್ಯವಿದೆ ಎನಿಸುತ್ತದೆ.

“ಕನ್ನಡದ ಮಟ್ಟಿಗೆ ಎಂತಹ ವ್ಯಾಕರಣವನ್ನು ಕಲಿಸಬೇಕು? ಸದ್ಯಕ್ಕೆ ಪಠ್ಯಗಳಾಗಿರುವ ವ್ಯಾಕರಣ ಪುಸ್ತಕಗಳು ಈ ಕೆಲಸವನ್ನು ಸಮರ್ಪಕವಾಗಿ ನೆರವೇರಿಸುತ್ತಿವೆಯೇ? ಎಂಬಂತಹ ಪ್ರಶ್ನೆಗಳಿಗೆ ಉತ್ತರವನ್ನು ಒಬ್ಬ ವೈಯಾಕರಣಿ ಮಾತ್ರ ಕೊಡಬಲ್ಲ. ಕರ್ನಾಟಕದ ಶಿಕ್ಷಣ ತಜ್ಞರು ಈ ವಿಷಯದಲ್ಲಿ ಒಂದು ದೊಡ್ಡ ತಪ್ಪು ಮಾಡುತ್ತಿದ್ದಾರೆ. ಕನ್ನಡ ವ್ಯಾಕರಣವನ್ನು ಹೇಗೆ ಕಲಿಸಬೇಕು ಮತ್ತು ಎಷ್ಟು ಕಲಿಸಬೇಕು ಎಂಬುದನ್ನು ಮಾತ್ರವಲ್ಲದೇ, ಆ ಹೆಸರಿನಲ್ಲಿ ಏನು ಕಲಿಸಬೇಕು ಎಂಬುದನ್ನೂ ಅವರೇ ನಿರ್ಧರಿಸುವ ಹಾಗೆ ಕಾಣಿಸುತ್ತದೆ”[೧೪೦] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಸದ್ಯಕ್ಕೆ ಕಲಿಸಲಾಗುತ್ತಿರುವ ವ್ಯಾಕರಣವನ್ನು ನಿರ್ಧರಿಸುತ್ತಿರುವವರು ಯಾರು? ಇದರಿಂದ ಆಗುತ್ತಿರುವ ಸಮಸ್ಯೆಗಳೇನು? ವ್ಯಾಕರಣ ಬೋಧನೆಯನ್ನು ನಿರ್ಧರಿಸುವಲ್ಲಿ ವೈಯಾಕರಣಿಯ ಪಾತ್ರವೇನು? ಎಂಬ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಆದರೆ, ಶಿಕ್ಷಣ ತಜ್ಞರು ನಿರ್ಧರಿಸಲು ಅವಕಾಶ ಮಾಡಿಕೊಟ್ಟಿರುವ ಸರ್ಕಾರಗಳ ನಿರ್ಧಾರಗಳನ್ನು ಕೂಡ ಪ್ರಶ್ನಿಸಿದ್ದಾರೆ.

“ಕನ್ನಡ ವ್ಯಾಕರಣ ಎಂಬ ಹೆಸರಿನಲ್ಲಿ ಏನೇನೋ ಅನವಶ್ಯಕವಾದ ಮತ್ತು ತಪ್ಪು ತಪ್ಪಾದ ವಿಷಯಗಳನ್ನು ಕಲಿಸುವುದರ ಮೂಲಕ ಪ್ರೌಢಶಾಲೆಯ ವಿದ್ಯಾರ್ಥಿಗಳ ಅಮೂಲ್ಯವಾದ ಸಮಯವನ್ನು ಈ ಶಿಕ್ಷಣ ತಜ್ಞರು ಹಾಳುಮಾಡುತ್ತಿದ್ದಾರೆ. ಇದು ಹೇಗೆ ಎಂಬುದನ್ನು ನಾನು ಈ ಪುಸ್ತಕದಲ್ಲಿ ವಿವರಿಸಿ ತೋರಿಸಿದ್ದೇನೆ. ಇದನ್ನವರು ಒಮ್ಮೆಯಾದರೂ ಓದಿನೋಡಿ ತಾವು ಎಂತಹ ತಪ್ಪು ಮಾಡುತ್ತಿದ್ದೇವೆ ಎಂಬುದನ್ನು ತಿದ್ದಿಕೊಳ್ಳಲಿ ಎನ್ನುವುದು ನನ್ನ ಉದ್ದೇಶ. ವ್ಯಾಕರಣ ಶಿಕ್ಷಣದಲ್ಲಿ ಮತ್ತು ಕನ್ನಡ ವ್ಯಾಕರಣದಲ್ಲಿ ಆಸಕ್ತಿಯಿರುವ ಇತರರಿಗೂ ಈ ಪುಸ್ತಕ ರುಚಿಸಬಲ್ಲುದು”[೧೪೧] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಪ್ರೌಢಶಾಲೆಗಳಲ್ಲಿ ಬೋಧಿಸಲಾಗುತ್ತಿರುವ ವ್ಯಾಕರಣ ಪಠ್ಯಕ್ರಮಗಳ ಮಾದರಿಗಳಲ್ಲಿರುವ ಸಮಸ್ಯೆಯನ್ನು ಮಂಡಿಸಿದ್ದಾರೆ. ಸಂಧಿ, ಸಮಾಸ ಮೊದಲಾದ ಮಾದರಿಗಳನ್ನು ಕನ್ನಡದಲ್ಲಿ ಬೋಧಿಸುತ್ತಿರುವ ಕುರಿತು ಅನೇಕ ಪ್ರಶ್ನೆಗಳನ್ನು ಡಿ. ಎನ್. ಶಂಕರ ಬಟ್, ಕೆ. ವಿ. ನಾರಾಯಣ ಮೊದಲಾದವರು ಕೇಳುತ್ತಿದ್ದಾರೆ.

ವಿಶ್ವವಿದ್ಯಾಲಯಗಳಲ್ಲಿ ವ್ಯಾಕರಣಗಳ ಕುರಿತ ಸಂಶೋಧನೆ ಕುರಿತು ಅವರ ಅಭಿಪ್ರಾಯ ಹೀಗಿದೆ: “ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ವ್ಯಾಕರಣದ ಬಗ್ಗೆ ನಡೆಯುತ್ತಿರುವ ಸಂಶೋಧನೆಗಳು ಹೊಸದೇನನ್ನೂ ಕಂಡುಹಿಡಿಯುವ ಹಾಗೆ ಕಾಣಿಸುವುದಿಲ್ಲ. ಇದಕ್ಕೆ ಈ ಸಂಶೋಧನೆಗಳು ಹಾದಿ ತಪ್ಪಿರುವುದೇ ಕಾರಣವೆಂದು ನನ್ನ ಅಭಿಪ್ರಾಯ. ಕೇಶಿರಾಜನೇ ಮೊದಲಾದ ಹಿಂದಿನ ವೈಯಾಕರಣಿಗಳು ಕನ್ನಡ ವ್ಯಾಕರಣದ ಕುರಿತು ಏನು ಹೇಳಿದ್ದಾರೆ ಎಂಬುದನ್ನು ಅರ್ಥಮಾಡಿಕೊಂಡರೆ ಸಾಲದು. ಅವರು ಹೇಳಿರುವುದರಲ್ಲಿ ತಪ್ಪು ಇಲ್ಲವೇ ಅಸಾಂಗತ್ಯ ಏನಾದರೂ ಇದೆಯೇ? ಅವರು ಹೇಳದೇ ಇರುವಂತಹ ವಿಷಯಗಳೇನಾದರೂ ಇವೆಯೇ? ಎಂಬುದನ್ನು ಕಂಡುಹಿಡಿದಾಗ ಮಾತ್ರ ಅದು ಸಂಶೋಧನೆಯಾಗಲ್ಲುದು”[೧೪೨] ಎನ್ನುತ್ತಾರೆ. ಈ ಮೂಲಕ ಸದ್ಯಕ್ಕೆ ನಡೆಯುತ್ತಿರುವ ಸಂಶೋಧನೆಗಳಲ್ಲಿ ಪ್ರಾಚೀನ ವೈಯಾಕರಣಿಗಳ ಸಂಶೋಧನೆ ಕುರಿತು ಹೊಸ ಸಂಶೋಧನೆಗಳು ನಡೆಯುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಜೊತೆಗೆ ಕನ್ನಡ ಭಾಷೆಯಲ್ಲಿ ವ್ಯಾಕರಣ ಕುರಿತು ನಡೆಯುತ್ತಿರುವ ಸಂಶೋಧನೆಗಳು ಹೊಸದಿಕ್ಕಿನತ್ತ ಚಲಿಸಬೇಕು ಎಂಬ ಸಂಗತಿಯನ್ನು ಮಂಡಿಸಿದ್ದಾರೆ. ಈ ಮೂಲಕ

ಪಾರಂಪರಿಕ ದೃಷ್ಟಿಕೋನಕ್ಕಿಂತ ಭಿನ್ನವಾದ ದೃಷ್ಟಿಯಲ್ಲಿ ಅಧ್ಯಯನಗಳು ನಡೆಯಬೇಕು ಎನ್ನುವುದು ಅವರ ಅಭಿಪ್ರಾಯವಾಗಿದೆ.

ಕನ್ನಡ ವ್ಯಾಕರಣ ಕುರಿತು ನಡೆದಿರುವ ಸಂಶೋಧನೆ ಕುರಿತು ಉಲ್ಲೇಖಿಸುವ ಡಿ. ಎನ್. ಶಂಕರಬಟ್ಟರು, ಇದುವರೆಗೆ ರಚನೆಯಾಗಿರುವ ಕೃತಿಗಳನ್ನು ಹೀಗೆ ವಿಂಗಡಿಸಿದ್ದಾರೆ:

೧. ಕನ್ನಡವನ್ನು ಕಲಿಯಬಯಸುವವರು

೨. ಕನ್ನಡದ ಒಳಗುಟ್ಟನ್ನು ತಿಳಿಯಬಯಸುವವರು

೩. ಕನ್ನಡವನ್ನು ಇತರ ದ್ರಾವಿಡ ಇಲ್ಲವೇ ಆರ್ಯ ಭಾಷೆಯೊಂದಿಗೆ ಹೋಲಿಸಬಯಸುವವರು

೪. ಕನ್ನಡದ ಚರಿತ್ರೆಯನ್ನು ಅರಿಯಬಯಸುವವರು

ಮೇಲಿನ ನಾಲ್ಕು ಮಾದರಿಗಳಲ್ಲಿ ನಡೆದಿರುವ ಸಂಶೋಧನೆಗಳ ಕುರಿತು ಡಿ. ಎನ್. ಶಂಕರಬಟ್ಟರ ಅಭಿಪ್ರಾಯ ಹೀಗಿದೆ: **"ಕನ್ನಡ ವ್ಯಾಕರಣದ ಮೇಲೆ ಇಷ್ಟೆಲ್ಲಾ ಸಂಶೋಧನೆ ಮತ್ತು ಬರವಣಿಗೆಗಳು ನಡೆದಿವೆಯೆಂಬುದು ನಮಗೆ ಹಿಗ್ಗು ಮತ್ತು ಹೆಮ್ಮೆಗಳನ್ನು ತರಬಲ್ಲುದೇನೋ ನಿಜ. ಆದರೆ, ಈ ಪುಸ್ತಕಗಳು ಮತ್ತು ಬಿಡಿ ಬರಹಗಳು ನಿಜಕ್ಕೂ ಕನ್ನಡ ವ್ಯಾಕರಣದ ಒಳಗುಟ್ಟನ್ನು ತಿಳಿಸಿಕೊಡುವಲ್ಲಿ ಮತ್ತು ಅವನ್ನು ಬಳಸಿಕೊಳ್ಳುವುದರ ಮೂಲಕ ಓದುಗರ ಬೇರೆ ಬೇರೆ ಬೇಡಿಕೆಗಳನ್ನು ಪೂರೈಸುವುದರಲ್ಲಿ ಎಷ್ಟರ ಮಟ್ಟಿಗೆ ಸಮರ್ಥವಾಗಿವೆ ಎಂಬುದನ್ನು ಪರಿಶೀಲಿಸುವುದು ಅವಶ್ಯ. ಇದಕ್ಕಾಗಿ ಈ ಬರಹಗಳನ್ನು ಮೂರು ಮುಖ್ಯ ವ್ಯಾಕರಣ ಪರಂಪರೆಗಳಲ್ಲಿ ತಯಾರಾದವುಗಳೆಂಬುದಾಗಿ ವಿಂಗಡಿಸಿಕೊಳ್ಳಬಹುದು"**[೧೪೩] ಎನ್ನುತ್ತಾರೆ. ಈ ಮೂರನ್ನು ಹೀಗೆ ಹೆಸರಿಸಿದ್ದಾರೆ:

೧. ಸಂಸ್ಕೃತ ವ್ಯಾಕರಣ ಪರಂಪರೆ (ಇದರಲ್ಲಿ ಕೇಶಿರಾಜ, ಭಟ್ಟಾಕಳಂಕ, ಇನ್ನಿತರ ವೈಯಾಕರಣಿಗಳು ಮತ್ತು ಶಾಲಾಕಾಲೇಜುಗಳಲ್ಲಿ ಪಠ್ಯಗಳಾಗಿ ಬಳಕೆಯಾಗುತ್ತಿರುವ ಹೆಚ್ಚಿನ ವ್ಯಾಕರಣಗಳೂ ಸೇರುತ್ತವೆ)

೨. ೧೯ನೇ ಶತಮಾನದಿಂದ ಈಚೆಗೆ ಕ್ರಿಶ್ಚಿಯನ್ ಮಿಶನರಿಗಳು ಇಂಗ್ಲಿಷ್‌ನಲ್ಲಿ ಬರೆದಿರುವ ಹೊಸಗನ್ನಡ ವ್ಯಾಕರಣಗಳು (ಇವಕ್ಕೆ ಯೂರೋಪ್ ವ್ಯಾಕರಣ ಪರಂಪರೆ ಮಾದರಿ)

೩. ಕ್ರಿಶ್ಚಿಯನ್ ಮಿಶನರಿಗಳ ನಂತರ ಆಧುನಿಕ ಭಾಷಾ ವಿಜ್ಞಾನಿಗಳು ರಚಿಸಿರುವ ಕನ್ನಡ ವ್ಯಾಕರಣ ಗ್ರಂಥಗಳು (ಇವಕ್ಕೆ ಅಮೆರಿಕನ್ ಇಂಗ್ಲಿಷ್ ವ್ಯಾಕರಣ ಪರಂಪರೆ ಮಾದರಿ)

"ಕನ್ನಡದ ಈ ಮೂರು ಪರಂಪರೆಯ ವ್ಯಾಕರಣಗಳಲ್ಲೂ ನಮಗೆ ಕಂಡುಬರುವ ಒಂದು ಮುಖ್ಯವಾದ ಸಂಗತಿಯೇನೆಂದರೆ, ಇವು ಬೇರಾವುದೋ ಒಂದು ಭಾಷೆಯ ಎಂದರೆ, ಸಂಸ್ಕೃತ ಲ್ಯಾಟಿನ್ ಇಲ್ಲವೇ ಇಂಗ್ಲಿಷ್ ಭಾಷೆಯ ವ್ಯಾಕರಣ ಪರಂಪರೆಯನ್ನು ಅನುಸರಿಸಲು ಪ್ರಯತ್ನಿಸಿವೆಯಲ್ಲದೆ ಕನ್ನಡಕ್ಕೆ ಅದರದ್ದೇ ಆದ ಒಂದು ವ್ಯಾಕರಣ ಪರಂಪರೆಯನ್ನು ಬೆಳೆಸಿಕೊಡಲು ಪ್ರಯತ್ನಿಸಿಲ್ಲ. ಈ ಎಲ್ಲಾ

ವ್ಯಾಕರಣಗಳಲ್ಲೂ ಇದೊಂದು ಎದ್ದು ಕಾಣುವ ಕೊರತೆ"[೧೪೪] ಎನ್ನುತ್ತಾರೆ. ಈ ಮೂಲಕ ಕನ್ನಡ ವ್ಯಾಕರಣದಲ್ಲಿ ಕನ್ನಡದ್ದೇ ಆದ ವ್ಯಾಕರಣ ನಿಯಮಗಳನ್ನು ರಚಿಸಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತು ನಡೆದಿರುವ ಸಂಶೋಧನೆಗಳನ್ನು ಪ್ರಶ್ನಿಸಿದ್ದ ಅವರು, ವ್ಯಾಕರಣ ರಚನೆಯ ಮೂಲದಲ್ಲೇ ಕನ್ನಡದಲ್ಲಿ ನಡೆದ ಅನ್ಯ ಭಾಷೆಯ ಪ್ರಭಾವಗಳನ್ನು ಗುರುತಿಸಿದ್ದಾರೆ.

ಸಂಸ್ಕೃತ, ಲ್ಯಾಟಿನ್, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ನಡುವೆ ಇರುವ ವ್ಯತ್ಯಾಸವನ್ನು ಅವರು ಹೀಗೆ ಗುರುತಿಸಿದ್ದಾರೆ: **"ಕನ್ನಡ ಇದಕ್ಕಿಂತ ತೀರ ಭಿನ್ನವಾಗಿರುವ ದ್ರಾವಿಡ ಭಾಷಾಕುಟುಂಬಕ್ಕೆ ಸೇರಿರುವ ಭಾಷೆ. ಇದು ಬಳಸುವ ವ್ಯಾಕರಣದ ಮೂಲತತ್ವಗಳು ಸಂಸ್ಕೃತ, ಲ್ಯಾಟಿನ್, ಇಂಗ್ಲಿಷ್ ಮೊದಲಾದ ಇಂಡೋ-ಯೂರೋಪಿಯನ್ ಭಾಷೆಗಳು ಬಳಸುವ ವ್ಯಾಕರಣದ ಮೂಲತತ್ವಗಳಿಗಿಂತ ಭಿನ್ನವಾದವುಗಳು"**[೧೪೫] ಎನ್ನುತ್ತಾರೆ. ಅಲ್ಲದೇ, ಇಂತಹ ತೀರ ಭಿನ್ನವಾದ ಮೂಲತ್ವಗಳನ್ನು ಬಳಸುವ ಕನ್ನಡ ವ್ಯಾಕರಣದ ವೈಶಿಷ್ಟ್ಯಗಳನ್ನು ವಿವರಿಸಬೇಕಿದ್ದಲ್ಲಿ ಕನ್ನಡಕ್ಕೆ ಅದರದೇ ಆದ ವ್ಯಾಕರಣ ಪರಂಪರೆಯೊಂದನ್ನು ಬೆಳೆಸಿಕೊಳ್ಳುವ ಅವಶ್ಯಕತೆಯಿದೆ. ಸಂಸ್ಕೃತ ಇಲ್ಲವೇ ಇಂಗ್ಲಿಷ್ ಭಾಷೆಯ ವ್ಯಾಕರಣ ಪರಂಪರೆಯಲ್ಲಿ ಬರೆದ ಗ್ರಂಥಗಳು ಮತ್ತು ಲೇಖನಗಳು ಕನ್ನಡದವೇ ಆದ ವೈಶಿಷ್ಟ್ಯಗಳಿಗೆ ಹೆಚ್ಚಿನ ಗಮನ ಕೊಡಲಾರವು ಮತ್ತು ಕೊಟ್ಟಿಲ್ಲ ಎನ್ನುತ್ತಾರೆ. ಒಟ್ಟಿನಲ್ಲಿ ಸಂಸ್ಕೃತ, ಲ್ಯಾಟಿನ್, ಇಂಗ್ಲಿಷ್ ಮಾದರಿಯನ್ನು ಮಾನದಂಡವನ್ನಾಗಿಸಿಕೊಂಡು ಕನ್ನಡ ವ್ಯಾಕರಣವನ್ನು ರಚಿಸುವುದು ಉಚಿತವಲ್ಲ ಎನ್ನುವುದು ಅವರ ಖಚಿತ ಅಭಿಪ್ರಾಯವಾಗಿದೆ. ಇದಕ್ಕಾಗಿ ಅವರು ಈಗಾಗಲೇ ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಭಾಷಿಕ ಮೂಲದಿಂದ ಹಿಡಿದು, ರಚನೆಗಳವರೆಗೆ ಈ ಭಾಷೆಗಳಿಗೂ ಮತ್ತು ಕನ್ನಡ ಭಾಷೆಯ ನಡುವೆ ಅಗಾಧ ವ್ಯತ್ಯಾಸಗಳನ್ನು ಅವರು ಗುರುತಿಸಿದ್ದಾರೆ.

ಇನ್ನು ಬಹುಮುಖ್ಯವಾಗಿ ಸಂಸ್ಕೃತ ವ್ಯಾಕರಣವನ್ನು ಕನ್ನಡಕ್ಕೆ ಅನ್ವಯಿಸುವ ಮಾದರಿಯನ್ನು ಕನ್ನಡದಲ್ಲಿ ದೀರ್ಘ ಕಾಲದಿಂದ ಜಾರಿಗೆ ತರಲಾಗಿದೆ. ಈ ನಿಟ್ಟಿನಲ್ಲಿ ವೈಯಾಕರಣಿಗಳ ಭಾವನೆಗಳು ತಪ್ಪು ಎನ್ನುವುದು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯವಾಗಿದೆ. ಅವರ ಎರಡು ತಪ್ಪು ತಿಳಿವಳಿಕೆಯನ್ನು ಅವರು ಹೀಗೆ ಗುರುತಿಸಿದ್ದಾರೆ:

೧. ಪ್ರಾಕೃತ, ಅಪಭ್ರಂಶ, ಪಾಲಿ ಮೊದಲಾದವುಗಳ ಹಾಗೆ ಕನ್ನಡವೂ ಸಂಸ್ಕೃತದ ಒಂದು (ವಿಕೃತ) ರೂಪವೆಂಬ ಭಾವನೆ.

೨. ವ್ಯಾಕರಣದ ಮೂಲತತ್ವಗಳ ಮಟ್ಟಿಗೆ ಒಂದು ಭಾಷೆ ಇನ್ನೊಂದರಿಂದ ತೀರ ಭಿನ್ನವಾಗಿರಲು ಸಾಧ್ಯ ಎಂಬ ವಿಷಯದ ಕಡೆಗೆ ಗಮನ ಬಾರದಿರುವುದು.

ಆದರೆ, ಪ್ರಾಚೀನ ವೈಯಾಕರಣಿಗಳು ಕನ್ನಡದ ಕುರಿತು ತಪ್ಪು ತಿಳಿವಳಿಕೆ ಹೊಂದಿದ್ದಾರೆ ಎಂದು ಅವರು ಹೇಳುತ್ತಾರೆ. **"ಕನ್ನಡ ಸಂಸ್ಕೃತದ ವಿಕೃತ ರೂಪವಲ್ಲ, ಅದಕ್ಕಿಂತ ತೀರ ಭಿನ್ನವಾಗಿರುವ 'ದ್ರಾವಿಡ' ಎಂಬ ಹೆಸರಿನ ಬೇರೆಯೇ ಒಂದು ಭಾಷಾಕುಟುಂಬಕ್ಕೆ ಸೇರಿರುವ ಭಾಷೆ ಎಂಬ ವಿಷಯ ವೈಯಾಕರಣಿಗಳ ಅರಿವಿಗೆ ಬಂದುದು ಹತ್ತೊಂಬತ್ತನೆಯ ಶತಮಾನದ ನಡುಭಾಗದಲ್ಲಿ (ಕಾಲ್ಡ್‌ವೆಲ್ ೧೮೫೬). ಅನಂತರ ನಡೆದ ಭಾಷಾಭ್ಯಾಸಗಳು, ಅದರಲ್ಲೂ ಎಮೆನೋ ಮತ್ತು ಬರೋ ರಚಿಸಿದ ದ್ರಾವಿಡ ಜ್ಞಾತಿ ಪದಕೋಶ (ಎಮೆನೋ ಮತ್ತು ಬರೋ ೧೯೬೧) ಮತ್ತು ಕೃಷ್ಣಮೂರ್ತಿ ಇತ್ತೀಚಿಗೆ**

ಪ್ರಕಟಿಸಿದ ದ್ರಾವಿಡ ಭಾಷೆಗಳ ತೌಲನಿಕ ಅಧ್ಯಯನ (ಕೃಷ್ಣಮೂರ್ತಿ ೨೦೦೩) **ಈ ವಿಷಯದಲ್ಲಿ ಸ್ವಲ್ಪವೂ ಸಂದೇಹ ಉಳಿಯದ ಹಾಗೆ ಮಾಡಿವೆ"**[೧೪೭] ಎನ್ನುತ್ತಾರೆ. ಈ ಮೂಲಕ ಕನ್ನಡ ಭಾಷೆ ಮತ್ತು ಸಂಸ್ಕೃತ ಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ಇದಕ್ಕೆ ೧೮೫೬ರ ಕಾಲ್ಡ್‌ವೆಲ್, ೧೯೬೧ರ ಎಮೆನೋ, ಬರೋ ಹಾಗೂ ೨೦೦೩ರಲ್ಲಿ ಕೃಷ್ಣಮೂರ್ತಿಯವರ ಕೃತಿಗಳ ಕೊಡುಗೆಯನ್ನು ಸ್ಮರಿಸುತ್ತಾರೆ. ಒಟ್ಟಿನಲ್ಲಿ ಅವರ ವಾದದಲ್ಲಿ ಕನ್ನಡ ದ್ರಾವಿಡ ಮೂಲದ್ದು ಎಂಬ ಸಂಗತಿಯನ್ನು ಒತ್ತಿಹೇಳಿದ್ದಾರೆ.

ಇದರೊಂದಿಗೆ ಹಳಗನ್ನಡ ಮತ್ತು ಹೊಸಗನ್ನಡ ವ್ಯಾಕರಣಗಳ ನಡುವೆ ಭಿನ್ನತೆ ಇದೆ ಎಂದು ಅವರು ಗುರುತಿಸಿದ್ದಾರೆ. **"ನಿಜಕ್ಕೂ ಹೊಸಗನ್ನಡಕ್ಕೆ ಅದರದೇ ಆದ ಒಂದು ವ್ಯಾಕರಣವಿದೆ. ಇದು ಹಳೆಗನ್ನಡದ ವ್ಯಾಕರಣಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾಗಿದೆ. ಸಂಸ್ಕೃತ, ಇಂಗ್ಲಿಷ್ ಮೊದಲಾದ ಭಾಷೆಗಳ ವ್ಯಾಕರಣಗಳಿಗಿಂತ ಬಹಳಮಟ್ಟಿಗೆ ಭಿನ್ನವಾಗಿದೆ. ಈ ವ್ಯಾಕರಣ ಹೊಸಗನ್ನಡವನ್ನು ಸರಿಯಾಗಿ ಆಡಬಲ್ಲ ಮತ್ತು ಅದರಲ್ಲಿ ತಪ್ಪಿಲ್ಲದೆ ಬರೆಯಬಲ್ಲ ಎಲ್ಲಾ ವ್ಯಕ್ತಿಗಳ ಮಿದುಳಿನಲ್ಲೂ ಅವರ ಅರಿವಿಗೆ ಎಟಕದ ರೂಪದಲ್ಲಿ ಅಡಗಿರುತ್ತದೆ"**[೧೪೮] ಎನ್ನುತ್ತಾರೆ. ಹೊಸಗನ್ನಡ ಮತ್ತು ಹಳೆಗನ್ನಡಕ್ಕಿಂತ ಸ್ವಲ್ಪ ಭಿನ್ನತೆ ಮತ್ತು ಸಂಸ್ಕೃತ, ಇಂಗ್ಲಿಷ್ ಭಾಷೆಗಳ ವ್ಯಾಕರಣಗಳಿಗಿಂತ ಬಹಳ ಭಿನ್ನತೆ ಇರುವುದನ್ನು ಕುರಿತ ಡಿ. ಎನ್. ಶಂಕರ ಬಟ್ಟರ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಆಡುನುಡಿಯಲ್ಲಿ ಬಳಕೆಯಾಗುವ ವ್ಯಾಕರಣದ ಬದಲಾಗಿ, ಬರಹದ ಭಾಷೆಗೆ ವ್ಯಾಕರಣವನ್ನು ಅನ್ವಯಿಸುವುದನ್ನು ಡಿ. ಎನ್. ಶಂಕರ ಬಟ್ಟರು ಪ್ರಶ್ನಿಸುತ್ತಿದ್ದಾರೆ. ಇದಕ್ಕೆ ಉದಾಹರಣೆಯೆಂದರೆ, ಹಳ್ಳಿಯಿಂದ ನಗರ ಪ್ರದೇಶದವರೆಗೆ ಕನ್ನಡ ಮಾತನಾಡುವ ಬಹುತೇಕರು ವ್ಯಾಕರಣಾಂಶಗಳನ್ನು ಶಾಲೆಯಲ್ಲಿ ಕಲಿಯದೆಯೇ ನಿರರ್ಗಳವಾಗಿ ಮತ್ತು ವ್ಯಾಕರಣಬದ್ಧವಾಗಿ ಮಾತನಾಡಬಲ್ಲರು. ಆದರೆ, ಸದ್ಯಕ್ಕೆ ವ್ಯಾಕರಣಗಳು ಬರಹದ ಭಾಷೆಯನ್ನು ಅವಲಂಬಿಸಿ ರಚಿತವಾಗಿವೆ.

ಇಂಡೋ-ಆರ್ಯನ್ ಮತ್ತು ದ್ರಾವಿಡ ಭಾಷೆಗಳ ನಡುವಿನ ವ್ಯತ್ಯಾಸವನ್ನು ಅವರು ಹೀಗೆ ಗುರುತಿಸಿದ್ದಾರೆ: **"ಕನ್ನಡ, ತಮಿಳು, ಮಲೆಯಾಳ, ತೆಲುಗು ಮೊದಲಾದ ದ್ರಾವಿಡ ಭಾಷಾಕುಟುಂಬಕ್ಕೆ ಸೇರಿರುವ ಭಾಷೆಗಳು ಸಂಸ್ಕೃತಕ್ಕಿಂತ ತೀರ ಭಿನ್ನವಾಗಿರುವ ಭಾಷೆಗಳು. ಅವುಗಳ ವ್ಯಾಕರಣ ನಿಯಮಗಳು ಸಂಸ್ಕೃತದ ವ್ಯಾಕರಣ ನಿಯಮಗಳಿಗಿಂತ ತೀರ ಭಿನ್ನವಾದವುಗಳು. ಸಂಸ್ಕೃತಕ್ಕು ಅವಕ್ಕೂ ನಡುವಿರುವ ಸಂಬಂಧ ದೇವಸ್ಥಾನಕ್ಕು ಮತ್ತು ಊರಿನ ಬೇರೆಯೇ ಒಂದು ದಿಕ್ಕಿನಲ್ಲಿರುವ ಮನೆಗಳಿಗೂ ನಡುವಿರುವ ಸಂಬಂಧದ ಹಾಗೆ ಎನ್ನಬಹುದು. ಹಾಗಾಗಿ, ಅವುಗಳ ವ್ಯಾಕರಣವನ್ನು ಸಂಸ್ಕೃತ ವ್ಯಾಕರಣಕ್ಕೆ ಸಂಬಂಧಿಸಲು ಹೋಗದೆ ಪ್ರತ್ಯೇಕವಾಗಿ ಕಲಿಸುವುದೇ ಉತ್ತಮ"**[೧೪೯] ಎನ್ನುತ್ತಾರೆ. ಮುಂದಿನ ಅಧ್ಯಾಯಗಳಲ್ಲಿ ಸಂಧಿ (ಸೇರಿಕೆ), ನಾಮಪದ, ಗುಣಪದ, ವಿಶೇಷಣಗಳು, ಕೃದಂತ, ವಿಭಕ್ತಿ, ಸಮಾಸಗಳು, ಲಿಂಗಭೇದ, ವಚನಭೇದ, ಕಾರಕಗಳು, ಸರ್ವನಾಮಗಳು, ಕ್ರಿಯಾರೂಪಗಳು ಇತ್ಯಾದಿಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷಿಕ ರಚನೆಗಳ ನಡುವಿನ ವ್ಯತ್ಯಾಸಗಳನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ. ಈ ಮೂಲಕ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವಿನ ವ್ಯತ್ಯಾಸವನ್ನು ದಾಖಲಿಸಿದ್ದಾರೆ.

೫.೧೩. ಕೆ. ವಿ. ನಾರಾಯಣ ಅವರ ಭಾಷಿಕ ಬಿಡುಗಡೆಯ ಚಿಂತನೆಗಳು

ತೊಂಡುಮೇವು ಸಂಪುಟಗಳು ಮತ್ತು ಇತರ ಕೃತಿಗಳಲ್ಲಿ ಕೆ. ವಿ. ನಾರಾಯಣ ಅವರು ಮಂಡಿಸಿರುವ ಭಾಷಿಕ ಬಿಡುಗಡೆಯ ಚರ್ಚೆಗಳು ಡಿ. ಎನ್. ಶಂಕರ ಬಟ್ಟರ ಅಧ್ಯಯನಕ್ಕೆ ಪೂರಕವಾಗಿವೆ. ಆಧುನಿಕ ಸಂದರ್ಭದಲ್ಲಿ ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಆಮೂಲಾಗ್ರವಾಗಿ ಪರಿಗಣಿಸುವ ಪ್ರಯತ್ನ ಅಗತ್ಯವೆನಿಸುತ್ತದೆ. ಕೆ. ವಿ. ನಾರಾಯಣ ಅವರ ಚಿಂತನೆಗಳ ಸಮಗ್ರ ಅಧ್ಯಯನದಿಂದ ಭಾಷಿಕ ಬಿಡುಗಡೆಯ ಸಾಧ್ಯತೆಗಳನ್ನು ಮಂಡಿಸುತ್ತಿರುವುದನ್ನು ಕಾಣಬಹುದು. ಸಂಸ್ಕೃತ ವ್ಯಾಕರಣ ಪರಂಪರೆ ಹಾಗೂ ಭಾಷಿಕ ಪ್ರಾಬಲ್ಯವನ್ನು ಪ್ರಶ್ನಿಸುತ್ತಿರುವ ಡಿ. ಎನ್. ಶಂಕರ ಬಟ್ ಹಾಗೂ ಕೆ. ವಿ. ನಾರಾಯಣ ಅವರ ಕೃತಿಗಳನ್ನು ತೌಲನಿಕವಾಗಿ ಅಧ್ಯಯನ ನಡೆಸಬೇಕಾಗಿದೆ.

ಕೆ. ವಿ. ನಾರಾಯಣರವರು ಕನ್ನಡದ ಪ್ರಮುಖ ಭಾಷಾವಿಜ್ಞಾನಿಯಾಗಿ ಹೆಸರಾಗಿದ್ದಾರೆ. 'ಹುತ್ತವ ಬಡಿದರೆ'(೧೯೮೬), 'ದಿನದಿನ'(೧೯೯೭), 'ಬೇರು ಕಾಂಡ ಚಿಗುರು'(೧೯೯೮), 'ಭಾಷೆಯ ಸುತ್ತಮುತ್ತ'(೧೯೯೮), 'ಮತ್ತೆ ಭಾಷೆಯ ಸುತ್ತಮುತ್ತ'(೨೦೦೦), 'ಶೈಲಿಶಾಸ್ತ್ರ'(೨೦೦೪), 'ನಮ್ಮೊಡನೆ ನಮ್ಮ ನುಡಿ', 'ಕನ್ನಡ ಜಗತ್ತು ಅರ್ಧ ಶತಮಾನ'(೨೦೦೬), 'ಧ್ವನ್ಯಾಲೋಕದ ಓದು'(೨೦೦೯), 'ಕನ್ನಡದ ಆಡುನುಡಿಯ ಸೊಲ್ಲರಿಮೆ: ೧ – ಕನ್ನಡದ ಉಲಿಕಂತೆಗಳು'(೨೦೧೧), ಕೃತಿಗಳಲ್ಲದೆ ತೊಂಡುಮೇವು(೨೦೧೦) ಎಂಬ ಅವರ ಒಂಬತ್ತು ಸಮಗ್ರ ಸಂಪುಟಗಳು ಹಾಗೂ 'ತೊಡಕುಗಳು ಮತ್ತು ತೋರುದಾರಿ'(೨೦೧೨) (ಸಂ: ಡಾ.ಆರ್.ಚಲಪತಿ), 'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನ ಪದಗಳು'(೨೦೧೫) ಕೃತಿಗಳು ಹಾಗೂ 'ಕನ್ನಡಶೈಲಿ ಕೈಪಿಡಿ', 'ಭಾಷೆ ವಿಶ್ವಕೋಶ', 'ದಶವಾರ್ಷಿಕ ಸಾಹಿತ್ಯ ವಿಮರ್ಶೆ', 'ಅನ್ಯಜ್ಞಾನಶಿಸ್ತುಗಳು ಮತ್ತು ಕನ್ನಡ ಸಾಹಿತ್ಯ ಸಂಪಾದಿತ ಕೃತಿಗಳು ಮತ್ತು ಇಬ್ಬರು ಗೆಳೆಯರು, ಪಥ, ಪ್ರೀತಿಸುವುದೆಂದರೆ, ಅಂಕೆ ತಪ್ಪಿದ ಆರ್ಥರೋ ಊಯಿ ಅನುವಾದಿತ ಕೃತಿಗಳು ಪ್ರಕಟವಾಗಿವೆ.

ಕಾಲಾನುಕ್ರಮದಲ್ಲಿ ಕನ್ನಡ ನುಡಿಯಲ್ಲಾದ ಸೂಕ್ಷ್ಮ ಪಲ್ಲಟಗಳನ್ನು ಅವರ ಲೇಖನಗಳು ದಾಖಲಿಸುತ್ತವೆ. ಆಡುನುಡಿಯಿಂದ ಹಿಡಿದು ಪ್ರಮಾಣ ಭಾಷೆಯವರೆಗಿನ ಎಲ್ಲ ಬಗೆಯ ಸಂವಾದಗಳು ಇವರ ಲೇಖನಗಳಲ್ಲಿ ದಾಖಲಾಗಿವೆ. ಕನ್ನಡ ಪಡೆಯುವ ಭಾಷೆಯಾಗಬಾರದು, ಬದಲಾಗಿ ಕೊಡುವ ಭಾಷೆಯಾಗಬೇಕೆಂಬ ಆಶಯವನ್ನು ಹೊಂದಿರುವ ಕೆ. ವಿ. ನಾರಾಯಣರವರು ಕೆಲವು ಉಪಯುಕ್ತ ಚಿಂತನೆಗಳನ್ನು ಮಂಡಿಸುತ್ತಿದ್ದಾರೆ. ಅವರ ಅಭಿಪ್ರಾಯಗಳಲ್ಲಿ ಭಾವನಾತ್ಮಕತೆಯನ್ನು ಮೀರಿದ ತಿಳಿವಳಿಕೆಯಿದೆ.

ಡಿ. ಪಿ. ಪ್ರಹ್ಲಾದ್ ಅವರಿಗೆ ನೀಡಿದ 'ನಮ್ಮದು ಕೊಡುವ ಭಾಷೆಯಾಗಬೇಕು'[೧೯೯] ಎಂಬ ಸಂದರ್ಶನದಲ್ಲಿ ಜಗತ್ತಿನ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಿಸಿಕೊಳ್ಳುವಲ್ಲಿ ಇರುವ ಅತ್ಯುತ್ಸಾಹದ ಕುರಿತು ಭಿನ್ನಾಭಿಪ್ರಾಯಗಳನ್ನು ಹೀಗೆ ದಾಖಲಿಸುತ್ತಾರೆ: "ಈಚೆಗೆ ನನ್ನನ್ನು ಬಹಳವಾಗಿ ಕಾಡುತ್ತಿರುವ ಸಂಗತಿ ಇದು. ನಮ್ಮ ಭಾಷೆಗೆ ಎಲ್ಲವನ್ನೂ ಸ್ವೀಕರಿಸುವ ಉಮೇದಿನಲ್ಲಿ, ಪ್ರತಿಯೊಂದೂ ಕನ್ನಡಕ್ಕೆ

ಬರಬೇಕು ಅನ್ನುವ ಆಶಯದಲ್ಲಿ ಹಾಗೆ ಬಂದದ್ದು ಕನ್ನಡಕ್ಕೆ ಬಂದ ತಿಳುವಳಿಕೆ ಆಯ್ತೇ ಹೊರತು, ಕನ್ನಡದ ತಿಳುವಳಿಕೆ ಆಗಲಿಲ್ಲ. ನಾವು ಒಪ್ಪಿಕೊಂಡು ದೊಡ್ಡದಾಗಿ ಎಸ್ಟಾಬ್ಲಿಶ್ ಮಾಡ್ಕೊಂಡಿದ್ದೀವಿ. ತಿಳುವಳಿಕೆಯನ್ನು ಪಡಕೊಂಡಿದ್ದೀವಿ. ಅದರಿಂದ ಆಗಿರುವ ಅಪಾಯ ಎಂದರೆ ಸ್ವತಂತ್ರವಾಗಿ ಚಿಂತಿಸುವ ಸಾಧ್ಯತೆಯೇ ನಮಗಿಲ್ಲವಾಗಿದೆ."[೧೫೦]

ಮೇಲಿನ ಅವರ ಅಭಿಪ್ರಾಯಗಳು ಭಾರತೀಯ ಸಮುದಾಯದಲ್ಲಿ ಸ್ವತಂತ್ರ ಆಲೋಚನಾಕ್ರಮಗಳು ಏಕೆ ಇಲ್ಲಿ ಮೂಡಲಿಲ್ಲ ಎನ್ನುವುದರ ಕಡೆಗೆ ಚಲಿಸುತ್ತವೆ. ಧರ್ಮ, ಭಾಷೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ, ರಾಜಕಾರಣ, ಕಲೆ, ಸಾಹಿತ್ಯ ಇತ್ಯಾದಿ ಕ್ಷೇತ್ರಗಳಲ್ಲಿನ ಭಾರತೀಯರ ಸಾಧನೆಗಳ ಕೊರತೆಯನ್ನು ಅವರ ಮೇಲಿನ ಮಾತುಗಳಲ್ಲಿ ಮಂಡಿಸಿದ್ದಾರೆ. ಬೌದ್ಧ, ಜೈನ, ಲಿಂಗಾಯತ ಇತ್ಯಾದಿ ಧರ್ಮಗಳು ಭಾರತದಲ್ಲಿ ಹುಟ್ಟಿವೆ. ಬುದ್ಧ, ಮಹಾವೀರ, ಬಸವಣ್ಣ, ಮೋಹನದಾಸ್ ಕರಮ್‌ಚಂದ್ ಗಾಂಧಿ, ಅಂಬೇಡ್ಕರ್‌ರಂತಹ ಸಮಾಜ ಸುಧಾರಕರು ಹುಟ್ಟಿದ್ದಾರೆ. ಜಗತ್ತಿನ ಅತ್ಯಂತ ಹಳೆಯ ಹತ್ತು ಭಾಷೆಗಳಲ್ಲಿ ಕನ್ನಡ ಮತ್ತು ತಮಿಳು ಭಾಷೆಗಳಿವೆ. ಆದರೆ, ಕನ್ನಡದಲ್ಲಿ ಸ್ವತಂತ್ರವಾದ ಚಿಂತನೆಗಳು ರೂಪುಗೊಳ್ಳದಿರುವುದಕ್ಕೆ ಕಾರಣಗಳೇನಿರಬಹುದು? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ, ಆಗ ಅದಕ್ಕೆ ಸಿಗುವ ಉತ್ತರ ಭಾಷೆಗೆ ನೇರವಾಗಿ ಸಂಬಂಧಿಸಿದ್ದಾಗುತ್ತದೆ. ಭಾಷೆ ನಮ್ಮದಾಗದ ಹೊರತು ವಿಚಾರಗಳು ನಮ್ಮವಾಗಲಾರವು. ನಮ್ಮ ಭಾಷೆಯನ್ನು ಅರ್ಥೈಸಿಕೊಳ್ಳಲು ಅನ್ಯ ಭಾಷೆಯ ಮಾನದಂಡಗಳಿಂದ ಅಂದರೆ ವ್ಯಾಕರಣ ನಿಯಮಗಳಿಂದ ನಾವು ಬಿಡುಗಡೆ ಪಡೆಯಬೇಕಾಗಿದೆ. ಈ ವಿಚಾರಗಳನ್ನು ಕೆ. ವಿ. ನಾರಾಯಣ ಅವರು ನಿರಂತರವಾಗಿ ಮಂಡಿಸುತ್ತಿದ್ದಾರೆ. ಆದರೆ, ಈಗಾಗಲೆ ಸಾಕಷ್ಟು ಕಾಲದಿಂದ ಸಂಸ್ಕೃತ ವ್ಯಾಕರಣವನ್ನು ಓದಿ, ಕಲಿತು, ಬೋಧಿಸಿರುವ ಕೆಲವರು ಈ ಮುಖ್ಯವಾದ ಪ್ರಶ್ನೆಯನ್ನು ಅರಿಯದೆ, ಅದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ.

ಕನ್ನಡದಲ್ಲಿ ಸ್ವತಂತ್ರ ಚಿಂತನೆಗಳು ರೂಪುಗೊಳ್ಳುವ ಸಾಧ್ಯತೆಗಳಲ್ಲಿ ಅವರಿಗೆ ಅಪಾರವಾದ ನಂಬುಗೆಯಿದೆ. ಅವರ ಪ್ರಕಾರ: "ಯೂರೋಪಿನ ಒಬ್ಬರಿಂದ ಒಂದು ಚಿಂತನೆ ಸ್ವತಂತ್ರವಾಗಿ ಬರಬಹುದಾದರೆ ಕನ್ನಡದಲ್ಲೆ ಯಾಕೆ ಬರುವುದಿಲ್ಲ? ಬರಬೇಕು ಅನ್ನೋದು ಒಂದು ಗುರಿ ಅಷ್ಟೇ ಅಲ್ಲ, ಸಾಧ್ಯ ಇದೆ ಅಂತ ನಾವು ನಂಬಬೇಕು. ಆಗ ಕನ್ನಡ ಪಡೆಯುವ ಭಾಷೆ ಆಗುವ ಬದಲು ಕೊಡುವ ಭಾಷೆ ಆಗಬೇಕಿದೆ. ಅದನ್ನು ಕೊಡುವ ಭಾಷೆ ಮಾಡುವುದು ಹೇಗೆ? ಮೊದಲು ಅದನ್ನು ಸಾಧ್ಯ ಅಂತ ನಂಬಬೇಕು."[೧೫೧] ಹೀಗೆ ನಂಬದ ಹೊರತು ಕನ್ನಡದಲ್ಲಿ ಯಾವ ಬಗೆಯ ಬದಲಾವಣೆಗಳೂ ಸಾಧ್ಯವಾಗುವುದಿಲ್ಲ. ಡಿ. ಎನ್. ಶಂಕರಬಟ್ಟರ ವಾದಗಳೂ ಇದಕ್ಕೆ ಪೂರಕವಾಗಿವೆ. ಅವರು ಸಿದ್ಧಾಂತ ಹಾಗು ಅನ್ವಯ ಕ್ರಮಗಳೆರಡನ್ನೂ ಒಟ್ಟಿಗೆ ತರುವ ಪ್ರಯತ್ನದಲ್ಲಿ ನಿರತರಾಗಿದ್ದಾರೆ. ಅವರಿಗೆ ಪೂರಕವಾಗಿ ಕೆ. ವಿ. ನಾರಾಯಣರವರು ಕೃತಿ ರಚನೆಯಲ್ಲಿ ತೊಡಗಿದ್ದಾರೆ.

ಕೆ. ವಿ. ನಾರಾಯಣ ಅವರ ಇತ್ತೀಚಿನ ಕೃತಿಯಲ್ಲಿ ಡಿ. ಎನ್. ಶಂಕರಬಟ್ಟರ ಪ್ರಯತ್ನಕ್ಕೆ ಪೂರಕವಾದ ಪ್ರತಿಸ್ಪಂದನೆಯಿದೆ. 'ಕನ್ನಡದ ಆಡುನುಡಿಯ ಸೊಲ್ಲರಿಮೆ: ೧ – ಕನ್ನಡದ ಉಲಿಕಂತೆಗಳು' ಎಂಬ ಕೃತಿಯಲ್ಲಿ ಅವರು ಕನ್ನಡದಲ್ಲಿ ಹೊಸದಾಗಿ ಯಾವ ರೀತಿಯಲ್ಲಿ ಬರೆಯುವ ಸಾಧ್ಯತೆಗಳಿವೆ ಎಂಬುದನ್ನು ಬೋಧಿಸುತ್ತಿದ್ದಾರೆ. ತಮ್ಮ ಹೊಸ ಪ್ರಯತ್ನವನ್ನು ಕುರಿತು

ಹೀಗೆ ಹೇಳುತ್ತಾರೆ: "ಎಲ್ಲಕ್ಕಿಂತ ಹೆಚ್ಚಾಗಿ ಈ ಬರವಣಿಗೆಯಲ್ಲಿ ಹೆಚ್ಚಾಗಿ ಕನ್ನಡ ಪದಗಳನ್ನೇ ಬಳಸಲಾಗಿದೆ. ಅರಿಮೆಯ ಪದಗಳಿಗೂ ಹೊಸದಾಗಿ ಕನ್ನಡ ಪದಗಳನ್ನು ಆಯ್ದುಕೊಳ್ಳಲಾಗಿದೆ. ಈ ಕೆಲಸವನ್ನು ಶಂಕರ ಬಟ್ ಅವರು ಮೊದಲು ಮಾಡಿದ್ದಾರೆ. ಇಲ್ಲಿ ಅದನ್ನು ಮುಂದುವರೆಸಲಾಗುತ್ತಿದೆ. ಈವರೆಗೆ ಕನ್ನಡದಲ್ಲಿ ನುಡಿಯರಿಮೆಯ ಬರಹಗಳನ್ನು ಓದುತ್ತ ಬಂದವರಿಗೆ ಇಲ್ಲಿನ ಕೆಲವು ಅರಿಮೆಯ ಪದಗಳು ಹೊಸದಾಗಿ ತೋರಬಹುದು. ಆದರೆ ಹೀಗೆ ಮಾಡುತ್ತಿರುವುದೇಕೆ ಎಂಬುದನ್ನು ಒಪ್ಪಿದರೆ ಈ ಬರವಣಿಗೆಯನ್ನು ಓದಲು ಸುಳುವಾದೀತು."[೧೫೨] ಎನ್ನುತ್ತಾರೆ. ಈ ಮೂಲಕ ಶಂಕರ ಬಟ್ಟರು ಕನ್ನಡದಲ್ಲಿ ನಡೆಸುತ್ತಿರುವ ಪ್ರಯೋಗ ಮಂಡಿಸುತ್ತಿರುವ ಪ್ರಮೇಯಗಳನ್ನು ಸಮರ್ಥಿಸಿದ್ದಾರೆ.

ಸಂಸ್ಕೃತವನ್ನು ಸಾಧ್ಯವಾದಷ್ಟುಮಟ್ಟಿಗೆ ತೊರೆದು ಕನ್ನಡದಲ್ಲೆ ಬರೆಯುವ ಸಾಧ್ಯತೆಗಳನ್ನು ಶೋಧಿಸುತ್ತಿರುವ ಡಿ. ಎನ್. ಶಂಕರಬಟ್ಟರ ಆಲೋಚನೆಗಳನ್ನು ಕನ್ನಡದ ವಿದ್ವತ್ ಪರಂಪರೆ ಸ್ವೀಕರಿಸದಿರುವುದಕ್ಕೆ ಪ್ರತಿಯಾಗಿ ಕೆ. ವಿ. ನಾರಾಯಣ ಅವರ ಪ್ರಯತ್ನ ಗಮನಾರ್ಹವಾಗಿದೆ. ಏಕೆಂದರೆ ಸಂಸ್ಕೃತ, ಹಿಂದಿ, ಇಂಗ್ಲಿಷ್‌ಗಳಿಂದ ಬಿಡುಗಡೆ ಹೊಂದುವ ಸಾಧ್ಯತೆಗಳ ಹುಡುಕಾಟ ಶುರುವಾಗಿದೆ.

ನಂತರ ತಮ್ಮ ಪುಸ್ತಕದಲ್ಲಿ ಉಲಿ, ಸೊಲ್ಲರಿಮೆ, ಉಲಿಕಂತೆ, ಏರು, ನಡು, ಇಳಿ, ತೆರೆದ ಉಲಿಕಂತೆ, ಮುಚ್ಚಿದ ಉಲಿಕಂತೆ, ಗಿಡ್ಡ ತೆರೆದ ಉಲಿ, ಉದ್ದ ತೆರೆದ ಉಲಿ, ಮೂಗುಲಿ, ನುಡಿಯರಿಮೆ, ನುಡಿ ಕಸುವು, ನುಡಿ ನಡೆ, ಸೊಲ್ಲು, ಅರೆ ತಡೆಯುಲಿಗಳು, ದಿಂಡು, ಪತ್ತುಗೆ ಇತ್ಯಾದಿ ಕನ್ನಡದ ಪದಗಳನ್ನು ಭಾಷಾ ವಿಜ್ಞಾನದ ಪರಿಭಾಷೆ, ಪಾರಿಭಾಷಿಕ ಪದಗಳಾಗಿ ಬಳಕೆಗೆ ತರುವ ಕೆಲಸವನ್ನು ಮಾಡುತ್ತಿದ್ದಾರೆ.

ಇದೇ ಸಂದರ್ಭದಲ್ಲಿ ಶಂಕರಬಟ್ಟರ ಕೆಲಸವನ್ನು ಸಮರ್ಥಿಸುತ್ತ ಸಂಸ್ಕೃತದಿಂದ ಬಿಡುಗಡೆ ಹೊಂದಲು ಇರುವ ಮತ್ತೊಂದು ದಾರಿಯನ್ನು ಮಂಡಿಸುತ್ತಾರೆ. ಸಂಸ್ಕೃತ ಪದಗಳಿಂದ ಉಂಟಾಗಿರುವ ಗೊಂದಲಗಳಿಂದ ಬಿಡುಗಡೆ ಪಡೆಯಲು ಇರುವ ದಾರಿಗಳ ಕುರಿತು ಕೆ. ವಿ. ನಾರಾಯಣ ಅವರ ಅಭಿಪ್ರಾಯ ಹೀಗಿದೆ: "ಈ ಗೋಜಲಿನಿಂದ ಹೊರಬರಲು ಇನ್ನೊಂದು ದಾರಿ ಇರುವಂತಿದೆ. ಅದೆಂದರೆ ನಮ್ಮ ಬರವಣಿಗೆಯಲ್ಲಿ 'ಮಹಾಪ್ರಾಣ'ಗಳಿರುವ ಪದಗಳನ್ನೇ ದೂರವಿಡುವುದು. ಈ ಬರವಣಿಗೆಯಲ್ಲಿ ಆ ದಾರಿಯನ್ನು ಹಿಡಿಯಲಾಗಿದೆ. ಇದರಿಂದ ಕನ್ನಡದ ಪದಗಳನ್ನು ಹುಡುಕಿ ಬಳಸುವ ಹೊಣೆ ಹೆಚ್ಚಾಗಿದೆ. ಓದುವವರು ಮುಜುಗರಕ್ಕೆ ಒಳಗಾಗುವ ಗೋಜೂ ಇಲ್ಲ. ಇದೆಲ್ಲ ಸೇರಿ ಈ ಬರವಣಿಗೆಯ ಚಹರೆಯನ್ನು ಕೊಂಚ ಬದಲಿಸಿವೆ. ಓದುವವರು ತಾಳ್ಮೆಯಿಂದ ಏಕೆ ಹೀಗೆ ಬರೆಯಲಾಗಿದೆ ಎಂಬುದನ್ನು ತಿಳಿದು ಓದಬೇಕಾಗುತ್ತದೆ."[೧೫೩] ಎಂದು ಎರಡರ ನಡುವಿನ ದಾರಿಯೊಂದರ ಅನ್ವೇಷಣೆಯ ಕಡೆಗೆ ದಿಕ್ಕನ್ನು ತೋರಿಸುತ್ತಿದ್ದಾರೆ.

ಆರ್. ಚಲಪತಿಯವರ ಸಂದರ್ಶನವೊಂದರಲ್ಲಿ ಕೆ. ವಿ. ನಾರಾಯಣ ಅವರು ಡಿ. ಎನ್. ಶಂಕರ ಬಟ್ಟರ ಪ್ರಮೇಯಗಳ ಪರವಾದ ತಮ್ಮ ನಿಲುವನ್ನು ಖಚಿತಪಡಿಸುತ್ತಾರೆ. ಅವರ ಪ್ರಕಾರ:

"ಕನ್ನಡಿಗರು ಕನ್ನಡಿಗರಾಗೇ ಉಳೀಬೇಕಾದರೆ ನಾವು ಕನ್ನಡ ಪದಗಳನ್ನೇ ಬಳಸಬೇಕಾಗಿ ಬರ್ತದೆ ಅನ್ನೋ ನಿಲುವಿಗೆ ಬರಬೇಕಾಗ್ತದೆ. ಅದರಿಂದ ಶಂಕರಭಟ್ಟರು ಹೇಳಿದ್ದನ್ನ ಅವರು ಯಾವ ನಿರ್ಣಯಕ್ಕೆ ಬಂದರೋ ಆ ನಿರ್ಣಯವನ್ನೇ ಬೇರೆ ಕಾರಣಗಳಿಂದ ನಾನು ಸಮರ್ಥಿಸೋದಕ್ಕೆ ಇಷ್ಟ ಪಡ್ತೀನಿ. ಅವರು ಆ ಕಾರಣಗಳನ್ನು ಕೊಡದೇ ಇರಬಹುದು. ಬಟ್ ನಾನು ಇನ್ನೊಂದು ಕೆಲವು ಕಾರಣಗಳಿಂದ ಆ ನಿಲುವನ್ನ ಸಮರ್ಥಿಸೋದಕ್ಕೆ ಹೊರಟಿದ್ದೀನಿ...[೧೫೪] ಎನ್ನುತ್ತಾರೆ.

ಇದೇ ಸಂದರ್ಭದಲ್ಲಿ ಕನ್ನಡದಲ್ಲಿ ವಚನಕಾರರು, ಆಂಡಯ್ಯನ ಕಬ್ಬಿಗರ ಕಾವಂ, ತತ್ವಪದಕಾರರು, ಜನಪದರು, ಪಿ. ಲಂಕೇಶ್, ದೇವನೂರ ಮಹಾದೇವ ಮೊದಲಾದವರ ಕೃತಿಗಳನ್ನು ಸೂಕ್ಷ್ಮವಾದ ಅಧ್ಯಯನಕ್ಕೊಳಪಡಿಸಿದರೆ ನಮಗೆ ಈಗಾಗಲೆ ಈ ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವದ ಪ್ರಯೋಗಗಳು, ಕೆಲಸಗಳು ಆಗಿರುವುದು ಗಮನಕ್ಕೆ ಬರುತ್ತದೆ.

ಕನ್ನಡ ಜಗತ್ತು ಅರ್ಧಶತಮಾನ ಎಂಬ ಕೆ. ವಿ. ನಾರಾಯಣ ಅವರ ಕೃತಿಯ ಬಗೆಗೆ ಬಿ. ಎ. ವಿವೇಕ ರೈಯವರು ಹೀಗೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ: "ಕನ್ನಡ ಭಾಷೆಯು ಆಡಳಿತ, ಶಿಕ್ಷಣ, ಸಮೂಹ ಮಾಧ್ಯಮಗಳಲ್ಲಿ ಬಳಕೆಯಾದ ಚಾರಿತ್ರಿಕ ಮತ್ತು ರಾಜಕೀಯ ಸನ್ನಿವೇಶಗಳ ವಿವರಣೆ ಮತ್ತು ಮೌಲ್ಯಮಾಪನ ಮೊತ್ತಮೊದಲ ಬಾರಿ ಕನ್ನಡದಲ್ಲಿ ದೊರೆಯುತ್ತದೆ. ಕನ್ನಡ ಭಾಷೆಯ ಆಂತರಿಕ ರಚನೆ, ಬಾಹ್ಯಪ್ರಯೋಗಗಳು ಮತ್ತು ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳು–ಇವುಗಳ ಅಂತರ್‌ಸಂಬಂಧವು ಮಾಹಿತಿ ಮತ್ತು ಮೌಲ್ಯಮಾಪನಗಳ ನೆಲೆಯಲ್ಲಿ ಇಲ್ಲಿ ವಿವೇಚನೆಗೆ ಒಳಗಾಗಿದೆ. ಕನ್ನಡ ಭಾಷೆಯ ಬಳಕೆಯು ಭಾವನೆಗಳ ಮಟ್ಟದಿಂದ ತೊಡಗಿ ಭಿನ್ನಕ್ಷೇತ್ರಗಳ ಆಳಕ್ಕೆ ಇಳಿಯಬೇಕಾದ ಅಗತ್ಯಗಳ ಕುರಿತು ವಿಶಿಷ್ಟ ಒಳನೋಟಗಳು ಇಲ್ಲಿ ದೊರೆಯುತ್ತವೆ."[೧೫೫]

ಕೆ. ವಿ. ನಾರಾಯಣರವರ ಲೇಖನಗಳನ್ನು ಮೀಮಾಂಸೆ, ವಿಮರ್ಶೆ, ಭಾಷೆ, ಭಾಷಿಕ ವಾಗ್ವಾದಗಳ ಸ್ವರೂಪ, ಭಾಷಿಕ ವಿವೇಚನೆ, ಸಂಶೋಧನೆ, ಹಳೆಗನ್ನಡ ಪಠ್ಯಗಳ ಅನುಸಂಧಾನ, ವ್ಯಕ್ತಿಚಿತ್ರಗಳು, ಮುನ್ನುಡಿ, ಸಂದರ್ಶನ ಇತ್ಯಾದಿಯಾಗಿ ವಿಭಾಗಿಸಿ ಅಧ್ಯಯನ ಮಾಡಬಹುದು. ಅವರ ಸಮಗ್ರ ಲೇಖನಗಳ ಓದಿನಿಂದ ಮನದಟ್ಟಾಗುವ ಅಂಶಗಳೆಂದರೆ ಭಾಷೆಯೊಂದು ವ್ಯಕ್ತಿಗೆ ನೀಡುವ ನೈತಿಕ ಶಕ್ತಿಯ ಪ್ರಮಾಣ. ಯಾವುದೇ ಸಂದರ್ಭವನ್ನು ಸೂಕ್ಷ್ಮವಾಗಿ, ನಿರ್ದಿಷ್ಟ ಅಂತರದಲ್ಲಿಟ್ಟು ನೋಡುವ, ವಿವರಿಸುವ, ವ್ಯಾಖ್ಯಾನಿಸುವ ಸಾಧ್ಯತೆಗಳನ್ನು ಭಾಷಿಕ ವಿವೇಚನೆ ಅವರಿಗೆ ನೀಡಿದೆ. ಅವರ ಇತ್ತೀಚಿನ ಕೃತಿಗಳಲ್ಲಿ ಮುಖ್ಯವಾಗಿ ಭಾಷಿಕ ಬಿಡುಗಡೆಯ ಕುರಿತ ಆಲೋಚನಾಕ್ರಮವಿದೆ.

ವಿವೇಕ ರೈಯವರು ಕನ್ನಡ ಜಗತ್ತು ಅರ್ಧಶತಮಾನ ಕೃತಿಯ ಬಗೆಗೆ ಇನ್ನೊಂದು ಮುಖ್ಯವಾದ ಮಾತನ್ನು ಹೇಳುತ್ತಾರೆ: "ಕನ್ನಡ ಜಗತ್ತು: ಅರ್ಧಶತಮಾನ ಕೃತಿಯನ್ನು ಚರ್ಚಿಸಿ ಇಲ್ಲಿನ ಆಲೋಚನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುವುದು ಸುವರ್ಣ ಕರ್ನಾಟಕದ ವರ್ಷದಲ್ಲಿ ನಿಜವಾದ ಆಚರಣೆಯೆಂದು ಭಾವಿಸುತ್ತೇನೆ. ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ಭವಿಷ್ಯದ ಕುರಿತು ದೀರ್ಘಕಾಲದ ಅಧ್ಯಯನದ ಫಲವಾಗಿ ಇಂತಹ ಅನನ್ಯ ಕೃತಿಯನ್ನು

ರಚಿಸಿರುವ ಡಾ. ಕೆ. ವಿ. ನಾರಾಯಣ ಅವರಿಗೆ ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಅಭಿನಂದನೆಗಳ"[೧೫೬]ನ್ನು ಸಲ್ಲಿಸುತ್ತಾರೆ.

ಆಧುನಿಕೋತ್ತರ ಸಂದರ್ಭದಲ್ಲೂ ಭಾಷೆಯ ಅವಶ್ಯಕತೆಯು ತೀರಾ ಅನಿವಾರ್ಯವಾಗಿದೆ. ಈ ಬಗೆಯ ಒತ್ತಡಗಳಲ್ಲಿ, ಭಾಷೆಯ ಬಳಕೆಯನ್ನು ನಿಯಂತ್ರಿಸುತ್ತಿರುವ ಕ್ರಮಗಳು ಸಾಮಾಜಿಕ ಕಾರಣಗಳಿಂದ ಉಂಟಾಗುತ್ತವೆ. ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಲಾಗದ ಶೂದ್ರಾತಿಶೂದ್ರರ ಅಭಿವ್ಯಕ್ತಿ ಕುಂಠಿತವಾಗುತ್ತಿದೆ. ಈ ಬಗೆಯ ಸಮಸ್ಯೆಗಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿಯುವಿಕೆಯ ಕಾರಣಗಳನ್ನು ಡಿ. ಎನ್. ಶಂಕರ ಬಟ್ ಅವರು ಶೋಧಿಸುತ್ತಿದ್ದಾರೆ. ಇಂತಹ ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಅನೇಕ ಪ್ರಮೇಯಗಳನ್ನು ಮಂಡಿಸಿ, ಕಾರ್ಯರೂಪಕ್ಕೆ ತರಲು ಯತ್ನಿಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಕೆ. ವಿ. ನಾರಾಯಣ ಅವರ ಚಿಂತನೆಗಳನ್ನು ಅಧ್ಯಯನ ನಡೆಸಬೇಕಾಗಿದೆ. ಆ ಮೂಲಕ ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಅಧ್ಯಯನ ನಡೆಸುವ ಅವಕಾಶಗಳನ್ನು ಮುಕ್ತವಾಗಿ ಇಟ್ಟುಕೊಂಡು ವ್ಯವಸ್ಥಿತ ಅಧ್ಯಯನ ನಡೆಸುವ ಅಗತ್ಯವಿದೆ.

ನನ್ನದೇ ಆದ ಭಾಷೆಯಲ್ಲಿ ಆಲೋಚಿಸುವ ಮೂಲಕ ಕನ್ನಡ ಸಶಕ್ತವಾಗಬಲ್ಲದು ಎಂಬ ಅಂಶವನ್ನು ಕೆ. ವಿ. ನಾರಾಯಣ ಅವರ ಬರಹಗಳಲ್ಲಿ ಮಂಡಿಸುವ ಪ್ರಯತ್ನವಿದೆ. ಭಾವನಾತ್ಮಕವಾಗಿ ಪ್ರತಿಕ್ರಿಯಿಸುವುದಕ್ಕಿಂತ ಕ್ರಿಯಾತ್ಮಕವಾದ ಆಲೋಚನೆಯ ಕಡೆಗೆ ಅವರ ಗಮನವಿರುವುದನ್ನು ಕನ್ನಡ ಜಗತ್ತು ಅರ್ಧಶತಮಾನ ಕೃತಿಯ ನಾಲ್ಕು ಭಾಗಗಳಲ್ಲಿ ಮಂಡಿತವಾಗಿರುವ ವಿಚಾರಗಳಿಂದ ಮನದಟ್ಟು ಮಾಡಿಕೊಳ್ಳಬಹುದು. ಏಕೀಕರಣ ಚಳುವಳಿ, ಸಾಹಿತ್ಯ ಸಮ್ಮೇಳನಗಳು, ಸಮ್ಮೇಳನಾಧ್ಯಕ್ಷರ ಭಾಷಣಗಳು, ಹೋರಾಟಗಾರರು, ಶಿಕ್ಷಣದಲ್ಲಿ ಕನ್ನಡ, ಭಾಷಾ ನೀತಿಗಳ ಕುರಿತ ವಸ್ತುನಿಷ್ಠ ಅಧ್ಯಯನದ ಮಾದರಿಯಾಗಿರುವಂತೆಯೇ ಮುಂದಿನ ದಿನಗಳಲ್ಲಿ ಕನ್ನಡಕ್ಕೆ ಇರುವ ಸಾಧ್ಯಾಸಾಧ್ಯತೆಗಳ ಕಡೆಗೆ ಚಿಕಿತ್ಸಕ ಒಳನೋಟಗಳನ್ನು ಈ ಅಧ್ಯಯನದಲ್ಲಿ ಕಾಣಬಹುದು.

ಕೆ. ವಿ. ನಾರಾಯಣ ಅವರ ದಾರಿಯಲ್ಲಿ ಕ್ರಮಿಸುತ್ತಿರುವ ಆರ್. ಚಲಪತಿಯವರು ಸಂಪಾದಿಸಿರುವ ಕೆ. ವಿ. ನಾರಾಯಣ ಅವರ ತೊಡಕುಗಳು ಮತು ತೋರುದಾರಿಗಳು ಎಂಬ ಪುಸ್ತಕದ ಮುನ್ನುಡಿಯಲ್ಲಿ ಈ ಅಭಿಪ್ರಾಯವನ್ನು ದಾಖಲಿಸುತ್ತಾರೆ: "ಕರ್ನಾಟಕ ಆಡಳಿತವು ಕನ್ನಡ ಜನತೆಯ ಬದುಕನ್ನು ಪಣವಾಗಿಟ್ಟುಕೊಂಡು ಪಗಡೆಯಾಡುತ್ತಿದೆ ಎನ್ನುವುದು ಕೆವಿಎನ್ ನಿಲುವು."[೧೫೭] ಅವರ ಈ ನಿಲುವನ್ನು ಸಮರ್ಥಿಸುವುದು ಕನ್ನಡ ಜಗತ್ತು ಅರ್ಧಶತಮಾನ ಕೃತಿ. ಏಕೆಂದರೆ, ಕಳೆದ ಆರು ದಶಕಗಳಿಂದಲೂ ಆಳುವ ಸರ್ಕಾರಗಳು ಕನ್ನಡ ನುಡಿಯ ಬಗೆಗೆ ತಳೆದಿರುವ ಉದಾಸೀನ ಧೋರಣೆಯಿಂದಾಗಿ ಇಂದಿಗೂ ಆಡಳಿತದಲ್ಲಿ ಹಾಗೂ ಶಿಕ್ಷಣ ಮಾಧ್ಯಮದ ಸಂದರ್ಭದಲ್ಲಿ ಕನ್ನಡದ ಸ್ಥಿತಿ ಅಯೋಮಯವಾಗಿದೆ.

ಭಾಷೆಯ ಅಳಿವು ಉಳಿವಿನ ಪ್ರಶ್ನೆ ಮುಖ್ಯವಾಗಿ ಯುವಜನಾಂಗದ ಆಯ್ಕೆಯ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ಕಲಿಕೆ, ಗ್ರಹಿಕೆ, ಅಭಿವ್ಯಕ್ತಿ ಕೌಶಲಗಳು ಕುಂಠಿತಗೊಂಡಿವೆ. ಇದರಿಂದಾಗಿ ಶಿಕ್ಷಣ, ಮಾಧ್ಯಮ ಕುರಿತ ಕೆ. ವಿ.

ನಾರಾಯಣರವರ ಅಭಿಪ್ರಾಯಗಳು ಸರ್ಕಾರ, ಭಾಷಿಕ ಚಳುವಳಿಗಳು, ಹೋರಾಟಗಾರರಿಗೆ ಅರ್ಥವಾಗದಿರುವ ವಿಷಯಗಳೆಡೆಗೆ ಗಮನ ಸೆಳೆಯುತ್ತಾರೆ.

ಸದ್ಯಕ್ಕೆ ಕನ್ನಡದಲ್ಲಿ ಕಲಿಸಲಾಗುತ್ತಿರುವ ವ್ಯಾಕರಣದ ಕುರಿತು ಕೆ. ವಿ. ನಾರಾಯಣ ಅವರ ಅಭಿಪ್ರಾಯ ಹೀಗಿದೆ. "ನಮ್ಮ ಶಾಲೆಗಳಲ್ಲಿ ಕನ್ನಡ ಕಲಿಕೆಗೆಂದು ಮೀಸಲಾದ ಯಾವುದೇ ಪಠ್ಯ ಪುಸ್ತಕವನ್ನು ತೆರೆದರೂ, ಅದರ ಪಾಠಗಳ ಕೊನೆಯಲ್ಲಿ ವ್ಯಾಕರಣಾಂಶಗಳನ್ನು ಕುರಿತು ಮಾಹಿತಿ ಇರುತ್ತದೆ. ಕಲಿಸುವವರು ಮಕ್ಕಳಿಗೆ ಈ ವ್ಯಾಕರಣಾಂಶಗಳನ್ನು ಹೇಳಿಕೊಡುತ್ತಾರೆ. ಪರೀಕ್ಷೆಯಲ್ಲಿ ಮಕ್ಕಳ ವ್ಯಾಕರಣ ಕುರಿತ ತಿಳುವಳಿಕೆಯನ್ನು ಕುರಿತ ಪ್ರಶ್ನೆಗಳನ್ನು ಕೇಳಿ ಪ್ರಶ್ನಿಸಿಕೊಳ್ಳಬೇಕಾಗಿದೆ. ಕಲಿಕೆಯ ಕ್ರಮ ಎಷ್ಟು ಸರಿ ಎಂದು ನಾವೀಗ ಪ್ರಶ್ನಿಸಿಕೊಳ್ಳಬೇಕಾಗಿದೆ. ಇದಕ್ಕೆ ಮೂರು ಕಾರಣಗಳಿವೆ"[೧೫೮] ಎನ್ನುತ್ತಾರೆ. ಅವರು ಕೊಡುವ ಕಾರಣಗಳು ಹೀಗಿವೆ:

೧. ನಾವು ಶಾಲೆಗಳಲ್ಲಿ ಕಲಿಸುತ್ತಿರುವ ವ್ಯಾಕರಣ ನಿಜವಾಗಿ ಕನ್ನಡದ ಸ್ವರೂಪವನ್ನು ವಿವರಿಸುತ್ತಿಲ್ಲ.

೨. ಕನ್ನಡವನ್ನು ಮೊದಲ ಭಾಷೆಯನ್ನಾಗಿ ಹೊಂದಿರುವ ಮತ್ತು ಶಾಲೆಗೆ ಬರುವ ಮೊದಲೇ ಅನೌಪಚಾರಿಕವಾಗಿ ಕನ್ನಡ ಮಾತನಾಡಲು ಕಲಿತಿರುವ ಮಕ್ಕಳಿಗೆ ಈ ವ್ಯಾಕರಣದ ಅಗತ್ಯವಿಲ್ಲ. ನಮ್ಮ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಹೆಚ್ಚಿನ ಸಂಖ್ಯೆಯವರಿಗೆ ಕನ್ನಡ ಮೊದಲ ಭಾಷೆ. ಉಳಿದವರಲ್ಲಿ ಹಲವರಿಗೆ ಶಾಲೆಗೆ ಬರುವ ಮೊದಲೇ ಕನ್ನಡ ಆಡುಭಾಷೆಯಾಗಿ ಗೊತ್ತಿರುತ್ತದೆ. ಹೀಗೆ ಕನ್ನಡವನ್ನು ಶಾಲೆಯಲ್ಲೇ ಮೊದಲ ಬಾರಿಗೆ ಕೇಳಿಸಿಕೊಳ್ಳುತ್ತಿರುವ ಮಕ್ಕಳೂ ಇದ್ದಾರಾದರೂ ಅವರ ಬಗ್ಗೆ, ಅವರಿಗೆ ಕನ್ನಡವನ್ನು ಕಲಿಸುವ ರೀತಿಯ ಬಗ್ಗೆ ನಾವು ಯಾವ ವಿಶೇಷ ಎಚ್ಚರವನ್ನೂ ವಹಿಸಿಲ್ಲ. ಹೆಚ್ಚಿನ ಪಾಲು ಉರ್ದು ಮಾಧ್ಯಮದ ಶಾಲೆಗಳಲ್ಲಿ ಈ ಸಮಸ್ಯೆ ಇರುವುದನ್ನು ಇತ್ತೀಚಿನ ಅಧ್ಯಯನಗಳು ತೋರಿಸಿಕೊಟ್ಟಿವೆ. ಅವರಿಗೂ ಈ ವ್ಯಾಕರಣ ಬೇಡದ ಹೊರೆಯಾಗಿದೆ.

೩. ಹೀಗೆ ಒತ್ತಾಯಪೂರ್ವಕವಾಗಿ ಕಲಿಸುವ ವ್ಯಾಕರಣ ಕೂಡ ಮುಂದೆ ಕನ್ನಡ ಬಳಸುವವರ ನೆರವಿಗೆ ಬರುವುದಿಲ್ಲ. ಅದು 'ಕಲಿತು ಮರೆಯುವ' ವಿಷಯವಾಗುತ್ತದೆ.[೧೫೯] ಎನ್ನುತ್ತಾರೆ. ಈ ಮೂಲಕ ಸದ್ಯಕ್ಕೆ ಕನ್ನಡದಲ್ಲಿ ಬೋಧಿಸುತ್ತಿರುವ ವ್ಯಾಕರಣ ಪದ್ಧತಿ ಸರಿಯಲ್ಲ ಎನ್ನುತ್ತಾರೆ.

ಇಲ್ಲಿ ಸಂಸ್ಕೃತ ವ್ಯಾಕರಣವನ್ನು ಕಲಿಯುವುದರಿಂದ ಭವಿಷ್ಯದಲ್ಲಿ ಮಕ್ಕಳಿಗೆ ಅದು 'ಕಲಿತು ಮರೆಯುವ' ವಿಷಯವಾಗುತ್ತದೆ ಎಂಬ ಅವರ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು ಎನಿಸುತ್ತದೆ. ಕನ್ನಡದಲ್ಲಿ ಈಗ ನಾವು ಕಲಿಸುತ್ತಿರುವ ವ್ಯಾಕರಣ ಕನ್ನಡದ್ದಲ್ಲ; ಬದಲಾಗಿ ಸಂಸ್ಕೃತ ವ್ಯಾಕರಣ ಎಂಬ ಡಿ. ಎನ್. ಶಂಕರ ಬಟ್ಟರ ವಾದಕ್ಕೆ ಪೂರಕವಾಗಿ ಕೆ. ವಿ. ನಾರಾಯಣ ಅವರು ವಾದವನ್ನು ಮಂಡಿಸಿದ್ದಾರೆ. ಅವರ ಪ್ರಕಾರ: "ನಾವು ಈಗ ಕಲಿಸುತ್ತಿರುವ ಕನ್ನಡ ವ್ಯಾಕರಣ ನಿಜವಾಗಿ ಕನ್ನಡದ ಚಹರೆಗಳನ್ನು ವಿವರಿಸುವ ರೀತಿಯಲ್ಲಿ ಇಲ್ಲ. ನಾವು ಬಳಸುತ್ತಿರುವ ಕನ್ನಡದ ರಚನೆಯನ್ನು ವಿವರಿಸುವ ನಿಯಮಗಳನ್ನು ನಾವಿನ್ನೂ ಸರಿಯಾಗಿ ತಿಳಿದುಕೊಳ್ಳದಿರುವುದೇ ಇದಕ್ಕೆ ಕಾರಣವಾಗಿದೆ. ಹಳೆಗಾಲದ ಪಂಡಿತರು ಸಂಸ್ಕೃತ ವ್ಯಾಕರಣವನ್ನು ಅನುಸರಿಸಿ ರೂಪಿಸಿದ

ನಿಯಮಗಳನ್ನೇ ಈಗಲೂ ನಾವು ಹೆಚ್ಚಾಗಿ ಬಳಸುತ್ತಿದ್ದೇವೆ”[೧೬೦] ಎನ್ನುತ್ತಾರೆ. ಈ ಮೂಲಕ ಡಿ. ಎನ್. ಶಂಕರ ಬಟ್ಟರ ಆರೋಪವನ್ನು ಸಮರ್ಥಿಸುತ್ತಾರೆ. ಮುಖ್ಯವಾಗಿ ಕನ್ನಡದಲ್ಲಿ ಸದ್ಯಕ್ಕೆ ಬಳಕೆಯಲ್ಲಿರುವ, ಬೋಧಿಸುತ್ತಿರುವ ವ್ಯಾಕರಣದ ಮಾದರಿ ಸಂಸ್ಕೃತದ ಮಾದರಿ ಎನ್ನುವುದನ್ನು ಇವರ ಹೇಳಿಕೆ ಸಮರ್ಥಿಸುತ್ತದೆ.

“ಡಾ. ಡಿ. ಎನ್. ಶಂಕರಭಟ್ಟರು, ಈ ಕೊರತೆಯನ್ನು ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಈ ವ್ಯಾಕರಣವು ಬರೆಹದ ಕನ್ನಡವನ್ನು ಮಾತ್ರ ಗಮನದಲ್ಲಿ ಇರಿಸಿಕೊಳ್ಳುತ್ತದೆ. ಆಡುಗನ್ನಡವನ್ನು ಗಮನಿಸುವುದಿಲ್ಲ. ಆದ್ದರಿಂದ ಮಕ್ಕಳು ತಾವು ಆಡುವ ಕನ್ನಡ ವ್ಯಾಕರಣಬದ್ಧವಲ್ಲೆಂಬ ತಪ್ಪು ತಿಳುವಳಿಕೆಗೆ ಒಳಗಾಗುತ್ತಾರೆ”[೧೬೧] ಎನ್ನುವ ಅವರು ಸಪ್ತಮೀ ವಿಭಕ್ತಿಯ ಉದಾಹರಣೆ ನೀಡುತ್ತಾರೆ. ಸದ್ಯಕ್ಕೆ ಸಪ್ತಮೀ ವಿಭಕ್ತಿ ಹೆಸರಿನಲ್ಲಿ ಕಲಿಸಲಾಗುತ್ತಿರುವ ‘ಒಳಗೆ’, ‘ಅಲ್ಲಿ’ (ಊರಿನಲ್ಲಿ, ಊರೊಳಗೆ) ತುಂಗಭದ್ರೆಯ ಉತ್ತರ ಭಾಗದಲ್ಲಿ ‘ಆಗ’ (ಊರಾಗ) ಆಗುತ್ತದೆ ಎನ್ನುತ್ತಾರೆ. ಈ ಮೂಲಕ ಸದ್ಯಕ್ಕೆ ಪ್ರಮಾಣ ಭಾಷೆಯನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಕಲಿಸಲಾಗುತ್ತಿರುವ ವ್ಯಾಕರಣದಲ್ಲಿ ಸಮಸ್ಯೆ ಇರುವುದನ್ನು ಸಾಕ್ಷಿ ಸಮೇತ ತೋರಿಸಿಕೊಡುತ್ತಾರೆ.

ವ್ಯಾಕರಣ ಬೋಧನೆಯ ಎರಡನೇ ಉದ್ದೇಶದಲ್ಲಿ ೩ ಗುರಿಗಳಿರಬೇಕು ಎನ್ನುತ್ತಾರೆ:

೧. ಮಕ್ಕಳ ಪದಕೋಶವನ್ನು ಹೆಚ್ಚಿಸುವ ಕಡೆಗೆ ಇರಬೇಕು

೨. ಆ ಪದಕೋಶದ ನೆರವಿನಿಂದ ಹೊಸ ಪದರಚನೆಯನ್ನು ಮಾಡಲು ಮಕ್ಕಳು ಶಕ್ತರಾಗುವಂತೆ ಮಾಡಬೇಕು

೩. ಅವರು ಕನ್ನಡವನ್ನು ಹಲವು ಹೊಸ ಸನ್ನಿವೇಶಗಳಲ್ಲಿ ಬಳಸಲು ಸಾಧ್ಯವಾಗುವಂತೆ ತರಬೇತು ನೀಡಬೇಕು ಎನ್ನುತ್ತಾರೆ.

ಆದರೆ, ಕನ್ನಡದ ದಿನಪತ್ರಿಕೆಗಳಲ್ಲಿ ಕೆಲವು ಸಂದರ್ಭದಲ್ಲಿ ಬಳಕೆಯಾಗುತ್ತಿರುವ ಕೆಲವು ಉದಾರಹರಣೆಗಳನ್ನು ನೀಡುತ್ತಾರೆ. “ದಿನದಿನವೂ ನಮಗೆ ಓದಲು ಸಿಗುವ ಮುಂದಿನ ಹಲವಾರು ರಚನೆಗಳನ್ನು ಗಮನಿಸಿ. ಹಸುರೋತ್ಸವ, ಚುಟುಕೋತ್ಸವ, ಕನ್ನಡೀಕರಣ, ನಗದೀಕರಣ, ಸಿದ್ಧರಾಮಯ್ಯಗೆ ಆಹ್ವಾನ, ದುರ್ನಡತೆ, ಸನ್ನಡತೆ, ಮಿಲಿಯಾಂತರ ಇತ್ಯಾದಿ. ಈ ರಚನೆಗಳನ್ನು ತಪ್ಪು ಎಂದು ಹೇಳಲು ನಾವೇನೋ ಸಿದ್ಧ. ಆದರೆ, ಇಂತಹ ರಚನೆಗಳನ್ನು ಸಿದ್ಧಗೊಳಿಸಿ ಬಳಸುವವರಿಗೆ ಅವರು ಕಲಿತ ವ್ಯಾಕರಣ ಏಕೆ ನೆರವಾಗಲಿಲ್ಲ? ಅಥವಾ ಅವರು ವ್ಯಾಕರಣವನ್ನು ಸರಿಯಾಗಿ ಕಲಿಯದೇ ಇದ್ದುದರಿಂದ ಹೀಗಾಯಿತು ಎಂದು ವಾದಿಸಬೇಕೆ? ಹಾಗೇನೂ ಇಲ್ಲ. ಇಂತಹ ರಚನೆಗಳು ಏಕೆ ಸಿದ್ಧಗೊಳ್ಳುತ್ತವೆ ಎನ್ನುವುದನ್ನು ಕಂಡುಕೊಳ್ಳಲು ಸಾಧ್ಯವಾಗುವಂತೆ ನಮ್ಮ ಕನ್ನಡವನ್ನು ನಾವಿನ್ನೂ ವಿವರಿಸಿಕೊಂಡಿಲ್ಲ”[೧೬೨] ಎಂದು ಅಭಿಪ್ರಾಯಪಡುತ್ತಾರೆ. ಈ ಮೂಲಕ ಕನ್ನಡ ವ್ಯಾಕರಣ ಬೋಧನೆ, ಕಲಿಕೆ, ಅರ್ಥೈಸುವಿಕೆ ಮತ್ತು ಕಲಿತ ವ್ಯಾಕರಣವನ್ನು ಅನ್ವಯಿಸುವ ಕ್ರಮ, ಭವಿಷ್ಯದಲ್ಲಿ ಇದರ ಆಧಾರದಲ್ಲಿ ಹೊಸಪದಗಳ ಸೃಷ್ಟಿಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳೆಡೆಗೆ ಅವರು ಗಮನ ನೀಡಿದ್ದಾರೆ.

'ಎಲ್ಲರ ಕನ್ನಡ ಮತ್ತು ಮಡಿಕನ್ನಡ' ಎಂಬ ಲೇಖನದಲ್ಲಿ ಕನ್ನಡ ಮತ್ತು ಸಂಸ್ಕೃತಗಳ ಕುರಿತು ಮಹತ್ವದ ವಿಷಯಗಳನ್ನು ಕೆ. ವಿ. ನಾರಾಯಣ ಮಂಡಿಸುತ್ತಾರೆ. ಅವರ ಪ್ರಕಾರ: "ನಮ್ಮ ಕನ್ನಡವೆಂದರೆ ಅದು ಎಲ್ಲರ ಕನ್ನಡವಾಗಬೇಕು ಎಂಬ ನಂಬಿಕೆಯನ್ನು ಬೆಳೆಸಿಕೊಳ್ಳಬೇಕು. ಕೆಲವರು ಮಾತ್ರ ಓದಿ ಅರಿತುಕೊಳ್ಳಬಲ್ಲ, ಕೆಲವರು ತಂತಮ್ಮಲ್ಲೇ ಮಾತಾಡಿಕೊಳ್ಳಬಲ್ಲ ಕನ್ನಡದ ಮಾದರಿಗೆ ಮನ್ನಣೆ ನೀಡುವುದನ್ನು ನಿಲ್ಲಿಸಬೇಕು. ಈಗ ನುಡಿಯುವುದು ಇಲ್ಲವೇ ಬರೆಯುವುದು ಎಂದರೆ ಅದು ಕೆಲವರು ಕೆಲವರೊಡನೆ ನಡೆಸುವ ಮಾತುಕತೆ ಎಂಬಂತಾಗಿದೆ. ಅಂದರೆ ಎಲ್ಲರೂ ಆ ಮಾತುಕತೆಯೊಳಗೆ ತಮ್ಮ ದನಿಯನ್ನು ಸೇರಿಸಲು ಮುಂದಾದರೆ ಅವರನ್ನು ಒಳಗೊಳ್ಳುವ ಬಗೆಯ ಕನ್ನಡವನ್ನು ಮೈಲಿಗೆಯ ಕನ್ನಡವೆಂದು ದೂರವಿರಿಸಲಾಗುತ್ತದೆ"[೧೬೩] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಬಳಕೆಯಲ್ಲಿರುವ ವಿವಿಧ ಭಾಷಿಕ ವಲಯ ಮತ್ತು ಅದರಲ್ಲಿರುವ ತರತಮಗಳನ್ನು ಗುರುತಿಸುತ್ತಾರೆ. ಡಿ. ಎನ್. ಶಂಕರ ಬಟ್ಟರು ಕೂಡ ಕನ್ನಡದಲ್ಲಿ ಸಾಮಾಜಿಕವಾಗಿ ಭಾಷೆಯ ಬಳಕೆಯಿಂದಾಗಿ ಉಂಟಾಗುತ್ತಿರುವ ತರತಮಗಳನ್ನು ಗುರುತಿಸುತ್ತಾರೆ. ಸಂಸ್ಕೃತ ಭಾಷೆಯ ಬಳಕೆಯಿಂದಾಗಿ ಮಹಾಪ್ರಾಣಾಕ್ಷರಗಳು, ಋ, ಷ, ಶ ಮತ್ತು ಅನುನಾಸಿಕಗಳ ಸ್ಪಷ್ಟ ಉಚ್ಚಾರ, ಬರಹದಲ್ಲಿ ಸಂಸ್ಕೃತದ ಮಾದರಿಯಲ್ಲಿ ಬರೆಯುವಲ್ಲಿ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ಉಲ್ಲೇಖಿಸಿದ್ದಾರೆ. ಈ ವಿಷಯವನ್ನು ಕೆ. ವಿ. ನಾರಾಯಣ ಅವರು ಮತ್ತಷ್ಟು ವಿವರಿಸಿದ್ದಾರೆ.

ಕನ್ನಡದಲ್ಲಿ ಸಂಸ್ಕೃತ ಬಳಕೆ ಕುರಿತು ಅವರ ಅಭಿಪ್ರಾಯ ಹೀಗಿದೆ: "ನಾವೀಗ ಏನು ಮಾಡುತ್ತಿದ್ದೇವೆ ಗೊತ್ತೇನು? ಲೋಕವನ್ನೆಲ್ಲ ಒಳಗೊಳ್ಳುವ ಇರಾದೆಯಲ್ಲಿ ಇಂಗ್ಲಿಶಿನ ನೋಟಗಳನ್ನು ಸಂಸ್ಕೃತದ ಪದಗಳಲ್ಲಿ ಇರಿಸಿ 'ಇಗೋ ಇದೇ ನಮ್ಮ ಕನ್ನಡ' ಎಂದು ನಂಬಿಸಿದ್ದೇವೆ. ಕನ್ನಡದ ಪದಗಳನ್ನು ಆಯ್ದುಕೊಂಡು ಆ ಪದಗಳಲ್ಲಿ ನಮ್ಮ ನಿಲುವುಗಳನ್ನು ಕಟ್ಟಿಕೊಡಲು ಹೊರಟರೆ ಆಗ ನಾವು ಈವರೆಗೆ ಹಿಡಿದಿರುವ ಹಾದಿ ಮುನ್ನುಗ್ಗುವ ಹಾದಿಯು ಹೊಸ ಮಾದರಿಯ ಕಾರುಗಳ ನಡೆಗೆ ಹೇಳಿ ಮಾಡಿಸಿದ ಹೆದ್ದಾರಿಯಂತಿದ್ದರೂ ಅಲ್ಲಿ ಹಸುಗಳನ್ನು ತರುಬಿಕೊಂಡು ನಡೆದು ಬರುವ ಕನ್ನಡಿಗನಿಗೆ ಜಾಗವಿಲ್ಲ ಎನ್ನುವುದು ಗೊತ್ತಾಗತೊಡಗುತ್ತದೆ"[೧೬೪] ಎನ್ನುತ್ತಾರೆ. ಈ ಮೂಲಕ ಇಂಗ್ಲಿಷ್ ಭಾಷೆಯಲ್ಲಿರುವ ಪದ, ಪಾರಿಭಾಷಿಕಗಳನ್ನು ಕನ್ನಡದಲ್ಲಿ ಬಳಸುತ್ತಿದ್ದೇವೆ ಎಂದುಕೊಂಡು ಸಂಸ್ಕೃತ ಪದಗಳನ್ನು ಬಳಸುತ್ತಿರುವುದನ್ನು ಪ್ರಶ್ನಿಸಿದ್ದಾರೆ. ಇಂಗ್ಲಿಷ್‌ನಿಂದ ಕನ್ನಡಕ್ಕೆ ಆರೋಪಿಸಿಕೊಳ್ಳಲಾಗುತ್ತಿರುವ ಸಂಸ್ಕೃತದ ಕುರಿತು ಅವರು ಹೇಳಿಕೆ ಗಂಭೀರ ಪ್ರಶ್ನೆಗಳನ್ನು ಕೇಳುತ್ತಿದೆ. ನೂತನ ಆವಿಷ್ಕಾರ, ತಂತ್ರಜ್ಞಾನ, ಸಂಶೋಧನೆ ಇತ್ಯಾದಿ ವಿಷಯಗಳನ್ನು ಕನ್ನಡದಲ್ಲಿ ಬರೆಯುವಾಗ, ಅನುವಾದಿಸುವಾಗ ಈ ಸಮಸ್ಯೆ ಎದುರಾಗುತ್ತದೆ.

ಉದಾಹರಣೆಗೆ:

ಸಂಸ್ಕೃತ ರೂಪ	**ಇಂಗ್ಲಿಷ್ ರೂಪ**
ಆರಕ್ಷಕ	Police
ಠಾಣೆ	Station

ಅಭಿಯಂತರ	Engineer
ಜಿಲ್ಲಾಧಿಕಾರಿ	District Collector
ವಿಭಾಗದ ಮುಖ್ಯಸ್ಥ	Head of The Department

ಮೊದಲಾದ ಸಂಸ್ಕೃತ ಪದಗಳನ್ನು ನಾವು ಈಗಾಗಲೇ ಕನ್ನಡದ ಹೆಸರಿನಲ್ಲಿ ಬಳಸುತ್ತಿದ್ದೇವೆ. ಆದರೆ, ಇದಕ್ಕೆ ಕನ್ನಡದ ಪೋಷಾಕು ಹೊದಿಸಲಾಗಿರುವುದನ್ನು ಕೆ. ವಿ. ನಾರಾಯಣ ಪ್ರಶ್ನಿಸುತ್ತಿದ್ದಾರೆ. ಈ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಸ್ವತಃ ಕೆ. ವಿ. ನಾರಾಯಣ ಮತ್ತು ಡಿ. ಎನ್. ಶಂಕರ ಬಟ್ಟರು ಯತ್ನಿಸುತ್ತಿದ್ದಾರೆ. 'ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡ ಪದಗಳು' ಕೃತಿಯ ಮೂಲಕ ಸಂಸ್ಕೃತ ಪದಗಳಿಗೆ ಪರ್ಯಾಯವಾಗಿ ಬಳಸಬಹುದಾದ ಕನ್ನಡ ಪದಗಳ ಪಟ್ಟಿಯನ್ನು ಕೆ. ವಿ. ನಾರಾಯಣ ನೀಡಿದ್ದಾರೆ. ಈ ನಿಟ್ಟಿನಲ್ಲಿ ಡಿ. ಎನ್. ಶಂಕರ ಬಟ್ಟರು 'ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು' ಎಂಬ ಕೃತಿಯಲ್ಲಿ ಇಂಗ್ಲಿಷ್ ಪದಗಳಿಗೆ ಪರ್ಯಾಯವಾಗಿ ಬಳಸಬಹುದಾದ ಕನ್ನಡ ಪದಗಳ ಪಟ್ಟಿಯನ್ನು ನೀಡಿದ್ದಾರೆ.

ಕನ್ನಡ ನಾಡು, ನುಡಿ, ಪ್ರಮಾಣ ಭಾಷೆ, ಆಡಳಿತ ಭಾಷೆ, ಭಾಷಿಕ ಚಳವಳಿಗಳು, ಹೋರಾಟಗಳು ಹಾಗೂ ನೀತಿನಿರೂಪಣೆಗಳನ್ನು ಕುರಿತ ಅವರ ವಾಗ್ವಾದಗಳಿಗೆ ಇನ್ನೂ ಕನ್ನಡ ಸಮುದಾಯ ಮುಖಾಮುಖಿಯಾಗಿಲ್ಲ ಎನಿಸುತ್ತದೆ. ಇದರೊಂದಿಗೆ ಕೆ. ವಿ. ನಾರಾಯಣ ಮತ್ತು ಡಿ. ಎನ್. ಶಂಕರ ಬಟ್ಟರ ಸಂಶೋಧನೆಗಳ ಫಲಿತಗಳನ್ನು ಕನ್ನಡ ಭಾಷೆಗೆ ಅನ್ವಯಿಸಿಕೊಳ್ಳುವುದರ ಕೊರತೆ ಇದೆ ಎನಿಸುತ್ತದೆ. ಆಡುನುಡಿಯಿಂದ ಶಾಸ್ತ್ರೀಯ ಕನ್ನಡ ವ್ಯಾಪ್ತಿಗೆ ಒಳಪಡುವ ಭಾಷಿಕ ಸ್ತರಗಳ ತಲಸ್ಪರ್ಶಿಯಾದ ಅಧ್ಯಯನದ ಮೂಲಕ ಕೆ. ವಿ. ನಾರಾಯಣ ಅವರು ವ್ಯಕ್ತಪಡಿಸುತ್ತಿರುವ ವಿಚಾರಗಳ ಆಳದಲ್ಲಿ ಕನ್ನಡ ಸಂವೇದನೆಯನ್ನು ಕನ್ನಡದ ಮೂಲಕವೇ ವಿವರಿಸಿಕೊಳ್ಳುವ ಪ್ರಯತ್ನವಿದೆ.

ಉಲ್ಲೇಖಗಳು:

೧. ಸಂ: ಮಲ್ಲೇಪುರಂ ಜಿ.ವೆಂಕಟೇಶ, ೨೦೦೯, ಕನ್ನಡ ಭಾಷಾಧ್ಯಯನ ತತ್ವ–ವ್ಯಾಪ್ತಿ–ಜಿಜ್ಞಾಸೆ, ಲೇಖಕರು: ಬಿ.ಎಂ.ಶ್ರೀ., ಲೇಖನ: ಭಾಷಾ ಚರಿತ್ರೆಯ ಉದ್ದೇಶ ಮತ್ತು ಸಾಧನೆ, ಪ್ರತಿಭಾ ಪ್ರಕಾಶನ, ಮೈಸೂರು, ಪು. ೧೪

೨. ಶಂಕರ ಭಟ್ ಡಿ. ಎನ್., ೧೯೯೫, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ಪು.೧, ೨, ೩, ೪

೩. ಶಂಕರ ಭಟ್ ಡಿ. ಎನ್., ೧೯೯೫, ಕನ್ನಡ ಭಾಷೆಯ ಕಲ್ಪಿತ ಚರಿತ್ರೆ, ಈ ಗ್ರಂಥ ಕುರಿತು: ನಾರಾಯಣ ಕೆ. ವಿ., ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ

೪. ಅದೇ, ಪು. ೧೦, ೧೧, ೧೩

೫. ಅದೇ,

೬. ನಾಗರಾಜಯ್ಯ ಹಂ. ಪ., ೨೦೦೬, ದ್ರಾವಿಡ ಭಾಷಾವಿಜ್ಞಾನ, ಡಿವಿಕೆ ಮೂರ್ತಿ ಪ್ರಕಾಶಕರು, ಮೈಸೂರು, ಪು. ೪

೭. ಶಂಕರ ಭಟ್ ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ!, ಭಾಷಾ ಪ್ರಕಾಶನ, ಮೈಸೂರು, ಪು. ೬

೮. ಅದೇ,

೯. ಅದೇ,

೧೦. ಅದೇ, ಪು. ೧೭

೧೧. ಅದೇ, ಪು. ೯೫

೧೨. ಅದೇ, ಪು. ೧೬

೧೩. ಅದೇ, ಪು. ೨೧

೧೪. ಅದೇ, ಪು. ೧೪

೧೫. ಅದೇ, ಪು. ೧೫

೧೬. ಅದೇ,

೧೭. ಅದೇ, ೧೬

೧೮. ಅದೇ, ೧೮

೧೯. ಅದೇ, ಪು. ೧೪

೨೦. ಅದೇ,

೨೧. ಅದೇ, ಪು. ೧೯

೨೨. ಅದೇ,

೨೩. ಅದೇ, ಪು. ೨೦

೨೪. ಅದೇ, ಪು. ೨೧

೨೫. ಅದೇ,

೨೬. ಅದೇ, ಪು. ೨೨

೨೭. ಅದೇ,

೨೮. ಅದೇ, ಪು. ೨೪

೨೯. ಅದೇ, ಪು. ೨೫

೩೦. ಅದೇ, ಪು. ೨೬

೩೧. ಅದೇ, ಪು. ೨೭

೩೨. ಅದೇ, ಪು. ೨೮

೩೩. ಅದೇ, ಪು. ೨೯

೩೪. ಅದೇ,

೩೫. ಅದೇ,

೩೬. ಅದೇ, ಪು. ೩೦

೩೭. ಅದೇ, ಪು. ೩೧, ೩೨

೩೮. ಅದೇ, ಪು. ೩೩

೩೯. ಅದೇ, ಪು. ೩೫

೪೦. ಅದೇ, ಪು. ೩೬

೪೧. ಅದೇ, ಪು. ೩೭

೪೨. ಅದೇ,

೪೩. ಅದೇ, ಪು. ೩೯

೪೪. ಅದೇ, ಪು. ೪೨

೪೫. ಅದೇ, ಪು. ೪೨, ೪೩

೪೬. ಅದೇ, ಪು. ೪೪

೪೭. ಅದೇ, ಪು. ೪೮

೪೮. ಅದೇ, ಪು. ೫೧

೪೯. ಅದೇ, ಪು. ೫೨

೫೦. ಅದೇ, ಪು. ೫೩

೫೧. ಅದೇ, ಪು. ೬೦

೫೨. ಅದೇ, ಪು. ೬೩

೫೩. ಅದೇ,

೫೪. ಅದೇ, ಪು. ೬೪

೫೫. ಅದೇ, ಪು. ೬೭

೫೬. ಅದೇ, ಪು. ೬೭, ೬೮

೫೭. ಅದೇ, ಪು. ೬೮

೫೮. ಅದೇ, ಪು. ೬೮, ೬೯

೫೯. ಅದೇ, ಪು. ೭೧

೬೦. ಅದೇ, ಪು. ೭೧, ೭೨

೬೧. ಅದೇ,

೬೨. ಅದೇ,

೬೩. ಅದೇ, ಪು. ೭೩

೬೪. ಅದೇ, ಪು. ೭೩

೬೫. ಅದೇ, ಪು. ೮೯, ೯೦

೬೬. ಅದೇ, ಪು. ೧೦೦

೬೭. ಅದೇ, ಪು. ೧೦೧, ೧೦೨

೬೮. ಅದೇ, ಪು. ೧೦೨

೬೯. ಅದೇ, ಪು. ೧೦೨

೭೦. ಅದೇ,

೭೧. ಅದೇ, ೧೦೩, ೧೦೪

೭೨. ಅದೇ, ಪು. ೧೦೭

೭೩. ಅದೇ, ಪು. ೧೦೭, ೧೦೮

೭೪. ಅದೇ, ಪು. ೧೧೮, ೧೧೯

೭೫. ಅದೇ,

೭೬. ಅದೇ, ಪು. ೧೨೯

೭೭. ಅದೇ,

೭೮. ಅದೇ, ಪು. ೧೩೭

೭೯. ಅದೇ, ಪು. ೧೪೦

೮೦. ಅದೇ, ಪು. ೧೦೭, ೧೦೮

೮೧. ಅದೇ, ಪು. ೧೪೫

೮೨. ಅದೇ, ಪು. ೧೪೬

೮೩. ಅದೇ,

೮೪. ಅದೇ, ಪು. ೧೪೭

೮೫. ಅದೇ, ಪು. ೧೪೭, ೧೪೮

೮೬. ಅದೇ, ಪು. ೧೪೮

೮೭. ಅದೇ,

೮೮. ಅದೇ, ಪು. ೧೪೯

೮೯. ಅದೇ,

೯೦. ಅದೇ, ಪು. ೧೫೭

೯೧. ಅದೇ, ಪು. ೧೫೭, ೧೫೮

೯೨. ಅದೇ, ಪು. ೧೫೮

೯೩. ಅದೇ, ಪು. ೧೬೭

೯೪. ಅದೇ, ಪು. ೧೬೭

೯೫. ಅದೇ, ಪು. ೧೬೮

೯೬. ಅದೇ, ಪು. ೧೬೯, ೧೭೦

೯೭. ಅದೇ, ಪು. ೧೭೧, ೧೭೨

೯೮. ಅದೇ, ಪು. ೧೮೭

೯೯. ಅದೇ, ಪು. ೧೮೮

೧೦೦. ಅದೇ, ಪು. ೨೬೯

೧೦೧. ಅದೇ, ಪು. ೨೯೦

೧೦೨. ಅದೇ, ಪು. ೧೬

೧೦೩. ಅದೇ, ಪು. ೨೧

೧೦೪. ಅದೇ,

೧೦೫. ಅದೇ,

೧೦೬. ಅದೇ,

೧೦೭. ಶಂಕರ ಬಟ್ಟ ಡಿ. ಎನ್., ೨೦೦೮, ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು, ಪು. ಸಂ. ೪

೧೦೮. ನಾರಾಯಣ ಕೆ. ವಿ., ೨೦೧೧, ಕನ್ನಡದ ಆಡುನುಡಿಯ ಸೊಲ್ಲರಿಮೆ: ೧ – ಕನ್ನಡದ ಉಲಿಕಂತೆಗಳು, ಕೆ.ವಿ.ನಾರಾಯಣ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು. ಪು.೨

೧೦೯. ಅದೇ,

೧೧೦. ಶಂಕರ ಬಟ್ ಡಿ. ಎನ್., ೨೦೧೦, ಕನ್ನಡ ಪದಗಳ ಒಳ ರಚನೆ, ಭಾಷಾ ಪ್ರಕಾಶನ, ಪು. ೨೫

೧೧೧. ಅದೇ. ಪು. ಸಂ. ೪

೧೧೨. ಚಿದಾನಂದಮೂರ್ತಿ ಎಂ.,೧೯೯೮, ಭಾಷಾ ವಿಜ್ಞಾನದ ಮೂಲ ತತ್ವಗಳು, ಪು. ಸಂ. ೧೧೩-೧೨೪

೧೧೩. ಶಂಕರ ಬಟ್ ಡಿ. ಎನ್., ೨೦೧೦, ಕನ್ನಡ ಪದಗಳ ಒಳ ರಚನೆ, ಭಾಷಾ ಪ್ರಕಾಶನ, ಪು. ೨೦

೧೧೪. ಅದೇ, ಪು. ಸಂ. ೨೮

೧೧೫. ಅದೇ, ಪು. ೩೬–೩೭

೧೧೬. ಅದೇ, ಪು. ೩೭

೧೧೭. ಅದೇ, ಪು. ೫೯

೧೧೮. ಅದೇ, ಪು. ೧೧೭

೧೧೯. ಅದೇ,

೧೨೦. ಅದೇ, ಪು. ೧೧೮

೧೨೧. ಅದೇ, ಪು. ಸಂ. ೧೧೯

೧೨೨. ಶ್ರೀಕಂಠಯ್ಯ ತೀ. ನಂ., ೨೦೦೮, ಕನ್ನಡ ಮಧ್ಯಮ ವ್ಯಾಕರಣ, ಪು. ಸಂ. ೧೨೨–೧೨೩

೧೨೩. ಶಂಕರ ಬಟ್ ಡಿ. ಎನ್., ೨೦೧೦, ಕನ್ನಡ ಪದಗಳ ಒಳ ರಚನೆ, ಭಾಷಾ ಪ್ರಕಾಶನ, ಪು. ೧೧೮, ೧೧೯

೧೨೪. ಅದೇ, ಪು. ಸಂ. ೧೨೨

೧೨೫. ಅದೇ, ಪು. ಸಂ. ೧೬೧

೧೨೬. ಅದೇ,

೧೨೭. ಅದೇ, ಪು. ಸಂ. ೧೬೮

೧೨೮. ಅದೇ, ಪು. ಸಂ. ೨೩೧, ೨೩೨

೧೨೯. ಅದೇ, ಪು. ಸಂ. ೨೩೩

೧೩೦. ಶಂಕರ ಬಟ್ ಡಿ. ಎನ್., ೨೦೦೫, ನಿಜಕ್ಕೂ ಹಳಗನ್ನಡ ವ್ಯಾಕರಣ ಎಂತಹದು?, ಪು. ಸಂ. ೫

೧೩೧. ಅದೇ,

೧೩೨. ಅದೇ,

೧೩೩. ಅದೇ, ಪು. ಸಂ. ೧೬

೧೩೪. ಅದೇ, ಪು. ಸಂ. ೨೧

೧೩೫. ಅದೇ, ಪು. ಸಂ. ೪೫

೧೩೬. ಅದೇ,

೧೩೭. ಅದೇ, ೪೬

೧೩೮. ನಾರಾಯಣ ಕೆ. ವಿ., ೨೦೧೫, ಬಳಕೆಯ ಸಂಸ್ಕೃತ ಪದಗಳಿಗೆ ಕನ್ನಡ ಪದಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪ್ರಸ್ತಾವನೆ

೧೩೯. ಶಂಕರ ಬಟ್ ಡಿ. ಎನ್., ೨೦೦೬, ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಭಾಷಾ ಪ್ರಕಾಶನ, ಮೈಸೂರು, ಪು. ೫

೧೪೦. ಅದೇ,

೧೪೧. ಅದೇ,

೧೪೨. ಅದೇ, ಪು. ೬

೧೪೩. ಅದೇ, ಪು. ೧೩

೧೪೪. ಅದೇ, ಪು. ೧೪

೧೪೫. ಅದೇ,

೧೪೬. ಅದೇ, ಪು. ೧೫

೧೪೭. ಅದೇ, ಪು. ೧೯

೧೪೮. ಅದೇ, ಪು. ೨೩

೧೪೯. ನಾರಾಯಣ ಕೆ. ವಿ., ೨೦೧೦ ತೊಂಡುಮೇವು ಕಂತೆ ಎರಡು ಕೆ.ವಿ.ಎನ್. ಈವರೆಗಿನ ಬರೆಹಗಳು,

ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು.೨೭೫–೨೮೯

೧೫೦. ಅದೇ, ಪು. ೨೮೮

೧೫೧. ಅದೇ, ಪು. ೨೮೯

೧೫೨. ನಾರಾಯಣ ಕೆ. ವಿ. ೨೦೧೧, ಕನ್ನಡದ ಆಡುನುಡಿಯ ಸೊಲ್ಲರಿಮೆ: ೧ – ಕನ್ನಡದ ಉಲಿಕಂತೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪು. ೨

೧೫೩. ಅದೇ,

೧೫೪. ನಾರಾಯಣ ಕೆ. ವಿ., ೨೦೧೦, ತೊಂಡುಮೇವು ಕಂತೆ ಎರಡು ಕೆ.ವಿ.ಎನ್. ಈವರೆಗಿನ ಬರೆಹಗಳು, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು. ೩೧೩

೧೫೫. ನಾರಾಯಣ ಕೆ. ವಿ., ೨೦೦೭, ಕನ್ನಡ ಜಗತ್ತು ಅರ್ಧಶತಮಾನ, ಮುನ್ನುಡಿ, ಬಿ.ಎ.ವಿವೇಕ ರೈ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫೬. ಅದೇ,

೧೫೭. ಚಲಪತಿ ಆರ್, ೨೦೧೫, ನಾರಾಯಣ ಕೆ. ವಿ., ೨೦೧೨, ತೊಡಕುಗಳು ಮತ್ತು ತೋರುದಾರಿ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು. vi

೧೫೮. ಚಲಪತಿ ಆರ್, ೨೦೧೫, ನಾರಾಯಣ ಕೆ. ವಿ., ೨೦೧೨, ತೊಡಕುಗಳು ಮತ್ತು ತೋರುದಾರಿ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪು. ೮೦

೧೫೯. ಅದೇ,

೧೬೦. ಅದೇ,

೧೬೧. ಅದೇ, ಪು. ೮೦, ೮೧.

೧೬೨ ಅದೇ, ಪು. ೮೨

೧೬೩. ಅದೇ, ಪು. ೯೪

೧೬೪. ಅದೇ, ಪು. ೯೪, ೯೫

ಅಧ್ಯಾಯ: ಆರು

ಭಾಷಿಕ ಬಿಡುಗಡೆಯ ಸವಾಲುಗಳು ಮತ್ತು ಸಾಧ್ಯತೆಗಳು

೬.೧. ಭಾಷಿಕ ಬಿಡುಗಡೆಯ ಸವಾಲುಗಳು

ಕನ್ನಡದಲ್ಲಿ ಭಾಷಿಕ ಬಿಡುಗಡೆ ಪ್ರಕ್ರಿಯೆಯಲ್ಲಿ ಅನೇಕ ಸವಾಲುಗಳು ಇವೆ. ಮುಖ್ಯವಾಗಿ ಡಿ. ಎನ್. ಶಂಕರ ಬಟ್ ಮತ್ತು ಕೆ. ವಿ. ನಾರಾಯಣ ಅವರ ಚಿಂತನೆಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಇದುವರೆಗೆ ಸಾಧ್ಯವಾಗಿಲ್ಲ. ಇದಕ್ಕೆ ಇಚ್ಚಾಶಕ್ತಿಯ ಕೊರತೆಯೇ ಪ್ರಮುಖ ಕಾರಣವೆನಿಸುತ್ತದೆ. ಈ ಅಧ್ಯಾಯದಲ್ಲಿ ಭಾಷಿಕ ಬಿಡುಗಡೆಗೆ ಎದುರಾಗುವ ಮುಖ್ಯವಾದ ಸವಾಲುಗಳು ಮತ್ತು ಬಿಡುಗಡೆಗೆ ಇರುವ ಸಾಧ್ಯತೆಗಳನ್ನು ಅಧ್ಯಯನ ನಡೆಸಲಾಗಿದೆ. ಈ ಮೂಲಕ ಅಧ್ಯಯನದ ಮುಖ್ಯ ಉದ್ದೇಶಗಳಲ್ಲೊಂದಾದ ಭಾಷಿಕ ಬಿಡುಗಡೆ ಪ್ರಕ್ರಿಯೆಯ ಸಾಧ್ಯಾಸಾಧ್ಯತೆಗಳ ಕುರಿತು ಬೆಳಕು ಬೀರಲು ಯತ್ನಿಸಲಾಗಿದೆ.

ಡಿ. ಎನ್. ಶಂಕರ ಬಟ್ಟರ ಕನ್ನಡ ಸಂಸ್ಕೃತ ಮೂಲವಲ್ಲ, ಕನ್ನಡದಲ್ಲಿ ಸಂಸ್ಕೃತದ ಬಳಕೆ ಬೇಕಿಲ್ಲ, ಅದರ ವ್ಯಾಕರಣ, ಅಕ್ಷರ, ಪದಗಳ ಬಳಕೆಯನ್ನು ನಿಲ್ಲಿಸಬೇಕು ಎಂಬ ಪ್ರಮೇಯಗಳನ್ನು ಪ್ರಮುಖವಾಗಿ ಪ್ರಶ್ನಿಸುತ್ತಿರುವವರು ಕೆ. ವಿ. ತಿರುಮಲೇಶ್. ಅವರ ಪ್ರಕಾರ: “ಕನ್ನಡದ ಕೆಲವು ಲಿಪಿಸುಧಾರಕರು ಈಗ ಕನ್ನಡ ವರ್ಣಮಾಲೆಯಿಂದ ಕೆಲವು ಅಕ್ಷರಗಳನ್ನು ಕೈಬಿಡಬೇಕೆಂದು ವಾದಿಸುತ್ತಿರುವ ಹಿನ್ನೆಲೆಯಲ್ಲಿ ಧ್ವನಿಗಳನ್ನು ಲಿಪಿಗಳಿಂದ ಪ್ರತ್ಯೇಕಿಸಿ ಮಾತಾಡುವುದು ಕಷ್ಟವಾಗುತ್ತದೆ; ಯಾಕೆಂದರೆ ಇಂದಿನ ಕನ್ನಡದಲ್ಲಿ ಅವರ ಪ್ರಕಾರ ಅವರೆನ್ನುವ ಆ ಧ್ವನಿಗಳೇ ಇಲ್ಲ ಎನ್ನುವುದು ಅವರ ವಾದಕ್ಕಿರುವ ಆಧಾರ. ಇವರಲ್ಲಿ ಕೆಲವರಿಗೆ ಕೆಲವು ಧ್ವನಿಗಳು ಕೇಳಿಸುತ್ತಿಲ್ಲ: ಈ ಕೇಳಿಸದ ಧ್ವನಿಗಳ ಪಟ್ಟಿ ಮಾಡಿದರೆ ಎಲ್ಲ ಮಹಾಪ್ರಾಣಗಳು, ಋ, ಷ, ಮತ್ತು ಅನುಸ್ವಾರ ಇವುಗಳಲ್ಲಿ ಸೇರುತ್ತವೆ; ಹಾಗೂ ಲಿಪಿಯಮಟ್ಟಿಗೆ ಅನುನಾಸಿಕ(ಬಿಂದು) ಮತ್ತು ಅರ್ಕಾವೊತ್ತು ಕೂಡ ಕತ್ತರಿಪ್ರಯೋಗಕ್ಕೆ ಒಳಗಾಗುತ್ತವೆ”[೧] ಎನ್ನುವ ಮೂಲಕ ಕೆ. ವಿ. ತಿರುಮಲೇಶ್ ಅವರು ಡಿ. ಎನ್. ಶಂಕರ ಬಟ್ಟರ ಕನ್ನಡ ಲಿಪಿ ಸುಧಾರಣೆಯನ್ನು ಪ್ರಶ್ನಿಸಿದ್ದಾರೆ. ಇನ್ನಷ್ಟು ಕನ್ನಡ ಎಂಬ ಅವರ ಕೃತಿಯಲ್ಲಿರುವ ಕನ್ನಡ ಧ್ವನ್ಯಾಲೋಕ ಎಂಬ ಲೇಖನದಲ್ಲಿ ಡಿ. ಎನ್. ಶಂಕರ ಬಟ್ಟರ ಹೆಸರನ್ನು ಉಲ್ಲೇಖಿಸದೆ ಅವರು ಪ್ರತಿಕ್ರಿಯಿಸಿದ್ದು, “ಸ್ವೀಕರಣ ಮನೋಧರ್ಮದ ಹೊರತು ಪುರೋಗತಿ ಸಾಧ್ಯವಿಲ್ಲ.

ಸುಧಾರಕರಂತೆ ವಾದಿಸುವವರದು ಅವರಿಗೆ ಗೊತ್ತಿಲ್ಲದೆಯೇ ನಿರಾಕರಣ ಮನೋಧರ್ಮ ಎನ್ನುವುದು ದುರದೃಷ್ಟಕರ"[೨] ಎಂದು ಅಭಿಪ್ರಾಯಪಡುತ್ತಾರೆ.

ಮೇಲಿನ ಕೆ. ವಿ. ತಿರುಮಲೇಶರ ವಾದವನ್ನು ಕೇಳಿಸಿಕೊಂಡವರಿಗೆ ಇಲ್ಲಿ ಒಂದು ರೀತಿಯ ವಿಧಿವಾದಿ ನಂಬಿಕೆ ಮತ್ತು ಸಂಸ್ಕೃತ ಪ್ರೇಮ ಮೇಲ್ನೋಟಕ್ಕೆ ಕಾಣಿಸದೆ ಇರದು. ಮನೋಧರ್ಮ, ಪುರೋಗತಿ, ಸಾಧ್ಯವಿಲ್ಲ, ಸುಧಾರಕ, ನಿರಾಕರಣ, ದುರದೃಷ್ಟಕರ ಎಂಬ ಅವರ ಪದಗಳಲ್ಲಿ ಸಂಸ್ಕೃತವೇ ತುಂಬಿ ತುಳುಕುತ್ತಿರುವುದನ್ನು ಕೂಡ ಕಾಣಬಹುದು. ಇಲ್ಲಿ ಡಿ. ಎನ್. ಶಂಕರ ಬಟ್ಟರನ್ನು ಹೆಸರು ಹೇಳದೆ ಲಿಪಿ ಸುಧಾರಕರು ಎನ್ನುವುದು ಮತ್ತು ಅವರ ವಾದವನ್ನು ಒಪ್ಪದೇ ಇರುವ ಕಾರಣಕ್ಕಾಗಿ ತಮ್ಮ ನಂಬಿಕೆಗೆ ವಿರುದ್ಧವಾಗಿರುವವರ ಕುರಿತು ಅನೇಕ ರೀತಿಯಲ್ಲಿ ಟೀಕಿಸಿರುವುದನ್ನು ಈ ಲೇಖನದಲ್ಲಿ ಕಾಣಬಹುದು. ಅಲ್ಲದೇ ಹೆಸರು ಹೇಳದೇ ಡಿ. ಎನ್. ಶಂಕರ ಬಟ್ಟರನ್ನು ನಾಟಕಕಾರ ಇಬ್ಸನ್‌ನ ಪಿಯರ್ ಗಿಂಟ್ ನಾಟಕದ ಹುಹು ಎಂಬ ಭಾಷಾ ಸುಧಾರಕನ ಪಾತ್ರಕ್ಕೆ ಹೋಲಿಸಿದ್ದಾರೆ.[೩]

"ಕನ್ನಡದ ಮಟ್ಟಿಗಾದರೆ ಅದೊಂದು ಭಾಷೆಯಾಗಿ ಇತಿಹಾಸದಲ್ಲಿ ಕಾಣಿಸಿಕೊಂಡಾಗಲೇ ಅದರಲ್ಲಿ ಮಹಾಪ್ರಾಣಾಕ್ಷರಗಳು, ಋ, ಷ ಮುಂತಾದವು ಇದ್ದುವು–ಅವು ಸಂಸ್ಕೃತದಿಂದ ಬಂದುವು ಎನ್ನುವುದು ಕೇವಲ ಪ್ರಾಸಂಗಿಕ. ಇವುಗಳನ್ನೆಲ್ಲ ಕಿತ್ತುಹಾಕುವುದೆಂದರೆ ಅದರ ಮೂಳೆ ಮುರಿದಂತೆಯೇ ಸರಿ. ಇವು ಸಹಜವಾಗಿ ಹೊರಟುಹೋದರೆ ಅದು ಬೇರೆ ಮಾತು; ಆದರೆ ರಾಜಕೀಯ ಪ್ರೇರಿತವಾದ 'ನಿರ್ಮಿತ ಸತ್ಯ'ವಾದರೆ ಅದು ಖಂಡನೀಯ. ಒಂದು ವೇಳೆ ಅವು ಹೊರಟುಹೋಗುತ್ತಿವೆ ಎನ್ನುವುದೇ ಆದರೂ ಅವನ್ನು ಉಳಿಸಿಕೊಳ್ಳುವುದು ವಿವೇಕವಾಗುತ್ತದೆ"[೪] ಎನ್ನುವ ತಿರುಮಲೇಶರು, 'ಮರಾಠಿಯ ಠಕಾರದ ಠೇಂಕಾರವೇನು, ಢಕಾರದ ಢಣಢನವೇನು!' ಎನ್ನುತ್ತಾರೆ. ಮೇಲಿನ ಅವರ ಅಭಿಪ್ರಾಯಗಳ ಪ್ರಕಾರ ಕನ್ನಡದಲ್ಲಿ ಆರಂಭದಿಂದಲೂ ಸಂಸ್ಕೃತದ ಪ್ರಭಾವ ಇದೆ. ಅದನ್ನು ಇಲ್ಲವಾಗಿಸಲು ಹೊರಡುವುದು ಮೂಳೆ ಮುರಿದಂತೆ. ಇನ್ನು ರಾಜಕೀಯ ಪ್ರೇರಿತ 'ನಿರ್ಮಿತ ಸತ್ಯ'ದ ಕುರಿತು ಅವರು ಪ್ರಸ್ತಾಪಿಸಿದ್ದಾರೆ. ಇವೆಲ್ಲವೂ ಸಂಸ್ಕೃತ ಪ್ರೇಮದಿಂದ ಹೊರಟಿರುವ ಅಭಿಪ್ರಾಯಗಳು ಎನಿಸುತ್ತದೆ. ಇದಕ್ಕೆ ಡಿ. ಎನ್. ಶಂಕರ ಬಟ್ಟರು ಕನ್ನಡ ದ್ರಾವಿಡ ಮೂಲದ ಭಾಷೆ, ಸಂಸ್ಕೃತ ಇಂಡೋ – ಆರ್ಯನ್ ಭಾಷೆ ಎನ್ನುವುದಕ್ಕೆ ಸಾಕ್ಷಿಗಳನ್ನು ನೀಡಿದ್ದಾರೆ.

ಡಿ. ಎನ್. ಶಂಕರ ಬಟ್ಟರ ಪ್ರಕಾರ: **"ವಿವರಿಸಲು ಸಾಧ್ಯವಾಗದ ವ್ಯತ್ಯಾಸಗಳನ್ನಾದರಿಸಿ, ಸಂಸ್ಕೃತ ಮತ್ತು ಕನ್ನಡ ನುಡಿಗಳನ್ನು ಎರಡು ತೀರ ಬೇರಾಗಿರುವ ಮೂಲ ನುಡಿಗಳಿಂದ ಬೆಳೆದು ಬಂದಿರುವವುಗಳೆಂಬುದಾಗಿ ಪರಿಗಣಿಸಬೇಕಾಗಿದೆ. ಸಂಸ್ಕೃತ 'ಇಂಡೋ–ಆರ‍್ಯನ್' ಎಂಬ ಹೆಸರಿನ ಮೂಲ ನುಡಿಯಿಂದ ಮತ್ತು ಕನ್ನಡ ಅದಕ್ಕಿಂತ ತೀರ ಬೇರಾಗಿರುವ 'ದ್ರಾವಿಡ' ಎಂಬ ಹೆಸರಿನ ಮೂಲ ನುಡಿಯಿಂದ ಬಂದಿದೆಯೆಂಬುದಾಗಿ ಇವತ್ತು ಕಲ್ಪಿಸಿಕೊಳ್ಳಬೇಕಾಗಿದೆ"**[೫] ಎನ್ನುತ್ತಾರೆ. ಆದರೆ. ಶಂಕರ ಬಟ್ಟರ ವಾದಗಳನ್ನು ಆಲಿಸದ ತಿರುಮಲೇಶರು "ಮೂಲಭೂತವಾದ ಯಾವತ್ತೂ ಸ್ವಯಂಸಮರ್ಥನೆಯ ಏಕಮುಖ ಚಿಂತನೆಯದಾಗಿದ್ದು, ತನಗಿಂತ ಭಿನ್ನವಾದುದಕ್ಕೆಲ್ಲ ಮಾನಸಿಕವಾಗಿ ಮುಚ್ಚಿರುತ್ತದೆ"[೬]

ಎಂದು ಅಭಿಪ್ರಾಯಪಡುತ್ತಾರೆ. ಆದರೆ, ಅವರ ಈ ಆರೋಪವನ್ನು ಸ್ವತಃ ಅವರಿಗೂ ಅನ್ವಯಿಸಬಹುದು ಎಂಬ ಸಂಗತಿ ಗಮನಾರ್ಹ.

ಕನ್ನಡ ಪದಗಳ ಬಳಕೆ ಕುರಿತು ಕೆ. ವಿ. ತಿರುಮಲೇಶರ ಇನ್ನೊಂದು ವಾದ ಸರಣಿ ಹೀಗಿದೆ: "ಕಾಷ್ಟ, ಸ್ವರ್ಣ ಮುಂತಾದ ಮೂಲಗಳನ್ನು ಬಿಟ್ಟು ಕಟ್ಟಿಗೆ, ಚಿನ್ನ ಇತ್ಯಾದಿ ತದ್ಭವಗಳನ್ನು ಮಾತ್ರವೇ ಉಳಿಸಿಕೊಂಡರೆ ಕನ್ನಡದ ಧ್ವನ್ಯಾಲೋಕವನ್ನು ಬಡವಾಗಿಸಿದಂತೆ"[೭] ಎನ್ನುವುದು ಅವರ ಅಭಿಪ್ರಾಯವಾಗಿದೆ. ಇದು ನಿಜಕ್ಕೂ ಸಂಸ್ಕೃತ ಪ್ರೇಮದ ಪರಾಕಾಷ್ಠೆ ಎನ್ನದೇ ಬೇರೆ ವಿವರಣೆ ಸಾಧ್ಯವಿಲ್ಲ ಎನಿಸುತ್ತದೆ. ಕನ್ನಡದಲ್ಲಿ ಕಟ್ಟಿಗೆ, ಚಿನ್ನ ಎಂಬ ಪ್ರಯೋಗಗಳನ್ನು ಬಳಸಿದ ಮಾತ್ರಕ್ಕೆ ಕನ್ನಡದ ಧ್ವನ್ಯಾಲೋಕವನ್ನು ಬಡವಾಗಿಸಿದಂತೆ ಎನ್ನುವುದಕ್ಕೆ ಅವರು ಯಾವುದೇ ವಿವರಣೆಯನ್ನು ಕೊಡುವ ಗೊಡವೆಗೆ ಹೋಗುವುದಿಲ್ಲ ಎನ್ನುವುದು ಗಮನಿಸಬೇಕು ಎನಿಸುತ್ತದೆ. ಇದರೊಂದಿಗೆ ಆಡುನುಡಿಯ ಕುರಿತು ಕೆ. ವಿ. ತಿರುಮಲೇಶರ ಅಭಿಪ್ರಾಯಗಳು ಹೀಗಿವೆ: "ಅದೃಷ್ಟವಶಾತ್ ಕನ್ನಡ ಆಡುಮಾತಿನ ಶೈಲಿಯಲ್ಲಿ ಸ್ವರಗಳು ಲುಪ್ತವಾಗಿ ಉಪ ಉತ್ಪತ್ತಿಯಂತೆ ಸಂಯುಕ್ತಾಕ್ಷರಗಳು ತಲೆದೋರುವುದಿದೆ: 'ಬಂದ್ಯಾ', 'ಕೂತ್ಕೋ', 'ಕತ್ಲು' ಮುಂತಾಗಿ. ಆದರೆ, ಗಂಭೀರ ವೈಚಾರಿಕ ಬರಹದಲ್ಲಿ ಇವು ಇನ್ನೂ ಸ್ವೀಕೃತವಲ್ಲ"[೮] ಎನ್ನುತ್ತಾರೆ. ಈ ಮೂಲಕ ಗ್ರಾಮ್ಯ ಮತ್ತು ಆಡುನುಡಿಯಲ್ಲಿ ಬಳಕೆಯಲ್ಲಿರುವ ರೂಪಗಳನ್ನು ಅವರು ಗಂಭೀರ ಎಂದು ಪರಿಗಣಿಸಲು ಸಿದ್ಧರಿಲ್ಲ ಎನ್ನುವುದಕ್ಕೆ ಸಾಕ್ಷ್ಯಗಳನ್ನು ಅವರ ಮೇಲಿನ ಉಲ್ಲೇಖಗಳಲ್ಲಿ ನೀಡಿದ್ದಾರೆ. ಹಾಗಾದಲ್ಲಿ, 'ಬಂದ್ಯಾ', 'ಕೂತ್ಕೋ', 'ಕತ್ಲು' ಮುಂತಾದ ಪ್ರಯೋಗಗಳು ಗಂಭೀರವಲ್ಲವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದನ್ನು ಬಳಸುವವರು ಲಘುವಾಗಿ ಬಳಸುತ್ತಾರೆಯೇ? ಇವುಗಳನ್ನು ಕೇಳಿ ಅರ್ಥೈಸಿಕೊಳ್ಳುವವರು ಕೂಡ ಗಂಭೀರವಾಗಿ ಪರಿಗಣಿಸುವುದಿಲ್ಲವೇ? ಮುಂತಾದ ಪ್ರಶ್ನೆಗಳೂ ಎದುರಾಗುತ್ತವೆ.

'ಇನ್ನಷ್ಟು ಕನ್ನಡ' ಕೃತಿಯ 'ಕನ್ನಡ: ಅಜ್ಜಿ ಕತೆಯೂ ವೈಚಾರಿಕತೆಯೂ' ಎಂಬ ಲೇಖನದಲ್ಲಿ ಋಕಾರವನ್ನು ಶಾಲಾ ಪಠ್ಯಗಳಿಂದ ಕೈಬಿಡಬೇಕು ಎಂಬ ಚರ್ಚೆ ಮತ್ತು ನಂತರದ ಬೆಳವಣಿಗೆಗಳ ಕುರಿತು ಕೆ. ವಿ. ತಿರುಮಲೇಶರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ಮೊದಲು ಋಕಾರವನ್ನು ಕಿತ್ತುಹಾಕಬೇಕೆಂದರು; ನಂತರ ಮಹಾಪ್ರಾಣ ಮತ್ತು ಷ ಮುಂತಾದ ಅಕ್ಷರಗಳೇ ಬೇಡ ಎಂದರು; ತಾವು ಸಂಸ್ಕೃತಕ್ಕೆ ವಿರುದ್ಧವಲ್ಲ ಎನ್ನುತ್ತಲೇ ಈಗ ತದ್ಭವಗಳನ್ನು ಉಳಿದು ಇನ್ನೆಲ್ಲ ಸಂಸ್ಕೃತಮೂಲದ ಪದಗಳನ್ನೂ ಉಚ್ಚಾಟಿಸಬೇಕೆಂದು ಹಟ ಹಿಡಿಯುತ್ತಿದ್ದಾರೆ. ಇದೇ ಇವರ ನಿಜವಾದ ಅಜೆಂಡಾ ಎಂದು ಗೊತ್ತಾಗುತ್ತದೆ; ಎಂದರೆ ಸದ್ಯಕ್ಕೆ ಕನ್ನಡದಿಂದ ಸಂಸ್ಕೃತಮೂಲ ಪದಗಳನ್ನು ಕಿತ್ತುಹಾಕುವುದು; ಮುಂದೆ ಬಹುಶಃ ತದ್ಭವಗಳನ್ನು ಕೂಡ ತೆಗೆಯುವುದು"[೯] ಎನ್ನುವ ಅವರು, ಮುಂದುವರೆದು "ಇದೊಂದು ಸಂಕುಚಿತ ಮನಸ್ಸಿನ 'ಪರದ್ವೇಷ; ಇದರ ಗುರಿ 'ಜನಾಂಗಶುದ್ಧೀಕರಣ'" ಎನ್ನುತ್ತಾರೆ. ಈ ಮೂಲಕ ಲಿಪಿ ಸುಧಾರಣೆಯನ್ನು ಮತ್ತು ಸಂಸ್ಕೃತ ಮೂಲವನ್ನು ಪ್ರಶ್ನಿಸುತ್ತಿರುವುದನ್ನು ತಿರುಮಲೇಶರು ವಿರೋಧಿಸುತ್ತಿದ್ದಾರೆ.

ಋಕಾರದ ಕುರಿತ ಕೆ. ವಿ. ತಿರುಮಲೇಶರ ಪ್ರಶ್ನೆಗಳಿಗೆ ಡಿ. ಎನ್. ಶಂಕರ ಬಟ್ಟರ ಉತ್ತರ ಇಲ್ಲಿದೆ: "ಸಂಸ್ಕೃತ ಪದಗಳನ್ನು ಸರಿಯಾಗಿ ಉಚ್ಚರಿಸದಿದ್ದರೂ ಬರೆಯುವಾಗ ಮಾತ್ರ ಅವನ್ನು ಸಂಸ್ಕೃತ

ಬರಹಗಳಲ್ಲಿ ಇರುವ ಹಾಗೆಯೇ ಬರೆಯಬೇಕು, ಹಾಗೆ ಬರೆಯದಿದ್ದರೆ ನಮ್ಮ ಸಂಸ್ಕೃತಿಯೇ ನಷ್ಟವಾಗಿ ಹೋಗುತ್ತದೆಯೆಂಬುದಾಗಿ ಇತ್ತೀಚೆಗೆ ಋಕಾರದ ವಿಶಯದಲ್ಲಿ ನಡೆದ ಚರ್ಚೆಯ ಸಮಯದಲ್ಲಿ ಕೆಲವರು ಕನ್ನಡ ವಿದ್ವಾಂಸರು ಹೆದರಿಕೆಯನ್ನು ಹುಟ್ಟಿಸಿದ್ದರು. ಇಂತಹ ಆದಾರವಿಲ್ಲದ ಹೆದರಿಕೆಯೇ ಕನ್ನಡ ಬರಹದ ಮಟ್ಟಿಗೆ ಅವಶ್ಯವಿಲ್ಲದಿರುವ ಮೇಲಿನ ನಿರ್ಬಂದದಿಂದ ಹೊರಬರಲು ನಮಗೆ ಸಾದ್ಯವಾಗದಿರುವುದೇ ಮೂಲ ಕಾರಣ"[೧೦] ಎನ್ನುವುದು ಶಂಕರ ಬಟ್ಟರ ಅಭಿಪ್ರಾಯವಾಗಿದೆ.

ಆದರೆ ಕೆ. ವಿ. ತಿರುಮಲೇಶರಿಗೆ ಈಗ ಪ್ರಚಲಿತದಲ್ಲಿರುವ ಸಂಸ್ಕೃತಮಿಶ್ರಿತ ಕನ್ನಡವೇ ಮುಂದುವರೆಯಬೇಕು. ಅದಕ್ಕಾಗಿ ಅವರು ಕೆಲವು ಉದಾಹರಣೆಗಳನ್ನು ಕೂಡ ನೀಡುತ್ತಾರೆ. "ಆಧುನಿಕ ಕನ್ನಡದಲ್ಲಿ ಸಂಸ್ಕೃತ ಮೂಲದ ಮಾತ್ರವೇ ಅಲ್ಲ, ಅರೇಬಿಕ್, ಪರ್ಶಿಯನ್, ಉರ್ದು, ಹಿಂದಿ, ಮರಾಠಿ, ಇಂಗ್ಲಿಷ್ ಮೂಲದ ಪದಗಳೂ ಧ್ವನಿಗಳೂ ಇವೆ. ಇವೆಲ್ಲವನ್ನೂ ಕಿತ್ತುಹಾಕೋಣವೇ? ಯಾಕೆಂದರೆ, ಈ ಪದಗಳನ್ನು ಸರ್ವರೂ ಆಡುಮಾತಿನಲ್ಲಿ ಬಳಸುತ್ತಿಲ್ಲ, ಕೆಲವರು ಮಾತ್ರವೇ ಬಳಸುತ್ತಾರೆ"[೧೧] ಎಂದು ಪ್ರಶ್ನಿಸಿದ್ದಾರೆ. ಡಿ. ಎನ್. ಶಂಕರ ಬಟ್ಟರ ವಾದವನ್ನು ಸೋಲಿಸುವ ಹಠ ಮೇಲಿನ ಅವರ ಅಭಿಪ್ರಾಯಗಳಲ್ಲಿ ಎದ್ದುಕಾಣುತ್ತದೆ. ಆದರೆ, ಇದಕ್ಕೆ ಡಿ. ಎನ್. ಶಂಕರ ಬಟ್ಟರು ತಮ್ಮ ಕೃತಿಯಲ್ಲೇ ಸ್ಪಷ್ಟೀಕರಣವನ್ನು ನೀಡಿದ್ದಾರೆ.

ಕೆ. ವಿ. ತಿರುಮಲೇಶ್ ಅವರ ಪ್ರಕಾರ: "ಸುಧಾರಣಾವಾದಿಗಳು ಕಿತ್ತುಹಾಕಬೇಕೆಂದಿರುವ ಅಕ್ಷರಗಳನ್ನು ಕಲಿಯಲು ಬರದಿರುವ ಕನ್ನಡಿಗರು ಯಾರೆನ್ನುವುದೇ ಗೊತ್ತಾಗುತ್ತಿಲ್ಲ. ಒಂದು ವೇಳೆ ಅಂಥವರಿದ್ದರೂ ಅವರದೇ ಪ್ರಭೇದ ಸರ್ವರಿಗೂ ಮಾದರಿಯಾಗಬೇಕೆನ್ನುವುದು ನ್ಯಾಯವಲ್ಲ"[೧೨]ವಂತೆ. ಆದರೆ, ಡಿ. ಎನ್. ಶಂಕರ ಬಟ್ಟರು ಹೇಳುತ್ತಿರುವ ಹೊಸ ಬರಹಕ್ಕೆ ಸಂಬಂಧಿಸಿದಂತೆ ಅನೇಕ ಸೂಕ್ಷ್ಮ ಅಂಶಗಳಿವೆ. ಕನ್ನಡ – ಸಂಸ್ಕೃತದ ಜಾಯಮಾನ ಬೇರೆ ಎಂಬುದಷ್ಟೇ ಅಲ್ಲದೇ, ಜನ ದಿನಬಳಕೆಯಲ್ಲಿ ಬಳಸುತ್ತಿರುವ ಕನ್ನಡದ ಮಾದರಿಯಲ್ಲಿ ಬರಹ ಇರಬೇಕು ಎನ್ನುವುದು ಡಿ. ಎನ್. ಶಂಕರ ಬಟ್ಟರ ವಾದವಾಗಿದೆ. ಮೇಲಿನ ತಿರುಮಲೇಶರ ಉಲ್ಲೇಖದಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬಹುದು. ಅವರ ಪ್ರಕಾರ, ಸಂಸ್ಕೃತ ಅಕ್ಷರಗಳನ್ನು ಕಲಿಯದ ಕನ್ನಡಿಗರು ಯಾರೆಂಬುದು ಗೊತ್ತಾಗುತ್ತಿಲ್ಲವಂತೆ. ಈ ಮೂಲಕ ಸಂಸ್ಕೃತ ಪದಗಳನ್ನು ಉಲ್ಲೇಖಿಸಲು ಬಾರದ ಮತ್ತು ಸರಿಯಾಗಿ ಬರೆಯಲು ಬಾರದವರನ್ನು ಒಂದು ರೀತಿಯಲ್ಲಿ ಕಡೆಗಣಿಸುವ ದೃಷ್ಟಿಕೋನ ಇರುವುದನ್ನೂ ಗುರುತಿಸಬಹುದು. ಡಿ. ಎನ್. ಶಂಕರ ಬಟ್ಟರ ವಾದವನ್ನು ವಿರೋಧಿಸುವ ಭರದಲ್ಲಿ ಬಹುಸಂಖ್ಯಾತರ ಆಡುನುಡಿಯನ್ನು ಕೂಡ ಅವಮಾನಿಸುವ ಕೆಲಸವನ್ನು ತಿರುಮಲೇಶರು ಮಾಡಿದಂತೆ ತೋರುತ್ತದೆ. ಜೊತೆಗೆ, "'ಕನ್ನಡಕ್ಕೆ ಬೇಕು ಕನ್ನಡದ್ದೇ', 'ಕನ್ನಡದೊಳಗಿಂದಲೇ' ಮುಂತಾದ ಮಾತುಗಳು ಕೇಳಲು ಖುಷಿಯೆನಿಸುತ್ತವೆ. ಕಿವಿಗೆ ಹಿತವೆನಿಸುವುದರ ಬಗ್ಗೆ ನಾವು ಜಾಗ್ರತೆವಹಿಸುವುದು ಅಗತ್ಯ"[೧೩] ಎಂದು ಕೂಡ ತಿರುಮಲೇಶರು ಅಭಿಪ್ರಾಯಪಡುತ್ತಾರೆ.

ಆದರೆ, ಡಿ. ಎನ್. ಶಂಕರ ಬಟ್ಟರು ತಮ್ಮ ಬರಹದ ಮಾದರಿಯನ್ನು ಎಲ್ಲರೂ ಬಳಸಬೇಕು ಎಂದು ಒತ್ತಾಯಿಸುತ್ತಿಲ್ಲ. ಆದರೆ, ಯಾವುದನ್ನು ಯಾಕೆ ಬಳಸಬೇಕು ಎಂಬ ಕುರಿತು ಸಂಶೋಧನಾತ್ಮಕವಾಗಿ ವಾದ, ಪ್ರಮೇಯಗಳನ್ನು ಮಂಡಿಸುತ್ತಿದ್ದಾರೆ. ಇದರಲ್ಲಿ ಯಾವುದೇ ರೀತಿಯ

ಒತ್ತಾಯದ ಬದಲಿಗೆ ಹೊಸ ಬರಹವನ್ನು ಯಾಕೆ ಬಳಸಬೇಕು ಎಂಬುದಕ್ಕೆ ಸಾಕ್ಷಿಗಳನ್ನು ನೀಡುತ್ತಿದ್ದಾರೆ. ತಾವು ಸೂಚಿಸಿರುವುದನ್ನು ಎಲ್ಲರೂ ಕಡ್ಡಾಯವಾಗಿ ಬಳಸಬೇಕೆಂಬ ನಿಯಮ ಬೇಕಿಲ್ಲ ಎಂದು ಕೂಡ ಅವರು ಅಭಿಪ್ರಾಯಪಡುತ್ತಾರೆ. **"ಮೇಲೆ ಸೂಚಿಸಿರುವ ಬದಲಾವಣೆಗಳನ್ನು ಎಲ್ಲರೂ ಕಡ್ಡಾಯವಾಗಿ ಬಳಸಬೇಕೆಂಬುದಾಗಿ ನಿಯಮವನ್ನು ಮಾಡುವ ಬದಲು ಆಯ್ಕೆಯನ್ನು ಬರಹಗಾರರಿಗೆ ಬಿಡುವುದು ಒಳ್ಳೆಯದೆಂದು ನನಗೆ ಅನಿಸುತ್ತದೆ. ಹಳೆ ಬರಹವೇ ಕನ್ನಡಕ್ಕೆ ಯೋಗ್ಯವಾದುದೆಂದು ನಂಬುವವರು ತಮ್ಮ ಬರಹಗಳಲ್ಲಿ ಅದನ್ನೇ ಬಳಸುತ್ತಿರಬಹುದು ಮತ್ತು ಅದಕ್ಕಿಂತ ಹೊಸ ಬರಹ ಉತ್ತಮವೆಂದು ನಂಬುವವರು ಅದನ್ನು ಬಳಸುತ್ತಿರಬಹುದು"**[೧೪] ಎನ್ನುತ್ತಾರೆ. ಈ ಮೂಲಕ ತಮ್ಮ ಬರಹದ ಮಾದರಿಯನ್ನು ಎಲ್ಲರೂ ಅನುಸರಿಸಬೇಕೆಂಬ ಒತ್ತಾಯದ ಬದಲಾಗಿ ಆಯ್ಕೆಯ ಅವಕಾಶವನ್ನು ಮುಕ್ತವಾಗಿ ಎಲ್ಲರಿಗೂ ಇದೆ ಎಂದು ಹೇಳುತ್ತಾರೆ. ಆದರೆ, ತಮ್ಮ ಹೊಸ ಬರಹದ ಆಯ್ಕೆ ಭವಿಷ್ಯದಲ್ಲಿ ಯಶಸ್ಸಾಗುವ ಭರವಸೆಯನ್ನು ಕೂಡ ಅವರು ವ್ಯಕ್ತಪಡಿಸುತ್ತಾರೆ. **"ಸಮಯ ಕಳೆದಂತೆಲ್ಲ ಹೆಚ್ಚು ಹೆಚ್ಚು ಮಂದಿ ಕನ್ನಡದ ಮಟ್ಟಿಗೆ ಹೊಸ ಬರಹವೇ ಸರಿಯಾದುದೆಂಬುದನ್ನು ಕಂಡುಕೊಳ್ಳದಿರರು ಮತ್ತು ಅದನ್ನು ಬಳಸುವವರ ಎಣಿಕೆ ಹೆಚ್ಚುತ್ತಾ ಹೋಗಿ ಕೊನೆಗೆ ಅದು ಹಳೆಯದರ ಜಾಗವನ್ನು ಆಕ್ರಮಿಸದಿರದು. ಇದು ನನ್ನ ನಂಬಿಕೆ"**[೧೫] ಎನ್ನುತ್ತಾರೆ. ಈ ಮೂಲಕ ತಮ್ಮ ಹೊಸ ಬರಹದ ಪ್ರಯೋಗ ಭವಿಷ್ಯದಲ್ಲಿ ಎಲ್ಲರ ಆಯ್ಕೆಯಾಗಲಿದೆ ಎನ್ನುವುದು ಅವರ ನಂಬಿಕೆಯಾಗಿದೆ.

ಕನ್ನಡ ಬರಹಗಳಲ್ಲಿ ಸಂಸ್ಕೃತ ಪದಗಳನ್ನು ಬಳಸಲೇಬೇಕಾದ ಅನಿವಾರ್ಯ ಸಂದರ್ಭಗಳ ಕುರಿತು ಅವರ ಅಭಿಪ್ರಾಯ ಹೀಗಿದೆ: **"ಕನ್ನಡ ಬರಹಗಳಲ್ಲಿ ಸಂಸ್ಕೃತ ಪದಗಳನ್ನು ಬಳಸಲೇಬೇಕಾಗುವಂತಹ ಸಂದರ್ಬಗಳು ಹಲವು ಬರಬಹುದು. ಈಗಾಗಲೇ ಬರಹದಲ್ಲಿ ಮತ್ತು ಮಾತಿನಲ್ಲಿ ನೂರಾರು ಸಂಸ್ಕೃತ ಪದಗಳು ಬಳಕೆಗೆ ಬಂದಿವೆ. ಇವನ್ನೆಲ್ಲ ಒಂದೇ ಬಾರಿಗೆ ಬದಲಿಸಲು ಸಾದ್ಯವಾಗದು ಮತ್ತು ಹಾಗೆ ಬದಲಿಸುವ ಅವಶ್ಯಕತೆಯೂ ಇಲ್ಲ. ಆದರೆ ಈ ಪದಗಳ ಉಚ್ಚಾರಣೆಗೂ ಬರವಣಿಗೆಗೂ ನಡುವೆ ಕಾಣಿಸುವ ಹಲವು ರೀತಿಯ ಅವಶ್ಯವಿಲ್ಲದ ವ್ಯತ್ಯಾಸಗಳನ್ನು ಇಲ್ಲವಾಗಿಸಲು ಸಾದ್ಯವಿದೆ"**[೧೬] ಎಂದು ಶಂಕರ ಬಟ್ಟರು ಅಭಿಪ್ರಾಯಪಡುತ್ತಾರೆ. ಆದರೆ, ಇದನ್ನು ಗಮನಿಸದ ಕೆ. ವಿ. ತಿರುಮಲೇಶರು ಸಂಸ್ಕೃತೇತರ ಭಾಷೆಗಳ ಪದಗಳನ್ನು ಕಿತ್ತುಹಾಕೋಣವೇ ಎಂದು ಪ್ರಶ್ನಿಸುತ್ತಾರೆ.

ಕನ್ನಡದಲ್ಲಿ ಸಂಸ್ಕೃತದಲ್ಲಿರುವಂತೆಯೇ ಬರೆಯುವುದರ ಕುರಿತು ಡಿ. ಎನ್. ಶಂಕರ ಬಟ್ಟರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: **"ಕನ್ನಡ ಬರಹಗಾರರ ಈ ವಿದಾನ ನಿಜಕ್ಕೂ ವಿಚಿತ್ರವಾಗಿದೆ. ಕನ್ನಡ ಪದಗಳನ್ನು ಬರಹದಲ್ಲಿ ಹೇಗೆ ಬೇಕಿದ್ದರೂ ಬದಲಾಯಿಸಿಕೊಳ್ಳಬಹುದು; ಅದಕ್ಕೆ ಅವರ ಆಕ್ಷೇಪವಲ್ಲ. ಸಂಸ್ಕೃತ ಪದಗಳನ್ನು ಮಾತ್ರ ಸ್ವಲ್ಪವೂ ಬದಲಾಯಿಸದೆ ಎರಡು ಸಾವಿರ ವರ್ಶಗಳಷ್ಟು ಹಿಂದೆ ಅವು ಹೇಗಿದ್ದುವೋ ಹಾಗೆಯೇ ಇವತ್ತೂ ಕನ್ನಡ ಬರಹದಲ್ಲಿ ಉಳಿಸಿಕೊಳ್ಳಬೇಕು; ಇಲ್ಲವಾದರೆ ನಮ್ಮ ಸಂಸ್ಕೃತಿಯೇ ನಶ್ಟವಾಗಿ ಬಿಡುತ್ತದೆ ಎಂಬುದಾಗಿ ಅವರು ವಾದಿಸುತ್ತಿದ್ದಾರೆ"**[೧೭] ಎನ್ನುತ್ತಾರೆ. ತಮ್ಮ ಮಾತಿಗೆ ಋ – ರು, ಐ – ಅಯ್, ಔ – ಅವ್, ಅನುಸ್ವಾರ – ಅನುನಾಸಿಕಗಳಾದ ಙ, ಞಗಳು ಮತ್ತು ವಿಸರ್ಗಗಳ ಉಚ್ಚಾರಣೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ ಎನ್ನುತ್ತಾರೆ.

"ಹೆಚ್ಚು ಹೆಚ್ಚು ಸಂಸ್ಕೃತ ಪದಗಳನ್ನು ಬಳಸುವುದರಿಂದಾಗಿ ಕನ್ನಡ ಬರಹ ತನ್ನತನವನ್ನೂ ಕಳೆದುಕೊಳ್ಳುತ್ತಿದೆ. ಕನ್ನಡದಲ್ಲಿ ಹೊಸ ಪದಗಳನ್ನು ಉಂಟುಮಾಡಬೇಕಾದಾಗಲೆಲ್ಲ ನಮ್ಮ ಬರಹಗಾರರು ಕನ್ನಡದ ಬದಲು ಸಂಸ್ಕೃತದ ಮೊರೆ ಹೋಗುತ್ತಿದ್ದಾರೆ. ನಮಗೆ ಅವಶ್ಯವಿರುವ ಹೊಸ ಪದಗಳನ್ನು ಉಂಟುಮಾಡುವ ಶಕ್ತಿಯೇ ಕನ್ನಡಕ್ಕಿಲ್ಲ ಎಂಬ ತಪ್ಪು ಕಲ್ಪನೆಯೂ ಇದರಿಂದಾಗಿ ಜನರಲ್ಲಿ ಬೆಳೆಯುತ್ತಿದೆ"[೧೮] ಎನ್ನುವುದು ಅವರ ಅಭಿಪ್ರಾಯವಾಗಿದೆ. ಇದಲ್ಲದೇ ಕನ್ನಡದಲ್ಲಿ ರಚನೆಯಾಗುತ್ತಿದ್ದ ಶಾಸ್ತ್ರ ಗ್ರಂಥಗಳು ಸಂಸ್ಕೃತವನ್ನು ಅನುಸರಿಸಿದ ಪರಿಣಾಮದಿಂದಾಗಿ ಕನ್ನಡದಲ್ಲಿ ಸಂಸ್ಕೃತ ಪದಗಳ ಯಥಾವತ್ತಾದ ಬಳಕೆಯ ಸಮಸ್ಯೆ ತಲೆದೋರಿದೆ ಎನ್ನುತ್ತಾರೆ. ಅಲ್ಲದೇ, ಭವಿಷ್ಯದಲ್ಲಿ ತಮ್ಮನ್ನು ಸಂಸ್ಕೃತ ದ್ವೇಷಿ ಎಂದು ಕರೆಯುತ್ತಾರೆ ಎಂಬ ಎಚ್ಚರ ಪ್ರಾಯಶಃ ಡಿ. ಎನ್. ಶಂಕರ ಬಟ್ಟರಿಗೆ ಇರಲಿಲ್ಲ ಎನಿಸುತ್ತದೆ. ಈ ಕುರಿತ ಅವರ ಅಭಿಪ್ರಾಯ ಹೀಗಿದೆ: **"ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ ಎಂಬ ನನ್ನ ಪುಸ್ತಕವನ್ನೋದಿದ ಮಿತ್ರರೊಬ್ಬರು 'ಸಂಸ್ಕೃತದ್ವೇಶಿ' ಎಂಬ ಹಣೆಪಟ್ಟಿಯನ್ನು ನನಗೆ ಕಟ್ಟಿದ್ದರು. ಕನ್ನಡ ಬರವಹವನ್ನು ಸರಿಪಡಿಸೋಣ ಎಂಬ ಈ ಪುಸ್ತಕವನ್ನು ನೋಡಿದಲ್ಲಿ ಅವರ ಅನಿಸಿಕೆ ಇನ್ನಷ್ಟು ಗಟ್ಟಿಯಾಗಬಹುದು. ಆದರೆ, ನಿಜಕ್ಕೂ ನನಗೆ ಸಂಸ್ಕೃತದ ಮೇಲೆ ದ್ವೇಶ ಇಲ್ಲ. ಮೇಲಿನ ಎರಡು ಪುಸ್ತಕಗಳನ್ನೂ ತುಸು ಎಚ್ಚರಿಕೆಯಿಂದ ಓದಿದವರಿಗೆ ಅದರಲ್ಲಿ ನಾನು ಮುಂದಿಟ್ಟಿರುವ ಒಂದೇ ಒಂದು ವಾದವೂ ದ್ವೇಶದಿಂದ ಹುಟ್ಟಿದುದಲ್ಲ ಎಂಬುದು ಸ್ಪಷ್ಟವಾಗದಿರದು"**[೧೯] ಎನ್ನುವ ಡಿ. ಎನ್. ಶಂಕರ ಬಟ್ಟರು ತಮ್ಮ ಉದ್ದೇಶ ಮತ್ತು ಗುರಿಗಳ ಕುರಿತು ಭವಿಷ್ಯದಲ್ಲಿ ಎದುರಾಗಬಹುದಾದ ಆರೋಪಗಳ ಕುರಿತು ಮೊದಲೇ ಆತಂಕವನ್ನು ಪ್ರಕಟಿಸಿದ್ದಾರೆ. ಅವರ ನಿರೀಕ್ಷೆಯಂತೆಯೇ ಅವರಿಗೆ ಸಂಸ್ಕೃತ ವಿರೋಧಿ ಎಂಬ ಪಟ್ಟವನ್ನು ಕಟ್ಟಲಾಗಿದೆ.

ಡಿ. ಎನ್. ಶಂಕರ ಬಟ್ಟರ ಪ್ರತಿಕ್ರಿಯೆಗಳ ನಂತರ ಕೆ. ವಿ. ತಿರುಮಲೇಶರು ತಮ್ಮ ನಿಲುವಿನ ಕುರಿತು 'ಇನ್ನಷ್ಟು ಕನ್ನಡ' ಕೃತಿಯ 'ಕನ್ನಡ: ತುಂಬಿಯೂ ಇರಲಿ, ಭೃಂಗವೂ ಇರಲಿ' ಎಂಬ ಲೇಖನದಲ್ಲಿ ಸ್ಪಷ್ಟೀಕರಣ ನೀಡಿದ್ದಾರೆ. "ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಸಂಸ್ಕೃತದ್ವೇಷಿಯೂ ಅಲ್ಲ. ಯಾವ ಭಾಷೆಯನ್ನೂ ದ್ವೇಷಿಸುವವನಲ್ಲ. ಸಾಧ್ಯವಿದ್ದರೆ ಆದಷ್ಟೂ ಭಾಷೆಗಳನ್ನು ಪ್ರತಿಯೊಬ್ಬನೂ ಕಲಿಯಬೇಕು ಎನ್ನುವವನು. ಎಲ್ಲ ಕನ್ನಡಿಗರಂತೆ ನನಗೂ ಕನ್ನಡದ ಮೇಲೆ ಹೆಚ್ಚಿನ ವಾತ್ಸಲ್ಯವೂ ಇದೆ"[೨೦] ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಇದಕ್ಕೂ ಮುನ್ನ "ಕನ್ನಡ ಲಿಪಿ ಸುಧಾರಕರು ಸಂಸ್ಕೃತದ ಗುಮ್ಮವೆಬ್ಬಿಸಿ ಅದನ್ನು ಉಚ್ಚಾಟಿಸುವ ರೀತಿಯಲ್ಲಿ ಮಾತಾಡುತ್ತಿದ್ದಾರೆ. ಸಂಸ್ಕೃತ ಕನ್ನಡಕ್ಕೆ ಪ್ರತಿಸ್ಪರ್ಧಿಯಾಗಿಲ್ಲ. ಸದ್ಯದ ಆಧುನಿಕ ಕನ್ನಡಕ್ಕಾಗಿ ಮತ್ತು ಅದರ ಅಭಿವೃದ್ಧಿಗಾಗಿ ವಾದಿಸುವ ನನ್ನಂಥವರು ಸಂಸ್ಕೃತ ಪ್ರೇಮಿಗಳೂ ಅಲ್ಲ"[೨೧] ಎನ್ನುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತ ಪ್ರೇಮವನ್ನು ಮತ್ತೊಮ್ಮೆ ವ್ಯಕ್ತಪಡಿಸಿದ್ದಾರೆ. ಅಲ್ಲದೇ, ತಮ್ಮ ವಾದಕ್ಕೆ ಅಧ್ಯಾಪಕ, ಪ್ರೊಫೆಸರ್, ನೃಪತುಂಗ ಮೊದಲಾದ ಪದಗಳನ್ನು ಬಳಸಲು ಎದುರಾಗುವ ಸಮಸ್ಯೆ ಮತ್ತು ಅದನ್ನು ನಿವಾರಿಸಲು ಹೊಸ ಬರಹದಲ್ಲಿ ಇವುಗಳನ್ನು ಕೈಬಿಡುವ ಅಥವಾ ಪರಿವರ್ತಿಸಿ ಬಳಸುವುದರ ಕುರಿತು ಚರ್ಚಿಸಿದ್ದಾರೆ. ಒಟ್ಟಿನಲ್ಲಿ ಕನ್ನಡದಲ್ಲಿ ಸಂಸ್ಕೃತ ಪದಗಳ ಬಳಕೆ ಕೈಬಿಡುವುದು ಅವರಿಗೆ ಒಗ್ಗದ ಸಂಗತಿಯಾಗಿದೆ.

'ಇನ್ನಷ್ಟು ಕನ್ನಡ' ಕೃತಿಯ 'ಪ್ರಬುದ್ಧ ಕನ್ನಡ: ಸಮೃದ್ಧ ಕನ್ನಡ' ಲೇಖನದಲ್ಲಿ ಕೂಡ ತಮ್ಮ ಸಂಸ್ಕೃತ ವ್ಯಾಮೋಹವನ್ನು ಕೆ. ವಿ. ತಿರುಮಲೇಶರು ಮುಂದುವರೆಸಿದ್ದಾರೆ. ಅವರ ಪ್ರಕಾರ: "ಆಡುವ ಕನ್ನಡ ಎಂಬ ಹೆಸರಿನಲ್ಲಿ 'ಅಚ್ಚಗನ್ನಡ'ದತ್ತಲಿನ ಒತ್ತಾಯ, ಒಂದು ರೀತಿಯ ಶುದ್ಧೀಕರಣ. ಇಂಥ ಮಡಿವಂತಿಕೆ ಯಾವ ಭಾಷೆಯ ಬೆಳವಣಿಗೆಗು ಒಳ್ಳೆಯದಲ್ಲ. ನಮಗೆ ಬೇಕಾದ್ದು ಮಿಶ್ರಧಾತುವಿನಂತೆ ಶಕ್ತಿಯುತವಾದ ಕನ್ನಡ; ಆದರೆ ಭಾಷಾಸುಧಾರಕರು 'ಮಿಶ್ರಧಾತು' ಬರೆಯುವುದಕ್ಕಂತೂ ಒಲ್ಲರು, ಯಾಕೆಂದರೆ ಅಂಥ ಪದವೊಂದು ಅವರ ಪ್ರಕಾರ ಆಡುಮಾತಿನಲ್ಲಿ ಇಲ್ಲ. ಆದ್ದರಿಂದ ಅದನ್ನು ಬರೆಯುವುದಾಗಲಿ ಕಲಿಸುವುದಾಗಲಿ ಸರಿಯಲ್ಲ ಎನ್ನುತ್ತಾರೆ. ಹಾಗಿದ್ದರೆ ಏನು ಮಾಡುವುದು?"[೨೨] ಎನ್ನುತ್ತಾರೆ. ಈ ಮೂಲಕ ಕನ್ನಡ ಲಿಪಿ ಸುಧಾರಣೆಯ ಪ್ರಯತ್ನವನ್ನು ವಿರೋಧಿಸಿದ್ದಾರೆ. ಇದರೊಂದಿಗೆ, "ಅಚ್ಚಗನ್ನಡ ಪದವೊಂದನ್ನು ಹೊಸೆಯುವುದು: ಬೆರಕೆಲೋಹ? ಆದರೆ ಲೋಹ ಕೂಡಾ ಅಚ್ಚಗನ್ನಡವಲ್ಲ, ಅದು ಸಂಸ್ಕೃತ ಪದ. ಧಾತುವಿಗೆ 'ತಿರುಳು' ಎನ್ನುವುದು ಕನ್ನಡವಾದರೆ ಮಿಶ್ರಧಾತು 'ಬೆರಕೆತಿರುಳು' ಆಗುತ್ತದೆ. ಸರಿ ನಮಗೆ ಬೇಕಾದ್ದು ಬೆರಕೆತಿರುಳಿನ ಕನ್ನಡ?"[೨೩] ಎನ್ನುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತ ಪ್ರೀತಿಗೆ ಇನ್ನಷ್ಟು ಉದಾಹರಣೆಗಳನ್ನು ನೀಡಿದ್ದಾರೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಇದೆ. ಜನರ ಆಡು ಮಾತಿನಲ್ಲಿ 'ಬೆರಕೆ' ಎಂಬ ಪದಕ್ಕೆ ಆಡುಮಾತಿನಲ್ಲಿ ನಕಾರಾತ್ಮಕ ಅರ್ಥ ಕೂಡ ಇದೆ. ಇದು 'ಮಿಶ್ರಧಾತು'ವನ್ನು ಕನ್ನಡೀಕರಿಸಿ ಹೇಳಲು ಬಳಸಿರುವ 'ಬೆರಕೆತಿರುಳಿನ ಕನ್ನಡ' ಎಂದು ಬರೆಯಲಾಗುವುದೇ? ಎಂದು ಪ್ರಶ್ನಿಸುವ ಭರದಲ್ಲಿ ಅವರು ಜನರು ಆಡುವ ಕನ್ನಡವನ್ನೂ ಅವಮಾನಿಸಿದ್ದಾರೆ ಎಂಬ ಅನುಮಾನ ಕೂಡ ವ್ಯಕ್ತವಾಗಿದೆ. ಆಡು ಮಾತಿನಲ್ಲಿ ಬೆರಕೆ ಎಂಬುದನ್ನು ನಕಾರಾತ್ಮಕ ಅರ್ಥದಲ್ಲಿ ಬಳಕೆಗೆ ಉದಾ:

೧. ಅವನು ಬೆರಕೆ ನನ್ಮಗ

೨. ನೀನು ಬೆರಕೆ ನನ್ಮಗ ಇದೀಯಾ

೩. ಏನ್ ಬೆರಕೆ ನನ್ಮಗ ಇದೀಯೋ ಮಾರಾಯಾ?

೪. ಏನ್ ಬೆರಕಿ ಅದಾಳೋ ಆಕಿ

೫. ನಮ್ ಮಾವನ ಮಗಳು ಬಾಳ ಬೆರಕಿ ಅದಾಳ ಇತ್ಯಾದಿ.

ಈ ಮೇಲಿನ ಪದಗಳಲ್ಲಿ ಬಹುತೇಕ ಸಂದರ್ಭದಲ್ಲಿ ನಕಾರಾತ್ಮಕ ಅರ್ಥಗಳಲ್ಲಿ ಬೆರಕಿ ಪದ ಬಳಕೆಯಲ್ಲಿದೆ. ಇಂತಹ ಹೋಲಿಕೆಯನ್ನು ಕನ್ನಡ ಭಾಷೆಗೆ ನೀಡಿರುವುದು ಎಷ್ಟು ಸರಿ ಎಂಬ ಪ್ರಶ್ನೆ ಎದುರಾಗಿದೆ.

ಇನ್ನು ಕನ್ನಡದಲ್ಲೇ ಹೊಸ ಪದಗಳ ಸೃಷ್ಟಿಯ ಯತ್ನವನ್ನು ಕೂಡ ಕೆ. ವಿ. ತಿರುಮಲೇಶರು ವಿರೋಧಿಸಿದ್ದಾರೆ. ಅವರ ಪ್ರಕಾರ: "'ಅಚ್ಚಗನ್ನಡ' ಮೂಲದ ಪದಗಳನ್ನು ಆದಷ್ಟೂ ಜಾಸ್ತಿ ಬಳಸುವುದು, ಅವುಗಳಿಂದಲೇ ಹೊಸ ಪದಗುಚ್ಛಗಳನ್ನು ಸೃಷ್ಟಿಸುವುದು ಮುಂತಾದವು ಇವರು ಸೂಚಿಸುವ ಕ್ರಮಗಳು. ಆದರೆ, ಈ ಅಚ್ಚಗನ್ನಡದ - ಎಂದರೆ ಒಳಮುಖದ-ಬೆಳವಣಿಗೆಯ ಸಾಧ್ಯತೆಗಳು ಈಗ ಬಹಳ ಕಡಿಮೆ. ಇತಿಹಾಸದಲ್ಲಿ ನಾವು ಹಿಂದಕ್ಕೆ ಹೋಗುವುದು ಕಷ್ಟ;

ಹೋದರೂ ಅದು ಮೊದಲಿನಂತೆ ಇರುವುದಿಲ್ಲ"[೨೨]ವಂತೆ. ತಮ್ಮ ಮಾತಿಗೆ ಸಮರ್ಥನೆಯಾಗಿ ಡಿ. ಎನ್. ಶಂಕರ ಬಟ್ಟರು ಬಳಸುತ್ತಿರುವ ಸೊಲ್ಲು ಮತ್ತು ಸೂಳ್ ಪದಗಳನ್ನು ಉದಾಹರಿಸುತ್ತಾರೆ. " 'ಸೊಲ್ಲು' ಎಂಬ ಅಚ್ಚಗನ್ನಡ ಪದ; ಅದು ಸೊಲ್ಲಡಗಿಸು 'ಮಾತಾಡದಂತೆ ಮಾಡು' ಎಂಬಲ್ಲಿ ಈಗಲೂ ಬಳಕೆಯಲ್ಲಿದೆ, ಆದರೆ ಸೊಲ್ಲನ್ನು ಮಾತು ಎಂಬ ಪದಕ್ಕೆ ಬದಲಾಗಿ ಈಗ ಬಳಸುವಂತಿಲ್ಲ. ಯಾಕೆಂದರೆ ಸೊಲ್ಲು ಅದರ ಪಳಮೆಯನ್ನು ಮೈಮೇಲೆ ಧರಿಸಿಕೊಂಡಿದೆ. 'ಸೂಳ್' ಎಂಬ ಪದ ಹಳೆಗನ್ನಡದಲ್ಲಿ 'ಸರ್ತಿ' ಎಂಬ ಅರ್ಥದಲ್ಲಿ ಬಳಕೆಯಲ್ಲಿತ್ತು; 'ಸೂಳೆ' ಈ ಮೂಲದಿಂದಲೇ ಬಂದುದು. ಆದರೆ, 'ಸೂಳ'ನ್ನು ನಾವಿಂದು ಮತ್ತೆ ಬಳಕೆಗೆ ತರುವುದು ಕಷ್ಟ ಸಾಧ್ಯ"[೨೩] ಎನ್ನುತ್ತಾರೆ. ಆದರೆ, ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಒಂದು ಪದಕ್ಕೆ ಅನೇಕ ಅರ್ಥಗಳು ಇರುವುದನ್ನು ಅವರು ಗಮನಿಸಿದಂತೆ ತೋರುತ್ತಿಲ್ಲ ಅಥವಾ ಡಿ. ಎನ್. ಶಂಕರ ಬಟ್ಟರ ವಾದಗಳನ್ನು ಸೋಲಿಸಲು ತಮಗೆ ಅನುಕೂಲಕರವಾದ ಪದಗಳನ್ನು ಉದಾಹರಿಸುವ ಮೂಲಕ ವಾದಗಳನ್ನು ಹೂಡುತ್ತಿದ್ದಾರೆ ಎನಿಸುತ್ತದೆ.

ಕನ್ನಡದ್ದೇ ಆದ ಪದಗಳನ್ನು ಸೃಷ್ಟಿಸಲು ಕೂಡ ಅವರು ತಕರಾರು ತೆಗೆಯುತ್ತಾರೆ. ವಿದ್ಯಾರ್ಥಿ, ಪರೀಕ್ಷೆ ಪದಗಳಿಗೆ ಕನ್ನಡದ್ದೇ ಆದ ಪದಗಳೇ ಇಲ್ಲ ಎಂದು ವಾದಿಸುವ ಅವರು, ವಿದ್ಯಾರ್ಥಿಯನ್ನು 'ಕಲಿಕಾರ' ಎಂದು ಸಾವಿರ ಬಾರಿ ಬಳಸಿದರೂ ಇಂಥ ಪ್ರಯೋಗಗಳು ಜನರಿಂದ ಸ್ವೀಕೃತವಾಗಬೇಕು ಎಂದು ಅಭಿಪ್ರಾಯಪಡುತ್ತಾರೆ. ಒಂದು ನಿಟ್ಟಿನಲ್ಲಿ ಇವರ ವಾದವನ್ನು ಸರಿ ಎಂದು ಒಪ್ಪಿಕೊಳ್ಳಬಹುದೋ ಏನೋ! ಆದರೆ, ಕನ್ನಡದಲ್ಲಿ ಹೊಸ ಪದಗಳ ಸೃಷ್ಟಿಯ ಸಾಧ್ಯತೆಗಳನ್ನು ನಿಲ್ಲಿಸುವುದು ಎಷ್ಟು ಸರಿ? ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ, ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುವುದಕ್ಕೆ ಯಾವುದೇ ವಿರೋಧ ವ್ಯಕ್ತಪಡಿಸದವರು, ಕನ್ನಡದಲ್ಲಿ ಹೊಸ ಪದ ಸೃಷ್ಟಿ ಮತ್ತು ಹಳಗನ್ನಡ ರೂಪಗಳಿಂದ ಹೊಸ ಪದಗಳನ್ನು ಸೃಷ್ಟಿಸುವುದು ಮತ್ತು ಬಳಸುವುದಕ್ಕೆ ವಿರೋಧಿಸುತ್ತಿರುವುದು ಏಕೆ? ಎಂಬುದು ಗಮನಾರ್ಹ ಸಂಗತಿಯಾಗಿದೆ. ಇಂತಹ ಸಂಸ್ಕೃತ, ಇಂಗ್ಲಿಷ್ ಪರ ವಾದಗಳ ನಡುವೆ ಕೂಡ ಡಿ. ಎನ್. ಶಂಕರ ಬಟ್ಟರು 'ಕನ್ನಡದಲ್ಲೇ ಹೊಸ ಪದಗಳನ್ನು ಕಟ್ಟುವ ಬಗೆ' ಮತ್ತು 'ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು' ಕೃತಿಯಲ್ಲಿ ಮಹತ್ವದ ಪ್ರಯೋಗಗಳನ್ನು ನಡೆಸಿದ್ದಾರೆ. ಈ ಮೂಲಕ ಕನ್ನಡ ಕೂಡ ಹೊಸ ಪದಗಳನ್ನು ಸೃಷ್ಟಿಸಬಲ್ಲದು ಎಂಬುದಕ್ಕೆ ಸಾಕ್ಷಿಗಳನ್ನು ನೀಡಿದ್ದಾರೆ. ಹೊಸ ಪದಗಳನ್ನು ಸೃಷ್ಟಿಸಿ ಬಳಕೆಗೆ ತಂದಲ್ಲಿ ಕಾಲಾನಂತರ ಅವುಗಳನ್ನು ಜನ ಬಳಸಬಹುದು ಅಥವಾ ಕೈಬಿಡಬಹುದು. ಆದರೆ, ಮುಖ್ಯವಾಹಿನಿಯಲ್ಲಿ ಇಂಗ್ಲಿಷ್ ಮತ್ತು ಸಂಸ್ಕೃತ ಪದಗಳಿಗೆ ಹಾಕುವ ಮಣೆಯನ್ನು ಕನ್ನಡದ ಪದಗಳಿಗೆ ಹಾಕದೇ ಇರುವುದರಿಂದಲೇ ಅವುಗಳು ಬಳಕೆಯಿಂದ ದೂರವಾಗಿವೆ. ಇಂಗ್ಲಿಷ್‌ನ ಕೌಂಟರ್ ಪದಕ್ಕೆ ಕನ್ನಡದ ಮುಂಗಟ್ಟೆ ಎಂಬ ಪದವನ್ನು ಬಳಸಬಹುದು. ಬ್ಯಾಂಕ್, ವಿವಿಧ ನಿಲ್ದಾಣಗಳು, ಕಚೇರಿಗಳಲ್ಲಿ ಕೌಂಟರ್ ಪದವನ್ನೇ ಬಳಸಲಾಗುತ್ತಿದೆ. ಕನ್ನಡದ ಪದ ಇದೆ ಎನ್ನುವುದೇ ಎಷ್ಟೋ ಜನರಿಗೆ ಅರಿವಿರುವ ಸಾಧ್ಯತೆ ಕಡಿಮೆ ಇರುತ್ತದೆ. ಇನ್ನೊಂದು ಉದಾ: ಸಿಸಿಟಿವಿ ಕ್ಯಾಮೆರಾ ಎಂಬ ಪದ ಇತ್ತೀಚೆಗೆ ಪ್ರಚಲಿತಕ್ಕೆ ಬಂದಿದೆ. ಸಿಸಿಟಿವಿ ಬದಲಿಗೆ ಕಣ್ಗಾವಲು

ಎಂಬ ಕನ್ನಡ ಪದವನ್ನು ಬಳಸಬಹುದು. ಆದರೆ, ಇಂಥ ಬಳಕೆಯನ್ನು ಕಾಣುವುದೇ ಅಪರೂಪದ ಸಂಗತಿಯಾಗಿದೆ. ಇಂತಹ ಕನ್ನಡ ಪದಗಳನ್ನು ಮುಖ್ಯವಾಹಿನಿಯಲ್ಲಿ ಪದೇಪದೇ ಬಳಸಿದಲ್ಲಿ ಅವುಗಳು ಬಳಕೆಗೆ ಬಾರದೇ ಇರಲಾರವು. ಆದರೆ, ಅವುಗಳನ್ನು ಬಳಸುವ ಇಚ್ಛಾಶಕ್ತಿಯ ಕೊರತೆಯಿಂದಾಗಿಯೇ ಅಮೂಲ್ಯವಾದ ಕನ್ನಡದ ಶಬ್ದಭಂಡಾರ ಸಂಕುಚಿತವಾಗಿದೆ ಎಂಬ ಆರೋಪವನ್ನು ಮಾಡಲಾಗುತ್ತಿದೆ.

ಅತಿಯಾದ ಭಾಷಾ ಶುದ್ಧೀಕರಣದ ಕುರಿತು ಕೆ. ವಿ. ತಿರುಮಲೇಶರು "ಅತಿಯಾಗಿ ಶುದ್ಧೀಕರಿಸಿದ ಭಾಷೆಗೆ ಇಂಥ ಶುದ್ಧೀಕರಣವೇ ಮಾರಕವಾಗುತ್ತದೆ" ಎನ್ನುತ್ತಾರೆ. ಮುಂದುವರೆದು, "ಪ್ರಾದೇಶಿಕ ಮತ್ತು ವರ್ಗೀಯ, ಆಡುಮಾತು ಮತ್ತು ಅಕ್ಷರಭಾಷೆಯ ಕನ್ನಡಂಗಳ ಬಹುಳತ್ವವನ್ನು ನಾವು ಒಪ್ಪಬೇಕು, ವಾಸ್ತವದಲ್ಲಿ ಅದನ್ನು ಮೆಚ್ಚಲು, ಆಸ್ವಾದಿಸಲು ಕಲಿಯಬೇಕು. ಜನರಿಗೆ ಹೇಗೆ ಬೇಕಾದರೂ ಬರೆಯುವ, ಓದುವ, ಆಡುವ ಸ್ವಾತಂತ್ರ್ಯ ಇರಬೇಕು. ಸರಿ-ತಪ್ಪು ಎಂಬ ನಿಷ್ಠುರವಾದ ಮಡಿವಂತಿಕೆ ಮತ್ತು ಪೊಲೀಸಿಂಗ್ ಅಗತ್ಯವಿಲ್ಲ"[೨೬] ಎನ್ನುತ್ತಾರೆ. ಮೇಲಿನ ಅವರ ಮಾತುಗಳು ಅಚ್ಚಗನ್ನಡ ಪದ ರಚನೆ, ಬಳಕೆ ಕುರಿತು ಹೇಳಲಾದ ಅನಿಸಿಕೆಗಳು. ಆದರೆ, ಶುದ್ಧ ಕನ್ನಡವೆಂದರೆ ಅದು ಸಂಸ್ಕೃತ ಅಕ್ಷರ, ವಾಕ್ಯಗಳನ್ನು ತಪ್ಪಿಲ್ಲದೇ ಬರೆಯುವುದು ಎಂಬುದೇ ಆಗಿದೆ. ಆದರೆ, ಕೆ. ವಿ. ತಿರುಮಲೇಶರು ತಮ್ಮ ಶುದ್ಧೀಕರಣವನ್ನು ಅಚ್ಚಗನ್ನಡಕ್ಕೆ ಮಾತ್ರ ಆರೋಪಿಸುವುದು, ಸಂಸ್ಕೃತ ಕನ್ನಡವನ್ನು ಇದರಿಂದ ಹೊರತಾಗಿಡುವುದಕ್ಕೆ ಕಾರಣಗಳೇನು? ಎಂಬ ಪ್ರಶ್ನೆಯನ್ನು ಮೇಲಿನ ಅಭಿಪ್ರಾಯಗಳು ಮೂಡಿಸುತ್ತವೆ.

ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ ಬೇಕು ಎಂಬ ಡಿ. ಎನ್. ಶಂಕರ ಬಟ್ಟರ ವಾದದ ಕುರಿತು ಕೆ. ವಿ. ತಿರುಮಲೇಶರ ಪ್ರತಿಕ್ರಿಯೆ ಹೀಗಿದೆ: "ಸಂಸ್ಕೃತ ಇಂಡೋ-ಯೂರೋಪಿಯನ್ ವರ್ಗಕ್ಕೆ ಸೇರಿದ್ದು; ಕನ್ನಡ ದ್ರಾವಿಡ ವರ್ಗಕ್ಕೆ ಸೇರಿದ್ದು. ಆದ್ದರಿಂದ ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ ಬೇಕೆನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಹಿಂದಿನ ಕನ್ನಡ ವೈಯಾಕರಣಿಗಳಿಗೆ ಇದು ಗೊತ್ತಿರಲಿಲ್ಲವೇ? ಅವರೊಂದು ಜ್ಞಾನ ಪರಂಪರೆಗೆ ಸೇರಿದವರಾಗಿದ್ದು, ಸಂಸ್ಕೃತ ವ್ಯಾಕರಣವನ್ನು ಮಾದರಿಯಾಗಿ ತೆಗೆದುಕೊಂಡರು ಎನ್ನಬಹುದು"[೨೭] ಎನ್ನುತ್ತಾರೆ. ಈ ಮೂಲಕ ಕನ್ನಡಕ್ಕೆ ಕನ್ನಡದ್ದೇ ವ್ಯಾಕರಣ ಬೇಕು ಎಂದರೂ ಪರೋಕ್ಷವಾಗಿ ಸಂಸ್ಕೃತ ಮಾದರಿಯನ್ನು ಅನುಸರಿಸಿರುವುದರ ಕುರಿತು ಅವರಿಗೆ ಮೆದು ಧೋರಣೆ ಇದ್ದಂತಿದೆ.

ಡಿ. ಎನ್. ಶಂಕರ ಬಟ್ಟರ ವಿಭಕ್ತಿ ಪ್ರತ್ಯಯ, ಕಾರಕಗಳ ಮತ್ತು ಸಮಸ್ತ ಪದಗಳ ಕುರಿತು ಕೂಡ ಕೆ. ವಿ. ತಿರುಮಲೇಶರಿಗೆ ಸಹಮತವಿಲ್ಲ. ಇದಕ್ಕಾಗಿ ಅನ್ನು ಪ್ರತ್ಯಯವನ್ನು ಉದಾಹರಿಸುವ ಅವರು, 'ಬಾಧಿತ' ಮತ್ತು 'ನಿರ್ಮಿತ'ಗಳ ನಡುವೆ ವ್ಯತ್ಯಾಸವಿದೆ ಎಂದು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ: " 'ನಾನೊಂದು ಪುಸ್ತಕ(ವನ್ನು) ಓದಿದೆ' ಎನ್ನುವುದಕ್ಕೂ 'ನಾನೊಂದು ಪುಸ್ತಕವ(ವನ್ನು) ಬರೆದೆ' ಎನ್ನವುದಕ್ಕೂ ವ್ಯತ್ಯಾಸವಿದೆ. ಒಂದರಲ್ಲಿ ಪುಸ್ತಕ 'ಬಾಧಿತ'ವಾದರೆ ಇನ್ನೊಂದರಲ್ಲಿ ಅದು 'ನಿರ್ಮಿತ! ಈಗ ನಾವು 'ನಿರ್ಮಿತ'ವೂ ಒಂದರ್ಥದಲ್ಲಿ 'ಬಾಧಿತ'ವೇ ಎನ್ನಬೇಕಾಗುತ್ತದೆ"[೨೮] ಎನ್ನುತ್ತಾರೆ. ಇದರೊಂದಿಗೆ "ಡಿ.ಎನ್.ಎಸ್. ಪ್ರಸ್ತಾಪಿಸಿರುವ ಸಮಾಸಪದಗಳದು ಒಂದು ದೊಡ್ಡ

ಸಮಸ್ಯೆಯಾಗಿ ನನಗೆ ತೋರುವುದೇ ಇಲ್ಲ. ಸಂಸ್ಕೃತದಲ್ಲು ಕೇವಲ ನಾಮಪದಗಳೇ ಸೇರಿ ಇತರ ಪದಗಳಾಗುತ್ತವೆಯೇ? ನೀಲಕಂಠ, ಕೃಷ್ಣವೇಣಿ, ಧೃತರಾಷ್ಟ್ರ, ದಶಾವತಾರ, ಲಂಬೋದರ ಮುಂತಾದ ಸಂಯುಕ್ತಪದಗಳು ಹೇಗೆ ಉಂಟಾದವು? ತೂಗುದೀಪ, ನಂದಾದೀಪ, ತೋರುಬೆರಳು ಮುಂತಾದ ಸಂಯುಕ್ತಪದಗಳೂ ಇದೇ ರೀತಿ. ಇವುಗಳನ್ನು ಪದವಿಂಗಡಿಸಿ ಸ್ವಕೇಂದ್ರಿತ, ಅನ್ಯಕೇಂದ್ರಿತ ಮುಂತಾಗಿ ವರ್ಗೀಕರಿಸಬಹುದು; ಆದರೆ, ಕರ್ಮಧಾರಯ, ಬಹುವ್ರೀಹಿ ಮುಂತಾದ ಪಾರಿಭಾಷಿಕ ಪದಗಳು ಈಗಾಗಲೇ ಇರುತ್ತ ಅವುಗಳ ಸ್ಥಾನದಲ್ಲಿ ವಿಲಕ್ಷಣವಾದ ಇತರ ಪದಗಳನ್ನು ತರುವುದರಿಂದ ಹೆಚ್ಚಿನ ಲಾಭವೇನು ಇಲ್ಲ"[೨೯] ಎನ್ನುತ್ತಾರೆ. ಒಟ್ಟಿನಲ್ಲಿ ಕನ್ನಡದಲ್ಲಿ ಕನ್ನಡ ವ್ಯಾಕರಣ ರಚಿಸುತ್ತಿರುವ ಡಿ. ಎನ್. ಶಂಕರ ಬಟ್ಟರ ಪ್ರಮೇಯಗಳು ತಮಗೆ ರುಚಿಸುವುದಿಲ್ಲ ಎಂದು ತಿರುಮಲೇಶರು ಮೇಲಿನ ಉಲ್ಲೇಖಗಳಲ್ಲಿ ಖಚಿತಪಡಿಸುತ್ತಾರೆ. ಸಂಸ್ಕೃತ ಸಮಾಸ ಪದಗಳಿಗೂ, ಕನ್ನಡದಲ್ಲಿ ಬಳಕೆಯಲ್ಲಿರುವ ಜೋಡುನುಡಿಗಳಿಗೂ ಇರುವ ವ್ಯತ್ಯಾಸವನ್ನು ಡಿ. ಎನ್. ಶಂಕರ ಬಟ್ಟರು ಉದಾಹರಣೆಗಳ ಸಹಿತ ವಿವರಿಸಿದ್ದಾರೆ.

"ಕೇಶಿರಾಜನ ಕಾಲದಿಂದಲೂ ಕನ್ನಡ ವ್ಯಾಕರಣಗಳಲ್ಲಿ ಸಮಾಸಗಳ ವರ್ಣನೆಯೆಂಬುದು ಒಂದು ದೊಡ್ಡ ಗೋಜಲುಮಯ ವಿಷಯವಾಗಿದೆ. ಸಂಸ್ಕೃತ ಸಮಾಸಗಳ ಪರಿಶೀಲನೆಯ ಮೂಲಕ ಕನ್ನಡ ಸಮಾಸಗಳನ್ನು ವಿವರಿಸಲು ಯತ್ನಿಸಿರುವುದು ಇದಕ್ಕೆ ಒಂದು ಕಾರಣವಾದರೆ, ಜೋಡುಪದಗಳಿಗೂ ಮತ್ತು ಪದಗುಚ್ಛಗಳಿಗೂ ನಡುವಿರುವ ವ್ಯತ್ಯಾಸವನ್ನು ಸರಿಯಾಗಿ ಪರಿಶೀಲಿಸಬೇಕಾದ ವಸ್ತು ಯಾವುದು ಎಂಬುದನ್ನೇ ಸರಿಯಾಗಿ ತಿಳಿದುಕೊಳ್ಳದೆ ಸ್ಪಷ್ಟವಾಗಿ ಅರ್ಥವಾಗುವಂತಹ ವರ್ಣನೆಯೊಂದನ್ನು ಕೊಡಲು ಸಾಧ್ಯವಿಲ್ಲ ತಾನೆ?"[೩೦] ಎಂದು ಶಂಕರ ಬಟ್ ಪ್ರಶ್ನಿಸುತ್ತಾರೆ. ಅಲ್ಲದೇ, ಈ ಗೊಂದಲಗಳಿಂದ ಮುಕ್ತವಾಗಲು ಪರಿಹಾರವನ್ನೂ ಅವರು ಹೀಗೆ ಸೂಚಿಸುತ್ತಾರೆ: **"ಹೊಸಗನ್ನಡದಲ್ಲಿ ಬರುವ ಸಮಾಸಗಳೆಂತಹವು ಎಂಬುದನ್ನು ತಿಳಿಯಬೇಕಿದ್ದರೆ ನಾವು ಸಂಸ್ಕೃತದಲ್ಲಿ ಬರುವ ಸಮಾಸಗಳೆಂತಹವು ಎಂಬುದನ್ನು ತಿಳಿಯುವ ಅವಶ್ಯಕತೆಯಿಲ್ಲ. ಸಂಸ್ಕೃತದಿಂದ ಕನ್ನಡಕ್ಕೆ ಎರವಲಾಗಿ ಬಂದಿರುವ ಪದಗಳ ಒಳರಚನೆಯೆಂತಹುದು ಎಂಬುದನ್ನು ತಿಳಿದುಕೊಳ್ಳುವಲ್ಲಿ ಮಾತ್ರ ಸಂಸ್ಕೃತ ಸಮಾಸಗಳ ತಿಳುವಳಿಕೆ ಸಹಾಯಕವಾಗಬಲ್ಲುದಾದರೂ ಅಲ್ಲಿಯೂ ಅದು ಅತ್ಯವಶ್ಯವೇನಲ್ಲ"**[೩೧] ಎನ್ನುತ್ತಾರೆ. ಈ ಮೂಲಕ ಸಂಸ್ಕೃತದ ಸಮಾಸಗಳನ್ನು ಯಥಾವತ್ತಾಗಿ ಕನ್ನಡಕ್ಕೆ ಅನ್ವಯಿಸಬಾರದು ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

"ಸಂಸ್ಕೃತ ವ್ಯಾಕರಣಗಳಲ್ಲಿ ಬಳಕೆಯಲ್ಲಿರುವ ತತ್ಪುರುಷ, ಕರ್ಮಧಾರಯ, ದ್ವಿಗು, ದ್ವಂದ್ವ, ಬಹುವ್ರೀಹಿ ಮೊದಲಾದ ಪಾರಿಭಾಷಿಕ ಪದಗಳನ್ನೇ ಕನ್ನಡದ ಜೋಡುಪದಗಳನ್ನು (ಮತ್ತು ಅವುಗಳ ಒಳರಚನೆಯಲ್ಲಿ ಕಾಣಿಸುವ 'ಸಮಾಸ'ವೆಂಬ ಹೆಸರಿನ ವಿಧಾನವನ್ನು) ವರ್ಣಿಸುವುದಕ್ಕಾಗಿಯೂ ಬಳಸುವುದು ರೂಢಿ. ಆದರೆ, ಈ ಪದಗಳು ನಮ್ಮೆದುರು ಸಂಸ್ಕೃತ ಸಮಾಸಗಳನ್ನೇ ತಂದಿರಿಸುವ ಕಾರಣ, ಅವನ್ನು ಬಳಸಿದಲ್ಲಿ ಕನ್ನಡ ಜೋಡುಪದಗಳ ವರ್ಣನೆಯಲ್ಲಿ ಸಂಸ್ಕೃತ ಸಮಾಸಗಳಿಂದಾಗಿರುವ ಗೊಂದಲವನ್ನು ಹೋಗಲಾಡಿಸಲು ಸಾಧ್ಯವಾಗದು"[೩೨] ಎನ್ನುವುದು ಅವರ ಖಚಿತ ಹೇಳಿಕೆಯಾಗಿದೆ. ಕನ್ನಡ ವ್ಯಾಕರಣ ರಚನೆಯಲ್ಲಿ ಸಮಾಸ ಎಂಬ ಹೆಸರಿನಲ್ಲಿ ಜಾರಿಯಲ್ಲಿರುವ ಸಂಸ್ಕೃತ ವ್ಯಾಕರಣ ನಿಯಮಗಳು ಮತ್ತು ಸಂಸ್ಕೃತದ ಹೇರಿಕೆ ತಪ್ಪು ಎಂದು ಶಂಕರ ಬಟ್ಟರು ಹೇಳುತ್ತಾರೆ.

"ಜೋಡುಪದ ಮತ್ತು ಪದಗುಚ್ಛಗಳ ನಡುವಿರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಕನ್ನಡದ ಮಟ್ಟಿಗೆ ಒಂದು ಪ್ರಾಮುಖ್ಯವಾದ ಕೆಲಸ. ಯಾಕೆಂದರೆ, ಕನ್ನಡದ ಹೆಚ್ಚಿನ ವ್ಯಾಕರಣಗಳಲ್ಲೂ ಈ ಎರಡು ರೀತಿಯ ವಾಕ್ಯಾಂಶಗಳ ನಡುವಿರುವ ವ್ಯತ್ಯಾಸ ಅಸ್ಪಷ್ಟವಾಗಿಯೇ ಉಳಿದಿದೆ ಮಾತ್ರವಲ್ಲ, ಕೆಲವೆಡೆಗಳಲ್ಲಿ ಅವೆರಡೂ ಒಂದೇ ಎಂಬ ಭಾವನೆಯೂ ಬರುವಂತಿದೆ. ಉದಾಹರಣೆಗಾಗಿ, ಆ ಮನೆ, ಬಾಳೆಯ ಹಣ್ಣು, ಓದುವ ಹುಡುಗ ಮೊದಲಾದವುಗಳಲ್ಲಿ ಗಮಕ, ತತ್ಪುರುಷ ಮೊದಲಾದ ಸಮಾಸಗಳಿವೆಯೆಂಬುದಾಗಿ ಕನ್ನಡ ವ್ಯಾಕರಣಗಳಲ್ಲಿ ಬರೆದಿರುವುದನ್ನು ಕಾಣಬಹುದು"[೩೨] ಎನ್ನುತ್ತಾರೆ.

ಡಿ. ಎನ್. ಶಂಕರ ಬಟ್ಟರು ವಿಗ್ರಹವಾಕ್ಯ ಎಂಬ ಪಾರಿಭಾಷಿಕವನ್ನೂ ತಿರಸ್ಕರಿಸುತ್ತಾರೆ. ಸಂಸ್ಕೃತದ ಸಮಾಸ ಎಂಬ ಪರಿಭಾಷೆಯ ಬದಲಾಗಿ ಜೋಡುನುಡಿಗಳು ಎಂಬ ಪದವನ್ನು ಸ್ವತಃ ಬಳಸುವ ಮೂಲಕ ಸಮಾಸವೆಂಬುವು ಕನ್ನಡದಲ್ಲಿ ಇಲ್ಲ ಎಂದು ಅವರು ವಾದಿಸುತ್ತಾರೆ. **"ಎರಡು ಅಥವಾ ಜಾಸ್ತಿ ಪದಗಳನ್ನು ಒಟ್ಟಾಗಿ ಜೋಡಿಸಿ ಒಂದೇ ಪದವಾಗಿ ಮಾಡುವ ವಿಧಾನಕ್ಕೆ ಸಮಾಸವೆಂದೂ ಮತ್ತು ಅಂತಹ ವಿದಾನದ ಮೂಲಕ ತಯಾರಾದ ಪದವನ್ನು ಜೋಡುಪದವೆಂದೂ ಕರೆಯಬಹುದು. ಉದಾಹರಣೆಗಾಗಿ ಕೆಳದುಟಿ ಎಂಬುದು ಒಂದು ಜೋಡುಪದ. ಯಾಕೆಂದರೆ, ಇದರಲ್ಲಿ ಕೆಳಗೆ ಮತ್ತು ತುಟಿ ಎಂಬ ಎರಡು ಪದಗಳನ್ನು ಒಟ್ಟಾಗಿ ಜೋಡಿಸಿ ಬೇರೆಯೇ ಒಂದು ಪದವನ್ನು ತಯಾರಿಸಲಾಗಿದೆ, ಮತ್ತು ಈ ಪದದ ಮೂಲಕ ಬಾಯಲ್ಲಿರುವ ಎರಡು ತುಟಿಗಳಲ್ಲಿ ಕೆಳಗಿನದನ್ನು ಹೆಸರಿಸಲಾಗಿದೆ. ಕನ್ನಡದಲ್ಲಿ ಸಾಮಾನ್ಯವಾಗಿ ಇಂತಹ ಪದಗಳಲ್ಲಿ ಎರಡು ಪದಗಳು ಮಾತ್ರವೇ ಸೇರಿರುತ್ತವೆಯಾದ ಕಾರಣ, ಜೋಡುಪದ ಎಂಬ ಈ ಹೆಸರು ಸೂಚಿಸಬಹುದಾದ 'ಎರಡು' ಎಂಬ ಅರ್ಥದಿಂದಲೂ ಕನ್ನಡದ ಮಟ್ಟಿಗೆ ತೊಂದರೆಯಾಗುವುದಿಲ್ಲ"**[೩೪] ಎನ್ನುವುದು ಸಮಾಸ ಪದ ಬಳಕೆ ಕುರಿತು ಡಿ. ಎನ್. ಶಂಕರ ಬಟ್ಟರ ಅಭಿಪ್ರಾಯ. ಈ ಮೂಲಕ ಸಂಸ್ಕೃತದ ವ್ಯಾಕರಣ ನಿಯಮ ಮತ್ತು ಪರಿಭಾಷೆಗಳ ಬಳಕೆ ಕೂಡ ಸರಿಯಲ್ಲ ಎಂದು ಅವರು ವಾದಿಸಿದ್ದಾರೆ.

"ಜೋಡುಪದ ಮತ್ತು ಪ್ರತ್ಯಯವಿರುವ ಪದಗಳ ನಡುವಿರುವ ವ್ಯತ್ಯಾಸವೂ ಕೆಲವು ವಿಶಯದಲ್ಲಿ ಮೇಲಿನ ವ್ಯತ್ಯಾಸದ ಹಾಗೆಯೇ ಅಸ್ಪಷ್ಟವಾಗಿದೆ. ಆದರೆ, ಇದಕ್ಕೆ ಬೇರೆಯೇ ಒಂದು ಕಾರಣವಿದೆ. ಒಂದು ಪದಕ್ಕೆ ಒಂದು ಅಥವಾ ಜಾಸ್ತಿ ಪ್ರತ್ಯಯಗಳನ್ನು ಸೇರಿಸುವುದರ ಮೂಲಕ ಪ್ರತ್ಯಯವಿರುವ ಪದ ತಯಾರಾಗುತ್ತದೆ ಮತ್ತು ಎರಡು ಅಥವಾ ಜಾಸ್ತಿ ಪದಗಳನ್ನು ಒಟ್ಟಿಗೆ ಸೇರಿಸಿ ಒಂದೇ ಪದವಾಗಿ ಮಾಡುವುದರ ಮೂಲಕ ಜೋಡುಪದ ತಯಾರಾಗುತ್ತದೆ ಎಂಬುದಾಗಿ ಇವುಗಳ ನಡುವಿರುವ ವ್ಯತ್ಯಾಸವೇನೋ ಸ್ಪಷ್ಟವಾಗಿದೆ, ಆದರೆ ಪದ ಮತ್ತು ಪ್ರತ್ಯಯಗಳ ನಡುವಿರುವ ವ್ಯತ್ಯಾಸ ಅಷ್ಟೊಂದು ಸ್ಪಷ್ಟವಾದುದಲ್ಲ"[೩೫] ಎಂದು ಅಭಿಪ್ರಾಯಪಡುತ್ತಾರೆ.

ಡಿ. ಎನ್. ಶಂಕರ ಬಟ್ಟರ ಹೊಸ ಬರಹ, ವ್ಯಾಕರಣ ರಚನೆ ಕುರಿತು ಕೆ. ವಿ. ತಿರುಮಲೇಶರು ಕೆಲವು ಆಕ್ಷೇಪಗಳನ್ನು ವ್ಯಕ್ತಪಡಿಸುತ್ತಾರೆ. ಶಂಕರ ಬಟ್ಟರ ಆರೋಪಗಳನ್ನು ಕೆ. ವಿ. ತಿರುಮಲೇಶರು ಗುರುತಿಸಿರುವ ಪ್ರಕಾರ ಹೀಗೆ ಪಟ್ಟಿ ಮಾಡಬಹುದು:

೧. ಡಿ. ಎನ್. ಶಂಕರ ಬಟ್ಟರ ಕನ್ನಡದ ಕಲ್ಪನೆಯಲ್ಲಿ ಗೊಂದಲವಿದೆ

೨. ಕನ್ನಡಕ್ಕೆ ಸಂಸ್ಕೃತಾರಾಧಕರಿಂದ ಅಪಚಾರವಾಗಿದೆ ಎಂದು ಡಿ. ಎನ್. ಶಂಕರ ಬಟ್ ಭಾವಿಸುತ್ತಾರೆ

೩. ಅಕ್ಷರ ಮತ್ತು ನುಡಿ ಸಂಸ್ಕೃತಿಗಳ ನಡುವೆ ಸಂಬಂಧ ಮತ್ತು ವ್ಯತ್ಯಾಸಗಳಿವೆ. ಇದು ಶಂಕರ ಬಟ್ಟರಿಗೆ ಅರಿವಿಲ್ಲ

೪. ಕನ್ನಡ ನುಡಿ ಸಮಸ್ಯಾರಹಿತ ಅಖಂಡ ಘಟಕ ಎಂದು ಶಂಕರ ಬಟ್ಟರು ವಾದಿಸುತ್ತಿದ್ದಾರೆ

೫. ಡಿ. ಎನ್. ಶಂಕರ ಬಟ್ಟರ ಪ್ರಮೇಯದಿಂದ ಅವಕಾಶವಂಚಿತರಿಗೆ ಅಪಚಾರವಾಗುತ್ತದೆ

೬. ಅಲ್ಪಪ್ರಾಣ – ಮಹಾಪ್ರಾಣಗಳ ನಡುವೆ ವ್ಯತ್ಯಾಸ ತಥಾಕಥಿತ ವಾಸ್ತವದಿಂದ ರೂಪುಗೊಂಡಿದೆ

೭. ಚೀನಾದಲ್ಲಿ ೪,೫೦೦ ಚಿತ್ರಗಳನ್ನು ಕಲಿಯಲಾಗುತ್ತದೆ. ಕನ್ನಡದಲ್ಲಿ ಇರುವ ಅಕ್ಷರಗಳನ್ನು ಕಲಿಯಲು ಸಮಸ್ಯೆ ಇಲ್ಲ ಇತ್ಯಾದಿ.[೩೬]

ಮೇಲಿನಂತೆ ಡಿ. ಎನ್. ಶಂಕರ ಬಟ್ಟರ ವಿರುದ್ಧ ಆರೋಪಿಸುವುದಲ್ಲದೇ, ಅವರು ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಕನ್ನಡದ ಆಡುನುಡಿಯಂತೆ ಬರೆಯಬೇಕು ಎಂಬ ಪ್ರಮೇಯವನ್ನೂ ವಿರೋಧಿಸುತ್ತಾರೆ. ಅವರ ಪ್ರಕಾರ, ಈಗಾಗಲೇ ಸಂಸ್ಕೃತ ಪದಗಳು ಕನ್ನಡದಲ್ಲಿ ಹೊಂದಿಕೊಂಡಿವೆ. ಇದರಿಂದಾಗಿ ಇವುಗಳನ್ನು ಕೈಬಿಡುವುದರಿಂದ ಕನ್ನಡಕ್ಕೆ ಅಪಾರ ಪ್ರಮಾಣದಲ್ಲಿ ನಷ್ಟವಾಗುತ್ತದೆ ಎಂಬುದು ಕೆ. ವಿ. ತಿರುಮಲೇಶರ ಅಭಿಪ್ರಾಯವಾಗಿದೆ. ಇದರೊಂದಿಗೆ ಈಗ ಕನ್ನಡ ವರ್ಣಮಾಲೆಯಲ್ಲಿರುವ ಸಂಸ್ಕೃತದ ಮಹಾಪ್ರಾಣಾಕ್ಷರಗಳನ್ನು ಕೈಬಿಟ್ಟಲ್ಲಿ ಕನ್ನಡವನ್ನು ಕಲಿಸಲು ಮುಗಿಬೀಳುವ ಪರಿಸ್ಥಿತಿ ಕೂಡ ನಿರ್ಮಾಣವಾಗುವುದಿಲ್ಲ ಎಂದು ಅವರು ಹೇಳುತ್ತಾರೆ.

ಲಿಪಿ ಸುಧಾರಣೆಯ ಲಾಭವನ್ನು ಹೇಳುವ ಸಂದರ್ಭದಲ್ಲಿ ಡಿ. ಎನ್. ಶಂಕರ ಬಟ್ಟರು ಪ್ರಾಸಂಗಿಕವಾಗಿ ಆಗುವ ಲಾಭಗಳ ಕುರಿತು ಪ್ರಸ್ತಾಪಿಸಿದ್ದು, ಅದರಲ್ಲಿ ಕೆಳವರ್ಗದ ಜನ ಸಂಸ್ಕೃತ ಪದಗಳನ್ನು ಕಲಿಯಲು, ಬಳಸಲು, ಬರೆಯಲು ಕಷ್ಟಪಡುತ್ತಿದ್ದಾರೆ. ಇದರಿಂದಾಗಿ ಅವರ ಕಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂಬ ಸಂಗತಿಯನ್ನು ವಿರೋಧಿಸಲು ಕೆಲವು ಉದಾಹರಣೆಗಳನ್ನು ಕೆ. ವಿ. ತಿರುಮಲೇಶರು ನೀಡಿದ್ದಾರೆ. ಆದರೆ, ಕನ್ನಡದ ಆಡುಮಾತಿಗೂ ಮತ್ತು ಬರಹದ ಭಾಷೆಗೂ ಇರುವ ವ್ಯತ್ಯಾಸವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕನ್ನಡದಲ್ಲಿ ಬರಹದಲ್ಲಿರುವ ಅನೇಕ ಪದಗಳ ಉಚ್ಚಾರಣೆ ಬದಲಾಗಿ ಅಲ್ಪಪ್ರಾಣಗಳನ್ನು ಬಳಸುವ ಸಂಗತಿ ರೂಢಿಯಲ್ಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಮಾತು ಮತ್ತು ಬರಹದ ನಡುವಿನ ಗೊಂದಲವನ್ನು ಸರಿಪಡಿಸಬೇಕು ಎಂದು ಡಿ. ಎನ್. ಶಂಕರ ಬಟ್ಟರು ವಾದಿಸುತ್ತಿದ್ದಾರೆ. ಆದರೆ, ಪಂಡಿತರ ಸಂಸ್ಕೃತ ಪ್ರೇಮ ಈ ಪ್ರಯೋಗಕ್ಕೆ ಒಡ್ಡಾಗಿ ಪರಿಣಮಿಸಿದೆ. ಮೇಲಿನ ತಿರುಮಲೇಶರ ಅಭಿಪ್ರಾಯಗಳು ಕೂಡ ಕನ್ನಡದಲ್ಲಿರುವ ಸಂಸ್ಕೃತ ಪದಗಳನ್ನು ಹೊರತುಪಡಿಸಿ, ಅಚ್ಚಗನ್ನಡದ ಪದಗಳನ್ನು ಬಳಸುವ ಅಗತ್ಯವಿಲ್ಲ ಎಂದೇ ಹೇಳುತ್ತಿವೆ.

'ಮಾತು ಮತ್ತು ಬರಹದ ನಡುವಿನ ಗೊಂದಲ' ಎಂಬ ಕೃತಿಯಲ್ಲಿ ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಪದಗಳ ಉಚ್ಚಾರಣೆ ಮತ್ತು ಆಡುಮಾತಿನಲ್ಲಿ ಅವುಗಳು ಬಳಕೆಯಾಗುತ್ತಿರುವ ರೀತಿಯಲ್ಲಿರುವ ವ್ಯತ್ಯಾಸ ಹಾಗೂ ಅರಿಮೆಯ ಪದಗಳಲ್ಲಿ ಸಂಸ್ಕೃತ ಭಾಷೆಯ ಪ್ರಾಬಲ್ಯದ ಕುರಿತು ಡಿ. ಎನ್. ಶಂಕರ ಬಟ್ಟರು ಹೀಗೆ ಅಭಿಪ್ರಾಯಪಟ್ಟಿದ್ದಾರೆ: "ನನ್ನ ಈ ಎರಡು ಹೇಳಿಕೆಗಳನ್ನು

ಕೆಲವರು ಮೆಚ್ಚಿದ್ದಾರೆ; ಆದರೆ, ಬೇರೆ ಕೆಲವರು ಅವನ್ನು, ಅದರಲ್ಲೂ ಮುಕ್ಯವಾಗಿ ಮೊದಲನೆಯ ಹೇಳಿಕೆಯನ್ನು, ಮೆಚ್ಚದೆ, ಅವುಗಳಲ್ಲಿ ತಪ್ಪುಗಳನ್ನು ಕಾಣಲು ಪ್ರಯತ್ನಿಸಿದ್ದಾರೆ. ಆದರೆ, ಇಂತಹ ಹೆಚ್ಚಿನ ಪ್ರಯತ್ನಗಳೂ ಒಂದು ಮುಕ್ಯವಾದ ಗೊಂದಲದಿಂದ ಹುಟ್ಟಿಕೊಂಡಿವೆ: ಹೆಚ್ಚಿನವರೂ ಮಾತಿಗೂ ಬರಹಕ್ಕೂ ನಡುವಿರುವ ಸಂಬಂದ ಎಂತಹದು, ಮತ್ತು ಅವಕ್ಕೂ ನುಡಿಗೂ ನಡುವಿರುವ ಸಂಬಂದ ಎಂತಹದು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳದೆ ನನ್ನ ಹೇಳಿಕೆಗಳಲ್ಲಿ ತಪ್ಪುಗಳನ್ನು ಕಾಣಲು ಪ್ರಯತ್ನಿಸಿದ್ದಾರೆ"[೩೭] ಎನ್ನುತ್ತಾರೆ. ಈ ಮೂಲಕ ತಮ್ಮ ಭಾಷಿಕ ಬಿಡುಗಡೆಯ ಚಿಂತನೆಗಳಿಗೆ ವ್ಯತಿರಿಕ್ತ ನಿಲುವುಗಳು ವ್ಯಕ್ತವಾಗುತ್ತಿರುವುದಕ್ಕೆ ಅವರು ಪ್ರತಿಕ್ರಿಯಿಸುತ್ತಿದ್ದಾರೆ. ತಮ್ಮ ಕೃತಿಗಳಲ್ಲಿ ಕೂಡ ತಾವು ಹೇಳಿದಂತೆ ಸಂಸ್ಕೃತರಹಿತ ಮತ್ತು ಹೊಸ ಬರಹದ ಕನ್ನಡವನ್ನು ಬಳಸುತ್ತಿದ್ದಾರೆ.

ಮಾತು ಮತ್ತು ಬರಹದ ನಡುವೆ ಇರುವ ಗೊಂದಲಗಳ ಕುರಿತು ಅವರ ಅಭಿಪ್ರಾಯ ಹೀಗಿದೆ: **"ಇವತ್ತು ಸಾಮಾನ್ಯ ಜನರಲ್ಲಿ ಮಾತ್ರವಲ್ಲದೆ ದೊಡ್ಡ ವಿದ್ವಾಂಸರೆಂದು ಎನ್ನಿಸಿಕೊಂಡವರಲ್ಲೂ ಮಾತು ಮತ್ತು ಬರಹಗಳ ನಡುವಿನ ಸಂಬಂದವನ್ನು ತಿಳಿಯುವಲ್ಲಿ, ಮತ್ತು ಅವಕ್ಕೂ ನುಡಿ ಇಲ್ಲವೇ ಬಾಶೆಗೂ ನಡುವಿನ ಸಂಬಂದವನ್ನು ತಿಳಿಯುವಲ್ಲಿ ಒಂದು ದೊಡ್ಡ ಗೊಂದಲವಿದೆ; ಈ ಗೊಂದಲದಿಂದಾಗಿ, ಬಾಶೆ ಇಲ್ಲವೇ ನುಡಿಗಳ ಕುರಿತಾಗಿ ಅವರಲ್ಲಿರುವ ಅನಿಸಿಕೆಗಳಲ್ಲೂ ಗೊಂದಲ ಕಾಣಿಸಿಕೊಳ್ಳುತ್ತಿದೆ. ಬಾಶೆ ಎಂಬುದು ಮುಕ್ಯವಾಗಿ ಮಾತಲ್ಲದೆ ಬರಹವಲ್ಲ ಎಂಬುದನ್ನು ಅವರು ಗಮನಿಸುವುದೇ ಇಲ್ಲ"**[೩೮] ಎನ್ನುತ್ತಾರೆ. ಈ ಮೂಲಕ ಜನಸಾಮಾನ್ಯರಿಂದ ವಿದ್ವಾಂಸರವರೆಗೆ ಮಾತು ಮತ್ತು ಬರಹಗಳ ನಡುವೆ ಇರುವ ಗೊಂದಲವನ್ನು ವಿವರಿಸಲು ಯತ್ನಿಸಿದ್ದಾರೆ. ಅವರ ಪ್ರಕಾರ ಭಾಷೆಯೆಂದರೆ ಮಾತು; ಬರಹವಲ್ಲ. ಆದರೆ, ಬಹುತೇಕ ವೈಯಾಕರಣಿಗಳು ಮತ್ತು ಭಾಷಾ ವಿಜ್ಞಾನಿಗಳು ಬರಹದ ಭಾಷೆಯನ್ನೇ ಪ್ರಮಾಣ ಭಾಷೆಯನ್ನಾಗಿಸಿಕೊಂಡು ಅಧ್ಯಯನ ನಡೆಸಿದ್ದಾರೆ. ಇದರಿಂದಾಗಿ ಆಡು ಮಾತಿಗೆ ಪ್ರಾಮುಖ್ಯತೆ ಬಂದಿಲ್ಲ ಎನಿಸುತ್ತದೆ.

ಸಂಸ್ಕೃತ ಭಾಷೆ ಕುರಿತು ಡಿ. ಎನ್. ಶಂಕರ ಬಟ್ಟರು ಮತ್ತೊಂದು ಸಂಗತಿಯನ್ನು ದಾಖಲಿಸುತ್ತಾರೆ. ಅವರ ಪ್ರಕಾರ: **"ಸಂಸ್ಕೃತವನ್ನು ಒಂದು 'ಬಾಶೆ'ಎಂಬುದಾಗಿ ಕರೆಯಲಾಗುತ್ತದೆ; ಆದರೆ, ನಿಜಕ್ಕೂ ಅದು ಒಂದು ಬರಹ ಮಾತ್ರ, ಬಾಶೆಯಲ್ಲ"**[೩೯] ಎನ್ನುತ್ತಾರೆ. ಈ ಮೂಲಕ ಸಂಸ್ಕೃತ ಪ್ರೇಮಿಗಳಿಗೆ ಮತ್ತೊಂದು ಅಚ್ಚರಿಯ ಸಂಗತಿಯನ್ನು ಹೊರಗೆಡಹುತ್ತಾರೆ. ಮುಂದುವರೆದು, 'ಸಂಸ್ಕೃತ' ಎಂಬುದು ಎರಡು ಸಾವಿರ ವರ್ಶಗಳಿಂದಲೂ ಸ್ವಲ್ಪವೂ ಬದಲಾಗದೆ ಹಾಗೆಯೇ ಉಳಿದಿದೆ. ಬಾಶೆಗಳಲ್ಲಿ ಸ್ವಾಬಾವಿಕವಾಗಿ ಉಂಟಾಗುವಂತಹ ಯಾವ ಬಗೆಯ ಬದಲಾವಣೆಯೂ ಅದರಲ್ಲಿ ನಡೆದಿಲ್ಲ. ಅಂತಹ ಬದಲಾವಣೆಗಳು ಅದರಲ್ಲಿ ನಡೆಯದ ಹಾಗೆ ಪಾಣಿನಿಯ ವ್ಯಾಕರಣದ, ಮತ್ತು ಸಾವಿರಾರು ಬರಹಗಳ ಕಟ್ಟು ತಡೆಯನ್ನೊಡ್ಡಿದೆ. ಹಾಗಾಗಿ, 'ಬಾಶೆ' ಎಂಬುದಾಗಿ ಕರೆಯಿಸಿಕೊಳ್ಳಲು ಬೇಕಾಗುವಂತಹ ಸ್ವಾಬಾವಿಕತೆ ಅದರಲ್ಲಿ ಉಳಿದಿಲ್ಲ[೪೦] ಎನ್ನುತ್ತಾರೆ. ಈ ಮೂಲಕ ಕನ್ನಡದ ಮೇಲೆ ಪ್ರಭಾವ ಬೀರಿರುವ ಸಂಸ್ಕೃತದ ಕುರಿತು ವಿಭಿನ್ನ ಒಳನೋಟ ಒಂದನ್ನು ನೀಡಿದ್ದಾರೆ. ಆದರೆ, ಸಂಸ್ಕೃತ ಪ್ರೇಮಿ ಪಂಡಿತರಿಗೆ ಶಂಕರ ಬಟ್ಟರು ಹೇಳುತ್ತಿರುವ ಯಾವ ಸಂಗತಿಗಳೂ ರುಚಿಸುತ್ತಿಲ್ಲ ಎನಿಸುತ್ತದೆ.

ಡಿ. ಎನ್. ಶಂಕರ ಬಟ್ಟರ ಪ್ರಕಾರ, ಕನ್ನಡ ಭಾಷೆಯ ಮೇಲೆ ಸಂಸ್ಕೃತ ಭಾಷೆಯ ಪ್ರಭಾವ ಆಗಿಲ್ಲ. ಬದಲಾಗಿ ಬರಹದ ಮೇಲೆ ಪ್ರಭಾವವಿದೆ. **“ಕನ್ನಡ ಬಾಶೆಯ ಮೇಲೆ ಸಂಸ್ಕ್ರುತದ ಪ್ರಬಾವ ತುಂಬಾ ಇದೆ ಎಂಬುದಾಗಿ ಹಲವು ಮಂದಿ ವಿದ್ವಾಂಸರು ಹೇಳುತ್ತಿದ್ದಾರೆ; ಆದರೆ, ನಿಜಕ್ಕೂ ಅವರು ಹೇಳುತ್ತಿರುವುದು ಕನ್ನಡ ಬರಹದ ಮೇಲೆ ಕಾಣಿಸುವ ಸಂಸ್ಕ್ರುತದ ಪ್ರಬಾವವನ್ನಲ್ಲದೆ, ಕನ್ನಡ ಬಾಶೆಯ ಮೇಲಿನ ಪ್ರಬಾವವನ್ನಲ್ಲ**[೪೧] ಎನ್ನುತ್ತಾರೆ. ಜೊತೆಗೆ ಸರಿಪಡಿಸಬೇಕಿರುವುದು ಭಾಷೆಯನ್ನಲ್ಲ ಬದಲಾಗಿ ಬರಹವನ್ನು ಎಂದು ಕೂಡ ಅವರು ಹೇಳುತ್ತಾರೆ. ತಮ್ಮ ಮಾತುಗಳಿಗೆ ಇನ್ನಷ್ಟು ಸಮರ್ಥನೆಯನ್ನು ನೀಡುವ ಅವರು. **“ಹೆಚ್ಚಿನ ಕನ್ನಡಿಗರ ಮಾತಿನಲ್ಲೂ ಬರಹದಲ್ಲಿ ಕಾಣಿಸುವ ಮಹಾಪ್ರಾಣ ಅಕ್ಶರವಾಗಲಿ, ಋಕಾರ–ಷಕಾರಗಳಾಗಲಿ ಇಲ್ಲವೇ ಇಲ್ಲ; ಹಾಗಾಗಿ, ಅವನ್ನು ಬರಹದಿಂದ ತೆಗೆದುಹಾಕಿದಲ್ಲಿ ಬಾಶೆಯ ಮಟ್ಟಿಗೆ ಅವರು ಏನನ್ನೂ ಕಳೆದುಕೊಳ್ಳುವುದಿಲ್ಲ. ಆದರೆ, ಮೇಲಿನ ನನ್ನ ಹೇಳಿಕೆಯನ್ನು ವಿರೋದಿಸುವವರು ಕನ್ನಡ ಬಾಶೆಯ ಉಲಿಗಳನ್ನೇ ನಾನು ತೆಗೆದುಹಾಕುತ್ತಿದ್ದೇನೆಂದು ಹೇಳುತ್ತಿದ್ದಾರೆ!**[೪೨] ಎನ್ನುತ್ತಾರೆ. ಈ ಮೂಲಕ ಮಾತು ಮತ್ತು ಬರಹಗಳ ನಡುವೆ ಇರುವ ಗೊಂದಲವನ್ನು ಅರಿಯುವಲ್ಲಿ ಕನ್ನಡದ ವಿದ್ವಾಂಸರು ಕೂಡ ವಿಫಲರಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಮಾತು ಮತ್ತು ಬರಹದ ನಡುವಿನ ಗೊಂದಲಗಳನ್ನು ಸಾಕಷ್ಟು ಉದಾಹರಣೆಗಳ ಸಹಿತ ವಿವರಿಸಿದ್ದಾರೆ.

‘ಇನ್ನಷ್ಟು ಕನ್ನಡ’ ಕೃತಿಯ ‘ಮಹಾಪ್ರಾಣ ಇತ್ಯಾದಿ: ಒಂದು ಪ್ರತಿಕ್ರಿಯೆ’ ಎಂಬ ಲೇಖನದಲ್ಲಿ ಕೆ. ವಿ. ತಿರುಮಲೇಶರು ಕನ್ನಡದಲ್ಲಿರುವ ಸಂಸ್ಕೃತ ಮಹಾಪ್ರಾಣಾಕ್ಷರಗಳ ಪರವಾಗಿ ವಾದಿಸುತ್ತಾರೆ. ಅವರ ಪ್ರಕಾರ: “ಓದುವ ಹಾಗೆ ಬರೆಯಬೇಕು, ಬರೆದ ಹಾಗೆ ಓದಬೇಕು ಎನ್ನುವ ಭಟ್ ಅವರ ಆಗ್ರಹದಲ್ಲಿ ನುಡಿ ಮತ್ತು ಬರಹದಲ್ಲಿ ಸಂಪೂರ್ಣ ಅಭೇದ ಕಲ್ಪಿಸುವ ಆಶಯವಿದೆ. ಬರಹವಿರುವ ಯಾವ ಭಾಷೆಯಲ್ಲೂ ಇದು ಸಾಧ್ಯವಾಗಿಲ್ಲ, ಆಗುವುದೂ ಇಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ನುಡಿಯ ಭಾಷೆ ತುಟಿಯಾದರೆ, ಬರಹದ ಭಾಷೆ ಕಣ್ಣಿನದು ಎನ್ನುವುದು ಈ ಕಾರಣಗಳಲ್ಲಿ ಒಂದು”[೪೩] ಎನ್ನುತ್ತಾರೆ. ಈ ಮೂಲಕ ಬರಹ ಮತ್ತು ಮಾತಿನ ಭಾಷೆ ಒಂದೇ ರೀತಿಯಾಗಿರಲು ಸಾಧ್ಯವಿಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಕುರಿತು ಇನ್ನಷ್ಟು ಸಂಶೋಧನೆಗಳ ಅಗತ್ಯವಿದೆ ಎನಿಸುತ್ತದೆ.

ಆದರೆ, ಸಂಸ್ಕೃತ ಅಕ್ಷರ, ಪದ, ವ್ಯಾಕರಣ ನಿಯಮಗಳನ್ನು ಬೆಂಬಲಿಸುವವರಿದ್ದಂತೆ; ಅದು ತಪ್ಪು ಎಂಬ ವಾದಕ್ಕೆ ಪೂರಕವಾಗಿ ಕೂಡ ಕೆಲವು ಭಾಷಾ ತಜ್ಞರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿಲಿಯಂ ಮಾಡ್ತ ಅವರ ಪ್ರಕಾರ: “ಭಾಷಾವೈಜ್ಞಾನಿಕ ದೃಷ್ಟಿಯಿಂದ ಕೇಶಿರಾಜನಿತ್ತ ವರ್ಣಮಾಲೆಯನ್ನು ಗಮನಿಸಿದಾಗ ಆತನ ವಿಧಾನ ಅಷ್ಟೊಂದು ವೈಜ್ಞಾನಿಕವಾಗಿ ಕಾಣುತ್ತಿಲ್ಲ. ಯಾಕೆಂದರೆ, ಕನ್ನಡ ವರ್ಣವ್ಯವಸ್ಥೆಯನ್ನು ಹೇಳಬೇಕಾದ ಸಂಸ್ಕೃತದ ವರ್ಣಮಾಲೆಯನ್ನು ಹಿಂಡುವುದೇಕೆ? ದ್ರಾವಿಡಭಾಷೆಯ ವ್ಯವಸ್ಥೆಯನ್ನು ಆರ್ಯಭಾಷೆಯಿಂದ ಪಡೆದುಕೊಳ್ಳುವ ಪ್ರಯತ್ನ ಶಾಸ್ತ್ರೀಯ ದೃಷ್ಟಿಯಿಂದ ಎಷ್ಟರಮಟ್ಟಿಗೆ ಪ್ರಶಂಸನೀಯ?”[೪೪] ಎಂದು ವಿಲ್ಯಂ ಮಾಡ್ತ ಪ್ರಶ್ನಿಸುತ್ತಾರೆ. ಮೇಲಿನ ಅವರ ಅಭಿಪ್ರಾಯಗಳು ಡಿ. ಎನ್. ಶಂಕರ ಬಟ್ಟರ ಚಿಂತನೆಗಳಿಗೆ ಪೂರಕವಾಗಿವೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ನಡುವೆ ಜ್ಞಾತಿ ಸಂಬಂಧ ಇಲ್ಲವೆನ್ನುವ ಶಂಕರ ಬಟ್ಟರ

ವಾದಗಳನ್ನು ವಿಲ್ಯಂ ಮಾಡ್ತ ಅವರು ಇನ್ನೊಂದು ರೀತಿಯಲ್ಲಿ ಪುರಸ್ಕರಿಸಿದ್ದಾರೆ. ದ್ರಾವಿಡ ಮತ್ತು ಆರ್ಯ ಭಾಷೆಗಳ ನಡುವೆ ನಡೆಯುವ ಕೊಡುಕೊಳುವಿಕೆಗಳ ಕುರಿತು ವಿಲ್ಯಂ ಮಾಡ್ತ ಅವರ ಪ್ರಶ್ನೆಗಳು ಸಮಂಜಸವಾಗಿವೆ.

“ಕೇಶಿರಾಜ ಕೊಟ್ಟ ವರ್ಣಗಳೆಲ್ಲವೂ ಅಗತ್ಯವೇ? ಕನ್ನಡಿಗರ ಬಾಯಿಯಲ್ಲಿ ಐಕಾರ, ಔಕಾರಗಳು ಸ್ವರಗಳಾಗಿಯೇ ಉಚ್ಚಾರಗೊಳ್ಳುತ್ತಿದ್ದುವೆ? ಇದರ ಬಗ್ಗೆ ಈಗ ಖಚಿತವಾಗಿ ಹೇಳಲಾಗದಿದ್ದರೂ ಇಂದಿನ ಸ್ಥಿತಿಯನ್ನು ಗಮನಿಸಿದಾಗ ಅವು, ಆಯ್ ಅವ್‌ಗಳಾಗಿಯೇ ಉಚ್ಚಾರಗೊಳ್ಳುತ್ತಿದ್ದಿರಬೇಕೆಂಬ ಊಹೆಗೆ ಪುಷ್ಟಿ ಸಿಗುತ್ತದೆ”[೩೫] ಎನ್ನುವುದು ವಿಲ್ಯಂ ಮಾಡ್ತ ಅವರ ಅಭಿಪ್ರಾಯ. ಇದೇ ರೀತಿಯ ಪ್ರಶ್ನೆಗಳಿಗೆ ಡಿ. ಎನ್. ಶಂಕರ ಬಟ್ಟರು ಕೂಡ ಮುಖಾಮುಖಿಯಾಗಿದ್ದಾರೆ. ಐ, ಔ ಕಾರಗಳನ್ನು ಕನ್ನಡದಲ್ಲಿ (ಐ –ಅಯ್ದು, ಔ – ಅವ್ವು) ಎಂದು ಬರೆಯಬಹುದು ಎನ್ನುವುದು ಶಂಕರ ಬಟ್ಟರ ಪ್ರಮೇಯ. ಇದನ್ನು ಸ್ವತಃ ಅವರ ಕೃತಿಗಳಲ್ಲಿ ಕೂಡ ರಚಿಸುವ ಮೂಲಕ ಅವರು ಕನ್ನಡದಲ್ಲಿ ಐ, ಔಕಾರಗಳ ಅವಶ್ಯಕತೆ ಇಲ್ಲ ಎನ್ನುವುದನ್ನು ತಿಳಿಸಿದ್ದಾರೆ.

ಡಿ. ಎನ್. ಶಂಕರ ಬಟ್ಟರು ಬಳಸುತ್ತಿರುವ ಹೊಸ ಬರಹದ ಮಾದರಿಯ ಕುರಿತು ಕೂಡ ಕೆಲವು ಪ್ರಶ್ನೆಗಳು ಏಳುತ್ತವೆ. ಅವರ ಪ್ರಕಾರ: **“ಹಲವು ರೀತಿಯ ಸ್ಪೆಲ್ಲಿಂಗ್ ಸಮಸ್ಯೆಯಿರುವ ಇಂಗ್ಲಿಶ್ ಬರಹವನ್ನು ಬದಲಾಯಿಸಲು ಹಲವರು ಪ್ರಯತ್ನಪಟ್ಟಿದ್ದಾರೆ ಮತ್ತು ಈಗಲೂ ಪ್ರಯತ್ನಪಡುತ್ತಿದ್ದಾರೆ. ಆದರೆ, ಈಗಾಗಲೇ ಇಂಗ್ಲಿಶ್ ಬರಹವನ್ನು ಕಲಿತು ಅದರಲ್ಲಿ ಪಳಗಿರುವ ಬರಹಗಾರರಿಗೆ ಮತ್ತು ಓದುಗರಿಗೆ ಉಚ್ಚಾರಣೆಗೆ ಅನುಸಾರವಾಗಿ ಸಿದ್ದಪಡಿಸಿದ ಹೊಸ ಸ್ಪೆಲ್ಲಿಂಗ್ ಪದ್ದತಿಯನ್ನು ಬಳಸುವುದಕ್ಕಿಂತಲೂ ಈಗ ಬಳಕೆಯಲ್ಲಿರುವ ಪದ್ದತಿಯನ್ನು ಬಳಸುವುದೇ ಹೆಚ್ಚು ಸುಲಬವಾದುದೆಂದು ಅನಿಸುತ್ತದೆ. ಹಾಗಾಗಿ ಅವರು ಈಗಿರುವ ಬರಹದ ವಿದಾನವನ್ನು ಬಿಟ್ಟುಕೊಡುತ್ತಿಲ್ಲ”**[೩೬] ಎನ್ನುತ್ತಾರೆ. ಈ ಮೂಲಕ ಇಂಗ್ಲಿಷ್‌ನಲ್ಲಿ ಇರುವ ವ್ಯತ್ಯಾಸಗಳನ್ನು ಪರಿಹರಿಸುವ ವಿಧಾನ ಯಶಸ್ವಿಯಾಗಿಲ್ಲ ಎನ್ನುವುದು ಅವರ ಅಭಿಪ್ರಾಯವಾಗಿದೆ. ಸದ್ಯಕ್ಕೆ ಕನ್ನಡದಲ್ಲಿ ಕೂಡ ಇದೇ ಸಮಸ್ಯೆ ತಲೆದೋರಿದೆ ಎನಿಸುತ್ತದೆ. ಈಗ ಕನ್ನಡದಲ್ಲಿ ಸಂಸ್ಕೃತ ಮಹಾಪ್ರಾಣಾಕ್ಷರಗಳು ಮತ್ತು ಸಂಸ್ಕೃತ ನಿಯಮಗಳು ಬೇಡ ಎಂದು ವಾದಿಸುತ್ತಿರುವ ಡಿ. ಎನ್. ಶಂಕರ ಬಟ್ಟರ ವಾದಗಳಿಗೆ ಕೂಡ ಈ ಸಮಸ್ಯೆ ಅನ್ವಯಿಸುತ್ತದೆ.

“ಬರಹಕ್ಕೂ ಮಾತಿಗೂ ನಡುವೆ ತುಂಬಾ ಅಂತರವಿರುವುದು ಈ ರೀತಿ ಇಂಗ್ಲಿಶ್‌ನಲ್ಲಿ ಸ್ಪೆಲ್ಲಿಂಗ್ ಸಮಸ್ಯೆಯನ್ನು ತೊಡೆದು ಹಾಕಲು ಸಾದ್ಯವಾಗದಿರುವುದಕ್ಕೆ ಮುಕ್ಯ ಕಾರಣ. ಉಚ್ಚಾರಣೆಗೆ ಸರಿಹೊಂದುವ ಹಾಗೆ ಇಂಗ್ಲಿಶ್ ಬರಹವನ್ನು ಬದಲಾಯಿಸಿದಲ್ಲಿ ಅದು ಈಗ ಬಳಕೆಯಲ್ಲಿರುವ ಬರಹಕ್ಕಿಂತ ತೀರ ಬೇರಾಗಿ ಕಾಣಿಸಬಹುದಾದ ಕಾರಣ, ಈಗಿರುವ ಬರಹವನ್ನು ಕಲಿತವರೆಲ್ಲರೂ ಹೊಸದಾಗಿ ಓದಲು ಮತ್ತು ಬರೆಯಲು ಕಲಿಯಬೇಕಾದೀತು. ಇದಲ್ಲದೆ ಹೊಸದಾಗಿ ಓದಲು ಕಲಿತವರಿಗೂ ಈಗಾಗಲೇ ಹಳೆಯ ವಿದಾನದಲ್ಲಿ ಅಚ್ಚಾಗಿರುವ ಬರಹಗಳನ್ನು ಓದಲು ತುಂಬಾ ಕಷ್ಟವಾದೀತು”[೩೭] ಎನ್ನುತ್ತಾರೆ. ಮೇಲಿನ ಎರಡು ಉದಾಹರಣೆಗಳನ್ನು ಸ್ವತಹ ಡಿ. ಎನ್. ಶಂಕರ ಬಟ್ಟರ ವಾದಕ್ಕೂ

ಆಂಶಿಕವಾಗಿ ಅನ್ವಯಿಸಬಹುದು. ಏಕೆಂದರೆ, ಕನ್ನಡದಲ್ಲಿ ಲಿಪಿ ಸುಧಾರಣೆ, ಅಕ್ಷರ ಕ್ರಾಂತಿ, ಪದಕ್ರಾಂತಿಗೆ ಅವರು ಕರೆ ನೀಡಿ ನಿರ್ವಹಿಸುತ್ತಿರುವ ಸವಾಲುಗಳು ಮೇಲಿನಂತೆಯೇ ಸಮಸ್ಯಾತ್ಮಕ ವಿಷಯಗಳು. ಇಂಗ್ಲಿಷ್‌ನಲ್ಲಿ ಎದುರಾಗುವ ಹಳೆಯ ಮತ್ತು ಹೊಸ ಓದುಗರ ನಡುವಿನ ಕೊಂಡಿಯ ಸಮಸ್ಯೆ ಕನ್ನಡದಲ್ಲಿ ಕೂಡ ಆಗುತ್ತದೆ. ಇದನ್ನು ಡಿ. ಎನ್. ಶಂಕರ್ ಬಟ್ಟರ ವಾದವನ್ನು ವಿರೋಧಿಸುವ ವಿದ್ವಾಂಸರು ಮುನ್ನೆಲೆಗೆ ತರಬಹುದು.

ಆದರೆ, ಇಂಗ್ಲಿಷ್‌ನಲ್ಲಿರುವ ಪದಗಳ ಸ್ವರೂಪ ಚರಿತ್ರೆಯನ್ನೂ ಸೂಚಿಸುತ್ತದೆ ಎಂದು ಅಭಿಪ್ರಾಯಪಡುವ ಡಿ. ಎನ್. ಶಂಕರ ಬಟ್ಟರು, "ಉಚ್ಚಾರಣೆಯಲ್ಲಿಲ್ಲದಿದ್ದರೂ ಬರಹದಲ್ಲಿ ಕಾಣಿಸುವ ಇಂತಹ ಹಲವು ವ್ಯತ್ಯಾಸಗಳು ಇಂಗ್ಲಿಶ್ ಪದಗಳ ಚರಿತ್ರೆಯನ್ನು ಸೂಚಿಸುತ್ತಿವೆಯಾದ ಕಾರಣ ಅವನ್ನು ಉಳಿಸಿಕೊಳ್ಳುವ ಮೂಲಕ ತಮ್ಮ ಸಂಸ್ಕೃತಿಯನ್ನೂ ಉಳಿಸಿಕೊಳ್ಳುತ್ತೇವೆಂಬುದಾಗಿ ಇಂಗ್ಲಿಶ್ ವಿದ್ವಾಂಸರು ಮತ್ತು ಬರಹಗಾರರು ಬಾವಿಸುತ್ತಾರೆ. ಇಂಗ್ಲಿಶ್‌ನಲ್ಲಿ ಸ್ಪೆಲ್ಲಿಂಗ್ ಸಮಸ್ಯೆಯನ್ನು ಬಗೆಹರಿಸಲು ಸಾದ್ಯವಾಗದಿರುವುದಕ್ಕೆ ಇದೂ ಒಂದು ಕಾರಣ"[೪೮] ಎನ್ನುತ್ತಾರೆ. ಇದಕ್ಕಾಗಿ ಅವರು know, no, knee, knead, knife, knit, knob, knot ಪದಗಳ ಉದಾರಣೆಗಳನ್ನು ಕೊಡುತ್ತಾರೆ. ಇದರಲ್ಲಿ ಕಕಾರ ಪದ ಉಚ್ಚಾರಣೆಯಲ್ಲಿ ಇಲ್ಲ; ಆದರೆ, ಬರಹದಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಇದಕ್ಕೆ ಕಾರಣವನ್ನೂ ಕೊಡುವ ಅವರು, "ನಿಜಕ್ಕೂ ಮೊದಲಿಗೆ ಇಂಗ್ಲಿಶ್‌ನಲ್ಲಿ ಪದಗಳನ್ನು ಅವುಗಳ ಉಚ್ಚಾರಣೆ ಹೇಗಿದೆಯೋ ಹಾಗೆಯೇ ಬರೆಯಲಾಗುತ್ತಿತ್ತು. ಆದರೆ ಹದಿನೆಂಟನೆಯ ಶತಮಾನದಲ್ಲಿ ಸಾಮ್ಯುವೆಲ್ ಜಾನ್ಸನ್ ಎಂಬ ಒಬ್ಬ ವಿದ್ವಾಂಸ ಪದಗಳ ಬರಹದಲ್ಲಿ ಅವುಗಳ ಉಚ್ಚಾರಣೆಗಿಂತಲೂ ಚರಿತ್ರೆಗೆ ಹೆಚ್ಚಿನ ಮಹತ್ವ ಕೊಡಬೇಕೆಂಬುದಾಗಿ ಬಾವಿಸಿ, ಆ ರೀತಿ ಅವಕ್ಕೆ ಹೊಸ ರೂಪವನ್ನು ಕೊಡುವ ಪ್ರಯತ್ನವನ್ನು ತನ್ನ ಇಂಗ್ಲಿಶ್ ಪದಕೋಶದಲ್ಲಿ ನಡೆಸಿದ"[೪೯] ಎನ್ನುತ್ತಾರೆ. ಮುಂದುವರೆದು, "ಆತನ ಪದಕೋಶ ಬೇರೆ ಕಾರಣಗಳಿಂದಾಗಿ (ಮುಕ್ಯವಾಗಿ ಅದು ಇಂಗ್ಲಿಶ್ ಪದಗಳಿಗೆ ಕೊಡುವ ಅರ್‍ತಗಳಿಗಾಗಿ) ಇಂಗ್ಲಿಶ್ ಜನರ ಮೆಚ್ಚುಗೆ ಪಡೆಯಿತು ಮತ್ತು ಇದರಿಂದಾಗಿ ಅದು ಇಂಗ್ಲಿಶ್ ಬರಹಕ್ಕೆ ಒಂದು ಉತ್ತಮ ಆಕರ ಗ್ರಂತವೆಂಬುದಾಗಿ ಪ್ರಸಿದ್ದಿಗೆ ಬಂತು. ಆದರೆ, ಸಾಮ್ಯುವೆಲ್ ಜಾನ್ಸನ್‌ನಿಗೆ ನಿಜಕ್ಕೂ ಇಂಗ್ಲಿಶ್ ಪದಗಳ ಚರಿತ್ರೆಯಲ್ಲಿ ಹೆಚ್ಚಿನ ಪಾಂಡಿತ್ಯವಿರಲಿಲ್ಲ. ಹಾಗಾಗಿ ಹಲವಾರು ಪದಗಳಿಗೆ ಅವನು ಕೊಟ್ಟಿರುವ ಸ್ವರೂಪ ಅವುಗಳ ಚರಿತ್ರೆಯನ್ನೂ ಸರಿಯಾಗಿ ಸೂಚಿಸುವುದಿಲ್ಲ, ಉಚ್ಚಾರಣೆಯನ್ನೂ ಸೂಚಿಸುವುದಿಲ್ಲ. ಅವುಗಳ ಬಳಕೆ ಈ ಕಾರಣದಿಂದಾಗಿ ತೀರ ಅನವಶ್ಯವಕವಾದ ಒಂದು ಗೊಂದಲದ ಗೂಡಾಗಿದೆ"[೫೦] ಎನ್ನುತ್ತಾರೆ. ಈ ಮೂಲಕ ಕನ್ನಡದಲ್ಲಿ ಕೂಡ ಇಂಥದ್ದೇ ವಾದ ಹೂಡುವವರು ಕೂಡ ಕನ್ನಡ ವಿದ್ವಾಂಸರಲ್ಲಿ ಕೂಡ ಹೆಚ್ಚಿನ ಪಾಂಡಿತ್ಯವಿಲ್ಲ ಎಂದೂ ಸೂಕ್ಷ್ಮವಾಗಿ ಹೇಳಿದ್ದಾರೆ. ಇದರೊಂದಿಗೆ ತಾವು ಈಗ ಕನ್ನಡದಲ್ಲಿ ಮಂಡಿಸುತ್ತಿರುವ ನುಡಿದಂತೆ ಬರಹ ಎಂಬ ವಾದಕ್ಕೆ ಪೂರಕವಾಗಿ ಜಾಗತಿಕ ಮಟ್ಟದಲ್ಲಿ ನಡೆದಿರುವ ಬದಲಾವಣೆಗಳನ್ನು ಉದಾಹರಿಸುತ್ತಾರೆ. ಅವರ ಪ್ರಕಾರ: "ಇಂಗ್ಲಿಶ್ ನುಡಿಯೊಂದನ್ನು ಬಿಟ್ಟು ಪ್ರೆಂಚ್, ಜರ್ಮನ್, ಇಟಾಲಿಯನ್, ರಶ್ಯನ್ ಮೊದಲಾದ ಇತರ ಯೂರೋಪಿಯನ್ ನುಡಿಗಳಲ್ಲೆಲ್ಲ ಪದಗಳ ಉಚ್ಚಾರಣೆಗೂ ಬರಹಕ್ಕೂ ನಡುವೆ ನೇರವಾದ ಹೊಂದಾಣಿಕೆಯಿದೆ ಮತ್ತು ಇದರಿಂದಾಗಿ ಆ ನುಡಿಗಳಲ್ಲಿ ಇಂಗ್ಲಿಶ್‌ನಂತಹ ಸ್ಪೆಲ್ಲಿಂಗ್ ಸಮಸ್ಯೆಯಿಲ್ಲ"[೫೧]

ಎನ್ನುತ್ತಾರೆ. ಈ ಮೂಲಕ ತಮ್ಮ ವಾದಕ್ಕೆ ಜಾಗತಿಕ ನುಡಿಗಳ ಮಟ್ಟದಲ್ಲಿ ಈಗಾಗಲೇ ನಡೆದಿರುವ ಮತ್ತು ಜಾರಿಯಲ್ಲಿರುವ ಮಾದರಿಯನ್ನು ಉದಾಹರಿಸುತ್ತಾರೆ.

ಕನ್ನಡ ಹಾಗೂ ಅಸಮೀಸ್, ಇಂಗ್ಲಿಷ್ ಭಾಷೆಯ ನಡುವೆ ಇರುವ ಅಕ್ಷರ ದೋಷಗಳ ಕುರಿತ ಅವರ ಅಭಿಪ್ರಾಯ ಹೀಗಿದೆ. **“ಕನ್ನಡ ಬರಹದಲ್ಲಿ ಕಾಣಿಸುವ ಸ್ಪೆಲ್ಲಿಂಗ್ ಸಮಸ್ಯೆ ಇಂಗ್ಲಿಶ್ ಇಲ್ಲವೇ ಅಸಮೀಸ್ ಬರಹಗಳಲ್ಲಿ ಕಾಣಿಸುವ ಸ್ಪೆಲ್ಲಿಂಗ್ ಸಮಸ್ಯೆಯ ಹಾಗೆ ನುಡಿಯ ಪದಗಳ ಚರಿತ್ರೆಯನ್ನು ಅವುಗಳ ಸ್ವರೂಪದಲ್ಲಿ ಕಾಣಿಸಬೇಕೆಂಬ ತಪ್ಪು ನಿರ್ದಾರದಿಂದ ಮೂಡಿಬಂದಿಲ್ಲ. ಕನ್ನಡವನ್ನು ಮ್ಲೇಚ್ಚನುಡಿಯೆಂಬುದಾಗಿ ಮತ್ತು ಸಂಸ್ಕ್ರುತವನ್ನು ದೇವನುಡಿಯೆಂಬುದಾಗಿ ಪರಿಗಣಿಸುತ್ತಿದ್ದ ಮೇಲ್ವರ್ಗದ ಕನ್ನಡ ಬರಹಗಾರರಿಗೆ ಸಂಸ್ಕ್ರುತದ ಮೇಲಿದ್ದ ಕುರುಡು ಅಬಿಮಾನ ಮತ್ತು ಕನ್ನಡದ ಮೇಲಿದ್ದ ಕೀಳರಿಮೆಗಳೇ ಕನ್ನಡ ಬರಹದಲ್ಲಿ ಸ್ಪೆಲ್ಲಿಂಗ್ ಸಮಸ್ಯೆ ತಲೆದೋರಲು ಮುಕ್ಯ ಕಾರಣ”**[೫೨] ಎನ್ನುತ್ತಾರೆ. ಈ ಮೂಲಕ ಇಂಗ್ಲಿಷ್ ಮತ್ತು ಇತರ ಭಾಷೆಗಳಿಗೆ ಸಂಬಂಧಿಸಿದಂತೆ ಕೊಡುತ್ತಿರುವ ಭಾಷಿಕ ಚರಿತ್ರೆಯ ಕಾರಣಕ್ಕೂ ಕನ್ನಡವನ್ನು ಕೀಳೆಂದು ಪರಿಗಣಿಸಿ ಸಂಸ್ಕೃತ ಪದಗಳನ್ನು ಬರಹದಲ್ಲಿ ಬಳಸುತ್ತಿರುವುದಕ್ಕೂ ವ್ಯತ್ಯಾಸವಿರುವುದನ್ನು ಅವರು ಗುರುತಿಸುತ್ತಾರೆ. ಜೊತೆಗೆ ಸಂಸ್ಕೃತದಿಂದ ಕನ್ನಡಕ್ಕೆ ತಂದ ಪದಗಳಲ್ಲಿ ಅಕ್ಷರ ದೋಷ ಉಂಟಾಗುತ್ತದೆ ಎನ್ನುತ್ತಾರೆ.

ಮೇಲಿನ ಕೆಲವು ಉಲ್ಲೇಖಗಳಲ್ಲಿ ಡಿ. ಎನ್. ಶಂಕರ ಬಟ್ಟರ ವಾದಗಳಿಗೆ ಎದುರಾಗುವ ಕೆಲವು ವೈರುಧ್ಯಗಳನ್ನು ಗಮನಿಸಬಹುದು. ಇಂಗ್ಲಿಷ್ ಮತ್ತಿತರ ಭಾಷೆಗಳಲ್ಲಿ ನಡೆದ ಲಿಪಿ ಸುಧಾರಣೆ ಯತ್ನ ಮತ್ತು ಸ್ಪೆಲ್ಲಿಂಗ್ ಸಮಸ್ಯೆಯೊಂದಿಗೆ ಇನ್ನೊಂದು ಮಹತ್ವದ ಗಂಭೀರ ಸಮಸ್ಯೆ ಎದುರಾಗುತ್ತದೆ. ಮುಖ್ಯವಾಗಿ ಪ್ರಾಚೀನ ಕಾಲದ ಕೃತಿಗಳಿಂದ ಆಧುನಿಕ ಕಾಲದವರೆಗೆ ರಚನೆಯಾಗಿರುವ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಈಗಾಗಲೇ ಹಳೆಯ ಬರಹವನ್ನು ಬಳಸಲಾಗಿದೆ. ಇವುಗಳಲ್ಲಿ ಸಂಸ್ಕೃತ ಮಹಾಪ್ರಾಣಾಕ್ಷರಗಳು, ಋ, ಔ, ೯ ಮೊದಲಾದವುಗಳನ್ನು ಬಳಸಲಾಗಿದೆ. ಒಂದು ವೇಳೆ ಹೊಸ ಬರಹವನ್ನು ಎಲ್ಲರೂ ಕಲಿತಲ್ಲಿ ಈ ಅಪಾರ ಹಳೆಯ ಪುಸ್ತಕ ರಾಶಿಗಳ ಕತೆ ಏನು? ಎಂಬ ಪ್ರಶ್ನೆ ಎದುರಾಗುತ್ತದೆ. ಈ ಮೂಲಕ ಶಂಕರ ಬಟ್ಟರ ವಾದಕ್ಕೆ ಶಂಕರ ಬಟ್ಟರೇ ಮುಖಾಮುಖಿಯಾಗುತ್ತಿರುವುದನ್ನು ಗಮನಿಸಬೇಕು ಎನಿಸುತ್ತದೆ.

೬.೨. ಕನ್ನಡ ಮತ್ತು ಸಂಸ್ಕೃತ ವಾಗ್ವಾದ

ಒಂದಿನ ಬಾಗಿಲಿನಿಂದ ಸಂಸ್ಕೃತ ಹೇರಿಕೆ ಕುರಿತು ಅನೇಕ ಹುನ್ನಾರಗಳು ನಡೆಯುತ್ತಿವೆ. ಈ ಸಂಬಂಧ ಕೇಂದ್ರ ಸರ್ಕಾರ ಅನೇಕ ರೀತಿಯಲ್ಲಿ ಯತ್ನಿಸುತ್ತಿರುವುದಕ್ಕೆ ಅನೇಕ ಸಾಕ್ಷಿಗಳು ಸಿಗುತ್ತವೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಕೇಂದ್ರ ಮಾನವ ಸಂಪನ್ಮೂಲ ಸಚಿವೆಯಾಗಿದ್ದ ಸ್ಮೃತಿ ಇರಾನಿಯವರ ಹೇಳಿಕೆ. ಅವರ ಹೇಳಿಕೆ ಹೀಗಿದೆ: “ಸಂಸ್ಕೃತವನ್ನು ಜನರ ನುಡಿಯನ್ನಾಗಿ ಮಾಡಲು ಸಂಸ್ಕೃತವನ್ನು ಹೆಚ್ಚು ಸರಳಗೊಳಿಸಿ ಶಾಲೆಗಳಲ್ಲಿ ಕಲಿಸಬೇಕು ಮತ್ತು ಸಂಸ್ಕೃತದ ಮೇಲೆ ಹೆಚ್ಚು ಹೆಚ್ಚು ಸಂಶೋಧನೆಗಳು ನಡೆಯಬೇಕು” ಎಂದು ಸ್ಮೃತಿ ಇರಾನಿ ಅಭಿಪ್ರಾಯಪಟ್ಟಿರುವುದು ಕೆಲದಿನಗಳ ಹಿಂದೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಕುರಿತು ನುಡಿಕನ್ನಡ ವೆಬ್‌ತಾಣದಲ್ಲಿ

ಪ್ರತಿಕ್ರಿಯಿಸಿರುವ ಅನ್ನದಾನೇಶ ಶಿ. ಸಂಕದಾಳ 'ಸಂಸ್ಕೃತ ಜನರ ನುಡಿಯಾಗಬೇಕೆಂದರೆ, ಇರುವ ನುಡಿಗಳನ್ನು ಏನು ಮಾಡಬೇಕು?' ಎಂಬ ಲೇಖನದ ಮೂಲಕ ಪ್ರತ್ಯುತ್ತರ ಕೊಟ್ಟಿದ್ದಾರೆ. ಈ ಕುರಿತು ತಕರಾರು ತೆಗೆದಿರುವ ಅವರು "ಸಂಸ್ಕೃತವನ್ನು ಮುಖ್ಯವಾಹಿನಿಯಲ್ಲಿ ಬಳಕೆಗೆ ತರುವ ಉದ್ದೇಶ ಅವರಿಗಿದೆ ಎಂದು ಅವರ ಹೇಳಿಕೆಯಿಂದ ತಿಳಿಯುತ್ತದೆ. ಸಂಸ್ಕೃತವೆಂಬ ನುಡಿಗೆ ಮಾತ್ರ ಒತ್ತು ಕೊಡುವ ನಡೆಗಳಿಂದ, ವಾಸ್ತವದಲ್ಲಿ ಜನರಿಗೇನಾದರೂ ಉಪಯೋಗವಾಗಬಲ್ಲುದೇ ಎಂದು ಕೇಳಲೇಬೇಕಿದೆ"[೫೩] ಎಂದು ಅಭಿಪ್ರಾಯಪಡುತ್ತಾರೆ. ಈ ಮೂಲಕ ಕೇಂದ್ರ ಸಚಿವರ ಸಂಸ್ಕೃತ ಪ್ರೇಮವನ್ನು ಪ್ರಶ್ನಿಸಿದ್ದಾರೆ. ಇದರೊಂದಿಗೆ ಭಾರತದಲ್ಲಿರುವ ಭಾಷಾ ಕುಟುಂಬಗಳನ್ನು ಉದಾಹರಿಸಿರುವ ಅವರು, "ಸಂಸ್ಕೃತವು ಇಂಡೋ-ಆರ್ಯನ್ ನುಡಿಕುಟುಂಬಕ್ಕೆ ಸೇರಿದ ನುಡಿಯಾಗಿದೆ. ಈಗ ಬಳಕೆಯಲ್ಲಿಲ್ಲದ ಸಂಸ್ಕೃತದಿಂದ ಎರಡು ಸಾವಿರ ವರ್ಷಗಳ ಹಿಂದೆ ಹಲವಾರು ಪ್ರಾಕೃತ ನುಡಿಗಳು ರೂಪುಗೊಂಡವು. ಕಾಲ ಕಳೆದಂತೆ ಆ ಪ್ರಾಕೃತ ನುಡಿಗಳು ಇಂದು ಭಾರತದಲ್ಲಿ ಮಾತಾಡುವ ಹಲವಾರು ನುಡಿಗಳಾಗಿ ಮಾರ್ಪಾಡುಗೊಂಡು ಇಂದಿಗೂ ಬಳಕೆಯಲ್ಲಿವೆ (ಉದಾ : ಮಗಧಿ, ಅವಧಿ, ಕೊಂಕಣಿ) ಆದ್ದರಿಂದ ಹೀಗೆ ಬೇರೆ ಬೇರೆ ಭಾಷೆಗಳಾಗಿ ರೂಪ ತಳೆದಿರುವ ಆ 'ಮೂಲಭಾಷೆ'ಯನ್ನು ಮತ್ತೆ ಬಳಕೆಗೆ ತರಬೇಕು ಎಂಬುದಕ್ಕೆ ಅರ್ಥವಿದೆಯೇ?"[೫೪] ಎಂದು ಪ್ರಶ್ನಿಸುತ್ತಾರೆ.

ಇದರೊಂದಿಗೆ ಭಾಷೆಗಳಲ್ಲಿ ಸಹಜವಾಗಿರುವ ಮಾರ್ಪಾಡು ಕ್ರಿಯೆಯನ್ನು ಉದಾಹರಿಸಿರುವ ಅವರು, "ಯಾವುದೇ ಭಾಷೆಯಲ್ಲಿ 'ಮಾತು' ಎಂಬುದು ಎಡೆಬಿಡದೆ ಮಾರ್ಪಾಡುಗೊಳ್ಳುವ ಪ್ರಕ್ರಿಯೆಗೊಳಪಟ್ಟಿರುತ್ತದೆ. ಅಂದರೆ ಕಾಲ ಕಳೆದಂತೆ, ಮಾರ್ಪಾಡುಗೊಳ್ಳುವ ಪ್ರಕ್ರಿಯೆಯಲ್ಲಿ ಬೇರೆ ಬೇರೆ ಒಳನುಡಿಗಳು ಮೂಡುತ್ತವೆ. ಹಾಗೆಯೇ, ಬಳಕೆಯಲ್ಲಿರುವ ಭಾಷೆಯೇ ಮಾರ್ಪಾಡುಗಳಿಗೆ ಒಳಗಾಗಿ ಬೇರೆ ರೂಪ ಪಡೆದುಕೊಳ್ಳುತ್ತಿರುತ್ತದೆ ಒಂದು ಪಕ್ಷ ಸಂಸ್ಕೃತವನ್ನೇ ಆಡುನುಡಿಯನ್ನಾಗಿ ಮಾಡಲಾಯಿತು ಎಂದುಕೊಂಡರೂ, ಕಾಲ ಕಳೆದಂತೆ ಅದು ಬದಲಾಗುವುದರಿಂದ, ಮುಂದೊಂದು ದಿನ ಮತ್ತೆ ಸಂಸ್ಕೃತವನ್ನು ಬಳಕೆಗೆ ತಂದು ಆಡುನುಡಿಯನ್ನಾಗಿ ಮಾಡುವ ಯೋಜನೆ ಹಮ್ಮಿಕೊಳ್ಳಬೇಕಾಗುತ್ತದೆಯಲ್ಲವೇ? ಇದಕ್ಕೆ ಕೊನೆ ಇದೆಯೇ? ನುಡಿಗಳನ್ನು ಸ್ವಾಭಾವಿಕವಾಗಿ ಅವುಗಳ ಪಾಡಿಗೆ ಬಿಡುವುದು ಒಳಿತು, ರಾಜಕೀಯ ಬಲ ಬಳಸಿಕೊಂಡು ಒಂದು ನುಡಿಯನ್ನು ತಂದು ಬೇರೆಲ್ಲಾ ನುಡಿಗಳನ್ನು ಅಳಿಸಿಹಾಕುವ ಕೆಲಸ ಏನಿದ್ದರೂ ಕೃತಕವಾದುದ್ದು"[೫೫] ಎಂದು ಅಭಿಪ್ರಾಯಪಟ್ಟಿದ್ದಾರೆ. ರಾಜಕೀಯ ಒತ್ತಡದಿಂದಾಗಿ ದೇಸೀ ನುಡಿಗಳ ಮೇಲೆ ಆಗುತ್ತಿರುವ ಪ್ರಭಾವಗಳನ್ನು ಕುರಿತು ಚಿಂತನೆ ನಡೆಸಬೇಕಿರುವುದು ಇಂದಿನ ಅಗತ್ಯವಾಗಿದೆ ಎನಿಸುತ್ತದೆ. ಈ ನಿಟ್ಟಿನಲ್ಲಿ ಮೇಲಿನ ಅಭಿಪ್ರಾಯವನ್ನು ಪರಿಗಣಿಸಬೇಕಿದೆ. ಸಹಜವಾಗಿ ಭಾಷೆ ಅದರಲ್ಲೂ ಆಡುನುಡಿ ಬದಲಾಗುತ್ತಿರುತ್ತದೆ. ಆದರೆ, ಅವುಗಳ ಮೇಲೆ ಸಂಸ್ಕೃತ ಮೊದಲಾದ ಭಾಷೆಗಳನ್ನು ಹೇರುವ ಪ್ರಕ್ರಿಯೆ ಎಷ್ಟು ಸರಿ? ಎಂಬ ಪ್ರಶ್ನೆ ಮೂಡುವುದು ಸಹಜವಾಗಿದೆ. ಈ ನಿಟ್ಟಿನಲ್ಲಿ ಕನ್ನಡದಂತಹ ಅನೇಕ ಭಾಷೆಗಳಲ್ಲಿ ಪ್ರತಿರೋಧಗಳು ಆಗಾಗ್ಗೆ ವ್ಯಕ್ತವಾದ ಉದಾಹರಣೆಗಳಿವೆ. ಆದರೆ, ಸಂಸ್ಕೃತ ಪಂಡಿತರ ಸಂಸ್ಕೃತದ ಮೇಲಿನ ವ್ಯಾಮೋಹದಿಂದಾಗಿ ಈ ಯಾವ ಪ್ರಯತ್ನಗಳಿಗೂ ಪುರಸ್ಕಾರ ಸಿಗುತ್ತಿಲ್ಲ.

ಇದರೊಂದಿಗೆ ಅನ್ನದಾನೇಶ್ ಅವರು ಇನ್ನೊಂದು ಮಹತ್ವದ ಅಂಶವನ್ನು ಮಂಡಿಸುತ್ತಾರೆ. ಅವರ ಪ್ರಕಾರ, ಇಂಡೋ ಆರ್ಯನ್ ಇರಲಿ ದ್ರಾವಿಡ ಭಾಷೆಗಳಲ್ಲಿ ಕೂಡ ಈ ರೀತಿಯ ಹೇರಿಕೆ ಅನವಶ್ಯಕ. "ದ್ರಾವಿಡ ಮತ್ತು ಉಳಿದ ನುಡಿಕುಟುಂಬಕ್ಕೆ ಸೇರಿದ ನುಡಿಗಳ ಬಗ್ಗೆ ಹೇಳುವುದಾದರೆ, ಅವುಗಳು ತಮ್ಮದೇ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿವೆ. ಈ ನುಡಿ ಕುಟುಂಬಗಳಿಗೆ ಸೇರಿದ ಹಲವಾರು ನುಡಿಗಳು ಹಲವಾರು ರಾಜ್ಯಗಳ ಮುಖ್ಯವಾಹಿನಿಯಾಗಿವೆ. ಆ ಎಲ್ಲಾ ನುಡಿಗಳು ಈಗಾಗಲೇ ಜನಬಳಕೆಯಲ್ಲಿವೆ. ಶಾಲೆಗಳಲ್ಲೂ ಕಲಿಕಾ ಮಾಧ್ಯಮವನ್ನಾಗಿ ಈ ನುಡಿಗಳನ್ನು ಬಳಸಲಾಗುತ್ತಿದೆ. ಹೀಗಿರುವಾಗ ಬಳಕೆಯಲ್ಲೇ ಇಲ್ಲದ ಸಂಸ್ಕೃತವನ್ನು ಬಲವಂತವಾಗಿ ಬಳಕೆಗೆ ತರುವ ಪ್ರಯತ್ನಗಳು ಅಥವಾ ಯೋಚನೆಗಳು ಈ ನುಡಿಗಳ ಅಸ್ತಿತ್ವವನ್ನು ಅಳಿಸುವ ಹುನ್ನಾರವಾಗಿಯೇ ಕಾಣಿಸುತ್ತದೆ. ಈಗಾಗಲೇ ತಮ್ಮದೇ ನುಡಿಗಳನ್ನು ಮಾತಾಡುತ್ತಿರುವವರ ಮಂದಿಯ ನಾಲಗೆಯ ಮೇಲೆ ಸಂಸ್ಕೃತವನ್ನು ಕೂರಿಸುವ ಯೋಜನೆಗಳನ್ನು ಯಾಕೆ ಹಮ್ಮಿಕೊಳ್ಳಬೇಕು?"[೫೬] ಎಂದು ಕೂಡ ಅವರು ಪ್ರಶ್ನಿಸಿದ್ದಾರೆ. ಮೃತ ಭಾಷೆಯಾದ ಸಂಸ್ಕೃತವನ್ನು ಜನಮಾನಸದಲ್ಲಿ ತರಲು ನಡೆಸುತ್ತಿರುವ ಇಂತಹ ಯತ್ನಗಳನ್ನು ಅನ್ನದಾನೇಶ್ ಮತ್ತು ಇತರರು ವಿರೋಧಿಸುತ್ತಿದ್ದಾರೆ. ಕನ್ನಡದಲ್ಲಿ ಡಿ. ಎನ್. ಶಂಕರ ಬಟ್, ಕೆ. ವಿ. ನಾರಾಯಣ ಮೊದಲಾದ ಭಾಷಾ ವಿದ್ವಾಂಸರು ನಡೆಸುತ್ತಿರುವ ಪ್ರಯೋಗಗಳಿಗೆ ಪೂರಕವಾಗಿ ಇವರು ನಡೆಸುತ್ತಿರುವ ಪ್ರಯೋಗಗಳು ಮತ್ತು ಕೇಳುತ್ತಿರುವ ಪ್ರಶ್ನೆಗಳು ಸಂಸ್ಕೃತ ಭಾಷೆಯ ಬೆಂಬಲಿಗರನ್ನು ಎಷ್ಟರಮಟ್ಟಿಗೆ ತಟ್ಟುತ್ತವೆ ಎಂಬ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಇದೇ ಲೇಖನದಲ್ಲಿ ತಾಯ್ನುಡಿಯಲ್ಲಿ ಕಲಿಕೆ ವಿಷಯವನ್ನು ಪ್ರಸ್ತಾಪಿಸಲಾಗಿದ್ದು, ಜಗತ್ತಿನಾದ್ಯಂತ ತಾಯ್ನುಡಿಯಲ್ಲಿ ಕಲಿಕೆಗೆ ಸಹಮತ ವ್ಯಕ್ತವಾಗಿರುವುದನ್ನು ಉಲ್ಲೇಖಿಸುತ್ತಾರೆ. "ತಾಯ್ನುಡಿಯಲ್ಲಿ ಅತ್ಯುತ್ತಮವಾದ ಕಲಿಕೆ ಒದಗಿಸುವ ಏರ್ಪಾಡು ಹೊಂದಿರುವ ನಾಡುಗಳು ಜಾಗತೀಕರಣದ ಈ ಯುಗದಲ್ಲಿ ಮೇಲುಗೈ ಸಾಧಿಸಿವೆ. ಏಳಿಗೆಗೆ ಭದ್ರವಾದ ಬುನಾದಿ ಒದಗಿಸಿ ಕೊಡುವುದೇ ತಾಯ್ನುಡಿಯಲ್ಲಿನ ಕಲಿಕೆ. ಆದರೆ ಇಂದು ಉನ್ನತ ಶಿಕ್ಷಣವು ಭಾರತದ ಯಾವ ನುಡಿಗಳಲ್ಲೂ ಸಿಗುತ್ತಿಲ್ಲ. ಜನರ ಅಥವಾ ಮುಂದಿನ ಪೀಳಿಗೆಯ ಬಗ್ಗೆ ಸ್ವತಃ ಇರಾನಿಯವರಿಗೆ ನಿಜವಾಗಲೂ ಕಾಳಜಿ ಇದ್ದಿದ್ದರೆ – ಇಂದಿನ ತಾಯ್ನುಡಿಯಲ್ಲಿನ ಕಲಿಕೆಯ ವ್ಯವಸ್ಥೆಯಲ್ಲಿರುವ ಸಮಸ್ಯೆಗಳ ಬಗ್ಗೆ ಮತ್ತು ಉನ್ನತ ಶಿಕ್ಷಣವು ತಾಯ್ನುಡಿಯಲ್ಲಿ ದೊರೆಯುವ ಹಾಗೆ ಮಾಡಬೇಕೆಂದರೆ ಏನು ಮಾಡಬಹುದು ಎಂಬುದರ ಬಗ್ಗೆ ಮಾತನಾಡುತ್ತಿದ್ದರು"[೫೭] ಎಂದು ಅಭಿಪ್ರಾಯಪಡುತ್ತಾರೆ. ಸದ್ಯಕ್ಕೆ ಮುಂದುವರೆದ ಅನೇಕ ದೇಶಗಳು ಮತ್ತು ಮುಂದುವರೆಯುತ್ತಿರುವ ರಾಷ್ಟ್ರಗಳಲ್ಲಿ ತಾಯ್ನುಡಿಯಲ್ಲಿ ಶಿಕ್ಷಣ ನೀಡುತ್ತಿರುವುದೇ ಕಾರಣ ಎಂದು ಅನೇಕ ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಇತ್ತೀಚಿಗೆ ಆರ್ಥಿಕ ಅಭಿವೃದ್ಧಿ ಪಥದಲ್ಲಿ ತೀವ್ರಗತಿಯಲ್ಲಿರುವ ಚೀನಾವನ್ನು ಕೂಡ ಉದಾಹರಿಸಬಹುದು. (ಫಿನ್‌ಲ್ಯಾಂಡ್, ಜರ್ಮನಿ, ರಷ್ಯಾ, ಚೀನಾ ದೇಶಗಳು ಪಾರಂಪರಿಕ ನುಡಿಯಲ್ಲಿ ಪರಿವರ್ತನೆ ತರುವ ಮೂಲಕ ಅದ್ಭುತವಾದ ಪರಿವರ್ತನೆಗಳಾಗಿರುವುದನ್ನು ಈಗಾಗಲೇ ೩ನೇ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.)

ಸದ್ಯಕ್ಕೆ ಅಂತಹ ಆಶಾದಾಯಕ ವಾತಾವರಣ ಇಲ್ಲ ಎಂಬ ಬೇಸರ ಕೂಡ ಅವರ ಲೇಖನದಲ್ಲಿ ವ್ಯಕ್ತವಾಗಿದೆ. "ಶಾಲೆಗಳಲ್ಲಿ ಮತ್ತು ಮುಖ್ಯವಾಹಿನಿಯಲ್ಲಿ ಬಳಕೆಯಲ್ಲಿರುವ ನುಡಿಗಳನ್ನು ಬದಿಗೆ ತಳ್ಳಿ ಅವುಗಳ ಜಾಗದಲ್ಲಿ ಸಂಸ್ಕೃತವನ್ನು ಕೂರಿಸುವ ಕೆಲಸ ಜನರಿಗೆ ಏನೂ ಒಳಿತು ಮಾಡಲಾರದು. ಬದಲಿಗೆ, ಜನರ ನುಡಿಯನ್ನು ಅಳಿಸುವ ಇಂತ ಪ್ರಯತ್ನಗಳು ಅನವಶ್ಯಕ ಕಳವಳವನ್ನು ಜನರ ಮನಸಿನಲ್ಲಿ ಉಂಟುಮಾಡುತ್ತದೆ"[೫೮] ಎಂಬ ಆತಂಕವನ್ನೂ ಅನ್ನದಾನೇಶ್ ವ್ಯಕ್ತಪಡಿಸಿದ್ದಾರೆ. ಆದರೆ, ಈ ನಿಟ್ಟಿನಲ್ಲಿ ಸಂಸ್ಕೃತ ಭಾಷೆಗೆ ಪರ್ಯಾಯವಾಗಿ ಕನ್ನಡದಂತ ಸ್ಥಳೀಯ ಭಾಷೆಗಳಲ್ಲಿ ಪ್ರಾಥಮಿಕದಿಂದ ಉನ್ನತ ಹಂತದವರೆಗೆ ಆಯಾ ರಾಜ್ಯಗಳ ತಾಯ್ನುಡಿಯಲ್ಲಿ ಶಿಕ್ಷಣ ನೀಡಬೇಕು ಎಂಬ ಅನ್ನದಾನೇಶ್ ಅವರ ಬೇಡಿಕೆ ನ್ಯಾಯಯುತ ಎನಿಸುತ್ತದೆ.

ಅನ್ನದಾನೇಶ್ ಅವರ ತಾಯ್ನುಡಿಯ ಚಿಂತನೆಗಳಿಗೆ ಪೂರಕವಾಗಿ ತಾಯ್ನುಡಿಯ ಉಳಿವಿನ ಕುರಿತು ನುಡಿಕನ್ನಡ ವೆಬ್ ತಾಣದಲ್ಲಿ ಕೆಲವು ಗಂಭೀರ ಚರ್ಚೆಗಳು ನಡೆದಿವೆ. 'ಇಂದಿನ ಸವಾಲುಗಳಿಗೆ ತಾಯ್ನುಡಿಗಳನ್ನು ಬಲಗೊಳಿಸಬೇಕಿದೆ' ಎಂಬ ಲೇಖನವನ್ನು ಈ ತಾಣದಲ್ಲಿ ಬರೆದಿರುವ ಸಂದೀಪ್ ಕಂಬಿ, ತಾಯ್ನುಡಿಗಳಿಗೆ ಇನ್ನಷ್ಟು ಶಕ್ತಿ ತುಂಬಬೇಕಿದೆ ಎಂದು ಅಭಿಪ್ರಾಯಪಡುತ್ತಾರೆ. ಫೆಬ್ರವರಿ ೨೧ರಂದು ವಿಶ್ವ ತಾಯ್ನುಡಿ ದಿನ ಆಚರಣೆ ಕುರಿತು ಉಲ್ಲೇಖಿಸುವ ಅವರು, "ನುಡಿ ಎಂಬುದು ಅನಿಸಿಕೆ ಹೇಳುವ ಸಾಧನ ಎಂದು ನಮಗೆಲ್ಲರಿಗೂ ತಿಳಿದೇ ಇದೆ. ಆದರೆ ಒಂದು ನುಡಿಯ ಬಳಕೆ ಇಷ್ಟಕ್ಕೇ ನಿಲ್ಲುವುದಿಲ್ಲ. ಒಂದು ಇಡೀ ನುಡಿ ಸಮುದಾಯದ ಒಡನಾಟ, ಮತ್ತು ಒಂದಾಣಿಕೆಗಳಿಗೆ ಅದರ ನುಡಿ ಒಂದು ಒಯ್ಯುಗೆಯಾಗಿ ಕೆಲಸ ಮಾಡುತ್ತದೆ. ಮತ್ತು ಮಂದಿಯೇ ಕಟ್ಟುವ ಪದ್ಯ, ಕತೆ, ಹಾಡು, ನಾಣ್ಣುಡಿ ಮುಂತಾದವುಗಳನ್ನು ಗಮನಿಸಿದರೆ ಒಂದು ನುಡಿ ಅದನ್ನು ಆಡುವವರ ಮಾಡುಗತನದ ಹಂಬಲಗಳನ್ನು ನೆರವೇರಿಸುವ ಸಾಧನವಾಗುತ್ತದೆ"[೫೯] ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ವಿಶ್ವ ತಾಯ್ನುಡಿ ದಿನ ಆಚರಣೆಯ ಹಿಂದೆ ಒಂದು ರೋಚಕ ಕಥನವಿದೆ. ವಿಶ್ವ ತಾಯ್ನುಡಿ ದಿನಾಚಚರಣೆ ಆರಂಭವಾದ ಕುರಿತು ಸುಗತ ಶ್ರೀನಿವಾಸ ರಾಜು ಹೀಗೆ ಉಲ್ಲೇಖಿಸಿದ್ದಾರೆ: "ಈ ದಿನಾಚಣೆಯ ಮೂಲ ನೆಲೆ ಇಂದಿನ ಬಾಂಗ್ಲಾ ದೇಶದಲ್ಲಿದೆ. ಆಗ ಅದು ಪೂರ್ವ ಪಾಕಿಸ್ತಾನವಾಗಿತ್ತು. ೧೯೫೨ರ ಫೆಬ್ರವರಿ ೨೧ರಂದು ಭಾಷಾ ಚಳವಳಿಗಾರರ ಮೇಲೆ ಪೊಲೀಸರು ಗುಂಡು ಹಾರಿಸಿ ಐವರನ್ನು ಕೊಂದರು; ಸತ್ತವರು ಹುತಾತ್ಮರಾದರು. ಉರ್ದುವಿನ ಜೊತೆಗೆ ಬಂಗಾಳಿಯನ್ನು ರಾಷ್ಟ್ರ ಭಾಷೆಯನ್ನಾಗಿ ಪರಿಗಣಿಸಬೇಕೆಂಬುದೇ ಆ ಹೋರಾಟಗಾರರ ಬೇಡಿಕೆಯಾಗಿತ್ತು. ಈ ಭಾಷಾ ಚಳವಳಿಯ ಸಂದರ್ಭದಲ್ಲಿ ಆಡಳಿತ ಕೇಂದ್ರವಾಗಿದ್ದ ಪಶ್ಚಿಮ ಪಾಕಿಸ್ತಾನದ ಬಗ್ಗೆ ಮೂಡಿದ್ದ ಅಪನಂಬಿಕೆ ಆಕಾರ ತಳೆದು ಬೆಳೆದು ಕೊನೆಗೆ ೧೯೭೧ರಲ್ಲಿ ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರವಾಗಲು ಕಾರಣವಾಯಿತು"[೬೦] ಈ ಮೂಲಕ ಭಾಷಿಕ ಚಳವಳಿಯೊಂದು ಪ್ರತ್ಯೇಕ ರಾಷ್ಟ್ರವಾದ ಉದಾಹರಣೆ ಕೂಡ ನಮ್ಮ ಕಣ್ಮುಂದಿದೆ. ಈ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿದ ಯುನೆಸ್ಕೋ ಜಾಗತಿಕ ಮನ್ನಣೆ ನೀಡುವ ಸಲುವಾಗಿ ಫೆಬ್ರವರಿ ೨೧ನೇ ದಿನಾಂಕವನ್ನು ವಿಶ್ವ ತಾಯ್ನುಡಿ ದಿನವನ್ನಾಗಿ ಡಿಸೆಂಬರ್ ೨೦೦೨ರಲ್ಲಿ ಘೋಷಿಸಿದೆ.

ಇನ್ನು ಜಗತ್ತಿನಲ್ಲಿ ಪ್ರಚಲಿತದಲ್ಲಿರುವ ತಾಯ್ನುಡಿಗಳನ್ನು ಉಳಿಸುವ ನಿಟ್ಟಿನಲ್ಲಿ ಯುನೆಸ್ಕೋ ೩೦ನೇ ಸಾಮಾನ್ಯ ಸಮ್ಮೇಳನದಲ್ಲಿ ೧೨ನೇ ನಿರ್ಣಯದ ಪ್ರಕಾರ, ಬಹು ಭಾಷಿಕತ್ವದ ಆಧಾರದ ಮೇಲೆ ವಿಶ್ವ ಭಾಷಾ ನೀತಿಯನ್ನು ಆಚರಣೆಗೆ ತರಲು ನಿರ್ಧರಿಸಲಾಗಿದೆ. "ಜಾಗತೀಕರಣದ ಸಂದರ್ಭದಲ್ಲಿ ಸಂವಹನದಲ್ಲಿ ಒಂದೇ ಭಾಷಾ ಬಳಕೆಯಿಂದ ಭಾಷಾ ವೈವಿಧ್ಯತೆ ಪ್ರಸ್ತುತ ಸಂದರ್ಭದ ಅನಿಷ್ಟ ಸೂಚನೆ ಎಂದೇ ಹೇಳಬಹುದು. ಪ್ರಪಂಚದ ಪ್ರಧಾನ ಭಾಷೆಗಳು ಅಂದರೆ ನೆರೆಹೊರೆ ಭಾಷೆಗಳ ಬಗೆಗೆ ಜವಾಬ್ದಾರಿ ವಹಿಸಬೇಕಾಗಿದೆ. ಇದಾಗದ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆಗಳು ಮತ್ತು ಕಡಿಮೆ ಬಳಕೆಯ ಭಾಷೆಗಳು ಕಳುವಾಗುವ ಸಾಧ್ಯತೆಗಳಿವೆ"[೬೧] ಎಂಬ ಆತಂಕ ಕೂಡ ವ್ಯಕ್ತವಾಗಿದೆ. ಈ ನಿಟ್ಟಿನಲ್ಲಿ ತಾಯ್ನುಡಿಗಳ ಕುರಿತ ಚರ್ಚೆ ಮಹತ್ವ ಪಡೆದುಕೊಂಡಿದೆ.

ಎಕೂಷೆ ಫೆಬ್ರವರಿ ಕೃತಿಗೆ ಹಿನ್ನುಡಿ ಬರೆದಿರುವ ಕೆ. ವಿ. ನಾರಾಯಣ ಅವರ ಪ್ರಕಾರ: "ಭಾರತದಲ್ಲಿ ಸುಮಾರು ೮೦ ಭಾಷೆಗಳು ಶಿಕ್ಷಣದ ವಿವಿಧ ಹಂತಗಳಲ್ಲಿ ಬಳಕೆಯಾಗುತ್ತಿವೆ. ಇದಕ್ಕೆ ತದ್ವಿರುದ್ಧವಾಗಿ ಅಂದಾಜು ೨೦೧೧ ಭಾಷೆಗಳಿರುವ ಆಫ್ರಿಕಾದಲ್ಲಿ ಹಿಂದಿನ ವಸಾಹತು ಆಳ್ವಿಕೆಗಾರರ ಭಾಷೆಗಳಾದ ಫ್ರೆಂಚ್, ಇಂಗ್ಲಿಶ್ ಮತ್ತು ಪೋರ್ಚುಗೀಸ್ ಮಾತ್ರ ಇನ್ನೂ ಯಾಜಮಾನ್ಯ ಮೆರೆಯುತ್ತಿವೆ. ಲ್ಯಾಟಿನ್ ಅಮೆರಿಕಾದಲ್ಲಿ ಇಂತಹ ಸನ್ನಿವೇಶವೇ ಮುಂದುವರೆದಿದೆ. ಯೂರೋಪ್ ಒಕ್ಕೂಟದಲ್ಲಿ ಅಲ್ಲಿನ ಭಾಷೆಗಳಲ್ಲಿ ಮಾತ್ರ ಶಿಕ್ಷಣ ಲಭ್ಯವಿದೆ"[೬೨] ಎನ್ನುತ್ತಾರೆ. ಈ ಮೂಲಕ ತಾಯ್ನುಡಿಗಳಲ್ಲಿ ಶಿಕ್ಷಣ ಲಭಿಸದೇ ಇರುವ ಪರಿಸ್ಥಿತಿ ಇರುವುದರೆಡೆಗೆ ಗಮನ ಸೆಳೆಯುತ್ತಾರೆ. ೨೦೧೧ ಭಾಷೆಗಳ ಮೇಲೆ ವಸಾಹತುಶಾಹಿಗಳ ಭಾಷೆಗಳು ದಾಳಿ ನಡೆಸುತ್ತಿರುವ ಸಂಗತಿ ನಿಜಕ್ಕೂ ಆಘಾತಕಾರಿ ಎನಿಸುತ್ತದೆ. ವಸಾಹತುಗಳ ದೈಹಿಕ ನಿರ್ಗಮನದ ನಂತರ ಕೂಡ ತೃತೀಯ ದೇಶಗಳನ್ನು ವಸಾಹತುಶಾಹಿಗಳ ಭಾಷೆಗಳು ಆಳುತ್ತಿರುವುದಕ್ಕೆ ಆಫ್ರಿಕಾ ಪ್ರಮುಖ ಉದಾಹರಣೆಯಾಗಿದೆ ಎನಿಸುತ್ತದೆ. ಭಾರತದಲ್ಲಿ ಕೂಡ ಇಂಗ್ಲಿಷ್‌ಗೆ ಇಂಥದ್ದೇ ಸ್ಥಾನ ಸಿಕ್ಕಿರುವುದನ್ನೂ ಗಮನಿಸಬೇಕು. ಆದರೆ, ಇಲ್ಲಿ ಫ್ರೆಂಚ್, ಪೋರ್ಚುಗೀಸ್ ಬದಲಿಗೆ ಇಂಗ್ಲಿಷ್ ಮತ್ತು ಸಂಸ್ಕೃತ ಮತ್ತು ಹಿಂದಿ ಭಾಷೆಗಳ ಯಾಜಮಾನ್ಯ ಜಾರಿಯಲ್ಲಿದೆ.

"ಭಾರತದಲ್ಲಿ ೬೦೦-೮೦೦ ಭಾಷೆಗಳಿವೆಯಾದರೆ ಅವುಗಳಲ್ಲಿ ೮೦ ತಾಯ್ನುಡಿಗಳಿಗೆ ಮಾತ್ರ ಶೈಕ್ಷಣಿಕ ಚಾಲನೆ ಲಭ್ಯವಿದೆ. ಇದು ರಾಜ್ಯಾಂಗ ಮಾನ್ಯ ಮಾಡಿದ ಭಾಷೆಗಳ ಸಂಖ್ಯೆಯ ನಾಲ್ಕು ಪಟ್ಟು, ಆದರೂ ಪರಿಸ್ಥಿತಿ ಆಶಾದಾಯಕವಲ್ಲ. ಉಳಿದ ನೂರಾರು ಭಾಷೆಗಳ ಗತಿ ಏನು?[೬೩] ಎಂದು ಕೆ. ವಿ. ನಾರಾಯಣ ಪ್ರಶ್ನಿಸುತ್ತಾರೆ. ಇದರೊಂದಿಗೆ ತಾಂಯ್ನುಡಿಗಳು ತಮ್ಮ ಉಳಿವಿಗೆ 'ಬೇರೆಯದೇ ಆದ ಹುನ್ನಾರಗಳನ್ನು ರೂಪಿಸುವ ತಂತ್ರಗಾರಿಕೆ ಇಂದಿನ ಅಗತ್ಯವಾಗಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ತಾಯ್ನುಡಿಗಳ ಕುರಿತ ಚರ್ಚೆ ಮಹತ್ವ ಪಡೆದುಕೊಂಡಿದೆ.

'ಇಂದಿನ ಸವಾಲುಗಳಿಗೆ ತಾಯ್ನುಡಿಗಳನ್ನು ಬಲಗೊಳಿಸಬೇಕಿದೆ' ಎಂಬ ಲೇಖನದಲ್ಲಿ ಸಂದೀಪ್ ಕಂಬಿಯವರು, ತಾಯ್ನುಡಿಗಳಲ್ಲಿ "ಹೇಳಿಕೊಳ್ಳುವಿಕೆ, ಮಾಡುಗತನ ಮತ್ತು ಒಡನಾಟದ ಒಯ್ಯುಗೆಯಾದ ನುಡಿ, ಅದನ್ನಾಡುವ ಮಂದಿಯನ್ನು ಗಟ್ಟಿಯಾಗಿ ಬೆಸೆಯುತ್ತದೆ, ಮತ್ತು ಇಂತಹ

ಬೆಸುಗೆ ನೂರಾರು, ಸಾವಿರಾರು ವರುಶಗಳ ಕಾಲ ಉಂಟಾಗುವುದರಿಂದ, ಒಂದು ನುಡಿ ಮತ್ತು ನುಡಿಸಮುದಾಯದ ಸುತ್ತ ಒಂದು ಸಂಸ್ಕೃತಿಯು ಬೆಳೆದು ನಿಲ್ಲುತ್ತದೆ. ಹಾಗಾಗಿ, ನುಡಿ ಎಂಬುದು ಇಂತಹ ಸಂಸ್ಕೃತಿ, ತನ್ನತನದ ಹೆಮ್ಮೆಯ ಹೆಗ್ಗುರುತೂ ಆಗಿರುತ್ತದೆ. ಈ ಕಾರಣಗಳಿಗಾಗಿಯೇ ನುಡಿ ಸಮುದಾಯಗಳು ರಾಜಕೀಯವಾಗಿಯೂ ಒಂದಾಗುವ, ಒಟ್ಟುಗೂಡುವ ಒಲವು ತೋರಿಸುತ್ತವೆ"[೬೪] ಎನ್ನುತ್ತಾರೆ. ತಾಯ್ನುಡಿಯ ವಿವಿಧ ಸಾಧ್ಯತೆಗಳೆಡೆಗೆ ಮೇಲಿನ ಮಾತುಗಳ ಒತ್ತು ನೀಡಿವೆ. ಅದರಲ್ಲೂ ಮುಖ್ಯವಾಗಿ ತಾಯ್ನುಡಿಗೆ ನಿರಂತರತೆ ಇದೆ. ಸಾವಿರಾರು ವರ್ಷಗಳಿಂದ ಬಂದ ಜೀವನಾನುಭವವನ್ನು ತಾಯ್ನುಡಿ ತಲೆಮಾರಿನಿಂದ ತಲೆಮಾರುಗಳಿಗೆ ದಾಟಿಸುತ್ತದೆ ಎಂಬ ಸಂಗತಿ ಗಮನಾರ್ಹವಾಗಿದೆ.

"ಹಿಂದೆ ನುಡಿಯೆಂಬುದು ಮಾತಲ್ಲಿ ಮಾತ್ರ ಬಳಕೆಯಲ್ಲಿತ್ತು. ಅದು ಬರಹಕ್ಕೆ ಇಳಿದಾಗ, ಸಮಾಜದ ಕೆಲ ಮಂದಿಯ ಬಳಕೆಗೆ ಮಾತ್ರ ಉಳಿದುಕೊಂಡಿತು, ಮತ್ತು ಅದರ ಬಳಕೆಯೂ ಹೆಚ್ಚಾಗಿ ಕತೆ, ಕಾವ್ಯ ಮುಂತಾದ ಸಾಹಿತ್ಯದ ಬಗೆಗಳಿಗೆ ಸೀಮಿತವಾಗಿತ್ತು. ಹಾಗಾಗಿ ಬೇರೆ ಮಂದಿಗೆ ಬರಹದ ಅಗತ್ಯ ಇರಲಿಲ್ಲ. ಆದರೆ ಇಂದಿನ ಯುಗದಲ್ಲಿ ಎಲ್ಲರೂ ಓದು ಬರಹ ಕಲಿಯುವ ಅಗತ್ಯ ಇದೆ. ಏಳಿಗೆ ಮತ್ತು ಒಳ್ಳೆಯ ಬಾಳಿಗೆ ತಿಳಿವಿನ ಅಗತ್ಯವಿದೆ. ಮತ್ತು ಈ ತಿಳಿವಿಗೆ ಓದು, ಬರಹವೇ ಮೂಲ"[೬೫] ಎಂದು ಅನ್ನದಾನೇಶ್ ಅಭಿಪ್ರಾಯಪಡುತ್ತಾರೆ. ಈ ಮೂಲಕ ಆಧುನಿಕ ಕಾಲದಲ್ಲಿ ಬರಹ ಸರ್ವವ್ಯಾಪಿಯಾಗುತ್ತಿದೆ ಎಂಬ ಡಿ. ಎನ್. ಶಂಕರ ಬಟ್ಟರ ವಾದ ಪೂರಕವಾಗಿ ಇವರ ವಾದವಿದೆ.

"ಇಂದು ಹಿಂದಿಗಿಂತ ನುಡಿಯ ಬಳಕೆಯ ಹರಹುಗಳು ಸಾವಿರಾರು ಪಟ್ಟು ಹೆಚ್ಚಿವೆ. ಬ್ಯಾಂಕ್, ಆಡಳಿತ, ನ್ಯಾಯಾಂಗ, ಹಣಕಾಸಿನ ಏರ್ಪಾಡು, ಕಲಿಕೆ, ದುಡಿಮೆ ಮುಂತಾದವುಗಳಲ್ಲಿ ಸಮಾಜದ ಎಲ್ಲರೂ ಪಾಲ್ಗೊಳ್ಳಬೇಕಿದೆ. ಮತ್ತು ದಿನ ದಿನಕ್ಕೂ ಈ ಎಲ್ಲ ಹರಹುಗಳಲ್ಲಿಯೂ ಹೊಸ ಹೊಸ ಅರಕೆಗಳು, ಹೊಸ ಬದಲಾವಣೆಗಳು, ಹೊಸ ಬಳಕೆಗಳು ಮೂಡುತ್ತಿವೆ. ಅರಿಮೆಯ ಹರಹಿನಲ್ಲಿ ಆಗುತ್ತಿರುವ ಏಳಿಗೆಯೂ ಸಾಮಾನ್ಯ ಮಂದಿಯನ್ನು ನೇರವಾಗಿ ಮುಟ್ಟುತ್ತಿರುವುದರಿಂದ (ಇಂಟರ್ನೆಟ್, ಅಲೆಯುಲಿ, ಮುಂತಾದುವು) ಬಳಕೆಗಳ ಸಾಧ್ಯತೆಗಳು ಹೆಚ್ಚಾಗಿದ್ದು, ಈ ಸಾಧ್ಯತೆಗಳನ್ನು ನುಡಿಯು ಎಡೆಬಿಡದೆ ನೆರವೇರಿಸುತ್ತ ಹೋಗಬೇಕಾಗುತ್ತದೆ"[೬೬] ಎನ್ನುವುದು ಅನ್ನದಾನೇಶ್ ಅವರ ಅಭಿಪ್ರಾಯವಾಗಿದೆ. ಬದಲಾದ ಕಾಲಘಟ್ಟದಲ್ಲಿ ಜೀವನದ ಬಹುತೇಕ ಭಾಗವನ್ನು ಬರಹ ಆವರಿಸಿದೆ ಎಂದು ಅವರು ಅನೇಕ ಉದಾಹರಣೆಗಳನ್ನು ನೀಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಅನೇಕ ಕಾರಣಗಳಿಗೆ ಆಡಳಿತದ ಭಾಗವಾಗಿಯಾಗಲಿ, ಅಥವಾ ದಿನನಿತ್ಯದ ವ್ಯವಹಾರ, ವಹಿವಾಟಿನ ಕಾರಣಗಳಿಂದಾಗಿ ಜನ ಸಾಮಾನ್ಯರೊಬ್ಬರು ಬರಹವನ್ನು ಆಶ್ರಯಿಸಲೇಬೇಕಾದ ಅನಿವಾರ್ಯ ಪರಿಸ್ಥಿತಿ ಸೃಷ್ಟಿಯಾಗಿದೆ. ಈ ನಿಟ್ಟಿನಲ್ಲಿ ಬರಹ ಮತ್ತು ಓದು ಎರಡೂ ಅವಶ್ಯಕವಾಗಿದೆ. ಈ ಸಂಗತಿಯನ್ನು ಅನ್ನದಾನೇಶ್ ವಿವರಿಸಿದ್ದಾರೆ.

ಆದರೆ, ಇಂಗ್ಲಿಷ್‌ನಂತೆ ಹೊಸ ಪದಗಳು ಕನ್ನಡದಲ್ಲಿ ಸೃಷ್ಟಿಯಾಗುತ್ತಿಲ್ಲ ಎಂಬ ಆತಂಕ ಕೂಡ ವ್ಯಕ್ತವಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಪ್ರತಿ ದಿನಕ್ಕೆ ಸರಾಸರಿ ೧೦-೧೧ ಹೊಸ ಪದಗಳು

ಸೃಷ್ಟಿಯಾಗುತ್ತಿದ್ದರೆ, ಕನ್ನಡದಲ್ಲಿ ಅಂತಹ ಪ್ರಯತ್ನಗಳು ನಡೆಯುತ್ತಿಲ್ಲ ಎನ್ನುವುದು ಸಂದೀಪ್ ಕಂಬಿಯವರ ಅಭಿಪ್ರಾಯವಾಗಿದೆ. ಇದರಿಂದ ಎದುರಾಗುವ ಸಮಸ್ಯೆಗಳ ಕುರಿತು ಅವರ ಅಭಿಪ್ರಾಯ ಹೀಗಿದೆ: "ಕನ್ನಡವೂ ಇಂದು ಹೊಸ ಬಳಕೆಗಳ ಸವಾಲನ್ನು ಎದುರಿಸಲಾಗದೆ ಸೊರಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗೆ, ಅರಿಮೆಯಲ್ಲಿ, ಕಲಿಕೆಯಲ್ಲಿ, ಮತ್ತು ಕೊನೆಗೆ ಸಾಮಾನ್ಯ ಬಳಕೆಯಲ್ಲೂ ಒಂದು ನುಡಿ ಸೊರಗಿದರೆ, ಆ ನುಡಿಯನ್ನು ಬಳಸುವ ಮಂದಿ ಹಣಕಾಸಿನಲ್ಲೂ, ಮತ್ತು ಎಲ್ಲ ಬಗೆಯ ಏಳಿಗೆಯಲ್ಲೂ ಹಿಂದೆ ಬೀಳುವುದು ಖಂಡಿತ"[೬೭] ಎನ್ನಲಾಗಿದೆ. ಈ ನಿಟ್ಟಿನಲ್ಲಿ ಕನ್ನಡದಂತಹ ಅನೇಕ ಭಾಷೆಗಳು ಸಮಸ್ಯೆಗಳನ್ನು ಎದುರಿಸುತ್ತಿವೆ ಎನ್ನುವ ಅವರು, ಆರ್ಥಿಕವಾಗಿ ಕೂಡ ಕನ್ನಡದಂತಹ ಭಾಷೆ ಮತ್ತು ಭಾಷಿಕರು ಹಿಂದುಳಿಯುವ ಸಾಧ್ಯತೆಗಳೆಡೆಗೆ ಎಚ್ಚರಿಕೆ ನೀಡಿದ್ದಾರೆ. ಫಿನ್‌ಲ್ಯಾಂಡ್‌ನಲ್ಲಿ ಲಿಪಿ ಸುಧಾರಣೆಯ ನಂತರ ಆ ದೇಶದ ಆರ್ಥಿಕತೆಗೆ ಚೇತನ ಸಿಕ್ಕಿದೆ. ಆದರೆ, ಕನ್ನಡದಂತಹ ಭಾಷೆಗಳಲ್ಲಿ ಹೊಸ ಪದ ಸೃಷ್ಟಿಯ ಸಾಧ್ಯತೆಗಳ ಜೊತೆಗೆ ಬೆಳವಣಿಗೆಯ ಸಾಧ್ಯತೆಗಳ ಶೋಧನೆ ಕೂಡ ಮಸುಕಾಗಿದೆ. ಈ ಹಿನ್ನೆಲೆಯಲ್ಲಿ ಡಿ. ಎನ್. ಶಂಕರ ಬಟ್ಟರು ಕನ್ನಡವನ್ನು ಎಲ್ಲರ ಸೊತ್ತಾಗಿಸಲು ಶ್ರಮಿಸುತ್ತಿರುವುದು ಏಕೆ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕು ಎನಿಸುತ್ತದೆ.

೬.೩. ಸಂಸ್ಕೃತ ಪರ – ವಿರುದ್ಧದ ಚರ್ಚೆಗಳು

ಜುಲೈ ೦೨, ೨೦೧೬ರ ಪ್ರಜಾವಾಣಿಯಲ್ಲಿ ಸಿರಿಗೆರೆ ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು, "ಪ್ರಾಚೀನ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಯ ಸಂಬಂಧ ತಾಯಿ ಮಗಳ ಹಾಗೇ ಇತ್ತು. ಈಗ ಅತ್ತೆ–ಸೊಸೆ ಸಂಬಂಧದ ರೀತಿ ಆಗಿದೆ"[೬೮] ಎಂದು ಅಭಿಪ್ರಾಯಪಟ್ಟಿದ್ದರು. ಮುಂದುವರೆದು, "ಸಂಸ್ಕೃತದ ಮಡಿವಂತಿಕೆ ಮೀರಿ ಆಧುನಿಕ ಸಮಕಾಲೀನ ಸ್ಥಿತಿಗತಿಗೆ ಅನುಗುಣವಾಗಿ ಸಮರ್ಥ ರೀತಿಯಲ್ಲಿ ಅನುವಾದ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತದ ತಾಯಿ–ಮಗಳ ಸಂಬಂಧವನ್ನು 'ಚಾರುವಸಂತೀಯಮ್' ಅನುವಾದ ಕೃತಿಯು ಪುನಃ ಕಲ್ಪಿಸಿಕೊಟ್ಟಿದೆ"[೬೯] ಎಂದು ಹೇಳಿದ್ದರು. ಕನ್ನಡದಿಂದ ಸಂಸ್ಕೃತ ಭಾಷೆಗೆ ಅನುವಾದಿತ ಕೃತಿಯೊಂದರ ಬಿಡುಗಡೆ ಸಮಾರಂಭದಲ್ಲಿ ಈ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದ್ದರು. ಈ ಕುರಿತು, ಪ್ರಜಾವಾಣಿಯಲ್ಲಿ ಕೆಲವು ಅಭಿಪ್ರಾಯಗಳು ವ್ಯಕ್ತವಾದವು. ಅವುಗಳಲ್ಲಿ ಮುಖ್ಯವಾಗಿ ಸಂಸ್ಕೃತ ಮತ್ತು ಕನ್ನಡಗಳ ಸಂಬಂಧದ ಕುರಿತ ಚರ್ಚೆ ನಡೆದಿದೆ.

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಅಭಿಪ್ರಾಯಕ್ಕೆ ಜುಲೈ ೪ ೨೦೧೬ರಂದು ಪ್ರತಿಕ್ರಿಯಿಸಿದ ಸಿ. ಪಿ. ನಾಗರಾಜ ಅವರು, 'ಎರವಲು ಸಂಬಂಧ' ಎಂಬ ವಾಚಕರ ವಾಣಿಯ ಅಭಿಪ್ರಾಯದಲ್ಲಿ, ತಮ್ಮ ಭಿನ್ನಾಭಿಪ್ರಾಯವನ್ನು ದಾಖಲಿಸಿದರು. ಅವರ ಪ್ರಕಾರ, ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಅಭಿಪ್ರಾಯ "ಮೊದಲನೆಯದಾಗಿ ಹೆಣ್ಣುಗಳ ಸಂಬಂಧದ ಬಗ್ಗೆ ಸಮಾಜದಲ್ಲಿರುವ ಕೆಟ್ಟ ದೃಷ್ಟಿಕೋನವನ್ನೇ ಮತ್ತೆ ಎತ್ತಿ ಹಿಡಿಯುತ್ತದೆ. ಕುಟುಂಬದ ನೆಲೆಯಲ್ಲಿ ಮಾವ–ಅಳಿಯನ ಸಂಬಂಧದ ಬಗ್ಗೆ ಯಾವುದೇ ಬಗೆಯ ಕೊಂಕು ನುಡಿಯದ ಸಮಾಜ ಅತ್ತೆ–

ಸೊಸೆಯರ ಬಗ್ಗೆ ಹೇಳಿರುವುದು, ಹೆಣ್ಣಿನ ವ್ಯಕ್ತಿತ್ವನ್ನು ಮತ್ತೆ ಮತ್ತೆ ಅಲ್ಲಗಳೆಯುವ ಗಂಡಸರ ನುಡಿಗಳಾಗಿವೆ."[೨೦]

ಮೇಲಿನ ಅಭಿಪ್ರಾಯದಲ್ಲಿ ಪರಂಪರಾಗತವಾಗಿ ಹೆಣ್ಣನ್ನು ಚಿತ್ರಿಸುವ ಬಗೆಗೆ ಆಕ್ಷೇಪವಿದೆ. ಅಲ್ಲದೇ, ಗಂಡು ಮತ್ತು ಹೆಣ್ಣಿನ ನಡುವಿನ ಅಸಮಾನತೆಯ ರೂಪಣೆಗಳನ್ನು ಪ್ರಶ್ನಿಸಲಾಗಿದೆ. ಇದೇ ಪ್ರತಿಕ್ರಿಯೆಯಲ್ಲಿ ಸಿ. ಪಿ. ನಾಗರಾಜ ಅವರು ಮುಂದುವರೆದು ಹೀಗೆ ಹೇಳುತ್ತಾರೆ: "ಇಂಡೋ–ಆರ್ಯನ್ ಭಾಷಾ ಕುಟುಂಬಕ್ಕೆ ಸೇರಿದ ಸಂಸ್ಕೃತ ಮತ್ತು ದ್ರಾವಿಡ ಭಾಷಾ ಕುಟುಂಬಕ್ಕೆ ಸೇರಿದ ಕನ್ನಡ ಭಾಷೆಯ ನುಡಿಸಾಮಗ್ರಿಗಳಾದ ಅಕ್ಷರ–ಪದ–ವಾಕ್ಯ–ಅರ್ಥರಚನೆಗಳು ಬೇರೆ ಬೇರೆ ಬಗೆಗಳಲ್ಲಿವೆ. ಇವೆರಡು ಒಂದೇ ಭಾಷಾ ಮೂಲದಿಂದ ಹುಟ್ಟಿ ಬಂದಿಲ್ಲ. ಆದುದರಿಂದ ತಾಯಿ ಮಗಳ ಸಂಬಂಧದ ಹೋಲಿಕೆಯು ಸಂಸ್ಕೃತ ಭಾಷೆಯಿಂದ ಕನ್ನಡ ಭಾಷೆಯು ಹುಟ್ಟಿ ಬಂದಿದೆ ಎಂಬ ತಪ್ಪು ಗ್ರಹಿಕೆಯನ್ನು ಮೂಡಿಸುತ್ತದೆ."[೨೧] ಎಂದು ತಾಯಿ ಮತ್ತು ಮಗಳ ಸಂಬಂಧ ಕಪೋಲ ಕಲ್ಪಿತ ಎಂದು ಅಭಿಪ್ರಾಯಪಡುತ್ತಾರೆ.

ಎರಡು ಭಿನ್ನ ಮೂಲದ ಭಾಷೆಗಳ ನಡುವೆ ತಳುಕು ಹಾಕಲು ಪ್ರಯತ್ನಿಸಿರುವ ಶಿವಕುಮಾರ ಸ್ವಾಮೀಜಿಗಳ ಅಭಿಪ್ರಾಯಗಳಿಗೆ ಯಾವುದೇ ನಂಬಲರ್ಹ ದಾಖಲೆಗಳಿಲ್ಲ ಎನ್ನುವುದು ಸಿ. ಪಿ. ನಾಗರಾಜ ಅವರ ವಾದ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಮೂಲವೇ ಬೇರೆಯಾಗಿರುವುದರಿಂದ ತಾಯಿ ಮತ್ತು ಮಗಳ ಸಂಬಂಧವನ್ನು ಕಲ್ಪಿಸುವುದು ಸತ್ಯಕ್ಕೆ ದೂರವಾದ ಸಂಗತಿಯಾಗುತ್ತದೆ ಎನ್ನುವುದು ಅವರ ನಿಲುವು. ಅದೇ ಪ್ರತಿಕ್ರಿಯೆಯಲ್ಲಿ ಮುಂದುವರೆದು ಅವರು ಹೀಗೆ ಹೇಳುತ್ತಾರೆ: "ಪ್ರಾಚೀನ ಕಾಲದಿಂದಲೂ ಕನ್ನಡ ಭಾಷೆಯು ಸಂಸ್ಕೃತ, ಪ್ರಾಕೃತ, ಅರೇಬಿಕ್, ಪರ್ಶಿಯನ್, ಪೋರ್ಚುಗೀಸ್ ಮತ್ತು ಇಂಗ್ಲಿಷ್ ಭಾಷೆಗಳಿಂದ ನೂರಾರು ಪದಗಳನ್ನು ಎರವಲಾಗಿ ಪಡೆದುಕೊಂಡಿದೆ. ಇವುಗಳ ಪೈಕಿ ಸಂಸ್ಕೃತ ಭಾಷೆಯಿಂದ ಅತಿ ಹೆಚ್ಚಿನ ಪದಗಳನ್ನು ಮತ್ತು ಅಂತಹ ಸಂಸ್ಕೃತ ಪದಗಳನ್ನು ಯಥಾವತ್ತಾಗಿ ಸಂಸ್ಕೃತದಲ್ಲಿರುವಂತೆ ಕನ್ನಡ ಬರಹದಲ್ಲಿ ಬರೆಯಲು ತೊಡಗಿದ್ದರಿಂದ ಸಂಸ್ಕೃತ ವರ್ಣಮಾಲೆಯ ಅನೇಕ ಅಕ್ಷರಗಳನ್ನು ಎರವಲಾಗಿ ಪಡೆದುಕೊಂಡಿದೆ. ಆದುದರಿಂದ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ನಡುವೆ ಎರವಲು ಸಂಬಂಧವಿದೆಯೇ ಹೊರತು, ಮತ್ತಾವ ಸಂಬಂಧವೂ ಇಲ್ಲ"[೨೨] ಎನ್ನುತ್ತಾರೆ. ಮೇಲಿನ ಪ್ರತಿಕ್ರಿಯೆಯಲ್ಲಿ, ಕನ್ನಡ ಭಾಷೆ ಜಗತ್ತಿನ ವಿವಿಧ ಭಾಷೆಗಳ ಜೊತೆಗೆ ನಡೆಸಿರುವ ಅನುಸಂಧಾನದ ಕುರಿತು ಬೆಳಕು ಚೆಲ್ಲಲಾಗಿದೆ. ಅದರಲ್ಲೂ ಸಂಸ್ಕೃತದಿಂದ ಪದಗಳನ್ನು ಸ್ವೀಕರಿಸಿರುವ ಪ್ರಮಾಣ ಹೆಚ್ಚಾಗಿರುವುದನ್ನು ಒಪ್ಪಿಕೊಳ್ಳಲಾಗಿದೆ. ಜತೆಗೆ, ಸಂಸ್ಕೃತದಲ್ಲಿರುವಂತೆಯೇ ಕನ್ನಡದಲ್ಲೂ ಬರೆಯುವ ಸಲುವಾಗಿ ಸಂಸ್ಕೃತ ವರ್ಣಮಾಲೆಯ ಕೆಲವು ಅಕ್ಷರಗಳನ್ನು ಎರವಲಾಗಿ ಸ್ವೀಕರಿಸಿರುವುದನ್ನೂ ಒಪ್ಪಿಕೊಳ್ಳಲಾಗಿದೆ.

ಸಿ. ಪಿ. ನಾಗರಾಜರಿಗೆ ೯.೭.೧೬ರಂದು ಪ್ರತಿಕ್ರಿಯಿಸಿದ ಆರ್. ಬಿ. ಶೇಣವ ಅವರು ಚರ್ಚೆಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ದರು. ಅವರ ಪ್ರಕಾರ ಶಿವಾಚಾರ್ಯ ಶಿವಮೂರ್ತಿ ಸ್ವಾಮೀಜಿಯವರ ಕನ್ನಡ ಮತ್ತು ಸಂಸ್ಕೃತದ ಸಂಬಂಧ ತಾಯಿ ಮಗಳಂತಿಲ್ಲ ಎಂಬ ಸಿ. ಪಿ. ನಾಗರಾಜರ ಅಭಿಪ್ರಾಯಕ್ಕೆ ಸಹಮತವಿದೆ. ಇದರೊಂದಿಗೆ ಮತ್ತಷ್ಟು ವಿಷಯಗಳನ್ನು ಅವರು

ಪ್ರಸ್ತಾಪಿಸಿದ್ದಾರೆ: “ಸಂಸ್ಕೃತ ಸಾವಿರಾರು ವರ್ಷಗಳ ಪ್ರಾಚೀನ ಭಾಷೆಯೆಂದು ಹೇಳಲಾಗುತ್ತದೆ. ಆದರೆ ಇದಕ್ಕೆ ನಿರ್ದಿಷ್ಟ ದಾಖಲೆ, ಸಾಕ್ಷ್ಯಾಧಾರ ಏನು ಎಂದು ಸರಿಯಾಗಿ ಯಾರೂ ಹೇಳುತ್ತಿಲ್ಲ. ಕನ್ನಡ ೧೫೫೦ ವರ್ಷ ಹಳೆಯದೆಂಬುದಕ್ಕೆ ಸಾಕ್ಷಿ ಏನು ಎಂದು ಯಾರಾದರೂ ಕೇಳಿದರೆ, ತಕ್ಷಣ ಇಡೀ ಕರ್ನಾಟಕ ಒಕ್ಕೊರಲಾಗಿ ‘ಹಲ್ಮಿಡಿ ಶಾಸನ’ ಎಂದು ಹೇಳುತ್ತದೆ. ಆದರೆ ಸಂಸ್ಕೃತ ಭಾಷೆ ಇತ್ತೆಂಬುದಕ್ಕೆ ಅತ್ಯಂತ ಹಳೆಯ ದಾಖಲೆ ಯಾವುದಿದೆ?”[೭೩] ಎಂದು ಪ್ರಶ್ನಿಸಿದ್ದಾರೆ.

ಸಂಸ್ಕೃತದ ಪ್ರಾಚೀನತೆ ಕುರಿತ ಸಾಕ್ಷ್ಯಾಧಾರಗಳನ್ನು ಒದಗಿಸುವಲ್ಲಿ, ಸಂಸ್ಕೃತಪ್ರಿಯರು ಹಿಂದೆ ಬಿದ್ದಿರುವುದನ್ನು ಅವರ ಅಭಿಪ್ರಾಯಗಳು ಪ್ರಶ್ನಿಸುತ್ತಿವೆ. ಕನ್ನಡದ ಪ್ರಾಚೀನತೆಗೆ ಹಲ್ಮಿಡಿ ಶಾಸನವನ್ನ ಮಾನದಂಡವಾಗಿರಿಸಿಕೊಂಡಂತೆ, ಸಂಸ್ಕೃತಕ್ಕೆ ನಂಬಲರ್ಹ ಯಾವ ದಾಖಲೆ ಇದೆ ಎಂಬುದು ಅವರ ಪ್ರಶ್ನೆ. ಇದೇ ಲೇಖನದಲ್ಲಿ ಅವರು ಇನ್ನುಳಿದ ಕೆಲವು ಪ್ರಾಚೀನ ಭಾಷೆಗಳ ಕುರಿತು ಪ್ರಸ್ತಾಪಿಸಿದ್ದಾರೆ. ಅವರ ಪ್ರಕಾರ: “ಪಾಲಿ ಭಾಷೆ ಎರಡೂವರೆ ಸಾವಿರ ವರ್ಷಗಳಷ್ಟು ಹಳೆಯದು ಎಂಬುದಕ್ಕೆ ಬೌದ್ಧ ಧರ್ಮದ ಗ್ರಂಥಗಳು ಪಕ್ಕಾ ದಾಖಲೆಗಳಾಗಿವೆ. ಜೈನ ಗ್ರಂಥಗಳು, ಪ್ರಾಕೃತ ಭಾಷೆ ಸಹ ಎರಡೂವರೆ ಸಾವಿರ ವರ್ಷಕ್ಕೂ ಹೆಚ್ಚು ಹಳೆಯದು ಎಂಬುದಕ್ಕೆ ಸಾಕ್ಷಿಯಾಗಿವೆ. ಪಾಲಿ ಮತ್ತು ಪ್ರಾಕೃತ ಭಾಷೆಗಳಿಗೆ ತಮ್ಮ ಸ್ವಂತ ಲಿಪಿಗಳಾದ ನಾಗರಿ ಅಥವಾ ಖರೋಷ್ಠಿ ಲಿಪಿಗಳಿದ್ದವು. ಆದರೆ ಸಂಸ್ಕೃತಕ್ಕೆ ಸ್ವಂತ ಲಿಪಿಯೇ ಇರಲಿಲ್ಲ. ಅದು ನಾಗರಿ ಲಿಪಿಯನ್ನು ಪಾಲಿಯಿಂದ ಎರವಲು ಪಡೆದಿರುವುದು. ಮೂಲದಲ್ಲಿ ಅದು ಕೇವಲ ಮೌಖಿಕ ಭಾಷೆಯಾಗಿತ್ತು. ಮೇಲಾಗಿ ಅದು ಯಾರ ಆಡುಭಾಷೆಯೂ ಆಗಿರಲಿಲ್ಲ. ಅದರೆ ಪಾಲಿ ಮತ್ತು ಪ್ರಾಕೃತ(ಅರ್ಧ ಮಾಗಧಿ, ದ್ರಾಮಿಳಿ, ಪೈಶಾಚಿ ಇತ್ಯಾದಿ) ಉತ್ತರ ಭಾರತೀಯ ಜನಸಾಮಾನ್ಯರ ಆಡು ಭಾಷೆಗಳಾಗಿದ್ದವು”[೭೪] ಎಂದು ಅಭಿಪ್ರಾಯಪಟ್ಟರು.

ಆರ್. ಬಿ. ಶೇಣವ ಅವರ ಪ್ರಕಾರ, ಪಾಲಿ, ಪ್ರಾಕೃತ, ಅರ್ಧ ಮಾಗಧಿ, ದ್ರಾಮಿಳಿ, ಪೈಶಾಚಿ ಇತ್ಯಾದಿ ಭಾಷೆಗಳಷ್ಟು ಪ್ರಾಚೀನತೆಯೂ ಸಂಸ್ಕೃತಕ್ಕೆ ಇಲ್ಲ. ಜತೆಗೆ ಪಾಲಿ ಮತ್ತು ಪ್ರಾಕೃತ ಭಾಷೆಗಳ ಪ್ರಾಚೀನತೆಗೆ ಕ್ರಮವಾಗಿ ಬೌದ್ಧ ಮತ್ತು ಜೈನ ಧರ್ಮದ ಗ್ರಂಥಗಳು ಖಚಿತ ದಾಖಲೆಗಳಾಗಿವೆ. ಆದರೆ, ಸಂಸ್ಕೃತಕ್ಕೆ ಇಂಥ ಆಧಾರಗಳ ಕೊರತೆಯಿದೆ ಎನ್ನುತ್ತಾರೆ. ಮುಂದುವರೆದು, ದಕ್ಷಿಣ ದ್ರಾವಿಡ ಭಾಷೆಗಳ ಕುರಿತು ಉಲ್ಲೇಖಿಸಿದ್ದಾರೆ. “ದಕ್ಷಿಣದ ದ್ರಾವಿಡ ಭಾಷೆಗಳೂ ಜನರ ಆಡುಭಾಷೆಗಳಾಗಿದ್ದವು. ಹಾಗಿರುವಾಗ ಜನರ ಆಡು ಭಾಷೆಯೂ ಆಗಿರದ, ಲಿಪಿಯೂ ಇಲ್ಲದ ಸಂಸ್ಕೃತ ಕೇವಲ ಪಂಡಿತರ ಗುಪ್ತ ಮೌಖಿಕ ಭಾಷೆಯಂತಿದ್ದು ಅದು ಕಾಲದ ಪ್ರಭಾವಕ್ಕೆ ತುತ್ತಾಗಿ ತನ್ನ ಮೂಲ ಸ್ವರೂಪ ಕಳೆದುಕೊಂಡಿಲ್ಲ ಎಂದು ನಂಬುವುದಕ್ಕೆ ಸಾಧ್ಯವಿಲ್ಲ”[೭೫] ಎನ್ನುತ್ತಾರೆ.

ಆಡುಭಾಷೆಗಳಿಗೂ ಮತ್ತು ಪಂಡಿತ ಭಾಷೆಗೂ ನಡುವಿನ ವ್ಯತ್ಯಾಸದ ಕಡೆಗೆ ಆರ್. ಬಿ. ಶೇಣವ ಅವರು ಒತ್ತು ನೀಡಿದ್ದಾರೆ. ಅಲ್ಲದೇ ಸಂಸ್ಕೃತ ಲಿಪಿ ಇಲ್ಲದ ಗುಪ್ತ ಮೌಖಿಕ ಭಾಷೆಯಾಗಿತ್ತು ಎನ್ನುತ್ತಾರೆ. ಇದನ್ನು ಸಂಸ್ಕೃತ ಪಂಡಿತರು ಪ್ರಾಯಶಃ ಒಪ್ಪಲಾರರು. ಸಂಸ್ಕೃತ ಭಾಷೆ ಅನೇಕ ಸ್ಥಳೀಯ ಭಾಷೆಗಳಿಂದ ಸ್ವೀಕರಿಸಿರುವ ಸಾಧ್ಯತೆ ಕುರಿತು ಒಂದು ಸಾದೃಶ್ಯದೊಡನೆ ಹೀಗೆ ವಿವರಿಸುತ್ತಾರೆ: “ಒಂದು ಬಾರಿ ಕಾಶ್ಮೀರದಿಂದ ಹೊರಟು ಕನ್ಯಾಕುಮಾರಿ ಮುಟ್ಟಿದರೆ ಅದರ ಚಕ್ರಕ್ಕೆ ನಡುವಿನ

ಎಲ್ಲ ರಾಜ್ಯಗಳ ಮಣ್ಣು, ದೂಳು ಮೆತ್ತಿಕೊಂಡಿರುತ್ತದೆ. ಅದೇ ಪ್ರಕಾರ ಉತ್ತರ ಭಾರತದ ವಾಯುವ್ಯ ಮೂಲೆಯಿಂದ ಹೊರಟು ಕ್ರಮೇಣ ಇಡೀ ಭಾರತಕ್ಕೆ ಸಂಸ್ಕೃತ ಪ್ರಸರಿಸುವಾಗ, ಅದು ಅಲ್ಲಲ್ಲಿಯ ಸ್ಥಳೀಯ ಆಡು ಭಾಷೆಗಳಿಂದ ಸ್ವಲ್ಪವೂ ಪ್ರಭಾವಿತವಾಗಿಲ್ಲ ಎಂಬುದನ್ನು ನಂಬಲು ಸಾಧ್ಯವಿಲ್ಲ. ಕೆಲವು ಸಂಸ್ಕೃತ ಭಾಷಾ ಸಂಶೋಧಕರು ಹೇಳುವಂತೆ, ಸಂಸ್ಕೃತವು ಎಲ್ಲ ಭಾರತೀಯ ಮೂಲ ಭಾಷೆಗಳಿಂದ ಶಬ್ದ ಉಚ್ಚಾರಗಳನ್ನು ಎರವಲು ಪಡೆದೇ ಸಮೃದ್ಧವಾಗಿರುವುದು. ಹಾಗಾದರೆ ತಾಯಿಯನ್ನು ಮಗಳೆನ್ನುವುದು ಹಾಗೂ ಮಗಳನ್ನು ತಾಯಿಯೆನ್ನುವುದು ಸರಿಯೇ?"[೭೬] ಎಂದು ಪ್ರಶ್ನಿಸುತ್ತಾರೆ.

ಅವರ ಪ್ರಕಾರ, ಸಂಸ್ಕೃತ ಭಾಷೆ ಕೂಡ ಸ್ಥಳೀಯ ಭಾಷೆಗಳಿಂದ ಸಾಕಷ್ಟು ಪದಗಳನ್ನು ಸ್ವೀಕರಿಸಿರಲೇಬೇಕು. ತಮ್ಮ ವಾದಗಳಿಗೆ ಹೆಸರು ಹೇಳದೆ, ಕೆಲವು ಸಂಸ್ಕೃತ ಭಾಷಾ ಸಂಶೋಧಕರ ಅಭಿಪ್ರಾಯಗಳ ಮೊರೆ ಹೋಗಿದ್ದಾರೆ. ಕೆಲವು ಸಂಶೋಧಕರ ಪ್ರಕಾರ ಸಂಸ್ಕೃತದ ನುಡಿ ಶ್ರೀಮಂತಿಕೆಗೆ ಸ್ಥಳೀಯ ಭಾಷೆಗಳಿಂದ ಎರವಲು ಪಡೆದ ಶಬ್ದಗಳೇ ಕಾರಣ ಎನ್ನುತ್ತಾರೆ.

ಇವರ ಅಭಿಪ್ರಾಯಗಳಿಗೆ ದಿನಾಂಕ ೧೨.೦೭.೨೦೧೬ರಂದು ಸುದೀರ್ಘ ಪ್ರತಿಕ್ರಿಯೆ ಪ್ರಕಟವಾಗಿದೆ. 'ಕನ್ನಡ- ಸಂಸ್ಕೃತ ಅನುಬಂಧ, ಕನ್ನಡ-ಮತ್ತು ಸಂಸ್ಕೃತ ಸಂಬಂಧ ತಾಯಿ-ಮಗಳಂತಲ್ಲ; ಪೋಷ್ಯ-ಪೋಷಕ ರೀತಿಯದು' ಎಂಬ ಲೇಖನದಲ್ಲಿ ಆರ್. ಲಕ್ಷ್ಮೀನಾರಾಯಣ ಅವರು ಹೀಗೆ ಅಭಿಪ್ರಾಯಪಡುತ್ತಾರೆ: "ಭಾಷಾ ವಿಜ್ಞಾನದ ಸ್ವಲ್ಪ ಮಟ್ಟಿನ ಅರಿವು ಇರುವ ಯಾರೂ ಈಗ ಅಪ್ಪಿತಪ್ಪಿಯೂ ಕನ್ನಡ ಮತ್ತು ಸಂಸ್ಕೃತದ ಭಾಷಿಕ ಸಂಬಂಧ ತಾಯಿ-ಮಗಳ ಸಂಬಂಧ ಎಂದು ಹೇಳುವುದಿಲ್ಲ. ಸಂಸ್ಕೃತ ವಿದ್ವಾಂಸರಾದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹಿಂದಿನವರು ಮೊದಲಿನಿಂದಲೂ ಹೇಳಿಕೊಂಡು ಬರುತ್ತಿದ್ದ ಮಾತನ್ನೇ ಮತ್ತೆ ಆಡಿದ್ದಕ್ಕೆ ಸಿ.ಪಿ.ನಾಗರಾಜ ಅವರು ಸರಿಯಾಗಿಯೇ ಉತ್ತರ ಕೊಟ್ಟಿರುವುದನ್ನು ಆರ್.ಬಿ.ಶೇಣವ ಅವರೂ ಸಮರ್ಥಿಸಿರುವುದು (ಪ್ರ.ವಾ.,. ಜುಲೈ ೯) ಯುಕ್ತವಾಗಿದೆ"[೭೭] ಎನ್ನುತ್ತಾರೆ.

ಆದರೆ ಅವರಿಗೆ ಆರ್. ಬಿ. ಶೇಣವ ಅವರ ಸಂಸ್ಕೃತ ಕುರಿತ ಹೇಳಿಕೆಗೆ ಸಹಮತವಿಲ್ಲ. ಅವರ ಪ್ರಕಾರ: "ಆದರೆ ಹಾಗೆ ಹೇಳುವ ಭರದಲ್ಲಿ ಶೇಣವ ಅವರು ಕನ್ನಡವೇ ತಾಯಿ, ಸಂಸ್ಕೃತವೇ ಮಗಳು ಎಂಬ ಅರ್ಥ ಬರುವಂತೆ ಹೇಳಿರುವುದು ಇನ್ನೊಂದು ಅತಿಗೆ ಹೋಗಿ, ಶಿವಮೂರ್ತಿ ಶಿವಾಚಾರ್ಯರು ಮಾಡಿದಂಥದೇ ಇನ್ನೊಂದು ಪ್ರಮಾದವೆಸಗಿದ್ದಾರೆ ಎನ್ನದೆ ವಿಧಿಯಿಲ್ಲ" ಎನ್ನುತ್ತಾರೆ.

ದೇಶದ ಎಲ್ಲ ಭಾಷೆಗಳಿಗೂ ಲಿಖಿತ ಐತಿಹಾಸಿಕ ದಾಖಲೆಗಳಿಗೆ ಕೊರತೆ ಇದೆ ಎಂದು ಆರ್. ಲಕ್ಷ್ಮೀನಾರಾಯಣ ಒಪ್ಪಿಕೊಳ್ಳುತ್ತಾರೆ. ಅಲ್ಲದೇ, ಆರ್. ಬಿ. ಶೇಣವ ಅವರು ಸಂಸ್ಕೃತ ಪ್ರಾಚೀನತೆ ಕುರಿತು ವ್ಯಕ್ತಪಡಿಸಿರುವ ಅನುಮಾನಕ್ಕೆ ಪರ್ಯಾಯವಾಗಿ, ಆ ಭಾಷೆಗೆ ೫೦೦೦ ವರ್ಷಗಳ ಇತಿಹಾಸವಿರುವುದಕ್ಕೆ ಸಂಸ್ಕೃತ ಸಾಹಿತ್ಯ ಮತ್ತು ವೇದಗಳ ಕಾಲವನ್ನು ಉಲ್ಲೇಖಿಸುತ್ತಾರೆ. ಇದಕ್ಕೆ ಸಂಸ್ಕೃತ ಪಂಡಿತರ ಅಭಿಪ್ರಾಯಗಳ ಮೊರೆಹೋಗಿದ್ದಾರೆ.

"ವೇದಗಳು ಕಿವಿಯಿಂದ ಕಿವಿಗೆ ಬಾಯಿಂದ ಬಾಯಿಗೆ ಪೀಳಿಗೆಯಿಂದ ಪೀಳಿಗೆಗೆ ಕಿಂಚಿತ್ತೂ ವ್ಯತ್ಯಾಸ ಹೊಂದದೆ ಸಾಗುತ್ತ ನೆನಪಿನಿಂದಲೇ ಉಳಿದು ಬಂದಿರುವ ಕಾರಣದಿಂದಲೇ ಅವಕ್ಕೆ ಶ್ರುತಿ ಮತ್ತು ಸ್ಮೃತಿ ಎಂಬ ಹೆಸರು ಬಂದಿರುವುದು ಎಂಬುದು ಕೂಡ ಎಲ್ಲರಿಗೂ ತಿಳಿದಿರುವಂಥದೇ"[೭೮] ಎನ್ನುವ ಆರ್. ಲಕ್ಷ್ಮೀನಾರಾಯಣ ಅವರು ಕೂಡ ಯಾವುದೇ ದಾಖಲೆಗಳನ್ನು ಉಲ್ಲೇಖಿಸಿಲ್ಲ. ಅದಕ್ಕೆ ದಿನಪತ್ರಿಕೆಯಲ್ಲಿ ನಡೆಯುತ್ತಿರುವ ಚರ್ಚೆಯೂ ಕಾರಣವಾಗಿರುವಂತಿದೆ. ಮುಂದಿನ ತಮ್ಮ ಚರ್ಚೆಯಲ್ಲಿ ಭಾಷಾವಿಜ್ಞಾನದ ಆಧಾರದಲ್ಲೇ ಚರ್ಚೆ ಆರಂಭವಾದರೂ, ಅದರ ಎಲ್ಲ ಅಂಶಗಳ ಆಧಾರದಲ್ಲಿ ಚರ್ಚೆ ಸಾಗಿಲ್ಲ ಎನ್ನುತ್ತಾರೆ.

"ಒಂದು ಕಡೆ ಯಾವುದೇ ಒಂದು ಭಾಷೆಗೆ ಭಾಷೆಯೆಂದು ಕರೆಸಿಕೊಳ್ಳಲು ಲಿಪಿ ಇರಬೇಕಾದ್ದಿಲ್ಲ, ಅದು ಮೌಖಿಕ ಭಾಷೆಯಾಗಿದ್ದರೆ ಸಾಕು ಎಂಬ ಭಾಷಾ ವಿಜ್ಞಾನದ ಪ್ರಥಮ ಪಾಠವನ್ನು ಹೇಳುತ್ತ, ಇನ್ನೊಂದು ಕಡೆ ಪಾಲಿ ಮತ್ತು ಪ್ರಾಕೃತದಿಂದ ನಾಗರಿ ಲಿಪಿಯನ್ನು ಎರವಲು ಪಡೆದಿರುವ (ಅದೂ ಸರಿಯಲ್ಲ; ಬ್ರಾಹ್ಮಿ ಲಿಪಿಯಿಂದಲೇ ಭಾರತದ ಎಲ್ಲ ಲಿಪಿಗಳೂ ಹುಟ್ಟಿದ್ದು) ಕಾರಣ ಸಂಸ್ಕೃತ ಪ್ರಾಚೀನವಲ್ಲ ಎಂಬ ರೀತಿಯ ವಾದ ಮುಂದಿಡುವುದು ಎಷ್ಟು ಸರಿ?"[೭೯] ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಭಾರತದ ಎಲ್ಲ ಭಾಷೆಗಳೂ ಬ್ರಾಹ್ಮಿ ಲಿಪಿಯಿಂದಲೇ ಹುಟ್ಟಿವೆ ಎನ್ನುತ್ತಾರೆ.

ಆದರೂ ಸಂಸ್ಕೃತದ ಪ್ರಾಚೀನತೆ ಕುರಿತು ಸಮರ್ಥನೆಯ ಧಾಟಿಯಲ್ಲಿ ವಾದಿಸುವುದನ್ನು ಲಕ್ಷೀನಾರಾಯಣ ಅವರ ಲೇಖನದಲ್ಲಿ ಕಾಣಬಹುದು. ಅದಕ್ಕಾಗಿ ಅವರು ಕೊಡುವ ಕಾರಣಗಳು ಹೀಗಿವೆ: "ವೇದಗಳ ವೈದಿಕ ಸಂಸ್ಕೃತವೇ ಮುಂದೆ ಕಾವ್ಯ, ನಾಟಕಗಳಲ್ಲಿ ಬಳಸುವ ಭಾಷೆಯಾದ ಲೌಕಿಕ ಸಂಸ್ಕೃತದ ಸ್ವರೂಪ ಪಡೆದುಕೊಂಡಿತು ಎಂಬುದು ಕೂಡ ಭಾಷಾ ವಿದ್ವಾಂಸರು ಈಗಾಗಲೇ ತಲುಪಿರುವ ತೀರ್ಮಾನ. ಹಾಗೆ ಪಡೆದುಕೊಂಡ ನಂತರದ ವರ್ಷಗಳಲ್ಲಿ ಆದಿಕಾವ್ಯವೆನಿಸಿದ ರಾಮಾಯಣ ಹುಟ್ಟಿತು ಎನ್ನುತ್ತಾರೆ. ಇವೆಲ್ಲ ತೀರಾ ಊಹಾಪೋಹಗಳೇನಲ್ಲ"[೮೦] ಎಂದು ಅಭಿಪ್ರಾಯಪಡುತ್ತಾರೆ. ಅಲ್ಲದೇ ಭಾಷಿಕ ಸಂಬಂಧದ ಹೊರತಾಗಿ, ಸಂಸ್ಕೃತ ಮತ್ತು ತೆಲುಗು, ಮಲಯಾಳ, ಬಂಗಾಳ, ಹಿಂದಿ, ಮರಾಠಿ ಮೊದಲಾ ಭಾಷೆಗಳ ನಡುವಿನ ಇನ್ನೊಂದು ಸಂಬಂಧದ ಬಗೆಗೆ ಪ್ರಸ್ತಾಪಿಸಬೇಕಿದೆ ಎನ್ನುತ್ತಾರೆ.

ಲಕ್ಷ್ಮೀನಾರಾಯಣ ಅವರ ಪ್ರಕಾರ: "ಈ ಎಲ್ಲ ಭಾಷೆಗಳು ಪ್ರವರ್ಧಮಾನಕ್ಕೆ ಬರುವುದಕ್ಕೆ ಬಹಳ ಮುನ್ನವೇ ಸಂಸ್ಕೃತದಲ್ಲಿ ಕಾವ್ಯ, ನಾಟಕ ಮುಂತಾದ ಸೃಜನಶೀಲ ಸಾಹಿತ್ಯವಷ್ಟೇ ಅಲ್ಲದೆ ವ್ಯಾಕರಣ, ಕಾವ್ಯ ಮೀಮಾಂಸೆ, ಛಂದಸ್ಸು, ತರ್ಕ, ವೈದ್ಯಶಾಸ್ತ್ರ, ಖಗೋಳಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ರಾಜನೀತಿ ಶಾಸ್ತ್ರವೇ ಮೊದಲಾದ ಶಾಸ್ತ್ರಗಳ ಬೆಳವಣಿಗೆಯಾಗಿ ಸಾಕಷ್ಟು ಕೃತಿಗಳು ರಚಿತವಾಗಿದ್ದುವು"[೮೧] ಎಂದು ಸಂಸ್ಕೃತದ ಪರ ವಾದಿಸುತ್ತಾರೆ.

ಇವರ ಪ್ರಕಾರ, ಸಂಸ್ಕೃತ ಭಾಷೆಯಲ್ಲಿ ಕಾವ್ಯದ ವಿವಿಧ ಪ್ರಕಾರಗಳು, ಶಾಸ್ತ್ರ ಕೃತಿಗಳು ಸಂಸ್ಕೃತದಲ್ಲೇ ಮೊದಲು ರಚಿತವಾಗಿವೆ. ಅಷ್ಟೇ ಅಲ್ಲದೇ, ಸಂಸ್ಕೃತದ ಪ್ರಭಾವ ಮತ್ತು ಪ್ರೇರಣೆಯಿಂದಲೇ

ಭಾರತದ ಭಾಷೆಗಳ ಸಾಹಿತ್ಯ ಸೃಷ್ಟಿಯಾಗಿದೆ. ಸಂಸ್ಕೃತ ಗ್ರಂಥಗಳಿಂದಲೇ ಎಲ್ಲ ಪರಿಕಲ್ಪನೆಗಳನ್ನು ಭಾರತೀಯ ಭಾಷೆಗಳು ಎರವಲು ಪಡೆದವು ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಪ್ರಚಲಿತವಾಗಿದ್ದ ಶಬ್ದಗಳು ಎಲ್ಲ ಭಾಷೆಗಳ ಶಬ್ದಕೋಶಗಳಲ್ಲಿ ಸೇರಿಕೊಂಡಿವೆ ಎನ್ನುತ್ತಾರೆ. ಹಾಗೆಯೇ ಯಾವುದೇ ಭಾಷೆಯೂ ದ್ವೀಪವಾಗಿರಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಅಲ್ಲದೇ, ದ್ರಾವಿಡ ಭಾಷೆಗಳಿಂದ ಕೂಡ ಸಂಸ್ಕೃತ ಕೆಲವು ಪದಗಳನ್ನು ಸ್ವೀಕರಿಸಿರುವುದನ್ನು ಒಪ್ಪಿಕೊಳ್ಳುತ್ತಾರೆ. ತಮ್ಮ ಪ್ರಮುಖ ವಾದವಾದ ಸಂಸ್ಕೃತ ಮತ್ತು ಕನ್ನಡದ್ದು ಪೋಷ್ಯ-ಪೋಷಕ ಸಂಬಂಧ ಎಂಬುದಕ್ಕೆ ಪೂರಕವಾಗಿ, "ಇದನ್ನೆಲ್ಲ ಅನುಲಕ್ಷಿಸಿಯೇ ಕನ್ನಡದ ಕಣ್ವರೆಂದೇ ಖ್ಯಾತರಾದ ಆಚಾರ್ಯ ಬಿ. ಎಂ. ಶ್ರೀಯವರು ಕನ್ನಡಕ್ಕೆ ಸಂಸ್ಕೃತವೇ ಪ್ರೇರಕ, ಪೋಷಕ ಮತ್ತು ಗುರು ಎಂದು ಬಹಳ ಹಿಂದೆಯೇ ಹೇಳಿದ್ದು."[೬೨] ಎನ್ನುತ್ತಾರೆ. ಅಲ್ಲದೇ, ಈ ಪೋಷ್ಯ ಮತ್ತು ಪೋಷಕ ಸಂಬಂಧದ ಕುರಿತು, "ಆದರೆ ಇಂದು ಸಂಸ್ಕೃತದ ಸ್ಥಿತಿ ಕನ್ನಡವೂ ಸೇರಿದಂತೆ ಇತರೆ ದೇಶೀಯ ಭಾಷೆಗಳಲ್ಲಿ ಅದು ಬದುಕಬೇಕಾದ ಸ್ಥಿತಿ. ಇದು ಇಂದಿನ ಸ್ಥಿತಿ ಮಾತ್ರವಲ್ಲ; ಹಿಂದೆಯೂ ಹಾಗೆಯೇ ಇತ್ತು."[೬೩] ಎನ್ನುತ್ತಾರೆ. ಸಂಸ್ಕೃತದ ಜೊತೆಗೆ ಎಲ್ಲ ಭಾಷೆಗಳಿಗೂ ಈ ಸಂಬಂಧವನ್ನು ಬೆಸೆಯುವ ಮನಸಿದೆ ಎನ್ನುವ ಅವರು, ಈ ವಾದಕ್ಕೆ ಪುಷ್ಟಿ ನೀಡಲು ಕುವೆಂಪು ಅವರ ಮೊರೆಹೋಗುತ್ತಾರೆ.

"ಇದನ್ನು ಕುವೆಂಪು ಬಹಳ ಹಿಂದೆಯೇ ಹೇಳಿದ್ದಾರೆ. ಕಾರಣ ಈ ಎಲ್ಲ ಭಾಷೆಗಳು ಜನಬಳಕೆಯಲ್ಲಿರುವ ಜೀವಂತ ಭಾಷೆಗಳಾದ್ದರಿಂದ ಸಂಸ್ಕೃತ ಶಬ್ದಗಳು ಅವುಗಳಲ್ಲಿ ಸೇರಿ ಬಳಕೆಯಾಗುತ್ತವೆ. ಸಂಸ್ಕೃತ ಬಹುಶಃ ಎಂದೂ ಜನರಾಡುವ ಭಾಷೆಯಾಗಿರಲಿಲ್ಲ ಎಂಬ ಮಾತು ನಿಜವೆನಿಸುತ್ತದೆ. ಜನಬಳಕೆಯಲ್ಲಿದ್ದ ಅದರ ರೂಪಗಳೇ ಪಾಲಿಯೂ ಸೇರಿದಂತೆ, ಮಾಗಧಿ, ಅರ್ಧಮಾಗಧಿ ಮುಂತಾದ ಪ್ರಾಕೃತ ಭಾಷೆಗಳು"[೬೪] ಎನ್ನುವ ಲಕ್ಷ್ಮೀನಾರಾಯಣ ಅವರು, ದೇಶದ ವಿವಿಧ ಭಾಷೆಗಳ ಮೇಲೆ ಸಂಸ್ಕೃತದ ಪ್ರಭಾವವಾಗಿದೆ ಎಂದು ಸಾಬೀತುಪಡಿಸಲು ಪ್ರಯತ್ನಿಸುತ್ತಾರೆ.

ಇದಾದ ನಂತರ, ಆಡು ಭಾಷೆ ಮತ್ತು ಕಾವ್ಯ ಭಾಷೆಗಳ ಚರ್ಚೆಗೆ ಮುಂದಾಗುತ್ತಾರೆ. "ಜನರಾಡುವ ಭಾಷೆಯನ್ನು ಯಥಾವತ್ತಾಗಿ ಕಾವ್ಯ, ಕಥೆ ನಾಟಕಾದಿ ಸಾಹಿತ್ಯ ಕೃತಿಗಳಲ್ಲಿ ಯಾವೊಂದು ಭಾಷಾ ಸಾಹಿತ್ಯದಲ್ಲಿಯೂ ಬಹುಶಃ ಬಳಸುವ ರೂಢಿ ಇರಲಿಲ್ಲವೆನಿಸುತ್ತದೆ. ಅದೇನಿದ್ದರೂ ಆಧುನಿಕ ಕಾಲದಲ್ಲಿ ಚಾಲ್ತಿಗೆ ಬಂದ ಒಂದು ವಿದ್ಯಮಾನ (ದೇವನೂರ ಮತ್ತಿತರರಲ್ಲಿ ಆಗಿರುವಂತೆ). ಕನ್ನಡದಲ್ಲಾದರೂ ಕವಿರಾಜಮಾರ್ಗವೂ ಸೇರಿದಂತೆ ಯಾವುದೇ ಹಳಗನ್ನಡ ಸಾಹಿತ್ಯ ಕೃತಿಯಲ್ಲಿ ಬಳಕೆಯಾಗಿರುವ ಭಾಷೆ ಆ ಕಾಲದ ಜನರ ದಿನನಿತ್ಯದ ಆಡುಭಾಷೆಯಲ್ಲ. ಅದು ಸಾಹಿತ್ಯಕ್ಕೋಸ್ಕರವೇ ರೂಪುಗೊಂಡ ಭಾಷೆ"[೬೫] ಎನ್ನುತ್ತಾರೆ. ಈ ಅಭಿಪ್ರಾಯದಲ್ಲಿ ಸಾಹಿತ್ಯಕ ಮತ್ತು ಆಡು ಭಾಷೆಯ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತಾರೆ. ಅಲ್ಲದೇ ಸಂಸ್ಕೃತ ಸಾಹಿತ್ಯದಲ್ಲಿ ಬಳಕೆಯಾಗಿರುವ ಜನಭಾಷೆಗಳ ಬಳಕೆಯನ್ನು ಉಲ್ಲೇಖಿಸುತ್ತಾರೆ.

ಲಕ್ಷ್ಮೀನಾರಾಯಣ ಅವರ ಪ್ರಕಾರ, ಸಂಸ್ಕೃತದಲ್ಲಿ "ಕೆಲವು ಆಡುಮಾತಿನ ರೂಪಗಳೂ ಇದ್ದಿರಬಹುದು ಅಷ್ಟೆ. ಸಂಸ್ಕೃತದಲ್ಲಿ ಕೂಡ ಕಾವ್ಯ, ನಾಟಕವೇ ಮೊದಲಾದ ಸಾಹಿತ್ಯ ಕೃತಿಗಳಲ್ಲಿ

ಅದರ ಶಿಷ್ಟ ರೂಪ ಬಳಕೆಯಾಗಿದೆ. ಪಾಲಿ, ಪ್ರಾಕೃತಗಳು ಜನಭಾಷೆಗಳಾಗಿದ್ದವೆಂಬುದಕ್ಕೆ ಸಂಸ್ಕೃತ ನಾಟಕಗಳಲ್ಲೇ ಉತ್ತಮ ಪಾತ್ರಗಳು ಸಂಸ್ಕೃತದಲ್ಲಿ ಮಾತನಾಡಿದರೆ, ಸ್ತ್ರೀ ಪಾತ್ರಗಳು ಮತ್ತು ಇತರೆ ಕೆಳದರ್ಜೆಯ ಪಾತ್ರಗಳು ಆಡುವ ಮತು ಪ್ರಾಕೃತವಾಗಿರುವುದು ಸಾಕ್ಷಿ"[೮೬] ಎನ್ನುತ್ತಾರೆ. ಇಲ್ಲಿ ಉತ್ತಮ, ಸ್ತ್ರೀ ಮತ್ತು ಕೆಳದರ್ಜೆಯ ಪಾತ್ರಗಳು ಎಂದು ಕರೆಯುವ ಮೂಲಕ, ಪಾತ್ರಗಳ ನಡುವೆ ಪರಂಪರಾಗತವಾಗಿ ಅಸ್ತಿತ್ವದಲ್ಲಿರುವ ದೃಷ್ಟಿಕೋನವನ್ನೇ ಆರ್. ಲಕ್ಷ್ಮೀನಾರಾಯಣ ಮುಂದುವರೆಸಿದ್ದಾರೆ. ಇಲ್ಲಿ ಅವರ ಭಾಷಾವಿಜ್ಞಾನದ ಸೂಕ್ಷ್ಮತೆಗಳು ಕೆಲಸ ಮಾಡಿಲ್ಲವೆನಿಸುತ್ತದೆ.

ಮುಂದೆ ಅವರು ಮತ್ತೆ, ಸಂಸ್ಕೃತದ ಪ್ರಾಚೀನತೆಯನ್ನು ಪ್ರತಿಪಾದಿಸುತ್ತಾರೆ. "ಜನರಾಡುವ ಭಾಷೆ ಸಂಸ್ಕೃತ ಆಗಿರಲಿಲ್ಲ ಎಂದ ಮಾತ್ರಕ್ಕೆ ಅದರ ಪ್ರಾಚೀನತೆ ಪ್ರಶ್ನಾರ್ಹವೇನಲ್ಲ. ಆದ್ದರಿಂದ ಭಾಷಿಕ ದೃಷ್ಟಿಯಿಂದ ಕನ್ನಡ–ಸಂಸ್ಕೃತದ ಸಂಬಂಧ ತಾಯಿ–ಮಗಳ ಸಂಬಂಧವಲ್ಲ ಎಂಬುದು ಸತ್ಯವಾಗಿರುವಂತೆಯೇ, ಸಾಹಿತ್ಯಕ ದೃಷ್ಟಿಯಿಂದ ಕನ್ನಡ ಮತ್ತು ಸಂಸ್ಕೃತದ ಸಂಬಂಧ ಪೋಷ್ಯ–ಪೋಷಕ ರೀತಿಯದು (ಕಡೆಯ ಪಕ್ಷ ಮೊದಲಿಗೆ) ಎಂಬುದೂ ಸತ್ಯವೇ. ಕೊನೆಗೆ ಉಳಿಯುವುದು ಸತ್ಯವೇ ಹೊರತು, ಅಭಿಮಾನವಲ್ಲ ಎಂಬ ಶ್ರೀಯವರ ಮಾತನ್ನು ನೆನೆಯೋಣ. ಈ ಅರ್ಥದಲ್ಲಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕನ್ನಡ–ಸಂಸ್ಕೃತದ ಸಂಬಂಧ ತಾಯಿ–ಮಗಳ ಸಂಬಂಧ ಎಂದಿದ್ದರೆ ಅದೇನೂ ತೀರಾ ಆಕ್ಷೇಪಾರ್ಹವಾದದ್ದಲ್ಲ"[೮೭] ಎನ್ನುವ ಮೂಲಕ "ಭಾಷಾ ವಿಜ್ಞಾನದ ಸ್ವಲ್ಪ ಮಟ್ಟಿನ ಅರಿವು ಇರುವ ಯಾರೂ ಈಗ ಅಪ್ಪಿತಪ್ಪಿಯೂ ಕನ್ನಡ ಮತ್ತು ಸಂಸ್ಕೃತದ ಭಾಷಿಕ ಸಂಬಂಧ ತಾಯಿ–ಮಗಳ ಸಂಬಂಧ ಎಂದು ಹೇಳುವುದಿಲ್ಲ"[೮೮] ಎಂಬ ತಮ್ಮ ಹೇಳಿಕೆಯ ವಿರುದ್ಧದ ನಿಲುವು ತಾಳುತ್ತಾರೆ.

ಆಡುಭಾಷೆ ಮತ್ತು ಸಾಹಿತ್ಯಕ ಭಾಷೆಯ ಕುರಿತು ಲಕ್ಷ್ಮೀನಾರಾಯಣ ಅವರು ಗುರುತಿಸುವ ವ್ಯತ್ಯಾಸವು ಎಲ್ಲ ಕಾಲದಲ್ಲೂ ಅಸ್ತಿತ್ವದಲ್ಲಿರುತ್ತದೆ. ಅವುಗಳ ನಡುವೆ ವ್ಯತ್ಯಾಸವಿರಲೇಬೇಕು. ಇಂದಿನ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬಳಸಲಾಗುವ ಭಾಷೆ, ಸರ್ಕಾರ ಬಳಸುವ ಪ್ರಮಾಣ ಭಾಷೆ, ಬೋಧನೆ ಮತ್ತು ವಿದ್ಯುನ್ಮಾನ ಹಾಗೂ ಮುದ್ರಣ ಮಾಧ್ಯಮಗಳ ಭಾಷೆಗಳ ನಡುವೆ ವ್ಯತ್ಯಾಸವಿದೆ. ಎಲ್ಲ ಕಾಲದಲ್ಲೂ ವಿವಿಧ ವಲಯಗಳಲ್ಲಿ ಬಳಸುವ ಭಾಷೆಯಲ್ಲಿ ವ್ಯತ್ಯಾಸವಿರುವುದು ಸಹಜ ಪ್ರಕ್ರಿಯೆ. ಇಲ್ಲವಾದಲ್ಲಿ ಆಯಾ ವಲಯಗಳ ಅಸ್ಮಿತೆಯೇ ಇಲ್ಲವಾಗುತ್ತದೆ.

ಇನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಈ ವಲಯಗಳ ನಡುವೆ ಇತ್ತಣಿಂದ ಅತ್ತ, ಅತ್ತಣಿಂದ ಇತ್ತ ಕೆಲವು ಪದಗಳು ಸಂಚರಿಸುವ ಸಾಧ್ಯತೆಗಳೂ ಇವೆ. ಅದಕ್ಕೆ ನಿರ್ದಿಷ್ಟ ಕಾರಣಗಳಿಗಿಂತ, ಸಂಕೀರ್ಣ ಕಾರಣಗಳಿರುವ ಸಂದರ್ಭವೇ ಹೆಚ್ಚು. ಸರ್ಕಾರ, ಸಾಹಿತಿಗಳು, ಬೋಧಕರು, ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳು ಅನೇಕ ಕಾರಣಕ್ಕೆ ಪ್ರಭಾವಕ್ಕೆ ಒಳಗಾಗುವುದು ಸಾಮಾನ್ಯ ಅಂಶವಾಗಿದೆ. ಆಡಳಿತ ಭಾಷೆ, ಬೋಧನಾ ಭಾಷೆ, ಮಾಧ್ಯಮಗಳ ಭಾಷೆಗಳು ಪ್ರಮಾಣ ಭಾಷೆಯ ಸೆರಗು ಹಿಡಿದೇ ಸಾಗುತ್ತಿರುತ್ತವೆ. ಆದರೆ, ಕಟ್ಟುನಿಟ್ಟಾಗಿ ಅದನ್ನೇ ಎಲ್ಲ ಕ್ಷಣಗಳಲ್ಲೂ ಪಾಲಿಸಲಾಗುತ್ತದೆ ಎಂದು ಹೇಳಲಾಗದು.

ಈ ಚರ್ಚೆಗಳಿಗೆ ಡಿ. ಎನ್. ಶಂಕರ ಬಟ್ಟರ ಮಾತು ಬರಹದ ನಡುವಿನ ಗೊಂದಲ ಹಾಗೂ ಕನ್ನಡ ಮತ್ತು ಸಂಸ್ಕೃತಗಳ ಸಂಬಂಧದ ಕುರಿತ ಚಿಂತನೆಗಳು ಸೂಕ್ತ ಪ್ರತಿಕ್ರಿಯೆಗಳೆನಿಸುತ್ತವೆ. ಮೇಲಿನ ಚರ್ಚೆಗಳ ಕೇಂದ್ರ ಸಂಸ್ಕೃತದ ಪ್ರಭಾವ ಮತ್ತು ಆಡುನುಡಿ ಮತ್ತು ಬರಹದ ಭಾಷೆಗಳಾಗಿವೆ. ಇದರಲ್ಲಿ ನುಡಿದಂತೆ ಬರೆ, ಬರೆದಂತೆ ನುಡಿ ಎಂಬ ಎರಡು ವಾದಗಳಿವೆ. ಆದರೆ, ಭಾಷಾವಿಜ್ಞಾನ ಆಡುನುಡಿಗೆ ಪ್ರಾಮುಖ್ಯತೆ ಕೊಡುತ್ತದೆ. ಮಾತು ಮತ್ತು ಬರಹದ ಕುರಿತು ಡಿ. ಎನ್. ಶಂಕರ ಬಟ್ಟರು ಇನ್ನೊಂದು ನೆಲೆಯಿಂದ ಚಿಂತಿಸುತ್ತಾರೆ. ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವಂತೆಯೇ ಬಳಸಬೇಕಾಗಿಲ್ಲ. ಅದರ ಬದಲಾಗಿ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬದಲಿಸಿಕೊಂಡು ಬಳಸಬೇಕು ಎನ್ನುವುದು ಅವರ ವಾದ. **“ಬಾಶೆ ಎಂಬುದು ಮುಕ್ಯವಾಗಿ ಮಾತಲ್ಲದೆ ಬರಹವಲ್ಲ ಎಂಬುದನ್ನು ಅವರು ಗಮನಿಸುವುದೇ ಇಲ್ಲ”**[೮೯] ಎನ್ನುತ್ತಾರೆ.

ಈ ಕುರಿತು ಅನ್ನದಾನೇಶ ಶಿ. ಸಂಕದಾಳ, ಮಾತು ಮತ್ತು ಬರಹದ ನಡುವಿನ ಗೊಂದಲ ಎಂಬ ಲೇಖನದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ: “ನುಡಿಯ ಮಾತು ಮತ್ತು ಬರಹಗಳ ನಡುವೆ ಇರುವ ನಂಟನ್ನು ಸರಿಯಾಗಿ ಅರಿಯದೇ, ಗೊಂದಲದಿಂದ ಮುಂದಿಡುತ್ತಿರುವ ವಾದ ಇದಾಗಿದೆ. ಈ ವಾದವು ತಪ್ಪು ತಿಳುವಳಿಕೆಯಿಂದ ಕೂಡಿದೆ ಎಂತಾದರೇ, ಮಾತು ಮತ್ತು ಬರಹದ ವಿಷಯದಲ್ಲಿ ಸರಿಯಾದ ತಿಳುವಳಿಕೆ ಎಂದರೇನು? ಮಾತು ಮತ್ತು ಬರಹದ ನಡುವಿರುವ ನಂಟೇನು? ಮಾತು ಮತ್ತು ಬರಹದ ಬಗ್ಗೆ ಇರುವ ಗೊಂದಲವನ್ನು ಹೋಗಲಾಡಿಸುವುದು ಹೇಗೆ? ಬರವಣಿಗೆ ಯಾಕೆ ಮುಖ್ಯವಾಗಿದೆ? ಕನ್ನಡ ಬರಹ ಕಲಿಕೆಯಲ್ಲಿರುವ ತೊಡಕುಗಳೇನು? ಮಾತು ಮತ್ತು ಬರಹಗಳು ನುಡಿಯ ಅಳಿವು-ಉಳಿವನ್ನು ತೀರ್ಮಾನಿಸುವಲ್ಲಿ ಹೇಗೆ ಮುಖ್ಯವಾಗುತ್ತದೆ? – ಇಂತ ಹಲವಾರು ಪ್ರಶ್ನೆಗಳಿಗೆ ನುಡಿಯರಿಮೆಯ ನೆಲೆಯಲ್ಲಿ ಸಮಂಜಸವಾದ ಉತ್ತರ ನೀಡುವ ಹೊತ್ತಗೆಯೇ – ಡಾ. ಡಿ. ಎನ್. ಶಂಕರ ಬಟ್ಟರ 'ಮಾತು ಮತ್ತು ಬರಹದ ನಡುವಿನ ಗೊಂದಲ'”[೯೦] ಎನ್ನುತ್ತಾರೆ.

ಸಂಸ್ಕೃತ ಪದಗಳನ್ನು ಸಂಸ್ಕೃತದಲ್ಲಿರುವಂತೆಯೇ ಉಚ್ಚರಿಸುವುದು ಮತ್ತು ಬರೆಯುವ ಸಾಮರ್ಥ್ಯ ಎಲ್ಲರಿಗೂ ಇದೆಯೇ ಎಂಬ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ಅಲ್ಲದೇ, ಎರಡು ಭಿನ್ನ ಮೂಲದ ಭಾಷೆಗಳಿಗೆ ಒಂದೇ ಮೂಲವನ್ನು ಆರೋಪಿಸುವ ಮತ್ತು ಸಂಸ್ಕೃತದ ಪ್ರಾಬಲ್ಯವನ್ನು ಸಮರ್ಥಿಸುವ ಕೆಲಸವೇ ಇದುವರೆಗೆ ನಡೆದಿದೆ. ಇದರ ಕುರಿತು ಡಿ. ಎನ್. ಶಂಕರ ಬಟ್ಟರು ತಮ್ಮ ಕೃತಿಗಳಲ್ಲಿ ಭಿನ್ನಾಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಅಲ್ಲದೇ ಮಾತು ಮತ್ತು ಬರಹಗಳ ಸಂಬಂಧದ ಕುರಿತು ಹೀಗೆ ಅಭಿಪ್ರಾಯಪಡುತ್ತಾರೆ: “ಮಾತು ತುಂಬಾ ಹಳೆಯದು, ಬರಹ ತೀರಾ ಇತ್ತೀಚೆಗಿನದು ಎಂಬುದು ಇವುಗಳಲ್ಲೊಂದು; ಮಾತು ಅಯ್ದಾರು ମಿಲಿಯ ವರ್ಶಗಳಶ್ಟು ಹಳೆಯದು, ಆದರೆ ಬರಹ ಹೆಚ್ಚೆಂದರೆ ನಾಲ್ಕಯ್ದು ಸಾವಿರ ವರ್ಶಗಳಶ್ಟು ಹಳೆಯದು. ಮೊನ್ನೆ ಮೊನ್ನೆವರೆಗೂ ಕೆಲವೇ ಕೆಲವು ನುಡಿಗಳು ಮಾತ್ರ ಬರಹವನ್ನು ಬಳಸುತ್ತಿದ್ದುವು, ಮತ್ತು ಅಂತಹ ನುಡಿಗಳನ್ನು ಬಳಸುವ ಸಮಾಜಗಳಲ್ಲೂ ಕೆಲವೇ ಕೆಲವು ಮಂದಿ ಮಾತ್ರ ಬರಹವನ್ನು ಬಳಸಬಲ್ಲವರಾಗಿದ್ದರು. ಇವತ್ತಿಗೂ ಬರಹವನ್ನು ಬಳಸಲು ಬಾರದ ಜನರ ಎಣಿಕೆ ಸಾಕಶ್ಟು ದೊಡ್ಡದಾಗಿದೆ”[೯೧] ಎಂದು ಅವರು ಮಾತಿನ ಪ್ರಾಚೀನತೆ ಕುರಿತು ಹೇಳುತ್ತಾರೆ.

ಅವರ ಮಾತುಗಳನ್ನು ವಿರೋಧಿಸಲು ಸಾಧ್ಯವಿಲ್ಲ. ಆದರೆ, ಮಾತು ಮೊದಲಾಗಿ, ಬರಹ ಅನಂತರವಾದರು ನುಡಿದಂತೆ ಬರೆಯುವ ಬದಲು, ಬರೆದಂತೆ ನುಡಿಯಬೇಕೆಂದೇ ಬಹುತೇಕರ ನಂಬಿಕೆಯಾಗಿದೆ. ಇದನ್ನು ನಿವಾರಿಸುವ ಸಲುವಾಗಿ ಡಿ. ಎನ್. ಶಂಕರ ಬಟ್ಟರು ತಮ್ಮ ಬರಹವನ್ನು ಆಡುಮಾತಿನ ಶೈಲಿಯಲ್ಲಿ ಮಾಡತೊಡಗಿದ್ದಾರೆ. ಮಾತು ಮತ್ತು ಬರಹದ ನಡುವಿನ ವ್ಯತ್ಯಾಸಕ್ಕೆ ಅವರು ಈ ಉದಾಹರಣೆ ನೀಡುತ್ತಾರೆ. ಅವರ ಪ್ರಕಾರ: **“ಮಾತು ತಾನಾಗಿಯೇ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ, ಮತ್ತು ಹಾಗೆ ಬದಲಾಗುವ ಮೂಲಕ ಅದು ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳುತ್ತದೆ. ಬರಹ ಆ ರೀತಿ ತಾನಾಗಿಯೇ ಬದಲಾಗುವುದಿಲ್ಲ; ಅದನ್ನು ಹಾಗೆಯೇ ಬಿಟ್ಟರೆ ಅದು ಕ್ರುತಕವಾಗುತ್ತಾ ಹೋಗಿ ತನ್ನ ಜೀವಂತಿಕೆಯನ್ನು ಕಳೆದುಕೊಳ್ಳುತ್ತದೆ; ಮಾತಿಗೆ ಹೊಂದಿಕೊಳ್ಳುವ ಹಾಗೆ ಅದನ್ನು ಯಾರಾದರೂ ಬರಹಗಾರರು ಬದಲಾಯಿಸುತ್ತಿದ್ದಲ್ಲಿ ಮಾತ್ರ ಅದು ಜೀವಂತವಾಗಿ ಉಳಿಯಬಲ್ಲುದು. ಇಂತಹ ಇನ್ನೂ ಹಲವು ವಿಶಯಗಳು ಬಾಶೆಯೆಂದರೆ ಮುಕ್ಯವಾಗಿ ಮಾತಲ್ಲದೆ ಬರಹವಲ್ಲ ಎಂಬುದನ್ನು ಬೆಂಬಲಿಸುತ್ತವೆ”**[೨] ಎನ್ನುವ ಮೂಲಕ ಬರಹಕ್ಕಿಂತ ಮಾತಿಗೆ ಪ್ರಾಮುಖ್ಯತೆ ಸಿಗಬೇಕೆಂದು ವಾದಿಸುತ್ತಾರೆ. ಈ ಮೂಲಕ ಸಂಸ್ಕೃತ ಪದಗಳ ಬಳಕೆ ಮತ್ತು ಅವುಗಳನ್ನು ಕನ್ನಡದಲ್ಲಿ ಬಳಸುವ ಅನಿವಾರ್ಯತೆಗಳ ಕುರಿತ ಚಿಂತನೆ ಇಲ್ಲಿದೆ.

ಕನ್ನಡದ ಪದಗಳ ಬಳಕೆ ಕುರಿತು ಜನಮಾನಸದಲ್ಲಿ ಇರುವ ತಪ್ಪು ಕಲ್ಪನೆಗಳನ್ನು ಇಲ್ಲವಾಗಿಸಲು ಡಿ ಎನ್ ಶಂಕರ ಬಟ್ಟ ಮತ್ತು ಕೆ. ವಿ. ನಾರಾಯಣ ಪ್ರಯತ್ನಿಸುತ್ತಿದ್ದಾರೆ. ಅವರ ಕೃತಿಗಳಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್ ಪದಗಳ ಬದಲಾಗಿ ಕನ್ನಡದ ಪದಗಳ ಬಳಕೆಯ ಸಾಧ್ಯತೆಗಳನ್ನು ಶೋಧಿಸುತ್ತಿದ್ದಾರೆ. ಪ್ರಸ್ತುತ ಅಧ್ಯಯನದ ಮುಖ್ಯ ಭಾಗವಾಗಿರುವ ಕನ್ನಡ ಭಾಷೆಯಲ್ಲಿ ನಡೆದಿರುವ ಬಿಡುಗಡೆಯ ಚಿಂತನೆಗಳ ಕುರಿತು ಈ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೬.೪. ಕನ್ನಡ ನುಡಿ: ಭಾಷಿಕ ಬಿಡುಗಡೆಯ ಸಾಧ್ಯತೆಗಳು

೬.೪.೧ ಹೊಸ ಬರಹದ ಪ್ರಯೋಗ

ಡಿ. ಎನ್. ಶಂಕರ ಬಟ್ಟರ ಹೊಸ ಬರಹದ ಕೃತಿಗಳಿಗೆ ಕೆಲವರಿಂದ ಈ ಹಾದಿಯಲ್ಲಿ ಯಾರೂ ನಡೆಯಲಾರರು ಎಂಬ ಅನುಮಾನ ವ್ಯಕ್ತವಾಗಿತ್ತು. ಜೊತೆಗೆ ಶಂಕರ ಬಟ್ಟರು ಏಕಾಂಗಿಯಾಗುತ್ತಾರೆಯೇ? ಎಂಬ ಪ್ರಶ್ನೆ ಕೂಡ ಎದುರಾಗಿತ್ತು. ಆದರೆ, ಅವರು ರೂಪಿಸಿದ ಹೊಸ ಬರಹವನ್ನು ಕನ್ನಡದಲ್ಲಿ ಪ್ರಯೋಗಕ್ಕೆ ಒಳಪಡಿಸಿದ ಕೆಲವು ಉದಾಹರಣೆಗಳಿವೆ. ಈ ಮೂಲಕ ಕನ್ನಡದಲ್ಲಿ ಸಂಸ್ಕೃತ ವ್ಯಾಕರಣ ಮಾದರಿಗಳನ್ನು ಹೊರತುಪಡಿಸಿದ, ಮಹಾಪ್ರಾಣಾಕ್ಷರಗಳು, ಋ, ಐ, ಔ, ೞ ಗಳು ಇಲ್ಲದ ಭಾಷಿಕ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಮುಂದಿನ ಭಾಗಗಳಲ್ಲಿ ಕೆಲವು ಪ್ರಯೋಗಗಳನ್ನು ಉದಾಹರಿಸಲಾಗಿದೆ.

ಪಠ್ಯ ಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ ಎಂಬ ಪಿಎಚ್.ಡಿ., ಪ್ರಬಂಧವನ್ನು ಆರ್. ಚಲಪತಿಯವರು ಕೃತಿಯಾಗಿ ಹೊರತಂದಿದ್ದು, ಇದರಲ್ಲಿ ಡಿ. ಎನ್. ಶಂಕರ ಬಟ್ಟರ ಹೊಸ ಬರಹವನ್ನು ಬಳಸಲಾಗಿದೆ. ಈ ಕುರಿತು ಚಲಪತಿಯವರ ಅಭಿಪ್ರಾಯ ಹೀಗಿದೆ: “ಪ್ರಸ್ತುತ

ಅಧ್ಯಯನದ ಬರವಣಿಗೆಯಲ್ಲಿ ಉದ್ದೇಶಪೂರ್ವಕವಾಗಿಯೆ ಷ, ಞ, ೯ – ಅರ್ಕಾವೊತ್ತು ಅಕ್ಶರಗಳನ್ನು ಬಳಸಲಾಗಿಲ್ಲ. ಪರ್ಯಾಯವಾಗಿ ಉಚ್ಚಾರಣೆಗೆ ಅನುಕೂಲವೂ, ಸ್ಪಶ್ಟವೂ, ಅರ್ಧಪೂರ್ಣವೂ ಆಗಿ ಬಳಸಬಹುದಾಗಿರುವ–ಬಳಕೆಯಲ್ಲಿರುವ 'ಶ' 'ನ'ವೊತ್ತು (್ನ), ಮತ್ತು 'ರ' ಅಕ್ಶರಗಳನ್ನು ಬಳಸಲಾಗಿದೆ"[೯೩] ಎನ್ನುತ್ತಾರೆ. ಈ ಕೃತಿಯಲ್ಲಿ ಕೂಡ ಶಂಕರ ಬಟ್ಟರು ಪ್ರಯೋಗಿಸುತ್ತಿರುವ ಬರಹವನ್ನು ಬಳಸಿಯೇ ಕೃತಿಯನ್ನು ರಚಿಸಲಾಗಿದೆ. ಈ ಮೂಲಕ ಕನ್ನಡವನ್ನು ಸಂಸ್ಕೃತದ ಚಹರೆಗಳಿಂದ ಬಿಡುಗಡೆಯ ಆರಂಭಿಕ ಯತ್ನವನ್ನು ಬೆಂಬಲಿಸಲಾಗಿದೆ. ಈ ಕೃತಿಯಲ್ಲಿ ಶಂಕರ ಬಟ್ಟರ ಪ್ರಯೋಗಗಳ ಉದಾಹರಣೆಗಳು ಇಂತಿವೆ:

ಪ್ರಯೋಗ	**ಪ್ರಚಲಿತ ರೂಪ**
ಇಂಗ್ಲಿಶ್	ಇಂಗ್ಲಿಷ್
ಮೂರ್ಕ	ಮೂರ್ಖ
ಕರ್ನಾಟಕ	ಕರ್ನಾಟಕ
ಶಿಕ್ಶಣ	ಶಿಕ್ಷಣ
ನಿರ್ಲಕ್ಶಿಸಿ	ನಿರ್ಲಕ್ಷಿಸಿ
ಕಲಿಕಾರ್ತಿಗಳು	ಕಲಿಕಾರ್ಥಿಗಳು
ವಿದ್ಯಾರ್ತಿಗಳು	ವಿದ್ಯಾರ್ಥಿಗಳು
ಸಂದರ್ಬ	ಸಂದರ್ಭ
ಸ್ಪಶ್ಟ	ಸ್ಪಷ್ಟ ಇತ್ಯಾದಿ

ಹೀಗೆ ಕೃತಿಯುದ್ದಕ್ಕೂ ಹೊಸ ಬರಹದ ಮಾದರಿಯಲ್ಲಿ ಕೃತಿ ರಚನೆಯಾಗಿದ್ದು ಕೆಲವೆಡೆ ಮಹಾಪ್ರಾಣಾಕ್ಷರಗಳನ್ನೂ ಉಳಿಸಿಕೊಳ್ಳಲಾಗಿದೆ. ಉದಾಹರಣೆಗೆ ಪಥ್ಯ, ಸ್ಥಾಪನೆ ಇತ್ಯಾದಿ.

ಡಿ. ಎನ್. ಶಂಕರ ಬಟ್ಟರ ಹೊಸ ಬರಹದ ಮಾದರಿಯಲ್ಲಿ ಮಸ್ಕಿ ಕನ್ನಡದಾಗ ವಿಬಕ್ತಿ ರೂಪಗಳು ಎಂಬ ಕೃತಿಯನ್ನು ಬಸವರಾಜ ಕೋಡಗುಂಟಿಯವರು ರಚಿಸಿದ್ದಾರೆ. ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯ ತನ್ನ ಪ್ರಸಾರಾಂಗದಿಂದಲೇ ಹೊಸ ಬರಹದ ಕೃತಿಯನ್ನು ಮುದ್ರಿಸುವ ಮೂಲಕ ಹೊಸ ಆಲೋಚನೆಗಳಿಗೆ ಮುಕ್ತವಾಗಿರುವುದಕ್ಕೆ ಸಾಕ್ಷಿಯಾಗಿದೆ. ಈ ಕೃತಿ ಕುರಿತು ಎ. ಮುರಿಗೆಪ್ಪ ಹೀಗೆ ಅಭಿಪ್ರಾಯಪಡುತ್ತಾರೆ: "ಹೊಸಗಾಲ, ಸೊಲ್ಲರಿಮೆ (ನುಡಿಜ್ಞಾನ), ಊನ (ಕೊರತೆ), ಸಜ್ಜಿಕೆ (ಚೌಕಟ್ಟು), ಸೂಲ್ಗಟ್ಟು (ವ್ಯಾಕರಣ), ಬಡಗನ್ನಡ (ಉತ್ತರ ಕನ್ನಡ), ಹೆಸರ್ಪದ (ನಾಮಪದ), ಒಟ್ಟು (ಪ್ರತ್ಯಯ), ಸೊಟ್ಟಕ್ಕರ (Antique) ಗಿಡ್ಡಸ್ವರ (ಹ್ರಸ್ವಸ್ವರ), ಒಂಟಿಪ್ರಿಯತೆ ಹೀಗೆ ಹೊಸ ಪದಗಳ ಸೃಷ್ಟಿ, ಹೊಸ ಅರ್ಥ ವಿಧಾನವನ್ನು ಗ್ರಂಥದ ಉದ್ದಕ್ಕೂ ಕಾಣಬಹುದಾಗಿದೆ"[೯೪] ಎನ್ನುತ್ತಾರೆ.

ತಮ್ಮ ಹೊಸ ಬರಹದ ಕೃತಿ ಕುರಿತು ಬಸವರಾಜ ಕೋಡಗುಂಟಿಯವರ ಅಭಿಪ್ರಾಯ ಹೀಗಿವೆ: "ಕನ್ನಡ ಲಿಪಿಯ ಇತಿಹಾಸವನ್ನು ಗಮನಿಸಿದರೆ ಲಿಪಿ ಬದಲಾವಣೆಗೆ ಕನ್ನಡ ಸಮಾಜ ಯಾವತ್ತು ತೆರೆದುಕೊಂಡಿರುವುದು ಕಂಡುಬರುತ್ತದೆ. ಕನ್ನಡ ಶಾಸನ, ಹಸ್ತಪ್ರತಿಗಳ ಕನ್ನಡದಲ್ಲಿ ಕಂಡುಬರುವ ಸಾಷ್ಟು ವಯ್ವಿದ್ಯಮಯವಾದ ಬರವಣಿಗೆಯಂತದೆ ಒಂದು ಬರವಣಿಗೆ ನನ್ನದು. ಕನ್ನಡದ ಹಿರಿಯ ವಯ್ಯಾಕರಣಿಗಳಲ್ಲಿ ನಾಗವರ್ಮ, ಕೇಶಿರಾಜ, ಎಚ್. ಎಸ್. ಬಿಳಿಗಿರಿ, ಡಿ. ಎನ್. ಶಂಕರಬಟ್ ಮೊದಲಾದವರೆಲ್ಲ ಈಗ ಕನ್ನಡದಲ್ಲಿ ಬಳಸುತ್ತಿರುವ ಲಿಪಿಯ ಬಗೆಗೆ ಸಹಮತ ತೋರಿಸಿಲ್ಲ ಎಂಬುದು ನಿಜ. ಇದೊಂದು ಪ್ರಯೋಗವೆಂದು ಪರಿಗಣಿಸಬೇಕು"[೯೫] ಎಂದು ಅಭಿಪ್ರಾಯಪಡುತ್ತಾರೆ. ಈ ಕೃತಿಯಲ್ಲಿ ಕೆಲವು ಹೊಸ ಪದಗಳನ್ನು ಬಳಕೆಗೆ ತರಲಾಗಿದೆ. ಉದಾಹರಣೆಗೆ:

ಹೊಸ ರೂಪ	**ಪ್ರಚಲಿತ ರೂಪ**
ಅಕ್ಕರ ಸರ	ವರ್ಣಮಾಲೆ
ಅಟ್ಟ	ಟೇಬಲ್
ಅರಿಗ	ವಿದ್ವಾಂಸ
ಆರಯ್ಪು	ಸಂಶೋಧನೆ
ಉದ್ದಕ್ಕರ	ದೀರ್ಘಸ್ವರ
ಉಲಿ	ಧ್ವನಿ
ಒಳಪಿಡಿ	ಪರಿವಿಡಿ
ಕಲ್ಬಾಟ್ಟು	ಶಾಸನ
ಕೊರಳಿಸದ	ಅಘೋಷ ಧ್ವನಿ
ಕೊರಳಿಸಿದ	ಘೋಷ ಧ್ವನಿ
ಗಿಡ್ಡಕ್ಕರ	ಹ್ರಸ್ವಸ್ವರ
ಚುಣೆ	ಮೊದಲ
ತೆಂಕು ದ್ರಾವಿಡ	ದಕ್ಷಿಣ ದ್ರಾವಿಡ
ನಡು ದ್ರಾವಿಡ	ಮಧ್ಯ ದ್ರಾವಿಡ
ಬಡ ದ್ರಾವಿಡ	ಉತ್ತರ ದ್ರಾವಿಡ
ಮಾತದ್ಯಯನಕಾರ	ಭಾಷಾ ವಿಜ್ಞಾನಿ

ಮಾತಿನ ಮನೆತನ	ಭಾಷಾ ಕುಟುಂಬ
ಸೊನ್ನೆ ಒಟ್ಟು	ಶೂನ್ಯ ಪ್ರತ್ಯಯ
ಸೊಲ್ಲಟ್ಟು	ವ್ಯಾಕರಣ
ಸೊಲ್ಲರಿಮೆ	ಭಾಷಾ ವಿಜ್ಞಾನ
ಹೆಸರ್ಪದ	ನಾಮಪದ
ನಯ್ರುತ್ಯ	ನೈಋತ್ಯ ಇತ್ಯಾದಿ.

‘ಮಂದಿಯಾಳ್ವಿಕೆ’ಯಲ್ಲಿ ಕನ್ನಡಿಗ ಕನ್ನಡಿಗರ ಈವೊತ್ತಿನ ಸವಾಲುಗಳು’ ಎಂಬ ಕೃತಿಯನ್ನು ಕಿರಣ್ ಬಾಟ್ನಿಯವರು ರಚಿಸಿದ್ದು, ಇದರಲ್ಲಿ ಡಿ. ಎನ್. ಶಂಕರ ಬಟ್ಟರ ಹೊಸ ಬರಹವನ್ನು ಅನುಸರಿಸಲಾಗಿದೆ. ತಮ್ಮ ಕೃತಿ ಕುರಿತು ಕಿರಣ್ ಬಾಟ್ನಿಯವರು ಹೊಸ ಬರಹದಲ್ಲೇ ಉಲ್ಲೇಖಿಸಿದ್ದಾರೆ: “ಬಾರತವು ಒಂದು ಮಂದಿಯಾಳ್ವಿಕೆ(ಪ್ರಜಾಪ್ರಬುತ್ವ) ಎಂದು ಕರೆಸಿಕೊಳ್ಳುತ್ತದೆ. ಆದರೆ, ಹಾಗೆ ಕರೆಸಿಕೊಳ್ಳಲು ಅದು ನಿಜಕ್ಕೂ ತಕ್ಕುದಾಗಿದೆಯೆ? ಕನ್ನಡ–ಕನ್ನಡಿಗ–ಕರ್ನಾಟಕಗಳು ಬಾರತದಲ್ಲಿ ಎಂತಹ ಸ್ತಾನವನ್ನು ಪಡೆದುಕೊಂಡಿವೆ ಎಂದು ಹತ್ತಿರದಿಂದ ಗಮನಿಸುತ್ತಿರುವವರಲ್ಲಿ ಈ ಪ್ರಶ್ನೆ ಏಳುವುದು ಸಹಜ”[೯೬] ಎಂದಿದ್ದಾರೆ. ಮೇಲಿನ ಉಲ್ಲೇಖದಲ್ಲಿ ಭಾರತ – ಬಾರತ, ಪ್ರಜಾಪ್ರಭುತ್ವ – ಪ್ರಜಾಪ್ರಬುತ್ವ, ಸ್ಥಾನ – ಸ್ತಾನ ಇತ್ಯಾದಿಯಾಗಿ ಹೊಸ ಬರಹವನ್ನು ಅಳವಡಿಸಿಕೊಂಡಿರುವುದನ್ನು ಗಮನಿಸಬಹುದು. ಇಡೀ ಕೃತಿಯಲ್ಲಿ ಇಂತಹ ಹಲವು ಪ್ರಯೋಗಗಳನ್ನು ನಡೆಸಲಾಗಿದೆ. ಉದಾಹರಣೆಗೆ:

ಹೊಸ ರೂಪ	**ಪ್ರಚಲಿತ ರೂಪ**
ಕೂಡಣ	ಸಮಾಜ
ಎತ್ತುಗೆ	ಉದಾಹರಣೆ
ಏರ್ಪಾಡು	ಏರ್ಪಾಡು
ಸ್ತಿತಿ	ಸ್ಥಿತಿ
ಮುಕ್ಯ	ಮುಖ್ಯ
ಮಿಂಬ	ಬ್ಲಾಗ್
ಕಾಸಗಿ	ಖಾಸಗಿ
ಕಯ್	ಕೈ
ಕಯ್‌ಲಾದವರು	ಕೈಲಾದವರು
ಕ್ರಿಶ್ಣ	ಕೃಷ್ಣ
ಗವ್ಡ	ಗೌಡ

ಚರ್ಚೆ	ಚರ್ಚೆ
ಸಂಸ್ತೆ	ಸಂಸ್ಥೆ
ಸರ್ಕಾರ	ಸರ್ಕಾರ
ಪಯ್ಪೋಟಿ	ಪೈಪೋಟಿ
ಪದಾರ್ತ	ಪದಾರ್ಥ
ವಿರೋದ	ವಿರೋಧ ಇತ್ಯಾದಿ.

೬.೫. ಅಂತರ್ಜಾಲದಲ್ಲಿ ಹೊಸ ಬರಹಕ್ಕೆ ಬೆಂಬಲ

ಇನ್ನು honalu.netನಲ್ಲಿ ಮತ್ತು ನುಡಿಕನ್ನಡ ಎಂಬ ವೆಬ್‌ತಾಣಗಳಲ್ಲಿ ಕೂಡ ಡಿ. ಎನ್. ಶಂಕರ ಬಟ್ ಅವರ ಸಂಶೋಧನೆಗಳಿಗೆ ಪೂರಕವಾಗಿ ಮಹತ್ವದ ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಕಿರಣ್ ಬಾಟ್ನಿಯವರು ಡಿ. ಎನ್. ಶಂಕರ ಬಟ್ಟರ ಎಲ್ಲರ ಕನ್ನಡ ಪ್ರಮೇಯದ ಕುರಿತು ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ: "ಎಲ್ಲರ ಕನ್ನಡವನ್ನು ತಪ್ಪುಹೆಜ್ಜೆಯೆನ್ನುವ ನಮ್ಮ ಗೆಳೆಯರಿಗೆ ಒಂದು ದೊಡ್ಡ ಹೆದರಿಕೆಯಿದೆ. ಇಲ್ಲಿಯವರೆಗೆ ಕನ್ನಡದ ಬರಹಜಗತ್ತಿನಲ್ಲಿ ಮೂಡಿರುವ ಎಣಿಕೆಮೀರಿದ ಹೊತ್ತಗೆಗಳನ್ನೆಲ್ಲ ಈ ಚಳುವಳಿಯು ಕಸದ ಬುಟ್ಟಿಗೆ ಎಸೆಯುತ್ತಿದೆ ಎಂಬುದೇ ಅದು. ನಿಜಕ್ಕೂ ಈ ಹೆದರಿಕೆಗೆ ಕಾರಣವಿಲ್ಲ. ಏಕೆಂದರೆ, ಹಾಗೆ ನಮ್ಮ ಹಿಂದಿನವರು ಮಾಡಿಟ್ಟಿರುವುದನ್ನು ಕಡೆಗಣಿಸಿದರೆ ಕನ್ನಡಕ್ಕೆ ಉಳಿಗಾಲವಿಲ್ಲವೆಂಬ ಅರಿವು ನಮಗೆ ಇದ್ದೇ ಇದೆ. 'ನಮ್ಮವರು ಗಳಿಸಿದ ಹೆಸರುಳಿಸಲು' ನಾವು ಟೊಂಕ ಕಟ್ಟಿ ನಿಂತಿರುವವರೇ. ಅವರಿಂದ ಪಡೆಯುವುದನ್ನು ಪಡೆದು ನಮ್ಮದೂ ಒಂದು ಜಗತ್ತಿದೆಯಲ್ಲ, ಅದನ್ನು ಅವರಿಗೆ ಕೈಮುಗಿದು ನಾವೇ ಕಟ್ಟಿಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವಷ್ಟೆ"[೯೭] ಎನ್ನುತ್ತಾರೆ. ಈ ಮೂಲಕ ಹೊಸ ಬರಹವನ್ನು ಅವರು ಸ್ವಾಗತಿಸಿದ್ದಾರೆ.

ಮೇಲಿನ ಈ ಅಭಿಪ್ರಾಯದಲ್ಲಿ ಡಿ. ಎನ್. ಶಂಕರ ಬಟ್ಟರು ಬಳಸುತ್ತಿರುವ ಹೊಸ ಬರಹವನ್ನು ಬಳಸಿದಲ್ಲಿ ಕೆಲವರಲ್ಲಿ ಎದುರಾಗುವ 'ಇದುವರೆಗೆ ಪ್ರಕಟವಾಗಿರುವ ಗ್ರಂಥರಾಶಿಯ ಗತಿಯೇನು?' ಎಂಬ ಆತಂಕಿತ ಪ್ರಶ್ನೆಗೆ ಸರಳ ಪರಿಹಾರವೊಂದನ್ನು ನೀಡಲಾಗಿದೆ. ಇದರಿಂದ ಕನ್ನಡಕ್ಕೆ ಯಾವುದೇ ಬಗೆಯ ಅಡೆತಡೆಗಳು ಎದುರಾಗುವುದಿಲ್ಲ; ಬದಲಾಗಿ ಹಳೆಯದರಿಂದ ಪಡೆದುಕೊಂಡೂ ಹೊಸದನ್ನು ಕಟ್ಟಿಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸಲಾಗಿದೆ.

ಡಿ. ಎನ್. ಶಂಕರ ಬಟ್ಟರು ಕನ್ನಡ ನುಡಿಯಲ್ಲಿ ಆಗಬೇಕಾಗಿರುವ ಮಾರ್ಪಾಟಿನ ಕುರಿತೂ ಅನೇಕರ ವಿರೋಧವಿದೆ. ಇದಕ್ಕೆ ಕೂಡ ಸಮಾಧಾನಕರವಾದ ಉತ್ತರವಿದೆಯೆಂದು ಕಿರಣ್ ಬಾಟ್ನಿ ವಾದಿಸುತ್ತಾರೆ. ಅವರ ಪ್ರಕಾರ: ಮಾರ್ಪಾಟು ಒಂದು ದಡದಿಂದ ಇನ್ನೊಂದು ದಡಕ್ಕೆ ಈಸಿಕೊಂಡು ಹೋಗುವಂತೆ. ಇರುವ ದಡವನ್ನು ಬಿಟ್ಟು ನೀರಿಗೆ ದುಮುಕಿದರೆ ನಾವು ಬದುಕುತ್ತೇವಾ? ನೀರಿನಲ್ಲಿ ಸುಳಿಯಿದ್ದರೆ? ಮೊಸಳೆಯಿದ್ದರೆ? ಹಾವಿದ್ದರೆ? ನಡುವೆ ಉಸಿರು ಕಟ್ಟಿದರೆ? ದೂರದ ದಡ ಸಿಗದೆ ಹೋದರೆ? ಹಿಂತಿರುಗಿ ಈ ದಡಕ್ಕೆ ಬರುವುದಕ್ಕೂ ಆಗದಿದ್ದರೆ?

ಇಂತಹ ಹೆದರಿಕೆಗಳು ಮೊದಮೊದಲಿಗೆ ಈಜುಗಾರರಿಗೆ ಬರುವುದು ಸಹಜ. ಈ ಹೆದರಿಕೆಗಳನ್ನೆಲ್ಲ ಮೆಟ್ಟಿ ನಿಂತವರೇ ಈಜುವುದು, ಈಜಿ ಗುರಿದಡಕ್ಕೆ ತಲುಪುವುದು. ತಲುಪುವ ಆಸೆಯೇ ಅವರನ್ನು ಮುನ್ನುಗ್ಗುವಂತೆ ಮಾಡುವುದು. ಇದು ಎಲ್ಲರ ಕನ್ನಡವೆಂಬ ಈ ಮಾರ್ಪಾಡಿಗೂ ಒಪ್ಪುತ್ತದೆ. ಕೆಲವರಿಗೆ ತಮ್ಮ ಹೆದರಿಕೆಗಳನ್ನು ಮೆಟ್ಟಿ ನಿಲ್ಲಲಾರದೆ ಈಜುವುದೇ ಬೇಡವೆನಿಸುತ್ತಿದೆಯಷ್ಟೇ" ಎನ್ನುವುದು ಅವರ ಅಭಿಪ್ರಾಯವಾಗಿದೆ.

ಹೊಸತನಕ್ಕೆ ಹೊಂದಿಕೊಳ್ಳಬೇಕಾದ ಸಂದರ್ಭದಲ್ಲೆಲ್ಲ ಇಂತಹ ಅನಿಶ್ಚಿತತೆ ಎದುರಾಗುವುದು ಸಹಜ. ಅದನ್ನು ಮೀರಿ ಬೆಳೆಯಬೇಕಾಗುತ್ತದೆ ಎಂಬುದನ್ನು ಮೇಲಿನ ಅಭಿಪ್ರಾಯಗಳು ಮಂಡಿಸುತ್ತವೆ. ಇದು ನಿಜಕ್ಕೂ ಕನ್ನಡವನ್ನು ಹೊಸ ದಿಗಂತಕ್ಕೆ ಕೊಂಡೊಯ್ಯಬೇಕಾದ ಸಂದರ್ಭದಲ್ಲಿ ಬಹುತೇಕರ ಮನಸಿನಲ್ಲಿ ಉಂಟಾಗಿರುವ ಬಿಕ್ಕಟ್ಟು. ಹಳೆಯದನ್ನು ಆಮೂಲಾಗ್ರವಾಗಿ ಬಿಡಲಾಗದ ಹಾಗೂ ಹೊಸದನ್ನು ಅರಗಿಸಿಕೊಳ್ಳಲಾಗದ ಸಾಂಪ್ರದಾಯಿಕ ಮನಸ್ಥಿತಿಯಲ್ಲಿ ಡೋಲಾಯಮಾನ ಸ್ಥಿತಿಗೆ ಒಳಗಾಗುವುದರ ಅವಶ್ಯಕತೆ ಇಲ್ಲವೆಂದು ಕಿರಣ್ ಬಾಟ್ನಿ ವಾದಿಸುತ್ತಾರೆ. ಜೊತೆಗೆ ಈಗಾಗಲೇ ಪ್ರಕಟವಾಗಿರುವ ಹೊತ್ತಗೆಗಳನ್ನು ಭವಿಷ್ಯದಲ್ಲಿ ಬಳಸುವಾಗ ಎದುರಾಗುವ ಸಮಸ್ಯೆಗೂ ಈ ಕೆಳಗಿನ ಪರಿಹಾರವೊಂದನ್ನು ನೀಡುತ್ತಾರೆ.

"ಹಳೆಯುದನ್ನು ಹಳೆಯ ಬರವಣಿಗೆಯಲ್ಲೇ ಉಲ್ಲೇಕಿಸಿದರಾಯಿತು. ಅದರಲ್ಲಿ ಮಹಾಪ್ರಾಣಗಳಿದ್ದರೆ ಇರಲಿ, ಋಕಾರವಿದ್ದರೆ ಇರಲಿ, ಷಕಾರವಿದ್ದರೆ ಇರಲಿ, ಅದಕ್ಕೇನಂತೆ? ಸಂಸ್ಕೃತದ ಪದಗಳೇ ಹೆಚ್ಚಿದ್ದರೆ ಇರಲಿ, ಅದಕ್ಕೇನಂತೆ? ಉಲ್ಲೇಕಿಸುವಾಗ ಹಳೆಯದನ್ನು ಉಳಿಸಿಕೊಂಡು ಅದರ ಬಗ್ಗೆ ನಮ್ಮ ಮಾತನ್ನು ಹೊಸ ಬರವಣಿಗೆಯಲ್ಲಿ ಬರೆದರಾಯಿತು. ಹಳೆಗನ್ನಡದಲ್ಲಿ ಱಕಾರ ಮತ್ತು ೞಕಾರಗಳನ್ನು ಹೀಗೇ ಅಲ್ಲವೇ ನಾವು ನಡೆಸಿಕೊಳ್ಳುತ್ತಿರುವುದು?" ಎಂದು ಅವರು ಪ್ರಶ್ನಿಸುತ್ತಾರೆ. ಈ ಮೂಲಕ ಹಳೆಯ ಕೃತಿಗಳ ಕುರಿತ ಸಮಸ್ಯೆಗೆ ಪರಿಹಾರೋಪಾಯ ಇದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

ಪ್ರಿಯಾಂಕ್ ಕತ್ತಲಗಿರಿಯವರು ಡಿ. ಎನ್. ಶಂಕರಬಟ್ಟರು ಇದೀಗ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಮಹಾಪ್ರಾಣಗಳ ಬಳಕೆಯಲ್ಲಿ ಎದುರಾಗುತ್ತಿರುವ ಸಮಸ್ಯೆಗಳನ್ನು ಕುರಿತ ವಿಚಾರಗಳಿಗೆ ಪೂರಕವಾಗಿ ಮತ್ತಷ್ಟು ವಿಚಾರಗಳನ್ನು ಮಂಡಿಸಿದ್ದಾರೆ. ಅವರ ಪ್ರಕಾರ: "ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಲಕ್ಷಗಟ್ಟಲೆ ಮಕ್ಕಳು ಇವತ್ತಿಗೂ ಮಹಾಪ್ರಾಣಗಳ ಗೊಂದಲಕ್ಕೀಡಾಗುತ್ತಿದ್ದಾರೆ. ಅವರುಗಳಲ್ಲಿ ಕನ್ನಡ ಬರವಣಿಗೆಯನ್ನು ನೆನಪಿಟ್ಟುಕೊಳ್ಳಬಲ್ಲ ಕೆಲವರು ಮಾತ್ರ ಬುದ್ಧಿವಂತರೆಂದು ಕರೆಯಿಸಿಕೊಂಡು ಕಲಿಕೆಯಲ್ಲಿ ಮುಂದಿರುತ್ತಿದ್ದಾರೆ. ಮಿಕ್ಕ ಸಾಕಷ್ಟು ಮಂದಿ, ಎಲ್ಲಿ 'ಶ' ಬರೆಯಬೇಕು ಎಲ್ಲಿ 'ಷ' ಬರೆಯಬೇಕು ಎಂಬ ಗೊಂದಲದಲ್ಲಿ ಸಿಕ್ಕಿಕೊಳ್ಳುತ್ತಿದ್ದಾರೆ. ಯಾವ ಬರಿಗೆಗೆ ಎಲ್ಲಿ ಹೊಟ್ಟೆ ಸೀಳಬೇಕು ಎಂಬುದು ತಿಳಿಯದೆಯೇ ತಮ್ಮ ಒಳಗಣದಿಂದ ಮೂಡಿಬಂದ ಬರವಣಿಗೆಯನ್ನೇ ಬರೆದು, "ತಪ್ಪು" ಎಂದು ಕರೆಯಿಸಿಕೊಳ್ಳುತ್ತಿದ್ದಾರೆ. ಕನ್ನಡಿಗರಾದ ನಮ್ಮ ಮಾತಿನಲ್ಲಿ ಮಹಾಪ್ರಾಣಗಳ ಉಲಿಕೆ ಇರುತ್ತಿದ್ದರೆ, ಕನ್ನಡದ ಮಕ್ಕಳಿಗೆ ಸದ್ದು ಮತ್ತು ಬರಿಗೆಯ (ಅಕ್ಶರ) ನಡುವಣ ನಂಟನ್ನು ಮನಸಿನಲ್ಲಿ ಬೆಸೆದುಕೊಳ್ಳುವುದು ಸುಲಬವಾಗುತ್ತಿತ್ತು. ನಮ್ಮ ಮಾತಿನಲ್ಲಿ ಮಹಾಪ್ರಾಣಗಳ ಉಲಿಕೆ

ಇಲ್ಲದುದರಿಂದ, ಬರವಣಿಗೆಯಲ್ಲಿ ಮಾತ್ರ ಅದನ್ನು ಮೂಡಿಸಬೇಕು ಎಂತಾದಾಗ ಅಂತಹ ಉಲಿಕೆಯನ್ನು ಎಂದಿಗೂ ಕೇಳದಿದ್ದ ಮಕ್ಕಳು ಗೊಂದಲಕ್ಕೀಡಾಗುವುದು ಸಹಜ"[೧೦೦] ಎನ್ನುವ ಮೂಲಕ ಸದ್ಯಕ್ಕೆ ಶಾಲಾಕಾಲೇಜುಗಳಲ್ಲಿ ಬೋಧಿಸಲಾಗುತ್ತಿರುವ ಕನ್ನಡ ಭಾಷೆಯಲ್ಲಿ ಸಂಸ್ಕೃತ ಪ್ರಾಧಾನ್ಯತೆಯಿಂದ ಆಗಿರುವ ಸಮಸ್ಯೆಯನ್ನು ವಿವರಿಸಿದ್ದಾರೆ. ಉಚ್ಚಾರಣೆಯಲ್ಲಿಲ್ಲದೆ ಬರಹದಲ್ಲಿ ಮಾತ್ರ ವ್ಯತ್ಯಾಸ ಇರುವುದರಿಂದಾಗಿ ಇಂದಿನ ವಿದ್ಯಾರ್ಥಿಗಳು ಗೊಂದಲದಲ್ಲಿದ್ದಾರೆ. ಆದರೆ, ಅವರ ಸಮಸ್ಯೆಯನ್ನು ಪರಿಹರಿಸುವ ಬದಲಿಗೆ ಸಂಸ್ಕೃತದ ಮಹಾಪ್ರಾಣಾಕ್ಷರಗಳ ಬಳಕೆಯೇ ಶುದ್ಧ ಕನ್ನಡ ಎಂದು ಇಂದಿಗೂ ಪರಿಗಣಿಸಲಾಗುತ್ತಿದೆ.

ಕನ್ನಡ ಮಾಧ್ಯಮವಿರಲಿ, ಇಂಗ್ಲಿಷ್ ಮಾಧ್ಯಮವಿರಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವಲ್ಲಿ ಇರುವ ಸಮಸ್ಯೆಯಿದು. ಆಡುಮಾತಿನಲ್ಲಿಲ್ಲದ, ಬರಹದಲ್ಲಿ ಮಾತ್ರ ಕಾಣುವ ಮಹಾಪ್ರಾಣಾಕ್ಷರಗಳು ಇಂದಿನ ಬಹುತೇಕ ವಿದ್ಯಾರ್ಥಿಗಳಲ್ಲಿ ಕೀಳರಿಮೆಯನ್ನು ಉಂಟು ಮಾಡುತ್ತಿದೆ. ಇದರಿಂದ ಅವರ ಕಲಿಕೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಇದರೊಂದಿಗೆ ಅವರು ಕನ್ನಡ ಕಲಿಕೆಯಿಂದಲೇ ವಿಮುಖರಾಗುತ್ತಿರುವುದೂ ಸುಳ್ಳಲ್ಲ. ಇದರಿಂದ ಮಹಾಪ್ರಾಣಾಕ್ಷರಗಳಿಲ್ಲದ ಬರಹವನ್ನು ಮಾನ್ಯ ಮಾಡಬೇಕೆಂದು ಪ್ರಿಯಾಂಕ್ ಕತ್ತಲಗಿರಿ ವಾದಿಸುತ್ತಾರೆ.

"ಮಕ್ಕಳು ಕನ್ನಡ ಬಳಸುವಂತೆ ಮಾಡುವ ಕಡೆಗೆ ನಮ್ಮ ಗಮನವಿರಬೇಕಲ್ಲವೇ, ಅಲ್ಪಪ್ರಾಣ ಮಹಾಪ್ರಾಣಗಳೆಂಬ ಚರ್ಚೆಗಳಲ್ಲಿ ನಾವು ಯಾಕೆ ಕಳೆದುಹೋಗಬೇಕು ಎಂಬ ಕೇಳ್ವಿ ಹಲವರಲ್ಲಿ ಮನೆಮಾಡಿದೆ. ಲಕ್ಶಗಟ್ಟಲೆ ಮಕ್ಕಳು ಬರವಣಿಗೆಯಲ್ಲಿ ತೊಡಗಿಕೊಳ್ಳಲು ಮತ್ತು ಓದು/ಕಲಿಕೆಯಲ್ಲಿ ಮುಂದುವರೆಯಲು ಈ ಕಗ್ಗಂಟನ್ನು ಬಿಡಿಸಲೇಬೇಕಿದೆ. ಇಶ್ಟು ದಿನ ಈ ಕಗ್ಗಂಟನ್ನು ಬಿಡಿಸದೇ ಇದ್ದುದರಿಂದಲೇ, ಇವತ್ತಿಗೂ ಹಲವಾರು ಕನ್ನಡಿಗರು ಶಾಲೆಯಲ್ಲಿ ಹಲವು ವರುಶಗಳನ್ನು ಕಳೆದಿದ್ದರೂ ಬರವಣಿಗೆಯನ್ನು ತಮ್ಮದಾಗಿಸಿಕೊಂಡಿಲ್ಲ. ಈ ಕಗ್ಗಂಟನ್ನು ನಾವು ಬಿಡಿಸಿದ್ದೇ ಆದಲ್ಲಿ, ಓದು ಮತ್ತು ಬರಹ ಸಲೀಸೆನಿಸಿ ಹಲವಾರು ಮಕ್ಕಳು ಕಲಿಕೆಯಲ್ಲಿ ಮುಂಬರಲು ತೊಡಗುತ್ತಾರೆ. ಮುಂದಿನ ದಿನಗಳಲ್ಲಿ ಈ ಮಕ್ಕಳೇ ಕನ್ನಡವನ್ನು ಹಲವೆಡೆಗಳಲ್ಲಿ ಬಳಸಲು ತೊಡಗುತ್ತಾರೆ. ಇಂತಹ ಕಗ್ಗಂಟು ಬಿಡಿಸುವ ಕೆಲಸವನ್ನು ಇತರೆ ನಾಡುಗಳೂ ಮಾಡಿವೆ ಮತ್ತದರ ಒಳ್ಳೆ ಪಸಲನ್ನು ಉಂಡಿವೆ, ನಾವು ಕಣ್ತೆರೆದು ನೋಡಬೇಕಶ್ಟೇ"[೧೦೧] ಎನ್ನುವುದು ಅವರ ಅಭಿಪ್ರಾಯವಾಗಿದೆ.

೧೦+೨+೩+೨+೩=೧೮ (ಎಸ್ಎಸ್ಎಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಪಿಎಚ್.ಡಿ., ಸೇರಿ ಒಟ್ಟು ೧೮ ವರ್ಷ) ವರ್ಷಗಳ ಕಾಲ ಕನ್ನಡವನ್ನು ಓದಿರುವವರೂ ಈ ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ಗೊಂದಲದಿಂದ ಬಿಡುಗಡೆ ಹೊಂದಿಲ್ಲದಿರುವುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಆದರೆ ಹಠದಿಂದ ಮಹಾಪ್ರಾಣಗಳನ್ನು ಬರಹದಲ್ಲಿ ಬಳಸಲೇಬೇಕೆಂದು ವಾದಿಸುವವರು ಈ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ವಿಫಲರಾಗಿದ್ದಾರೆ. ಆದರೆ ಇದಕ್ಕೆ ಡಿ. ಎನ್. ಶಂಕರಬಟ್ಟರು ಮುಂದಿಟ್ಟಿರುವ ಪರಿಹಾರವನ್ನು ಮಹಾಪ್ರಾಣ ಪ್ರಿಯರು ಒಪ್ಪಿಕೊಳ್ಳಲು ತಯಾರಿಲ್ಲ.

ಅಲ್ಲದೇ ಹೊಸ ಪದ ಸೃಷ್ಟಿ ಹಾಗೂ ಇಂಗ್ಲಿಶ್ ಮೊದಲಾದ ಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡುವ ಸಮಯದಲ್ಲಿ ಅನವಶ್ಯಕವಾಗಿ ಸಂಸ್ಕೃತ ಭಾಷೆಯ ಮೊರೆ ಹೋಗಲಾಗುತ್ತಿದೆ. ಈ ಸಮಸ್ಯೆಯನ್ನು ಪರಿಹರಿಸಲು ಸ್ವತಃ ಶಂಕರಬಟ್ಟರೇ ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು ಎಂಬ ಹೊತ್ತಗೆಯನ್ನು ರಚಿಸಿದ್ದಾರೆ. ಅವರ ಪ್ರಕಾರ: **"ಕನ್ನಡಕ್ಕೆ ಹೊಸ ಪದಗಳು ಬೇಕಾದಾಗಲೆಲ್ಲ ಅವನ್ನು ಸಂಸ್ಕ್ರುತದ ಪದ ಮತ್ತು ಒಟ್ಟು(ಪ್ರತ್ಯಯ)ಗಳನ್ನು ಬಳಸಿ ಉಂಟುಮಾಡಿಕೊಳ್ಳುವ ಇನ್ನೊಂದು ಕೆಟ್ಟ ಚಾಳಿಯೂ ಕನ್ನಡದ ಬರಹಗಾರರಲ್ಲಿ ಮತ್ತು ಪಂಡಿತರಲ್ಲಿ ಹಲವಾರು ವರ್ಶಗಳಿಂದ ಬೆಳೆದುಬಂದಿದೆ. ಅವರ ಮಟ್ಟಿಗೆ ಕನ್ನಡ ಪದಗಳು ಮುಟ್ಟಬಾರದ (ಅಸ್ಪ್ರುಶ್ಯ) ಪದಗಳು. ನಿಜಕ್ಕೂ ಅವರು ಉಂಟುಮಾಡಿರುವ ಪದಗಳು ಕನ್ನಡದವೂ ಅಲ್ಲ, ಸಂಸ್ಕ್ರುತದವೂ ಅಲ್ಲ. ಅವನ್ನು 'ತ್ರಿಶಂಕು' ಪದಗಳೆಂದು ಕರೆಯಬಹುದು. ಇವತ್ತು ಕನ್ನಡ ಬರಹಗಳಲ್ಲಿ ಇಂತಹ ತ್ರಿಶಂಕು ಪದಗಳು ತುಂಬಿತುಳುಕುತ್ತಿವೆ"**[೧೦೨] ಎನ್ನುತ್ತಾರೆ. ಇದರ ದುಷ್ಪರಿಣಾಮ ಕನ್ನಡ ಬಳಕೆಯ ನೆಲೆಯಲ್ಲಿ ಉಂಟಾಗುತ್ತಿದೆ. ಅನವಶ್ಯಕವಾಗಿ ಸಂಸ್ಕೃತದ ಮೊರೆ ಹೋದ ಪರಿಣಾಮದಿಂದಾಗಿ ಕನ್ನಡದಲ್ಲಿ ಸಂಸ್ಕೃತ ಪಾರಮ್ಯ ಹೆಚ್ಚುವುದರ ಜೊತೆಗೆ ಕನ್ನಡದಲ್ಲಿ ಹೊಸ ಪದಗಳು ಸೃಷ್ಟಿಯಾಗುವುದರಲ್ಲಿ ಕೊರತೆಯುಂಟಾಗುತ್ತಿದೆ. ಇದರಿಂದ ಬಿಡುಗಡೆ ಹೊಂದಬೇಕೆಂಬುದು ಶಂಕರಬಟ್ಟರ ವಾದ.

ಇದಕ್ಕೆ ಸಾಕಷ್ಟು ಉದಾಹರಣೆಗಳನ್ನೂ ಅವರು ಕೊಡುತ್ತಾರೆ. **"ಕನ್ನಡದವೆಂದು ಹೇಳಿಕೊಳ್ಳುತ್ತಿರುವ ಪಾರಿಬಾಶಿಕ ಪದಕೋಶವೊಂದನ್ನು ಬಿಡಿಸಿ ನೋಡಿದೆವಾದರೆ ಈ ವಿಶಯ ಸ್ಪಶ್ಟವಾಗುತ್ತದೆ. ಅದರಲ್ಲಿ ನೂರಕ್ಕೆ ಎಂಬತ್ತರಶ್ಟು (ಇಲ್ಲವೇ ಅದಕ್ಕಿಂತಲೂ ಹೆಚ್ಚು) ತ್ರಿಶಂಕು ಪದಗಳಿರುವುದನ್ನು ಕಾಣಬಹುದು. ಅವುಗಳಿಂದಾಗಿ ಇವತ್ತು ಕನ್ನಡದಲ್ಲಿ ಬರೆದ ವಿಜ್ನಾನ ಬರಹಗಳನ್ನು ಅರ್ತಮಾಡಿಕೊಳ್ಳುವುದು ಹೆಚ್ಚಿನ ಕನ್ನಡಿಗರಿಗೂ ಕಶ್ಟವೆನಿಸುತ್ತದೆ"**[೧೦೩] ಎನ್ನುವ ಮೂಲಕ ಕನ್ನಡದಲ್ಲಿ ಹೊಸ ಪದಗಳನ್ನು ನಿರ್ಮಿಸುವ ಸಮಯದಲ್ಲಿ ವ್ಯಕ್ತವಾಗುತ್ತಿರುವ ಸಂಸ್ಕೃತ ಪ್ರೇಮವನ್ನು ವಿವರಿಸುತ್ತಾರೆ. ಉದಹರಣೆಗೆ: ಅಭಿಯಂತರರು, ಆರಕ್ಷಕ ಠಾಣೆ ಮೊದಲಾದ ಪದಗಳನ್ನು ಮೇಲಿನ ವಾದಕ್ಕೆ ಪೂರಕವಾಗಿ ಪರಿಶೀಲಿಸಬಹುದು. ಇಂಜಿನಿಯರ್, ಪೊಲೀಸ್ ಎಂಬ ಸುಲಭ ಸಂವಹನದ ಪದಗಳ ಬದಲಿಗೆ ಅರ್ಥವಾಗದ ಪದಗಳನ್ನು ಸೃಷ್ಟಿಸಿ, ಚಾಲ್ತಿಗೆ ತರುವ ಪ್ರಯತ್ನವನ್ನು ಮಾಡಲಾಗಿದೆ. ಆದರೆ ಅವುಗಳು ಜನರ ಬಾಯಲ್ಲಿ ಬಳಕೆಯಲ್ಲಿಲ್ಲ. ಜೊತೆಗೆ ಇವು ಕನ್ನಡದ ಪದಗಳೂ ಅಲ್ಲವೆಂಬುದನ್ನು ಈ ಪದಗಳಲ್ಲಿ ಬಳಕೆಯಾಗಿರುವ ಅಕ್ಷರಗಳೇ ಸಾಬೀತುಮಾಡುತ್ತವೆ.

ಇನ್ನು ಕನ್ನಡದಲ್ಲಿ ಹೊಸಪದ ನಿರ್ಮಾಣದ ಶಕ್ತಿಯೇ ಇಲ್ಲವೆಂಬುದು ಕೆಲವರ ವಾದ. ಇಂತಹ ಅಭಿಪ್ರಾಯಗಳನ್ನು ಕುರಿತು ಡಿ. ಎನ್. ಶಂಕರಬಟ್ಟರು ಹೀಗೆ ಹೇಳುತ್ತಾರೆ: **"ಹೊಸಪದಗಳನ್ನು ಉಂಟುಮಾಡಲು ಬೇಕಾಗುವ ಪದಗಳು ಮತ್ತು ಒಟ್ಟುಗಳು ಕನ್ನಡದಲ್ಲಿಲ್ಲ ಎಂಬ ಅನಿಸಿಕೆ ಹಲವು ಪಂಡಿತರಲ್ಲಿರುವುದು ಈ ರೀತಿ ಸಂಸ್ಕ್ರುತದ ಮೊರೆಹೊಕ್ಕು ತ್ರಿಶಂಕು ಪದಗಳನ್ನು ಉಂಟುಮಾಡುತ್ತಿರುವುದಕ್ಕೆ ಒಂದು ಕಾರಣ. ಸಂಸ್ಕ್ರುತ ಪದಗಳಿಗಿರುವ ಮರ‍್ಯಾದೆ ಕನ್ನಡ ಪದಗಳಿಗಿಲ್ಲ ಎನ್ನುವಂತಹ ಕನ್ನಡದ ಮೇಲಿರುವ ಕೀಳರಿಮೆ ಇನ್ನೊಂದು ಕಾರಣ. ಇವೆರಡೂ ತಪ್ಪು ಅನಿಸಿಕೆಗಳು. ಆದರೆ ಇವುಗಳಿಂದಾಗಿ ಇವತ್ತು ಕನ್ನಡದ ಮೇಲೆ ಸಂಸ್ಕ್ರುತದ ಹೊರೆ ಹೆಚ್ಚುತ್ತಿದ್ದು, ಕನ್ನಡ ಬರಹಗಳು ಹೆಚ್ಚಿನ ಕನ್ನಡಿಗರಿಗೂ ಅರ್ತವಾಗದ ಕಗ್ಗಂಟುಗಳಾಗುತ್ತಿವೆ. ಹೆಚ್ಚು ಹೆಚ್ಚು ತ್ರಿಶಂಕು ಪದಗಳನ್ನು ಬಳಸಿರುವ ಬರಹಗಳು ತಮ್ಮ**

ಓದುಗರನ್ನು ಬರೇ 'ಮಂತ್ರಮುಗ್ಧ'ರನ್ನಾಗಿ ಮಾಡುತ್ತವಲ್ಲದೆ ಅವರಲ್ಲಿ ಹೊಸ ಅರಿವನ್ನೇನೂ ಹುಟ್ಟಿಸುವುದಿಲ್ಲ. ಅಂತಹ ಬರಹಗಳು ತಮ್ಮ ಮೂಲಗುರಿಯನ್ನು ತಲಪುವುದೇ ಇಲ್ಲ"[೧೦೪] ಎನ್ನುತ್ತಾರೆ. ಕನ್ನಡ ಭಾಷಿಕರಲ್ಲೇ ಕನ್ನಡದ ಬಗೆಗೆ ನೆಲೆಯಾಗಿರುವ ಕೀಳರಿಮೆಯನ್ನು ಹೋಗಲಾಡಿಸುವ ಸಲುವಾಗಿ ಅವರು ಅನೇಕ ಪ್ರಮೇಯಗಳನ್ನು ಮಂಡಿಸುತ್ತಿದ್ದಾರೆ. ಮತ್ತು ಪಂಡಿತರ ಸಂಸ್ಕೃತಪ್ರೇಮಕ್ಕೆ ಅಷ್ಟೇನೂ ಬೆಲೆ ನೀಡಬೇಕಿಲ್ಲವೆಂದು ಡಿ. ಎನ್. ಶಂಕರ ಬಟ್ಟರು ಸಮರ್ಥವಾಗಿ ವಾದವನ್ನು ಮಂಡಿಸುತ್ತಾರೆ. ಹೊಸಪದ ನಿರ್ಮಾಣದಿಂದ ಸಂವಹನ ಇನ್ನಷ್ಟು ಜಟಿಲವಾಗುತ್ತಿರುವುದಕ್ಕೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. (ಉದಾಹರಣೆಗೆ: ತೆರೆದ ಹೃದಯದ ಶಸ್ತ್ರಚಿಕಿತ್ಸೆ – Open heart surgery).

"ಈ ರೀತಿ ಸಂಸ್ಕೃತದ ಕಡೆಗೆ ಮೋರೆಮಾಡಿರುವ ಕನ್ನಡ ವಿದ್ವಾಂಸರು ಕನ್ನಡಕ್ಕೆ ದೊಡ್ಡ ಅನ್ಯಾಯವನ್ನು ಮಾಡುತ್ತಿದ್ದಾರೆ. ಅವರ ಮಟ್ಟಿಗೆ ಕನ್ನಡದ್ದೇ ಆದ ಪದಗಳು ಮುಟ್ಟಬಾರದ (ಅಸ್ಪೃಶ್ಯ) ಪದಗಳಾಗಿವೆ! ಒಂದು ಹೊಸ ಮನೆಗೆ, ಹೊಸ ಅಂಗಡಿಗೆ ಇಲ್ಲವೇ ಹೊಸ ಉತ್ಪಾದನೆಗೆ ಹೆಸರು ಕೊಡಬೇಕಾದಾಗ, ಕನ್ನಡದವೇ ಆದ ಪದಗಳು ಅವರ ಕಣ್ಣಿಗೆ ಬೀಳುವುದೇ ಇಲ್ಲ ಎಂಬುದನ್ನು ಗಮನಿಸಿದೆವಾದರೆ ನಿಜಕ್ಕೂ ಕನ್ನಡಕ್ಕೆ ಎಂತಹ ಹೀನಾಯ ಸ್ತಿತಿ ಬಂದೊದಗಿದೆ ಎಂಬುದನ್ನು ಊಹಿಸಬಹುದು"[೧೦೫] ಎನ್ನುವ ಮೂಲಕ ಕನ್ನಡವನ್ನು ಕೀಳಾಗಿ ಕಾಣುತ್ತಿರುವ ಮನೋಧರ್ಮವನ್ನು ಪ್ರಶ್ನಿಸಿದ್ದಾರೆ. ಕನ್ನಡವನ್ನು ಕಲಿತಿರುವ ಬಹುತೇಕರು ಸಂಸ್ಕೃತ ಪದಗಳಿಂದ ತುಂಬಿರುವ ಕನ್ನಡವೇ ಸಮರ್ಥ ಎಂಬ ನಿಲುವನ್ನು ತಾಳಿರುವುದರಿಂದ ಕನ್ನಡದಲ್ಲಿ ಹೊಸ ಪದಗಳ ಸೃಷ್ಟಿ ಸಾಧ್ಯವಾಗುತ್ತಿಲ್ಲ. ಇದರಿಂದ ಭಾಷೆಯ ಬೆಳವಣಿಗೆಯ ಸಾಧ್ಯತೆಗಳು ಮಸುಕಾಗುತ್ತಿವೆ. ಆದರೆ, ನಿಜಕ್ಕೂ ಕನ್ನಡವನ್ನು ಬೆಳೆಸುವ ಕೆಲಸವಾಗಬೇಕಾದರೆ ಕನ್ನಡಕ್ಕಿರುವ ಹೊಸ ಪದ ನಿರ್ಮಾಣದ ಸಾಧ್ಯತೆಗಳ ಶೋಧವಾಗಬೇಕಿದೆ. ಅದಕ್ಕೆ ಮುನ್ನುಡಿ ಬರೆದಿರುವ ಶಂಕರಬಟ್ಟರ ಪ್ರಕಾರ: **"ನಮಗೆ ಬೇಕಾಗಿಬರುವ ಎಂತಹ ಪದಗಳನ್ನು ಬೇಕಿದ್ದರೂ ಸಂಸ್ಕೃತದ ಸಹಾಯವಿಲ್ಲದೆ ಕನ್ನಡದಲ್ಲೇನೇ ಉಂಟುಮಾಡಬಲ್ಲೆವು. ಅಂತಹ ಕಸುವು ಕನ್ನಡಕ್ಕಿದೆ. ಹಾಗೆ ಉಂಟುಮಾಡಲು ಬೇಕಾಗುವ ಸಲಕರಣೆಗಳೆಲ್ಲವೂ ಕನ್ನಡದಲ್ಲಿವೆ. ಇದನ್ನು ತೋರಿಸಿ ಕೊಡುವುದಕ್ಕಾಗಿಯೇ ನಾನು ಈ ಪದಕೋಶವನ್ನು ತಯಾರಿಸಲು ಹೊರಟಿದ್ದೇನೆ"**[೧೦೬] ಎನ್ನುತ್ತಾರೆ. ಈ ಮೂಲಕ ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು ಎಂಬ ಕೃತಿ ರಚನೆಯ ಹಿಂದಿನ ಉದ್ದೇಶವೇ ಕನ್ನಡದಲ್ಲಿ ಹೊಸ ಪದಗಳನ್ನು ಸೃಷ್ಟಿಸಲು ಅವಕಾಶವಿದೆ ಎನ್ನುವುದನ್ನು ತೋರಿಸುವುದು ಎಂದು ಅವರು ಅಭಿಪ್ರಾಯಪಡುತ್ತಾರೆ.

"ಬೇರೆ ನುಡಿಗಳಿಂದ ಪದಗಳನ್ನು ಎರವಲು ಪಡೆಯಬಾರದೆಂದೇನೂ ನಾನು ಹೇಳುತ್ತಿಲ್ಲ. ಇವತ್ತು ಸಾಕಷ್ಟು ಬಳಕೆಗೆ ಬಂದಿರುವ ಪೆನ್ನು, ಪುಸ್ತಕ, ಕೋರ್ಟು, ಕಚೇರಿ, ಮೇಜು, ಕುರ್ಚಿ, ಡಾಕ್ಟರ್, ಸರ್ಜನ್ ಮೊದಲಾದ ಪದಗಳನ್ನು ಬಿಟ್ಟುಕೊಟ್ಟು ಕನ್ನಡದವೇ ಆದ ಪದಗಳನ್ನು ಬಳಸಬೇಕೆಂದೂ ನಾನು ಹೇಳುತ್ತಿಲ್ಲ. ಆದರೆ ಯಾವ ರೀತಿಯ ಪದಕ್ಕೂ ಸಮಾನವಾದಂತಹ ಪದವನ್ನು ಕನ್ನಡದಲ್ಲೇನೇ ಉಂಟುಮಾಡಲು ಸಾದ್ಯ ಎಂಬುದನ್ನು ತೋರಿಸಿಕೊಡುವ ಅವಶ್ಯಕತೆಯಿದೆ ಎಂಬುದಕ್ಕಾಗಿ ಅಂತಹ ಹಲವು ಪದಗಳಿಗೂ ಕನ್ನಡದವೇ ಆದ ಪದಗಳನ್ನು ಇಲ್ಲಿ ಕೊಟ್ಟಿದ್ದೇನೆ"[೧೦೭] ಎನ್ನುತ್ತಾರೆ. ಅವರ ಪ್ರಕಾರ ಕನ್ನಡ ಭಾಷೆಗೆ ಎಂತಹ ಕ್ಲಿಷ್ಟಕರ ಪದಗಳು, ಪಾರಿಭಾಷಿಕ ಪದಗಳನ್ನು ಬೇಕಾದರೂ ಸೃಷ್ಟಿಸಿಕೊಳ್ಳುವ ಶಕ್ತಿಯಿದೆ. ಆದರೆ ಅದನ್ನು ನಾವು ಬಳಸಿಕೊಳ್ಳುತ್ತಿಲ್ಲ. ಮೇಲಿನ ಅವರ ಅಭಿಪ್ರಾಯಗಳಲ್ಲಿ

ಇಂಗ್ಲಿಷ್ ಮತ್ತು ಸಂಸ್ಕೃತ ಪದಗಳ ಬಗೆಗೆ ವೈರತ್ವಭಾವವೇನೂ ಕಂಡುಬರುವುದಿಲ್ಲ. ಅದರ ಬದಲಾಗಿ ಕನ್ನಡದ ಕಸುವನ್ನು ಸಾಬೀತು ಮಾಡುವ ಪ್ರಯತ್ನ ಎದ್ದುಕಾಣುತ್ತದೆ.

ಆದರೆ ಅವರನ್ನು ಸಂಸ್ಕೃತ ಮತ್ತು ಇಂಗ್ಲಿಷ್ ವಿರೋಧಿ ಎಂಬಂತೆ ಬಿಂಬಿಸಲಾಗುತ್ತಿದೆ. ಶಂಕರಬಟ್ಟರ ವಿಚಾರಗಳನ್ನು ತಪ್ಪಾಗಿ ವ್ಯಾಖ್ಯಾನಿಸುತ್ತಿರುವವರ ಮಿತಿಗಳನ್ನೂ ಪ್ರಿಯಾಂಕ್ ಕತ್ತಲಗಿರಿ ಈ ಕೆಳಗಿನಂತೆ ವಿವರಿಸುತ್ತಾರೆ: "ಕನ್ನಡಿಗರಿಗೆ ತಿಳಿದಿರುವ ಪದಗಳನ್ನು ಅವು ಬೇರೆ ನುಡಿಯ ಮೂಲದವೆಂದು ತೆಗೆದುಹಾಕುವ ಕೆಲಸವು ಬೇಕಾಗಿಲ್ಲ, ಹಾಗೆ ಮಾಡಿ ಎಂದು ಶಂಕರ ಬಟ್ಟರು ಹೇಳುತ್ತಿಲ್ಲ. ಸಂಸ್ಕೃತ ಪದಗಳನ್ನು ಬಳಸಬಾರದು ಎಂದು ಶಂಕರ ಬಟ್ಟರು ಸಾರುತ್ತಿದ್ದಾರೆ ಎಂಬುದು ತಪ್ಪು ನಂಬಿಕೆ. ಶಂಕರ ಬಟ್ಟರು ಕನ್ನಡಿಗರಿಗೆ ಗೊತ್ತೇ ಇಲ್ಲದ ಸಂಸ್ಕೃತ ಪದಗಳನ್ನು ಬಳಸುವ ಬದಲಾಗಿ, ಅದೇ ಅರ್ತವನ್ನು ಹೊಂದಿರುವ ಎಲ್ಲರಿಗೂ ತಿಳಿಯುವ ಕನ್ನಡದ್ದೇ ಪದಗಳನ್ನು ಬಳಸುವುದೊಳಿತು ಎಂದು ಹೇಳುತ್ತಿದ್ದಾರೆ. ಎತ್ತುಗೆಗೆ, ಕಾರು, ಬಸ್ಸು, ನಿದಾನ, ಸುಲಬ, ಕಿಟಕಿ ಪದಗಳು ಬೇರೆ ಬೇರೆ ನುಡಿಗಳಿಂದ ಕನ್ನಡಕ್ಕೆ ಬಂದವು. ಹಲವಾರು ಕನ್ನಡಿಗರಿಗೆ ಗೊತ್ತಿರುವ ಈ ಪದಗಳನ್ನು ಬರವಣಿಗೆಯಲ್ಲಿ ಬಳಸುವುದರಿಂದ ಬರಹಗಳು ಓದಲು ತೊಡಕೆನಿಸುವುದಿಲ್ಲ"[೧೦೮] ಎನ್ನುವುದು ಅವರ ಅಭಿಪ್ರಾಯವಾಗಿದೆ.

ಇಂಗ್ಲಿಷ್ ಭಾಷೆ ಯಾವ ಮಡಿವಂತಿಕೆಗೂ ಸಿಲುಕದೆ ಎಲ್ಲ ಭಾಷೆಗಳಿಂದ ಸ್ವೀಕರಿಸುವ ಮೂಲಕ ಶ್ರೀಮಂತವಾಯಿತು. ಹಾಗೆಯೇ ಕನ್ನಡವೂ ಎಲ್ಲ ಭಾಷೆಗಳಿಂದ ಸ್ವೀಕರಿಸುವ ಮೂಲಕ ಶ್ರೀಮಂತವಾಗಬಹುದೆಂಬ ಮೂಢನಂಬಿಕೆ ಕೆಲವರಲ್ಲಿದೆ. ಆದರೆ ನಿಜಕ್ಕೂ ಇಂಗ್ಲಿಶ್ ಮತ್ತು ಕನ್ನಡಗಳನ್ನು ಹಾಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಇಂಗ್ಲಿಷ್‌ಗಿರುವ ಜಾಗತಿಕ ವ್ಯವಹಾರದ ಶಕ್ತಿಯನ್ನು ಕನ್ನಡಕ್ಕೆ ತುಂಬುವಲ್ಲಿ ಇದುವರೆಗಿನ ಯಾವ ಸರ್ಕಾರಗಳೂ ಸಫಲವಾಗಿಲ್ಲ. ಅದು ಆಧುನಿಕೋತ್ತರ ಘಟ್ಟದಲ್ಲಿ ಸುಲಭಸಾಧ್ಯವೂ ಅಲ್ಲ. ಸ್ಥಳೀಯ ರಾಜ್ಯ ಸರ್ಕಾರ ಇದನ್ನು ಆಗು ಮಾಡುವುದು ತೀರಾ ಕಷ್ಟಕರ ಕೆಲಸವಾಗುತ್ತದೆ. ಆದರೆ ಹಿಂದಿಯನ್ನು ರಾಷ್ಟ್ರಭಾಷೆಯೆಂಬ ಹೆಸರಿನಲ್ಲಿ, ಅದನ್ನು ವಿವಿಧ ರಾಜ್ಯಗಳ ಮೇಲೆ ಹೇರಿರುವ ಕೇಂದ್ರ ಸರ್ಕಾರವೂ ಹಿಂದಿಗೆ ಇಂಗ್ಲಿಷ್‌ನಂತೆ ಜಾಗತಿಕ ಭಾಷೆಯ ಸ್ಥಾನವೊಂದನ್ನು ರೂಪಿಸಿಕೊಡುವುದು ಸಾಧ್ಯವಾಗಿಲ್ಲವೆಂಬುದನ್ನು ಗಮನಿಸಬೇಕಿದೆ. ಪ್ರಭುತ್ವ ಶಕ್ತಿಯಿಂದ ಭಾಷೆಗೆ ಇದ್ದಕ್ಕಿದ್ದಂತೆ ಇಂತಹ ಶಕ್ತಿ ಸಿಗುವುದು ಸಾಧ್ಯವಾಗಲಾರದೇನೋ? ಆದರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಪ್ರಬಲವಾಗಿರುವ ಇಂಗ್ಲಿಷ್ ಜೊತೆಗೆ ಪೈಪೋಟಿಗೆ ಕನ್ನಡವನ್ನು ಒಡ್ಡುವುದು ಅಷ್ಟು ಸಮಂಜಸವಲ್ಲ ಎನಿಸುತ್ತದೆ.

ಆದ್ದರಿಂದ ಬೇರೆ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಆಮದು ಮಾಡಿಕೊಳ್ಳುವ ಕುರಿತು ಪ್ರಿಯಾಂಕ್ ಕತ್ತಲಗಿರಿಯವರ ಅಭಿಪ್ರಾಯವೆಂದರೆ: "ಪದಗಳನ್ನು ಕನ್ನಡಕ್ಕೆ ಆಮದು ಮಾಡಿಕೊಳ್ಳುತ್ತಾ ಹೋಗಿ, ಕನ್ನಡವು ಶ್ರೀಮಂತವಾಯಿತು ಎಂದು ಬೀಗುವುದೇ ನಮ್ಮ ಗುರಿಯಾಗಿದ್ದರೆ ಹಾಗೆ ಮಾಡಬಹುದಿತ್ತು. ಆದರೆ, ಆಮದು ಮಾಡಿಕೊಂಡ ಪದಗಳೆಲ್ಲವೂ ಕನ್ನಡಿಗರಿಗೆ ತಿಳಿಯುತ್ತದೋ ಇಲ್ಲವೋ ಎಂದು ನೋಡಬೇಕಾಗಿದೆ. ಕನ್ನಡಿಗರಿಗೆ ತಿಳಿಯದಂತಹ ಪದಗಳನ್ನು ಆಮದು

ಮಾಡಿಕೊಂಡರೆ, ಮತ್ತು ಅಂತಹ ಪದಗಳನ್ನು ಬರಹಗಳಲ್ಲಿ ಬಳಸಿದರೆ, ಆ ಬರಹಗಳು ಹೆಚ್ಚು ಕನ್ನಡಿಗರಿಗೆ ತಿಳಿಯಲಾರದಂತಹ ಬರಹವಾಗಿಬಿಡುತ್ತದೆ."[೧೮೯]

ಭಾಷೆಯ ಪ್ರಾಥಮಿಕ ಅವಶ್ಯಕತೆ ಸಂವಹನ. ಆದರೆ ಪರಭಾಷೆಯ ಪ್ರಭಾವ ಹಾಗೂ ಪದಗಳ ಆಮದಿನ ಕಾರಣದಿಂದ ಎಷ್ಟೋ ವೇಳೆ ಸಂವಹನವೂ ಅಸಾಧ್ಯವಾಗುತ್ತದೆ. ನ್ಯಾಯಾಲಯ, ಪೊಲೀಸ್ ಠಾಣೆ, ಕಂದಾಯ ಇಲಾಖೆ, ಬ್ಯಾಂಕ್ ಮೊದಲಾದ ಸಾರ್ವಜನಿಕ ಇಲಾಖೆಗಳಲ್ಲಿ ಬಳಕೆಯಾಗುವ ಬಹುತೇಕ ಪದಗಳು ಜನಸಾಮಾನ್ಯರಿಗೆ ನಿಲುಕದ ನಕ್ಷತ್ರಗಳಾಗಿವೆ. ಇದಕ್ಕೆ ಕಾರಣವೆಂದರೆ ಇಲ್ಲಿ ಬಳಕೆಯಾಗುತ್ತಿರುವ ಭಾಷೆಯಲ್ಲಿ ಸಂಸ್ಕೃತ ಪದಗಳು ಅಥವಾ ಇಂಗ್ಲಿಶ್‌ನ ಕೆಟ್ಟ ಅನುವಾದಗಳೇ ಕಾರಣವಾಗಿವೆ. ಇದಕ್ಕೆ ಸಂಬಂಧಿಸಿದಂತೆ ಪ್ರಿಯಾಂಕ್ ಕತ್ತಲಗಿರಿಯವರು ಇನ್ನಷ್ಟು ಉದಾಹರಣೆಗಳನ್ನು ಕೊಡುತ್ತಾರೆ. ಅವರ ಪ್ರಕಾರ: "ಸಂಸ್ಕೃತ ಬೇರಿನ ಪದಗಳು ಎಂಬ ಒಂದೇ ಕಾರಣಕ್ಕೆ ಕೆಲವು ಪದಗಳು ಕನ್ನಡಿಗರಿಗೆ ಅರ್ತವಾಗಲಿ, ಆಗದಿರಲಿ ಬರಹಗಳಲ್ಲಿ ಬಳಕೆ ಕಾಣುತ್ತವೆ. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಗಣಿತ ಪಟ್ಯಪುಸ್ತಕಗಳನ್ನು ತಿರುವಿ ಹಾಕಿದರೆ, ಈ ತೆರನಾದ ಪದಗಳು ಕಣ್ಣಿಗೆ ಬೀಳುತ್ತವೆ. "ಅನುಲೋಮಾನುಪಾತ", "ವ್ಯುತ್ಕ್ರಮ", "ಅಪವರ್ತ್ನ", "ಅಪವರ್ತ್ಯ" ಇವು ಇಂತಹ ಪದಗಳಲ್ಲಿ ಕೆಲವು ಮಾತ್ರ. ಕನ್ನಡದಲ್ಲಿ ಪದಗಳಿಲ್ಲ ಎಂದು ಹೇಳುತ್ತ ಸಂಸ್ಕ್ರುತದಿಂದ ನೇರವಾಗಿ ಇಳಿಸಿಕೊಂಡ ಪದಗಳಿವು. ಇಳಿಸಿಕೊಳ್ಳುವಾಗ, "ಇವು ಕನ್ನಡದ ಮಕ್ಕಳಿಗೆ ಅರ್ತವಾಗುತ್ತಾ?" ಎಂಬ ಪ್ರಶ್ನೆಯನ್ನು ಯಾರೂ ಕೇಳಿದಂತಿಲ್ಲ. ಇಶ್ಟೇ ಅಲ್ಲದೇ, ಕನ್ನಡದ್ದೇ ಆದ ಮತ್ತು ಕನ್ನಡಿಗರೆಲ್ಲರಿಗೆ ತಿಳಿಯುವ "ಕೂಡುವುದು/ಕಳೆಯುವುದು" ಪದಗಳನ್ನು ಕಯ್ ಬಿಟ್ಟು "ಸಂಕಲನ/ವ್ಯವಕಲನ" ಪದಗಳನ್ನು ಪಟ್ಯಪುಸ್ತಕಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಎಲ್ಲರಿಗೂ ಅರ್ತವಾಗುವ ಪದಗಳನ್ನು ಕಯ್ ಬಿಟ್ಟು ಕೆಲವರಿಗೆ ಮಾತ್ರ ಅರ್ತವಾಗುವ ಪದಗಳನ್ನು ಬರಹಗಳಲ್ಲಿ ಅಳವಡಿಸಿಕೊಳ್ಳುತ್ತ ಸಾಗುವುದನ್ನೇ ನುಡಿಯ ಶ್ರೀಮಂತಿಕೆ ಎಂದು ನಾವು ನಂಬಿರುವೆವಾದರೆ, ಆ ನಂಬಿಕೆಯನ್ನು ಒರೆಗೆ ಹಚ್ಚಿ ನೋಡುವ ಹೊತ್ತು ಬಂದಿದೆ"[೧೧೦] ಎಂಬ ಅಭಿಪ್ರಾಯವನ್ನು ಗಂಭೀರವಾಗಿ ಪರಿಗಣಿಸಬೇಕಿದೆ.

ಇದು ಕೇವಲ ಗಣಿತ ವಿಷಯಕ್ಕೆ ಮಾತ್ರ ಸೀಮಿತವಲ್ಲ. ಕನ್ನಡ ಮಾಧ್ಯಮದ ವಿಜ್ಞಾನ ಪಠ್ಯಗಳನ್ನು ಕನ್ನಡಕ್ಕಿಂತ ಇಂಗ್ಲಿಷ್‌ನಲ್ಲೇ ಸರಳವಾಗಿ ಅರ್ಥೈಸಿಕೊಳ್ಳಬಹುದೆನಿಸುತ್ತದೆ. ಇದು ಉತ್ಪ್ರೇಕ್ಷೆ ಎನಿಸಿದರೂ ಸತ್ಯ. ಏಕೆಂದರೆ ವಿಜ್ಞಾನ ಬರಹ ಸರಳವಾಗಿರದಿದ್ದಲ್ಲಿ ಸಂಕೀರ್ಣವಾದ ವಿಷಯಗಳನ್ನು ಅರಿತುಕೊಳ್ಳುವುದು ಸಾಧ್ಯವಾಗುವುದಿಲ್ಲ. ಇದರ ದುಷ್ಪರಿಣಾಮ ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಕಲಿಯಬೇಕಾದ ವಿದ್ಯಾರ್ಥಿಗಳ ಕಲಿಕೆಯ ಮೇಲಾಗುತ್ತದೆ. ಇದರಿಂದ ಗುಣಮಟ್ಟದ ಶಿಕ್ಷಣದಿಂದ ಯುವ ಸಮುದಾಯ ವಂಚಿತವಾಗುತ್ತದೆ. ಅದರ ಬದಲಾಗಿ ಸರಳ ಕನ್ನಡದಲ್ಲೇ ಈ ಪಠ್ಯಗಳು ರಚನೆಯಾದರೆ ಕಲಿಕೆಯ ಸಮಸ್ಯೆಗೆ ಪರಿಹಾರ ಸಿಗಬಹುದು ಎನಿಸುತ್ತದೆ.

"ಎರಡು ಸಾವಿರ ವರುಶಗಳ ಹಿಂದೆ ಕನ್ನಡದಲ್ಲಿ ಬರಹ ಮಾಡುತ್ತಿದ್ದವರು ಸಂಸ್ಕ್ರುತವನ್ನೂ ಬಲ್ಲವರಾಗಿದ್ದರು. ಸಂಸ್ಕ್ರುತದಲ್ಲಿ ಬರವಣಿಗೆಯು ಇನ್ನೂ ಮುಂಚೆಂದ ಇದ್ದಿದ್ದರಿಂದ, ಸಂಸ್ಕ್ರುತದ

ಬರಿಗೆಮಣೆಯ (ಅಕ್ಕರಮಾಲೆ) ಪ್ರಭಾವ ಕನ್ನಡದ ಬರಿಗೆಮಣೆಯ ಮೇಲೂ ಆಗಿದೆ... ಅಂದಿನಿಂದ ಇಂದಿನವರೆಗೂ ಯಾರೊಬ್ಬರೂ ಈ ಬಗ್ಗೆ ಸೊಲ್ಲೆತ್ತಲಿಲ್ಲ ಎಂಬುದು ತಪ್ಪರಿವು. ಆಂಡಯ್ಯ, ನಯಸೇನ ಇವರುಗಳು ಕನ್ನಡದ ಬರವಣಿಗೆಗಳಲ್ಲಿ ಸಂಸ್ಕೃತದ ಪದಗಳ ಬಳಕೆ ತುಂಬಾ ಇದ್ದುದನ್ನು ವಿರೋದಿಸಿದ್ದಾರೆ... ಕೆಲ ವರುಶಗಳ ಹಿಂದೆ ಕೆ. ಎಸ್. ನರಸಿಂಹಸ್ವಾಮಿಯವರೂ ಈ ಬಗ್ಗೆ ದನಿಯೆತ್ತಿದ್ದರು. ಕರ್ನಾಟಕ ಕುಲಪುರೋಹಿತರಾದ ಆಲೂರ ವೆಂಕಟರಾಯರೂ ಕನ್ನಡದ ಮಾತಿನಲ್ಲಿ ಮಹಾಪ್ರಾಣಗಳಿಲ್ಲ ಎಂಬುದನ್ನು ಗಮನಿಸಿ ಬರೆದಿರುವುದುಂಟು"[೧೧೧] ಎನ್ನುವ ಮೂಲಕ ಪ್ರಿಯಾಂಕ್ ಕತ್ತಲಗಿರಿಯವರು ಕನ್ನಡದಲ್ಲಿ ಮಹಾಪ್ರಾಣಾಕ್ಷರಗಳ ಬಳಕೆಯ ಇತಿಹಾಸ, ಕಾರಣ ಮತ್ತು ಅದಕ್ಕೆ ಎದುರಾಗಿರುವ ವಿರೋಧಗಳನ್ನು ದಾಖಲಿಸಿದ್ದಾರೆ.

ಕನ್ನಡದ ಅಕ್ಷರಮಾಲೆಯಲ್ಲಿ ಉಳಿದುಕೊಂಡಿರುವ ಸಂಸ್ಕೃತದ ಪ್ರಭಾವವನ್ನು ಕನ್ನಡ ಜೀರ್ಣಿಸಿಕೊಳ್ಳುವ ಶಕ್ತಿ ಹೊಂದಿದೆಯೇ ಎಂಬ ಪ್ರಶ್ನೆ ಸದ್ಯಕ್ಕೆ ಎದುರಾಗಿದೆ. ಇದುವರೆಗೆ ಕನ್ನಡಕ್ಕೆ ಸಂಸ್ಕೃತವೇ ಶಕ್ತಿ ತುಂಬಿದೆ ಎಂಬ ವಾದಕ್ಕೆ ಪ್ರತಿಯಾಗಿ ಕನ್ನಡದ ಬೆಳವಣಿಗೆಗೆ ಸಂಸ್ಕೃತವೇ ಅಡ್ಡಿಯಾಗಿದೆ ಎಂಬ ಪ್ರಮೇಯವನ್ನು ಆಧಾರ ಸಹಿತ ಮಂಡಿಸಲಾಗುತ್ತಿರುವ ಈ ಹೊತ್ತಿನಲ್ಲಿ ಮುಕ್ತವಾದ ಚರ್ಚೆಯಿಂದ ಮಾತ್ರ ಪರಿಹಾರ ಕಂಡುಕೊಳ್ಳಬಹುದು ಎನಿಸುತ್ತದೆ. ಇದರಲ್ಲಿ ಅನ್ಯಭಾಷೆಯ ಮೇಲೆ ದ್ವೇಷವಾಗಲಿ, ಅಸೂಯೆಯಾಗಲಿ ವ್ಯಕ್ತವಾಗುತ್ತಿದೆ ಎಂದು ಭ್ರಮಿಸಬೇಕಿಲ್ಲ. ಅಲ್ಲದೇ ಸಂಸ್ಕೃತವನ್ನು ಹೊರತು ಪಡಿಸಿಯೂ ಕನ್ನಡ ಸಂಪದ್ಭರಿತ ಭಾಷೆಯೆಂದರೆ ಅದು ಕನ್ನಡಕ್ಕೆ ಹೊಸಗರಿಯೊಂದು ಮೂಡಿದಂತೆ ಎಂದು ಒಪ್ಪಿಕೊಳ್ಳಬೇಕಿದೆ.

"ಮಾತಿನಲ್ಲಿಲ್ಲದ ಬರವಣಿಗೆಯಲ್ಲಿ ಮಾತ್ರ ಇರುವ ಮಹಾಪ್ರಾಣಗಳನ್ನು ಬಿಟ್ಟುಕೊಟ್ಟರೆ, ಲಕ್ಷಾಂತರ ಕನ್ನಡದ ಮಕ್ಕಳಿಗೆ ಓದು/ಬರಹ ಸಲೀಸಾಗುತ್ತದೆ. ಇದು ಕನ್ನಡದಲ್ಲಿ ಮಾತ್ರ ನಡೆಯುತ್ತಿರುವ ಒಂದು ಚಿಂತನೆಯಲ್ಲ, ತಮ್ಮ ತಮ್ಮ ಬರಹಗಳಲ್ಲಿರುವ ತೊಡಕುಗಳನ್ನರಿತು ಅವನ್ನು ಬದಲಿಸಿಕೊಂಡಿರುವ ಕೂಡಣಗಳು ಸಾಕಶ್ಟಿವೆ ಜಗತ್ತಿನಲ್ಲಿ. ಮತ್ತು, ಈ ಬದಲಾವಣೆಗಳಿಂದಾಗಿ ಸಾಕಶ್ಟು ಲಾಬಗಳನ್ನೂ ಆಯಾ ಕೂಡಣಗಳು ಪಡೆದುಕೊಂಡಿವೆ"[೧೧೨]ಯಂತೆ. ಈ ಉದಾಹರಣೆಗಳನ್ನು ಕನ್ನಡ ಸಮುದಾಯ ಗಂಭೀರವಾಗಿ ಪರಿಗಣಿಸಿದಲ್ಲಿ ಕನ್ನಡದ ಭವಿಷ್ಯದ ಯುವ ಜನಾಂಗ ಶೈಕ್ಷಣಿಕ ಸಮಸ್ಯೆಗಳಿಂದ ಬಿಡುಗಡೆ ಹೊಂದುವ ಸಾಧ್ಯತೆ ಇದೆ ಎನಿಸುತ್ತದೆ.

ಡಿ. ಎನ್. ಶಂಕರಬಟ್ಟರು ಎಲ್ಲರ ಕನ್ನಡದ ಕುರಿತು ಇಟ್ಟಿರುವ ಪ್ರಮೇಯಕ್ಕೆ ಪೂರಕವಾಗಿ ಮೇಲಿನ ಮಾತುಗಳನ್ನು ಪ್ರಿಯಾಂಕ್ ಕತ್ತಲಗಿರಿಯವರು ಆಡಿದ್ದಾರೆ. ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ನಡುವಿನ ಗೊಂದಲವನ್ನು ನಿವಾರಿಸುವಲ್ಲಿ ಸದ್ಯದ ಶೈಕ್ಷಣಿಕ ಶಿಸ್ತು ವಿಫಲವಾಗಿದೆ. ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸದವರಲ್ಲಿ ಉಂಟಾಗುವ ಕೀಳರಿಮೆಯನ್ನು ಹೋಗಲಾಡಿಸಲು ಬಳಕೆಯಲ್ಲಿರುವ ರೂಪವನ್ನೇ ಮಾನ್ಯ ಮಾಡಬೇಕೆಂಬುದು ಡಿ. ಎನ್. ಶಂಕರ ಬಟ್ಟರ ವಾದ. ಅದಕ್ಕೆ ಅವರು ನೀಡುವ ವಿವರಣೆಯೆಂದರೆ ಆಡುಮಾತಿನಲ್ಲಿ ಮಹಾಪ್ರಾಣಗಳ ಬಳಕೆಯ ಪ್ರಮಾಣ ಅತ್ಯಲ್ಪ. ಅದರಲ್ಲೂ ವಿಶೇಷವಾಗಿ ಒತ್ತು ಕೊಟ್ಟು ಹೇಳುವ ಪದಗಳೂ ಅತ್ಯಲ್ಪ. ಅವರು ಕನ್ನಡ

ಭಾಷೆಯು ಸಂಸ್ಕೃತವನ್ನು ಅನವಶ್ಯಕವಾಗಿ ಅನುಕರಿಸುತ್ತಿರುವುದಕ್ಕೆ ಹಾಗೂ ಕನ್ನಡ ಭಾಷೆಯು ಜನರಿಂದ ದೂರವಾಗುತ್ತಿರುವುದಕ್ಕೆ ಎರಡು ಕಾರಣಗಳನ್ನು ನೀಡುತ್ತಾರೆ.

೧. ಕನ್ನಡ ಭಾಷೆಯಲ್ಲಿ ಕನ್ನಡದ ವರ್ಣಮಾಲೆಗಳ ಜೊತೆಗೆ ಸಂಸ್ಕೃತ ವರ್ಣಮಾಲೆಗಳನ್ನು ಬಳಸುತ್ತಿರುವುದು.

೨. ಅವಶ್ಯಕತೆ ಇದ್ದರೂ, ಇಲ್ಲದಿದ್ದರೂ ಸಂಸ್ಕೃತ ಪದಗಳ ಬಳಕೆ ಕನ್ನಡದಲ್ಲಿದೆ.

ಈ ಎರಡು ಕಾರಣಗಳಿಂದಾಗಿ ಕನ್ನಡ ಭಾಷೆಯು ಸಾರ್ವತ್ರಿಕಗೊಳ್ಳುವ ಬದಲು ಮಿತಿಗೊಳಗಾಗುತ್ತಿದೆ. ಈ ಸಮಸ್ಯೆಗಳಿಗೆ ಅವರು ನೀಡುವ ಪರಿಹಾರೋಪಾಯಗಳು ಹೀಗಿವೆ:

ಮಹಾಪ್ರಾಣಾಕ್ಷರಗಳಾದ ಖ, ಛ, ಠ, ಥ, ಫ, ಮತ್ತು ಘ, ಝ, ಢ, ಧ, ಭ ಗಳ ಬಳಕೆಯನ್ನು ಬಿಡುವುದು. ಸಂಸ್ಕೃತ ಪದಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡುವುದು. ಈ ಬಗೆಯ ಭಾಷಿಕ ಚಿಂತನೆಗಳಲ್ಲಿ ಕನ್ನಡ ಭಾಷೆಯ ಸ್ವಂತಿಕೆಯ ಪ್ರತಿಪಾದನೆ ಇದೆ. ಅಲ್ಲದೆ, ಭಾಷೆಯ ಬಳಕೆ, ಕಲಿಕೆಯ ಸಂದರ್ಭದಲ್ಲಿ ಇರುವ ಸುಲಭೋಪಾಯಗಳೆಡೆಗೆ ಅವರ ಗಮನವಿದೆ. ಈ ಬಗೆಯ ಪ್ರಯತ್ನದಿಂದ ಕನ್ನಡವನ್ನು ಬರೆಯುವ ಮತ್ತು ಉಚ್ಚರಿಸುವ ಕ್ರಮಗಳೆರಡು ಒಂದಾಗುವುದಲ್ಲದೆ, ಕಲಿಕೆಯು ಕೂಡ ಸರಳವಾಗುತ್ತದೆ.

ಸಂಸ್ಕೃತದ ಪದಗಳನ್ನು ಯಥಾವತ್ತಾಗಿ ಬಳಸುತ್ತಿರುವುದರಿಂದ ಭಾಷೆಯ ಬಳಕೆಯಲ್ಲೇ ಉಂಟಾಗಿರುವ ಸಾಮಾಜಿಕ ಸ್ತರಗಳ ಪರಿಣಾಮದಿಂದ ಉಂಟಾಗುತ್ತಿರುವ ಸಾಮಾಜಿಕ ಅಸಮಾನತೆಯ ಪ್ರಶ್ನೆಗಳನ್ನು ಒಳಗೊಂಡಿರುವ ಡಿ. ಎನ್. ಶಂಕರ ಬಟ್ಟರ ಈ ಚರ್ಚೆಗಳು, ಭಾಷಿಕವಾಗಿ, ಕನ್ನಡಕ್ಕಿರುವ ಅಭಿವ್ಯಕ್ತಿ ಸಾಧ್ಯತೆಯ ಶೋಧದಲ್ಲಿ ತೊಡಗಿವೆ.

ಡಿ. ಎನ್. ಶಂಕರ ಬಟ್ಟರ ಕನ್ನಡದ ಸಾಧ್ಯತೆಗಳ ಬಗೆಗೆ ಸಕಾರಾತ್ಮಕ ನಿಲುವನ್ನು ಹೊಂದಿರುವ ಮಲ್ಲಿಕಾರ್ಜುನ ಮೇಟಿಯವರ ಪ್ರಕಾರ: "ಕನ್ನಡವನ್ನು ಕುರಿತಾಗಿ ಚಿಂತಿಸುವುದೆಂದರೆ, ಅದು ಕೇವಲ ಲಿಪಿ ಮತ್ತು ಕಾಗುಣಿತಗಳ ಸ್ವರೂಪವನ್ನು ಯಾವ ಕಾಲಕ್ಕೂ ಬದಲಿಸದೆ ಹಾಗೇ ಮುಂದುವರಿಸಿಕೊಂಡು ನಡೆಯುವುದಲ್ಲ. ಆಯಾ ಕಾಲದ ಬದುಕಿನ ದಾರಿಗಳನ್ನು ಹೇಗೆ ರೂಪಿಸಿಕೊಳ್ಳಬೇಕು? ಇದಕ್ಕೆ ಒತ್ತಾಸೆಯಾಗಿ ಆ ಸಮೂಹಗಳ ನುಡಿಯನ್ನು ಹೇಗೆ ಸಜ್ಜುಗೊಳಿಸಬೇಕು? ನುಡಿಯೆಂಬುದು ಕೇವಲ ಮಾತಲ್ಲ, ಅದು ಬದುಕೂ ಆಗಿರುತ್ತೆ. ಈ ಬದುಕಿಗೆ ಬೇಕಾದ ಮೂಲತತ್ವಗಳು ಆಯಾ ನುಡಿಗಳಲ್ಲಿಯೆ ಹೇಗೆ ಹುದುಗಿರುತ್ತವೆ ಎಂಬ ದಿಟವನ್ನು ಅರಿಯದೇ, ನುಡಿಯೊಂದನ್ನು ಕುರಿತು ಚಿಂತಿಸುವುದು ಅಗತ್ಯವಿಲ್ಲವೆಂದು ತೋರುತ್ತದೆ. ಆದರೆ ಡಿ.ಎನ್.ಎಸ್.ಬಟ್ ಮತ್ತು ಈ ಆಲೋಚನೆಯ ಕ್ರಮವನ್ನು ನಂಬಿದವರ ಮೊದಲ ಗುರಿಯೇ, ಸಮೂಹಗಳ ಬದುಕಿನ ವಿನ್ಯಾಸಗಳನ್ನು ಅರಿಯುವ ಮತ್ತು ಆಯಾ ಬದುಕಿಗೆ ತಕ್ಕುದಾದ ದಾರಿಗಳನ್ನು ಅವರವರ ನುಡಿಗಳ ಮೂಲಕವೇ ಕಾಣುವುದಾಗಿದೆ."[೧೧೩] ಎನ್ನುತ್ತಾರೆ. ಸಮುದಾಯಗಳ ಹಿತದೃಷ್ಟಿಯಿಂದ ಕನ್ನಡ ಚಿಂತನೆ ಹೊಸರೂಪ ಪಡೆಯಬೇಕಿದೆ ಎಂಬುದನ್ನು ಮೇಲಿನ ಅಭಿಪ್ರಾಯದಲ್ಲಿ ಕಾಣಬಹುದು. ಜೊತೆಗೆ ಕನ್ನಡ ಕುರಿತ ಚಿಂತನೆಯೂ ಯಥಾಸ್ಥಿತಿವಾದಿ ರೂಪದಲ್ಲಿರಬೇಕಿಲ್ಲ ಎಂಬುದು ಮಲ್ಲಿಕಾರ್ಜುನ

ಮೇಟಿಯವರ ನಿಲುವು. ಇದಕ್ಕೆ ಪೂರಕವಾಗಿ ಡಿ. ಎನ್. ಶಂಕರ ಬಟ್ ಮತ್ತು ಇತರರ ಆಲೋಚನಾ ಕ್ರಮಗಳು ಸಮುದಾಯಗಳ ಬಿಡುಗಡೆಯ ಸಾಧ್ಯತೆಗಳ ಶೋಧದಲ್ಲಿ ಆಯಾ ಸಮುದಾಯಗಳ ಭಾಷೆಗೆ ಅಧಿಕೃತತೆ ತಂದುಕೊಡಬೇಕಿರುವುದರ ಕಡೆಗೆ ಗಮನಸೆಳೆಯುತ್ತಿವೆ.

"ಶಂಕರಬಟ್ಟರು ಈಗಾಗಲೇ ಕಯ್ಗೊಂಡಿರುವ ನುಡಿ ಮತ್ತು ನುಡಿಯರಿಮೆ ಕುರಿತಾದ ಎಲ್ಲ ಬಗೆಯ ಬರಹಗಳಲ್ಲಿಯೂ, ಕರ್ನಾಟಕ ಸಮೂಹಗಳ ಬದುಕಿಗೆ ಬೇಕಾಗಿರುವ ತಿಳಿವಿನ ಮಾದರಿಗಳು ಅಡಕವಾಗಿವೆ. ಎತ್ತುಗೆಗಾಗಿ ಈ ಮಾತುಗಳನ್ನು ನೋಡಿ; "ಕನ್ನಡ ಬರಹ ಮೇಲ್ವರ್ಗದದವರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಸೊತ್ತಾಗಬೇಕು ಮತ್ತು ಕನ್ನಡ ಬರಹದ ಮೂಲಕ ಇವತ್ತು ಮೇಲ್ವರ್ಗದವರು ಮಾತ್ರವೇ ಪಡೆಯುತ್ತಿರುವ ಹಲವು ರೀತಿಯ ಪ್ರಯೋಜನಗಳನ್ನು ಎಲ್ಲಾ ವರ್ಗದ ಕನ್ನಡಿಗರಿಗೂ ಸಮಾನವಾಗಿ ಪಡೆಯುವ ಹಾಗಾಗಬೇಕು" – ಕನ್ನಡ ಬರಹವನ್ನು ಸರಿಪಡಿಸೋಣ! ಎಂಬೀ ಹೊತ್ತಿಗೆಯ ಮಾತುಗಳನ್ನು ನಿಗಾಯಿಟ್ಟು ನೋಡಿದರೆ, ಶಂಕರಬಟ್ಟರ ಕನ್ನಡ ಪರವಾದ ಕಾಳಜಿಗಳು ಎಂತಹವು ಅನ್ನುವುದು ನಮ್ಮರಿವಿಗೆ ಬರುತ್ತವೆ"[೧೧೪] ಎನ್ನುತ್ತಾರೆ. ಕನ್ನಡವು ಎದುರಿಸುತ್ತಿರುವ ಆತಂಕಗಳತ್ತ ಗಮನ ಸೆಳೆಯುವ ಶಂಕರಬಟ್ಟರ ವಿಚಾರಗಳನ್ನು ಮೇಲಿನ ಭಾಗದಲ್ಲಿ ಕಾಣಬಹುದು. ಕನ್ನಡವನ್ನು ಹೊರತುಪಡಿಸಿಯೇ ಜೀವಿಸುವ ಅನೇಕ ಅವಕಾಶಗಳನ್ನು ಕಲ್ಪಿಸಬಲ್ಲ ಆಧುನಿಕತೆಯ, ಉದ್ಯೋಗಾವಕಾಶದ ಅನೇಕ ಸಾಧ್ಯತೆಗಳ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ, ಈ ಬಗೆಯ ಬೆಳವಣಿಗೆಗಳು ಭಾಷೆಯ ಬಗೆಗೆ ದೂರಗಾಮಿಯಾಗಿ ಅನೇಕ ಕೆಟ್ಟ ಪರಿಣಾಮಗಳನ್ನು ಬೀರುತ್ತವೆ.

"ಕನ್ನಡ ಬರಹ ಇವತ್ತು ಒಂದು ಸಂಧಿ ಕಾಲವನ್ನು ಎದುರಿಸುತ್ತಿದೆ. ಕರ್ನಾಟಕದ ನಗರಗಳಲ್ಲಿ ವಾಸಿಸುವ ಮೇಲ್ವರ್ಗದವರ ಮಕ್ಕಳಿಗೆಲ್ಲ ಈಗಾಗಲೇ ಅದು ಅನವಶ್ಯಕವಾಗಿದೆ. ಬರಹದ ಮೂಲಕ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯಲು ಸಾಧ್ಯವೋ ಅವನ್ನೆಲ್ಲ ಇಂಗ್ಲಿಷ್ ಬರಹದ ಮೂಲಕವೇನೆ ಅವರು ಈಗ ಪಡೆಯಬಲ್ಲವರಾಗಿದ್ದಾರೆ"[೧೧೫] ಎಂಬ ಡಿ. ಎನ್. ಶಂಕರ ಬಟ್ಟರ ನಿಲುವು ವರ್ಗದಿಂದ ನಗರ ಮತ್ತು ಹಳ್ಳಿಗಳ ನಡುವಿರುವ ಅಂತರದೆಡೆಗೆ ಚಲಿಸುತ್ತಿದೆ. ಪ್ರಸ್ತುತ ನಗರದ ಯಾವ ವರ್ಗದವರಿಗೂ ಕನ್ನಡವನ್ನು ಹೊರತುಪಡಿಸಿಯೇ ಜೀವಿಸುವ ಅನೇಕ ಅವಕಾಶಗಳನ್ನು ಕಲ್ಪಿಸಬಲ್ಲ ಆಧುನಿಕತೆಯ, ಉದ್ಯೋಗಾವಕಾಶದ ಅನೇಕ ಸಾಧ್ಯತೆಗಳ ಹೆಚ್ಚಳವಾಗಿದೆ. **"ನಮ್ಮ ಸಮಾಜದ ಉಳಿದ ಮಕ್ಕಳೂ ಇದೇ ದಾರಿಯನ್ನು ಹಿಡಿದಲ್ಲಿ ಕ್ರಮೇಣ ಕನ್ನಡ ಬರಹಕ್ಕೆ ಸಂಸ್ಕೃತ ಬರಹದ ಅವಸ್ಥೆಯೇ ಬಂದೀತು"**[೧೧೬] ಎಂಬ ಆತಂಕವನ್ನು ಡಿ. ಎನ್. ಶಂಕರಬಟ್ಟರು ವ್ಯಕ್ತಪಡಿಸುತ್ತಾರೆ. **"ಈ ಸಂಧಿ ಕಾಲದಲ್ಲಿ ನಮ್ಮ ಸಮಾಜ ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎಂಬುದರ ಮೇಲೆ ಕನ್ನಡ ಬರಹದ ಅಳಿವು ಇಲ್ಲವೇ ಉಳಿವು ಅವಲಂಬಿಸಿದೆ ಎಂದು ನನಗೆ ತೋರುತ್ತದೆ"**[೧೧೭] ಎನ್ನುವ ಅವರು, ಕನ್ನಡವನ್ನು ಆಧುನಿಕ ಸಂದರ್ಭದಲ್ಲಿ ಎಲ್ಲರ ಕನ್ನಡವಾಗಿಸುವ ಕ್ರಮಗಳನ್ನು ಮುಂದಿಡುತ್ತಾರೆ. ಭಾಷೆಯನ್ನು ಸಾರ್ವತ್ರಿಕಗೊಳಿಸುವ ಸಲುವಾಗಿ ಅನೇಕ ಬದಲಾವಣೆಗಳಿಗೆ ಪ್ರೇರಣೆ ನೀಡಲು ಅಗತ್ಯವಾದ ಸಂಶೋಧನೆಯಲ್ಲಿ ನಿರತರಾಗಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಜ್ಞಾನ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕಿದೆ. ಇದರ ಸಾಧ್ಯತೆಯಾಗಿ ಬರಹವನ್ನು ಎಲ್ಲರ ಸ್ವತ್ತಾಗಿಸುವುದರ ಬಗ್ಗೆ ಅವರ ಅಭಿಪ್ರಾಯಗಳು ಹೀಗಿವೆ: **“ಕನ್ನಡ ಬರಹ ಮೇಲ್ವರ್ಗದವರ ಸೊತ್ತಾಗಿ ಮಾತ್ರವೇ ಉಳಿಯದೆ ಎಲ್ಲರ ಸೊತ್ತಾಗಬೇಕು ಮತ್ತು ಕನ್ನಡ ಬರಹದ ಬಳಕೆಯ ಮೂಲಕ ಇವತ್ತು ಮೇಲ್ವರ್ಗದವರು ಮಾತ್ರವೇ ಪಡೆಯುತ್ತಿರುವ ಹಲವು ರೀತಿಯ ಪ್ರಯೋಜನಗಳನ್ನು ಎಲ್ಲಾ ವರ್ಗದ ಕನ್ನಡಿಗರೂ ಸಮಾನವಾಗಿ ಪಡೆಯುವ ಹಾಗಾಗಬೇಕು ಎಂಬ ಕಳಕಳಿಯಿಂದ ಈ ಪುಸ್ತಕವನ್ನು ಬರೆಯಲು ಹೊರಟಿದ್ದೇನೆ”**[೧೧೮] ಎನ್ನುತ್ತಾರೆ. ಶಂಕರ ಬಟ್ಟರ ಈ ವಿಚಾರಗಳು ಭಾಷೆಯ ಬಳಕೆ, ಪ್ರಯೋಗದಲ್ಲಿರುವ ಸಾಮಾಜಿಕ ಅಂತಸ್ತಿಗೆ ಸಂಬಂಧಿಸಿದಂತೆ ಬಳಕೆಯಲ್ಲಾಗುತ್ತಿರುವ ವ್ಯತ್ಯಾಸಗಳ ಪರಿಣಾಮವನ್ನು ಗಮನದಲ್ಲಿಟ್ಟುಕೊಂಡು ರೂಪಿತವಾಗಿವೆ. ಇದರೊಂದಿಗೆ ಭಾಷೆಯ ಬಳಕೆಗೆ ಹಿಂಜರಿಯುವ ಪ್ರವೃತ್ತಿಯನ್ನು ಕುರಿತ ಚಿಂತನೆಗಳಾಗಿವೆ.

ಸಾರ್ವಜನಿಕವಾಗಿ ಭಾಷೆಯನ್ನು ಸಂವಹನಕ್ಕಾಗಿ ಬಳಸುವಲ್ಲಿ ಎದುರಾಗುವ ಕೀಳರಿಮೆಯ ಕಾರಣಗಳನ್ನು ಮಲ್ಲಿಕಾರ್ಜುನ ಮೇಟಿಯವರು ಹೀಗೆ ವಿವರಿಸುತ್ತಾರೆ: “ದಲಿತ ಮತ್ತು ತಳಸಮುದಾಯಗಳ ಪರವಾಗಿ ಹೋರಾಟ ನಡೆಸುವವರು ಬಟ್ರ ಈ ಚಿಂತನೆಗಳನ್ನು ಲೆಕ್ಕಿಸದೆ ಇರುವುದು ಕೇವಲ ಅಚ್ಚರಿಯ ಸಂಗತಿ ಮಾತ್ರವಲ್ಲ, ಅದೊಂದು ಚಾರಿತ್ರಿಕ ವ್ಯಂಗ್ಯವೂ ಹವ್ವು. ಈ ಹೊತ್ತಿನ ಸಾಮಾಜಿಕ ಮತ್ತು ರಾಜಕೀಯ ಚಳುವಳಿಗಳಿಗೆ ಬೇಕಾಗಿರುವ ಪ್ರಣಾಳಿಕೆಯೊಂದನ್ನು ಶಂಕರಬಟ್ರು – ತಮ್ಮೀ ಬರಹಗಳ ಮೂಲಕ ರೂಪಿಸಿ ಕೊಟ್ಟಿದ್ದಾರೆ. ಬಟ್ರು ಬೀದಿಗಿಳಿಯದೆ ಸಾಮಾಜಿಕ ನ್ಯಾಯದ ಪರವಾಗಿ ಹೋರಾಡುತ್ತಿದ್ದಾರೆ. ಇದು ಕೂಡ ಹೋರಾಟದ ಒಂದು ಮಾದರಿ. ಇದುವೇ ಕನ್ನಡದ ಮಾದರಿ. ಅಂದರೆ ಕುವೆಂಪು, ಕೆ.ಎಸ್.ನ, ಬೇಂದ್ರೆ, ಶಂಬಾ, ಕೆ.ವಿ.ಎನ್ ಮೊದಲಾದವರು ಯಾವತ್ತಿಗೂ ಬೀದಿಗಿಳಿಯದೇನೆ ಕನ್ನಡ ಪರವಾಗಿ ಹೋರಾಡುತ್ತಲೇ ಬಂದಿದ್ದಾರೆ”[೧೧೯] ಎನ್ನುತ್ತಾರೆ.

ಕರ್ನಾಟಕದಲ್ಲಿ ನಡೆದಿರುವ ರೈತ, ದಲಿತ, ಅಹಿಂದ ಮೊದಲಾದ ಚಳವಳಿಗಳು ಭಾಷಿಕವಾಗಿ ಬಿಡುಗಡೆಯಾಗಬೇಕೆಂಬ ಬಗ್ಗೆ ಇದುವರೆಗೆ ಗಮನ ಹರಿಸಿಲ್ಲ. ಈ ನಿಟ್ಟಿನಲ್ಲಿ ಈ ಚಳವಳಿಗಳು ಆಲೋಚಿಸಿದ್ದರೆ, ಈ ಚಳವಳಿಗಳಿಗೆ ಇನ್ನಷ್ಟು ಶಕ್ತಿ ದಕ್ಕಬಹುದಿತ್ತೇನೋ? ಆದರೆ ಎಲ್ಲ ವಿಚಾರದಲ್ಲಿ ಕ್ರಾಂತಿಕಾರಕವಾಗಿ ಆಲೋಚಿಸುವವರೂ ಕೆಲವೊಮ್ಮೆ ಭಾಷೆಯ ವಿಷಯದಲ್ಲಿ ಮಡಿತನವನ್ನು ಬಿಟ್ಟುಕೊಡಲು ಸಿದ್ಧರಾಗುವುದಿಲ್ಲ.

“ದಲಿತ ಮತ್ತು ತಳಸಮುದಾಯಗಳನ್ನೇ ನೆಲೆಯಾಗಿಸಿಕೊಂಡು ಇಡೀ ಬಾರತದಲ್ಲಿಯೇ ನುಡಿಯರಿಮೆಯ ಚಿಂತನೆಗಳು ಬೆಳೆದು ಬಂದಿರುವುದು ಅತ್ಯಂತ ಕಡಿಮೆಯೆಂದೇ ಹೇಳಬೇಕು. ಇಂತಹವೊಂದು ಆಲೋಚನೆಯ ಕ್ರಮವನ್ನು ಕನ್ನಡದಲ್ಲಿ ಶಂಕರಬಟ್ ಮೊದಲಾದವರು ಹುಟ್ಟು ಹಾಕಿರುತ್ತಾರೆ. ಕರ್ನಾಟಕ ಇಲ್ಲವೇ ಬಾರತದಲ್ಲಿ ನುಡಿ ಬಗೆಗಿನ ಯಾವುದೇ ತೀರ್ಮಾನವು ಇಡೀ ಸಮುದಾಯವನ್ನೇ ನೆಚ್ಚಿಕೊಂಡು ಹಿಂದುಳಿದ, ತಳಸಮುದಾಯಗಳ ನುಡಿ ಚಹರೆಗಳ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ. ಮೇಲುಜಾತಿಗಳು ನುಡಿಯುವ ಮಾತಿನ ಪ್ರಕಾರಗಳು ಮೇಲುಹಿರಿಮೆಯನ್ನು ಪಡೆದರೆ, ದಲಿತ ಮುಂತಾದವರ ಮಾತುಗಳು ಕೀಳುಹಿರಿಮೆಗೆ ಒಳಗಾಗುತ್ತವೆ. ಈ ಸಾಂಕೇತಿಕ

ಹಿಂಸೆಯನ್ನು ಹೋಗಲಾಡಿಸುವ ದಾರಿಗಳು ನುಡಿಯೊಳಗೇ ಹುದುಗಿರುತ್ತವೆ ಎಂಬ ದಿಟವನ್ನು ಕೂಡ ಶಂಕರಬಟ್ರು ತಮ್ಮ ಬರಹಗಳ ಮೂಲಕ ನಮ್ಮುಂದೆ ಮಂಡಿಸಿಡುತ್ತಿದ್ದಾರೆ. ಹಾಗಾಗಿ ಮಾತು ಮತ್ತು ಬರಹದ ನುಡುವಣ ಅಂತರಗಳನ್ನು ಯಾಕೆ ಇಲ್ಲವಾಗಿಸಬೇಕು ಎಂಬಿವರ ಚಿಂತನೆಗಳು ಇಲ್ಲಿ ಮಹತ್ವವನ್ನು ಪಡೆಯುತ್ತವೆ"[೧೨೦] ಎಂಬ ಮಲ್ಲಿಕಾರ್ಜುನ ಮೇಟಿಯವರ ಅಭಿಪ್ರಾಯಗಳು ಡಿ. ಎನ್. ಶಂಕರ ಬಟ್ಟರ ಆಲೋಚನಾ ಕ್ರಮವನ್ನು ವಿವರಿಸುತ್ತಿವೆ. ಬಹುಜನರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಶಂಕರ ಬಟ್ಟರು ಎಲ್ಲರ ಕನ್ನಡದ ಪರವಾಗಿ ಚಿಂತನೆಗಳನ್ನು ಮಂಡಿಸುತ್ತಿದ್ದಾರೆ. ಇವರ ಚಿಂತನೆಗಳ ಹಿನ್ನೆಲೆಯಲ್ಲಿ ಜನ ಆಡುವ ಭಾಷೆಗೆ ಮಾನ್ಯತೆ ಸಿಗಬೇಕೆಂಬ ಒತ್ತಾಯವಿದೆ. ಎಲ್ಲರ ಕನ್ನಡದ ಪರವಾಗಿ ಮಾತನಾಡುವವರು ಭಾಷೆಯ ಬಳಕೆಯ ಕಾರಣದಿಂದಲೂ ಮಾನಸಿಕ ಹಿಂಸೆಗೆ ಸಿಲುಕುವ ತಳಸಮುದಾಯದವರಿಗೆ ಧೈರ್ಯ ಹೇಳುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

"ಯಾಕೆ ಕಲಿಕೆಯ ವಲಯದಿಂದ ಕೆಲವೇ ಸಮೂಹಗಳ ಮಕ್ಕಳು ಹೊರಗುಳಿಯುತ್ತಾರೆ ಎಂಬ ಅನುಮಾನಕ್ಕೂ ಬಟ್ರ ಚಿಂತನೆಗಳಲ್ಲಿ ಸುಳಿವುಗಳು ಸಿಗುತ್ತವೆ. ಅಂದರೆ ಯಾವುದೇ ಸಾಮಾಜಿಕ ಮುಂಚಲನೆಗೂ ಮತ್ತು ಆಯಾ ಸಮೂಹಗಳು ನೆಚ್ಚಿಕೊಂಡಿರುವ ಒಳನುಡಿಗಳಿಗೂ ನೇರವಾದ ನಂಟಿರುತ್ತದೆ. ಒಳನುಡಿಯ ಸ್ವರೂಪ, ಕನ್ನಡ ನುಡಿಯ ಸ್ವರೂಪ ಮತ್ತು ಕಲಿಕೆಯ ಸಮಸ್ಯೆಗಳ ನಡುವಿನ ತೊಡಕುಗಳೆಂತಹವು, ಈ ತೊಡಕುಗಳೇ ತಳಸಮುದಾಯಗಳ ಮಕ್ಕಳ ನುಡಿ ಕಲಿಕೆಯ ಮೇಲೆ ಹೇಗೆಲ್ಲ ಸವಾರಿ ನಡೆಸುತ್ತಿವೆ ಅನ್ನುವ ಇಕ್ಕಟ್ಟುಗಳನ್ನು ಇವರ ನುಡಿಯರಿಮೆಯ ಚಿಂತನೆಗಳು ತೋರಿಸುತ್ತವೆ"[೧೨೧] ಎಂದು ಡಿ. ಎನ್. ಶಂಕರ ಬಟ್ಟರ ಸಂಶೋಧನೆ ಕುರಿತು ಮಲ್ಲಿಕಾರ್ಜುನ ಮೇಟಿಯವರು ಅಭಿಪ್ರಾಯ ಪಡುತ್ತಾರೆ. ಈ ಕುರಿತು 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಹೊತ್ತಗೆಯಲ್ಲಿ ಮಹತ್ವದ ಹೊಳಹುಗಳನ್ನು ಡಿ. ಎನ್. ಶಂಕರಬಟ್ಟರು ನೀಡಿದ್ದಾರೆ. ಅವರಿಗೆ ಜನಸಮುದಾಯದ ಭಾಷೆಯಲ್ಲಿ ಸರಿ–ತಪ್ಪು ಹುಡುಕುವುದಕ್ಕಿಂತ ಅವರ ಸಂವಹನ ಸಾಧ್ಯತೆಗಳಿಗೆ ಅವಕಾಶ ಒದಗಿಸಬೇಕು ಹಾಗೂ ಆ ಮೂಲಕ ಅವರ ಅಭಿವ್ಯಕ್ತಿಯನ್ನು ಮಾನ್ಯಮಾಡಬೇಕೆಂಬ ನಿಲುವಿದೆ.

"ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಶು ನುಡಿಗಳ ನಡುವಣ ನಂಟು ಯಾವ ಬಗೆಯದು? ಆ ನಂಟಸ್ತಿಕೆಯ ಮರುಹೊಂದಾಣಿಕೆಯ ಸ್ವರೂಪ ಹೇಗಿರಬೇಕು? ಕನ್ನಡ ನುಡಿ ಓದನ್ನು ಬೆಳಸುವವರಿಗೆ ಕನ್ನಡ ನುಡಿ ರಚನೆಯೇ ಯಾಕೆ ಮಹತ್ವದ ಸಂಗತಿಯಾಗುತ್ತದೆ? ಎಂಬಿತ್ಯಾದಿ ಕೇಳ್ವಿಗಳಿಗೆ ತಕ್ಕುದಾದ ಬದಲುಗಳು ಶಂಕರಬಟ್ ಮತ್ತು ಅದೇ ಬಗೆಯ ಆಲೋಚನೆಯನ್ನು ಕಟ್ಟಿ ಬೆಳೆಸುವವರ ಚಿಂತನೆಗಳಲ್ಲಿ ಸಿಗುತ್ತವೆ. ಕೇವಲ ಮೇಲ್ನೋಟದ ವಿವರಗಳಿಂದ, ಕನ್ನಡ ಪರವಾಗಿ ಮತ್ತು ಕನ್ನಡದ್ದೇ ತಿಳಿವಿನ ಮಾದರಿಗಳನ್ನು ರೂಪಿಸುವವರಿಗೆ, ಸಂಸ್ಕೃತ, ಇಂಗ್ಲಿಶು ಇಲ್ಲವೇ ಕನ್ನಡದ ವಿರೋದಿಗಳೆಂದು ಹಣೆಪಟ್ಟಿಯನ್ನು ಲಗತ್ತಿಸುವುದು ಎಷ್ಟರಮಟ್ಟಿಗೆ ತಕ್ಕುದಾದ ನಿಲುವು?"[೧೨೨] ಎಂದು ಪ್ರಶ್ನಿಸಲಾಗಿದೆ. ಶಂಕರ ಬಟ್ಟರ ತಾತ್ವಿಕ ತಳಹದಿಯ ಪ್ರಶ್ನೆಗಳನ್ನು ಮೇಲಿನ ರೀತಿಯಲ್ಲಿ ಸಮರ್ಥಿಸುವವರ ಸಂಖ್ಯೆ ಅಂತರ್ಜಾಲದಲ್ಲಿ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಇದಕ್ಕೆ ಹೊನಲು.ನೆಟ್. ನುಡಿಕನ್ನಡ ಮೊದಲಾದ ಫೇಸ್‌ಬುಕ್. ಟ್ವಿಟರ್ ಮತ್ತು ವೆಬ್‌ತಾಣಗಳಲ್ಲಿ ಉತ್ತಮ ಪ್ರತಿಕ್ರಿಯೆ ಕೂಡ ವ್ಯಕ್ತವಾಗಿದೆ.

ಯಾಜಮಾನ್ಯ ಭಾಷೆಯ ಸ್ಥಾನದಲ್ಲಿಡಲಾಗಿರುವ ಸಂಸ್ಕೃತ ಮತ್ತು ಇಂಗ್ಲಿಶ್‌ಗಳ ನಡುವೆ ಕನ್ನಡದ ಅಸ್ಮಿತೆಯನ್ನು ಕಟ್ಟುವುದು ಹೇಗೆ? ಎಂಬ ಗಂಭೀರ ಪ್ರಶ್ನೆಗೆ ಡಿ. ಎನ್. ಶಂಕರಬಟ್ಟರು ಮುಖಾಮುಖಿಯಾಗಿದ್ದಾರೆ. ಇವರಿಗೆ ಪೂರಕವಾಗಿ ಕೆ. ವಿ. ನಾರಾಯಣ, ಮಲ್ಲಿಕಾರ್ಜುನ ಮೇಟಿ, ಬಸವರಾಜ ಕೋಡಗುಂಟಿ, ಆರ್. ಚಲಪತಿ, ಕಿರಣ್ ಬಾಟ್ನಿ ಮೊದಲಾದವರು ಕೃಷಿಯಲ್ಲಿ ತೊಡಗಿದ್ದಾರೆ. ಇವರ ಜೊತೆಗೆ ಹೊನಲು ಎಂಬ ಅಂತರ್ಜಾಲ ತಾಣವೂ ಕೈಜೋಡಿಸಿದೆ. ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕೈಪಿಡಿಗಳನ್ನು ಸಿದ್ಧಪಡಿಸಿರುವುದಲ್ಲದೇ, ಮಹಾಪ್ರಾಣರಹಿತ ಕನ್ನಡ ಬರಹವನ್ನು ಬಳಸುತ್ತಿದೆ.

“ಇಲ್ಲಿ ಯಾರೂ ಕೂಡ ಯಾವುದೇ ನುಡಿಯನ್ನು ವಿರೋದಿಸುವ ಮತ್ತು ಕಡೆಗಣಿಸುವ ರಾಜಕಾರಣವನ್ನು ಮಾಡುತ್ತಿಲ್ಲ. ಬದಲಾಗಿ ನಮ್ಮ ಸಮೂಹಗಳಿಗೆ ಈ ಹೊತ್ತು ಜರೂರು ಅನ್ನಿಸಿರುವ ತಿಳಿವಿನ ದಾರಿಗಳನ್ನು ಹುಡುಕುವುದಾಗಿದೆ. ಹಾಗಾಗಿ ಕನ್ನಡ ನುಡಿಯರಿಮೆ ಇಲ್ಲವೇ ಕನ್ನಡ ಬಾಶಾಶಾಸ್ತ್ರವೆಂದರೆ, ಅದು ಕೇವಲ ಕನ್ನಡದಲ್ಲಿ ನುಡಿಗಳ ಕುರಿತಾಗಿ ತಿಳುವಳಿಕೆಯನ್ನು ಬೆಳೆಸುವ ಕ್ರಮವಲ್ಲ. ಬದಲಾಗಿ ಕನ್ನಡದ್ದೇ ಮತ್ತು ಕನ್ನಡವನ್ನೇ ಕುರಿತಾದ ಅರಿಮೆ ಇಲ್ಲವೇ ಶಾಸ್ತ್ರವನ್ನು ರೂಪಿಸುವ ಬಗೆಯಾಗಿರುತ್ತದೆ. ಕನ್ನಡ ನುಡಿಯರಿಮೆಯ ಸರಿಯಾದ ಮತ್ತು ಹೊಸದಾದ ಚವ್ಕಟ್ಟನ್ನು ಕಟ್ಟಿಕೊಳ್ಳುವ ದಾರಿಯಾಗಿ ಡಿ. ಎನ್. ಶಂಕರಬಟ್ ಅವರು ನಮ್ಮ ನುಡಿ ಸಮುದಾಯಕ್ಕೆ ಈಗ ಸಿಕ್ಕಿರುತ್ತಾರೆ”[೧೨೩] ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಡಿ. ಎನ್. ಶಂಕರಬಟ್ಟರು ಯಾವುದೇ ಭಾಷೆಯ ವಿರೋಧಿಯಲ್ಲವೆಂಬುದನ್ನು ಮಲ್ಲಿಕಾರ್ಜುನ ಮೇಟಿಯವರು ಪ್ರತಿಪಾದಿಸುತ್ತಿದ್ದಾರೆ. ಸಂಸ್ಕೃತ, ಇಂಗ್ಲಿಶ್ ಹಾಗೂ ಕನ್ನಡ ಭಾಷಾ ಪ್ರೌಢಿಮೆಯುಳ್ಳ ಅವರು, ಕನ್ನಡದ ಶಕ್ತಿ ಏನೆಂಬುದನ್ನು ತಿಳಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಇವರ ಈ ಚಿಂತನೆಗಳಿಗೆ ಪೂರಕವಾಗಿ ನಡೆಯುತ್ತಿರುವ ಚರ್ಚೆಗಳು ಕನ್ನಡ ನುಡಿಯ ಬಿಡುಗಡೆಯ ಚಿಂತನೆಗಳಿಗೆ ಕೊಡುಗೆ ಸಲ್ಲಿಸುತ್ತಿವೆ.

ಈ ಅಧ್ಯಾಯದಲ್ಲಿ ಭಾಷಿಕ ಬಿಡುಗಡೆಗೆ ಎದುರಾಗುವ ಸವಾಲುಗಳು ಮತ್ತು ಸಾಧ್ಯತೆಗಳ ಕುರಿತು ಅಧ್ಯಯನ ನಡೆಸಲಾಗಿದೆ. ಇದರಲ್ಲಿ ಡಿ. ಎನ್. ಶಂಕರ ಬಟ್ಟರಿಗೆ ಪೂರಕವಾಗಿ ಮತ್ತು ಅವರ ಚಿಂತನೆಗಳಿಗೆ ವ್ಯತಿರಿಕ್ತ ನಿಲುವುಗಳನ್ನು ವ್ಯಕ್ತಪಡಿಸುವವರ ವಿಚಾರಗಳನ್ನು ಅಧ್ಯಯನ ನಡೆಸಲಾಗಿದೆ. ಇದರೊಂದಿಗೆ ಭಾಷಿಕ ಬಿಡುಗಡೆಯ ಸವಾಲುಗಳು ಮತ್ತು ಸಾಧ್ಯತೆಗಳ ಕುರಿತು ಪ್ರಾಸಂಗಿಕವಾಗಿ ನಡೆದಿರುವ ಚರ್ಚೆಗಳನ್ನು ಕ್ರೋಡೀಕರಿಸಿ ಅಧ್ಯಯನ ನಡೆಸಲಾಗಿದೆ.

ಉಲ್ಲೇಖಗಳು:

೧. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು. ಪು. ೫೮

೨. ಅದೇ, ಪು. ೫೯

೩. ಅದೇ, ಪು. ೬೦

೪. ಅದೇ, ಪು. ೬೧

೫. ಶಂಕರ ಬಟ್ಟ, ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು, ಪು. ೩೯

೬. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು, ಪು. ೬೦

೭. ಅದೇ, ಪು. ೬೧

೮. ಅದೇ, ಪು. ೬೧

೯. ಅದೇ, ಪು. ೭೦

೧೦. ಶಂಕರ ಬಟ್ಟ, ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು, ಪು. ೭೫

೧೧. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು, ಪು. ೭೦, ೭೧

೧೨. ಅದೇ, ಪು. ೭೧

೧೩. ಅದೇ,

೧೪. ಶಂಕರ ಬಟ್ಟ, ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು, ಪು. ೧೧೮, ೧೧೯

೧೫. ಅದೇ,

೧೬. ಅದೇ, ಪು. ೬೩

೧೭. ಅದೇ, ಪು. ೯೭

೧೮. ಅದೇ, ಪುಟ. ೧೪೫

೧೯. ಪುಟ. ೩

೨೦. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು, ಪು. ೭೩

೨೧. ಅದೇ,

೨೨. ಅದೇ, ಅದೇ, ೭೯, ೮೦

೨೩. ಅದೇ, ೮೦

೨೪. ಅದೇ, ೮೭

೨೫. ಅದೇ,

೨೬. ಅದೇ, ೮೯

೨೭. ಅದೇ, ೯೫

೨೮. ಅದೇ, ೯೫, ೯೬

೨೯. ಅದೇ, ೯೬, ೯೭

೩೦. ಶಂಕರ ಬಟ್ ಡಿ. ಎನ್., ೨೦೧೦, ಕನ್ನಡ ಪದಗಳ ಒಳ ರಚನೆ, ಭಾಷಾ ಪ್ರಕಾಶನ, ಪು. ೧೧೭

೩೧. ಅದೇ,

೩೨. ಅದೇ, ಪು. ೧೧೮

೩೩. ಅದೇ, ಪು.೧೧೯

೩೪. ಅದೇ, ಪು. ೧೧೮–೧೧೯

೩೫. ಅದೇ, ಪು. ೧೨೨

೩೬. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು, ಪು. ೯೪ – ೧೦೫

೩೭. ಶಂಕರ ಬಟ್, ಡಿ. ಎನ್., ೨೦೧೧, ಮಾತು ಮತ್ತು ಬರಹದ ನಡುವಿನ ಗೊಂದಲ, ಬಾಷಾ ಪ್ರಕಾಶನ, ತೀರ್ಥಹಳ್ಳಿ, ಪು.೪

೩೮. ಅದೇ, ೧೧

೩೯. ಅದೇ, ೧೪

೪೦. ಅದೇ, ೧೫

೪೧. ಅದೇ, ೧೬

೪೨. ಅದೇ, ೧೮

೪೩. ತಿರುಮಲೇಶ್ ಕೆ. ವಿ., ೨೦೧೧, ಇನ್ನಷ್ಟು ಕನ್ನಡ, ಅಭಿನವ, ಬೆಂಗಳೂರು, ಪು. ೧೩೭

೪೪. ವಿಲ್ಯಂ ಮಾಡ್ತ, ೧೯೯೮, ಕನ್ನಡ ವ್ಯಾಕರಣ ಸಮಸ್ಯೆಗಳು ಭಾಷಾವೈಜ್ಞಾನಿಕ ವಿಶ್ಲೇಷಣೆ, ವಿದ್ಯಾನಿಧಿ ಪ್ರಕಾಶನ, ಗದಗ, ಪು. ೪

೪೫. ಅದೇ,

೪೬. ಶಂಕರ ಬಟ್ಟ, ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ, ಭಾಷಾ ಪ್ರಕಾಶನ, ಮೈಸೂರು, ಪು. ೯೦

೪೭. ಅದೇ,

೪೮. ಅದೇ, ಪುಟ. ೯೦, ೯೧

೪೯. ಅದೇ,

೫೦. ಅದೇ,

೫೧. ಅದೇ,

೫೨. ಅದೇ, ಪುಟ. ೯೬

೫೩. https://nudikannada.wordpress.com/2015/07/21/%E0%B2%87%E0%B2%82%E0%B2%A6%E0%B2%BF%E0%B2%A8-%E0%B2%B8%E0%B2%B5%E0%B2%BE%E0%B2%B2%E0%B3%81%E0%B2%97%E0%B2%B3%E0%B2%BF%E0%B2%97%E0%B3%86-%E0%B2%A4%E0%B2%BE%E0%B2%AF%E0%B3%8D%E0%B2%A8%E0%B3%81%E0%B2%A1/

೫೪. ಅದೇ,

೫೫. ಅದೇ,

೫೬. ಅದೇ,

೫೭. ಅದೇ,

೫೮. ಅದೇ,

೫೯. https://nudikannada.wordpress.com/2015/10/09/%E0%B2%B8%E0%B2%82%E0%B2%B8%E0%B3%8D%E0%B2%8D%E0

%B2%95%E0%B3%83%E0%B2%A4-
%E0%B2%9C%E0%B2%A8%E0%B2%B0%ಇ೦%ಃ೨%೦೮%ಇ೦%ಃ೩%೮೧%ಇ೦%ಃ೨
%೦೧%ಇ೦%ಃ೨%ಃಈ%ಇ೦%ಃ೨%೦ಈ%ಇ೦%ಃ೨%ಃಇ%ಇ೦%ಃ೨%೯೭%ಇ೦%ಃ೨
%೦ಅ%ಇ೦%ಃ೩%೮೭%ಇ೦%ಃ೨%೯ಆ%ಇ೦%ಃ೩%೮೬/

೬೦. ಸುಗತ ಶ್ರೀನಿವಾಸ ರಾಜು, ೨೦೦೪, ಎಕೂಷೆ ಫೆಬ್ರವರಿ, ಸಂಚಯ ಬೆಂಗಳೂರು, ಪು. ಸಂ. ೨

೬೧. ಅದೇ, ೧೪

೬೨. ಅದೇ, ೪೯

೬೩. ಅದೇ, ೪೯

೬೪. https://nudikannada.wordpress.com/2015/10/09/
%E0%B2%B8%E0%B2%82%E0%B2%B8%E0%B3%
8D%E0%B2%95%E0%B3%83%E0%B2%A4-
%E0%B2%9C%E0%B2%A8%E0%B2%B0-
%E0%B2%A8%E0%B3%81%E0%B2%A1%E0%B2%BF%E0%B2%AF%E0%B2%
BE%E0%B2%97%E0%B2%AC%E0%B3%87%E0%B2%95%E0%B3%86/

೬೫. https://nudikannada.wordpress.com/2015/07/21/
%E0%B2%87%E0%B2%82%E0%B2%A6%E0%B2%BF%E0%B2%A8-
%E0%B2%B8%E0%B2%B5%E0%B2%BE%E0%B2%B2%E0%B3%8
1%E0%B2%97%E0%B2%B3%E0%B2%BF%E0%B2%97%E0%B3%86-
%E0%B2%A4%E0%B2%BE%E0%B2%AF%
E0%B3%8D%E0%B2%A8%E0%B3%81%E0%B2%A1/

೬೬. ಅದೇ,

೬೭. https://nudikannada.wordpress.com/2015/10/09/
%E0%B2%B8%E0%B2%82%E0%B2%B8%E0
%B3%8D%E0%B2%95%E0%B3%83%E0%B2%A4-
%E0%B2%9C%E0%B2%A8%E0%B2%B0-
%E0%B2%A8%E0%B3%81%E0%B2%A1%E0%B2%BF%E0%B2%AF%E0%B2%BE%E
0%B2%97%E0%B2%AC%E0%B3%87%E0%B2%95%E0%B3%86/

೬೮. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಭಾಷಣದ ವರದಿ, ಸಂಸ್ಕೃತ ಮತ್ತು ಕನ್ನಡದ್ದು ಅತ್ತೆ ಸೊಸೆ ಸಂಬಂದ ವರದಿ, ಪ್ರಜಾವಾಣಿ, ಬೆಂಗಳೂರು ಆವೃತ್ತಿ, ದಿನಾಂಕ ೦೨.೦೭.೨೦೧೬

೧೯. ಅದೇ.

೨೦. ಸಿ.ಪಿ.ನಾಗರಾಜ, ವಾಚಕರ ವಾಣಿ, ಎರವಲು ಸಂಬಂಧ, ಪ್ರಜಾವಾಣಿ, ಬೆಂಗಳೂರು ಆವೃತ್ತಿ, ದಿನಾಂಕ ೦೪.೦೭.೨೦೧೬

೨೧. ಅದೇ,

೨೨. ಅದೇ,

೨೩. ಆರ್.ಜಿ.ಶೇಣವ, ವಾಚಕರ ವಾಣಿ, ತಾಯಿಯೋ? ಮಗಳೋ?, ಪ್ರಜಾವಾಣಿ, ಬೆಂಗಳೂರು ಆವೃತ್ತಿ, ದಿನಾಂಕ ೦೯.೦೭.೨೦೧೬

೨೪. ಅದೇ.

೨೫. ಅದೇ,

೨೬. ಅದೇ,

೨೭. ಡಾ.ಆರ್.ಲಕ್ಷ್ಮೀನಾರಾಯಣ, ಕನ್ನಡ- ಸಂಸ್ಕೃತ ಅನುಬಂಧ, ಕನ್ನಡ - ಮತ್ತು ಸಂಸ್ಕೃತ ಸಂಬಂಧ ತಾಯಿ-ಮಗಳಂತಲ್ಲ; ಪೋಷ್ಯ-ಪೋಷಕ ರೀತಿಯದು, ಪ್ರಜಾವಾಣಿ, ಬೆಂಗಳೂರು ಆವೃತ್ತಿ, ದಿನಾಂಕ ೧೨.೦೭.೨೦೧೬

೨೮. ಅದೇ.

೨೯. ಅದೇ,

೩೦. ಅದೇ,

೩೧. ಅದೇ,

೩೨. ಅದೇ,

೩೩. ಅದೇ,

೩೪. ಅದೇ,

೩೫. ಅದೇ,

೩೬. ಅದೇ,

೩೭. ಅದೇ,

೩೮. ಅದೇ

೩೯. ಶಂಕರ ಬಟ್ ಡಿ. ಎನ್., ೨೦೧೧, ಮಾತು ಮತ್ತು ಬರಹಗಳ ನಡುವಿನ ಗೊಂದಲ, ಆರಗ, ತೀರ್ಥಹಳ್ಳಿ, ಪು. ೧೨

೯೦. ಅನ್ನದಾನೇಶ ಶಿ. ಸಂಕದಾಳ, ಮಾತು ಮತ್ತು ಬರಹದ ನಡುವಿನ ಗೊಂದಲ, https://nudikannada.wordpress.com/2016/05/03/%E0%B2%AE%E0%B2%BE%E0%B2%A4%E0%B3%81-%E0%B2%AE%E0%B2%A4%E0%B3%8D%E0%B2%A4%E0%B3%81-%E0%B2%AC%E0%B2%B0%E0%B2%B9%E0%B2%A6-%E0%B2%A8%E0%B2%A1%E0%B3%81%E0%B2%B5%E0%B2%BF%E0%B2%A8-%E0%B2%97%E0%B3%8A/

೯೧. ಶಂಕರ ಬಟ್ ಡಿ. ಎನ್., ಮಾತು ಮತ್ತು ಬರಹಗಳ ನಡುವಿನ ಗೊಂದಲ, ಆರಗ, ತೀರ್ಥಹಳ್ಳಿ, ೨೦೧೧, ಪು. ೧೨

೯೨. ಅದೇ,

೯೩. ಚಲಪತಿ ಆರ್., ಪಠ್ಯ ಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ, ೨೦೧೦, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ಪು. ೧

೯೪. ಬಸವರಾಜ ಕೋಡಗುಂಟಿ, ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಪು.೫

೯೫. ಅದೇ, ೯

೯೬. ಕಿರಣ್ ಬಾಟ್ನಿ, ೨೦೧೨, ಮಂದಿಯಾಳ್ವಿಕೆಯಲ್ಲಿ ಕನ್ನಡಿಗ ಕನ್ನಡಿಗರ ಈವೊತ್ತಿನ ಸವಾಲುಗಳು, ಬನವಾಸಿ ಬಳಗ, ಪ್ರಕಾಶನ, ಬೆಂಗಳೂರು, ಪು. ೭೮

೯೭. ಕಿರಣ್ ಬಾಟ್ನಿ, ಎಲ್ಲರ ಕನ್ನಡ ಮತ್ತು ಹಳೆಯ ಹೊತ್ತಗೆಗಳ ಪ್ರಶ್ನೆ, http://honalu.net/tag/ ಲಿಪಿ – ಸುಧಾರಣೆ\

೯೮. ಅದೇ,

೯೯. ಅದೇ,

೧೦೦. ಪ್ರಿಯಾಂಕ್ ಕತ್ತಲಗಿರಿ, ಮಹಾಪ್ರಾಣವೆಂಬ ಕಗ್ಗಂಟು, http://honalu.net/tag/ ಲಿಪಿ – ಸುಧಾರಣೆ\

೧೦೧. ಅದೇ,

೧೦೨. ಶಂಕರ ಬಟ್ ಡಿ. ಎನ್., ೨೦೧೧, ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು, ಬಾಶಾ ಪ್ರಕಾಶನ, ತೀರ್ತಹಳ್ಳಿ, ಪು. ೩

೧೦೩. ಅದೇ,

೧೦೪. ಅದೇ,

೧೦೫. ಅದೇ,

೧೦೬. ಅದೇ, ೪

೧೦೭. ಅದೇ,

೧೦೮. ಪ್ರಿಯಾಂಕ್ ಕತ್ತಲಗಿರಿ, ನುಡಿಯ ಶ್ರೀಮಂತಿಕೆ ಎಂದರೇನು?, http://honalu.net/tag/ ಲಿಪಿ – ಸುಧಾರಣೆ\

೧೦೯. ಅದೇ,

೧೧೦. ಅದೇ,

೧೧೧. ಪ್ರಿಯಾಂಕ್ ಕತ್ತಲಗಿರಿ, ಮಹಾಪ್ರಾಣಗಳು ಈಗೇಕೆ ಬೇಡ?, http://honalu.net/tag/ ಲಿಪಿ – ಸುಧಾರಣೆ\

೧೧೨. ಅದೇ,

೧೧೩. ಡಾ.ಮಲ್ಲಿಕಾರ್ಜುನ ಮೇಟಿ, ಕನ್ನಡದ ಕೀಳರಿಮೆಯನ್ನು ಅಳಿಸಲು ಹೋರಾಡುತ್ತಿರುವ ನುಡಿಯರಿಗ http://honalu.net/tag/ ಕನ್ನಡ – ಬರಹವನ್ನು –ಸರಿಪಡಿಸೋಣ

೧೧೪. ಅದೇ,

೧೧೫. ಶಂಕರ ಭಟ್ ಡಿ. ಎನ್., ೨೦೦೫, ಕನ್ನಡ ಬರಹವನ್ನು ಸರಿಪಡಿಸೋಣ!, ಭಾಷಾ ಪ್ರಕಾಶನ, ಮೈಸೂರು, ಪು. ೬.

೧೧೬. ಅದೇ,

೧೧೭. ಅದೇ,

೧೧೮. ಅದೇ, ೧೭

೧೧೯. ಡಾ.ಮಲ್ಲಿಕಾರ್ಜುನ ಮೇಟಿ, ಕನ್ನಡದ ಕೀಳರಿಮೆಯನ್ನು ಅಳಿಸಲು ಹೋರಾಡುತ್ತಿರುವ ನುಡಿಯರಿಗ http://honalu.net/tag/ ಕನ್ನಡ – ಬರಹವನ್ನು –ಸರಿಪಡಿಸೋಣ

೧೨೦. ಅದೇ,

೧೨೧. ಅದೇ,

೧೨೨. ಅದೇ,

೧೨೩. ಅದೇ,

ಅಧ್ಯಾಯ: ಏಳು

ಸಮಾರೋಪ

ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು ಎಂಬ ಈ ಪ್ರಬಂಧದಲ್ಲಿ ಕನ್ನಡದಲ್ಲಿ ನಡೆದಿರುವ ಭಾಷಿಕ ಬಿಡುಗಡೆಯ ಚಿಂತನೆಗಳನ್ನು ಅಧ್ಯಯನ ನಡೆಸಲಾಗುವ ಗುರಿ ಹೊಂದಲಾಗಿತ್ತು. ಈ ನಿಟ್ಟಿನಲ್ಲಿ ಡಿ. ಎನ್. ಶಂಕರ ಬಟ್, ಕೆ. ವಿ. ನಾರಾಯಣ ಮತ್ತು ಇತರರು ನಡೆಸಿರುವ ಸಂಶೋಧನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕನ್ನಡದಲ್ಲಿ ಸಂಸ್ಕೃತದ ಹೇರಿಕೆ ಕುರಿತು ಕನ್ನಡದಲ್ಲಿ ರಚನೆಯಾಗಿರುವ ಡಿ. ಎನ್. ಶಂಕರ ಬಟ್ ಮತ್ತು ಕೆ. ವಿ. ನಾರಾಯಣ ಅವರ ಕೃತಿಗಳು ಮತ್ತು ಅವರಿಗೆ ಪೂರಕವಾಗಿ ರಚನೆಯಾಗಿರುವ ಕೃತಿಗಳನ್ನು ಅಧ್ಯಾಯಗಳಲ್ಲಿ ಅಧ್ಯಯನ ನಡೆಸಲಾಗಿದೆ.

ಮೊದಲ ಅಧ್ಯಾಯವಾದ 'ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಅಧ್ಯಯನ ವಿಧಾನ'ದಲ್ಲಿ ಅಧ್ಯಯನದ ಮೂಲ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸಲಾಗಿದೆ. ಇದರಲ್ಲಿ ಅಧ್ಯಯನದ ದೃಷ್ಟಿಕೋನ, ವ್ಯಾಪ್ತಿಯನ್ನು ನಿಗದಿಗೊಳಿಸಿಕೊಳ್ಳಲಾಗಿದೆ. ಇದರ ಪ್ರಕಾರ ಮುಂದಿನ ಅಧ್ಯಾಯಗಳಲ್ಲಿ ಪ್ರಾಸಂಗಿಕವಾಗಿ ಅಗತ್ಯವಾದ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಎರಡನೇ ಅಧ್ಯಾಯವಾದ 'ಪೂರ್ವ ಅಧ್ಯಯನಗಳ ಸಮೀಕ್ಷೆಯ'ಲ್ಲಿ ಕನ್ನಡದ ಆಯ್ದ ವ್ಯಾಕರಣ ಮತ್ತು ಭಾಷಾ ವಿಜ್ಞಾನದ ಕೃತಿಗಳನ್ನು ಅಧ್ಯಯನ ನಡೆಸಲಾಗಿದೆ. ಈ ಕೃತಿಗಳಲ್ಲಿ ಕನ್ನಡ ವ್ಯಾಕರಣ ಮತ್ತು ಭಾಷಾ ವಿಜ್ಞಾನ ಕುರಿತು ಬರೆಯಲಾಗಿದೆ. ಆದರೆ, ಇವುಗಳಲ್ಲಿ ಬಳಸಿರುವ ಬಹುತೇಕ ಪರಿಭಾಷೆಗಳನ್ನು ಸಂಸ್ಕೃತದಿಂದ ಎರವಲು ಪಡೆದು, ಯಥಾವತ್ತಾಗಿ ಕನ್ನಡದಲ್ಲಿ ಅನ್ವಯಿಸಿರುವ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಕನ್ನಡದ ಆರಂಭದ ವ್ಯಾಕರಣ ಕೃತಿಗಳಿಂದ ಇತ್ತೀಚಿಗಿನ ಭಾಷಾ ವಿಜ್ಞಾನದ ಕೃತಿಗಳವರೆಗೆ ಈ ಪರಂಪರೆ ಮುಂದುವರೆದಿರುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಇದಕ್ಕೆ ಪರ್ಯಾಯವಾಗಿ ಕನ್ನಡದಲ್ಲಿ ಡಿ. ಎನ್. ಶಂಕರ ಬಟ್ ಮತ್ತಿತರರ ಅಭಿಪ್ರಾಯಗಳನ್ನು ಸಂಕ್ಷೇಪವಾಗಿ ಹೇಳಲಾಗಿದೆ.

ಮೂರನೇ ಅಧ್ಯಾಯವಾದ 'ಜಗತ್ತಿನ ಲಿಪಿ ಸುಧಾರಣೆಯ ಇತಿಹಾಸ'ದಲ್ಲಿ ಜಗತ್ತಿನ ವಿವಿಧ ದೇಶಗಳಲ್ಲಿ ನಡೆದಿರುವ ಲಿಪಿ ಸುಧಾರಣೆಯ ಯತ್ನ ಮತ್ತು ಅದರ ಸಾಧ್ಯಾಸಾಧ್ಯತೆಗಳ ಕುರಿತು ಅಧ್ಯಯನ ನಡೆಸಲಾಗಿದೆ. ಡಿ. ಎನ್. ಶಂಕರ ಬಟ್ಟರ ವಾದಕ್ಕೆ ಪೂರಕವಾಗಿ ಮಲೇಷ್ಯಾ, ಫಿನ್‌ಲ್ಯಾಂಡ್, ರಷ್ಯಾ, ಚೀನಾ, ಜರ್ಮನಿ ದೇಶಗಳಲ್ಲಿ ಕೂಡ ಲಿಪಿ, ನುಡಿ ಬದಲಾವಣೆಗಾಗಿ ಚಳವಳಿ ನಡೆದ ಉದಾಹರಣೆಗಳಿವೆ. ಈ ಚಳವಳಿಗಳಿಂದಾಗಿ ಹಳೆಯ ಲಿಪಿಯಲ್ಲಿ ಬದಲಾವಣೆಗಳನ್ನು ತರಲಾಗಿದೆ. ಈ ಕುರಿತ ಸಮೀಕ್ಷೆ ನಡೆಸಲಾಗಿದೆ.

ಮಲೇಷ್ಯಾ, ಫಿನ್‌ಲ್ಯಾಂಡ್, ರಷ್ಯಾ, ಚೀನಾ, ಕೊರಿಯಾ ಮತ್ತು ಕರ್ನಾಟಕದಲ್ಲಿ ನಡೆದಿರುವ ಲಿಪಿ ಸುಧಾರಣೆಯ ಚಳವಳಿ ಮತ್ತು ಯತ್ನಗಳು ಹಾಗೂ ಇದರ ಸಾಧಕ – ಬಾಧಕಗಳನ್ನು ಕಂಡುಕೊಳ್ಳಲಾಗಿದೆ. ಕೊರಿಯಾದಲ್ಲಿ ನಡೆದ ಹಂಗುಲ್ ಲಿಪಿ ಚಳವಳಿಯಲ್ಲಿ ಪಾರಂಪರಿಕವಾಗಿ ಬಳಕೆಯಲ್ಲಿದ್ದ ಲಿಪಿ ಸುಧಾರಣೆ ವೇಳೆ ಚಾಣಾಕ್ಷತೆಯಿಂದ ಸುಧಾರಣೆಗಳನ್ನು ಜಾರಿಗೆ ತಂದ ಸಂಗತಿ ಕಂಡುಬಂದಿದೆ. ಪಾರಂಪರಿಕವಾಗಿ ಬಳಕೆಯಲ್ಲಿದ್ದ ಲಿಪಿಯಲ್ಲಿ ಆಗಿರುವ ಸುಧಾರಣೆಗಳನ್ನು ಅಧ್ಯಯನಕ್ಕೆ ಪ್ರವೇಶಿಕೆಯಾಗಿ ಬಳಸಿಕೊಳ್ಳಲಾಗಿದೆ.

ಮಲೇಷ್ಯಾದಲ್ಲಿ ಜಾರಿಯಲ್ಲಿದ್ದ ನುಡಿಯಲ್ಲಿ ಸುಧಾರಣೆ ತರುವ ಮೂಲಕ ರೋಮನ್ ಲಿಪಿಯನ್ನು ಬಳಸಿಕೊಂಡೇ ರುಮಿ ಲಿಪಿಯನ್ನು ರಚಿಸಲಾಗಿದೆ. ಹೊಸ ಲಿಪಿಯ ನಂತರ ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆಯಾಗಿರುವ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಚೈನೀ ಭಾಷೆಯ ಲಿಪಿಯಲ್ಲಿದ್ದ ಅತ್ಯಂತ ಕ್ಲಿಷ್ಟಕರ ಸಂಗತಿಗಳನ್ನು ಕೈಬಿಟ್ಟು ಬದಲಾವಣೆಗಳನ್ನು ಜಾರಿಗೆ ತಂದ ಸಂಗತಿಯನ್ನು ಅಧ್ಯಯನ ನಡೆಸಲಾಗಿದೆ. ಸುಧಾರಿತ ಸರಳ ಚೈನೀಸ್ ಲಿಪಿಯ ನಂತರ ಚೈನೀಸ್ ಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ತೈವಾನ್, ಹಾಂಗ್‌ಕಾಂಗ್ ಮತ್ತು ಮಕಾವ್ಗಳಲ್ಲಿ ತಲೆತಲಾಂತರದ ಚೈನೀಸ್ ಲಿಪಿಯನ್ನೇ ಇಂದಿಗೂ ಬಳಸಲಾಗುತ್ತಿರುವ ಸಂಗತಿಯನ್ನೂ ಕಂಡುಕೊಳ್ಳಲಾಗಿದೆ. ಚೀನಾದಲ್ಲಿ ಕೂಡ ಲಿಪಿ ಬದಲಾವಣೆಯ ನಂತರ ಸಾಕ್ಷರತೆಯ ಪ್ರಮಾಣದಲ್ಲಿ ಏರಿಕೆಯಾಗಿದೆ ಮತ್ತು ಅಂತರ್ಜಾಲದಲ್ಲಿ ಕೂಡ ಹೊಸ ಲಿಪಿ ಬಳಕೆಯಾಗುತ್ತಿದೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ಫಿನ್‌ಲ್ಯಾಂಡ್‌ನಲ್ಲಿ ನಡೆದ ಲಿಪಿ ಸುಧಾರಣೆಯಲ್ಲಿ ಕಲೆವಾಲ ಎಂಬ ಕೃತಿ ಮಹತ್ವದ ಪಾತ್ರ ವಹಿಸಿದ ಸಂಗತಿಯನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಫಿನ್‌ಲ್ಯಾಂಡ್‌ನಲ್ಲಿ ನಡೆದ ಲಿಪಿ ಹೋರಾಟದಲ್ಲಿ ಮೇಲ್ವರ್ಗ ಸಂಪೂರ್ಣವಾಗಿ ಭಾಗವಹಿಸಿದ ಸಂಗತಿಯನ್ನು ಅಧ್ಯಯನದಲ್ಲಿ ಹೇಳಲಾಗಿದೆ. ಲಿಪಿ ಸುಧಾರಣೆಯನ್ನು ವಿರೋಧಿಸಿದ್ದ ಸ್ವೀಡಿಶ್ ಭಾಷಿಕರು ಈಗ ಅಲ್ಪಸಂಖ್ಯಾತರಾಗಿದ್ದು, ಅವರು ಕೂಡ ಫಿನ್ನಿಶ್ ಭಾಷೆಯನ್ನು ಕಲಿಯುತ್ತಿದ್ದಾರೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಇದರೊಂದಿಗೆ ಲಿಪಿ ಸುಧಾರಣೆಯ ನಂತರ ಫಿನ್‌ಲ್ಯಾಂಡ್ ಆರ್ಥಿಕವಾಗಿ ಸಬಲವಾದ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ರಷ್ಯಾದಲ್ಲಿ ನಡೆದ 'ಸಿರಿಲ್ಲಿಕ್' ಬದಲಿಗೆ 'ಸಿವಿಲ್' ಎಂಬ ಲಿಪಿಯನ್ನು ಪ್ರಚಲಿತಕ್ಕೆ ತರಲಾಗಿರುವ ಸಂಗತಿಯನ್ನು ಅಧ್ಯಯನ ನಡೆಸಲಾಗಿದೆ. ೧೮ ಮತ್ತು ೧೯ನೇ ಶತಮಾನದ

ಉದ್ದಕ್ಕೂ ಸಮಯಕ್ಕೆ ತಕ್ಕಂತೆ ಅಗತ್ಯವಾದ ಮಾರ್ಪಾಡುಗಳಿಗೆ ರಷ್ಯಾ ಲಿಪಿ ಒಗ್ಗಿಕೊಂಡಿದೆ. ಹೊಸದಾಗಿ ಜಾರಿಗೆ ತರಲಾದ ಲಿಪಿ ಸುಧಾರಣೆಯಿಂದಾಗಿ I, ѳ ಮತ್ತು ѣ ಅಕ್ಷರಗಳನ್ನು ಕೈಬಿಡುವ ಲಿಪಿ ಸುಧಾರಣೆಯ ಜೊತೆಗೆ b ಅಕ್ಷರವನ್ನೂ ಕೂಡ ಕೈಬಿಡಲಾಯಿತು. b ಅಕ್ಷರದ ಬದಲು ಅಪಾಸ್ಟ್ರಫಿಯನ್ನು ಬಳಕೆಗೆ ತರಲಾಗಿರುವ ಸಂಗತಿಯನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಜರ್ಮನಿಯಲ್ಲಿ ನಡೆದ ಲಿಪಿ ಸುಧಾರಣೆಗಾಗಿ ಕೌನ್ಸಿಲ್ ಫಾರ್ ಜರ್ಮನ್ ಆರ್ಥೋಗ್ರಫಿ ಸಮಿತಿ ರಚಿಸುವ ಮೂಲಕ ಲಿಪಿ ಸುಧಾರಣೆಗೆ ಯತ್ನಿಸಲಾಯಿತು. ನಂತರ ಸಮಿತಿ ಸೂಚಿಸಿದ ತಿದ್ದುಪಡಿಗಳನ್ನು ಜಾರಿಗೆ ತರಲಾಗಿದ್ದು, ಸರ್ಕಾರ ಮತ್ತು ಶಿಕ್ಷಣದ ಭಾಷೆಯಲ್ಲಿ ಸುಧಾರಿತ ಲಿಪಿಯನ್ನು ಜಾರಿಗೆ ತರಲಾಗಿದೆ. ಸುಧಾರಣೆಯ ನಂತರ ಕೂಡ ಸ್ಥಳದ ಹೆಸರುಗಳು ಹಾಗೂ ಕುಟುಂಬದ ಹೆಸರುಗಳನ್ನು ಹಳೆಯ ಲಿಪಿಯಲ್ಲೇ ಬರೆಯಲು ಅವಕಾಶ ನೀಡುವ ಮೂಲಕ ಬಂಡಾಯದ ಸಾಧ್ಯತೆಗಳನ್ನು ಶಮನ ಮಾಡಲಾಗಿರುವುದನ್ನು ಅಧ್ಯಯನ ನಡೆಸಲಾಗಿದೆ. ಜರ್ಮನಿಯಲ್ಲಿ ಮಾಧ್ಯಮಗಳು ಮತ್ತು ಪುಸ್ತಕ ಪ್ರಕಟಣೆಯಲ್ಲಿ ಶೇ. ೮೦ರಷ್ಟು ಹೊಸ ಲಿಪಿಯನ್ನು ಜಾರಿಗೆ ತರಲಾಗಿದೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ಕೊರಿಯಾದಲ್ಲಿ ೧೫ನೇ ಶತಮಾನದಲ್ಲೇ ಲಿಪಿ ಸುಧಾರಣೆಗೆ ಸೆಜೋಂಗ್ ಎಂಬ ರಾಜ ಮುಂದಾದ ಸಂಗತಿಯನ್ನು ಅಧ್ಯಯನ ನಡೆಸಲಾಗಿದೆ. ಈ ವೇಳೆ ಪಾರಂಪರಿಕ ಮನಃಸ್ಥಿತಿಯವರನ್ನು ಹೊಸ ಲಿಪಿ ಒಗ್ಗಿಸಲು ನಡೆಸಿದ ರಹಸ್ಯ ಕಾರ್ಯಾಚರಣೆಗಳನ್ನು ಅಧ್ಯಯನ ನಡೆಸಲಾಗಿದೆ. ಸೆಜೋಂಗ್ ತನ್ನ ಒಡ್ಡೋಲಗದಲ್ಲಿದ್ದ ಪಂಡಿತರಿಂದ ಉದ್ದೇಶಿತ ಲಿಪಿ ಸುಧಾರಣೆಯ ರೂಪರೇಷೆಗಳನ್ನು ಸಿದ್ಧಪಡಿಸಿ, ಸುಧಾರಿತ ಲಿಪಿ ಬಳಕೆಗೆ ನಡೆಸಿದ ಯತ್ನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪಾರಂಪರಿಕವಾಗಿ ಬಳಕೆಯಲ್ಲಿದ್ದ ಹಂಜ ಲಿಪಿಯ ಬದಲಿಗೆ ಜಾರಿಗೆ ತಂದ ಹಂಗುಲ್ ಲಿಪಿಯಿಂದ ಬರಹ ಎಲ್ಲರ ಸ್ವತ್ತಾಗಿದೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ಕನ್ನಡದಲ್ಲಿ ಕೂಡ ಲಿಪಿ ಸುಧಾರಣೆಯ ಯತ್ನಗಳು ೧೯೩೬ರಲ್ಲಿ ನಡೆದ ಇತಿಹಾಸವನ್ನು ಅಧ್ಯಯನ ನಡೆಸಲಾಗಿದೆ. ಅಂದು ರಚನೆಯಾಗಿದ್ದ ಸಮಿತಿ ನೀಡಿದ ಶಿಪಾರಸುಗಳನ್ನು ಬಿ. ಎಂ. ಶ್ರೀಕಂಠಯ್ಯನವರು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡದ ಬಾವುಟ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಈ ವಿಷಯವನ್ನು ಅಧ್ಯಯನ ನಡೆಸಲಾಗಿದ್ದು, ಸಮಿತಿಯ ಶಿಫಾರಸುಗಳನ್ನು ಸ್ವತಃ ಬಿ. ಎಂ. ಶ್ರೀಕಂಠಯ್ಯನವರೇ ಪ್ರಾಯೋಗಿಕವಾಗಿ 'ಕನ್‌ನಡದ ಬಾವುಟ' ಹೆಸರಿನ ಕವಿತೆ ರಚಿಸುವ ಮೂಲಕ ಜಾರಿಗೆ ತರುವ ಯತ್ನವನ್ನು ಅಧ್ಯಯನ ನಡೆಸಲಾಗಿದೆ. ಆದರೆ, ಭವಿಷ್ಯದಲ್ಲಿ ಹೊಸ ಬರಹವನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ನಾಲ್ಕನೇ ಅಧ್ಯಾಯವಾದ 'ಭಾಷಿಕ ಬಿಡುಗಡೆ: ಪರಿಭಾಷೆಯ ನಿರ್ವಚನ'ದಲ್ಲಿ ಕನ್ನಡದಲ್ಲಿ ನಡೆದಿರುವ ಬಿಡುಗಡೆಯ ಚರ್ಚೆಗಳನ್ನು ಸಂಗ್ರಹಿಸಲಾಗಿದೆ. ನಿರ್ವಸಾತೀಕರಣ ಎಂಬ ಹೆಸರಿನಲ್ಲಿ ನಡೆದಿರುವ ಚರ್ಚೆಗಳಿಗೂ ಭಾಷಿಕ ಬಿಡುಗಡೆಗೂ ಇರುವ ಸಂಬಂಧವನ್ನು ಚರ್ಚಿಸಲಾಗಿದೆ. ಈ

ಅಧ್ಯಾಯದಲ್ಲಿ ಆಧುನಿಕ ಪೂರ್ವ ಕಾಲಘಟ್ಟದಲ್ಲಿ ನಡೆದ ಬಿಡುಗಡೆಯ ಹೋರಾಟಗಳು ಮತ್ತು ಭಾಷಿಕ ಬಿಡುಗಡೆ ಕುರಿತ ಚರ್ಚೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಾಯ ಭಾಷಿಕ ಬಿಡುಗಡೆಗೆ ಪ್ರವೇಶಿಕೆಯಾಗಿದ್ದು, ಭಾಷಿಕ ಬಿಡುಗಡೆಗೂ ಮುನ್ನ ನಡೆದ ವಿವಿಧ ಮಾದರಿಯ ಬಿಡುಗಡೆಯ ಯತ್ನಗಳನ್ನು ಚರ್ಚಿಸಲಾಗಿದೆ.

ಐದನೇ ಅಧ್ಯಾಯವಾದ 'ಆಧುನಿಕೋತ್ತರ ಭಾಷಿಕ ಬಿಡುಗಡೆಯ ಚಿಂತನೆಗಳು' ಎಂಬ ಅಧ್ಯಾಯದಲ್ಲಿ ಕನ್ನಡ ಬರಹದಲ್ಲಿ ಇರುವ ಸಂಸ್ಕೃತದ ಪ್ರಾಬಲ್ಯ, ವ್ಯಾಕರಣ ರಚನೆಯಲ್ಲಿ ಸಂಸ್ಕೃತದ ಹೇರಿಕೆ, ಕನ್ನಡದಲ್ಲಿ ಬಳಕೆಯಲ್ಲಿರುವ ಸಂಸ್ಕೃತ ಮಹಾಪ್ರಾಣಾಕ್ಷರಗಳು, ಋ, ಐ, ಔ, ಷ, ಁ ಗಳನ್ನು ಕುರಿತು ರಚನೆಯಾಗಿರುವ ಡಿ. ಎನ್. ಶಂಕರ ಬಟ್ ಮತ್ತು ಕೆ. ವಿ. ನಾರಾಯಣ ಮತ್ತು ಇತರ ಕೃತಿಗಳನ್ನು ಅಧ್ಯಯನ ನಡೆಸಲಾಗಿದೆ. ಈ ಅಧ್ಯಾಯದಲ್ಲಿ ಡಿ. ಎನ್. ಶಂಕರ ಬಟ್ ಅವರು ಕನ್ನಡದಲ್ಲಿ ನಡೆಸುತ್ತಿರುವ ಪ್ರಯೋಗಗಳನ್ನು 'ಕನ್ನಡ ಬರಹವನ್ನು ಸರಿಪಡಿಸೋಣ' ಕೃತಿಯ ಮೂಲಕ ಅವರು ಇನ್ನಿತರ ಕೃತಿಗಳಲ್ಲಿ ನಡೆಸಿರುವ ಸಂಶೋಧನೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಾಯದಲ್ಲಿ ಕನ್ನಡದಲ್ಲಿ ಅನವಶ್ಯಕವಾಗಿ ಬಳಕೆಯಾಗುತ್ತಿರುವ ಸಂಸ್ಕೃತ ಮಹಾಪಾಣಾಕ್ಷರಗಳ ಬಳಕೆಯನ್ನು ಹೊರತುಪಡಿಸಿ ಕನ್ನಡ ಬರಹವನ್ನು ಬರೆಯಲು ಸಾಧ್ಯ ಎಂ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಕನ್ನಡದ ಆಡುನುಡಿಯಲ್ಲಿ ಮಹಾಪ್ರಾಣಗಳು ಕಟ್ಟುನಿಟ್ಟಾಗಿ ಬಳಕೆಯಾಗುವುದಿಲ್ಲ; ಆದರೆ, ಬರಹದಲ್ಲಿ ಮಾತ್ರ ಇವುಗಳನ್ನು ಬಳಕೆಯಲ್ಲಿವೆ. ಇದರಿಂದಾಗಿ ಕನ್ನಡದ ಕಲಿಕೆ ಮತ್ತು ಬರವವಣಿಗೆಯಲ್ಲಿ ಅನವಶ್ಯಕ ಗೊಂದಲವಾಗಿದೆ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ.

ಕನ್ನಡದಲ್ಲಿ ರಚನೆಯಾಗಿರುವ ಬಹುತೇಕ ವ್ಯಾಕರಣಗಳು ಆಡು ಮಾತಿನ ಬದಲು ಬರಹ ಭಾಷೆಯನ್ನು ಅವಲಂಬಿಸಿವೆ. ಆದರೆ, ಈ ವ್ಯಾಕರಣಗಳು ಆಡು ಮಾತನ್ನು ಆಧರಿಸಿ ರಚನೆಯಾಗಬೇಕು ಎಂದು ಡಿ. ಎನ್. ಶಂಕರ ಬಟ್ಟರು ಹೇಳುತ್ತಿರುವ ಸಂಗತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವರೊಂದಿಗೆ ಕೆ. ವಿ. ನಾರಾಯಣ ಅವರು ಸಂಸ್ಕೃತದ ಹೇರಿಕೆಯಿಂದ ಬಿಡುಗಡೆ ಕುರಿತು ನಡೆಸಿರುವ ಸಂಶೋಧನೆಗಳನ್ನು ಅಧ್ಯಯನ ನಡೆಸಲಾಗಿದ್ದು, ಡಿ. ಎನ್. ಶಂಕರ ಬಟ್ ಅವರ ಸಂಶೋಧನೆಗಳಿಗೆ ಪೂರಕವಾಗಿ ಇತ್ತೀಚೆಗೆ ನಡೆಸುತ್ತಿರುವ ಪ್ರಯೋಗಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಆರನೆಯ ಅಧ್ಯಾಯವಾದ 'ಭಾಷಿಕ ಬಿಡುಗಡೆಯ ಸವಾಲುಗಳು ಮತ್ತು ಸಾಧ್ಯತೆಗಳು'ನಲ್ಲಿ ಡಿ. ಎನ್. ಶಂಕರ ಬಟ್ಟರು ಮಂಡಿಸುತ್ತಿರುವ ಬಿಡುಗಡೆಯ ಚಿಂತನೆಗಳಿಗೆ ಎದುರಾಗಿರುವ ಸವಾಲುಗಳನ್ನು ಅಧ್ಯಯನ ನಡೆಸಲಾಗಿದೆ. ಇದರಲ್ಲಿ ಮುಖ್ಯವಾಗಿ ಡಿ. ಎನ್. ಶಂಕರ ಬಟ್ಟರ ಚಿಂತನೆಗಳಿಗೆ ವಿರೋಧ ವ್ಯಕ್ತಪಡಿಸುತ್ತಿರುವ ಕೆ. ವಿ. ತಿರುಮಲೇಶ್ ಅವರ ಲೇಖನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರೊಂದಿಗೆ ಇವರಿಬ್ಬರ ನಡುವೆ ನಡೆದಿರುವ ಚರ್ಚೆಗಳನ್ನು ಪ್ರಾಸಂಗಿಕವಾಗಿ ಅಧ್ಯಯನ ನಡೆಸಲಾಗಿದ್ದು, ಇಬ್ಬರ ಚಿಂತನೆಗಳನ್ನು ಒಂದರೊಡನೆ ಒಂದನ್ನು ಇರಿಸಿ ಚರ್ಚಿಸಲಾಗಿದೆ.

ಭಾಷಿಕ ಬಿಡುಗಡೆಯ ಸಾಧ್ಯತೆಗಳು ಎಂಬ ಭಾಗದಲ್ಲಿ ಡಿ. ಎನ್. ಶಂಕರ ಬಟ್ಟರ ಚಿಂತನೆಗಳಿಗೆ ಪೂರಕವಾಗಿ ಕನ್ನಡದಲ್ಲಿ ನಡೆಯುತ್ತಿರುವ ಪ್ರಯೋಗಗಳನ್ನು ಅಧ್ಯಯನ ನಡೆಸಲಾಗಿದೆ. ಕನ್ನಡದಲ್ಲಿ ಶಂಕರ ಬಟ್ಟರ ಹೊಸ ಬರಹದ ಮಾದರಿಯನ್ನು ಬಳಸುತ್ತಿರುವವರ ಕೃತಿಗಳನ್ನು ಉದಾಹರಿಸಲಾಗಿದೆ. ಇದರೊಂದಿಗೆ ಹೊನಲು.ನೆಟ್, ನುಡಿಕನ್ನಡ ವೆಬ್ ತಾಣಗಳಲ್ಲಿ ಡಿ. ಎನ್. ಶಂಕರ ಬಟ್ಟರ ಮಾದರಿಯನ್ನು ಬಳಸುತ್ತಿರುವುದು ಮತ್ತು ಅವರ ಚಿಂತನೆಗಳಿಗೆ ಪೂರಕವಾಗಿ ನಡೆಯುತ್ತಿರುವ ಚರ್ಚೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ಫಲಿತಗಳು

- ಕನ್ನಡದಲ್ಲಿ ಬಳಕೆಯಾಗುತ್ತಿರುವ ವರ್ಣ ಮಾಲೆಯಲ್ಲಿ ೪೭ ಅಕ್ಷರಗಳ ಬದಲಿಗೆ ಕೇವಲ ೩೧ ಅಕ್ಷರಗಳ ಮೂಲಕವೇ ಕನ್ನಡ ಬರಹ ಸಾಧ್ಯ.
- ಮಹಾಪ್ರಾಣಾಕ್ಷರ, ಋ, ಐ, ಔ, ೯, ಷ ಗಳ ಅಗತ್ಯವಿಲ್ಲ.
- ಕನ್ನಡದಲ್ಲಿ ಸಂಸ್ಕೃತ ಅಕ್ಷರ, ಪದಗಳ ಬಳಕೆ ಅಗತ್ಯವಿಲ್ಲ.
- ಕನ್ನಡದಲ್ಲಿ ಸಂಸ್ಕೃತದ ಹೇರಿಕೆ ಅನಗತ್ಯ.
- ಬರಹ ಮತ್ತು ಆಡು ಮಾತಿನ ನಡುವೆ ಅಂತರವಿದೆ.
- ಬರಹ ಭಾಷೆಯನ್ನು ಆಧರಿಸಿ ಕನ್ನಡದಲ್ಲಿ ವ್ಯಾಕರಣಗಳು ರಚನೆಯಾಗಿವೆ.
- ಆಡು ಮಾತನ್ನು ಆಧರಿಸಿ ಕನ್ನಡದಲ್ಲಿ ವ್ಯಾಕರಣಗಳು ರಚನೆಯಾಗಬೇಕು.
- ಪ್ರಾಚೀನ ವೈಯಾಕರಣಿಗಳ ಮೇಲೆ ಕೂಡ ಸಂಸ್ಕೃತದ ಪ್ರಭಾವ ಇದೆ.
- ಕನ್ನಡದಲ್ಲಿ ಸಂಸ್ಕೃತ ಪದಗಳ ಅಗತ್ಯ ಇಲ್ಲದೆ ಪಾರಿಭಾಷಿಕ ಪದಗಳ ಸೃಷ್ಟಿ ಸಾಧ್ಯ.
- ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳಿಂದ ಸಾಮಾಜಿಕವಾಗಿ ಕೀಳರಿಮೆ ಜಾರಿಯಲ್ಲಿದೆ.
- ಸಂಸ್ಕೃತ ಮಹಾಪ್ರಾಣಾಕ್ಷರಗಳ ಬಳಕೆಯಿಂದ ಕಲಿಕೆಯ ಮೇಲೆ ದುಷ್ಪರಿಣಾಮವಾಗುತ್ತಿದೆ.
- ಮಹಾಪ್ರಾಣಾಕ್ಷರಗಳ ಬಳಕೆಯಿಂದ ಕೆಳವರ್ಗದ ಕಲಿಕೆಯ ಸಾಮರ್ಥ್ಯ ಕುಗ್ಗಿದೆ.
- ಮಹಾಪ್ರಾಣಾಕ್ಷರಗಳನ್ನು ಕೈಬಿಡುವುದರಿಂದ ಕಲಿಕೆ ಸರಳವಾಗಲಿದೆ.
- ಸಂಸ್ಕೃತ ಅಕ್ಷರ, ಪದಗಳನ್ನು ಕೈಬಿಡುವುದರಿಂದ ಭಾಷೆ ಸರಳವಾಗಲಿದೆ.

- ಇಂಗ್ಲಿಷ್, ಸಂಸ್ಕೃತ ಸೇರಿದಂತೆ ಯಾವುದೇ ಪದಗಳ ಬಳಕೆ ಅಗತ್ಯವಿದ್ದಲ್ಲಿ ಕನ್ನಡದಲ್ಲಿ ಬಳಸಬಹುದು.

- ಕನ್ನಡದಲ್ಲಿ ರಚನೆಯಾಗಿರುವ ವ್ಯಾಕರಣ ಮತ್ತು ಭಾಷಾ ವಿಜ್ಞಾನ ಗ್ರಂಥಗಳಲ್ಲಿ ಸಂಸ್ಕೃತದ ಪ್ರಭಾವವಿದೆ.

- ಹಳೆಗನ್ನಡ, ಹೊಸಗನ್ನಡದ ವ್ಯಾಕರಣದಲ್ಲಿ ವ್ಯತ್ಯಾಸವಿದೆ.

- ದ್ರಾವಿಡ – ಸಂಸ್ಕೃತ ಭಾಷೆಗಳ ನಡುವೆ ಅಗಾಧ ವ್ಯತ್ಯಾಸವಿದೆ.

- ಇಂಗ್ಲಿಷ್, ಸಂಸ್ಕೃತ ವ್ಯಾಕರಣಗಳನ್ನು ಕನ್ನಡಕ್ಕೆ ಅನ್ವಯಿಸಬೇಕಿಲ್ಲ.

- ಸಂಸ್ಕೃತ ಮತ್ತು ದ್ರಾವಿಡ ಭಾಷೆಗಳ ಜಾಯಮಾನ ಬೇರೆ

- ಸಂಸ್ಕೃತ ಪದಗಳಿಗೆ ಕನ್ನಡದ ಪದಗಳನ್ನು ಬಳಸುವ ಅನೇಕ ಸಾಧ್ಯತೆಗಳಿವೆ.

- ಹೊಸ ಪಾರಿಭಾಷಿಕ ಪದಗಳಿಗೆ ಹಳಗನ್ನಡದಿಂದ ಕೂಡ ಪದಗಳನ್ನು ಪಡೆಯಬಹುದು.

- ವ್ಯಾಕರಣದಲ್ಲಿ ಸದ್ಯಕ್ಕೆ ಬಳಕೆಯಲ್ಲಿರುವ ಸಂಸ್ಕೃತ ಪರಿಭಾಷೆ, ಹೆಸರುಗಳ ಬದಲಿಗೆ ಕನ್ನಡದಲ್ಲಿ ಹೊಸ ಪದಗಳನ್ನು ಸೃಷ್ಟಿಸಬಹುದು.

- ಜಗತ್ತಿನ ಅನೇಕ ದೇಶಗಳಲ್ಲಿ ಲಿಪಿ ಸುಧಾರಣೆ ಚಳವಳಿಗಳು ನಡೆದಿವೆ.

- ಲಿಪಿ ಸುಧಾರಣೆ ಚಳವಳಿಗಳ ಯಶಸ್ಸು ಪ್ರಭುತ್ವದ ಆಧಾರದ ಮೇಲೆ ಅವಲಂಬಿತ.

- ಲಿಪಿ ಸುಧಾರಣೆಗೆ ದೊಡ್ಡ ಮಟ್ಟದ ಇಚ್ಛಾಶಕ್ತಿಯ ಅಗತ್ಯವಿದೆ.

- ಶಂಕರ ಬಟ್ಟರ ಹೊಸ ಬರಹವನ್ನು ಜಾರಿಗೆ ತರುವುದು ಕಷ್ಟ.

- ಶಂಕರ ಬಟ್ಟರ ಹೊಸ ಪ್ರಯೋಗಗಳು ಮತ್ತಷ್ಟು ಸಮಸ್ಯಾತ್ಮಕವಾಗಿವೆ.

- ಶಂಕರ ಬಟ್ಟರ ಎಲ್ಲ ಆಲೋಚನೆಗಳ ಪರವಾಗಿ ಕನ್ನಡ ಜಗತ್ತು ಆಲೋಚಿಸುತ್ತಿಲ್ಲ.

- ಹೊಸ ಬರಹವನ್ನು ಅಳವಡಿಸಿಕೊಂಡರೆ ಹಳೆಯ ಬರಹದ ಹಳೆಯ ಕೃತಿಗಳನ್ನು ಏನು ಮಾಡುವುದು? ಎಂಬ ಪ್ರಶ್ನೆಗೆ ಉತ್ತರವಿಲ್ಲ.

- ಕನ್ನಡ ಕಲಿಕೆ ಕಷ್ಟವಾದರೆ ಗಣಿತ. ವಿಜ್ಞಾನ ಇತ್ಯಾದಿ ವಿಷಯದ ಕಲಿಕೆ ಸಮಸ್ಯೆಯಲ್ಲವೇ? ಎಂಬ ಪ್ರಶ್ನೆಗೆ ಉತ್ತರವಿಲ್ಲ.

ಮುಂದಿನ ಅಧ್ಯಯನದ ಸಾಧ್ಯತೆಗಳು

ಕನ್ನಡ ನುಡಿ: ಬಿಡುಗಡೆಯ ಚಿಂತನೆಗಳು ಎಂಬ ಪ್ರಸ್ತುತ ಅಧ್ಯಯನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಬಿಡುಗಡೆಯ ಚಿಂತನೆಗಳನ್ನು ನಡೆಸಲು ಸಾಧ್ಯ ಎಂಬ ಸಂಗತಿಯನ್ನು ಕಂಡುಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕನ್ನಡ ನುಡಿಯಲ್ಲಿ ನಡೆದಿರುವ ಬಿಡುಗಡೆಯ ಚಿಂತನೆಗಳನ್ನು ಅಧ್ಯಯನ ನಡೆಸಲಾಗಿದ್ದು, ವ್ಯಾಕರಣ ಅಂಶಗಳನ್ನು ಕುರಿತು ಅಧ್ಯಯನ ನಡೆಸಬಹುದು. ಶಬ್ದ, ಅಕ್ಷರ, ಪದ, ವಾಕ್ಯ, ಪ್ರತ್ಯಯ, ವಿಭಕ್ತಿ, ಕಾರಕ, ಸಮಾಸ, ವಚನ, ಲಿಂಗ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಹೇರಿಕೆಯಾಗಿರುವ ಸಂಸ್ಕೃತ ವ್ಯಾಕರಣವನ್ನು ಕುರಿತು ಅಧ್ಯಯನ ನಡೆಸುವ ಸಾಧ್ಯತೆ ಇದೆ. ಕನ್ನಡದಲ್ಲಿ ಇದುವರೆಗೆ ರಚನೆಯಾಗಿರುವ ಬಹುತೇಕ ವ್ಯಾಕರಣ ಗ್ರಂಥಗಳು ಬರಹ ಭಾಷೆಯನ್ನು ಅವಲಂಬಿಸಿವೆ. ಆದ್ದರಿಂದ, ಬರಹದ ಭಾಷೆ ಮತ್ತು ಆಡು ಮಾತುಗಳು ನಡುವೆ ಇರುವ ವ್ಯತ್ಯಾಸವನ್ನು ಆಧರಿಸಿ ಭವಿಷ್ಯದಲ್ಲಿ ಭಾಷಿಕವಾಗಿ ಮಹತ್ವದ ಸಂಶೋಧನೆಗಳನ್ನು ನಡೆಸುವ ಸಾಧ್ಯತೆ ಇದೆ.

ತತ್ವಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಅಭಿವೃದ್ಧಿ ಅಧ್ಯಯನ, ರಾಜಕೀಯ ಶಾಸ್ತ್ರ, ಸಾಹಿತ್ಯ, ಕಾವ್ಯ ಮೀಮಾಂಸೆ, ಸ್ವಾತಂತ್ರ್ಯ ಹೋರಾಟದಿಂದ ಇದುವರೆಗೆ ನಡೆಯುತ್ತಿರುವ ದಲಿತ, ರೈತ, ಮಹಿಳಾ, ಪರಿಸರ ಇತ್ಯಾದಿ ಚಳವಳಿಗಳ ಕುರಿತು ಬಿಡುಗಡೆಯ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಬಹುದು. ಇದುವರೆಗೆ ವಸಾಹತುಶಾಹಿ ಧೋರಣೆಯಿಂದ ಮತ್ತು ವೈದಿಕ ಚಿಂತನೆಯಿಂದ ಪ್ರೇರಿತವಾಗಿ ನಡೆದಿರುವ ಅಧ್ಯಯನಗಳಿಗೆ ಪರ್ಯಾಯವಾಗಿ ಕಲೆ, ಸಾಹಿತ್ಯ, ಧರ್ಮ, ಚಳವಳಿಗನ್ನು ಅಧ್ಯಯನ ನಡೆಸುವ ಸಾಧ್ಯತೆ ಇದೆ.

ಮೂಲ ಆಕರ ಗ್ರಂಥಗಳು:

೧) ಶಂಕರ ಭಟ್ ಡಿ.ಎನ್., ೨೦೦೫, **ನಿಜಕ್ಕೂ ಹಳೆಗನ್ನಡ ವ್ಯಾಕರಣ ಎಂತಹದು?**,. ಭಾಷಾ ಪ್ರಕಾಶನ, ಮೈಸೂರು.

೨) ಶಂಕರಭಟ್ ಡಿ.ಎನ್., ೨೦೦೬, **ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ**, ಭಾಷಾ ಪ್ರಕಾಶನ, ಮೈಸೂರು.

೩) ಶಂಕರ ಬಟ್ ಡಿ.ಎನ್., ೨೦೦೭, **ಕನ್ನಡ ನುಡಿ ನಡೆದು ಬಂದ ದಾರಿ**, ಬಾಶಾ ಪ್ರಕಾಶನ, ಹೆಗ್ಗೋಡು.

೪) ಶಂಕರ ಬಟ್ ಡಿ.ಎನ್., ೨೦೦೮, **ಮಾತಿನ ಒಳಗುಟ್ಟು**, ಬಾಶಾ ಪ್ರಕಾಶನ, ಹೆಗ್ಗೋಡು.

೫) ಶಂಕರ ಬಟ್ ಡಿ.ಎನ್., ೨೦೦೮, **ಇಂಗ್ಲಿಶ್ ಪದಗಳಿಗೆ ಕನ್ನಡದ್ದೇ ಪದಗಳು**, ಬಾಶಾ ಪ್ರಕಾಶನ, ಹೆಗ್ಗೋಡು.

೬) ಶಂಕರ ಬಟ್ ಡಿ.ಎನ್., ೨೦೦೯, **ಕನ್ನಡ ವ್ಯಾಕರಣ ಯಾಕೆ ಬೇಕು?**, ಬಾಶಾ ಪ್ರಕಾಶನ, ಹೆಗ್ಗೋಡು.

೭) ಶಂಕರ ಬಟ್ ಡಿ.ಎನ್., ೨೦೦೯, **ಕನ್ನಡ ಬರಹವನ್ನು ಸರಿಪಡಿಸೋಣ**, ಬಾಶಾ ಪ್ರಕಾಶನ, ಹೆಗ್ಗೋಡು.

೮) ಶಂಕರ ಭಟ್ ಡಿ.ಎನ್., ೨೦೧೦, **ಭಾಷೆಯ ಬಗೆಗೆ ನೀವೇನು ಬಲ್ಲಿರಿ?**, ಭಾಷಾ ಪ್ರಕಾಶನ, ಹೆಗ್ಗೋಡು.

೯) ಶಂಕರ ಬಟ್ ಡಿ.ಎನ್., ೨೦೧೦, **ಕನ್ನಡ ಬರಹದ ಸೊಲ್ಲರಿಮೆ –೧**, ಬಾಶಾ ಪ್ರಕಾಶನ, ಹೆಗ್ಗೋಡು.

೧೦) ನಾರಾಯಣ ಕೆ.ವಿ., ೨೦೧೦, **ಕೆ.ವಿ.ಎನ್. ಈವರೆಗಿನ ಬರಹಗಳು, ಕಂತೆ ಒಂದರಿಂದ ಒಂಭತ್ತು, ತೊಂಡು ಮೇವು** (ಸಮಗ್ರ ಸಂಪುಟಗಳು), ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೧೧) ಮಾಧವ ಪೆರಾಜೆ (ಅನು), ರಾಬರ್ಟ್ ಕಾಲ್ಡ್‌ವೆಲ್(ಮೂ), ೨೦೦೫, **ತೌಲನಿಕ ದ್ರಾವಿಡ ವ್ಯಾಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೧೨) ಕುಲಕರ್ಣಿ ಆರ್.ವಿ.(ಗದ್ಯಾನುವಾದ), **ಆಂಡಯ್ಯ ಕವಿಯ ಕಬ್ಬಿಗರ ಕಾವಂ**, – ೨೦೦೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩) ನರಸಿಂಹಶಾಸ್ತ್ರಿ ಕೆ.ಎಲ್.(ಗದ್ಯಾನುವಾದ), ೨೦೦೪, **ಪಂಪ ಮಹಾಕವಿ ವಿರಚಿತ ಆದಿಪುರಾಣಂ**, ಕನ್ನಡ ಸಾಹಿತ್ಯ ಪರಿಷತ್ತು.

೧೪) ನಾಗವರ್ಮ, ೧೯೬೯, **ಶಬ್ದಸ್ಮೃತಿ**, ಸಮಾಜ ಪುಸ್ತಕಾಲಯ, ಧಾರವಾಡ.

೧೫) ಸೀತಾರಾಮಯ್ಯ ಎಂ.ವಿ.(ಸಂ), ೨೦೦೫, **ಶ್ರೀ ವಿಜಯ ಕೃತ ಕವಿರಾಜಮಾರ್ಗಂ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಭಾಷಾ ಅಧ್ಯಯನದ ಪೂರಕ ಆಕರ ಗ್ರಂಥಗಳು

೧) ಅನಂತರಂಗಾಚಾರ್ ಎನ್.ಎಸ್., ೨೦೦೬, **ನಿರುಕ್ತ,** ಡಿ.ವಿ.ಕೆ. ಮೂರ್ತಿ, ಮೈಸೂರು.

೨) ಅನಂತನಾರಾಯಣ ಎಚ್.ಎಸ್., ಬಸವರಾಜ ಕೋಡಗುಂಟಿ(ಸಂ), ೨೦೧೦, **ಭಾಷಾ ವಿಶ್ಲೇಷಣೆ,** ಬಂಡಾರ ಪ್ರಕಾಶನ, ಮಸ್ಕಿ.

೩) ಅಶೋಕ ಕುಮಾರ ರಂಜೇರೆ, ೨೦೦೫, **ಭಾಷೆ ಮತ್ತು ಶಿಕ್ಷಣ,** ನಿಧಿ ಪ್ರಕಾಶನ, ಹೊಸಪೇಟೆ.

೪) ಅಶೋಕ ಕುಮಾರ ರಂಜೇರೆ, ಮಹಾದೇವಯ್ಯ ಪಿ., ಸಾಂಬಮೂರ್ತಿ, ವೀರೇಶ ಬಡಿಗೇರ(ಸಂ), ೨೦೧೦, **ಆಡಳಿತ ಕನ್ನಡ,** , ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೫) ಆಚಾರ್ಯ ಕೆ.ಪಿ.(ಸಂ), ೨೦೦೩, **ಇಂಗ್ಲಿಷ್– ಕನ್ನಡ ಭಾಷಾವಿಜ್ಞಾನ ಕೋಶ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೨೦೦೩.ಕೆಂಪೇಗೌಡ ಕೆ., ೧೯೯೬, **ಸಾಮಾನ್ಯ ಭಾಷಾ ವಿಜ್ಞಾನ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೬) **ಕನ್ನಡ ವ್ಯಾಕರಣ ದರ್ಪಣ,** ೨೦೧೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೭) ಕಾರ್ಲೋಸ್ ಎಸ್., ೨೦೦೦, **ರಾಚನಿಕವಾದ ಮತ್ತು ನಿರಚನಾವಾದ,** ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೮) ಕುಶಾಲಪ್ಪಗೌಡ ಕೆ., ೨೦೦೭, **ಕನ್ನಡ ಸಂಕ್ಷಿಪ್ತ ವ್ಯಾಕರಣ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೯) ಕುಳ್ಳಿ ಜೆ.ಎಸ್., ೧೯೭೩, **ಐತಿಹಾಸಿಕ ಭಾಷಾ ವಿಜ್ಞಾನ,** ಸಿರಿಗನ್ನಡ ಪ್ರಕಾಶನ, ಧಾರವಾಡ,

೧೦) ಕೆಂಪೇಗೌಡ ಕೆ., ೧೯೯೬, **ತೌಲನಿಕ ದ್ರಾವಿಡ ಭಾಷಾ ವಿಜ್ಞಾನ,** ಡಾ.ಕೆ. ಕೆಂಪೇಗೌಡ, ಭಾರತೀ ಪ್ರಕಾಶನ, ಮೈಸೂರು.

೧೧) ಕೆಂಪೇಗೌಡ ಕೆ., ೨೦೦೦, **ಭಾಷಾ ವಿಜ್ಞಾನ ಪರಿಚಯ,** ನವಭಾರತೀ ಪ್ರಕಾಶನ, ಮೈಸೂರು.

೧೨) ಕೆಂಪೇಗೌಡ ಕೆ., ೨೦೦೭, **ಧ್ವನಿ ವಿಜ್ಞಾನ ಮತ್ತು ಧ್ವನಿಮಾ ವಿಜ್ಞಾನ,** ಗಜಾನನ ಪಬ್ಲಿಕೇಷನ್, ಮೈಸೂರು.

೧೩) ಕೆಂಪೇಗೌಡ ಕೆ., ೨೦೦೭, **ಆಕೃತಿಮಾ ವಿಜ್ಞಾನ ಮತ್ತು ವಾಕ್ಯ ವಿಜ್ಞಾನ,** ಗಜಾನನ ಪಬ್ಲಿಕೇಷನ್, ಮೈಸೂರು.

೧೪) ಕೆಂಪೇಗೌಡ ಕೆ., ೨೦೦೯, **ಅರ್ಥ ವಿಜ್ಞಾನ,** ಗಜಾನನ ಪಬ್ಲಿಕೇಷನ್, ಮೈಸೂರು.

೧೫) ಕೇಶವ ಶರ್ಮ ಕೆ., ೨೦೦೦, **ರಚನೆ–ನಿರಚನೆ,** ಅಭಿನವ, ಬೆಂಗಳೂರು.

೧೬) ಕೃಷ್ಣ ಪರಮೇಶ್ವರ ಭಟ್ಟ ಮತ್ತು ನಾಗಭೂಷಣ ಸಿ., ೨೦೦೫, **ಕನ್ನಡ: ರಚನೆ ಮತ್ತು ಬಳಕೆ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

೧೭) ಕೃಷ್ಣಯ್ಯ ಎಂ.ಎಚ್., ೧೯೯೩, **ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ,** ಸುವಿದ್ಯಾ ಪ್ರಕಾಶನ, ಬೆಂಗಳೂರು.

೧೮) ಗೋಪಾಲಕೃಷ್ಣಯ್ಯ ಕೆ.ಎಲ್., ೨೦೦೩, **ಭಾಷೆಯ ಬೆಳಕು,** ನವಕರ್ನಾಟಕ ಪ್ರಕಾಶನ, ಬೆಂಗಳೂರು.

೧೯) ಗೋವಿಂದರಾಜು ಸಿ.ಆರ್., ೨೦೦೬, **ಗೋಕಾಕ್ ವರದಿ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೦) ಚಿದಾನಂದ ಮೂರ್ತಿ ಎಂ., ೧೯೭೮, **ಭಾಷಾ ವಿಜ್ಞಾನದ ಮೂಲ ತತ್ವಗಳು,** ಡಿ.ವಿ.ಕೆ. ಮೂರ್ತಿ, ಮೈಸೂರು.

೨೧) ಚಿದಾನಂದ ಮೂರ್ತಿ ಎಂ., ೨೦೦೨, **ಭಾಷಾ ವಿಜ್ಞಾನ ಮತ್ತು ಛಂದಸ್ಸು,** ಸಪ್ನ ಬುಕ್ ಹೌಸ್, ಬೆಂಗಳೂರು.

೨೨) ನಾಗಭೂಷಣ ಸ್ವಾಮಿ ಓ.ಎಲ್., ೧೯೭೮, **ವಿಮರ್ಶೆಯ ಪರಿಭಾಷೆ,** ಅಂಕಿತ ಪುಸ್ತಕ, ಬೆಂಗಳೂರು.

೨೩) ನಾರಾಯಣ ಕೆ.ವಿ.(ಸಂ), ಸುಜ್ಞಾನಮೂರ್ತಿ ಬಿ., ಅಶೋಕ ಕುಮಾರ ರಂಜೇರೆ, ೧೯೯೭, **ದಿನದಿನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೨೪) ನಾರಾಯಣ ಪಿ.ವಿ., ೨೦೧೦, **ಹಳಗನ್ನಡ ಪದ ಸಂಪದ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೫) ಬಿಳಿಗಿರಿ ಎಚ್.ಎಸ್., ೨೦೦೪, **ವರ್ಣನಾತ್ಮಕ ವ್ಯಾಕರಣ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೬) ಪಂಜೆ ಮಂಗೇಶರಾವ್, ೨೦೧೦, **ಕನ್ನಡ ಮೂಲ ವ್ಯಾಕರಣ,** ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.

೨೭) ಬಸವರಾಜ ನಾಯ್ಕರ, ೧೯೯೯, **ಸಂರಚನಾವಾದ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨೮) ಮಂಜುನಾಥ ಬೇವಿನ ಕಟ್ಟಿ(ಸಂ), ೨೦೧೦, **ಕನ್ನಡ ಸಾರ್ವಭೌಮತ್ವ ಕನಸಿನ ಆಯಾಮಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಲಯ.

೨೯) ಮಹಾದೇವಯ್ಯ ಪಿ., ೨೦೦೬, **ದಿನದಿನ ೩** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೩೦) ಮಾಧವ ಪೆರಾಜೆ, ೨೦೦೩, **ದೆರಿಡಾ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩೧) ರಂಗನಾಥ್ ಶರ್ಮಾ ಎನ್., ೨೦೦೨, **ವ್ಯಾಕರಣಶಾಸ್ತ್ರದ ಪರಿವಾರ,** ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೩೨) ರಾಜಪುರೋಹಿತ ಬಿ.ಬಿ., ೨೦೦೫, **ಭಾಷೆ ಮತ್ತು ಅರ್ಥಗಳ ಗುಟ್ಟು,** ಮೈಸೂರು.

೩೩) ರಾಜಪುರೋಹಿತ ಬಿ.ಬಿ., ೨೦೦೯, **ಧ್ವನಿ ವಿಜ್ಞಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೩೪) ರಾಜಪುರೋಹಿತ ಬಿ.ಬಿ., ೨೦೧೦, **ಶೈಲಿ ವಿಜ್ಞಾನ ಮತ್ತು ಜ್ಞಾನಶಾಸ್ತ್ರ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೩೫) ರಾಜೇಶ್ವರಿ ಮಹೇಶ್ವರಯ್ಯ, ೨೦೧೧, **ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ,** ಸಮಾಜ ಪುಸ್ತಕಾಲಯ, ಧಾರವಾಡ.ಶ್ರೀಧರ್ ಎಸ್.ಎನ್., ೨೦೦೯, ಇಂದಿನ ಕನ್ನಡ : **ರಚನೆ ಮತ್ತು ಬಳಕೆ,** ಅಭಿನವ ಪ್ರಕಾಶನ, ಬೆಂಗಳೂರು.

೩೬) ಲಿಂಗದೇವರು ಹಳೆಮನೆ, ೨೦೦೬, **ಶಾಸ್ತ್ರೀಯ ಭಾಷೆಯ ಪರಿಕಲ್ಪನೆ ಮತ್ತು ಸ್ವರೂಪ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೭) ಶ್ರೀಕಂಠಯ್ಯ ತೀ.ನಂ., ೨೦೦೮, **ಕನ್ನಡ ಮಧ್ಯಮ ವ್ಯಾಕರಣ,** ಗೀತಾ ಬುಕ್ ಹೌಸ್, ಮೈಸೂರು.

೩೮) ಷ.ಶೆಟ್ಟರ್, ೨೦೦೭, **ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ,** ಅಭಿನವ, ಬೆಂಗಳೂರು.

೩೯) ಸಂಗಮೇಶ ಸವದತ್ತಿಮಠ, ೨೦೧೦, **ಕನ್ನಡ ಭಾಷಾ ಸ್ವರೂಪ,** ರೂಪರಶ್ಮಿ ಪ್ರಕಾಶನ, ಧಾರವಾಡ.

೪೦) ಸಂಗಮೇಶ ಸವದತ್ತಿಮಠ, ೨೦೧೧, **ಕನ್ನಡ ಭಾಷಾ ವ್ಯಾಸಂಗ,** ರೂಪರಶ್ಮಿ ಪ್ರಕಾಶನ, ಧಾರವಾಡ.

೪೧) ಸಾಂಬಮೂರ್ತಿ, ೨೦೧೦, **ಕನ್ನಡ ಕ್ರಿಯಾರಚನೆ - ಬಗೆಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೪೨) ಸುಬ್ಬಣ್ಣ ಕೆ.ವಿ., ೨೦೦೯, **ಕವಿರಾಜಮಾರ್ಗ ಮತ್ತು ಕನ್ನಡ ಜಗತ್ತು,** ಅಕ್ಷರ ಪ್ರಕಾಶನ, ಹೆಗ್ಗೋಡು.

೪೩) ಸೇಡಿಯಾಪು ಕೃಷ್ಣಭಟ್ಟರು, ೧೯೭೪, **ಕನ್ನಡ ವರ್ಣಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪೪) ಹಂಪ ನಾಗರಾಜಯ್ಯ, ೨೦೦೬, **ದ್ರಾವಿಡ ಭಾಷಾ ವಿಜ್ಞಾನ,** ಡಿ.ವಿ.ಕೆ. ಮೂರ್ತಿ, ಮೈಸೂರು.

೪೫) ಸಾಂಬಮೂರ್ತಿ, ೨೦೦೧, **ದಿನದಿನ ೨,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಆಕರ ಗ್ರಂಥಗಳು

೧) ರಾಜೇಂದ್ರ ಚೆನ್ನಿ, ೧೯೯೯, **ದೇಶೀವಾದ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೨) ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ, ೨೦೦೮ **ಹಿಂದ್ ಸ್ವರಾಜ್ಯ,** ಗಾಂಧಿಸ್ಮಾರಕ ನಿಧಿ, ಬೆಂಗಳೂರು,

೩) ರವಿಕುಮಾರನ.(ಸಂ)., ೧೯೯೯, **ದೇಶೀ ದರ್ಶನಗಳು,** ಅಭಿನವ, ಬೆಂಗಳೂರು.

೪) ನಾಗರಾಜ್ ಡಿ.ಆರ್., ೨೦೦೬, **ಸಾಹಿತ್ಯ ಕಥನ,** ಅಕ್ಷರ ಪ್ರಕಾಶನ, ಹೆಗ್ಗೋಡು,

೫) ಅಗ್ರಹಾರ ಕೃಷ್ಣಮೂರ್ತಿ(ಸಂ), ೨೦೦೬, **ಡಿ.ಆರ್.ನಾಗರಾಜ್ ಸಂಸ್ಕೃತಿ ಕಥನ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬) **ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ,** ನಟರಾಜ್ ಹುಳಿಯಾರ್, ಕನ್ನಡ ವಿಶ್ವವಿದ್ಯಾಲಯ, ಪ್ರಸಾರಾಂಗ, ೨೦೦೪.

೭) **ಮರದೊಳಗಣ ಕಿಚ್ಚು,** ರಹಮತ್ ತರೀಕೆರೆ, ಬೆಳ್ಳಿಚುಕ್ಕೆ ಬುಕ್‌ಟ್ರಸ್ಟ್, ಬೆಂಗಳೂರು, ೨೦೦೨.

೮) **ಸಾಂಸ್ಕೃತಿಕ ಅಧ್ಯಯನ,** ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೨.

೯) **ವಸಾಹತು ಪ್ರಜ್ಞೆ ಮತ್ತು ವಿಮೋಚನೆ,** ಗೂಗಿ ವಾ ಥಿಯಾಂಗೊ, ಅನು: ರಹಮತ್ ತರೀಕೆರೆ, ಅಭಿನವ, ಬೆಂಗಳೂರು ೨೦೧೧.

೧೦) **ವಸಾಹತುಶಾಹಿ ಮತ್ತು ಭಾಷಾಂತರ,** ವಿ.ಬಿ.ತಾರಕೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೬.

೧೧) **ಭಾಷೆ ಮತ್ತು ಇತಿಹಾಸ,** ರಾಮ ಮನೋಹರ ಲೋಹಿಯಾ, ಸಂ: ಪ್ರೊ.ಕಾಳೇಗೌಡ ನಾಗವಾರ ಮತ್ತು ಡಾ.ನಟರಾಜ್ ಹುಳಿಯಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೧೯೯೮.

೧೨) **ನಿರ್ವಸಾಹತೀಕರಣ ಎಂದರೇನು?,** ಆರ್.ತಾರಿಣಿ ಶುಭದಾಯಿನಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೦.

೧೩) **ಕನ್ನಡ ಶೈಲಿ ಕೈಪಿಡಿ,** ಸಂ: ಕೆ.ವಿ.ನಾರಾಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೬.

೧೪) **ಕನ್ನಡ ಸಂಶೋಧನೆ ತಾತ್ವಿಕ ವಿಚಾರ,** ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೭.

೧೫) **ಸಂಶೋಧನೆಯ ಹಾದಿ,** ದೇವಿ ಪ್ರಸಾದ್ ಚಟ್ಟೋಪಾಧ್ಯಾಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪.

೧೬) **ಅಧ್ಯಯನದ ವಿಧಿವಿಧಾನಗಳು,** ಸಂ: ಡಾ.ಕೆ.ರವೀಂದ್ರನಾಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೮.

೧೭) **ಕನ್ನಡ ಸಂಶೋಧನೆಯ ವೈಧಾನಿಕತೆಗಳು,** ಸಂ: ಡಾ.ಅಮರೇಶ ನುಗಡೋಣಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೮.

೧೮) **ಸಂಶೋಧನೆ ತಾತ್ವಿಕ ಆಯಾಮಗಳು,** ಡಾ.ಬಿ.ಎಂ.ಪುಟ್ಟಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೦.

೧೯) **ಸಮಾಜ ಸಂಶೋಧನೆ,** ಎಂ.ಚಂದ್ರಪೂಜಾರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೧.

೨೦) **ಸಮಾಜ ವಿಜ್ಞಾನಗಳಲ್ಲಿ ಸಂಶೋಧನ ವಿಧಾನಗಳು,** ಬಿ.ಎಸ್.ಚಂದ್ರಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೧.

೨೧) **ಕನ್ನಡ ಸಂಶೋಧನಶಾಸ್ತ್ರ,** ಡಾ.ಎಂ.ಎಂ.ಕಲಬುರ್ಗಿ, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೦೯.

೨೨) **ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸ,** ಡಾ.ಸಂಗಮೇಶ ಸವದತ್ತಿಮಠ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೩.

ಪರಾಮರ್ಶನ ಲೇಖನಗಳು

೧) **"ಸ್ಪೀಕಿಂಗ್ ಆಫ್ ಶಿವ' ದ ಪ್ರಸ್ತಾವನೆ,** ಮೂಲ: ಎ.ಕೆ.ರಾಮಾನುಜನ್, ಅನು: ಚಂದ್ರಶೇಖರ ನಂಗಲಿ, ಕನ್ನಡ ಅಧ್ಯಯನ ಚಳಿ ಸಂಚಿಕೆ, ಸಂ-೩, ಸಂ-೨, ೨೦೦೧, ಸಂ: ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೨) **ವಿಮರ್ಶೆ ಮತ್ತು ದೇಶೀಯತೆ,** ಕೆ.ವಿ.ತಿರುಮಲೇಶ್, ಕನ್ನಡ ಅಧ್ಯಯನ ಗಾಳಿ ಸಂಚಿಕೆ, ಸಂ–೫, ಸಂ–೨, ೧೯೯೯, ಸಂ: ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೩) **ದೇಶೀವಾದ,** ಮೂಲ: ಜಿ.ಎನ್.ದೇವಿ ಅನು: ತಾರಕೇಶ್ವರ್, ಕನ್ನಡ ಅಧ್ಯಯನ ಗಾಳಿ ಸಂಚಿಕೆ, ಸಂ–೫ ಸಂ–೨, ೧೯೯೯, ಸಂ: ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಪರಾಮರ್ಶಿತ ಪತ್ರಿಕೆಗಳು ಮತ್ತು ಮಾಧ್ಯಮಗಳು

೧. ಪ್ರಜಾವಾಣಿ

೨. ಹೊನಲು.ನೆಟ್

೩. ನುಡಿಕನ್ನಡ ವೆಬ್ ತಾಣ